ಶ್ರೀಕೃಷ್ಣ ಪಾರಿಜಾತದಲ್ಲಿ ಪಾಂಚಾಳರ ಪ್ರಾತಿನಿಧ್ಯ : ತಾತ್ವಿಕ ವಿವೇಚನೆ

(ಬಾಗಲಕೋಟೆ, ವಿಜಯಪುರ, ಬೆಳಗಾವಿ ಜಿಲ್ಲೆಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಸಂಗಪ್ಪ ಬಸಪ್ಪ ಹಂಚಿನಾಳ

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

೨೦೨೦

ಶ್ರೀಕೃಷ್ಣ ಪಾರಿಜಾತದಲ್ಲಿ ಪಾಂಚಾಳರ ಪ್ರಾತಿನಿಧ್ಯ : ತಾತ್ವಿಕ ವಿವೇಚನೆ
(ಬಾಗಲಕೋಟೆ, ವಿಜಯಪುರ, ಬೆಳಗಾವಿ ಜಿಲ್ಲೆಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಸಂಗಪ್ಪ ಬಸಪ್ಪ ಹಂಚಿನಾಳ

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩೨೭೬
೨೦೨೦

ಮಾರ್ಗದರ್ಶಕರ ದೃಢೀಕರಣ ಪ್ರಮಾಣಪತ್ರ

"ಶ್ರೀಕೃಷ್ಣ ಪಾರಿಜಾತದಲ್ಲಿ ಪಾಂಚಾಳರ ಪ್ರಾತಿನಿಧ್ಯ : ತಾತ್ವಿಕ ವಿವೇಚನೆ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಸಂಗಪ್ಪ ಬಸಪ್ಪ ಹಂಚಿನಾಳ** ಅವರು ನನ್ನ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ, ಯಾವುದೇ ವಿಶ್ವವಿದ್ಯಾಲಯಕ್ಕೆ ಆಗಲಿ, ಸಂಘ-ಸಂಸ್ಥೆಗಳಿಗಾಗಲಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ. ಇದು ಇವರ ಸ್ವತಂತ್ರ ಸಂಶೋಧನಾ ಅಧ್ಯಯನವಾಗಿದೆ. ಇದನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾಗಿದೆ.

ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು/ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 24-02-2020
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಪ್ರಮಾಣಪತ್ರ

"ಶ್ರೀಕೃಷ್ಣ ಪಾರಿಜಾತದಲ್ಲಿ ಪಾಂಚಾಳರ ಪ್ರಾತಿನಿಧ್ಯ : ತಾತ್ವಿಕ ವಿವೇಚನೆ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಮಂಜುನಾಥ ಬೇವಿನಕಟ್ಟಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಸಮಾಜ ವಿಜ್ಞಾನಗಳ ನಿಕಾಯದ ಜಾನಪದ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ. ಹಾಗೂ ಬಿಡಿ ಇಲ್ಲವೆ ಇಡಿಯಾಗಿ ಎಲ್ಲೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಗಪ್ಪ ಬಸಪ್ಪ ಹಂಚಿನಾಳ

ಸಂಶೋಧಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೨೪-೦೨-೨೦೨೦

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ : ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಪ್ರಸ್ತಾವನೆ :

ಜನಪದ ರಂಗಭೂಮಿಯಲ್ಲಿ ಶ್ರೀಕೃಷ್ಣ ಪಾರಿಜಾತಕ್ಕೆ ವಿಶೇಷವಾದ ಸ್ಥಾನಮಾನವಿದೆ. ಸುಮಾರು ಒಂದುವರೆ ಶತಮಾನಗಳ ಇತಿಹಾಸವಿದೆ. ಬಯಲಾಟದಲ್ಲಿ ಗ್ರಾಮೀಣ ಜನಪದರ ಬದುಕು ಹಾಸು ಹೊಕ್ಕಾಗಿದೆ. ಬಾಗಲಕೋಟ, ವಿಜಯಪುರ, ಬೆಳಗಾವಿ ಈ ಮೂರು ಜಿಲ್ಲೆಗಳಲ್ಲಿ ಪಾರಿಜಾತವು ಬೆಳಕು ಚೆಲ್ಲಿದೆ. ಪಾರಿಜಾತದ ಹೆಸರು ಕೇಳದ ಜನಸಾಮಾನ್ಯರಿಲ್ಲ. ಪಾರಿಜಾತ ಆಟ ಆಡಿಸದ ಹಳ್ಳಿಗಳಿಲ್ಲ. ಗ್ರಾಮೀಣ ಜನರಿಗೆ ಬಿಡುವಿನ ವೇಳೆ ಕಾಲಕಳೆಯಲು ಇದು ಒಂದು ಸಾಮಗ್ರಿ. ಜಾತ್ರೆ, ಉತ್ಸವ, ಹಬ್ಬ, ಹರಿದಿನಗಳಲ್ಲಿ ಪಾರಿಜಾತದ ಆಟ ಆಡಿಸುವುದು ಪರಂಪರೆಯಾಗಿದೆ. ಪಾರಿಜಾತದ ಆಟ ನೋಡುವದು ಹಳ್ಳಿಗರ ಹವ್ಯಾಸವೇ ಆಗಿದೆ. ಶ್ರೀಕೃಷ್ಣಪಾರಿಜಾತ ಇಲ್ಲದಿದ್ದರೆ, ಜಾತ್ರೆ-ಜಾತ್ರೆಯೆನಿಸುತ್ತಿರಲಿಲ್ಲ, ಓಕುಳಿ-ಓಕುಳಿಯಾಗುತ್ತಿರಲಿಲ್ಲ. ಅಂತಹ ಅವಿನಾಭಾವ ಸಂಬಂಧ ಈ ಜನಪದ ಕಲೆಗಿದೆ. ನೀತಿ, ತತ್ವ, ಅಧ್ಯಾತ್ಮ, ಭಕ್ತಿ, ಲೌಕಿಕ, ಸಾಮಾಜಿಕ, ಕೌಟುಂಬಿಕ ಎಲ್ಲಾ ಕ್ಷೇತ್ರಗಳನ್ನು ಪಾರಿಜಾತ ಒಳಗೊಂಡಿತ್ತು.

ಎಲ್ಲಾ ವಯೋಮಾನದವರು ಪಾರಿಜಾತದ ಪ್ರೇಕ್ಷಕರು. ನೂರಾರು ಬಾರಿ ನೋಡಿದರು, ಮತ್ತೆ ಮತ್ತೆ ನೋಡಬೇಕೆನ್ನುವ ಕೂತುಹಲ ಹುಟ್ಟಿಸುವ ಕಲೆ. ಆಟ ಆಡಿದಾಗೊಮ್ಮೆ ಹೊಸತನ ಮೂಡಿಸುವ ಕಲೆ. ಪಾರಿಜಾತಕ್ಕೆ ಸೂಜಿಗಲ್ಲಿನ ಸೆಳೆತವಿದೆ. ಈ ಹಿನ್ನಲೆಯಲ್ಲಿ ಪಾರಿಜಾತವನ್ನು ಸಂಶೋಧನೆಗೆ ಎತ್ತಿಕೊಳ್ಳಲಾಗಿದೆ. ಜನಪದ ಸಾಹಿತ್ಯವು "ಹಳ್ಳದ ದಂಡೆಯಲ್ಲಿರುವ ಕರಿಕೆಯ ಕುಡಿಯಂಗೆ" ಅದರ ಆಗುಹೋಗು. ಕರಿಕೆ ಬಿದ್ದಲ್ಲಿಯೇ ಬೇರು ಬಿಡುತ್ತದೆ. ತಳಬೇರು ನೆಲದ ಮರೆಯಲ್ಲಿ ಜೀವಂತವಾಗಿದ್ದು ಮಳೆಗಾಲವನ್ನೇ ನಿರೀಕ್ಷಿಸುತ್ತ ಬದುಕುತ್ತದೆ. ಇದು ಜನಪದ ಸಾಹಿತ್ಯಕ್ಕೂ ಅನ್ವಯಿಸುವ ಮಾತು. ಜನಪದ ಸಾಹಿತ್ಯ ಇಲ್ಲಿ ಇಲ್ಲವಾದರೆ ಯಾವುದೋ ಒಂದು ರೂಪದಲ್ಲಿ ಬದುಕುತ್ತಲೇ ಇರುತ್ತದೆ. ಇದು ಜನಪದ ಸಾಹಿತ್ಯದ ಜೀವಂತ ಲಕ್ಷಣ.

ಉತ್ತರ ಕರ್ನಾಟಕದ ನಾಟಕಗಳಲ್ಲಿ ದೊಡ್ಡಾಟ, ಸಣ್ಣಾಟಗಳೆಂಬ ಬಯಲಾಟಗಳು ಬಹಳ ಪ್ರಸಿದ್ಧಿಪಡೆದಿವೆ. ಅದರಲ್ಲಿ ಶ್ರೀಕೃಷ್ಣ ಪಾರಿಜಾತ ನಾಟಕವು ಕೃಷ್ಣಾ ತೀರದ ಬಳ್ಳಾರಿ, ವಿಜಯಪುರ, ಬಾಗಲಕೋಟೆ, ಬೆಳಗಾವಿ ಮುಂತಾದ ಭಾಗಗಳಲ್ಲಿ ಅಸ್ತಿತ್ವದಲ್ಲಿದೆ. ಈ ಬಯಲಾಟವು ಸ್ವತಂತ್ರ್ಯ ರಂಗ ಪರಂಪರೆಯಲ್ಲಿ ಸಣ್ಣಾಟಗಳಿಗಿಂತ ಹೆಚ್ಚು ಪ್ರಸಿದ್ಧ ಹಾಗೂ ಪ್ರಚಲಿತವಿದ್ದು ಶ್ರೀಕೃಷ್ಣ ಪಾರಿಜಾತವು ಸ್ವತಂತ್ರ್ಯ ನಾಟಕವಾಗಿ ಬೆಳೆದಿದೆ. ಇದಕ್ಕೆ ಕಥಾವಸ್ತು ವೈದಿಕ, ವೈಷ್ಣವ ಪರಂಪರೆಯಲ್ಲಿರುವ ಕಥೆಗಳು. ಅನೇಕ ಕಲಾವಿದರ ದಂಡು ಸಾಗಿಬಂದಿದೆ. ಅದರಲ್ಲಿ ಪಾಂಚಾಳ ಸಮುದಾಯದ ಕಲಾವಿದರು ತಮ್ಮ ಬಿಡುವಿನ ವೇಳೆ ಶ್ರೀಕೃಷ್ಣ ಪಾರಿಜಾತದ ಕಲಾವಿದರಾಗಿ, ವಾದ್ಯ ನುಡಿಸುವವರಾಗಿ, ವಾದ್ಯ ತಯಾರಕರಾಗಿ ಹೀಗೆ ಹಲವು ವಿಧಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಜೊತೆಗೆ ವೃತ್ತಿ ಕೌಶಲ್ಯಗಳಿಂದ ಖ್ಯಾತರಾದವರು. ಆದ್ದರಿಂದ 'ಶ್ರೀಕೃಷ್ಣ ಪಾರಿಜಾತದಲ್ಲಿ ಪಾಂಚಾಳರ ಪ್ರಾತಿನಿಧ್ಯ : ತಾತ್ವಿಕ ವಿವೇಚನೆ' ಎಂಬ ಶೀರ್ಷಿಕೆಯಲ್ಲಿ ಪಾಂಚಾಳ ಸಮುದಾಯದ ಕಲಾವಿದರು, ವಾದ್ಯ ತಯಾರಕರು, ನುಡಿಸುವವರು ಮುಂತಾದ ಕಲಾ ಪರಿಸರದ ವಿಚಾರಧಾರೆಗಳನ್ನು ಆಧಾರವಾಗಿಟ್ಟುಕೊಂಡು ಪ್ರಸ್ತುತ ಅಧ್ಯಯನ ಕೈಗೊಳ್ಳಲಾಗಿದೆ.

೧.೧. ಉದ್ದೇಶ:

ಪ್ರತಿಯೊಂದು ಜನ ಸಮುದಾಯಕ್ಕೆ ತನ್ನದೆಯಾದ ವಿಶೇಷತೆ ಇರುತ್ತದೆ. ತನ್ನ ಅಸ್ಮಿತೆ ಮತ್ತು ಅನನ್ಯತೆಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತದೆ. ಹಾಗೆಯೇ ತನ್ನ ಕುಲ ಮೂಲವನ್ನು ಉಳಿಸಿ-ಬೆಳೆಸಲು ಸತತವಾಗಿ ಪ್ರಯತ್ನಶೀಲವಾಗಿರುತ್ತದೆ. ಪಾಂಚಾಳ ಜನಸಮುದಾಯ ಪಾರಿಜಾತ ಆಟದ ಮೂಲಕ ಏನನ್ನು ಸಾಭೀತು ಪಡಿಸಲು ಹೊರಟಿದ್ದಾರೆ? ಧಾರ್ಮಿಕ ಕಾರಣವೇ? ಲೌಕಿಕ ಕಾರಣವೇ? ಭಕ್ತಿಯ ಹಿನ್ನಲೆಯೇ? ಕೇವಲ ಅಭಿರುಚಿ ಹಾಗೂ ಹವ್ಯಾಸಕ್ಕಾಗಿ ಪಾರಿಜಾತ ಪ್ರಂಪಂಚದಲ್ಲಿ ತೊಡಗಿಸಿಕೊಂಡಿದ್ದಾರೋ ಎಂಬುದನ್ನು ಪರಿಶೀಲಿಸುವ ಆಶಯವು ಈ ಅಧ್ಯಯನದಲ್ಲಿ ಇದೆ.

ಜಾನಪದ ಇಂದು ಹೆಚ್ಚಿನ ಸಂಶೋಧನೆಗಳಿಗೆ ಆಕರವಾಗಿರುವ ಕ್ಷೇತ್ರವಾಗಿದೆ. ಮಾನವ ಸಂಸ್ಕೃತಿ, ವಿಜ್ಞಾನ, ಮಾನವಶಾಸ್ತ್ರ, ಸಮಾಜಶಾಸ್ತ್ರ, ಮನೋವಿಜ್ಞಾನ, ಇತಿಹಾಸ, ಸ್ಥಳ ನಾಮಶಾಸ್ತ್ರ, ಪುರಾಣ, ಸಾಹಿತ್ಯ, ಜೈವಿಕವಿಜ್ಞಾನ ಮತ್ತು ಸಮಾಜೋಭಾಷಿಕ ವಿಜ್ಞಾನ ಇವೇ ಮುಂತಾದ ಅನ್ಯಜ್ಞಾನ ಕ್ಷೇತ್ರಗಳಿಂದ ಅಂತರ ಶಿಸ್ತೀಯ ಸಂಶೋಧನೆಗಳು ನಡೆಯುತ್ತಿವೆ. ಜಾನಪದ ಹೊಂದಿರುವ ಬಹುಮುಖಿ ಆಯಾಮಗಳು ಇಂತಹ ಸಂಶೋಧನೆಗಳು ನಡೆಯಲು ಕಾರಣವಾಗಿದೆ. ಜನಪದ ಕಥೆ, ಹಾಡು, ಗೀತೆ, ಗಾದೆ, ಒಗಟುಗಳಂತಹ ಭಾಷಿಕ ನೆಲೆಯ ವಸ್ತು ವಿಷಯಗಳನ್ನು ಕುರಿತು ಕನ್ನಡದಲ್ಲಿ ಈಗಾಗಲೇ ಸಾಕಷ್ಟು ಅಧ್ಯಯನ ನಡೆದಿದೆ. ಜಾನಪದವನ್ನು ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ಮಾಡುವ ಪ್ರಕ್ರಿಯೆಯೂ ಕನ್ನಡದಲ್ಲಿ ಈ ಹಿಂದೆಯೇ ಆರಂಭಗೊಂಡಿದೆ.

ಬಯಲಾಟಗಳು ಪ್ರದರ್ಶಕ ಕಲೆಗಳಾಗಿರುವದರಿಂದ ಕಲಾತ್ಮಕ ದೃಷ್ಟಿಯಿಂದ ಅಧ್ಯಯನ ಮಾಡುವುದು ಸಾಮಾನ್ಯವಾಗಿದೆ. ಜನಪದ ರಂಗಭೂಮಿಯ ಉಗಮ, ವಿಕಾಸವು ಸೇರಿದಂತೆ ಈ ಮಾಧ್ಯಮದ ವಿಶಿಷ್ಟ ಲಕ್ಷಣಗಳು, ಸಂವಹನ ಸಾಧ್ಯತೆಗಳು ಮತ್ತು ಈ ಮಾಧ್ಯಮದಲ್ಲಿ ನವೀಕರಣಗಳ ಅಳವಡಿಕೆ ಕುರಿತು ಈಗಾಗಲೇ ಸಾಕಷ್ಟು ಅಧ್ಯಯನ ನಡೆದಿದೆ. ಆದರೆ ಈ ಮಾಧ್ಯಮಗಳಲ್ಲಿ ಪ್ರಮುಖವಾಗಿ ಪ್ರಸಾರವಾಗಿರುವ ಸಾಂಸ್ಕೃತಿಕ ಅಂಶಗಳ ಕುರಿತು ಹೆಚ್ಚಿನ ಸಂಶೋಧನೆ ನಡೆದಂತಿಲ್ಲ. ಹಾಗೇ ನೋಡಿದರೆ ಬಯಲಾಟ ಪ್ರದರ್ಶನಗಳು ಸಾಮಾಜಿಕ ಇಲ್ಲವೇ ಸಾಂಸ್ಕೃತಿಕ ಸಂದರ್ಭಗಳಲ್ಲಿ ಮಾತ್ರ ನಡೆಯುತ್ತವೆ. ಈ ದೃಷ್ಟಿಯಿಂದ ಬಯಲಾಟಗಳಿಗೆ ಸಾಂಸ್ಕೃತಿಕ ಸಂದರ್ಭವೇ ಮುಖ್ಯವಾಗಿದೆ. ಇದೊಂದು ಸಮುದಾಯತೀತ ಕಲೆಯಾಗದೆ.

ಜನಪದದ ಜೀವನ ಪದ್ಧತಿ, ರೀತಿ-ನೀತಿ ನಂಬಿಕೆ, ಸಂಪ್ರದಾಯ, ಆಚರಣೆಗಳ ಜೊತೆಯಲ್ಲಿ ಅಂತರ ಸಂಬಂಧವನ್ನು ಅದು ಹೊಂದಿರುತ್ತದೆ. ಪುರಾಣ ಕಥೆಯನ್ನು ಇಡಿಯಾಗಿ ಲಕ್ಷಿಸಿದೇ ಜನಪದರ ಜೀವನದಲ್ಲಿ ಮುಖ್ಯವೆನಿಸಿದ ಭಾವನೆಗಳು ಘಟನೆಗಳು ಜೀವಿತದ ಮಹತ್ವಪೂರ್ಣ ಸನ್ನಿವೇಶಗಳನ್ನು ಮಾತ್ರ ಇಲ್ಲಿ ಜೋಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಬಯಲಾಟ ಕಥೆಗಳು, ಸಮುದಾಯದ ಬೌದ್ಧಿಕ ವಿಕಾಸಕ್ಕಾಗಿ ಕೃಷ್ಣ ಪಾರಿಜಾತದಲ್ಲಿ ಪಾಂಚಾಳರ ಕುರಿತು ಅಧ್ಯಯನಕ್ಕೆ ವಿಫುಲವಾದ ಸಾಮಗ್ರಿಯನ್ನು ಒದಗಿಸುತ್ತವೆ.

ಕೃಷ್ಣ ಪಾರಿಜಾತವು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಈ ಭಿನ್ನತೆಗೆ ಆಯಾ ಪ್ರದೇಶದಲ್ಲಿ ಪ್ರಚಲತವಿರುವ ಸಮುದಾಯಗಳ ಜ್ಞಾನದ ಹರವು, ಬೌದ್ಧಿಕ ಭಾಷಾ ಪ್ರಯೋಗ ಮತ್ತು ರಂಗ ಸಂಪ್ರದಾಯಗಳೇ ಕಾರಣವೆನ್ನಬಹುದು. ಕುಣಿತ, ಸಂಗೀತ, ವೇಷಭೂಷಣಗಳು ಮತ್ತು ಪ್ರಾದೇಶಿಕ ವೈಶಿಷ್ಟ್ಯಗಳ ಮಧ್ಯೆ ರೂಪು ತಳೆಯುತ್ತವೆ. ಹೀಗಾಗಿ ಕರ್ನಾಟಕದ ಸಂದರ್ಭದಲ್ಲಿ ಬಯಲಾಟ, ಮೂಡಲಪಾಯ ಮತ್ತು ಪಡುವಲಪಾಯ ಎಂಬ ಎರಡು ಪ್ರಮುಖ ಪ್ರಕಾರಗಳಲ್ಲಿ ಕುಡಿ ಒಡೆದು ಪ್ರಸಾರಗೊಂಡಿದೆ. ಅದೇ ನೆಲೆಯಲ್ಲಿ ಪಡುವಲಪಾಯ ಬಯಲಾಟದ ಮುಖ್ಯ ಪ್ರಕಾರವಾಗಿರುವ ಯಕ್ಷಗಾನದಲ್ಲಿ ತೆಂಕು ಮತ್ತು ಬಡಗು ತಿಟ್ಟುಗಳೆಂಬ ಪ್ರಭೇದಗಳಿವೆ.

ಉತ್ತರ ಕರ್ನಾಟಕ ಪ್ರದೇಶದಲ್ಲಿ ಸಣ್ಣಾಟವೆಂಬ ಬಯಲಾಟದ ಮತ್ತೊಂದು ವಿಶಿಷ್ಟ ಪ್ರಕಾರವು ಜನ್ಮ ತಾಳಿದೆ. ಸಣ್ಣಾಟಗಳಲ್ಲಿ ಶಿವ ಶರಣರ ಕಥೆಗಳು ಸೇರಿದಂತೆ ಸಾಮಾಜಿಕ ವಸ್ತುವಿನ ನೈಜ ಘಟನೆಗಳು, ಜನಪದ ಮೂಲದ ಕಲ್ಪಿತ ಕಥೆಗಳು ಈ ಮಾಧ್ಯಮದಲ್ಲಿ ಪ್ರಸಾರಗೊಂಡಿವೆ. ಈ ಹಿನ್ನೆಲೆಯಲ್ಲಿ ಆಯಾ ಪ್ರದೇಶದ ಜೀವನ ವಿಧಾನ, ರೀತಿ ನೀತಿ ನಡಾವಳಿಗಳನ್ನು ಅನುಸರಿಸಿ ಆಯಾ ಭಾಗದ ಕಥೆಗಳು ರೂಪುಗೊಂಡಿವೆ. ಇದರಿಂದ ಬಯಲಾಟ ಕಥೆಗಳಲ್ಲಿ ಹುದುಗಿರುವ ಕಲಾತ್ಮಕ ಅಂಶಗಳನ್ನು ಹೆಕ್ಕಿತೆಗೆದು ಅಧ್ಯಯನ ಮಾಡುವುದು ಅಗತ್ಯವೆನಿಸಿದೆ. ಇಂಥ ಅಧ್ಯಯನಗಳಿಂದ ಆಯಾ ಭಾಗಗಳಲ್ಲಿ ಪ್ರಚಲಿತವಿರುವ ಸಂಸ್ಕೃತಿ

ಅಂಶಗಳನ್ನು ವಿಶ್ಲೇಷಿಸಿ ಆ ಮೂಲಕ ಪ್ರಾದೇಶಿಕವಾದ ರಂಗಪರಂಪರೆಯನ್ನು ಪುನರ್‌ರೂಪಿಸಲು ಸಾಧ್ಯವಾಗತ್ತದೆ. ಈ ದೃಷ್ಟಿಯಿಂದ ಈ ಸಂಶೋಧನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಉತ್ತರ ಕರ್ನಾಟಕದ ವಿಶಾಲ ಭೂಪ್ರದೇಶದಲ್ಲಿ ಹರಡಿರುವ ಜನಪದ ರಂಗಭೂಮಿ ಕುರಿತು ಅಷ್ಟಾಗಿ ಅಧ್ಯಯನ ನಡೆದಿಲ್ಲ. ಈ ಅಧ್ಯಯನಗಳು ಈ ಕಲೆ ಹೊಂದಿರುವ ಸಮೃದ್ಧ ಪರಂಪರೆ ಮತ್ತು ಕಲಾ ವೈಶಿಷ್ಟ್ಯಗಳನ್ನು ಕುರಿತು ನಿರ್ದಿಷ್ಟ ಸಮುದಾಯ ಪ್ರಜ್ಞೆಯ ಮೂಲಕ ವಿವರಿಸಿಕೊಳ್ಳುತ್ತದೆ.

ಈ ಕ್ಷೇತ್ರದಲ್ಲಿ ನಡೆದ ವಿಶಿಷ್ಟ ಅಧ್ಯಯನಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸುವದಾದರೆ, ಡಾ. ಡಿ.ಕೆ. ರಾಜೇಂದ್ರರವರ 'ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ', ಡಾ: ಚಂದ್ರಶೇಖರ ಕಂಬಾರ ಅವರ 'ಉತ್ತರ ಕರ್ನಾಟಕದ ಜನಪದ ರಂಗಭೂಮಿ', ಡಾ. ಬಸವರಾಜ ಮಲಶೆಟ್ಟಿ ಅವರ, 'ಉತ್ತರ ಕರ್ನಾಟಕದ ಬಯಲಾಟಗಳು', ಡಾ. ಕೆ.ಆರ್. ದುರ್ಗಾದಾಸ ಅವರ 'ಬಳ್ಳಾರಿ ಜಿಲ್ಲೆಯ ಬಯಲಾಟಗಳು', ಡಾ. ಶ್ರೀರಾಮ ಇಟ್ಟಣ್ಣವರ 'ಶ್ರೀಕೃಷ್ಣ ಪಾರಿಜಾತ ಅಧ್ಯಯನ', ಡಾ. ಎಮ್.ಟಿ. ಧೂಪದ ಅವರ, 'ಉತ್ತರ ಕರ್ನಾಟಕದ ಜಾನಪದ ರಂಗಭೂಮಿ' ಕೆಲವು ಪ್ರಮುಖ ಸಂಶೋಧನಾ ಕೃತಿಗಳು.

ಬಯಲಾಟ ಕಥೆಗಳಿಗೆ ಪಠ್ಯಗಳನ್ನು ಆಯಾ ಭಾಗದ ಲೇಖಕರೇ ರೂಪಿಸಿದ್ದಾರೆ. ಇವರು ಜನರ ಮಧ್ಯೆ ಜೀವಿಸುತ್ತಿದ್ದುದರಿಂದ ಆಯಾ ಭಾಗದ ಜನಜೀವನ, ಸಂಸ್ಕೃತಿ, ರೀತಿ–ನೀತಿಗಳಿಂದ ಪ್ರಭಾವಿತರಾಗಿದ್ದಾರೆ. ಹಾಗೆ ನೋಡಿದರೆ ಈ ಪಠ್ಯವೆಲ್ಲವೂ ಜನಪದ ಸಂಸ್ಕೃತಿಯ ಭಾಗವಾಗಿ ರೂಪುಗೊಂಡಿದೆ. ಇದರಿಂದ ಬಯಲಾಟ ಕಥೆಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ಮಾಡುವ ಮೂಲಕ ಒಂದು ಪ್ರದೇಶದ ಸಾಂಸ್ಕೃತಿಕ ಅಧ್ಯಯನಗಳನ್ನು ಪುನರ್ ರೂಪಿಸಲು ಸಾಧ್ಯವಾಗುವುದು.

ವಿವಿಧ ಮೂಲಗಳಿಂದ ಆಯ್ದುಕೊಂಡ ನೂರಾರು ಸಂಖ್ಯೆಯ ಬಯಲಾಟ ಕಥೆಗಳು ಕರ್ನಾಟಕದಲ್ಲಿ ದೊರೆಯುತ್ತವೆ. ಒಂದೇ ಬಗೆಯ ವಸ್ತು ಬೇರೆ ಬೇರೆ ಪ್ರದೇಶಗಳಲ್ಲಿ ಪ್ರಸಾರಗೊಳ್ಳುವಾಗ ಆಯಾ ಪ್ರದೇಶದ ಸಾಂಸ್ಕೃತಿಕ ಅಂಶಗಳನ್ನು ಸೇರಿಸಿಕೊಂಡು ಅದೇ ಒಂದು ಭಿನ್ನ ಕಥೆಯಾಗಿ ಪ್ರಸಾರಗೊಳ್ಳುವುದುಂಟು. ಉಳಿದಂತೆ ಈ ಕಥೆಗಳಲ್ಲಿ ಕೆಲವು ಸಾಮಾನ್ಯ ಅಂಶಗಳಿರುತ್ತವೆ. ಈ ಅಧ್ಯಯನದಲ್ಲಿ ವಿವಿಧ ಮೂಲಗಳಿಂದ ಆಯ್ದ ಪ್ರಾತಿನಿಧಿಕ ಬಯಲಾಟ ಕಥೆಗಳನ್ನು ಮಾತ್ರ ಲಕ್ಷಿಸಲಾಗಿದೆ. ಈ ಅಧ್ಯಯನದಲ್ಲಿ ಶ್ರೀಕೃಷ್ಣ ಪಾರಿಜಾತದಲ್ಲಿ ತೊಡಗಿಕೊಂಡಿರುವ ಪಾಂಚಾಳ ಸಮುದಾಯವನ್ನು ಲಕ್ಷ್ಯವಾಗಿಸಿಕೊಂಡು ಇಲ್ಲಿನ ಸಂಶೋಧನೆ ಮಾಡಲಾಗಿದೆ. ಸಂಶೋಧನೆಯಲ್ಲಿ ಬಯಲಾಟ ಕಥೆಗಳನ್ನು, ವಸ್ತು ಆಧಾರ ನೆಲೆಯಲ್ಲಿ ಪಾಂಚಾಳರ ಕಲೆಗಳನ್ನು ಎತ್ತಿ ಹೇಳಲಾಗಿದೆ.

ಒಂದು ಪ್ರದೇಶದಲ್ಲಿ ಪ್ರಚಲಿತವಿರುವ ಬಯಲಾಟ ಕಥೆಗಳನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡುವುದರಿಂದ ಆ ಭಾಗದ ಜನರ ಜೀವನ ಪದ್ಧತಿ, ನಂಬಿಕೆ, ಸಂಪ್ರದಾಯ, ಆಚರಣೆಗಳನ್ನು

ಅರಿಯಲು ಸಾಧ್ಯ. ಅನಕ್ಷರಸ್ಥರೇ ಹೆಚ್ಚಾಗಿರುವ ಈ ಪ್ರದೇಶದಲ್ಲಿ ಪರಂಪರೆಯೊಂದಿಗೆ ಬಳುವಳಿಯಾಗಿ ಬಂದಿರುವ ಆಯಾ ಸಮುದಾಯದ ಸಂಸ್ಕೃತಿಯನ್ನು ಬಿಂಬಿಸುವ ಮಾಧ್ಯಮಗಳಾಗಿವೆ. ಹಾಗೆ ನೋಡಿದರೆ ನಮ್ಮ ಸಮಾಜದಲ್ಲಿ ಹಿಂದಿನಿಂದಲೂ ಸಮುದಾಯ ವ್ಯವಸ್ಥೆ ಆಚರಣೆಯಲ್ಲಿದ್ದರೂ ಬಯಲಾಟಗಳು ಜಾತ್ಯಾತೀತ ಧೋರಣೆಯೊಂದಿಗೆ ಪ್ರಸಾರಗೊಳ್ಳುವವು. ಪಾಂಚಾಳ ಸಮುದಾಯವು ಸಾಂಸ್ಕೃತಿಕ ಕಲೆಗಳಲ್ಲಿ ಮುಂಚೂಣಿಯಲ್ಲಿರುವರು. ಒಂದು ಊರಿನಲ್ಲಿ ಯಾವುದೇ ಪಂಗಡದ ಜನ ಆಟವಾಡಿದರೂ ಸಾಂಕೇತಿಕವಾಗಿ ಪ್ರದರ್ಶನಗೊಳ್ಳುತ್ತದೆ. ಮೇಳದಲ್ಲಿ ಕಲಾವಿದರಾಗಿ ಭಾಗವಹಿಸುವ ಮದ್ದಳೆಗಾರ, ತಬಲಾವಾದಕ, ಹಾರ್ಮೋನಿಯಂ ನುಡಿಸುವವ ಮತ್ತು ಸಾರಥಿ ಪಾತ್ರಧಾರಿಗಳು ಸಾಮಾನ್ಯವಾಗಿ ವೃತ್ತಿಕಲಾವಿದರಾಗಿದ್ದು, ಇವರೆಲ್ಲ ಸಮಾಜದಲ್ಲಿ ಬೇರೆ ಬೇರೆ ಸಮುದಾಯದ ಜನಗಳಾಗಿರುವುದುಂಟು. ಇವರೆಲ್ಲ ಆಟದ ಸಂದರ್ಭದಲ್ಲಿ ಕಲಾವಿದರಾಗಿ ಭಾಗವಹಿಸಿದಾಗ ಸಮುದಾಯ ಮನೋಭಾವನೆ ಹಿಂದೆ ಸರಿದು ಕಲೆಯ ದೃಷ್ಟಿಯಿಂದ ಇವರೆಲ್ಲ ಒಂದಾಗಿ ಆಟದ ಯಶಸ್ವಿಯಲ್ಲೂ ಪಾಲ್ಗೊಳ್ಳುತ್ತಾರೆ. ಪಾತ್ರಧಾರಿಗಳಲ್ಲಿಯೂ ಬೇರೆ ಬೇರೆ ಸಮುದಾಯದ ಜನಗಳಿರುವುದುಂಟು. ಇವರೆಲ್ಲ ಆಟದ ಸಂದರ್ಭದಲ್ಲಿ ಸಾಮಾನ್ಯ ಸದಸ್ಯರಾಗಿ ವರ್ತಿಸುವದು, ಸಮುದಾಯ ಮತ್ತು ಸಾಮಾಜಿಕವಾಗಿ ಮಹತ್ವದ್ದಾಗಿದೆ. ಅಷ್ಟೇ ಅಲ್ಲ ಆಟ ನೋಡಲು ಸೇರುವ ಪ್ರೇಕ್ಷಕರು ಕೂಡಾ ತಮ್ಮ ತಮ್ಮ ಸಮುದಾಯ ಮತಗಳ ಭಾವನೆಗಳನ್ನು ಬಿಟ್ಟು ನಿಜವಾದ ಪ್ರೇಕ್ಷಕರಾಗಿ ಭಾಗವಹಿಸಿ ಆಟವನ್ನು ಕಲಾತ್ಮಕ ಇಲ್ಲವೇ ನೈತಿಕ ದೃಷ್ಟಿಯಿಂದ ಪರಿಭಾವಿಸುವುದು ಗಮನಿಸತಕ್ಕದ್ದಾಗಿದೆ. ಈ ಹಿನ್ನೆಲೆಯಲ್ಲಿ ಶ್ರೀಕೃಷ್ಣ ಪಾರಿಜಾತದಲ್ಲಿ ಪಾಂಚಾಳರ ಪ್ರಾತಿನಿಧ್ಯ ತಾತ್ವಿಕ ವಿವೇಚನೆಯ ಅಧ್ಯಯನ ಮಹತ್ವದ್ದಾಗಿದೆ.

ಬಯಲಾಟ "ಆಗಸವನ್ನು ಅಂಗೈಯಲ್ಲಿ ತೋರಿಸಲುಂಟೆ? ಬಯಲನ್ನು ಬಟ್ಟಲಲ್ಲಿ ಹಿಡಿದಿಡುವುದುಂಟೆ"? ಹಾಗೇ ಬಯಲಾಟದಲ್ಲಿ ಸಣ್ಣಾಟ, ಕೃಷ್ಣ ಪಾರಿಜಾತ ಮತ್ತು ಪಾಂಚಾಳರ ಕರಕೌಶಲ್ಯಗಳನ್ನು ಅಕ್ಷರಗಳಲ್ಲಿ ಹಿಡಿದು ತೋರಲು ಸಾಧ್ಯವುಂಟೆ? ಅಂತಹ ಅಸಾಧ್ಯವನ್ನು ಸಾಧ್ಯಗೊಳಿಸುವ ಸಾರ್ಥಕ ಪ್ರಯತ್ನವೊಂದನ್ನು ಮಾಡಿರುವುದು ಈ ಸಂಶೋಧನ ಕಾರ್ಯದ ಮೂಲಕ. ಬಯಲಾಟ ಕಥೆಗಳಲ್ಲಿ ಪಾಂಚಾಳರ ಜ್ಞಾನ ಕೌಶಲ್ಯದ ತಾತ್ವಿಕ ವಿಚಾರದ ಮೂಲಕ ಅಧ್ಯಯನ ಮಾಡುವಾಗ ಮೊದಲಿಗೆ ಶ್ರೀಕೃಷ್ಣ ಪಾರಿಜಾತದ ಅರ್ಥವನ್ನು ಪರಿಭಾವಿಸುವುದು ಮುಖ್ಯವಾಗಿದೆ. ಸಾಮಾಜಿಕ ಮತ್ತು ಧಾರ್ಮಿಕ ರಂಗನೆಲೆಗಳಲ್ಲಿ ಪಾಂಚಾಳರ ಸಮುದಾಯವು ಒಂದೊಂದು ಅರ್ಥಕೊಡುತ್ತದೆ. ಬಯಲಾಟ ರಂಗದ ಸ್ವರೂಪವನ್ನು ಕುರಿತು ಅಧ್ಯಯನ ಮಾಡುವುದು ಮಹತ್ವದ್ದಾಗಿದೆ.

ಪ್ರಾಚೀನ ಕಾಲದಿಂದಲೂ ಪ್ರತಿಯೊಂದು ಭಾಷೆ ಅಥವಾ ಸಮುದಾಯ ತನ್ನದೇ ಆದ "ರಂಗಭೂಮಿ" ಯನ್ನು ಹೊಂದಿದ್ದು, ಅದನ್ನು ತಲೆಮಾರಿನಿಂದ ತಲೆಮಾರಿಗೆ ಒಂದು ಬಳುವಳಿಯಾಗಿ ಉಳಿಸಿ ಬೆಳೆಸಿಕೊಂಡು ಬಂದಿರುವುದನ್ನು ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರಗಳಲ್ಲಿ ನಡೆದ

ಹೆಚ್ಚಿನ ಸಂಶೋಧನೆಗಳು ದೃಢಪಡಿಸಿವೆ. ಗ್ರೀಕರ ರಂಗಭೂಮಿ ಕ್ರಿ.ಪೂ. ೫ನೇ ಶತಮಾನದಷ್ಟು ಹಳೆಯದು, ಭಾರತ ರಂಗಭೂಮಿಯು ಅಷ್ಟೇ ಪ್ರಾಚೀನವೆನ್ನುವುದಕ್ಕೆ 'ಭರತನಾಟ್ಯ ಶಾಸ್ತ್ರವೇ' ಒಂದು ನಿದರ್ಶನ. ಕ್ರಿ.ಶ ಒಂದು ಅಥವಾ ಎರಡನೇ ಶತಮಾನದಲ್ಲಿ ರಚನೆಗೊಂಡಿರಬಹುದಾದ ಈ ಕೃತಿಯಲ್ಲಿ ಹೇಳಲ್ಪಟ್ಟ ಅಂಶಗಳು ಭಾರತೀಯ "ರಂಗಭೂಮಿಯನ್ನು" ಪ್ರತಿನಿಧಿಸಿದೆ. ಆದರೂ ಈ ಅಂಶಗಳೆಲ್ಲಾ ಒಂದೇ ಕಾಲದಲ್ಲಿ ಮತ್ತು ಒಂದೇ ರಂಗಪದ್ಧತಿಗೆ ಸೇರಿದವುಗಳಲ್ಲ. 'ಭಾರತೀಯ ರಂಗಭೂಮಿ' ಎಂಬುದು ಕೆಲವು ಸಾಮಾನ್ಯ ಲಕ್ಷಣಗಳನ್ನೊಳಗೊಂಡಿದೆ. ಮಾತ್ರವಲ್ಲ ಅದು ಪ್ರಾದೇಶಿಕವಾದ ಹಲವು ವಿಶಿಷ್ಟ ಲಕ್ಷಣಗಳನ್ನೊಳಗೊಂಡಿರುವದು ಇದಕ್ಕೆ ಕಾರಣ. ಈ ವಿಶಾಲವಾದ ಭೂ ಪ್ರದೇಶದಲ್ಲಿ ವಿವಿಧ ಸಮುದಾಯಗಳು, ವಿಭಿನ್ನ ಭಾಷೆ, ಜೀವನ ಪದ್ಧತಿ ಮತ್ತು ಸಂಸ್ಕೃತಿಗಳಲ್ಲಿ ಅನನ್ಯತೆಯನ್ನು ಹೊಂದಿವೆ. ಭಾರತೀಯ ರಂಗಭೂಮಿಯ ಕಲ್ಪನೆಯು ಇದೇ ನೆಲೆಯಲ್ಲಿ ವೈವಿಧ್ಯತೆಯನ್ನು ಸಾಧಿಸಿದೆ.

ರಂಗಭೂಮಿ ಎಂಬುದು ಒಂದು ಗೊತ್ತಾದ ಸ್ಥಳದಲ್ಲಿ ಆಟ ಇಲ್ಲವೇ ನಾಟಕ ಪ್ರದರ್ಶನಗೊಳ್ಳುವ ಸ್ಥಳವಾಗಿದೆ. ಇದರಲ್ಲಿ ಪ್ರದರ್ಶನ ಮಾಡುವ ಆಟ ಇಲ್ಲವೇ ನಾಟಕ, ನಟರು ಮತ್ತು ಆಟ ನೋಡಲು ಸೇರುವ ಪ್ರೇಕ್ಷಕರು ಸೇರಿರುತ್ತಾರೆ. ರಂಗಭೂಮಿ ಎಂಬುದಕ್ಕೆ ಪರ್ಯಾಯವಾಗಿರುವ ಹೆಸರುಗಳೂ ಇದೇ ಅರ್ಥವನ್ನೊಳಗೊಂಡಿವೆ.

ರಂಗಸ್ಥಳ, ಅಟ್ಟ, ರಂಗಭೂಮಿ, ರಂಗಮಂಟಪ, ನಾಟ್ಯಮಂಟಪ ಇವೆಲ್ಲಾ ಬೇರೆ ಬೇರೆ ಪದಗಳಾಗಿದ್ದರೂ, ಒಂದೇ ಅರ್ಥವನ್ನೊಳಗೊಂಡಿವೆ. ಈ ಹಿನ್ನೆಲೆಯಲ್ಲಿ ರಂಗ ಎಂಬುದು "A Place of public amusement or for dramatic, a stage, an area, a circus, a place of public contests, a place of assembly, an assemblage of spectators" ರಂಗಸ್ಥಳ ಅಥವಾ ರಂಗಭೂಮಿಗೆ ಇಂಗ್ಲೀಷಿನಲ್ಲಿ ಥೇಟರ್ ಎಂಬ ಪದವಿದೆ. ವಿಶಾಲವಾದ ಅರ್ಥದಲ್ಲಿ ಒಂದು ನಿರ್ಧಿಷ್ಟ ಸ್ಥಳದಲ್ಲಿ ನಡೆಯುವ ಆಟದ ಪ್ರದರ್ಶನ ಮತ್ತು ನೃತ್ಯ ನೋಡಲು ಸೇರುವ ಜನಸಮುದಾಯವೇ ಇಡಿಯಾಗಿ ರಂಗಭೂಮಿ ಎನಿಸಿಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಅನುಕರಣೆ ಮತ್ತು ರಂಜನೆ ರಂಗಭೂಮಿಯ ಮೂಲ ಅಂಶಗಳಾಗಿವೆ. 'ರಂಗಭೂಮಿ' ಎಂಬುದು ಆಯಾ ಪ್ರದೇಶ ಅಥವಾ ಸಮುದಾಯಗಳು ತನ್ನದೇ ಆದ ಸ್ವರೂಪ ಮತ್ತು ಲಕ್ಷಣಗಳೊಂದಿಗೆ ಹೊಂದಿಕೊಂಡಿರುವದರಿಂದ ಇದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ಅಷ್ಟೇ ಅಲ್ಲ ಬೇರೆ ಬೇರೆಯಾಗಿ ಗುರುತಿಸಲ್ಪಟ್ಟಿದೆ. ಉದಾಹರಣೆಗೆ ಗ್ರೀಕ್ ರಂಗಭೂಮಿ, ರೋಮನ್ ರಂಗಭೂಮಿ, ಭಾರತೀಯ ರಂಗಭೂಮಿ ಈ ಮುಂತಾದ ಹೆಸರುಗಳನ್ನು ಗಮನಿಸಬಹುದು. ಇಲ್ಲಿಯೂ ಜನಪದ ಮತ್ತು ಶಿಷ್ಟಪದಗಳೆಂಬ ಪ್ರಬೇಧಗಳಿವೆ.

ಕರ್ನಾಟಕದ ಜನಪದ ರಂಗ ಪ್ರಕಾರಗಳಲ್ಲಿ ಬಯಲಾಟವು ಪ್ರಮುಖವಾದ ಪ್ರದರ್ಶನ ಕಲೆಯಾಗಿದೆ. ರಂಗಸಂಪ್ರದಾಯ ಮತ್ತು ರಂಗತಂತ್ರಗಳಲ್ಲಿ ಅಳವಡಿಸಿಕೊಂಡ ನವೀನ ಶೈಲಿಗಳಿಂದಾಗಿ

ಭಿನ್ನವಾಗಿ ತೋರುವ ಕರಾವಳಿಯ ಯಕ್ಷಗಾನಗಳೂ ಸಹ ಬಯಲಾಟಗಳೇ ಆಗಿವೆ. ಉಳಿದಂತೆ ದಕ್ಷಿಣ ಮತ್ತು ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ಬಯಲಾಟಗಳೇ ಪ್ರಚಲಿತವಾಗಿವೆ.

ಈ ಎಲ್ಲ ಜನಪದ ರಂಗಕಲೆಗಳು ಆಯಾ ಪ್ರದೇಶದ ಜನಜೀವನ ಸಂಸ್ಕೃತಿಯೊಂದಿಗೆ ಗಾಢ ಸಂಬಂಧವನ್ನು ಹೊಂದಿವೆ. ಆಟಗಳ ಪ್ರದರ್ಶನವು ಒಂದು ಸಂಪ್ರದಾಯವಾಗಿ ಇಲ್ಲವೇ ಆಚರಣೆಯಾಗಿ ಜನಪದರ ಜೀವನದಲ್ಲಿ ಸ್ಥಾನ ಪಡೆದಿವೆ. ಈ ಆಟಗಳ ಮುಖೇನ ಜನಪದರು ತಮ್ಮ ಜೀವನದ ಕಷ್ಟ ಸುಖಗಳನ್ನು, ನೋವು ನಲಿವುಗಳನ್ನು ಮತ್ತು ಸೋಲು ಗೆಲುವುಗಳನ್ನು ಅಭಿವ್ಯಕ್ತಿಸಿದ್ದಾರೆ. ಆಟಗಳ ಪ್ರದರ್ಶನವು ಜನಪದರ ಸಾಂಸ್ಕೃತಿಕ ಮಹತ್ವದ ದಿನಗಳೆಂದು ಬಾವಿಸುವ ಜಾತ್ರೆ, ಉತ್ಸವ, ಹಬ್ಬ, ಹುಣ್ಣಿಮೆಗಳಲ್ಲಿ ನಡೆಯುವುದು. ಈ ಕಾರಣವಾಗಿ ಕರ್ನಾಟಕದ ಸಂದರ್ಭದಲ್ಲಿ ಬಯಲಾಟಗಳಿಗೆ ಸಾಂಸ್ಕೃತಿಕವಾದ ಆವರಣವು ಲಭಿಸಿದೆ.

ಅಧ್ಯಯನದ ಉದ್ದೇಶವೆಂಬುದು ಶ್ರೀಕೃಷ್ಣ ಪಾರಿಜಾತ ಪರಂಪರೆ, ಪಾರಿಜಾತದ ಬೆಳವಣಿಗೆಯಲ್ಲಿ ಕಂಪನಿಯ ಹುಟ್ಟುವಿಕೆ, ಅದರಲ್ಲಿ ಕಂಡು ಬರುವ ಸಂಘಟನೆಗಳ ಮಹತ್ವದ ಜೊತೆಗೆ ಪಾಂಚಾಳರ ಪಾತ್ರದ ಉದ್ದೇಶವನ್ನು ತಿಳಿಯುವುದು. ಪಾರಿಜಾತದಲ್ಲಿ ಬರುವ ಪಾತ್ರದಾರಿಗಳು, ವಿಭಿನ್ನ ಕಲಾ ಶೈಲಿಯನ್ನು ವಿಶ್ಲೇಷಿಸುವುದರೊಂದಿಗೆ ಪಾಂಚಾಳರ ಪ್ರಾತಿನಿಧೀಕರಣವನ್ನು ಗುರುತಿಸುವುದು. ಸಂಗೀತ ಉಪಕರಣಗಳು ಬಳಸುವ ಶೈಲಿಯನ್ನು ಗುರುತಿಸುವುದರ ಜೊತೆಗೆ ಅವುಗಳ ತಯಾರಿಕೆ ಮತ್ತು ಬಳಕೆಯಲ್ಲಿನ ಪಾಂಚಾಳರ ಮಹತ್ವ ಕುರಿತು ಚರ್ಚಿಸಲಾಗುವುದು. ಪಾಂಚಾಳರ ವಿವಿಧ ವೃತ್ತಿಗಳು, ಕಸಬಿನ ಬಗ್ಗೆ ತಿಳಿಯಲಾಗುವುದು.

೧.೨. ಸ್ವರೂಪ :

"ಶ್ರೀಕೃಷ್ಣ ಪಾರಿಜಾತದಲ್ಲಿ ಪಾಂಚಾಳರ ಪ್ರಾತಿನಿಧ್ಯ : ತಾತ್ವಿಕ ವಿವೇಚನೆ" ಇದು ಪಿಎಚ್.ಡಿ ಮಹಾಪ್ರಬಂಧದ ಶೀರ್ಷಿಕೆಯಾಗಿದೆ. ಬಾಗಲಕೋಟೆ, ಬೆಳಗಾವಿ, ವಿಜಯಪುರ, ಜಿಲ್ಲೆಗಳ ಪ್ರಾತಿನಿಧಿಕ ಅಧ್ಯಯನವಿದ್ದು ಪ್ರಸ್ತುತ ಅಧ್ಯಯನದ ಸ್ವರೂಪ ಹೀಗಿದೆ:

ಅಧ್ಯಾಯ ಒಂದು ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನವಾಗಿದೆ. ಸಂಶೋಧನೆಯ ಶಿಸ್ತು ಹಾಗೂ ಶಾಸ್ತ್ರೀಯ ಚೌಕಟ್ಟಿಗೆ ಅನುಗುಣವಾಗಿ ಪ್ರಥಮ ಅಧ್ಯಾಯವನ್ನು ರೂಪಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಬಾಗಲಕೋಟೆ, ಬೆಳಗಾವಿ, ವಿಜಯಪುರ ಜಿಲ್ಲೆಗಳ ಪಕ್ಷಿನೋಟದಲ್ಲಿ ಐತಿಹಾಸಿಕ, ಭೌಗೋಳಿಕ, ಸಾಂಸ್ಕೃತಿಕ, ಧಾರ್ಮಿಕ, ಸಾಹಿತ್ಯಿಕ, ಸಾಮಾಜಿಕ, ರಾಜಕೀಯ ಜನಜೀವನ ವ್ಯವಸ್ಥೆ ತಿಳಿಸಲಾಗಿದೆ. ಮತ್ತು ರಂಗ ಚಟುವಟಿಕೆಗಳ ಬೆಳವಣಿಗೆ ಕುರಿತು ಹೇಳಲಾಗಿದೆ.

ಅಧ್ಯಾಯ ಮೂರರಲ್ಲಿ ಶ್ರೀಕೃಷ್ಣ ಪಾರಿಜಾತದ ಕಥಾ ಸ್ವರೂಪ ಮತ್ತು ತಾತ್ವಿಕತೆ ಇದೆ. ಇದರಲ್ಲಿ ಶ್ರೀಕೃಷ್ಣ ಪಾರಿಜಾತದ ಕಥೆಯ ಸ್ವರೂಪ, ಹಿನ್ನಲೆ, ಉಗಮ ಮತ್ತು ವಿಕಾಸ,

ಕಾಲಕ್ಕಾದ ಬದಲಾವಣೆ, ರೂಪಿಸಿಕೊಂಡ ಹೊಸತನ ಮುಂತಾದ ವಿಷಯಗಳನ್ನು ತಾತ್ವಿಕವಾಗಿ ಅಧ್ಯಯನಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ "ಪಾರಿಜಾತದ ಬೆಳವಣಿಗೆಯಲ್ಲಿ ಪಾಂಚಾಳರ ಪ್ರಾತಿನಿಧ್ಯ" ಎಂಬುದಾಗಿದೆ. ಶ್ರೀಕೃಷ್ಣ ಪಾರಿಜಾತವನ್ನಾಡುವ ಹತ್ತಾರು ಕಂಪನಿಗಳಿವೆ. ನೂರಾರು ಹಳ್ಳಿಗಳಲ್ಲಿ ಪಾರಿಜಾತದ ಕಲಾವಿದರಿದ್ದಾರೆ. ಶ್ರೀಕೃಷ್ಣ ಪಾರಿಜಾತದಲ್ಲಿ ಪಾಂಚಾಳರು ಕಲಾವಿದರಾಗಿ, ಪಾತ್ರಧಾರಿಗಳಾಗಿ, ಹಿಮ್ಮೇಳ ವಾದ್ಯ ಕಲಾವಿದರಾಗಿ, ಸಂಘಟಕರಾಗಿ ಮಾಡಿರುವ ಕಾರ್ಯ ಗಣನೀಯವಾಗಿದೆ. ಪ್ರಾತಿನಿಧಿಕವಾಗಿ ಸ್ವೀಕರಿಸುವ ಅಧ್ಯಯನಕ್ಕಾಗಿ ನಿಗದಿ ಪಡಿಸಿದ ಬಾಗಲಕೋಟೆ, ಬೆಳಗಾವಿ, ವಿಜಯಪುರ ಜಿಲ್ಲೆಯಲ್ಲಿರುವ ಪಾರಿಜಾತ ಕಂಪನಿಗಳಲ್ಲಿ ಪಾಂಚಾಳರ ಪ್ರಾತಿನಿಧ್ಯ ಏನಿದೆ? ಎಷ್ಟಿದೆ? ಎಂಬುದರ ಪರಿಶೀಲನೆಯೂ ಪ್ರಸ್ತುತ ವಸ್ತುವಾಗಿದೆ.

ಅಧ್ಯಾಯ ಐದರಲ್ಲಿ "ಪಾಂಚಾಳರಿಗೂ ಹಾಗೂ ಜನಪದ ಕಲೆಗಳಿಗೂ ಇರುವ ಸಂಬಂಧ"ವನ್ನು ಕಟ್ಟಿಕೊಡಲಾಗಿದೆ. ಹಾಗೂ ಪಾಂಚಾಳರು ಜನಪದ ಸಂಗೀತ ಕಲೆಗಳಲ್ಲಿ ಹೇಗೆ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ ಎಂಬುದನ್ನು ಇತರ ಸಂಗೀತ ಕಲೆಗಳನ್ನು ಕುರಿತು ತಿಳಿಸಲಾಗಿದೆ.

ಅಧ್ಯಾಯ ಆರು "ಪಾಂಚಾಳರ ಜ್ಞಾನ ಮತ್ತು ವೃತ್ತಿಕೌಶಲ್ಯದ ಭಾಗವಾಗಿ" ಇವರನ್ನು ವಿಶ್ವಕರ್ಮರೆಂದು, ಆಚಾರ್ಯರೆಂದು ಕರೆಯುವುದುಂಟು. ಇವರು ಜ್ಞಾನದ ವಾರಸುದಾರರೂ, ಕಲೆಯ ಆರಾಧಕರು. ಕಲೆ ಒಂದು ತಪಸ್ಸು. ಈ ಕಲಾವಿದರು ತಪಸ್ವಿಗಳು. ಪಾರಿಜಾತದಲ್ಲಿ ಧರ್ಮ, ಅಧ್ಯಾತ್ಮ, ಅನುಭಾವ ಮುಂತಾದ ಮಗ್ಗಲುಗಳಿವೆ. ಮನೋರಂಜನೆಯ ಜೊತೆಗೆ ಜ್ಞಾನದ ಭಾಗವಾಗಿಯೂ ಈ ಪಾರಿಜಾತವನ್ನು ಪರಿಗಣಿಸುವುದುಂಟು. ಆದ್ದರಿಂದ ಜ್ಞಾನಿಗಳೂ ಮತ್ತು ಕುಶಲ ಕರ್ಮಿಗಳಾದ ಪಾಂಚಾಳರು ಪಾರಿಜಾತದಲ್ಲಿ ನಿರ್ವಹಿಸಿದ ಪಾತ್ರ ನಿಭಾಯಿಸಿರುವ ಜವಾಬ್ದಾರಿಯನ್ನು ಅಧ್ಯಯನಕ್ಕೊಳಪಡಿಸಲಾಗಿದೆ..

ಅಧ್ಯಾಯ ಏಳು "ಶ್ರೀಕೃಷ್ಣ ಪಾರಿಜಾತ ಹಾಗೂ ಪಾಂಚಾಳ ಕಲಾವಿದರು ಮತ್ತು ಸಮಕಾಲೀನ ಸಂದರ್ಭ" ಎಂಬುದು ಮಹತ್ವದ ಅಧ್ಯಾಯವಿದು. ಜಾಗತೀಕರಣದ ಸಂದರ್ಭದಲ್ಲಿ ಎಲ್ಲವೂ ವ್ಯಾಪಾರೀಕರಣವಾಗಿವೆ. ಕಲೆಯೂ ವಾಣಿಜ್ಯದ ಸರಕಾಗಿ ಪರಿಣಮಿಸಿದೆ. ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ನೆಲೆಯಲ್ಲಿ ಮನುಷ್ಯನು ಕೂಡಾ ಸರಕಾಗಿ ಪರಿಣಮಿಸಿದ್ದಾನೆ. ಇಂತಹ ಸಂದರ್ಭದಲ್ಲಿ ಪಾಂಚಾಳ ಕಲಾವಿದರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯನ್ನು ಪರಿಶೀಲಿಸುವುದು ತುರ್ತು ಅವಶ್ಯಕತೆ ಇದೆ. ಜನಪದರು ಮುಗ್ದರು, ಕಲಾವಿದರೂ, ಭಾವುಕರು ದುಡ್ಡಿನಿಂದ ದೂರವಿದ್ದವರು ತಮ್ಮ ಕಲೆಯನ್ನು ವ್ಯಾಪಾರಿ ಸರಕನ್ನಾಗಿ ಪರಿವರ್ತಿಸದೆ ಹೋದವರು. ಅಭಿರುಚಿ ಕಾರಣವಾಗಿ ಆಟ ಆಡಿದವರು, ಹವ್ಯಾಸಕ್ಕಾಗಿ ಕಂಪನಿ ಕಟ್ಟಿದವರು, ಬದುಕು ಕಟ್ಟಿಕೊಳ್ಳಲು, ಆರ್ಥಿಕ ಸದೃಢವಾಗಲು ಈ ಕಲೆಯ ಅವಲಂಬನೆಯಿಂದ ಸಾಧ್ಯವಾಗುವುದಿಲ್ಲ. ಹಾಗಾಗಿ ವ್ಯಕ್ತಿಯ ಬದುಕು ನಾಶವಾಗಿ ಹೋದರೆ ಕಲೆಯು ಉಳಿಯಬಹುದೇ? ಮುಂದುವರಿಯಲು

ಸಾಧ್ಯವೇ ಈವೆಲ್ಲಾ ಪ್ರಶ್ನೆಗಳು ಏಳುತ್ತವೆ? ಪಾರಿಜಾತದ ಅಳಿವು ಮತ್ತು ಉಳಿವು ಕಲಾವಿದರ ಬದುಕಿನ ಸ್ಥಿತಿಗತಿಯ ಮೇಲೆ ಅವಲಂಬಿಸಿದೆ. ಕಲಾವಿದರ ಬದುಕು ಮತ್ತು ಕಲೆಯ ಅಳಿವು ಉಳಿವಿನ ಜಿಜ್ಞಾಸೆಯನ್ನು ಪ್ರಸ್ತುತ ಅಧ್ಯಯನದಲ್ಲಿ ನಡೆಸಿದ್ದೇನೆ.

ಅಧ್ಯಾಯ ಎಂಟು ಸಮಾರೋಪವಾಗಿದೆ. ಈವರೆಗೆ ಕೈಗೊಂಡ ತಲಸ್ಪರ್ಶಿ ಅಧ್ಯಯನದ ಸಾರವೇ ಸಮಾರೋಪವಾಗಿದೆ, ಬಯಲಾಟಗಳು ಪ್ರದರ್ಶನ ಕಲೆಗಳಾಗಿರುವುದರಿಂದ ಇದುವರೆಗೆ ಅವುಗಳನ್ನು ಕಲಾತ್ಮಕ ದೃಷ್ಟಿಯಿಂದ ಮಾತ್ರ ಅಧ್ಯಯನ ಮಾಡಲಾಗಿದೆ. ಬಯಲಾಟಗಳು ಸಮುದಾಯವನ್ನು ಪ್ರತಿನಿಧಿಸುವ ಕಲಾ ಪ್ರಕಾರಗಳೂ ಆಗಿರುವದರಿಂದ ಶ್ರೀಕೃಷ್ಣ ಪಾರಿಜಾತ ಕಥೆ ಲಕ್ಷ್ಯವಾಗಿರಿಸಿಕೊಂಡು, "ಶ್ರೀಕೃಷ್ಣ ಪಾರಿಜಾತದಲ್ಲಿ ಪಾಂಚಾಳರ ಪಾತಿನಿಧ್ಯ : ತಾತ್ವಿಕ ವಿವೇಚನೆ" ಎಂಬ ಶೀರ್ಷಿಕೆಯಲ್ಲಿ ಈ ಸಂಶೋಧನೆ ಮಾಡಲಾಗಿದೆ. ಈ ಅಧ್ಯಯನವು ಅಧ್ಯಾಯಗಳಾಗಿ ಕವಲೊಡೆದಿದೆ. ಪ್ರತಿಯೊಂದು ಅಧ್ಯಯನಕ್ಕೆ ವಸ್ತು ದೃಷ್ಟಿಯಿಂದ ಪೂರಕವೆನ್ನಿಸುವ ಉಪ ಶೀರ್ಷಿಕೆಗಳನ್ನು ನೀಡಲಾಗಿದೆ. ಪ್ರಸ್ತುತ ಸಂಶೋಧನೆಯ ಮೂಲಕ ಕಂಡುಕೊಂಡಿರುವ ಅಂಶಗಳನ್ನು ಇದರಲ್ಲಿ ವಿವರಿಸಲಾಗುವುದು. ಮಹಾಪ್ರಬಂಧದ ಫಲಿತಗಳನ್ನು ದಾಖಲಿಸಲಾಗಿದೆ. ಕೊನೆಯಲ್ಲಿ ಅನುಬಂಧವಿದೆ. ಇದರಲ್ಲಿ ಪರಾಮರ್ಶನ ಗ್ರಂಥಗಳು, ಕಲಾವಿದರು ಮತ್ತು ಜಾನಪದ ವಿದ್ವಾಂಸರ ಜೊತೆಗೆ ನಡೆಸಿದ ಸಂದರ್ಶನಗಳಿವೆ. ಮಹತ್ವದ ಛಾಯಾಚಿತ್ರಗಳನ್ನು ಕೊಡಲಾಗಿದೆ.

ಪಾಂಚಾಳರು ಪ್ರತಿನಿಧಿಸುವ ಸಾಮಾಜಿಕ ಜೀವನದ ಸ್ವರೂಪ ವೈಶಿಷ್ಟಪೂರ್ಣವಾಗಿದೆ. ವ್ಯಕ್ತಿ ಮತ್ತು ಸಮಾಜದ ನಡುವಿನ ಸಂಬಂಧ, ಸಾಮಾಜಿಕ ನಿಯಮಗಳು ಅಲ್ಲಿಯ ಮೌಲ್ಯ ನಿಷ್ಠೆ, ವಚನ ಪರಿಪಾಲನೆ, ಶೌರ್ಯ ಪ್ರದರ್ಶನ, ತ್ಯಾಗ, ಭಕ್ತಿ ಮುಂತಾದ ವಿಷಯಗಳ ವಿಶ್ಲೇಷಣೆ ಇಲ್ಲಿ ಬಂದಿದೆ. ಕೌಟುಂಬಿಕ ಜೀವನದ ರೀತಿ, ನೀತಿಗಳು, ಕೌಟುಂಬಿಕ ಸಂಬಂಧಗಳು, ಬಂಧುತ್ವದ ಪರಿಕಲ್ಪನೆ, ತಂದೆ ತಾಯಿ ಮತ್ತು ಮಕ್ಕಳು ಹೊಂದಿರುವ ಪರಸ್ಪರ ಸಂಬಂಧಗಳು ವೈವಾಹಿಕ ಜೀವನದಿಂದ ಮೊದಲಾಗುವ ಗಂಡ-ಹೆಂಡತಿ ಸಂಬಂಧಗಳು, ಅತ್ತೆ-ಸೊಸೆ, ಮಾವ-ಅಳಿಯ ಸಂಬಂಧಗಳು, ಕೌಟುಂಬಿಕ ಮಹತ್ವ , ಕುಟುಂಬಗಳಲ್ಲಿ ಉಂಟಾಗುವ ಘರ್ಷಣೆಗಳು ಸವತಿ-ಮತ್ಸರ, ರುಕ್ಮಿಣಿ-ಸತ್ಯಭಾಮೆ, ಕೃಷ್ಣನ ಮೂಲ, ನಾರದರು ಜಗಳ(ದ್ವೇಷ) ಹಚ್ಚುವುದು, ಜನಸಾಮಾನ್ಯರ ಪ್ರತೀಕವಾಗಿರುವ ದೂತಿಯ ಪಾತ್ರ ಈ ಮುಂತಾದ ವಿಚಾರಗಳ ವಿಶ್ಲೇಷಣೆ ಮಾಡಲಾಗಿದೆ. ಆದರ್ಶ ಮೌಲ್ಯಗಳ ಪ್ರತಿಪಾದನೆಗಿಂತ ಜನಪದರು ತಮ್ಮ ದೈನಂದಿನ ಜೀವನದಲ್ಲಿ ಎದುರಿಸುವ ಸಮಸ್ಯೆಗಳು, ಕೌಟುಂಬಿಕ ಜೀವನದ ಕಷ್ಟ ಕೋಟಲೆಗಳು, ಭಾವನಾತ್ಮಕ ಸಂಬಂಧಗಳಿಗೆ ಹೆಚ್ಚಿನ ಆಧ್ಯತೆ ನೀಡಿರುವದನ್ನು ಇಲ್ಲಿ ಒತ್ತಿ ಹೇಳಲಾಗಿದೆ.

ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿರುವ ನಂಬಿಕೆ. ಆಚರಣೆ ಸಂಪ್ರದಾಯಗಳು ಶ್ರೀಕೃಷ್ಣ ಪಾರಿಜಾತ ಬಯಲಾಟಗಳಲ್ಲಿ ಹೇಗೆ ಸ್ಥಾನ ಪಡೆದಿವೆ ಎಂಬುದನ್ನು ಕಾಣಿಸಲಾಗಿದೆ.

ಪಾರಿಜಾತ ಬಯಲಾಟಗಳ ಭಾಷೆಯನ್ನು ಸಾಮಾಜಿಕ ನೆಲೆಯಲ್ಲಿ ಅಭ್ಯಾಸ ಮಾಡಲಾಗಿದೆ. ಲಿಖಿತ ಪರಂಪರೆಯ ಭಾಷೆ ಮತ್ತು ಅಲಿಖಿತ ಭಾಷೆ, ಇವೆರೆಡರ ಸಮ್ಮಿಲನದಿಂದಾಗಿ ಶ್ರೀಕೃಷ್ಣ ಪಾರಿಜಾತದ ಬಯಲಾಟ ಕಥೆಗಳಲ್ಲಿ ಬಳಕೆಯಾಗಿದೆ. ಭಾಷೆಯ ವಿವಿಧ ನಮೂನೆಗಳನ್ನು ಗುರುತಿಸಲಾಗಿದೆ. ಸಂಭಾಷಣೆಯಲ್ಲಿ ಬಳಕೆಯಾಗಿರುವ ಪಾಂಚಾಳರ ಪದ ಪ್ರಯೋಗದಲ್ಲಿ ಗಾದೆ, ಒಡುಪುಗಳನ್ನು ಇಲ್ಲಿ ವಿವರಿಸಲಾಗಿದೆ.

ಒಟ್ಟಾರೆಯಾಗಿ ಬಯಲಾಟ ಕಥೆ ಅಥವಾ ಶ್ರೀಕೃಷ್ಣ ಪಾರಿಜಾತದಲ್ಲಿ ಪಾಂಚಾಳರ ಪ್ರಾತಿನಿಧ್ಯ ಕುರಿತು ಕಲಾ ಪರಿಸರ ನೆಲೆಯಿಂದ ಅಧ್ಯಯನ ಮಾಡಿದಾಗ ಒಂದು ಪ್ರದೇಶದ ಸಮುದಾಯ ಚರಿತ್ರೆಯನ್ನು ಪುನರ್ ರೂಪಿಸಿಕೊಳ್ಳಲು ಸಾಧ್ಯವೆಂದು ಈ ಸಂಶೋಧನೆಯಿಂದ ಕಂಡುಕೊಳ್ಳಲಾಗಿದೆ. ಪ್ರಾದೇಶಿಕ ಜನಸಂಸ್ಕೃತಿಯ ಕಲಾ ಪರಿಸರದ ಪ್ರಸಾರಣೆಯಲ್ಲಿ ಪಾಂಚಾಳರು ವಹಿಸುವ ಮಹತ್ವದ ಪಾತ್ರ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಕರ್ನಾಟಕದ ಉದ್ದಗಲಕ್ಕೂ ಒಂದೇ ರೀತಿಯ ಪಾಂಚಾಳ ಸಮುದಾಯದ ಆಚಾರ ವಿಚಾರಗಳು ರಚನೆಗೊಂಡಿದ್ದರೂ ಪ್ರಸಾರಣೆಯಲ್ಲಿ ಮಾತ್ರ ಭಿನ್ನವಾಗಿವೆ. ಇದಕ್ಕೆ ಕಾರಣ ಪ್ರಾದೇಶಿಕ ವೈಶಿಷ್ಟ್ಯಗಳು. ಅವರ ಜೀವನದ ವಿವರಗಳು. ಕಲಾಕೌಶಲ್ಯಗಳು ಅವಿನಾಭಾವ ಅಂಶಗಳಾಗಿ ಸೇರಿಕೊಂಡಿವೆ. ಈ ದೃಷ್ಟಿಯಿಂದ ಶ್ರೀಕೃಷ್ಣ ಪಾರಿಜಾತವು ಬೇರೆ ಬೇರೆ ಪ್ರದೇಶಗಳಲ್ಲಿ ವಿಭಿನ್ನ ಸ್ವರೂಪದಲ್ಲಿ ಪ್ರಸಾರಣೆಯಲ್ಲಿರುವುದನ್ನು ಈ ಅಧ್ಯಯನದ ಮೂಲಕ ಗುರುತಿಸಲಾಗಿದೆ. ಈ ನಿಟ್ಟಿನಲ್ಲಿ ಪಾಂಚಾಳ ಕಲಾವಿದರ ಅಧ್ಯಯನಕ್ಕೆ ಶ್ರೀಕೃಷ್ಣ ಪಾರಿಜಾತಕ್ಕೆ ಒದಗಿಸುವ ಸಾಮಗ್ರಿಯೂ ತುಂಬಾ ಮಹತ್ವದ್ದೆನಿಸಿದೆ. ಜ್ಞಾನ ಕೌಶಲ್ಯಕ್ಕೆ ಪಾಂಚಾಳ ಸಮುದಾಯ ಒದಗಿಸುವ ಸಾಂಸ್ಕೃತಿಕ ವಿವರಗಳು ಮುಖ್ಯವಾಗಿ ಸಾಮೂಹಿಕ ಹಿತಕ್ಕೆ ಸಂಬಂಧಿಸಿದ ಸಮುದಾಯ, ಮತ, ಬೇಧಗಳ ಭಾವನೆಗಳ ಸುಳಿಯಗೊಡದೇ ಊರೊಟ್ಟಿನ ಸಂಬಂಧಗಳಲ್ಲಿ ಏಕವಾಗಿ ಮತ್ತು ಭಾವನಾತ್ಮಕವಾಗಿ ಪ್ರದರ್ಶನಗೊಳ್ಳುತ್ತವೆ. ಶ್ರೀಕೃಷ್ಣ ಪಾರಿಜಾತ ಸಮಾಜದಲ್ಲಿ ಸಮಾನತಾ ತತ್ವವನ್ನು ಪ್ರತಿನಿಧಿಸಿದೆ. ಇಂದು ವಿಪರೀತವಾಗಿ ಕಲುಷಿತಗೊಂಡಿರುವ ಸಾಮಾಜಿಕ ಜೀವನವನ್ನು ಸುಧಾರಿಸಿ ಅಲ್ಲಿ ನೆಮ್ಮದಿಯ ವಾತಾವರಣ ಉಂಟುಮಾಡಲು ಎಲ್ಲಾ ಬಗೆಯ ಸಮೂಹ ಮಾಧ್ಯಮಗಳಲ್ಲಿ ಶ್ರೀಕೃಷ್ಣ ಪಾರಿಜಾತ ಕಥೆಗಳನ್ನು ಪುನರುಜ್ಜೀವನಗೊಳಿಸಿ ಪ್ರಸಾರ ಮಾಡುವದು ಅಗತ್ಯವೆನಿಸಿದೆ.

೧.೩. ವ್ಯಾಪ್ತಿ :

ಪ್ರಸ್ತುತ ಮಹಾಪ್ರಬಂಧವು "ಶ್ರೀಕೃಷ್ಣ ಪಾರಿಜಾತದಲ್ಲಿ ಪಂಚಾಳರ ಪ್ರಾತಿನಿಧ್ಯ :ತಾತ್ವಿಕ ವಿವೇಚನೆ" ಆಗಿರುವುದರಿಂದ ಮುಖ್ಯವಾಗಿ ಅದನ್ನೇ ಕೇಂದ್ರವಾಗಿರಿಸಿಕೊಳ್ಳಲಾಗಿದೆ. ಶ್ರೀಕೃಷ್ಣ ಪಾರಿಜಾತದಲ್ಲಿ 'ಪಾಂಚಾಳರ ಪ್ರಾತಿನಿಧ್ಯ'ವನ್ನು ಪ್ರಧಾನವಾಗಿ ಸ್ವೀಕರಿಸಲಾಗಿದೆ. ಹೀಗಾಗಿ ವಿಶ್ವಕರ್ಮವೆಂದು ಕರೆಸಿಕೊಳ್ಳುವ ಶ್ರಮಿಕವರ್ಗ ಮತ್ತು ಕುಶಲಕರ್ಮಿಗಳನ್ನು ಅನುಲಕ್ಷಿಸಲಾಗಿದೆ. ಪಾಂಚಾಳರಲ್ಲಿ ಬಡಿಗೇರ, ಕಂಬಾರ, ಕಂಚುಗಾರ, ಪತ್ತಾರ ಮತ್ತು ಶಿಲ್ಪಗಾರ ಈ ಐದು ಜನ

ಸಮುದಾಯವನ್ನು ಹಿನ್ನೆಲೆಯಾಗಿರಿಸಿಕೊಂಡು; ಅದರಲ್ಲಿ ಬರುವ ಪಾರಿಜಾತದಲ್ಲಿ ಪಾಲುಗೊಂಡಿರುವ ಕಲಾವಿದರನ್ನು ಪರಿಗಣಿಸಲಾಗಿದೆ. ಭಾಗವತ, ಪ್ರಧಾನ ಪಾತ್ರದಾರಿ, ಅಪ್ರಧಾನ ಪಾತ್ರಧಾರಿ, ಸ್ತ್ರೀ ಪಾತ್ರಧಾರಿ, ಇತರ ಪಾತ್ರಧಾರಿ ಮುಂತಾದವರನ್ನು ಪರಿಗಣಿಸಿ ಅಧ್ಯಯನಿಸಲಾಗಿದೆ. ಕೇವಲ ಪಾತ್ರಧಾರಿಗಳನ್ನು ಮಾತ್ರವಲ್ಲದೇ, ಮುಮ್ಮೇಳದ ಕಲಾವಿದರು, ಹಿಮ್ಮೇಳದ ಕಲಾವಿದರು, ವಾದ್ಯದವರು ಹೀಗೆ ಪಾರಿಜಾತದ ಒಟ್ಟು ತಂಡವನ್ನು ಪರಿಗಣಿಸಲಾಗಿದೆ. ಪಾರಿಜಾತ ಕಂಪನಿ ಮಾಲೀಕರು ಹಾಗೂ ಸಂಘಟಕರಾಗಿ ಕಾರ್ಯನಿರ್ವಹಿಸಿದವರನ್ನು ಅಧ್ಯಯನದ ವ್ಯಾಪ್ತಿಗೆ ಅಳವಡಿಸಲಾಗಿದೆ. ಇನ್ನು ಬಾಗಲಕೋಟೆ, ಬೆಳಗಾವಿ, ವಿಜಯಪುರ ಮೂರು ಜಿಲ್ಲೆಗಳ ವ್ಯಾಪ್ತಿಯನ್ನು ಗುರುತಿಸಿಕೊಂಡು ಪ್ರಾತಿನಿಧಿಕವಾಗಿ ಅಧ್ಯಯನವನ್ನು ಪೂರ್ಣಗೊಳಿಸಲಾಗಿದೆ. ಒಂದು ಪಾಂಚಾಳ ಕಲಾವಿದರು ಎರಡು ಜಿಲ್ಲೆಯ ಪ್ರಾತಿನಿಧಿಯಂತೆ ಇವೆರಡೂ ವ್ಯಾಪ್ತಿಯ ಹಿನ್ನೆಲೆಯಲ್ಲಿ ಪ್ರಸ್ತುತ ಮಹಾಪ್ರಬಂಧವನ್ನು ಅಧ್ಯಯನಿಸಲಾಗಿದೆ.

೧.೪. ವಿಧಾನ :

ಪ್ರಸ್ತುತ ಅಧ್ಯಯನವು ಕ್ಷೇತ್ರವನ್ನು ಅವಲಂಭಿಸಿದ ಸಂಶೋಧನೆಯಾಗಿದೆ. ಆದ್ದರಿಂದ ಮಾರ್ಗದರ್ಶಕರೊಂದಿಗೆ ಚರ್ಚಿಸಲಾಯ್ತು. ಪಾರಿಜಾತ ಕ್ಷೇತ್ರದ ದಿಗ್ಗಜರ ಸಂದರ್ಶನ ಕೈಗೊಳ್ಳಲಾಯಿತು. ಶ್ರೀಕೃಷ್ಣ ಪಾರಿಜಾತದ ಕುರಿತಾಗಿ ಪಿಎಚ್.ಡಿ. ಮಾಡಿ ಪಾರಿಜಾತಕ್ಕೆ ಅಧಿಕೃತವಾಗಿ ವಿಶ್ವವಿದ್ಯಾಲಯದ ಮಾನ್ಯತೆ ಒದಗಿಸಿದ ಡಾ. ಶ್ರೀರಾಮ ಇಟ್ಟಣ್ಣವರು "ಪಾರಿಜಾತ ಪರಂಪರೆ ಮತ್ತು ಕೌಜಲಗಿ ನಿಂಗಮ್ಮ" ವಿಷಯ ಕುರಿತಾಗಿ ಪಿಎಚ್.ಡಿ. ಮಹಾಪ್ರಬಂಧಕ್ಕೆ ಮಾರ್ಗದರ್ಶನ ಮಾಡಿದ ಜಾನಪದ ವಿದ್ವಾಂಸರಾದ ಮಹಾಲಿಂಗಪುರದ ಡಾ. ಅಶೋಕ ನರೋಡೆ, ಬಯಲಾಟ ಕಂಪನಿ ಹುಟ್ಟುಹಾಕಿದ ಹಂಪಿ ಕನ್ನಡ ವಿ.ವಿ. ಜಾನಪದ ವಿದ್ವಾಂಸ ಡಾ. ವಿರೇಶ ಬಡಿಗೇರ, ಜನಪದ ಆಟಗಳನ್ನು ಆಡಿಸುತ್ತ ಬಂದಿರುವ, ನಟ–ನಾಟಕಕಾರ–ನಿರ್ದೇಶಕ ಡಾ. ಶ್ರೀಶೈಲ ಹುದ್ದಾರ, ಜಾನಪದ ವಿದ್ವಾಂಸರಾದ ಶ್ರೀ ಶಿವಾನಂದ ಶೆಲ್ಲಿಕೇರಿ ಮುಂತಾದವರನ್ನು ಖುದ್ದಾಗಿ ಭೇಟಿಯಾದೆ. ವಿಷಯದ ಕುರಿತಾಗಿ ವಿಸ್ತೃತವಾದ ಚರ್ಚೆ ಮಾಡಿ, ಅವರು ಪಾರಿಜಾತದ ಕುರಿತಾಗಿ ರಚಿಸಿರುವ ಪುಸ್ತಕಗಳನ್ನು ಸಂಗ್ರಹಿಸಿದೆ.

ಪಾರಿಜಾತದ ಪ್ರಮುಖ ಕಲಾವಿದರಾದ ಶ್ರೀ ಬಸವಲಿಂಗಯ್ಯ ಹಿರೇಮಠ, ಸುವಿಖ್ಯಾತ ಪಾರಿಜಾತ ಕಲಾವಿದೆ ನಾಡೋಜ ಯಲ್ಲವ್ವಾ ರೊಡ್ಡಪ್ಪಣವರ ಮುಂತಾದವರನ್ನು ಸಂಪರ್ಕಿಸಿ ಅವರೊಡನೆ ವಿಷಯದ ಕುರಿತಾಗಿ ಸಂವಾದ ಮಾಡಿರುವೆ. ಪಾಂಚಾಳರು ಹುಟ್ಟುಹಾಕಿದ ಕಂಪನಿಗಳು, ವಿವಿಧ ಪಾರಿಜಾತದಲ್ಲಿ ಪಾಲುಗೊಂಡ ಈ ಸಮುದಾಯದ ಪ್ರಮುಖ ಕಲಾವಿದರ ಸಂದರ್ಶನ ಕೈಗೊಂಡು ಬಾಗಲಕೋಟೆ–ಬೆಳಗಾವಿ–ವಿಜಯಪುರ ಮೂರು ಜಿಲ್ಲೆಗಳಲ್ಲಿ ಚೆಲ್ಲುವರೆದಿರುವ ಪಾರಿಜಾತದಲ್ಲಿ ಪಾಲುಗೊಂಡಿರುವ ಪಾಂಚಾಳ ಕಲಾವಿದರ ಪಟ್ಟಿ ತಯಾರಿಸಿ, ಪ್ರಮುಖರನ್ನು ಖುದ್ದಾಗಿ ಭೇಟಿಯಾಗಿ ಮಾಹಿತಿ ಸಂಗ್ರಹಿಸಿದೆ. ಪಾರಿಜಾತ ಪ್ರಿಯರನ್ನು, ಹಳೆತಲೆಮಾರಿನ

ಪಾರಿಜಾತ ಪ್ರೇಕ್ಷಕರ ಸಮುದಾಯದ ಸಂದರ್ಶನ ಮಾಡಿ ಅಮೂಲ್ಯವಾದ ಮಾಹಿತಿಯನ್ನು ಸಂಗ್ರಹಿಸಿದೆ.

ಕನ್ನಡ ವಿ.ವಿ ಹಂಪಿಯಲ್ಲಿ ಲಭ್ಯವಾಗುವ ಜಾನಪದ ಗ್ರಂಥಗಳು, ಪಾರಿಜಾತಕ್ಕೆ ಸಂಬಂಧಿಸಿದ ಕೃತಿಗಳನ್ನು ಕೊಂಡುಕೊಂಡೆ. ಬಾಗಲಕೋಟದ ಕೇಂದ್ರ ಗ್ರಂಥಾಲಯ, ರಾಣಿ ಚನ್ನಮ್ಮ ವಿ.ವಿಯ ಕುವೆಂಪು ಗ್ರಂಥಾಲಯಗಳನ್ನು ಸಂದರ್ಶಿಸಿದೆ. ಹಾರೂಗೇರಿ ಬಿ.ಆರ್, ದರೂರ ಸಂಶೋಧನ ಕೇಂದ್ರದ ಗ್ರಂಥಾಲಯ, ಬೆಳಗಾವಿ ಜಿಲ್ಲಾ ಕೇಂದ್ರ ಗ್ರಂಥಾಲಯಗಳಿಗೆ ಭೇಟಿಯಿತ್ತಿರುವೆ. ಬಾಗಲಕೋಟ ಮತ್ತು ವಿಜಯಪುರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಮತ್ತು ವಾರ್ತಾ ಪ್ರಸಾರ ಇಲಾಖೆ ಮುಂತಾದವುಗಳಿಗೆ ಭೇಟಿಯಿತ್ತು ಮಾಹಿತಿ ಸಂಗ್ರಹಿಸಿದೆ.

ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಒಟ್ಟು ಮಾಹಿತಿಯನ್ನು ವಿಂಗಡಿಸಿದೆ. ಸಾಮಗ್ರಿಮುಖಿ ಸಂಗ್ರಹವಾದ ಮೇಲೆ, ಮಾರ್ಗದರ್ಶಕರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರೊಡನೆ ಚರ್ಚಿಸಿದೆ. ಜಾನಪದ ವಿದ್ವಾಂಸರಾದ ಡಾ. ವಿರೇಶ ಬಡಿಗೇರ ಅವರ ಜೊತೆಗೆ ಚರ್ಚಿಸಿ, ಬರವಣಿಗೆ ಮಾಡಿರುವೆ. ಪ್ರಸ್ತುತ ಮಹಾಪ್ರಬಂಧವನ್ನು, ವಿವರಣೆ, ವಿವೇಚನೆ, ವಿಶ್ಲೇಷಣೆ ಮಾದರಿಯನ್ನು ಅನುಸರಿಸಿ ರೂಪಿಸಲಾಗಿದೆ. ಸಾಂದರ್ಭಿಕವಾಗಿ ತುಲನಾತ್ಮಕ ಅಧ್ಯಯನವನ್ನು ಪ್ರಸ್ತುತ ಪ್ರಬಂಧದಲ್ಲಿ ಅಳವಡಿಸಲಾಗಿದೆ. ಪ್ರಸ್ತುತ ಚಲಾವಣೆಯಲ್ಲಿರುವ ಸಂಸ್ಕೃತಿ ಅಧ್ಯಯನ ವಿಧಾನವನ್ನು ಅಳವಡಿಸಿಕೊಂಡು ಮಹಾಪ್ರಬಂಧವನ್ನು ಕಟ್ಟಿಕೊಡಲಾಗಿದೆ.

ತಾತ್ವಿಕತೆ :

ಪ್ರಸ್ತುತ ಮಹಾಪ್ರಬಂಧದ ವಸ್ತು, ಪ್ರಾಂತ, ವಿಷಯ ಇತ್ಯಾದಿಗಳ ಹಿನ್ನೆಲೆಯಲ್ಲಿ ಅಧ್ಯಯನಿಸಲಾಗಿದೆ. ವಸ್ತುವಿನ ತಾತ್ವಿಕತೆ, ವಿಷಯದ ಪ್ರಸ್ತುತತೆ ಮತ್ತು ಪಾತ್ರದ ಅರ್ಥವಂತಿಕೆ, ಕಲೆಯ ನೆಲೆ, ಬೆಲೆ, ಕಲಾವಿದರ ಬದುಕಿನ ಆರ್ಥಿಕ ಸ್ಥಿತಿ, ಗತಿ, ಸಮಕಾಲೀನ ಸಂದರ್ಭದಲ್ಲಿ ಪಾರಿಜಾತದ ಅಳಿವು, ಉಳಿವು ಮುಂತಾದ ಅಂಶಗಳನ್ನು ಎತ್ತಿಕೊಂಡು ತಾತ್ವಿಕವಾಗಿ ಚರ್ಚಿಸಲಾಗಿದೆ. ಪಾರಿಜಾತದ ಎಲ್ಲ ಮಗ್ಗುಲಗಳನ್ನು ಜಿಜ್ಞಾಸೆಗೆ ಒಡ್ಡಲಾಗಿದೆ. ಪಾರಿಜಾತದ ಭವ್ಯ ಕಲೆಯನ್ನು ಉಳಿಸಿ ಮುಂದುವರೆಸಲು ಮಾಡಬಹುದಾದ ಕಾರ್ಯಚಟುವಟಿಕೆಗಳನ್ನು ಸೂಚಿಸಲಾಗಿದೆ. ಧಾರ್ಮಿಕ, ಸಾಮಾಜಿಕ, ಆರ್ಥಿಕ ಆಯಾಮಗಳನ್ನು ಸಾಂದರ್ಭಿಕವಾಗಿ ವಿವರಿಸಿ, ಕಲೆ ಮತ್ತು ಕಲಾವಿದರ ಬದುಕಿನ ಸಂಬಂಧವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಸಣ್ಣಾಟವು ಶೈವ ಮತ್ತು ವೈಷ್ಣವರ ಮತ ಪ್ರಚಾರದ ಉದ್ದೇಶದಿಂದ ಹುಟ್ಟಿಕೊಂಡಿದೆ. ಸಣ್ಣಾಟ ಮೊದಲು ಬೆಳಗಾವಿ ಜಿಲ್ಲೆಯಲ್ಲಿ ರೂಪ ತಳೆಯಿತು. ನಂತರ ಸುತ್ತಮುತ್ತಲಿನ ಜಿಲ್ಲೆಗಳಲ್ಲೂ ಜನಪ್ರಿಯತೆ ಗಳಿಸಿತು. ಮೂಲತಃ ಹಂಪಿಯ ಹೊಸಪೇಟೆ ಹತ್ತಿರ ಅಪ್ಪರಾಳದಲ್ಲಿ "ಭಾಮಾ ಕಲಾಪಂ" ತಮ್ಮಣ್ಣನ ಮೂಲಕ ಉದಯಿಸಿ, ನಂತರ ಕೃಷ್ಣಾ ತೀರಗುಂಟ ಬಾಗಲಕೋಟೆ,

ಬೆಳಗಾವಿ, ವಿಜಯಪುರ ಸುತ್ತಮುತ್ತಲ ಪರಿಸರದಲ್ಲಿ ಹಬ್ಬುತ್ತಾ ಕುಲಗೋಡದ ತಮ್ಮಣ್ಣನ ಮೂಲಕ "ಕೃಷ್ಣ ಪಾರಿಜಾತ" ಎಂಬ ಸಣ್ಣಾಟವು ಬಹಳ ಪ್ರಸಿದ್ಧಿ ಪಡೆಯಿತು.

ದೊಡ್ಡಾಟದಷ್ಟು ವಿಶಾಲವಾದ ರಂಗಸ್ಥಳ ಸಣ್ಣಾಟಕ್ಕೆ ಬೇಕಿಲ್ಲ. ಸುಮಾರು ೧೬ ಅಡಿ ಉದ್ದ, ೧೬ ಅಡಿ ಅಗಲದ ಅಟ್ಟ, ಎರಡು ಅಥವಾ ಮೂರು ಅಡಿಗಳಷ್ಟು ಎತ್ತರವಿರುತ್ತದೆ. ಮುಂಭಾಗದಿಂದ ಎಂಟು ಅಡಿಗಳಷ್ಟು ಹಿಂದಕ್ಕೆ ಒಂದು ಬಟ್ಟೆಯನ್ನು ಇಳಿಬಿಟ್ಟಿರುತ್ತಾರೆ. ಬಟ್ಟೆಯ ಹಿಂಭಾಗದ ಸ್ಥಳವೇ 'ಒಳಟ್ಟ'. ಅಂದರೆ ನೇಪಥ್ಯ ಗೃಹ. ಹಿಮ್ಮೇಳದವರು ಇಲ್ಲಿ ನಿಲ್ಲುತ್ತಾರೆ. ರಂಗಸ್ಥಳದ ನಾಲ್ಕು ಮೂಲೆಗಳಲ್ಲೂ ಬಿದಿರಿನ ಗಳುಗಳನ್ನು (ಕಂಬ) ನೆಟ್ಟು ಹಿಂಬದಿಯನ್ನು ಚಾಪೆಕಟ್ಟಿ ಮುಚ್ಚುತ್ತಾರೆ. ರಂಗದ ಮೇಲ್ಛಾವಣಿಯನ್ನು ಹಾಗೆಯೇ ಮುಚ್ಚಿ ಅಟ್ಟದ ನಾಲ್ಕೂ ಕಡೆಗಳಲ್ಲಿ ತೆಂಗಿನಗರಿ, ಬಾಳೆಕಂಬ ಕಟ್ಟುತ್ತಾರೆ.

ಶ್ರೀಕೃಷ್ಣಪಾರಿಜಾತವು ಪದ್ಯದ ಅರ್ಥವನ್ನು ಒಡೆದು ಹೇಳುವ ಪಾತ್ರಧಾರಿಯ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ದೊಡ್ಡಾಟದಷ್ಟು ಆರ್ಭಟ ಇದರಲ್ಲಿಲ್ಲ. ಇಡೀ ನಾಟಕದ ಮುನ್ನಡೆಯನ್ನು ಸೂತ್ರಧಾರ ನಿಯಂತ್ರಿಸುತ್ತಾನೆ. ಸಣ್ಣಾಟದ ಆರಂಭದಲ್ಲಿ ಮೊದಲು ಗಣಸ್ತುತಿ, ತದನಂತರ ಶೈವರ ಆಟವಾದರೆ ಶಿವಪಾರ್ವತಿಯರು ಕಾಣಿಸಿಕೊಳ್ಳುತ್ತಾರೆ. ವೈಷ್ಣವರ ಆಟವಾದರೆ ರಾಧಾ ಕೃಷ್ಣರು ಕಾಣಿಸಿಕೊಳ್ಳುತ್ತಾರೆ. ಸಾಮಾಜಿಕ ಸಣ್ಣಾಟವಾದರೆ ಗಣಸ್ತುತಿಯ ನಂತರವೇ ಆಟ ಪ್ರಾರಂಭವಾಗುತ್ತದೆ.

ಅಟ್ಟದ ಮೇಲೆ ಬಲಭಾಗದಲ್ಲಿ ಡಪ್ಪಿನವನು ಇರುತ್ತಾನೆ. ಡಪ್ಪಿನವನು ನಿಂತಲ್ಲಿಂದ ಆಗಾಗ್ಗೆ ಸ್ಥಳ ಬದಲಾಯಿಸುತ್ತಿರುತ್ತಾನೆ. ಎಡಗಡೆಯಲ್ಲಿ ಹಾರ್ಮೋನಿಯಂ ವಾದಕನಿರುತ್ತಾನೆ. ಇವರ ಮಧ್ಯೆ ಮೇಳಗಾರ ಇರುತ್ತಾನೆ. ಶ್ರೀಕೃಷ್ಣಪಾರಿಜಾತದಲ್ಲಿ ವೇಷಭೂಷಣ ಅತ್ಯಂತ ಸರಳ. ಪಾತ್ರಧಾರಿಗಳು ಬೆನ್ನಿನ ಹಿಂದಕ್ಕೆ ಉದ್ದವಾದ ಬಣ್ಣದ ಬಟ್ಟೆಯೊಂದನ್ನು ಕಟ್ಟಿಕೊಳ್ಳುತ್ತಾರೆ. ಸ್ತ್ರೀ ಪಾತ್ರಗಳನ್ನು ಪುರುಷರೇ ನಿರ್ವಹಿಸುತ್ತಾರೆ. ಸ್ತ್ರೀ ಪಾತ್ರದಾರಿಗಳು ತಲೆಗೆ ಟೋಪಿ, ಮೂಗಿಗೆ ಬೊಟ್ಟು, ಕಿವಿಗೆ ಬೆಂಡೋಲೆ ಹಾಕಿಕೊಳ್ಳುತ್ತಾರೆ.

ಸಾಮಾಜಿಕ ಸಣ್ಣಾಟಗಳಲ್ಲಿ ಸಮಕಾಲೀನ ಪ್ರಜ್ಞೆ ಇರುವುದು ನಿಚ್ಚಳವಾಗಿ ಕಂಡುಬರುತ್ತದೆ. ೧೨ನೇ ಶತಮಾನದ ಅಂತ್ಯದಲ್ಲಿ ಪತ್ತಾರ ಮಾಸ್ತರ (ಪ್ರಾಥಮಿಕ ಶಾಲೆಯ ಶಿಕ್ಷಕರು) ರಚಿಸಿದ ಸಣ್ಣಾಟ "ಸಂಗ್ಯಾ-ಬಾಳ್ಯಾ" ಎಂಬ ಜನಪ್ರಿಯ ಸಣ್ಣಾಟವು ಸಾಂಪ್ರದಾಯಿಕ ರಂಗಾಂಶಗಳನ್ನೆಲ್ಲಾ ಬಳಸಿಕೊಂಡು ಸಮಕಾಲೀನ ಸಮಾಜದ ಚಿತ್ರಣವನ್ನು ಜನಪದ ಶೈಲಿಯಲ್ಲಿ ಬಿಂಬಿಸುವ ಒಂದು ಅಪರೂಪದ ಕೃತಿಯಾಗಿದೆ.

ವೈಷ್ಣವ ಪಂಥದ ಸಣ್ಣಾಟಗಳಲ್ಲಿ ಆಂಧ್ರದ "ಭಾಮಾ ಕಲಾಪಂ" ನ ವಸ್ತುವನ್ನುಳ್ಳ ಶ್ರೀಕೃಷ್ಣ ಪಾರಿಜಾತ ಅತ್ಯಂತ ಪ್ರಸಿದ್ಧಿ ಪಡೆದಿದೆ. ಪಾರಿಜಾತದ ಕಥೆಗಾರನನ್ನು ಇತರ ಪಾತ್ರಗಳು 'ದೂತೆ' ಎಂದು ಸಂಬೋಧಿಸುತ್ತಾರೆ. ಪಾರಿಜಾತದ ಆಟವು ಗಣೇಶನ ಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ. ಹಿಮ್ಮೇಳದಲ್ಲಿ ತಾಳಧಾರಿಯ ಜತೆಗೆ ಇನ್ನಿಬ್ಬರು ಸಂಗೀತಗಾರರಿರುತ್ತಾರೆ. ಪ್ರವೇಶಿಸುವ ಪಾತ್ರಗಳನ್ನು ದೂತೆ ಪರಿಚಯ ಮಾಡಿಕೊಡುತ್ತಾನೆ.

ಶ್ರೀಕೃಷ್ಣಪಾರಿಜಾತ ಪ್ರದರ್ಶನಗಳಲ್ಲಿ ಮೊದಮೊದಲು ದೀವಟಿಕೆ ಅಥವಾ ಪಂಜನ್ನು ಉಪಯೋಗಿಸುತ್ತಿದ್ದರು. ಇತ್ತೀಚೆಗೆ ಪೆಟ್ರೋಮ್ಯಾಕ್ಸ್ ದೀಪಗಳು, ವಿದ್ಯುದ್ದೀಪ, ಧ್ವನಿವರ್ಧಕಗಳನ್ನು ಬಳಸುತ್ತಾರೆ.

ಕ್ರಮೇಣ ವೃತ್ತಿ ರಂಗಭೂಮಿಯ ಪ್ರಭಾವಕ್ಕೊಳಗಾದ ಸಣ್ಣಾಟಗಳು ಮೊದಲಿನ ಸರಳತೆ ಹಾಗೂ ನಾಟಕೀಯ ಘನತೆಯನ್ನು ಕಳೆದುಕೊಂಡವು. ನಿರ್ಮಾಪಕರಿಗೆ, ಸಣ್ಣಾಟದ ಪ್ರಸಾಧನ, ವೇಷ ಭೂಷಣಗಳನ್ನು ವರ್ಣರಂಜಿತಗೊಳಿಸುವ ಚಪಲವುಂಟಾಯಿತು. ಪೌರಾಣಿಕ ಪಾತ್ರಗಳು ತುಟಿಗೆ ರಂಗು ಹಚ್ಚಿಕೊಂಡು ಕಪ್ಪು ಕನ್ನಡಕ ಧರಿಸಿದವು. ವೃತ್ತಿರಂಗದ ಹಾಡುಗಳು ಸಿನಿಮಾ ಗೀತೆಗಳು ಸಣ್ಣಾಟಕ್ಕೆ ನಡುನಡುವೆ ತಲೆಹಾಕಿದವು. ದೂತೆಯ ಬದಲು ಹಾಸ್ಯಗಾರ 'ಲಲ್ಯೆ' ಎಂಬ 'ಖೋಜ' ರಂಗದ ಮೇಲೆ ಕಾಣಿಸಿಕೊಂಡನು.

ಸುದೈವವಶಾತ್ ಹಳೆಯ ಸಣ್ಣಾಟ ಕಲಾವಿದರು ಅನೇಕರು ಇನ್ನೂ ಜೀವಂತವಿರುವದರಿಂದ ಸಾಂಪ್ರದಾಯಿಕ ಶ್ರೀಕೃಷ್ಣಪಾರಿಜಾತ ಬದುಕಿ ಉಳಿದಿದೆ. ಈ ರಂಗಕಲೆಯ ಕಾಯಕಲ್ಪ ಕಾರ್ಯ ತುರ್ತಾಗಿ ನಡೆಯಬೇಕಾಗಿದೆ. ಒಟ್ಟಾರೆಯಾಗಿ ರಂಗಭೂಮಿ ಒಂದು ಜೀವಂತ ಕಲೆ. ಸಮಕಾಲೀನ ಸ್ಥಿತಿಗತಿಗಳಿಗೆ ಭಾವನಾತ್ಮಕವಾಗಿ ಮತ್ತು ವಿಚಾರಾತ್ಮಕವಾಗಿ ಸ್ಪಂದಿಸುತ್ತಾ ಹೊಸಹೊಸ ಪ್ರಯೋಗಗಳಿಗೆ ಪ್ರೇರೇಪಿಸುತ್ತಾ ನಿರಂತರವಾಗಿ ಸಕ್ರಿಯವಾಗುತ್ತಾ ಹೋಗುವ ಮಾಧ್ಯಮ. ಯಾಕೆಂದರೆ ಶಾಸ್ತ್ರೀಯ ಸಂಗೀತ ಅಥವಾ ನೃತ್ಯದಂತೆ ಈ ಮಾಧ್ಯಮಕ್ಕೆ ಗುರು ಪರಂಪರೆಯಿಲ್ಲ. ಇದ್ದರೂ ಕೂಡಾ ಗುರುಗಳೆನ್ನಿಸಿಕೊಂಡವರು–ಕೊಳ್ಳುವವರು ಹತ್ತಾರು ಮಂದಿ. ಇಲ್ಲಿ ಪ್ರಯೋಗವೇ ಪರಂಪರೆಯಾಗಿದೆ. ಬದುಕಿನ ಪ್ರತಿಯೊಂದು ದಿನವು ಪ್ರಯೋಗಾಭ್ಯಾಸ.

ಆಧುನಿಕ ತಂತ್ರಜ್ಞಾನ ಯುಗದಲ್ಲಿ ಪಾಂಚಾಳ ಕಲಾವಿದರು ಪ್ರಜಾತಂತ್ರ ಹಾಗೂ ರಂಗಭೂಮಿ, ಒಂದಕ್ಕೊಂದು ಪರ್ಯಾಯವೆನ್ನುವಷ್ಟು ಮಹತ್ವವನ್ನು ಪಡೆದಿದೆ. ರಂಗಭೂಮಿ ಎಂದೂ ಶ್ರೀಮಂತರ ಕೈಗೊಂಬೆಯಾಗಿರಲಿಲ್ಲ. ಸಂಪೂರ್ಣವಾಗಿ ಇದು ನಮ್ಮ ಜನಸಾಮಾನ್ಯರ ಮಾಧ್ಯಮ. ಇಲ್ಲಿ ರಂಗಕರ್ಮಿಗಳು ನಿಜವಾದ ಅರ್ಥದಲ್ಲಿ ಅಲ್ಪಸಂಖ್ಯಾತರು. ಈ ಜಾಗತೀಕರಣದ ಪ್ರವಾಹದ ನಡುವೆ ನಮ್ಮ ಸ್ವಂತಿಕೆಯನ್ನು ಉಳಿಸಿಕೊಳ್ಳುವುದಕ್ಕೆ ನಾಡು–ನುಡಿ–ನಡೆ ಅಂದರೆ ಪ್ರದೇಶ, ಭಾಷೆ, ಉಪಭಾಷೆಗಳನ್ನು ಮತ್ತು ನಮ್ಮನ್ನು ಗುರುತಿಸುವದಕ್ಕೆ ಅಥವಾ ರಕ್ಷಿಸಿಕೊಳ್ಳುವದಕ್ಕೆ ರಂಗಭೂಮಿ ಬಿಟ್ಟರೆ ಬೇರೆ ಮಾಧ್ಯಮವಿಲ್ಲ. ಪಾರಿಜಾತದ ಭವ್ಯ ಕಲೆಯನ್ನು ಉಳಿಸಿ ಮುಂದುವರೆಸಲು ಮಾಡಬಹುದಾದ ಕಾರ್ಯಚಟುವಟಿಕೆಗಳನ್ನು ಸೂಚಿಸಲಾಗಿದೆ. ಧಾರ್ಮಿಕ, ಸಾಮಾಜಿಕ, ಆರ್ಥಿಕ ಆಯಾಮಗಳನ್ನು ತಾತ್ವಿಕ ನೆಲೆಗಟ್ಟಿನ ಸಾಂದರ್ಭಿಕವಾಗಿ ವಿವರಿಸಿ, ಕಲೆ ಮತ್ತು ಕಲಾವಿದರ ಬದುಕಿನ ಸಂಬಂಧವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ : ಎರಡು

ಬಾಗಲಕೋಟೆ, ವಿಜಯಪುರ ಹಾಗೂ ಬೆಳಗಾವಿ ಜಿಲ್ಲೆಗಳ ಪಕ್ಷಿನೋಟ

ಅಧ್ಯಾಯ : ೨

ಬಾಗಲಕೋಟೆ, ವಿಜಯಪುರ ಹಾಗೂ ಬೆಳಗಾವಿ ಜಿಲ್ಲೆಗಳ ಪಕ್ಷಿನೋಟ

೨.೧. ಪ್ರವೇಶ :

ಪ್ರಾಚೀನ ಕಾಲದ ಅರಸರಾದ ಶಾತವಾಹನ, ಕದಂಬ, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ಬಹಮನಿ ಸುಲ್ತಾನರು, ಹಾಗೂ ವಿಜಯನಗರ ಅರಸರು ಮುಂತಾದವರ ಆಡಳಿತದಲ್ಲಿ ಕನ್ನಡ ನಾಡು ನುಡಿ ನಾಗರಿಕತೆಯ ಸ್ಥಿತ್ಯಂತರಗಳನ್ನು ಕಂಡಿದೆ. ಬಾಗಲಕೋಟೆ, ವಿಜಯಪುರ, ಬೆಳಗಾವಿ ಜಿಲ್ಲೆಗಳು ತುಂಬಾ ವಿಶಿಷ್ಟವಾದಂತಹ ನೆಲಗಳು. ಹಲವು ದಾರ್ಶನಿಕರು, ಸಂತರೂ, ಅನುಭಾವಿಗಳು ಹಾಗೂ ಸಾಹಿತ್ಯ ದಿಗ್ಗಜರ ನೆಲೆವೀಡು. ಹಲವು ಕಲೆ ಮತ್ತು ಕಲಾವಿದರ ತವರೂರು ಆಗಿವೆ. ವೈವಿಧ್ಯತೆಯಿಂದ ಕೂಡಿದ ಈ ಜಿಲ್ಲೆಗಳಲ್ಲಿ ದೊಡ್ಡಾಟ, ಸಣ್ಣಾಟ, ಬಯಲಾಟ, ಹಾಗೂ ಕೃಷ್ಣ ಪಾರಿಜಾತದಂತಹ ನಾಟಕಗಳಲ್ಲದೆ, ಡೊಳ್ಳುಕುಣಿತ, ವೀರಗಾಸೆ, ಪುರವಂತಿಕೆ, ಗೊರವರ ಕುಣಿತ, ಕೀಲುಕುದುರೆ, ಕೋಲಾಟ, ಹೆಜ್ಜೆಮೇಳ, ಭಜನೆ, ಗೀಗಿಪದ, ತತ್ವಪದ, ಲಾವಣಿ, ಸೋಬಾನೆ, ಹೋಳಿಹಾಡು, ಚೌಡಿಕೆಪದ, ರಿವಾಯತ್‌ಪದ, ಶಹನಾಯಿ, ಹಲಗೆ, ಕರಡಿಮಜಲು, ಸೂತ್ರದಗೊಂಬೆ, ಹುಲಿ ವೇಷದ ಕುಣಿತ ಮುಂತಾದ ಜನಪದ ನೃತ್ಯ ಗೀತೆ ಮತ್ತು ಎಲ್ಲಾ ಪ್ರಕಾರದ ಕಲೆಗಳು ಈ ಮೂರು ಜಿಲ್ಲೆಗಳಲ್ಲಿ ಕಂಡು ಬರುತ್ತವೆ. ಆದ್ದರಿಂದ ಈ ಜಿಲ್ಲೆಗಳು ಸಾಂಸ್ಕೃತಿಕ ಕಲೆಗಳು ಮಹತ್ವದ್ದಾಗಿವೆ.

೨.೨. ಕ್ಷೇತ್ರ ಚರಿತ್ರೆಯ ವಿಶೇಷತೆ :

ಬಾಗಲಕೋಟೆ, ವಿಜಯಪುರ ಜಿಲ್ಲೆಗಳು ಬಯಲು ಪ್ರದೇಶವಾಗಿದ್ದು, ಭೀಮಾ, ಡೋಣಿ, ಘಟಪ್ರಭಾ, ಮಲಪ್ರಭಾ ನದಿಗಳಿಂದ ಕೂಡಿರುವ ಈ ಪ್ರದೇಶದ ಭೂಮಿಯು ಕಪ್ಪು ಎರೆಮಣ್ಣಿನಿಂದ ಕೂಡಿರುವುದರಿಂದ ಜೋಳ, ತೊಗರಿ, ಕಡಲೆ, ಕಬ್ಬು ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ. ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳು ಸಿಮೆಂಟ್ ಕಾರ್ಖಾನೆಗಳು, ಕಲ್ಲಿದ್ದಲಿನ ಗಣಿ ಹೊಂದಿರುವ ಕೂಡಗಿ ವಿದ್ಯುತ್ ಸ್ಥಾವರ, ಸಕ್ಕರೆ ಕಾರ್ಖಾನೆಗಳು, ಕಲ್ಲಿನ ಕ್ರಷರ್ ಮಿಷಿನ್‌ಗಳು

ಮುಂತಾದವುಗಳು ಈ ಎರಡೂ ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಬೆಳಗಾವಿ ಜಿಲ್ಲೆಯು ಅರ್ಧ ಬಯಲು ಪ್ರದೇಶವಿದ್ದು, ಇನ್ನರ್ಧ ಅರಣ್ಯವನ್ನು ಹೊಂದಿದೆ. ಆ ಭಾಗದ ಭೂಮಿಯು ಫಲವತ್ತತೆಯಿಂದ ಕೂಡಿದ್ದು, ನೀರಾವರಿಯ ಸೌಲಭ್ಯವನ್ನು ಹೊಂದಿರುವುದರಿಂದ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಾರೆ. ಸಾಮಾಜಿಕ ವ್ಯವಸ್ಥೆಯನ್ನು ನೋಡಿದಾಗ ಹೆಚ್ಚಾಗಿ ಅವಿಭಕ್ತ ಕುಟುಂಬಗಳು ಕಂಡುಬರುತ್ತವೆ. ಶೈಕ್ಷಣಿಕವಾಗಿ ಸಾಕ್ಷರತೆಯಲ್ಲಿ ಮುಂದುವರೆದಿರುವುದರಿಂದ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಖ್ಯಾತಿ ಪಡೆದ ಚಿಂತಕ ವಿದ್ವಾಂಸರು ಇದ್ದಾರೆ.

ಈ ಮೂರು ಜಿಲ್ಲೆಗಳಲ್ಲಿ ಜನಜೀವನದ ಭಾಗವಾದ ಜಾತ್ರೆ, ಉತ್ಸವ, ಹಬ್ಬ-ಹರಿದಿನಗಳು ಜನಪದ ಸಂಸ್ಕೃತಿಯ ಭಾಗಗಳೇ ಆಗಿವೆ. ಜಾತ್ರೆಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಪರಂಪರೆಯಿಂದ ಬಂದಿರುವ ಸಂಪ್ರದಾಯಗಳನ್ನು ಆಚರಿಸಿಕೊಂಡು ಬರುತ್ತವೆ. ಅದರಂತೆ ಈ ಭಾಗದಲ್ಲಿ ಬರುವ ಬಾದಾಮಿ, ಬೀಳಗಿ, ಬಾಗಲಕೋಟೆ, ಜಮಖಂಡಿ, ಸಾವಳಗಿ, ಕಿತ್ತೂರ, ಗೋಕಾಕ, ಕೌಜಲಗಿ, ಕುಲಗೋಡು, ತೇರದಾಳ, ಹಾರೂಗೇರಿ, ಚಂದರಗಿ ಮುಂತಾದ ಪ್ರದೇಶಗಳ ಜಾತ್ರೆಗಳು ಜನಪದಕಲೆಗಳ ಸಂಸ್ಕೃತಿಯ ಜೀವಂತಿಕೆಗೆ ಸಾಕ್ಷಿಯಾಗಿವೆ.

ಈ ಜಾತ್ರೆಗಳಲ್ಲಿ ಜರಗುವ ವಿವಿಧ ಕಲೆಗಳ ಸ್ಪರ್ಧೆಗಳು ದೈಹಿಕ, ಬೌದ್ಧಿಕ ಶಕ್ತಿಯಿಂದ ಕೂಡಿರುತ್ತವೆ. ವಿವಿಧ ಗ್ರಾಮಗಳಲ್ಲಿ ಕುಸ್ತಿ, ಕಬ್ಬಡ್ಡಿ, ಕೋಲಾಟ, ಪಗಡೆ, ಎತ್ತಿನಬಂಡಿ, ಟಗರಿನಕಾಳಗ, ಕುದುರೆ ಓಟ, ಸಂಗ್ರಾಣಿ ಕಲ್ಲು, ಉಸಿಗಿನಚೀಲ ಎತ್ತುವುದು ಮುಂತಾದವುಗಳು ನಡೆಯುತ್ತವೆ. ಇವುಗಳ ನೆಪದಲ್ಲಿ ಎಲ್ಲ ಸಮುದಾಯದವರು ಜಾತ್ರೆಯಲ್ಲಿ ಭಾಗಿಯಾಗುತ್ತಾರೆ. ಈ ಜಾತ್ರೆಗಳಲ್ಲಿ ಎಲ್ಲಾ ವರ್ಗದ ಜನರು ಸೇರುವುದರಿಂದ ಭಾವೈಕ್ಯತೆಯ ಸಂಕೇತವಾಗಿವೆ. ಈ ಮೂರು ಜಿಲ್ಲೆಗಳ ಜನರನ್ನು ಚಾರಿತ್ರಿಕವಾಗಿ ನೋಡಿದಾಗ ಶೂರರು, ವೀರರು, ಧೈರ್ಯವಂತರು, ಸಾತ್ವಿಕರು, ಸಾಧು-ಸಂತರು, ಯೋಗಿ ತಪಸ್ವಿಗಳು. ಆಧ್ಯಾತ್ಮಿಕವಾಗಿ ಜೈನ, ಶೈವ, ವೈಷ್ಣವ ಮುಂತಾದ ಧಾರ್ಮಿಕ ಸಹಿಷ್ಣತೆ ಬೆಳೆಸಿದವರಾಗಿದ್ದಾರೆ. ರಾಜಕೀಯವಾಗಿ ಜಿಲ್ಲೆಗಳಲ್ಲಿ ಬಹಳ ಎತ್ತರಕ್ಕೆ ಬೆಳೆದವರೆಂದರೆ, ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಕಟ್ಟಿಚನ್ನ, ಬಿ.ಡಿ. ಜತ್ತಿ, ಎಸ್.ಆರ್. ಕಂಠಿ, ಜಾರಕಿಹೊಳಿ, ಗೋವಿಂದ ಕಾರಜೋಳ ಮುಂತಾದವರು.

ಈ ಜಿಲ್ಲೆಗಳಲ್ಲಿ ವಿವಿಧ ಬಗೆಯ ಜನ ಸಮುದಾಯದವರು ತಮ್ಮ ಕುಶಲ ಕಸುಬುಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿರುವುದು ವಿಶೇಷವಾಗಿದೆ. ಗೊಂದಲಿಗರು, ಕಿಳ್ಳೇಕ್ಯಾತರು, ಗೊರವರು, ಮರಾಠಿಗಳು, ಲಂಬಾಣಿಗರು, ಸುಡುಗಾಡು ಸಿದ್ಧರು, ದುರುಗಮುರಗಿಯರು, ಕೊರವಂಜಿಯರು, ಹಗಲುವೇಷದವರು, ಬಡಿಗ, ಕಂಚುಗಾರ, ಪತ್ತಾರ, ಕಮ್ಮಾರ, ಶಿಲ್ಪ, ಈ ವಿಶಿಷ್ಟ ಸಮುದಾಯಗಳು ಹಾಗೂ ಪಾರಂಪರಿಕ ವೃತ್ತಿಯು ಇವತ್ತಿಗೂ ಎಲ್ಲಾ ಸಮುದಾಯದವರಲ್ಲಿ ಸಾಂಸ್ಕೃತಿಕ ವಿಚಾರ, ನಂಬಿಕೆ, ಆಚರಣೆ, ಸಂಪ್ರದಾಯಗಳು ವೈವಿಧ್ಯತೆಯಿಂದ ಕೂಡಿರುವುದು ವಿಶೇಷ.

ಈ ಎಲ್ಲಾ ಕಲೆಗಳ ಕಲಾವಿದರ ನಾಡಿನ ತವರು ಮನೆಯಂತೆ ಮೂರು ಜಿಲ್ಲೆಗಳು ಇವೆ. ದೊಡ್ಡಾಟ, ಸಣ್ಣಾಟ, ಕೃಷ್ಣ ಪಾರಿಜಾತ, ಬಯಲಾಟಗಳ ಮೇಳ ಕಟ್ಟಿ ಕಲಾವಿದರನ್ನು ತಯಾರು ಮಾಡಿದ್ದಾರೆ. ದೊಡ್ಡ ದೊಡ್ಡ ಕಲಾವಿದರು ತಮ್ಮ ಅನುಭವದ ಗರಡಿಯಲ್ಲಿ ನಾಟಕ ಕಂಪನಿಗಳನ್ನು ಕಟ್ಟಿರುತ್ತಾರೆ. ಈ ಜಿಲ್ಲೆಗಳಲ್ಲಿ ಅಷ್ಟೇ ಅಲ್ಲದೆ ಹೊರರಾಜ್ಯಗಳ ತುಂಬಾ ಕಲೆಯ ಶ್ರೀಮಂತಿಕೆಯನ್ನು ಮೆರೆದಿದ್ದಾರೆ. ಜನಪದ ಕಥೆ, ಗೀತೆ, ಲಾವಣಿ, ಗೀಗೀ ಮುಂತಾದವುಗಳನ್ನು ಹೇಳುವ ಹಾಗು ಹಾಡುವ ಕಲಾವಿದರಿದ್ದಾರೆ. ಹಾಗೆಯೇ ಶಿಷ್ಟ ಸಾಹಿತ್ಯವನ್ನು ರಚಿಸಿದ ಮಹಾನ್ ಕವಿಪುಂಗರು ಇದ್ದಾರೆ. ಅಂತಹವರುಗಳಾದ ಶಂಬಾ ಜೋಷಿ, ಕೆ.ಜಿ. ಕುಂದಣಗಾರ, ಬಸವರಾಜ ಕಟ್ಟಿಮನಿ, ಕುಲಗೋಡ ತಮ್ಮಣ್ಣ, ಶಾತುಕಾಮಣ್ಣ, ಪಿ.ಬಿ.ದುತ್ತರಿಗೆ, ಬಸವರಾಜ ಅರಿಶಿನಗೋಡೆ, ಕಂದಗಲ್‌ಹನುಮಂತರಾಯ, ಚಂದ್ರಶೇಖರ ಕಂಬಾರ, ಮುಂತಾದವರು ಇದ್ದಾರೆ. ಒಟ್ಟಾರೆಯಾಗಿ ಬಾಗಲಕೋಟೆ, ವಿಜಯಪುರ, ಬೆಳಗಾವಿ ಜಿಲ್ಲೆಗಳ ಜನಪದರಲ್ಲಿ ಅವರದೇ ಆದ ಪಾರಂಪರಿಕ ಜ್ಞಾನ ಪರಂಪರಾಗತ ನಂಬಿಕೆ ಆಚರಣೆಗಳಿವೆ. ಹೀಗೆ ಈ ಮೂರೂ ಜಿಲ್ಲೆಯ ಕಲೆ, ಕೌಶಲ್ಯ, ಕ್ರೀಡೆ, ಪರಂಪರೆಯ ಜ್ಞಾನ ಎಲ್ಲವನ್ನು ಒಳಗೊಂಡ ಶ್ರೀಮಂತ ಜನಪದ ಸಂಸ್ಕೃತಿಯ ಒಡಲನ್ನು ತುಂಬಿಕೊಂಡಿದೆ.

೨.೩. ಮೂರು ಜಿಲ್ಲೆಗಳ ಕ್ಷೇತ್ರ ಪರಿಚಯ :

೨.೩.೧. ಬಾಗಲಕೋಟೆ:

೨.೩ ೧.೧. ಭೌಗೋಳಿಕ ಚರಿತ್ರೆ :

ಕರ್ನಾಟಕ ರಾಜ್ಯದ ಬಿಜಾಪುರ ಜಿಲ್ಲೆಯಿಂದ ಇತ್ತೀಚಿಗೆ ವಿಭಾಗವಾಗಿ ಸ್ವತಂತ್ರ ಜಿಲ್ಲೆಯ ಸ್ಥಾನ–ಮಾನ ಪಡೆದುಕೊಂಡಿದೆ. ಬಾಗಲಕೋಟೆ ವಿಸ್ತೀರ್ಣ ೬೫೯೩. ಕಿ.ಮಿ. ೭೪೭.ಮಿಟರ್ ಎತ್ತರ. ಜನಸಂಖ್ಯೆ ೧೮೯೦೮೨೬. ಜನಸಾಂದ್ರತೆ ೨೮೮ ಚ.ಕಿ.ಮಿ, ಇದೆ. ಬಾಗಲಕೋಟೆಯನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಆಡಳಿತ ಕಛೇರಿಯನ್ನು ಆರಂಭಿಸಲಾಗಿದೆ. ಈ ಕೇಂದ್ರ ಕಛೇರಿಯಲ್ಲಿ ಜಿಲ್ಲಾ ಪಂಚಾಯತ್ ಕಾರ್ಯಲಯವನ್ನು ಪ್ರಾರಂಭಿಸಿ ಈ ಜಿಲ್ಲೆಯ ಒಂಭತ್ತು ತಾಲ್ಲೂಕಗಳ ಆಡಳಿತ ನಿರ್ವಹಿಸುತ್ತದೆ. ಅಂತಹ ತಾಲ್ಲೂಕುಗಳಾದ ರಬಕವಿ, ಬನಹಟ್ಟಿ, ಜಮಖಂಡಿ, ಮುಧೋಳ, ಬೀಳಗಿ, ಬಾಗಲಕೋಟೆ, ಬಾದಾಮಿ, ಹುನುಗುಂದ, ಗುಳೇದಗುಡ್ಡ, ಇಳಕಲ್ಲು. ಈ ರೀತಿಯಾಗಿ ತಾಲೂಕು ಕೇಂದ್ರಗಳಿದ್ದು, ಎಲ್ಲ ಕ್ಷೇತ್ರಗಳಲ್ಲಿ ರೈತರಿಗೆ ನೀರಾವರಿ ಹಾಗೂ ಒಣ ಬೇಸಾಯದ ಅನುಕೂಲವಿದೆ. ಬಾಗಲಕೋಟೆ, ಬೀಳಗಿ, ಕ್ಷೇತ್ರದಲ್ಲಿ ಕೃಷ್ಣಾನದಿಯ ಹಿನ್ನೀರಿನಿಂದ ಭೂಮಿಗಳು ಮುಳುಗಡೆಯಾಗಿ ಅವರ ಬದುಕಿನ ಭಾವನೆಗಳೇ ಹಾಡಾಗಿ ಜನಪದರಲ್ಲಿ ಹಾಸುಹೊಕ್ಕಾಗಿವೆ.

ಬಾಗಲಕೋಟೆ ಕರ್ನಾಟಕದ ಒಂದು ಜಿಲ್ಲಾ ಕೇಂದ್ರ, ಈ ಜಿಲ್ಲೆಯು ಉತ್ತರ ಕರ್ನಾಟಕದಲ್ಲಿ ಸ್ಥಾಪಿತವಾಗಿದೆ. ಬೆಳಗಾವಿ, ಗದಗ, ಕೊಪ್ಪಳ, ರಾಯಚೂರು ಹಾಗೂ ವಿಜಯಪುರಗಳೊಂದಿಗೆ

ತನ್ನ ಗಡಿಪ್ರದೇಶವನ್ನು ಹೊಂದಿದೆ.[೧] ೧೯೯೭ ರಲ್ಲಿ ಭಾರತದ ಐವತ್ತನೇ ಸ್ವತಂತ್ರೋತ್ಸವದ ಸ್ಮರಣೀಯ ಕಾಲ ಘಟ್ಟದಲ್ಲಿ ಕರ್ನಾಟಕ ಸರ್ಕಾರದ ಪ್ರಕಟಣೆಯ ಆರ್.ಡಿ. ಗ್ಯಾಜೆಟಿಯರ್ ಉಲ್ಲೇಖ ೪.೨ ಎಲ್.ಆರ್.ಡಿ. ೪೭ ಭಾಗ-೩ ನಿರ್ದೇಶನದ ಅನ್ವಯ ಹೊಸ ಜಿಲ್ಲೆಯಾಗಿ ಅಂದಿನ ಮುಖ್ಯಮಂತ್ರಿ ಮಾನ್ಯ ಶ್ರೀ ಜೆ.ಎಚ್. ಪಟೇಲರಿಂದ ಉದ್ಘಾಟಿಸಲ್ಪಟ್ಟಿತು.

ಬಾಗಲಕೋಟೆ ನಗರವು ಕರ್ನಾಟಕ ರಾಜ್ಯದ ಉತ್ತರ ಭಾಗದಲ್ಲಿ ಸ್ಥಾಪಿತವಾಗಿದೆ. ಭೌಗೋಳಿಕವಾಗಿ ಉತ್ತರದ ಕಡೆ ೧೬-೧೮ ಡಿಗ್ರಿ ಮತ್ತು ೭೫-೭ ಪೂರ್ವದಲ್ಲಿ ಘಟಪ್ರಭಾ ಮಟ್ಟದಿಂದ ೫೩೩ ಮೀಟರ್ ಎತ್ತರದಲ್ಲಿದ್ದು ಜಿಲ್ಲೆಯ ಕೇಂದ್ರಸ್ಥಾನವಾಗಿದೆ.

ಉತ್ತರ ಕರ್ನಾಟಕದ ಜನಪದ ಸಾಂಸ್ಕೃತಿಕ ಲೋಕಕ್ಕೆ ಕೊಟ್ಟ ಕೊಡುಗೆಯಲ್ಲಿ ಬಾಗಲಕೋಟೆ ಜಿಲ್ಲೆ ವಿಶೇಷವಾಗಿದೆ. ಪ್ರಾಚೀನ ಕಾಲದ ನಾಗರಿಕತೆಯು ತಾವು ಕಂಡುಕೊಂಡ ಬಾಳಿಬದುಕಿದ ರಾಜಮಹಾರಾಜರು ಹೊರಡಿಸಿದ ಆಜ್ಞೆಗಳು, ಶಾಸನಗಳು ಮುಂತಾದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳನ್ನು ಮಾತ್ರ ನೀಡುತ್ತವೆ.

೨.೩.೧.೨. ಚರಿತ್ರೆ :

ಐತಿಹಾಸಿಕವಾಗಿ ಬಾಗಲಕೋಟೆ ಜಿಲ್ಲೆಯು ಚಾಲುಕ್ಯರಾಳಿದ ನಾಡು. ಬಾದಾಮಿ ಐಹೊಳೆ ಪಟ್ಟದಕಲ್ಲು ಕೂಡಲಸಂಗಮ ಮತ್ತು ಮಹಾಕೂಟ ಇಲ್ಲಿಯ ಅತ್ಯಂತ ಪ್ರಮುಖ ಪ್ರೇಕ್ಷಣೀಯ ಸ್ಥಳಗಳು. ಬಾಗಲಕೋಟೆ ಜೈನ್ ಮಂದಿರದಲ್ಲಿ ದೊರೆತ ೧೦ನೇ ಶತಮಾನದ ಶಾಸನಗಳ ಪ್ರಕಾರ ಬಾಗಲಕೋಟೆಯ ಮೂಲ ಹೆಸರು ಬಾಗಡಿಗೆ ಎಂದು ಆಗಿತ್ತು. ಪುರಾಣಗಳ ಪ್ರಕಾರ ಲಂಕಾಧಿಪತಿಯಾದ ರಾವಣನು ಈ ಪ್ರದೇಶವನ್ನು ಆಳುತ್ತಿದ್ದ. ಅವನು ಈ ನಗರವನ್ನು ಭಜಂತ್ರಿ ಸಂಗೀತಗಾರರಿಗೆ ಕೊಡುಗೆಯಾಗಿ ನೀಡಿದನು. ಬಿಜಾಪುರ ರಾಜರು ತನ್ನ ಮಗಳಿಗೆ ಕಂಕಣ ಕಾಣಿಕೆ ಮಗಳ ಮದುವೆಯ ನಂತರ ಬಳೆ ಸೀರೆ ಆಭರಣಗಳನ್ನು ಖರೀದಿಸಲು ತಂದೆ-ತಾಯಿ ಹಣಕೊಡುವ ಸಂಪ್ರದಾಯದಂತೆ ಈ ಪಟ್ಟಣವನ್ನು ಕೊಡುಗೆಯಾಗಿ ನೀಡಿದರು ಎಂದು ಹೇಳಲಾಗುತ್ತದೆ. ಈ ಪರಿಣಾಮವಾಗಿ ಪಟ್ಟಣದ ಹೆಸರು ಬಾಗಡಿಕೋಟೆಯಾಗಿ ನಂತರ ಬಾಗಲಕೋಟೆಯಾಗಿ ಮಾರ್ಪಟ್ಟಿತು. ನಂತರದ ದಿನಗಳಲ್ಲಿ ಬಾಗಲಕೋಟೆ, ವಿಜಯನಗರ, ಬಿಜಾಪುರ ಸುಲ್ತಾನರ, ದೊರೆಗಳ, ಮರಾಠ ಪೇಶ್ವೆಗಳ, ಮೈಸೂರಿನ ಹೈದರಾಲಿ ಆಡಳಿತಗಾರರು ಮತ್ತು ಅಂತಿಮವಾಗಿ ೧೮೧೮ ರಲ್ಲಿ ಬ್ರಿಟಿಷರ ಆಳ್ವಿಕೆಗೆ ಒಳಗಾಯಿತು. ೧೮೬೫ ರಲ್ಲಿ ಪುರಸಭೆಯಾಗಿ ಅಸ್ತಿತ್ವಕ್ಕೆ ಬಂದಿತು.

ಬಾಗಲಕೋಟೆಯು ಸ್ವತಂತ್ರ ಚಳುವಳಿ ಮತ್ತು ಕರ್ನಾಟಕ ಏಕೀಕರಣ ಚಳವಳಿಗೆ ಕೇಂದ್ರವಾಗಿತ್ತು. ಇಂದು ಬಾಗಲಕೋಟೆ ಪಟ್ಟಣ ಎರಡು ಭಾಗಗಳಲ್ಲಿ ಹಂಚಿ ಹೋಗಿದೆ. ಹೊಸ ಬಾಗಲಕೋಟೆ ನವನಗರ ಮತ್ತು ಹಳೆಯ ಬಾಗಲಕೋಟೆ ಪಟ್ಟಣ. ಆಲಮಟ್ಟಿ ಅಣೆಕಟ್ಟಿನ ನಿರ್ಮಾಣದಿಂದಾಗಿ

ಹಳೆಯ ಪಟ್ಟಣದ ಬಹುತೇಕ ಭಾಗಗಳು ಹಿನ್ನೀರಿನಿಂದ ಮುಳುಗಡೆಯಾದ ಕಾರಣದಿಂದ ಹೊಸ ನವನಗರ ನಿರ್ಮಾಣ ಅನಿವಾರ್ಯವಾಯಿತು. ನಗರವು ವಿಶಾಲ ರಸ್ತೆಗಳು ಉದ್ಯಾನವನಗಳು ಮತ್ತು ಇತರೆ ಆಧುನಿಕ ಸೌಲಭ್ಯಗಳನ್ನು ಹೊಂದಿದೆ. ಮಾದರಿ ವಿನ್ಯಾಸದಿಂದ ಯೋಜಿತ ರೀತಿಯಲ್ಲಿ ಕಟ್ಟಿದ ಪಟ್ಟಣವಾಗಿದೆ. ಬಾಗಲಕೋಟೆ ನವನಗರದ ಪ್ರಧಾನ ವಾಸ್ತುಶಿಲ್ಪಿ ಛಾರ್ಲ್ಸ್ ಕೋರಿಯಾ ಅವರು ಹಾಕಿದ ನಕ್ಷೆನಂತೆ ತಯಾರಾಗಿದೆ.[೨]

ಮೂಲತಃ ಚಾಲುಕ್ಯರ, ಗಂಗರ, ರಾಷ್ಟ್ರಕೂಟರ ಕಾಲದಲ್ಲಿ ಘಟಪ್ರಭಾ ಬಲದಂಡೆಯ ಮೇಲೆ ಭವ್ಯವಾದ ಕೋಟೆ ನಿರ್ಮಾಣವಾಗಿದೆ. ನಾಡಪ್ರಭುಗಳ, ಸಾಮಂತರ ನಾಡಾಗಿತ್ತು ಎಂದು ಜೈನ ದೇವಾಲಯದ ಶಾಸನ ತಿಳಿಸುತ್ತದೆ. ರನ್ನ ಬಳೆಗಾರ ಜೈನ ಮನೆತನದವರು. ಬಳೆ ಮಾರಲಿಕ್ಕೆ ಬಾಗಲಕೋಟೆಗೆ ಬರುತ್ತಿದ್ದನು. ಇವತ್ತಿಗೂ ದೊಡ್ಡದಾದ ದ್ವಾರಬಾಗಿಲು ಇದೆ. ಶಿರೂರು ಅಗಸಿ ಅಂತ ಪೂರ್ವ ದಿಕ್ಕಿನಲ್ಲಿದೆ. ಗುರುತಿಗಾಗಿ ವಾಸ್ತುಶಿಲ್ಪಕ್ಕೆ ಕೊಟ್ಟ ಮಹತ್ವ ತಿಳಿಸುತ್ತದೆ.

ಬಾದಾಮಿ ಚಾಲುಕ್ಯರ ನಾಡು ಐಹೊಳೆ, ಪಟ್ಟದಕಲ್ಲು, ಮೇಣಬಸದಿ, ಮಹಾಕೂಟ, ಬೇವೂರು, ಈಶ್ವರ ದೇವಾಲಯ, ಹಳ್ಳೂರ ಬಸವೇಶ್ವರ, ಮುಂತಾದವುಗಳು. ಬಾದಾಮಿ ಕಪ್ಪೆ ಅರಭಟ್ಟನ ಶಾಸನ ಉಲ್ಲೇಖ ಏಳನೇ ಶತಮಾನದ ನಾಗರಿಕರ ಗುಣ ಸ್ವಭಾವ ತಿಳಿಸುತ್ತದೆ. ಗುಳೇದಗುಡ್ಡ ಮಲಪ್ರಭಾ ನದಿಯ ತಟದಲ್ಲಿದೆ. ಇಳಕಲ್ಲ ನೇಕಾರಿಕೆ, ಕೃಷಿ, ಇತ್ತೀಚಿಗೆ ಟೈಲ್ಸ ಕಲ್ಲಿಗೆ ಪ್ರಸಿದ್ಧಿ ಹೊಂದಿದೆ. ಹುನುಗುಂದ ಕೃಷಿಗೆ ಹೆಸರುವಾಸಿಯಾಗಿದೆ. ಬೀಳಗಿ, ಮುಧೋಳ, ಜಮಖಂಡಿ, ತೇರದಾಳ, ಕೃಷ್ಣಾನದಿಯ ಫಲವತ್ತತೆ, ಕಬ್ಬು ಬೆಳೆಗಾರರು, ಮತ್ತು ಸಕ್ಕರೆ ಕಾರ್ಖಾನೆಗಳಿವೆ. ವಿಜಯಪುರ ಗ್ಯಾಜಟಿಯರ ಪ್ರಕಾರ ಜಮಖಂಡಿ ಐದುನೂರು ಸಂಸ್ಥಾನಗಳ ಆಡಳಿತ ನಡೆಸಿದ ಕೇಂದ್ರವಾಗಿತ್ತು. ಕಲಾದಗಿ ಬ್ರಿಟಿಷರಲ್ಲಿ ಜಿಲ್ಲಾ ಕೇಂದ್ರವಾಗಿತ್ತು. ಈ ರೀತಿ ಪ್ರಾಚೀನ ನಾಗರಿಕರು ಸುಧಾರಣೆ ಆಗುತ್ತಾ ಹೊಸ ಹೊಸ ತಂತ್ರಜ್ಞಾನದಡಿ ಸಾಗಿಕೊಂಡು ಬದುಕನ್ನು ಕಂಡುಕೊಂಡರು.

೨.೩.೧.೩. ಸಾಮಾಜಿಕ ಹಾಗೂ ಧಾರ್ಮಿಕ ಜೀವನ :

ಬಾಗಲಕೋಟೆ ಜಿಲ್ಲೆಯ ಸಾಮಾಜಿಕ ವ್ಯವಸ್ಥೆ ಬದುಕಿನಲ್ಲಿ ಅನೇಕ ಸಮುದಾಯಗಳ ಧಾರ್ಮಿಕ ನಿಷ್ಠೆ ಕಾಣಬಹುದು. ಅವಿಭಕ್ತ ಕುಟುಂಬಗಳ ತಂದೆ–ತಾಯಿ ಮಕ್ಕಳು ಒಂದೆರಡು ತಲೆಮಾರುಗಳ ಕುಟುಂಬ ವ್ಯವಸ್ಥೆ ಇತ್ತು. ಮದುವೆ, ಹಬ್ಬ–ಹರಿದಿನಗಳ, ಜಾತ್ರೆ–ಉತ್ಸವಗಳು, ದುಂದುಬಿ ಜರುಗುವವು. ಸಮುದಾಯ ವ್ಯವಸ್ಥೆ ಇತ್ತು. ಜೈನ, ವೈಷ್ಣವ, ಶೈವ, ಕ್ರಿಶ್ಚಿಯನ್, ಇಸ್ಲಾಂ ಧರ್ಮಗಳು ಕಾಯಕದ ಆಧಾರದಲ್ಲಿ ಮೂಲ ಉದ್ಯೋಗ, ಮೂಲ ಕಸುಬಿನ ವರ್ಗಗಳಿದ್ದವು. ಎಲ್ಲರೂ ನಾಡದೊರೆಗಳು, ರಾಜ, ಅರಸರು, ದೇಸಾಯಿ, ಗೌಡ, ನಾಯಕರು,

ಅವರ ಆಡಳಿತದಲ್ಲಿ ಅನನ್ಯತೆಯಿಂದ ಸರ್ವ ಸಮುದಾಯಗಳು ಸಾಮರಸ್ಯಗಳಿಂದ ಬಾಳಿ ಬದುಕುತ್ತಿದ್ದರೂ ಸಮುದಾಯಗಳಲ್ಲಿ ವರ್ಗಸಂಘರ್ಷಗಳ ವ್ಯವಸ್ಥೆ ಇದೆ.

೨.೩.೧.೪. ಬಾಗಲಕೋಟೆ ಸಾಹಿತ್ಯ :

ಸಾಂಸ್ಕೃತಿಕ ಕೊಡುಗೆಗಳು ಮಹತ್ವ ನೀಡುತ್ತವೆ. ಇದರಿಂದ ಬಾಗಲಕೋಟೆ ಭೌಗೋಳಿಕ ಪ್ರದೇಶವನ್ನು ಆಡಳಿತ ಮಾಡಿದ ಬಾದಾಮಿ ಚಾಲುಕ್ಯರಿಂದ ಇಲ್ಲಿಯವರೆಗೆ ಬಾಗಲಕೋಟೆ ಜಿಲ್ಲೆಯು ಅನೇಕ ಸ್ಥಿತ್ಯಂತರಗಳನ್ನು ಕಂಡಿರುವುದು.

ಬಾದಾಮಿ ಚಾಲುಕ್ಯರು ಮೂಲತಹ ಪಶುಪಾಲಕರು. ಬದುಕಿನ ನಿರ್ವಹಣೆಯ ಜೊತೆಗೆ ನಾಯಕತ್ವದ ಗುಣವನ್ನು ಹೊಂದಿದ್ದರು. ಉತ್ತರ ಕರ್ನಾಟಕದ ಮೊದಲ ಕನ್ನಡ ರಾಜ ಮನೆತನ ಕನ್ನಡ ನಾಡು-ನುಡಿಗಾಗಿ ಹೋರಾಟಗಳ ಮೂಲಕ ಬನವಾಸಿ ಕದಂಬರು ಶಾತವಾಹನರ ಸಾಮಂತರಾಗಿದ್ದರು. ಇವರ ಅವಿರತ ಹೋರಾಟದ ಮೂಲಕ ಕನ್ನಡ ನಾಡು ಇದಕ್ಕೆ ಬುನಾದಿಯನ್ನು ಹಾಕಿರುವರು. ಇವರ ನಂತರ ಬಾದಾಮಿ (ವಾತಾಪಿ)ಯನ್ನು ರಾಜಧಾನಿಯಾಗಿ ಮಾಡಿಕೊಂಡು ಸುಮಾರು ವರ್ಷಗಳ ಕಾಲ ಆಳ್ವಿಕೆ ಮಾಡಿದರು. ದಕ್ಷಿಣ ಭಾರತದಲ್ಲಿ ಮೊದಲು ಚಾಲುಕ್ಯರು ಯುದ್ಧಮಾಡುತ್ತಾ ನಾಡ ಕಟ್ಟುವುದು ಅಷ್ಟೆ ಅಲ್ಲ, ಸಾಮಾಜಿಕ ಸ್ಥಿರತೆ ಧಾರ್ಮಿಕ ಆಯಾಮಗಳ ಜೊತೆ ಸಾಂಸ್ಕೃತಿಕ ವಾಸ್ತುಶಿಲ್ಪ ಸಂಗೀತ ಕಲೆಗಳಿಗೆ ಕೊಡುಗೆ ಕೊಟ್ಟರು. ಎರಡನೇ ಪುಲಿಕೇಶಿಯ ಸೊಸೆ ವಿಜಯ ಮಹಾದೇವಿಯು ಸ್ವತಃ ಭರತನಾಟ್ಯ ಮಾಡುತ್ತಿದ್ದಳು. ನಾಟ್ಯಕ್ಕೆ ಸಂಬಂಧಿಸಿದ 'ಕುಮದೆಂದು' ಕೃತಿಯನ್ನು ಸಂಸ್ಕೃತದಲ್ಲಿ ರಚಿಸಿರುವಳು ಎಂಬುದು ತಿಳಿದುಬರುತ್ತದೆ. ಕಲೆ, ವಾಸ್ತುಶಿಲ್ಪ, ಹಬ್ಬ, ಉತ್ಸವ, ಜಾತ್ರೆಗಳು ಮುಂತಾದವುಗಳನ್ನು ಚಾಲುಕ್ಯರ ಕಾಲದಲ್ಲಿ ಕಾಣುತ್ತೇವೆ. ಉದಾಹರಣೆಗೆ ಬಾದಾಮಿ 'ಕಪ್ಪೆ ಅರಭಟ್ಟನ' ಶಾಸನ ಜನಪದೀಯ ಅಂಶವುಳ್ಳ ತ್ರಿಪದಿಯಲ್ಲಿ ಮೂಡಿಬಂದಿದೆ

"ಸಾಧುಂಗೆ ಸಾಧು ಮಾದುರಂಗೆ ಮಾದುರಂ
ಬಾದಿಪ್ಪ್ ಕಲಿಗೆ ಕಲಿಯುಗ
ಯುಪರಿತನ್ ಮಾದಾವನಿತನ್ ಪೇರಣಲ್"[೩]

'ಕಪ್ಪೆ ಅರಭಟ' ಎಂಬ ವ್ಯಕ್ತಿ ಒಳ್ಳೆಯವರಿಗೆ ಒಳ್ಳೆಯವರು ಆಗಿ, ಕೆಟ್ಟವರಿಗೆ ಕೆಟ್ಟವ್ಯಕ್ತಿಯಾಗಿ, ಮಧುರ ಗುಣಗಳು ಇದ್ದವರಿಗೆ ಒಳ್ಳೆಯವನಾಗಿ ಬಾಳಿ ಬದುಕಿದವನು. ಆದ್ದರಿಂದ ಪ್ರಾಚೀನ ಕಾಲದ ೬ನೇ ಶತಮಾನದಿಂದ ಬಾಗಲಕೋಟೆಯ ಕನ್ನಡಿಗರು ಸುಸಂಸ್ಕೃತ ನಾಗರಿಕರಾಗಿದ್ದರು. ವೃತ್ತಿ ಕಸಬುಗಳ ಕೇಂದ್ರವಾಗಿತ್ತು. ವ್ಯಾಪಾರ ಹೊರದೇಶಗಳ ಜೊತೆ ಸಂಬಂಧ ಇಟ್ಟುಕೊಂಡಿದ್ದರು. ಇಂದಿನ ಐಹೊಳೆ ದೇಗುಲಗಳ ನಾಡು ರವಿಕೀರ್ತಿಶಾಸನದಲ್ಲಿ ಇದೆ. ಬಾಗಲಕೋಟೆಯ ಕ್ಷೇತ್ರ ರನ್ನ, ಜನ್ನ, ನಾಗಚಂದ್ರ, ಶರಣರು, ಸಂತರು, ಯೋಗಿ ತ್ಯಾಗಿಗಳ ಬೀಡಾಗಿತ್ತು. ರಾಷ್ಟ್ರಕೂಟರ

ಆಡಳಿತ ಮಾಂಡಳೀಕರಾಗಿ, ಸಾಮಂತರಾಗಿ, ರಾಜ, ಅರಸನಾಗಿ ಮುಂದುವರೆದು ನಾಡ ರಕ್ಷಣೆ ಮಾಡಿರುವರು. ನಡುಗನ್ನಡ ಕಾಲದ ಹಾವಿನಹಾಳ ಕಲ್ಲಯ್ಯ, ಶಿವಶರಣ ಕೂಡಲಸಂಗಮದ ಬಸವಣ್ಣ, ಮುಂತಾದ ಶೈವ ಪರಂಪರೆಯ ಶಿವಶರಣರು. ಹರಿದಾಸ ಪರಂಪರೆಯ ಮಹಿಪತಿದಾಸರು ಪ್ರಸನ್ನವೆಂಕಟದಾಸರು, ಮೊದಲಾದ ಕೀರ್ತನಕಾರರು, ತತ್ವಪದಕಾರರು, ಅನುಭಾವಿಗಳು, ಸೂಫಿಸಂತರು, ಮಳೆ, ಬೆಳೆಗಳನ್ನು, ಜನಸಾಮಾನ್ಯರನ್ನು ರಕ್ಷಣೆ ಮಾಡುವ ಪವಾಡಪುರುಷರು ಸಿದ್ದರು, ತಪಸ್ವಿಗಳು, ಕಾಲಕಳೆದ ತಪೋಮುನಿಗಳ ನಾಡು ಬಾಗಲಕೋಟೆ. ಆಧುನಿಕ ಸಂದರ್ಭದಲ್ಲಿ ಸ್ವತಂತ್ರ ಹೋರಾಟಗಾರರು, ಕರ್ನಾಟಕ ಏಕೀಕರಣ ರೂವಾರಿಗಳು ಹರ್ಡೆಕರ್ ಮಂಜಪ್ಪ, ಆಲೂರು ವೆಂಕಟರಾವ್, ಕಂದಗಲ್ ಶಾಸ್ತ್ರಿಗಳು, ಬಿಡಿ ಜತ್ತಿ ಮುಂತಾದವರು.

ಬಾಗಲಕೋಟೆ ಜಿಲ್ಲೆಯ ಬಾದಾಮಿಯ ಚಾಲುಕ್ಯರು ಕಾಲದಲ್ಲಿ ಕನ್ನಡ ಸಾಹಿತ್ಯವನ್ನು ಉನ್ನತಮಟ್ಟದಲ್ಲಿ ಒಯ್ದರು ಎಂಬುದಕ್ಕೆ ಬಾದಾಮಿ ಕಪ್ಪೆ ಅರಭಟ್ಟನ ಶಾಸನ ಸಾಕ್ಷಿಯಾಗಿದೆ. ಕರ್ನಾಟಕ ಸಂಗೀತವು ಅವರ ಕಾಲದಲ್ಲಿ ಬೆಳೆದುಬಂದಿದ್ದನ್ನು ನೋಡಬಹುದು. ಚಾಲುಕ್ಯರ ಕಾಲದ ಶ್ರೀಮಂತ ನಗರ ಎಂದು ಪ್ರಸಿದ್ಧಿ ಪಡೆದ ನಾಡು ಬಾಗಲಕೋಟೆ ಎಂಬುದು ಶಾಸನಗಳ ಮೂಲಕ ತಿಳಿದುಬರುತ್ತದೆ. ಬಾದಾಮಿ ಚಾಲುಕ್ಯರ ಕಾಲದ ವಿಜಯ ಮಹಾದೇವಿ, ರನ್ನ, ನಾಗಚಂದ್ರ, ಬಸವಾದಿ-ಶರಣರು, ತತ್ವಪದಕಾರರು, ಆಲೂರು ವೆಂಕಟರಾವ್, ಹರ್ಡೇಕರ್ ಮಂಜಪ್ಪ, ಕಂದಗಲ್ ಹನುಮಂತರಾಯ, ಪಿ.ಬಿ.ದುತ್ತರಗಿ, ಬಿ.ಜಿ.ಕುಲಕರ್ಣಿ, ದೇಶಪಾಂಡೆ ಅಪ್ಪಾಲಾಲ್ ನದಾಫ್ ಮುಂತಾದವರು ಸಾಹಿತ್ಯ, ಕಲೆಗಳನ್ನು ಬೆಳೆಸಿದವರು. ಭಾರತೀಯ ಶಿಲ್ಪಕಲೆಯ ತೊಟ್ಟಿಲು ಎನಿಸಿರುವ ಐಹೊಳೆ ಮಲಪ್ರಭಾ ನದಿಯ ತಟದಲ್ಲಿದೆ. ಶ್ರೀಮಂತ ವಾಸ್ತುಶಿಲ್ಪಗಳಿಂದ ಕೂಡಿದ ೧೨೦ ದೇವಾಲಯ, ಪ್ರತಿಯೊಂದು ವಿಭಿನ್ನ ವಾಸ್ತುಶಿಲ್ಪವನ್ನು ಹೊಂದಿದೆ. ಬಾದಾಮಿ, ಪಟ್ಟದಕಲ್ಲು, ಮಹಾಕೂಟ, ಶಿವಯೋಗಿಮಂದಿರ, ಕೂಡಲಸಂಗಮ, ಆಲಮಟ್ಟಿ ಇವು ಸುಂದರವಾದ ಪ್ರವಾಸಿ ತಾಣಗಳು. ಕೃಷ್ಣ ಅಲಮಟ್ಟಿಯ ಅಣೆಕಟ್ಟಿನಲ್ಲಿ ಜಲವಿದ್ಯುತ್ ಕೇಂದ್ರವನ್ನು ಸ್ಥಾಪಿಸಿದೆ. ಕರ್ನಾಟಕದ ೨೫ನೇ ಹಾಗೂ ೨೦೦ ಚದರ ಕಿಲೋ ಮೀಟರ್ ವ್ಯಾಪ್ತಿಯ ಚಿಂಕಾರ ಎಂಬ ಜಿಂಕೆಗಳ ವನ್ಯಧಾಮವಿದೆ.

೨.೩.೨.ವಿಜಯಪುರ :

ವಿಜಯಪುರವು ಬಯಲುಪ್ರದೇಶ, ಪಂಚನದಿಗಳ ನಾಡು. ಜೋಳ, ಗೋಧಿ, ಕಡಲೆ ಮುಂತಾದ ಬೆಳೆಗಳು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಪ್ರಸಿದ್ಧಿ ಪಡೆದಿವೆ. ವಿಶ್ವವಿಖ್ಯಾತ ಭವ್ಯ ರಮಣೀಯ ಭಾರತೀಯ ಇಸ್ಲಾಮೀ ಕಲೆಗಳ ಕೀರ್ತಿಪತಾಕೆಗಳು ಸ್ಮರಣೀಯವಾಗಿವೆ. ಐತಿಹಾಸಿಕ ಕಟ್ಟಡಗಳನ್ನು ಕಣ್ಣಾರೆ ಕಾಣುವುದೆಂದರೆ ರಸಿಕರಿಗೆ ರಸಯಾತ್ರೆ, ಕಲಾಕಾರನಿಗೆ ಕಲಾಯಾತ್ರೆ, ಸೌಂದರ್ಯ ಪ್ರೇಮಿಗೆ ಸೌಂದರ್ಯಯಾತ್ರೆ ಇಂಥ ರಸಯಾತ್ರೆ ಹಂಬಲವನ್ನು ವಿಜಯಪುರದಲ್ಲಿ ಕಾಣಬಹುದು. ದಕ್ಷಿಣ ಭಾರತದ ಉತ್ತರ ಕರ್ನಾಟಕದ ಸುಪ್ರಸಿದ್ಧ ಜಿಲ್ಲಾಕೇಂದ್ರ

ವಿಜಯಪುರ. ಸಾಮಾಜಿಕ, ಭೌಗೋಳಿಕ, ಐತಿಹಾಸಿಕ, ಸಾಂಸ್ಕೃತಿಕವಾಗಿ ಹಾಗೂ ಕುಶಲ ಮತ್ತು ಜಾಣ್ಮೆಯ ಪ್ರಯೋಗದ ಕಣ್ಣುಸೆಳೆಯುವಂತ ತಾಣ.

೨.೩.೨.೧. ಭೌಗೋಳಿಕ :

ಬಿಜಾಪುರ ಜಿಲ್ಲೆಯು ಅಕ್ಷಾಂಶ ೧೫.೫ ಮತ್ತು ರೇಖಾಂಶ ೨೫.೯ ಇವುಗಳ ಮಧ್ಯದಲ್ಲಿ ದಕ್ಷಿಣ ಭಾಗವು ತಪ್ಪಲಿನ ಪ್ರದೇಶದಿಂದ ಕೂಡಿದೆ. ಸಮುದ್ರ ಮಟ್ಟದಿಂದ ಸುಮಾರು ೨೦೦೦ ಅಡಿ ಎತ್ತರದಲ್ಲಿದೆ. ಇದರ ಕ್ಷೇತ್ರ ೫.೬ ಚದರ ಮೈಲು. ಜನಸಂಖ್ಯೆ ೧೯೬೧ ರಲ್ಲಿ ೧೫೦,೦೦೦. ದಕ್ಷಿಣ ರೈಲುಗಳು ಬೆಂಗಳೂರಿನಿಂದ ೨೨೦ ಕಿಲೋಮೀಟರು ದೂರದಲ್ಲಿದೆ. ೧೯೭೭ ರಲ್ಲಿ ಬಾಗಲಕೋಟೆ ವಿಜಯಪುರದಿಂದ ಭಾಗವಾಯಿತು.[೪] ಕೆಲವು ಪ್ರದೇಶವು ಹರಿದು ಹಂಚಿಹೋಗಿವೆ. ವಿಸ್ತಾರ ೩.೩೩ ಕಿಮಿ ೨೫೩ ಮಾತ್ರ ಎತ್ತರವಿದೆ. ಬಿಜಾಪುರ ಜಿಲ್ಲೆಯ ತಾಲೂಕುಗಳು ವಿಜಯಪುರ, ಇಂಡಿ, ಸಿಂದಗಿ, ಬಸವನ ಬಾಗೇವಾಡಿ, ಮುದ್ದೇಬಿಹಾಳ, ನಂತರ ೨೦೧೩ರಂದು ತಾಳಿಕೋಟೆ, ಬಬಲೇಶ್ವರ, ಚಡಚಣ, ತಿಕೋಟಾ, ನಿಡಗುಂದಿ, ಕೋಲಾರ, ದೇವರ ಹಿಪ್ಪರಗಿ, ಆಲಮೇಲ ಒಟ್ಟು ೧೩ ತಾಲೂಕುಗಳು ರಚನೆಯಾದವು.

೨.೩.೨.೨. ಇತಿಹಾಸ :

ವಿಜಯಪುರ ಜಿಲ್ಲೆಯಲ್ಲಿ ಚಾರಿತ್ರಿಕವಾಗಿ ಕಲ್ಯಾಣಿ ಚಾಲುಕ್ಯರು ಆಳ್ವಿಕೆ ನಡೆಸಿದ್ದರು. ೧೧ನೇ ಶತಮಾನದ ಶಾಸನಗಳಲ್ಲಿ ವಿಜಾಪುರ ರಾಜಧಾನಿ 'ರಾಯರಾಜಧಾನಿ' ಮುಂತಾದ ಹೆಸರುಗಳಿಂದ ಉಲ್ಲೇಖಗೊಂಡಿದೆ. ಕಲ್ಯಾಣಿ ಚಾಲುಕ್ಯರು ಹಾಗೂ ಸೇವಣರ ಕಾಲದಲ್ಲಿ ಪ್ರಾದೇಶಿಕ ರಾಜಧಾನಿಯಾಗಿತ್ತು. ಆದಿಲ್ ಶಾಹಿಗಳ ಸಾಮ್ರಾಜ್ಯದ ರಾಜಧಾನಿಯಾಗಿ ದಖ್ಖನಿನ ರಾಣಿ ಎಂಬ ಹೆಗ್ಗಳಿಕೆಗೂ ಪಾತ್ರವಾಗಿತ್ತು. ವಿಜಯಪುರಕ್ಕೆ ವಿದ್ಯಾಪುರ, ಬಡ್ಡಾಪುರ, ಮಹ್ಮದಿಪುರ, ಎಂಬ ಹೆಸರುಗಳಿದ್ದು, ಪರ್ಷಿಯನ್ ಗ್ರಂಥಗಳಲ್ಲಿ 'ದರೂಲ್ ಜಾಫರ್' ಎಂದು ಕರೆದರು. ಈ ರೀತಿ ಅನೇಕ ಹೆಸರುಗಳು ಬದಲಾದರೂ ಹಳೆಯದಾದ ಹೆಸರನ್ನೂ ವಿಜಾಪುರ ಎಂಬುದನ್ನು ವಿಜಯಪುರ ಎಂದು ಮರು ನಾಮಕರಣ ಮಾಡಿರುವರು. ವಿಜಯಪುರದ ಪುರಾತನ ಹೆಸರು ಬಿಜ್ಜಳನ ಹಳ್ಳಿ, ಇದು ಕಲ್ಯಾಣ ಚಾಲುಕ್ಯರಿಂದ ಸ್ಥಾಪಿತವಾಗಿತ್ತು. ದೆಹಲಿಯ ಖಿಲ್ಜಿ ಸುಲ್ತಾನರ ಪ್ರಭಾವಕ್ಕೆ ಬಂದ ವಿಜಯಪುರ ಕ್ರಿ.ಶ. ೧೩೪೭ ರಲ್ಲಿ ಬೀದರನ ಬಹಮನಿ ಸುಲ್ತಾನರ ಆಳ್ವಿಕೆಗೆ ಒಳಗಾಯಿತು. ಕ್ರಿ.ಶ. ೧೫೧೦ರಲ್ಲಿ ಸುಲ್ತಾನರ ಸಾಮ್ರಾಜ್ಯದ ರಾಜ್ಯಗಳು ಒಡೆದು ಐದುರಾಜ್ಯಗಳಾಗಿ ಹಂಚಿ ಹೋದವು. ಕ್ರಿ.ಶ,೧೯೮೯ರಲ್ಲಿ ಔರಂಗಜೇಬ ಗೆದ್ದ ನಂತರ ಆದಿಲ್ ಶಾಹಿ ಸುಲ್ತಾನರ ಆಳ್ವಿಕೆ ಕೊನೆಯಾಯಿತು.

ಕ್ರಿ.ಶ.೧೭೨೪ರಲ್ಲಿ ಹೈದರಾಬಾದ್ ನಿಜಾಮನ ಆಳ್ವಿಕೆಗೆ ಒಳಪಟ್ಟಿತ್ತು. ಮರಾಠರಿಂದ ಸೋತಾಗ ಪೇಶ್ವೆಗಳ ಅಧೀನಕ್ಕೆ ಬಂತು. ಕ್ರಿ.ಶ. ೧೮೧೮ರಲ್ಲಿ ಮೂರನೆಯ ಆಂಗ್ಲೋ-ಮರಾಠರ ಯುದ್ಧದಲ್ಲಿ

ಪೇಶ್ವೆಗಳು ಸೋತು ಬ್ರಿಟಿಷರ ಅಧೀನಕ್ಕೆ ಬಂತು. ಕ್ರಿ.ಶ. ೧೮೪೮ರಲ್ಲಿ ಸತಾರ, ವಿಜಯಪುರ, ಮುಂಬೈ ಪ್ರಾಂತ್ಯಕ್ಕೆ ಸೇರಿಸಲಾಯಿತು. ಬ್ರಿಟಿಷರಿಂದ ರೂಪಿಸಲ್ಪಟ್ಟ ಕಲಾದಗಿ ಜಿಲ್ಲೆಗೆ ಬಾಗಲಕೋಟೆ, ವಿಜಾಪುರ ಸೇರಿದ್ದವು. ೧೮೮೫ರಲ್ಲಿ ಕಲಾದಗಿಯಿಂದ ವಿಜಯಪುರಕ್ಕೆ ಜಿಲ್ಲಾಡಳಿತ ವರ್ಗಾವಣೆಯಾಯಿತು. ಕ್ರಿ.ಶಕ ೧೯೫೬ರಲ್ಲಿ ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. ಕರ್ನಾಟಕ ರಾಜ್ಯದ ೯ನೇ ಅತಿದೊಡ್ಡ ನಗರವಾಗಿದೆ. ೨೦೧೩ರಲ್ಲಿ ವಿಜಯಪುರ ಮಹಾನಗರ ಪಾಲಿಕೆಯಂದು ಘೋಷಿಸಲಾಗಿದೆ.

ವಿಜಯಪುರವು ಏಳನೆಯ ಶತಮಾನದಲ್ಲಿಯೇ ವೈಭವಯುತವಾಗಿತ್ತೆಂದು ತೀರ್ಮಾನಿಸಲು ಅಲ್ಲಿ ಸಿಕ್ಕಿರುವ ಒಂದು ಶಿಲಾಸ್ತಂಭ ಮತ್ತು ಇತರ ಶಾಸನಗಳು ಹಾಗೂ ಸಾಹಿತ್ಯ ಕೃತಿಗಳಲ್ಲಿ ದೊರಕಿರುವ ಆಧಾರಗಳು ಬಹಳ ನೆರವು ನೀಡಿವೆ. ಆ ಕಾಲದ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಗಳ ವೈಭವದ ಸಾಕ್ಷಿಯಾಗಿ ಯಾವ ಕುರುಹೂ ಉಳಿದಿಲ್ಲ. ಇಸ್ಲಾಮಿಕ್ ಶೈಲಿಯ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಗಳಿಗೆ ವಿಜಯಪುರ ಒಳ್ಳೆಯ ನಿದರ್ಶನ. ಅಲ್ಲಿರುವ ಶಿಲ್ಪಗಳು, ಮಸೀದಿಗಳು, ಸಮಾಧಿಗಳು, ಅರಮನೆಗಳು, ಕೋಟೆಗೋಡೆಯನ್ನು ಬೇಧಿಸಿ ಒಳನುಗ್ಗಲು ಯಾವ ಶತೃವಿಗೂ ಸಾಧ್ಯವಿಲ್ಲ. ಗೋಲಗುಂಬಜ್ ೧೬೨೭ ರಲ್ಲಿ ಮಹಮದ್ ಆದಿಲ್ ಷಾನ ಗೋರಿಯಾಗಿದೆ. ೧೯೮ ಅಡಿ ಎತ್ತರ ೨೦೫ ಅಡಿಗಳ ಚೌಕಾಕಾರ ಹಾಗೂ ಗೋಳಾಕಾರವಾಗಿದೆ. ಇನ್ನೂ ಮುಂತಾದ ಸ್ಮಾರಕಗಳ ಸಂಕ್ಷಿಪ್ತ ಐತಿಹಾಸಿಕ ಪರಿಚಯ ತಿಳಿದುಬರುತ್ತದೆ. ವಿಜಯಮರ ಜಿಲ್ಲೆಯಲ್ಲಿ ಆದಿಲ್‌ಷಾಹಿ ಕಾಲದಿಂದ ಇಲ್ಲಿಯವರೆಗೆ ಜಿಲ್ಲೆಯಲ್ಲಿ ಕೆಲವೊಂದು ಬದಲಾವಣೆಯಾಗಿವೆ. ಅಂತಹವುಗಳನ್ನು ಈ ಕೆಳಗಿನಂತೆ ನೋಡಬಹುದು.

೨.೩.೨.೩. ಸಾಮಾಜಿಕ ಹಾಗೂ ಧಾರ್ಮಿಕ ಜೀವನ :

ವಿಜಯಪುರವು ಪ್ರಾಚೀನಕಾಲದಿಂದ ಅನೇಕ ಆಳರಸರ ಆಡಳಿತದ ಭಾಗವಾಗಿತ್ತು. ಅವರ ಆಡಳಿತ ಅವಧಿಯಲ್ಲಿ ರಾಜನ ಧರ್ಮವು ಹೆಚ್ಚು ಪ್ರಚಾರದಲ್ಲಿತ್ತು. ಏಕೆಂದರೆ ಅರಸನ ಆಜ್ಞೆಗಳು ಶಾಸನಗಳು ಕೊಡುಕೊಳ್ಳುವಿಕೆಯ ಉಲ್ಲೇಖಗಳು ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದವು. ಉದಾಹರಣೆಗೆ ಕ್ರಿಸ್ತಪೂರ್ವದಿಂದ ಕ್ರಿಸ್ತಶಕ ೧೧ ನೇ ಶತಮಾನದವರೆಗೆ ಜೈನಧರ್ಮ ಪ್ರಭಾವಬೀರಿರುವುದು ತಿಳಿದುಬರುತ್ತದೆ. ಎರಡನೇ ನಾಗಚಂದ್ರ, ಹೊಯ್ಸಳ ವೀರಬಲ್ಲಾಳನ ಆಸ್ಥಾನ ಕವಿ, ಪಂಡಿತನಾಗಿ, ವಿಜಯಪುರದ ತೊರವಿಯಲ್ಲಿದ್ದು, ಪಂಪರಾಮಾಯಣ, ರಾಮಚಂದ್ರ ಚರಿತಪುರಾಣ ಕೃತಿಗಳನ್ನು ರಚಿಸಿದ ಉಲ್ಲೇಖವಿದೆ. ಆನಂತರ ವಿಜಯಪುರವು ಕಲ್ಯಾಣ ಚಾಲುಕ್ಯರ ಅಧೀನಕ್ಕೆ ಬಂದಾಗ ಬ್ರಾಹ್ಮಣರು, ವೈಷ್ಣವ, ಹಾಗೂ ಶೈವ ಪರಂಪರೆ ಬೆಳೆಸಿದರು. ಕಾಲಕಳೆದಂತೆ ದೆಹಲಿ ಖಿಲ್ಜಿ ಮನೆತನದಿಂದ ವಿಜಯಪುರದಲ್ಲಿ ಇಸ್ಲಾಂ ಪರಂಪರೆ ಬೆಳೆಯಿತು. ಎಲ್ಲ ಧರ್ಮಗಳಿಂದಲೂ ಧರ್ಮ ಸಾಮರಸ್ಯದಿಂದ ಸ್ನೇಹಪರರಾಗಿ ಬಾಳುತ್ತಿದ್ದರು. ಸಾಮಾಜಿಕ ಕ್ಷೇತ್ರವು ಅಚ್ಚು ಕಟ್ಟುತನದ ಕುಟುಂಬ ಯೋಜನೆಗಳಿದ್ದವು. ವಿಜಯಪುರ ಸುತ್ತಲೂ ಬಯಲು, ಕೃಷಿ, ಫಲವತ್ತತೆ ಭೂಮಿ,

ಚಿಕ್ಕ ಸಂಸಾರದ ಕುಟುಂಬಗಳಿಂದ ಕೂಡಿತ್ತು. ಅವಿಭಕ್ತ ಕುಟುಂಬದ ವ್ಯವಸ್ಥೆಯಿತ್ತು. ಅವರವರ ಹಬ್ಬಗಳು, ಮದುವೆ, ಮುಂಜಿ, ಕ್ರಿಯಾವಿಧಿ-ವಿಧಾನಗಳು ಜರುಗುತ್ತಿದ್ದವು. ಮಗುವಿನ ಜನನದಿಂದ ಮರಣದವರೆಗೆ ತಮ್ಮ ಧರ್ಮದ ಪ್ರಕಾರ ಸಮಾಜದ ವ್ಯವಸ್ಥೆಗೆ ಧಕ್ಕೆ ಬರದಂತೆ ನಡೆದುಕೊಳ್ಳುತ್ತಿದ್ದರು. ಅರಸ, ಮಂತ್ರಿ, ಪ್ರಜೆಗಳು, ಸಮಾಜದ ಚೌಕಟ್ಟಿಗೆ ಒಳಪಡುತ್ತಿದ್ದರೆ. ತಂದೆ-ತಾಯಿ ಗಂಡ-ಹೆಂಡತಿ, ಅತ್ತೆ-ಮಾವ, ಅಕ್ಕ-ಅಣ್ಣ, ತಮ್ಮ-ತಂಗಿ, ಮಗಳು-ಮಗ, ಸೊಸೆ-ನಾದಿನಿ, ಮಾವ-ಅಳಿಯ, ಕಾಕ-ಚಿಗವ್ವ ಮುಂತಾದ ಕೌಟುಂಬಿಕ ಸಂದರ್ಭಗಳನ್ನು ಗಟ್ಟಿಗೊಳಿಸುವುದು ಸಾಮಾಜಿಕ ವ್ಯವಸ್ಥೆಯಲ್ಲಿ ಇತ್ತು. ಜೋಳ, ಗೋಧಿ, ಅಕ್ಕಿ, ಮೆಕ್ಕೆಜೋಳ, ತೊಗರಿ, ಬೇಳೆ, ಕಾಳುಗಳು ಆಹಾರಧಾನ್ಯ ಎಂದು ಗುರುತಿಸಲ್ಪಡುತ್ತವೆ. ಕಾಯಿಪಲ್ಯ, ಸೊಪ್ಪುಗಳು, ಜೋಳದ ರೊಟ್ಟಿ, ಸೇಂಗಾ ಚಟ್ನಿ, ಬದನೆಕಾಯಿ, ಕೆನೆಮೊಸರುಗಳು ಇವು ಆ ಭಾಗದ ಆಹಾರದ ಪದಾರ್ಥಗಳಾಗಿ ಕರ್ನಾಟಕದ ತುಂಬಾ ಪ್ರಸಿದ್ಧಿ ಪಡೆದಿವೆ.

ಧರ್ಮ ಮತ್ತು ಧಾರ್ಮಿಕತೆ ಮಾನವನ ಸುಧಾರಣಾ ನಾಗರೀಕತೆಯ ಕುರುಹುಗಳು ನಾಗರೀಕತೆ ಬೆಳೆದಂತೆ ಮಾನವನ ವಿಕಾಸದ ಅಡಿಯಲ್ಲಿ ತಮಗೆ ಇಷ್ಟವಾದ ಪೂಜಾವಿಧಿ ಆಚರಣೆಗಳನ್ನು ಮಾಡುತ್ತ ಬಂದಿರುತ್ತಾರೆ. ನಂತರ ಒಂದು ಪೂಜಾ ಕ್ರಿಯೆಗೆ ಅಂಟಿಕೊಂಡು ಧರ್ಮ ಸೃಷ್ಟಿಯಾಗಿ, ಧರ್ಮಕ್ಕೆ ಗುರುಗಳಾಗಿ ನಾಗರೀಕತೆ ಬದಲಾವಣೆಯಲ್ಲಿ ಅನೇಕ ತತ್ವ-ಸಿದ್ಧಾಂತಗಳ ಅಡಿಯಲ್ಲಿ ಧರ್ಮಗಳು ಹುಟ್ಟಿಕೊಂಡು ಬಂದಿವೆ. ಧರ್ಮ ಎಂದರೆ ಮಾನವೀಯ ಮೌಲ್ಯಗಳನ್ನು ಒಳಗೊಂಡಿರುವುದು. ಪ್ರಾಣಿಗಳಿಗಿಂತ ಮಾನವ-ಪ್ರಾಣಿ ತನ್ನ ಬೌದ್ಧಿಕ ವಿಕಾಸದಲ್ಲಿ ಪ್ರಕೃತಿಯ ಹೊರತು ಪ್ರಾಣಿಗಳಿಗೆ ದಯೆ ಅನುಕಂಪದ ಅಲೆಗಳನ್ನು ಕೊಡುತ್ತಾ ತನ್ನನ್ನು ಗುರುತಿಸಿಕೊಂಡನು.

ಧರ್ಮ ಎಂಬ ಚೌಕಟ್ಟಿನಲ್ಲಿ ಮಾನವ ಸಿಕ್ಕು ಕೆಲವು ಸಂಬಂಧಗಳನ್ನು ಕಳೆದುಕೊಂಡನು. ಆದ್ದರಿಂದ ಬಾಗಲಕೋಟೆ ಜಿಲ್ಲೆಯ ಜನರು ಸರಳ ಸಜ್ಜನಿಕೆ ಮೃದುಸ್ವಭಾವದ ನೇರ ನುಡಿಗಟ್ಟುಗಳಲ್ಲಿ ಧರ್ಮ ಸಾಮರಸ್ಯಗಳನ್ನು ಕಾಪಾಡಿಕೊಂಡು ಬಂದಿರುವವರು. ಕೂಡಲಸಂಗಮ ಬಸವೇಶ್ವರ, ವಿಜಯ ಮಹಾಂತೇಶ್ವರ ಸ್ವಾಮಿಗಳು, ಆಚನೂರು ಹನುಮಂತ, ತುಳಸಿಗೇರಿ ಮಾಂತೇಶ್ವರ, ಬಾಗಲಕೋಟೆ ಜೈನ್, ಕ್ರೈಸ್ತ, ರಾಘವೇಂದ್ರ ಮಠಗಳು, ಬೀಳಗಿ ಸಿದ್ಧೇಶ್ವರ, ಜಮಖಂಡಿ, ಸಂಗಮೇಶ್ವರ ಮಠ, ಸಾವಳಗಿನಾಗಲಿಂಗ, ತೇರದಾಳಅಲ್ಲಮಪ್ರಭು, ಮಹಾಲಿಂಗಪುರ ಮಹಾಲಿಂಗಗುರುಕವಿ, ಸೂಫಿಸಂತರ ದರ್ಗಾಗಳು, ಮುರನಾಳ ಮಳೆಯಪ್ಪಯರ ಮಠಗಳು, ಚಂದರಗಿ ಧರ್ಮರಮಠ ಮುಂತಾದವುಗಳ ಧಾರ್ಮಿಕ ಸಹಿಷ್ಣುತೆ ಸಾಕ್ಷಿಯಾಗುತ್ತವೆ. ಧಾರ್ಮಿಕ ಆಚರಣೆಗಳನ್ನು ಸ್ವತಂತ್ರವಾಗಿ ಆಚರಿಸುತ್ತಾ ಬಂದಿರುವರು. ಕೊಡು-ಕೊಳ್ಳುವಿಕೆಯಲ್ಲಿ ಎಲ್ಲಾ ಧರ್ಮದ ಸ್ನೇಹಜೀವಿಗಳಾದದ್ದು ಶಾಸನ ಮತ್ತು ಮುಂತಾದ ಉಲ್ಲೇಖಗಳಲ್ಲಿ ಕಂಡುಬರುತ್ತದೆ.

೨.೩.೨.೪. ಸಾಂಸ್ಕೃತಿಕ :

ಬಿಜಾಪುರ ಜಿಲ್ಲೆಯು ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ. ಕಲೆಯ ವಾಸ್ತುಶಿಲ್ಪ ಸಾಹಿತ್ಯ ಆಡಳಿತಾತ್ಮಕ ವಿಷಯಗಳು ದೇಶ ವಿದೇಶಗಳಲ್ಲಿ ಪ್ರಸಿದ್ಧಿ ಪಡೆದಿವೆ.

ಸಾಹಿತ್ಯ :

ವಿಜಯಪುರ ಜಿಲ್ಲೆಯಲ್ಲಿ ಸಾಹಿತ್ಯ ಸಮೃದ್ಧವಾಗಿದೆ. ಪ್ರಮುಖವಾಗಿ ಜಿಲ್ಲೆಯ ಸಾಹಿತಿಗಳಾದ ಅಣ್ಣ ಬಸವಣ್ಣ, ಅಭಿನವ ಪಂಪನಾಗಚಂದ್ರ, ಕುಮಾರವಾಲ್ಮೀಕಿ, ಅಗ್ಗಳ ಗೋಪಕವಿ, ಕಾಖಂಡಿಕಿ ಮಹಿಪತಿದಾಸರು, ರುಕ್ಮಾಂಗದ ಪಂಡಿತರು, ಹಾಗೂ ಫ.ಗು. ಹಳಕಟ್ಟಿ, ಬಂಥನಾಳ ಶಿವಯೋಗಿ, ಸಿಂಪಿಲಿಂಗಣ್ಣ, ಹಲಸಂಗಿ ಗೆಳೆಯರು, ಶ್ರೀರಂಗ, ರಂ.ಶ್ರೀ. ಮುಗಳಿ, ಮಲ್ಲಪ್ಪ ಚಾಂದಕವಟೆ, ಶಿವಲಿಂಗಪ್ಪ ಎಡ್ರಾಮಿ, ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು, ಎಂ.ಎಂ. ಕಲಬುರ್ಗಿ, ಬಿರಾದರ ಶರಣಪ್ಪ, ಕಂಚಾಣಿ ರಂಗ, ರಂಜಾನ್‌ದರ್ಗ, ಮುಂತಾದ ಕವಿಗಳು ಸಾಹಿತಿಗಳು ಕಾದಂಬರಿಕಾರರೂ, ವಿಮರ್ಶಕರೂ, ಚಿಂತಕರು, ಕಲಾವಿದರು, ಪತ್ರಕರ್ತರು, ನಾಟಕಕಾರರು, ಸಂಶೋಧಕರು, ಮುಂತಾದವರು ಕನ್ನಡ ಸಾಹಿತ್ಯ ಸಮೃದ್ಧಗೊಳಿಸಿದವರು.

ವಿಶೇಷವಾಗಿ ೧೯೨೩ರಲ್ಲಿ ೯ನೇ ಆಖಿಲಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನವು ಶ್ರೀ ಸಿದ್ಧಾಂತಿ ಶಿವಶಂಕರ ಶಾಸ್ತ್ರೀಯವರ ಅಧ್ಯಕ್ಷತೆಯಲ್ಲಿ ಜರುಗಿತು. ನಂತರ ಅದೇ ವರ್ಷ ಆಖಿಲ ಭಾರತ ೭೯ನೇ ಕನ್ನಡ ಸಾಹಿತ್ಯ ಸಮ್ಮೇಳನ ಕೋ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ವಿಜಯಪುರದಲ್ಲಿ ಫೆಬ್ರವರಿ ೨೦೧೩ ರಲ್ಲಿ ಜರುಗಿತು. ಅನೇಕ ಶಿಕ್ಷಣ ಸಂಸ್ಥೆಗಳು ಹಾಗೂ ಸಂಘ ಸಂಸ್ಥೆಗಳು ಕಿರಾಣಿ ವ್ಯಾಪಾರಸ್ಥರು ಮುಂತಾದವರು ಕೂಡಿ ಅಚ್ಚು ಕಟ್ಟಾಗಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

ಕಲೆ :

ವಿಜಯಪುರ ಜಿಲ್ಲೆಯಲ್ಲಿ ಜನಪದ ಕಲಾವಿದರು ಕಲೆಗಳು ತುಂಬಾ ಜನಪ್ರಿಯವಾಗಿವೆ ಕೃಷ್ಣಪಾರಿಜಾತ, ದೊಡ್ಡಾಟ, ಸಣ್ಣಾಟ, ಲಾವಣಿ, ಗೀಗಿ, ಹಂತಿ, ರಿವಾಯತ್ ಮುಂತಾದ ಪದಗಳು ಗರತಿಹಾಡು, ಸೋಬಾನ, ಸಿಮಂತ, ಮದುವೆ, ಹಾಡುಗಳು, ಜನಪದ ಕಲೆಗಳಲ್ಲಿ ಡೊಳ್ಳು ಕುಣಿತ, ಹೆಜ್ಜೆ ಕುಣಿತ, ಪುರವಂತಿಕೆ, ವೀರಗಾಸೆ, ಜನಪದ ಹಾಡುಗಳು ಇವತ್ತಿಗೂ ಉಳಿಸಿಕೊಂಡು ಬಂದಿರುವ ಜನಪದ ಕಲೆಯ ಕಲಾವಿದರೂ ಸಿಗುತ್ತಾರೆ.

೨.೩.೩. ಬೆಳಗಾವಿ :

ಈ ಜಿಲ್ಲೆಯು ಕರ್ನಾಟಕದ ೨ನೇ ರಾಜಧಾನಿ, ಕುಂದಾನಗರಿ ಎಂದು ಪ್ರಸಿದ್ಧಿ ಪಡೆದಿದೆ. ಬೆಳಗಾವಿ ಉತ್ತರ ಕರ್ನಾಟಕದ ಪ್ರಮುಖ ನಗರವಾಗಿದೆ. ಕಲೆ-ಸಾಹಿತ್ಯ, ಆಡಳಿತ, ಸಾಂಸ್ಕೃತಿಕ, ಹಿನ್ನೆಲೆಯಲ್ಲಿ ಗಡಿನಾಡುಗಳಾದ ಮಹಾರಾಷ್ಟ್ರ, ಗೋವಾ, ರಾಜ್ಯಗಳ ಜೊತೆ ಸಾಂಸ್ಕೃತಿಕ ಕೊಡು-ಕೊಳ್ಳುವಿಕೆಗೆ ಹೆಸರಾಗಿದೆ. ಮಹಾನಗರಪಾಲಿಕೆಯ ಸ್ಥಾನಪಡೆದಿದೆ. ಭಾರತೀಯ ಸೇನಾಪಡೆಗಳ

ತರಬೇತಿ ಶಿಬಿರಗಳು, ಭಾರತೀಯ ವಾಯುಸೇನೆಯ ವಿಮಾನ ನಿಲ್ದಾಣ ಇವೆಲ್ಲ ಬೆಳಗಾವಿಯಲ್ಲಿವೆ. ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳು, ಪ್ರವಾಸಿತಾಣಗಳು, ಜಲಪಾತಗಳು, ಐತಿಹಾಸಿಕ ಸ್ಮಾರಕಗಳು ಜನಪದ ಕಲಾತಂಡಗಳು ವಿದ್ವಾಂಸರು ಹೀಗೆ ಹಲವಾರು ಸಂಪನ್ಮೂಲಗಳಿಂದ ಬೆಳಗಾವಿ ಜಿಲ್ಲೆ ಸಮೃದ್ಧವಾಗಿದೆ. ಭಾರತ ದೇಶದ ದಕ್ಷಿಣ ಕಾಶ್ಮೀರ ಎಂದು ಹೋಲಿಸಿ ಹೇಳುತ್ತಾರೆ. ಪಶ್ಚಿಮದಲ್ಲಿ ಚದುರಿದ ಗುಡ್ಡಗಳ ಸಾಲು, ಸಹ್ಯಾದ್ರಿ ಪರ್ವತಗಳ ಪ್ರದೇಶ ಪ್ರಕೃತಿ ಸೌಂದರ್ಯದ ಬಿದಿರುಗಳಿಂದ ತುಂಬಿದ ನಾಡು ಬೆಳಗಾವಿ. ಗೋವೆಯ ಕದಂಬರು, ರಾಷ್ಟ್ರಕೂಟರು ಬಹಮನಿ, ವಿಜಯನಗರ, ಮರಾಠರು, ಪೇಶ್ವೆಗಳು, ದೇಸಾಯಿಯವರು, ಕಿತ್ತೂರ ಕಲಿಗಳು, ಈ ನಾಡನ್ನು ಆಳಿದರು. ಸ್ವರಾಜ್ಯ ಸ್ಥಾಪನೆಯಾದ ಬಳಿಕ ಕರ್ನಾಟಕ ಜಿಲ್ಲೆಯಾಗಿ ಮಾರ್ಪಟ್ಟಿತ್ತು.[೫] (ಬಿ.ಎಸ್. ಗವಿಮಠ, ೨೦೧೦, ೪೦)

೨.೩.೩.೧. ಭೌಗೋಳಿಕ :

ಬೆಳಗಾವಿಯ ಜನಸಂಖ್ಯೆ ೨೦೧೧ರ ಜನಗಣತಿಯ ಪ್ರಕಾರ ೪೭,೭೯,೬೬೧. ಸಾಕ್ಷರತೆ ೩೫.೪%. ೧,೨೦೮ ಹಳ್ಳಿಗಳು ೩೩ ಪುರಸಭೆಗಳು ೩೭ ಆರಕ್ಷಕ ಠಾಣೆಗಳನ್ನು ಹೊಂದಿದೆ. ಬೆಳಗಾವಿ ೧೩,೪೧೫ ಕಿಲೋಮೀಟರ್ ವಿಸ್ತಾರವನ್ನು ಹೊಂದಿದೆ. ಹಾಗೂ ಸಮುದ್ರಮಟ್ಟದಿಂದ ೭೮೪ ಮೀಟರ್ ಎತ್ತರ ಪ್ರದೇಶದಲ್ಲಿದೆ. ರಾಜಧಾನಿ ಬೆಂಗಳೂರಿನಿಂದ ೫೦೨ ಕಿಲೋಮೀಟರ್ ದೂರದ ವಾಯುವ್ಯಕ್ಕೆ ಬರುತ್ತದೆ. ಅರಬ್ಬಿ ಸಮುದ್ರದಿಂದ ಕೇವಲ ೧೦೦ ಕಿಲೋಮೀಟರ್ ದೂರದಲ್ಲಿದೆ.[೬] ಬೆಳಗಾವಿಯು ಸಾರ್ವಜನಿಕ ಆಸ್ಪತ್ರೆಗಳು, ವಿಶ್ವವಿದ್ಯಾಲಯಗಳು, ಸ್ಥಳೀಯ ಸಂಸ್ಥೆಗಳನ್ನು ಹೊಂದಿದೆ. ದಟ್ಟವಾದ ಅರಣ್ಯ ಪ್ರದೇಶ ಕೃಷ್ಣ, ಘಟಪ್ರಭಾ, ಮಲಪ್ರಭಾ, ಮಾರ್ಕಂಡೇಯ, ಹಿರಣ್ಯಕೇಶಿ, ದೂಧಗಂಗಾ, ವೇದಗಂಗಾ, ಮುಂತಾದ ನದಿಗಳ ಉಗಮ ಸ್ಥಾನಗಳು ಇಲ್ಲಿವೆ. ರಾಕಸಕೊಪ್ಪ ಜಲಾಶಯ, ಹಿಡಕಲ್ ಜಲಾಶಯ, ಗೋಕಾಕ ಜಲಾಶಯ, ನವಿಲುತೀರ್ಥ ಜಲಾಶಯ, ಇನ್ನೂ ಸಣ್ಣಪುಟ್ಟ ಚೆಕ್ ಡ್ಯಾಮ್‌ಗಳನ್ನು ಹೊಂದಿದೆ. ಬೆಳಗಾವಿ ಜಿಲ್ಲೆಯು ಬೆಳಗಾವಿ, ಗೋಕಾಕ, ಹುಕ್ಕೇರಿ, ಬೈಲಹೊಂಗಲ, ಸವದತ್ತಿ, ರಾಮದುರ್ಗ, ಅಥಣಿ, ಚಿಕ್ಕೋಡಿ, ರಾಯಬಾಗ, ಖಾನಾಪುರ, ಕಿತ್ತೂರು, ಕಾಗವಾಡ, ನಿಪ್ಪಾಣಿ, ಮೂಡಲಗಿ, ಹೀಗೆ ಒಟ್ಟು ೧೪ ತಾಲೂಕುಗಳನ್ನು ಹೊಂದಿದೆ. ಮುಖ್ಯವಾಗಿ ಭಾಷಿಕರ ದೃಷ್ಟಿಯಿಂದ ಕನ್ನಡ ಮತ್ತು ಮರಾಠಿ, ಹಿಂದಿ, ಕೊಂಕಣಿ, ಇಂಗ್ಲಿಷ್ ಭಾಷೆಗಳನ್ನು ಮಾತನಾಡುವವರೂ ಸಿಗುತ್ತಾರೆ. ಬೆಳಗಾವಿ ಸುತ್ತಲೂ ಹಳೆಯ ಕಲ್ಲಿನಕೋಟೆ ಕಟ್ಟಿದ್ದು ಕಾಣುತ್ತದೆ. ಕಪಿಲೇಶ್ವರ, ಸುವರ್ಣಸೌಧ, ಗೋಡಚನಮಲ್ಕಿ ಜಲಪಾತ, ಕಿತ್ತೂರ ಕೋಟೆ, ರಾಣಿ ಚೆನ್ನಮ್ಮನ ಸಮಾಧಿ, ರಾಯಬಾಗ ರಾಜವಾಡೆ, ಕನಕುಂಬಿ, ಪ್ರಕೃತಿ ಧಾಮ ಮುಂತಾದವುಗಳು ಭೌಗೋಳಿಕವಾಗಿ ಪ್ರೇಕ್ಷಣೀಯ ಸ್ಥಳಗಳಾಗಿವೆ.

೨.೩.೩.೨. ಚರಿತ್ರೆ :

ಬೆಳಗಾವಿಯ ಪುರಾತನ ಹೆಸರು ವೇಣುಗ್ರಾಮ. ಆದರೆ ಈಗಿರುವ ಹೆಸರು ಬೆಳಗಾವಿ ಎಂದು. ಆ ಪ್ರದೇಶದಲ್ಲಿ ಬೆಳಗಿನ ಜಾವ ಮಂಜು ಬೀಳುತ್ತಿರುತ್ತದೆ. ಆದ್ದರಿಂದ ಬೆಳ್ಳಗ+ಆವಿ=

ಬೆಳಗಾವಿ ಹೆಸರು ಬಂದಿದೆ. ಜಿಲ್ಲೆಯಲ್ಲಿ ಅತಿ ಪ್ರಾಚೀನ ಸ್ಥಳ ಎಂದರೆ ಹಲಸಿ. ಇಲ್ಲಿ ಉಪಲಬ್ಧವಾಗಿರುವ ತಾಮ್ರ ಶಾಸನಗಳ ಆಧಾರದ ಮೇಲೆ ಹಲಸಿ ಕೆಲವು ಕದಂಬ ವಂಶದ ಅರಸರ ರಾಜಧಾನಿಯಾಗಿತ್ತೆಂದು ಊಹಿಸಲಾಗಿದೆ. ೬ನೇ ಶತಮಾನದ ಸು.ಕ್ರಿ.ಶ. ೭೬೦ ರವರೆಗೆ ಈ ಸ್ಥಳ ಚಾಲುಕ್ಯ ಸಾಮ್ರಾಜ್ಯದ ಭಾಗವಾಗಿದ್ದು, ನಂತರ ರಾಷ್ಟ್ರಕೂಟರ ನಿಯಂತ್ರಣಕ್ಕೆ ಸಾಗಿತ್ತು. ಆಮೇಲೆ ರಟ್ಟ ವಂಶವು ೮೭೫ರಿಂದ ೧೨೫೦ವರೆಗೆ ಆಳ್ವಿಕೆ ನಡೆಸಿದರು. ವೇಣುಗ್ರಾಮ ೧೨೧೦ರಲ್ಲಿ ಅವರ ರಾಜಧಾನಿಯಾಗಿತ್ತು. ೧೨೫೦ರಲ್ಲಿ ದೇವಗಿರಿಯ ಯಾದವರು ಈ ಪ್ರದೇಶವನ್ನು ಸ್ವಲ್ಪ ಕಾಲ ಆಳಿದರು. ೧೩೨೦ರಿಂದ ದೆಹಲಿಯ ಸುಲ್ತಾನರು ಆಳಿದರು. ಕೆಲವು ವರ್ಷ ವಿಜಯನಗರ ಅರಸರು, ವಿಜಯಪುರ ಸುಲ್ತಾನರು ಆಡಳಿತ ನಡೆಸಿದರು. ೧೬೮೬ ರವರೆಗೆ ಬಹಮನಿ ಸುಲ್ತಾನರ ಆಡಳಿತ ನಡೆಸಿದರು. ಹೀಗೆ ಹಲವಾರು ಅರಸರು ಆಳ್ವಿಕೆಯ ನಂತರ ಮರಾಠರು ಬ್ರಿಟಿಷರ ಸಹಾಯದಿಂದ ಮರಾಠರ ಪೇಶ್ವೆಗಳು ಈ ಪ್ರದೇಶವನ್ನು ಗೆದ್ದುಕೊಂಡರು. ತದನಂತರ ಮುಂದೆ ಬ್ರಿಟಿಷರು ೧೮೧೮ ರಲ್ಲಿ ಆಡಳಿತ ನಡೆಸಿದರು. ಕೊನೆಗೆ ೧೯೭೩ರಲ್ಲಿ ಕರ್ನಾಟಕ ಎಂಬ ರಾಜ್ಯ ಉದಯವಾದಾಗ ಬೆಳಗಾವಿ ಕರ್ನಾಟಕದ ಭಾಗವಾಯಿತು. ೧೮೧೮ ರಲ್ಲಿ ಬ್ರಿಟಿಷರ ಆಡಳಿತ ಸಂದರ್ಭದಲ್ಲಿ ಧಾರವಾಡ ಜಿಲ್ಲೆಯ ಅಧೀನದಲ್ಲಿತ್ತು. ೧೮೩೬ ರಲ್ಲಿ ಧಾರವಾಡ ಬೆಳಗಾವಿ ಎಂದು ಎರಡು ಜಿಲ್ಲೆಗಳನ್ನು ಮಾಡಿದರು. ೧೯೪೭ ರಲ್ಲಿ ಭಾರತ ಸ್ವತಂತ್ರ್ಯವಾದ ಬಳಿಕ ಮುಂಬೈ ಪ್ರಾಂತ್ಯಕ್ಕೆ ಸೇರಿತ್ತು. ೧೯೫೬ರಲ್ಲಿ ರಾಜ್ಯ ಪುನರ್ ವಿಂಗಡಣೆಯಾದಾಗ ಮೈಸೂರು ರಾಜ್ಯಕ್ಕೆ ಸೇರಿತ್ತು. ೧೯೭೩ರಲ್ಲಿ ಕರ್ನಾಟಕ ಎಂಬ ರಾಜ್ಯ ಉದಯವಾದಾಗ ಬೆಳಗಾವಿ ಕರ್ನಾಟಕದ ಭಾಗವಾಯಿತು.

೨.೩.೩.೩. ಸಾಂಸ್ಕೃತಿಕ :

ಈ ಜಿಲ್ಲೆಯಲ್ಲಿ ಜನಪದ ಕಲೆಗಳು ಹೇರಳವಾಗಿವೆ. ಜನರು ವಿವಿಧ ಜನಪದ ಕಲೆಗಳನ್ನು ಕರಗತ ಮಾಡಿಕೊಂಡಿರುವರು. ಕೃಷ್ಣಪಾರಿಜಾತ ಕಲೆ, ದೊಡ್ಡಾಟ, ಸಣ್ಣಾಟ, ಸಂಗ್ಯಾ-ಬಾಳ್ಯಾ, ಲಾವಣಿ ಪದಗಳು, ಗೀಗೀ ಪದಗಳು, ಹಾಡುಗಳು, ಹೆಜ್ಜೆ ಕುಣಿತಗಳನ್ನು ಕಾಣಬಹುದು. ಅಲ್ಲಿಯ ಜನರ ವೇಷಭೂಷಣಗಳು, ಊಟ-ಉಪಚಾರ, ಆಟ-ಪಾಠಗಳು ಮುಂತಾದವುಗಳು ಸಾಂಸ್ಕೃತಿಕ ಹಿನ್ನೆಲೆಗೆ ಸಾಕ್ಷಿಯಾಗಿವೆ. ರಾಜ್ಯದ ಜನರ ಜೊತೆ ಸಾಮಾಜಿಕ-ಧಾರ್ಮಿಕವಾಗಿ ಬೆರೆಯುವುದು, ಸ್ಥಳೀಯ ಕನ್ನಡ ಸಂಸ್ಕೃತಿಯು ಸೇರಿ ಸಮ್ಮಿಳಿತಗೊಂಡು ಶ್ರೀಮಂತ ಸಾಂಸ್ಕೃತಿಕ ನಗರವಾಗಿ ಹೊರಹೊಮ್ಮಿದೆ.

೨.೪. ರಂಗ ಚಟುವಟಿಕೆಗೆ ಈ ಮೂರು ಜಿಲ್ಲೆಗಳ ಪಾತ್ರ :

ಬಾಗಲಕೋಟೆ ಜಿಲ್ಲೆಯು ಮುಳುಗಡೆ ಪ್ರದೇಶವಾಗಿದ್ದು, ನೆಲ ಮೂಲ ಸಂಸ್ಕೃತಿಯನ್ನು ಬಿಟ್ಟಿಲ್ಲ. ಮೂಲ ಜನಪದ ಕಲೆಗಳು, ಊಟ-ಉಪಚಾರ, ಹಬ್ಬ-ಹರಿದಿನಗಳು, ಜಾತ್ರೆ-ಉತ್ಸವ, ಮದುವೆ-ಮುಂಜಿಗಳಲ್ಲಿ ಕುಣಿತ ಹಾಡು ಮುಂತಾದವುಗಳು ಜರುಗುವವು. ಮುಳಗಡೆ ಸ್ಥಳದಿಂದ

ಬೇರೊಂದು ಸ್ಥಳಕ್ಕೆ ಬಂದರೂ ತಮ್ಮ ಪರಂಪರೆಯ ಸಂಪ್ರದಾಯಗಳಾದ ಪೂಜಾವಿಧಾನಗಳು, ಭಕ್ತಿ, ಆಧ್ಯಾತ್ಮಿಕ, ಗುರುಪರಂಪರೆ, ಇವತ್ತಿಗೂ ಸಾಗಿಕೊಂಡು ಬಂದಿವೆ. ದೊಡ್ಡಾಟ, ಸಣ್ಣಾಟ, ಕೃಷ್ಣಪಾರಿಜಾತದಂತ ಕಥೆಗಳು ಹಾಗೂ ಕಲಾವಿದರ ದೊಡ್ಡ ಪರಂಪರೆ ಈ ನಾಡಿನಲ್ಲಿದೆ.

ವಿಜಯಪುರ ಜಿಲ್ಲೆಯ ಆಧುನಿಕತೆಯ ಭರಾಟೆಯಲ್ಲಿ ವೇಗವಾಗಿ ಬೆಳೆಯುತ್ತಿರುವ ನಗರ. ಕಲೆ ವಾಸ್ತುಶಿಲ್ಪಗಳು ಜನಪದ ಕಲಾವಿದರು ಐತಿಹಾಸಿಕ ಸ್ಮಾರಕಗಳಿವೆ. ಬಯಲುಸೀಮೆಯ ಫಲವತ್ತತೆಯನ್ನು ಒಳಗೊಂಡ ಕಪ್ಪು ಮಣ್ಣಿನ ಭೂಮಿಯಾಗಿರುವುದು. ಸಾಮಾಜಿಕ, ಧಾರ್ಮಿಕ, ಆಡಳಿತಾತ್ಮಕ ಕೊಡುಗೆ ಬಹಳವಿದೆ. ಪ್ರತಿಯೊಬ್ಬ ಕಲಾವಿದರು ವಿಭಿನ್ನ ಶೈಲಿಯ ಕಲೆಯನ್ನು ಅಳವಡಿಸಿಕೊಂಡಿದ್ದಾರೆ. ವೀರಗಾಸೆ, ಪುರವಂತಿಕೆ, ಕೃಷ್ಣ ಪಾರಿಜಾತ, ಸಣ್ಣಾಟಗಳು, ಪಾಂಚಾಳರ ವಿಶಿಷ್ಟ ಕರಕೌಶಲ್ಯಗಳು ಇದೆ ಜಿಲ್ಲೆಯಲ್ಲಿ ಕಂಡುಬರುತ್ತವೆ.

ಉತ್ತರ ಕರ್ನಾಟಕದ ದೊಡ್ಡ ಜಿಲ್ಲೆ ಬೆಳಗಾವಿ. ಆದರೆ ವಿಜಯಪುರ, ಬಾಗಲಕೋಟೆ ದೊಡ್ಡ ನಗರಸಭೆಗಳಾಗಿವೆ. ಕೃಷ್ಣಾ ನದಿ ತೀರದಗುಂಟ ಜನಪದಕಲೆಗಳಿವೆ. ಆಯಾ ಕಾಲಘಟ್ಟದಲ್ಲಿ ಜನಜೀವನ ಅವರ ಬದುಕಿನ ವಿಧಿ-ವಿಧಾನಗಳಲ್ಲಿ ಇಂದು ಅವುಗಳನ್ನೆಲ್ಲ ಅಳವಡಿಸಿಕೊಂಡು ಬಂದಿದ್ದಾರೆ. ಅಂತಹವುಗಳಾದ ಜನಪದ ಕಥೆ, ಹಾಡು, ಒಗಟು, ಗಾದೆ, ಒಡಪು, ಹೆಜ್ಜೆ ಕುಣಿತ, ವೀರಗಾಸೆ, ಪುರವಂತಿಗೆ, ದೊಡ್ಡಾಟ-ಸಣ್ಣಾಟ, ಕೃಷ್ಣಪಾರಿಜಾತದಂತ ನಾಟಕಗಳರೂಪದಲ್ಲಿ ಕಾಣುತ್ತೇವೆ.

ರಂಗಭೂಮಿಯ ಕಲೆಗಳು ೧೮ನೇ ಶತಮಾನದಲ್ಲಿ ಅಪರಾಳ ತಮ್ಮಣ್ಣನಿಂದ ಆರಂಭವಾಗಿವೆ. ಗೀತ ರೂಪದ ಕೃಷ್ಣಪಾರಿಜಾತವು ಕುಲಗೋಡ ತಮ್ಮಣ್ಣನಿಂದ ಬಯಲಾಟವಾಗಿ ರೂಪಾಂತರಗೊಂಡಿದೆ. ಕರ್ನಾಟಕದ ನಾಟಕ ಚರಿತ್ರೆಯಲ್ಲಿ ಹದಿನೆಂಟನೆ ಶತಮಾನವು ಉನ್ನತಮಟ್ಟದಲ್ಲಿತ್ತು. ಈ ಮೂರು ಜಿಲ್ಲೆಗಳಲ್ಲಿ ರಂಗಭೂಮಿಯ ಚಟುವಟಿಕೆ ಆರಂಭವಾದವು. ದೊಡ್ಡಾಟ, ಸಣ್ಣಾಟ, ಕೃಷ್ಣಪಾರಿಜಾತ, ಬಯಲುರಂಗ ನಾಟಕಗಳು ಪ್ರಸಿದ್ಧಿಪಡೆದವು. ಅದರಲ್ಲಿ ಈ ಜಿಲ್ಲೆಗಳಲ್ಲಿ "ನಾಟಕಗಳ ರಾಜನೆಂದು ಕೃಷ್ಣಪಾರಿಜಾತವು" ವಿಶೇಷತೆ ಪಡೆದಿತ್ತು. ಮೊದಮೊದಲು ಮೇಳಾ ಕಟ್ಟಿ ಸಹಪಾಠಿಗಳು ಸಮಾನ ಮನಸ್ಸುಳ್ಳವರು ತಾಲೀಮು ಹಚ್ಚಿ ನಾಟಕ ಕಲಿತರು. ನಂತರ ಊರಿಂದ ಊರಿಗೆ ಹೋಗಿ ಗ್ರಾಮದ ಗುಡಿಯ ಬಯಲಿನಲ್ಲಿ ನಾಟಕವಾಡಿ ಬರುತ್ತಿದ್ದರು. ಜನಪದ ಪ್ರದರ್ಶನ ಕಲೆಗಳು ಜರುಗುತ್ತಿದ್ದವು. ಕರಡಿಮಜಲು, ಗೊಂಬೆಯಾಟ, ಹೆಜ್ಜೆಮೇಳ, ಹಂತಿ, ಡೊಳ್ಳು, ವೀರಗಾಸೆ ಮುಂತಾದ ಕಲೆಗಳಿದ್ದವು. ಆ ಕಲಾವಿದರ ಕಲೆಗಳು ಭಕ್ತಿ, ಆಧ್ಯಾತ್ಮಿಕ ಹಾಗೂ ಮನೋರಂಜನೆಗಾಗಿ ನಡೆಯುತ್ತಿದ್ದವು.

ಇಂದು ರಂಗಭೂಮಿಯನ್ನು ಒಂದು ಉದ್ದಿಮೆಯಾಗಿ ಮಾಡಲು ಹೋದವರು ಸೋತು ಹೋಗಿದ್ದಾರೆ. ಏಕೆಂದರೆ ರಂಗಭೂಮಿ ನಡೆಸಿದ ಕಷ್ಟ-ನಷ್ಟಗಳನ್ನು ಕಲಾವಿದರು ಅನುಭವಿಸಿದರು.

ರಂಗಸಜ್ಜಿಕೆ, ಸಂಗೀತ, ವಾದ್ಯಮೇಳಗಳು ಇತ್ಯಾದಿಗಳನ್ನು ಕೂಡಿಸಿ ಕಂಪನಿ ಕಟ್ಟಿ ಸಾಗಿಸುವುದು ಕಷ್ಟದ ಕೆಲಸ. ನಂತರ ರಂಗಾಸಕ್ತರ ಆಸಕ್ತಿಗೆ ತಕ್ಕಂತೆ ಬದಲಾವಣೆಯಾಗುವುದು. ಜನಪದ ರಂಗಭೂಮಿ ಬರಬರುತ್ತ ವೃತ್ತಿರಂಗಭೂಮಿ, ಹವ್ಯಾಸಿ ರಂಗಭೂಮಿ ಕಂಪನಿ ನಾಟಕಗಳಾಗಿ ಹುಟ್ಟಿಕೊಂಡಿವೆ. ಅಂತಹವುಗಳಲ್ಲಿ ಉದಾಹರಣೆಗಾಗಿ ೨ನೇ ಪುಲಿಕೇಶಿಯ ಸೊಸೆ ಚಂದ್ರಾದಿತ್ಯನ ಮಡದಿ ವಿಜಯ ಮಹಾದೇವಿಯು ಏಳನೇ ಶತಮಾನದಲ್ಲಿ ಸಂಸ್ಕೃತ ನಾಟಕ 'ಕೌಮುದಿಮಹೋತ್ಸವ'ವನ್ನು ರಚಿಸಿದಳು. ಸ್ವತಃ ಭರತನಾಟ್ಯ ಕಲಾವಿದೆಯಾಗಿದ್ದಳು. ರನ್ನ ರಚಿಸಿದ 'ಗದಾಯುದ್ಧ' ಕೃತಿ ಪ್ರಥಮ ನಾಟಕರೂಪ ಹೋಲುತ್ತದೆ. ಸಿಂಗರಾರ್ಯನ 'ಮಿತ್ರಾವಿಂದ ಗೋವಿಂದ' ಪ್ರಥಮ ಕನ್ನಡ ನಾಟಕ. ಐಹೊಳೆಯ ವೆಂಕಟೇಶ ರಚಿಸಿದ 'ಪುರಾಣ ಪುರುಷರ ಕಥೆ' ಕುರಿತು ನಾಟಕ. ಚಿಕ್ಕೋಡಿ ತಮ್ಮಣ್ಣಪ್ಪ ೧೮೬೨ರಲ್ಲಿ 'ಭಾಮ ಪರಿಣಯ' ನಾಟಕ ಕೃತಿ ರಚಿಸಿದರು. ೧೮೬೬ರಲ್ಲಿ ಕೆರೂರ ವಾಸುದೇವಾಚಾರ್ಯರು 'ನಳ-ದಮಯಂತಿ', 'ರುಕ್ಮಿಣಿ ಹರಣ' ಮುಂತಾದ ಕೃತಿಗಳ ರಚನೆ ಮಾಡಿದರು. ೧೯೦೫ರಲ್ಲಿ ಸಿಂಪಿ ಲಿಂಗಣ್ಣ ರಚಿಸಿದ 'ಸಪ್ತಪದಿ' ಸಾಮಾಜಿಕ ನಾಟಕ. ಶ್ರೀರಂಗರು ನೂರಕ್ಕಿಂತ ಹೆಚ್ಚು ನಾಟಕಗಳನ್ನು ರಚಿಸಿದರು. ಅವುಗಳಲ್ಲಿ ಕೆಲವುಗಳಾದ 'ಹರಿಜನಿವಾರ', 'ಉದರ ವೈರಾಗ್ಯ' ನಾಟಕಗಳಿಂದ ಆಧುನಿಕತೆಗೆ ಹೊಸ ತಿರುವು ಪಡೆಯಿತು.

ಬಂಗಾಳದ ರಂಗಕಲೆಯನ್ನು ಪಾಶ್ಚಾತ್ಯ ಪಾರ್ಶಿಗಳು ಲಾಭದಾಯಕ ಉದ್ದಿಮೆಯಾಗಿ ಪರಿವರ್ತಿಸಿದರು. ಈ ನಾಟಕಗಳಿಗಾಗಿಯೇ ಕೆಲವೊಂದು ಕಂಪನಿಗಳು ಹುಟ್ಟಿಕೊಂಡವು. ಅವುಗಳಾದ ಕುಲಗೋಡು ತಮ್ಮಣ್ಣನಿಂದ 'ಕೃಷ್ಣ ಪಾರಿಜಾತ ನಾಟಕ ಕಂಪನಿ' ಪ್ರಾರಂಭವಾಯಿತು. ನಂತರ ವಾಮನರಾವ್ ಮಾಸ್ತರರು ೧೮೮೩-೧೯೩೫ರಲ್ಲಿ ಮರಾಠಿ ನಾಟಕವನ್ನು 'ವಿಶ್ವಗುಣಾದರ್ಶ ನಾಟಕ ಮಂಡಳಿ' ಕಟ್ಟಿದರು. ೧೯೨೮ರಲ್ಲಿ ಪಿ.ಬಿ. ದುತ್ತರಗಿ 'ಕಲ್ಪನಾ ಪ್ರಪಂಚ' ೪೦ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದರು. ಬಿ.ಆರ್. ಅರಿಸಿನಗೋಡಿಯವರು ೧೯೩೯ರಲ್ಲಿ 'ಹುಚ್ಚೇಶ್ವರ ನಾಟಕ ಸಂಘವನ್ನು' ಕಟ್ಟಿದರು. ೧೮೯೦ರಲ್ಲಿ ರುಕ್ಮಾಂಗದ ಅವರು ವಿಜಯಪುರದಲ್ಲಿ ಹವ್ಯಾಸಿ ರಂಗಭೂಮಿ ಸ್ಥಾಪಿಸಿದರು. ೧೮೯೫ರಲ್ಲಿ ಬಾದಾಮಿ 'ಕನ್ನಡ ನಾಟಕ ಮಂಡಳಿ'ಯನ್ನು ಚುರುಮುರಿಯವರು ಕಟ್ಟಿದ್ದರು. ೧೯೨೭ರಲ್ಲಿ ವಾಸುದೇವ ಅವರು ವಿನೋದಿನಿ ನಾಟ್ಯ ಸಂಘ ಕೇರೂರ ಎಂಬ ಸಂಘವನ್ನು ಸ್ಥಾಪಿಸಿದರು.

ಅಡಿ ಟಿಪ್ಪಣಿಗಳು

೧. ಕರ್ನಾಟಕ ಸರ್ಕಾರದ ಆರ್‌ಡಿ ಗ್ಯಾಜೆಟಿಯರ ಉಲ್ಲೇಖ, ೪.೨, ಎಲ್.ಆರ್.ಡಿ.೪೭

೨. ಛಾರ್ಲ್ಸ ಕೋರಿಯಾ ಅವರ ಮ್ಯಾಪ್

೩. ಶೀಲಾಕಾಂತ ಪತ್ತಾರ, ಬಾದಾಮಿ ಚಾರಿತ್ರಿಕ ಹಿನ್ನೆಲೆ, ಪು-೬೨

೪. ಬಿಜಾಪುರ ಜಿಲ್ಲೆಯ ಗೆಜೆಟಿಯರ್

೫. ಬಿ.ಎಸ್. ಗವಿಮಠ, ಬೆಳಗಾವಿ ಕನ್ನಡ-ಕನ್ನಡಿಗ, ೨೦೧೦, ಪು-೪೦

೬. ಬಿ.ಎಸ್. ಗವಿಮಠ, ಬೆಳಗಾವಿ ಕನ್ನಡ-ಕನ್ನಡಿಗ, ೨೦೧೦, ಪು-೬೨

ಅಧ್ಯಾಯ : ಮೂರು

ಶ್ರೀಕೃಷ್ಣ ಪಾರಿಜಾತ ಕಥಾಸ್ವರೂಪ ಮತ್ತು ತಾತ್ವಿಕತೆ

ಅಧ್ಯಾಯ : ೩

ಶ್ರೀಕೃಷ್ಣ ಪಾರಿಜಾತ ಕಥಾಸ್ವರೂಪ ಮತ್ತು ತಾತ್ವಿಕತೆ

೩.೧. ಪ್ರವೇಶ :

ರಂಗಭೂಮಿ ಹಾಗೂ ರಂಗಕರ್ಮಿಗಳು ಒಂದಕ್ಕೊಂದು ಪರ್ಯಾಯವೆನ್ನುವಷ್ಟು ಮಹತ್ವವನ್ನು ಪಡೆದಿವೆ. ರಂಗಭೂಮಿ ಎಂದೂ ಶ್ರೀಮಂತರ ಕೈಗೊಂಬೆಯಾಗಿರಲಿಲ್ಲ. ಸಂಪೂರ್ಣವಾಗಿ ಇದು ನಮ್ಮ ಜನಸಾಮಾನ್ಯರ ಮಾಧ್ಯಮ. ಇಲ್ಲಿ ರಂಗಕರ್ಮಿಗಳು ನಿಜವಾದ ಅರ್ಥದಲ್ಲಿ ಅಲ್ಪಸಂಖ್ಯಾತರು. ಈ ಜಾಗತೀಕರಣದ ಪ್ರವಾಹದ ನಡುವೆ ನಮ್ಮ ಸ್ವಂತಿಕೆಯನ್ನು ಉಳಿಸಿಕೊಳ್ಳುವುದಕ್ಕೆ ನಾಡು-ನುಡಿ-ನಡೆ ಅಂದರೆ ಪ್ರದೇಶ ಭಾಷೆ ಮತ್ತು ಉಪಭಾಷೆಗಳನ್ನು, ನಮ್ಮನ್ನು ಗುರುತಿಸುವದಕ್ಕೆ ಅಥವಾ ರಕ್ಷಿಸಿಕೊಳ್ಳುವದಕ್ಕೆ ರಂಗಭೂಮಿ ಬಿಟ್ಟರೆ ಬೇರೆ ಮಾಧ್ಯಮವಿಲ್ಲ.

ರಾಯಚೂರು ಜಿಲ್ಲೆಯ ಅಪರಾಳ ತಮ್ಮಣ್ಣನಿಂದ ರಚನೆಗೊಂಡ ಕೀರ್ತನಕಾವ್ಯ ಶ್ರೀಕೃಷ್ಣ ಪಾರಿಜಾತವೆಂಬ ಹಾಡುಗಬ್ಬಕ್ಕೆ, ಶಿರುಗುಪ್ಪಿ ಸದಾಶಿವಯ್ಯಾ ಕೊರವಂಜಿ ಸನ್ನಿವೇಶ, ದಶಾವತಾರದ ಪರಿಕಲ್ಪನೆಯನ್ನು ಮೂಲಕ್ಕೆ ಸೇರಿಸಿದ. ಹೀಗೆ ಅಪರಾಳ ತಮ್ಮಣ್ಣ ಹಾಗೂ ಶಿರಗುಪ್ಪಿ ಸದಾಶಿವಯ್ಯರಿಂದ ರಚಿತವಾದ ಶ್ರೀಕೃಷ್ಣ ಪಾರಿಜಾತ ಎಂಬ ಹಾಡುಗಬ್ಬವನ್ನು ಜಾನಪದ ರಂಗಭೂಮಿಗೆ ಒಗ್ಗಿಸಿದ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಕುಲಗೋಡ ತಮ್ಮಣ್ಣನಿಂದ ಆರಂಭವಾದ ಶ್ರೀಕೃಷ್ಣ ಪಾರಿಜಾತ ಗ್ರಾಮೀಣ ಜನರ ಮನಸ್ಸೂರೆಗೊಂಡಿತು. ಕೌಜಲಗಿ ನಿಂಗಮ್ಮನಿಂದಾಗಿ, ಲೋಕಾಪುರದ ಕೃಷ್ಣಾ ದೇಶಪಾಂಡೆ, ಅಪ್ಪಲಾಲ, ಸೊಂದ ನಾರಾಯಣ ಶಾಸ್ತ್ರಿಗಳ ಮೂಲಕ ಪಾರಿಜಾತ ಅಪಾರ ಜನ ಮನ್ನಣೆಗಳಿಸಿತು.

ಕುಲಗೋಡ ತಮ್ಮಣ್ಣನ ಪಾರಿಜಾತದಿಂದ ಪ್ರೇರಿತವಾಗಿ ಹತ್ತಾರು ಪಾರಿಜಾತ ಕಂಪನಿಗಳು ಜನ್ಮ ತಾಳಿದವು. ಪಾರಿಜಾತದಲ್ಲಿ ಪಾತ್ರಧಾರಿಗಳು ಸಾಮಾನ್ಯವಾಗಿ ಎಲ್ಲ ವರ್ಗದ ಜನರೂ ಪಾಲುಗೊಂಡಿರುವುದನ್ನು ಕಾಣುತ್ತೇವೆ. ಆದರೆ ಕುಶಲಕರ್ಮಿಗಳಾದ ವಿಶ್ವಕರ್ಮ ಸಮುದಾಯವು ಈ ಪಾರಿಜಾತದಲ್ಲಿ ವಿಶೇಷವಾಗಿ ತೊಡಗಿಸಿಕೊಂಡಿದ್ದಾರೆ. ಪುರುಷ ಪಾತ್ರವಿರಲಿ, ಸ್ತ್ರೀ ಪಾತ್ರವಿರಲಿ,

ಭಾಗವತನಿರಲಿ, ಹಿಮ್ಮೇಳ, ಮುಮ್ಮೇಳವಾಗಿರಲಿ, ವಾದ್ಯ ಕಲಾವಿದರಾಗಿರಲಿ, ಕೊನೆಗೆ ಸಂಘಟಕರಾಗಿರಲಿ ಒಂದಲ್ಲ ಒಂದು ರೀತಿಯಲ್ಲಿ ಪಾಂಚಾಳರು ಪ್ರತಿಯೊಂದು ಆಟದಲ್ಲಿ ಇದ್ದೇ ಇರುತ್ತಾರೆ. ಪಾಂಚಾಳರು ವಿಫುಲ ಪ್ರಮಾಣದಲ್ಲಿ ಪಾರಿಜಾತವನ್ನು ಪ್ರವೇಶಿಸಿದ್ದು ಕೌತುಕದ ಸಂಗತಿಯಾಗಿದೆ. ಜನಪದ ರಂಗಭೂಮಿ ತುಂಬಾ ವಿಸ್ತಾರವಾಗಿದ್ದರೂ ಕುಶಲ ಕರ್ಮಿಗಳು ಪಾರಿಜಾತದತ್ತ ಒಲಿದಿದ್ದರ ಕಾರಣವೇನಿರಬಹುದು? ಯಾವ ಯಾವ ಪಾತ್ರಧಾರಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ? ಪಾರಿಜಾತ ಕಲೆಗೆ ಪಾಂಚಾಳರ ಕೊಡುಗೆ ಏನು? ಪಾರಿಜಾತ ಆಟದಲ್ಲಿ ಪಾಂಚಾಳರು ವಹಿಸಿದ ನಿರ್ಣಾಯಕ ಪಾತ್ರ ಯಾವುದು? ಮುಂತಾದ ಅಂಶಗಳನ್ನು ಎತ್ತಿಕೊಂಡು ಅಧ್ಯಯನಕ್ಕೆ ಒಳಪಡಿಸುವುದು ಪ್ರಸ್ತುತ ಸಂಶೋಧನೆಯ ಉದ್ದೇಶವಾಗಿದೆ.

೩.೨. ದೊಡ್ಡಾಟಗಳು :

"ಬಯಲಾಟಗಳಲ್ಲಿ ಎರಡು ಪ್ರಕಾರಗಳಿವೆ. ೧. ಮೂಡಲಪಾಯ ೨. ಪಡುವಲಪಾಯ. ಮೂಡಲಪಾಯಕ್ಕೆ ದೊಡ್ಡಾಟವೆಂದೂ ದಶಾವತಾರ ಕಥೆಯೆಂದೂ ಕರೆಯುವುದು ರೂಢಿಯಲ್ಲಿದೆ. ಪಡುವಲಪಾಯವೇ ಯಕ್ಷಗಾನ. ಇವೆರೆಡೂ ಮೂಲದಲ್ಲಿ ಒಂದೇ ಆಗಿದ್ದು ಪ್ರಾದೇಶಿಕವಾಗಿ ಬೆಳೆದು ಹಾಡುಗಾರಿಕೆಯಲ್ಲಿ ಭಿನ್ನವೆನಿಸಿಕೊಂಡಾಗ ಬಯಲಾಟದ ಎರಡು ಪ್ರಕಾರವಾಗಿರಬೇಕು. ಇವಕ್ಕೆ ಮೂಲವಾಗಿದ್ದ ಬಯಲಾಟ ಇವೆರೆಡರ ಅಂತಃಸತ್ವವನ್ನು ಪಡೆದ ಒಂದು ಬಗೆಯ ದೊಡ್ಡಾಟವಾಗಿರಬೇಕು. ಅದರ ಸ್ವರೂಪವನ್ನು ಗುರುತಿಸಲು ಸಧ್ಯಕ್ಕೆ ಸಾಧ್ಯವಿಲ್ಲ. ಆದರೂ ಈ ಎರಡು ಪ್ರಕಾರಗಳಲ್ಲಿರುವ ಸಮಾನ ಗುಣಗಳನ್ನು ಅರಿತುಕೊಂಡರೆ ಮೂಲದ ಕಲ್ಪನೆ ಅಲ್ಪಮಟ್ಟಿಗಾದರೂ ಆಗುವಂತಿದೆ. ಹಾಡುಗಾರಿಕೆ ಮತ್ತು ಕುಣಿತಗಳಲ್ಲಿ ಭಿನ್ನತೆ ಇದೆ. ಮಿಕ್ಕೆಲ್ಲದರಲ್ಲಿ ಸಾಮ್ಯವೇ ಹೆಚ್ಚು. ಗಣಸ್ತುತಿ, ಭಾಗವತ, ಹಿಮ್ಮೇಳ, ಹಾಸ್ಯಪಾತ್ರ, ಮಾತುಗಾರಿಕೆ, ಪಕ್ಕವಾದ್ಯ, ತಾಳಮೇಳ, ವೇಷಭೂಷಣ, ಬಣ್ಣಗಾರಿಕೆ ಇವೆಲ್ಲ ಮೂಲದ ಈ ಪ್ರಕಾರಗಳಲ್ಲಿ ಒಂದೇ ಬಗೆಯಾಗಿವೆ. ಇತ್ತಿತ್ತಲಾಗಿ ಯಕ್ಷಗಾನವು ಮೂಲದ ವ್ಯವಸ್ಥೆಯಿಂದ ಬಹುದೂರ ಸರಿಯುತ್ತಲಿದೆ. ದೊಡ್ಡಾಟ ಸಂಪ್ರದಾಯಬದ್ಧವಾಗಿ ಉಳಿದಿದೆ."[೧] ಆದ್ದರಿಂದ ಅದು ಮೂಲದ ದೊಡ್ಡಾಟವನ್ನು ಹೆಚ್ಚಾಗಿ ಹೋಲುವುದರಲ್ಲಿ ಸಂಶಯವಿಲ್ಲ. ಯಕ್ಷಗಾನದಲ್ಲಿ ಹಾಡುವ ದಾಟಿ ಯಕ್ಷಗಾನಕ್ಕೆ ಹೊಂದಿಕೊಂಡಿರುವುದರಿಂದ ಆ ಹಾಡಿನ ದಾಟಿಯನ್ನೇ ಮಾಡಿಕೊಂಡಿದೆ. ಮೂಲದಲ್ಲಿ ಯಕ್ಷಗಾನವೆನ್ನುವದು ಯಾವ ರೂಪದಲ್ಲಿತ್ತೋ ಹೇಳಲಿಕ್ಕಾಗದು. ಅದು ಯಕ್ಷಗಾನವಾದರೆ ಮೂಡಲಪಾಯದ ಹಾಡುಗಾರಿಕೆಗೆ ಗಂಧರ್ವಗಾನ ಎನ್ನಬಹುದೆ? ಬಯಲಾಟದ ಹಾಡುಗಾರಿಕೆ ಯಾವುದೇ ಸಂಗೀತ ಪದ್ಧತಿಗೆ ಒಳಪಟ್ಟಿದ್ದಲ್ಲ. ಅಲ್ಲಿ ಹಾಡು, ಕುಣಿತ, ಪಕ್ಕವಾದ್ಯಗಳ ಸಮ್ಮೇಳನ ಇರುವುದನ್ನು ಕಂಡವರು ಅದೊಂದು ಸಂಗೀತವೆಂದು ಭಾವಿಸುವದು ಸ್ವಾಭಾವಿಕ. ಆದರೆ ಅಭಿಮತ ಸರಿಯಾದುದಲ್ಲ. ಬಯಲಾಟದ ಹಾಡುಗಾರಿಕೆ ಮುಖ್ಯವಾಗಿ ಅವಲಂಬಿಸಿರುವದು ಧಾಟಿಯ ಮೇಲೆ. ಜನಪದ ಧಾಟಿಗಳು ಅನಂತ. ಆ ಮಾದರಿಯ ಮೇಲೆ ಇವನ್ನು ಹೇಳಲಾಗುತ್ತದೆ. ಅದೊಂದು ಸಂಗೀತ ಪದ್ಧತಿಯಾಗಿದ್ದರೆ

ಆಲಾಪಕ್ಕೆ ಸ್ಥಾನವಿರಬೇಕಾಗಿತ್ತು. ಆದರೆ ಸ್ವರಾಲಾಪ ಬಯಲಾಟದಲ್ಲಿ ಹುಡುಕಿದರೂ ಸಿಗುವುದಿಲ್ಲ. ಕುಣಿತದ ದೃಷ್ಟಿಯಿಂದ ಈ ಎರಡೂ ಪ್ರಕಾರಗಳನ್ನು ಅವಲೋಕಿಸಿದರೆ ಹಾಕುವ ಹೆಜ್ಜೆಗಳಲ್ಲಿ ಭಿನ್ನತೆ ಇದ್ದುದು ಕಂಡುಬರುತ್ತದೆ. ಯಕ್ಷಗಾನದ ಹೆಜ್ಜೆಗಳು ಕಥಕ್ಕಳಿಯ ಪ್ರಭಾವಕ್ಕೆ ಒಳಪಟ್ಟು ದೊಡ್ಡಾಟ(ಮೂಡಲಪಾಯ)ದ ಹೆಜ್ಜೆಗಳಿಗಿಂತ ಭಿನ್ನವಾಗಿವೆ. ದೊಡ್ಡಾಟದ ಹೆಜ್ಜೆಗಳು ಮೂರು, ಐದು ಹಾಗೂ ಇವೆರೆಡರ ಸಮ್ಮಿಶ್ರದಲ್ಲಿಯೇ ಮೂರ್ತಗೊಂಡು ಕುಣಿತಗಳನ್ನು ನಿರ್ಮಿಸಿಕೊಳ್ಳುತ್ತವೆ. ಇವು ಸರಳವಾಗಿದ್ದು ಜನಪದ ನೃತ್ಯವನ್ನು ಅನುಕರಣ ಮಾಡುತ್ತವೆ. ಆದರೆ ಯಕ್ಷಗಾನ ಕುಣಿತ ಸರಳತೆಯನ್ನು ಕೈಬಿಟ್ಟು ಕ್ಲಿಷ್ಟತೆಗೆ ತಿರುಗಿದಂತಿದೆ.

೩.೩. ಸಣ್ಣಾಟ ಪರಂಪರೆ :

ಸಣ್ಣಾಟ ಉತ್ತರ ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ಒಂದು ಜನಪದ ರಂಗಪ್ರಕಾರವಾಗಿದೆ. ಸಣ್ಣಾಟವೆಂದರೆ? ಸಣ್ಣದಾದ, ಸರಳವಾದ ಆಟ (ರಂಗಪ್ರದರ್ಶನ) ಎಂದು ಅರ್ಥ. ಬಯಲಾಟಕ್ಕೆ ಉತ್ತರಕರ್ನಾಟದಲ್ಲಿ ದೊಡ್ಡಾಟ ಎಂಬ ಹೆಸರಿದೆ. ಆರ್ಭಟದ ಕುಣಿತ, ಭವ್ಯ ರಂಗಸಜ್ಜಿಕೆ, ಭರ್ಜರಿಯಾದ ವೇಷಭೂಷಣಗಳಿಂದ ಮೂಡಲಪಾಯ ದೊಡ್ಡ ಪ್ರದರ್ಶನವೆನಿಸಿ ದೊಡ್ಡಾಟವಾಯಿತು. ಈ ದೊಡ್ಡಾಟಕ್ಕೆ ಸಂವಾದಿಯಾಗಿ ಸರಳ ರಂಗ ಸಜ್ಜಿಕೆ, ಸಾದಾ ವೇಷಭೂಷಣ, ಲಘು ಕುಣಿತಗಳನ್ನೊಳಗೊಂಡ ರಂಗಪ್ರದರ್ಶನವು ಸಣ್ಣದಾಗಿ ಕಂಡು ಸಣ್ಣಾಟವೆನಿಸಿತು.

ಸಣ್ಣಾಟದ ಮೊದಲ ಹೆಸರು 'ಡಪ್ಪಿನಾಟ'. ಇದು ತುಂಬಾ ಅರ್ಥಪೂರ್ಣವಾದ ಹೆಸರು. ಪಾರಸಿ ಶಬ್ದ, ಡಫ್‌ದಿಂದ ಡಪ್ಪು ಬಂದಿದೆ. ಚಿಕ್ಕ ತಮ್ಮಟೆ–ಹಲಗೆ–ತಪ್ಪಡಿ ಆಕಾರದ ಡಪ್ಪು ಒಂದು ಸರಳ ಚರ್ಮವಾದ್ಯ. ಡಪ್ಪನ್ನು ಹಾಗೆ ಪಕ್ಕವಾದ್ಯವಾಗಿ ಬಾರಿಸುತ್ತ ಆಡುವ ಆಟ ಡಪ್ಪಿನಾಟವೆನಿಸುವುದು. ಈ ಆಟದ ದೃತ್‌ಗತಿಯ ಧಾಟಿಗಳಿಗೆ ಡಪ್ಪು ಅತ್ಯಂತ ಸೂಕ್ತವಾದ ಪಕ್ಕವಾದ್ಯ. ಇಲ್ಲಿಯ ಹಾಡುಗಳಿಗೆ ತಬಲಾ ವೃಂದಗಳನ್ನು ಪಕ್ಕಾ ವಾದ್ಯದ ನುಡಿತ, ಡಪ್ಪುವಾದನ ಹಾಡನ್ನು ಹಿಂದೆ ಸರಿಸಿ ಅನುಕರಣಗೊಳ್ಳುವುದು ಸಾಮಾನ್ಯ. ಹೀಗಾಗಿ ಒಟ್ಟಾರೆ ಪ್ರದರ್ಶನ ಡಪ್ಪುಮಯವಾಗಿರುತ್ತದೆ. ಆದ್ದರಿಂದ ಈ ರಂಗಪ್ರದರ್ಶನಕ್ಕೆ ಡಪ್ಪಿನಾಟ ಎಂಬ ಹೆಸರು ಬಂತು. ಡಪ್ಪು ಬಾರಿಸುವ ಕಲಾವಿದ ಸಂಚರಿಸುವುದರಿಂದ ಅವನು ಒಬ್ಬ ಮಾಮೂಲಿ ಪಕ್ಕವಾದ್ಯನಾಗಿರದೆ ಆಟದ ಪಾತ್ರಗಳಂತೆ ಪ್ರೇಕ್ಷಕರನ್ನು ಆಕರ್ಷಿಸುತ್ತಾನೆ. ಒಂದು ರಂಗಪ್ರಕಾರವು ಒಂದು ವಾದ್ಯದ ಮೂಲಕ ಗುರುತಿಸಲ್ಪಡುತ್ತಿರುವುದು ಅಪರೂಪದ ಉದಾಹರಣೆಯಾಗಿದೆ.

೧೯ನೇ ಶತಮಾನದ ಉತ್ತರಾರ್ಧದಲ್ಲಿ ಉತ್ತರಕರ್ನಾಟಕದಲ್ಲಿ ಉತ್ಸಾಹದ ಪುನರುಜ್ಜೀವನದ ಹೊಸಗಾಳಿ ಬೀಸಿತು. ಅದರ ಪರಿಣಾಮವಾಗಿ ಅನೇಕ ಜನಪದ ಕಲಾಪ್ರಕಾರಗಳು ರೂಢಿಗೆ ಬಂದವು. ಅಂಥವುಗಳಲ್ಲಿ ಡಪ್ಪಿನಾಟ/ಸಣ್ಣಾಟವೂ ಒಂದು. ೧೮೭೦ರಷ್ಟೊತ್ತಿಗೆ ಸಣ್ಣಾಟ ಪ್ರಕಾರ ಹುಟ್ಟಿಕೊಂಡು ಎರಡು ದಶಕಗಳ ಅವಧಿಯಲ್ಲಿ ಅದು ತನ್ನ ನೆಲೆ ಕಂಡುಕೊಂಡಿತ್ತು. ನಾಲ್ಕಾರು

ಸಣ್ಣಾಟಗಳು ಜನಪ್ರಿಯವಾಗಿದ್ದವು. ೧೯೦೦ ರಷ್ಟೊತ್ತಿಗೆ ಸಣ್ಣಾಟವು ಗಮನಾರ್ಹವಾಗಿ ಬೆಳೆದು ನಿಂತು ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗವಾಗಿತ್ತು.

ಸಣ್ಣಾಟ ರೂಪುಗೊಳ್ಳಲು ಸ್ಥಳೀಯ ದಾಸರಾಟ ಮತ್ತು ಪಕ್ಕದ ಮಹರಾಷ್ಟ್ರದ ಮರಾಠಿ ಭಾಷೆಯ **ತಮಾಷಾ** ಸಣ್ಣಾಟವು ಬಹಳಷ್ಟು ಕಾರಣವಾಗಿದೆ. ದಾಸರಾಟದ ಸ್ವಚ್ಛಂದತೆ ಮತ್ತು ರಂಗಪ್ರಜ್ಞೆಗಳು ತಮಾಷಾದ ಹಾಡು ಕುಣಿತಗಳು ಸಣ್ಣಾಟದಲ್ಲಿ ನೇರ ಪ್ರವೇಶ ಪಡೆದವು. ದಾಸರಾಟದ ನಟಿಯಾದ 'ರಾಧಾ' ಸಣ್ಣಾಟದ ಸ್ಟೇಜಿನ ಮೇಲೆಯೂ ವಿಜೃಂಭಿಸಿದಳು. ಅವರೆಡು, ರಂಗ ಪ್ರಕಾರಗಳ ನಿರೂಪಣಾ ತಂತ್ರ, ಮಾತುಗಾರಿಕೆಯ ಶೈಲಿ, ಹಿಮ್ಮೇಳಗಳನ್ನು ಸಣ್ಣಾಟ ಧಾರಾಳವಾಗಿ ಸ್ವೀಕರಿಸಿಯೂ, ಸಣ್ಣಾಟ ತಾನೊಂದು ಸ್ವತಂತ್ರ ರಂಗಪ್ರಕಾರವಾಗಿ ಬೆಳೆಯಿತು.[೨]

ಸಣ್ಣಾಟದ ಬೆಳವಣಿಗೆಯಲ್ಲಿ ಎರಡು ಘಟ್ಟಗಳಿವೆ. ಆರಂಭದಿಂದ ಅಂದರೆ ೧೮೭೦ ರಿಂದ ೧೯೨೦ ರವರೆಗೆ ಪ್ರಥಮ ಘಟ್ಟ, ೧೯೨೦ರಿಂದೀಚೆಗೆ ದ್ವಿತೀಯ ಘಟ್ಟ, ಪ್ರಥಮಘಟ್ಟದ ಸಣ್ಣಾಟಗಳು ಗೀತನಾಟಕಗಳು. ಅವುಗಳ ಪಠ್ಯವೆಂದರೆ ಹಾಡುಗಳು ಮಾತ್ರ. ಹಾಡಿನ ಭಾವವನ್ನು ಅನುಸರಿಸಿ ಆಶು ಸಂಭಾಷಣೆಗಳಿರುತ್ತವೆ. ಹಾಡುಗಳ ಪ್ರಮಾಣವೇ ಹೆಚ್ಚಿರುವುದರಿಂದ ಹಾಡುಗಳೊಂದಿಗೆ ಕುಣಿತ ಅತ್ಯವಶ್ಯಕವಾಗಿರುತ್ತದೆ. ದ್ವಿತೀಯ ಘಟ್ಟದ ಸಣ್ಣಾಟಗಳು ಕಂಪನಿ ನಾಟಕಗಳ ಕೆಲವು ಅಂಶಗಳನ್ನು ಸ್ವೀಕರಿಸಿದವು.[೩] ಖಚಿತವಾದ ಲಿಖಿತ ಸಂಭಾಷಣೆಗಳು ಸೇರಿಸಲ್ಪಟ್ಟವು. ಹಾಡುಗಳ ಶೈಲಿ ಬದಲಾಯಿತು. ಅದಕ್ಕೆ ತಕ್ಕಂತೆ ಪಕ್ಕವಾದ್ಯ ಡಪ್ಪಿನ ಸ್ಥಾನವನ್ನು ತಬಲಾ ಆಕ್ರಮಿಸಿತು. ಕಥಾ ನಿರೂಪಣೆಯ ಬದಲಾಗಿ ವೇದಾಂತ ನೀತಿ ಧರ್ಮಗಳು ಪ್ರಧಾನವೆನಿಸಿದವು. ಒಂದು ಶತಮಾನದ ಅವಧಿಯಲ್ಲಿ ಸುಮಾರು ಇನ್ನೂರು ಸಣ್ಣಾಟಗಳು ರಚನೆಗೊಂಡಿವೆ. ಇವುಗಳ ಕರ್ತೃಗಳು ಅಷ್ಟಿಷ್ಟು ಓದಿಕೊಂಡವರು. ಅಲ್ಪ ಕಾಲಾವಧಿಯಲ್ಲಿ ಅವುಗಳು ರಚನೆಯಾದವು. ಕಥಾವಸ್ತುವಿನ ಆಯ್ಕೆಯಲ್ಲಿ ಧಾರಾಳತನ ಹಾಗೂ ವೈವಿಧ್ಯತೆಗಳನ್ನು ಸಣ್ಣಾಟದ ಕವಿಗಳು ತಂದರು. ಕಥೆಗಳನ್ನು ನವೀಕರಿಸಿದರು, ಕಥಾವಸ್ತುವನ್ನಾಧರಿಸಿ ಸಣ್ಣಾಟಗಳನ್ನು ಈ ಕೆಳಗಿನಂತೆ ವಿಭಾಗಿಸಬಹುದು.

೧. ಸಾಮಾಜಿಕ ಕಥೆಗಳು– ಸಂಗ್ಯಾ–ಬಾಳ್ಯಾ, ಕಟ್ಟಿಚೆನ್ನ, ರೂಪಸೇನ, ಸತ್ಯಶೀಲಾ, ಸಾವುಕಾರನ ಆಟ, ಮಾನಿಂಗಶೆಟ್ಟಿ, ಕಡ್ಲಿಮಟ್ಟಿ ಸ್ಟೇಶನ್ ಮಾಸ್ತರ, ದುಂಡ್ಯಾ ಮೋದಿನ.

೨. ಭಕ್ತಿ ಕಥೆಗಳು– ತಿರುನೀಲಕಂಠ, ಕಾಳಿದಾಸ, ಅಲ್ಲಮಪ್ರಭು, ಬೇಡರ ಕಣ್ಣಪ್ಪ, ಕನಕದಾಸ, ಗೋರಾಕುಂಬಾರ, ಅಕ್ಕಮಹಾದೇವಿ, ತುಕಾರಾಮ, ಕಬೀರದಾಸ.

೩. ಪೌರಾಣಿಕ ಕಥೆಗಳು– ಅನಸೂಯಾ, ಸತ್ಯವಾನ ಸಾವಿತ್ರಿ, ಹರಿಶ್ಚಂದ್ರ, ಭಕ್ತಪ್ರಲ್ಹಾದ, ವಿಶ್ವಾಮಿತ್ರ, ರುಕ್ಮಿಣಿ ಸ್ವಯಂವರ.

೪. ಜನಪದ ಕಥೆಗಳು– ಬಸವಂತ ಬಲವಂತ, ರಾಧಾನಾಟ, ಮಗದಮಾಸುರ ಕೆಂಚಮ್ಮ–ಧರ್ಮದೇವತೆ, ಸೋಮಶೇಖರ–ಚಿತ್ರಶೇಖರ, ಮದನಸುಂದರಿ, ನೀಲಕಂಠರಾಜ.

೫. ಐತಿಹಾಸಿಕ ಕಥೆಗಳು- ಸಂಗೊಳ್ಳಿ ರಾಯಣ್ಣ, ಬಸವೇಶ್ವರ, ಕಿತ್ತೂರ ಚೆನ್ನಮ್ಮ, ಧರ್ಮ ಸಾಮ್ರಾಜ್ಯ.

ಸಣ್ಣಾಟ ಸ್ವರೂಪ ಮೂಲತಃ ಸಾಮಾಜಿಕ ವಸ್ತುವಿನ ನಿರೂಪಣೆಗೆ ಹೊಂದುವಂಥದು. ಬರುಬರುತ್ತ ಅದರ ಸ್ವರೂಪದಲ್ಲಿ ಬದಲಾವಣೆಗಳುಂಟಾಗಿ ಅದು ಏನೆಲ್ಲವನ್ನು ಒಳಗೊಳ್ಳುವ ಆಕಾರ ಪಡೆಯಿತು. ಸಣ್ಣಾಟದ ಈ ಸ್ವಚ್ಛಂದ ಗುಣವೇ ಅದರ ವೈಶಿಷ್ಟ್ಯವಾಗಿದೆ. ಸರಳಧಾಟಿಯ ಹಾಡುಗಳು, ನೇರ ಸಂಭಾಷಣೆಗಳು, ನಿರ್ಬಂಧವಿಲ್ಲದ ಅಭಿನಯ ಶೈಲಿ, ಸರಳ ವೇಷಭೂಷಣ ಇವುಗಳಿಂದಾಗಿ ಸಣ್ಣಾಟದ ಸ್ಟೇಜಿನ ಮೇಲೆ ಎಂಥದೇ ಕಥೆಯನ್ನು ಯಾವುದೇ ವಿಷಯವನ್ನು ನಿರೂಪಿಸಬಹುದಾಗಿದೆ.

ಗೀತನಾಟಕಗಳಿರುವ ಪ್ರಥಮ ಘಟ್ಟದ ಸಣ್ಣಾಟಗಳು ಸಮೃದ್ಧ ಹಾಡುಕುಣಿತಗಳಿಂದಾಗಿ ಲವಲವಿಕೆಗಳ ಪ್ರದರ್ಶನಗಳಾಗಿವೆ. ಆರಂಭದಲ್ಲಿ ಗಣಪತಿ ಸರಸ್ವತಿಯರ ಪ್ರಾರ್ಥನೆ ಸಾಮಾನ್ಯ. ನಂತರ ಹಾಡಿನ ರೂಪದಲ್ಲಿಯೇ ಪ್ರೇಕ್ಷಕರಿಗೆ ಮನವಿ. ಕುಳಿತಿರುವ ಪ್ರೇಕ್ಷಕರು, ಗದ್ದಲಮಾಡದೇ ನಮ್ಮ ಆಟ ನೋಡಿರಿ, ನಿಮ್ಮ ಪ್ರೀತಿಯ ಭರವಸೆಯಿರಲಿ ಎಂದು ಹೇಳಿ ನಂತರ ನೇರವಾಗಿ ಕಥಾಪ್ರಸಂಗ ಪ್ರಾರಂಭವಾಗುವುದು. ಸಣ್ಣಾಟದಲ್ಲಿ ಸೂತ್ರಧಾರನಿರುವುದಿಲ್ಲ. ಮೇಳದವರು ಹಾಡುತ್ತಾರೆ. ಪೂರ್ವಸೂಚನೆಯಂತೆ ಪಾತ್ರಗಳ ಪ್ರವೇಶ. ಅಭಿನಯ ಕುಣಿತ ನಿರ್ಗಮನ.

ಪ್ರಥಮ ಘಟ್ಟದ ಸಣ್ಣಾಟದಲ್ಲಿ ಹಾಡುಗಳೇ ಪ್ರಧಾನವಾಗಿರುವುದರಿಂದ ಹಾಡುಗಳೊಂದಿಗೆ ಕುಣಿತ ಅನಿವಾರ್ಯವೆನಿಸಿದೆ. ಸರಳ ಲೆಕ್ಕಾಚಾರದ ಮೂರ್ನಾಲ್ಕು ವಿಧದ ಕುಣಿತಗಳನ್ನು ಎಲ್ಲ ಪಾತ್ರದಾರಿಗಳೂ ಕುಣಿಯುತ್ತಾರೆ. ಹಾಡಿನ ಮೊದಲ ಸಾಲನ್ನು ಹಿಮ್ಮೇಳದವರು ಹಾಡುವಾಗ ಅದರ ಭಾವನೀಯವಿರುತ್ತದೆ. ಹಿಮ್ಮೇಳದೊಂದಿಗೆ ಪಾತ್ರದಾರಿ ತಾನೂ ಧನಿಗೂಡಿಸುವುದುಂಟು. ಅದೇ ಸಾಲನ್ನು ಹಿಮ್ಮೇಳದವರು ರಿಪಿಟ್ ಮಾಡುವ ಅವಧಿಯನ್ನು ಕುಣಿತಕ್ಕೆ ಬಳಸಲಾಗುವುದು. ಹೀಗೆ ಹಾಡುಕುಣಿತಗಳು ನಿರಂತರವಾಗಿ ಸಾಗುವುದರಿಂದ ಏಕತಾನತೆ ಗೋಚರಿಸಿದರೂ ಅದೊಂದು ಬಗೆಯ ಆಕರ್ಷಕ ವಾತಾವರಣ ನಿರ್ಮಿಸುತ್ತದೆ. ಹಾಡು ಕುಣಿತ ಮುಗಿದ ಮೇಲೆ ಸಂಭಾಷಣೆ. ಇಲ್ಲಿ ಮಾತುಗಾರಿಕೆ ಗೌಣಸ್ಥಾನ. ಹಾಡಿನ ಭಾವಾರ್ಥದಂತಹ ತುಂಡು ತುಂಡು ಮಾತುಗಳನ್ನು ಪಾತ್ರದಾರಿ ಒಪ್ಪಿಸುವುದುಂಟು. ಕಥೆಯ ಚಾಲನೆಗೆ ಪೂರಕವೆನಿಸುವ ಸ್ವತಂತ್ರ ಸಂಭಾಷಣೆಗಳಿವು. ಪ್ರತಿಭಾವಂತ ಪಾತ್ರದಾರಿಗಳು ಹೇಳುವ, ಆಶು ಪ್ರತಿಭಾವಂತರು ಹೇಳುವ ಮಾತುಗಳನ್ನು ಇತರರು ಕೇಳಿ ಕೇಳಿ ನೆನಪಿನಲ್ಲಿಟ್ಟುಕೊಂಡು ಅನುಕರಿಸಿ ಒಪ್ಪಿಸುವುದುಂಟು. ಹೀಗಾಗಿ ಬರುಬರುತ್ತಾ ಆಶು ಸಂಭಾಷಣೆಗಳು ಸೀದಾ ಸಂಭಾಷಣೆಗಳನ್ನು ಸೇರಿಸಿ ಬರೆದಿರುವುದರಿಂದ ಇಂದಿನ ಹಸ್ತಪ್ರತಿಗಳು ನಾಟಕ ಪ್ರತಿಗಳಂತಾಗಿವೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ಇಂದಿನ ರಂಗ ಪತ್ರಿಕೆಯ ಕರ್ತೃಗಳು ಇಬ್ಬರು, ಮೂಲ ಪಠ್ಯದ ಕವಿಯೊಬ್ಬನಾದರೆ, ಪರಂಪರೆಯಿಂದ ಆಶು ಸಂಭಾಷಣೆಗಳನ್ನು ಸೃಷ್ಟಿಸಿ ಹೆಣೆದು ಸ್ಥಿರಗೊಳಿಸಿರುವ ಪಾತ್ರದಾರಿಗಳು ಎರಡನೆಯವರು.

"ಸಣ್ಣಾಟ ಪರಂಪರೆಯಲ್ಲಿ ಸಂಗ್ಯಾ-ಬಾಳ್ಯಾ ಸದ್ಯಕ್ಕೆ ಪ್ರಥಮ ಸಣ್ಣಾಟವೆನಿಸಿದೆ. ಬೆಳಗಾವಿ ಜಿಲ್ಲೆಯ ಬೈಲಹೊಂಗಲಕ್ಕೆ ಸಮೀಪವಿರುವ ಬೈಲವಾಡ ಗ್ರಾಮದ ರಾಯಪ್ಪ ಪತ್ತಾರ ಮಾಸ್ತರ ಎಂಬ ಕವಿ ರಚಿಸಿದರು. ಬೈಲಹೊಂಗಲದಲ್ಲಿ ೧೮೬೦ ರ ಸುಮಾರಿಗೆ ನಡೆದ ನೈಜಘಟನೆಯನ್ನಾಧರಿಸಿ ಇದು ರಚನೆಗೊಂಡಿದೆ. ಸಂಗ್ಯಾಬಾಳ್ಯಾ ಎಂಬ ಇಬ್ಬರೂ ಪ್ರಾಣ ಸ್ನೇಹಿತರು. ಅದೇ ಊರಿನ ಈರ್ಯಾ ಎಂಬುವನು ಶ್ರೀಮಂತ ವ್ಯಾಪಾರಿಯಾಗಿದ್ದನು. ತನ್ನ ಇಳಿಯ ವಯಸ್ಸಿನಲ್ಲಿ ಹದಿ-ಹರೆಯದ ಅತ್ಯಂತ ಚಲುವೆಯಾದ ಗಂಗೆಯನ್ನು ಮದುವೆಯಾಗಿದ್ದನು. ಆಕೆಯ ಗಂಡನಾದ ಈರ್ಯಾನಿಂದ ಸುಖ ಸಿಗದಿದ್ದಾಗ ಸಂಗ್ಯಾನ ಜೊತೆ ಸಂಬಂಧ ಬೆಳಸಿದಳು. ಗಂಗಿ-ಸಂಗ್ಯಾರ ಅನೈತಿಕ ಸಂಬಂಧ ಊರ ತುಂಬ ಸುದ್ದಿಯಾದಾಗ ಕೋಪಗೊಂಡ ಈರ್ಯಾ ಸಂಗ್ಯಾನನ್ನು ಕೊಲೆಮಾಡಿ ಸೇಡು ತೀರಿಸಿಕೊಳ್ಳುವನು. ಇದೆ ಘಟನೆಯ ತಾಜಾ ಉದಾಹರಣೆ ತೆಗೆದುಕೊಂಡು ಸಂಗ್ಯಾ-ಬಾಳ್ಯಾ ಸಣ್ಣಾಟ ರಚನೆಗೊಂಡಿತು."[೪]

ಆಗ ಜನರಿಗೆ ತುಂಬಾ ಆಕರ್ಷಕವೆನಿಸಿ ವ್ಯಾಪಕ ಪ್ರಚಾರ ಪಡೆದುಕೊಂಡಿತು. ಇದರಷ್ಟು ಪ್ರಚಾರಗೊಂಡ ಸಣ್ಣಾಟ ಮತ್ತೊಂದಿಲ್ಲ. ತನ್ನ ಭೌಗೋಳಿಕ ಗಡಿಯನ್ನು ದಾಟಿ ಕರ್ನಾಟಕದ ತುಂಬಾ ಹರಡಿಕೊಂಡ, ಅಲ್ಲಲ್ಲಿ ಪ್ರಾದೇಶಿಕ ಲಕ್ಷಣಗಳನ್ನು ಮೈಗೂಡಿಸಿಕೊಂಡ ಸಂಗ್ಯಾಬಾಳ್ಯಾ ಜನಪ್ರಿಯವಾಗಿ ಎಪ್ಪತ್ತರ ದಶಕದಲ್ಲಿ ಹವ್ಯಾಸಿ ರಂಗಭೂಮಿಯ ಕಲಾವಿದರು ಇದನ್ನು ಪ್ರಯೋಗಿಸಿದಾಗ, ಜಡಗೊಂಡಿದ್ದ ಸಮಕಾಲೀನ ಹವ್ಯಾಸಿ ರಂಗಪ್ರಪಂಚದಲ್ಲಿ ಮಾತುಗಳು, ಪಾತ್ರಗಳ ಸಂಕೀರ್ಣ ಗುಣಸ್ವಭಾವ, ಹಾದರ-ಪ್ರಣಯ, ಹಿಂಸೆ-ಸೇಡು, ಮೊದಲಾದ ಮನುಷ್ಯ ಮೂಲ ಪ್ರವೃತ್ತಿಗಳ ಉದ್ದೀಪನೆ- ಈ ಎಲ್ಲ ಕಾರಣಗಳಿಂದಾಗಿ ಸಂಗ್ಯಾ ಬಾಳ್ಯಾ ನಿತ್ಯ ನೂತನವಾಗಿದೆ.

"ಪ್ರಥಮ ಘಟ್ಟದ ಸಣ್ಣಾಟಗಳಲ್ಲಿ ಸಂಗ್ಯಾ-ಬಾಳ್ಯಾದ ನಂತರದ ಸ್ಥಾನ" ರಾಧಾನಾಟ[೫]ಕ್ಕೆ ಸಲ್ಲುತ್ತದೆ. ಮಹಾರಾಷ್ಟ್ರದ ತಮಾಷಾದ ಪ್ರೇರಣೆಯಿಂದ ಹುಟ್ಟಿಕೊಂಡಿರುವ ಜನಪದ ನಾಟಕವಿದು. ಸ್ಥಳೀಯ ದಾಸರಾಟದ ಬಹಳಷ್ಟು ಅಂಶಗಳು ಇದರಲ್ಲಿ ಬೆರೆತಿವೆ. ಚಿಮಣಾ-ಗಲಪೂಜೆ ನಾಯಕಿ ನಾಯಕರು. ಗಲಪೂಜೆ ಗೃಹಿಣಿ ಚಿಮಣಾಳಲ್ಲಿ ಅನುರಕ್ತನಾಗಿ ಗೆಳೆತನ ಯಾಚಿಸುತ್ತಾನೆ. ಅವಳು ನಿರಾಕರಿಸುವಳು. ಅವನ ಸ್ನೇಹಿತ ಸಖಾರಾಮ್ ತಾತ್ಯಾ ಸಹಕಾರಿಯಾಗಿರುತ್ತಾನೆ. ಈ ಪಾತ್ರಗಳ ಹೆಸರುಗಳೇ ಇದು ತಮಾಷಾ ಮೂಲದಿಂದ ಬಂದುದೆಂಬುದನ್ನು ತಿಳಿಸುತ್ತದೆ. ಅಲ್ಲದೆ ಹಾಡಿನ ಧಾಟಿಗಳು ಮಾತುಗಳು ತಮಾಷಾ ಅನುಕರಣೆಯಾಗಿವೆ. ಹೀಗಿರುವುದರಿಂದ ರಾಧಾನಾಟ ತಮಾಷಾ ಕನ್ನಡ ಆವೃತ್ತಿಯಾಗಿದೆ. ಇದು ಹೆಸರಿಗೆ ರಾಧಾನಾಟ. ಇಲ್ಲಿ ರಾಧೆಯ ಪಾತ್ರವೆ ಇಲ್ಲ. ಪೂರ್ವರಂಗದಲ್ಲಿರುವ ಗೊಲ್ಲತಿ ಪಾತ್ರ ಮಾತ್ರ ರಾಧೆಯ ಪ್ರತಿಬಿಂಬವಾಗಿದೆ. ಆಟದ ನಾಯಕಿಯ ಹೆಸರು ಚಿಮಣಾ. ಇದು ಮೊದಲಿನಿಂದ ಹೀಗೇ ಇದೆಯೋ ಅಥವಾ ನಂತರದ ಪರಿವರ್ತನೆಯೋ ಹೇಳಲಿಕ್ಕಾಗದು.

‘ರೂಪಸೇನ’ ಅಥವಾ ‘ಸಿಪಾಯಿ ಆಟ’ ರಾಮಸಿಂಗ ಎಂಬ ಸಿಪಾಯಿಯ ಜೀವನದ ಸುತ್ತ ಹೆಣೆದ ಕಥೆ. ರಾಮಸಿಂಗ ನೌಕರಿಗಾಗಿ ಪರ ಊರಿಗೆ ಹೋದಾಗ ಅಲ್ಲಿ ಕಮಲಾಕ್ಷಿ ಎಂಬ ವೇಶ್ಯೆಯ ಮೋಹದಲ್ಲಿ ಸಿಲುಕಿಕೊಳ್ಳುವನು. ಅವನ ಹೆಂಡತಿ ಜಯಾವತಿಗೆ ಚಿಂತೆಯಾಗುತ್ತದೆ. ಮಗ ರೂಪಸೇನ ತಂದೆಯನ್ನು ಹುಡುಕಿಕೊಂಡು ಹೋಗಿ ಅವನನ್ನು ವೇಶ್ಯೆಯ ಮೋಹಬಂಧನದಿಂದ ಬಿಡಿಸಿಕೊಂಡು ಕರೆತರುತ್ತಾನೆ.[೬] ‘ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ’ ಒಂದು ನೈಜ ಘಟನೆಯನ್ನಾಧರಿಸಿದ ಸಣ್ಣಾಟ. ಬಾಗಲಕೋಟೆ ಸಮೀಪದ ಕಡ್ಲಿಮಟ್ಟಿ ರೇಲ್ವೆ ಸ್ಟೇಷನ್ನಿನಲ್ಲಿ ಅಸಹಾಯಕಳಾದ ಕಾಶೀಬಾಯಿ ವಸ್ತಿ ಮಾಡಿರುತ್ತಾಳೆ. ಸ್ಟೇಷನ್ನ ಮಾಸ್ತರ ಅವಳ ಮೇಲೆ ಮೋಹಗೊಂಡು ಏಕಾಂತ ಸುಖಕ್ಕೆ ಒತ್ತಾಯಿಸುತ್ತಾನೆ. ಅವಳು ಉಪಾಯದಿಂದ ಕೋಣೆಯಿಂದ ಹೊರಗೆ ಹೋಗಿ ಬಾಗಿಲ ಚಿಲಕ ಹಾಕಿಕೊಳ್ಳುವಳು. ಒಳಗೆ ಬಂಧಿಯಾದ ಸ್ಟೇಷನ್ ಮಾಸ್ತರ ಅವಳ ಎಳೆಗೂಸನ್ನು ಕೊಲ್ಲುವ ಬೆದರಿಕೆ ಹಾಕಿದರೂ ಅವಳು ಶೀಲ ಕಳೆದುಕೊಳ್ಳಲು ಒಪ್ಪುವುದಿಲ್ಲ. ಕೂಸನ್ನು ಬಲಿ ನೀಡಿ ತನ್ನ ಪಾತಿವ್ರತ್ಯವನ್ನುಳಿಸಿಕೊಂಡ ಧೀರೆ ಕಾಶೀಬಾಯಿ ಜನರ ಮೆಚ್ಚುಗೆ ಗಳಿಸುತ್ತಾಳೆ.

ಪ್ರಥಮ ಘಟ್ಟದ ಸಣ್ಣಾಟಗಳ ಸಂಗೀತ ಅಚ್ಚ ಜನಪದವಾದುದು. ಹೆಚ್ಚಾಗಿ ಸಪ್ತಕದ ಪೂರ್ವಾರ್ಧದಲ್ಲಿ ಸಂಚರಿಸುವ ಸ್ವರವಿನ್ಯಾಸದ ಧಾಟಿಗಳು ಸರಳ ಮತ್ತು ಸುಂದರ. ಹಿಮ್ಮೇಳದಲ್ಲಿ ನಾಲ್ಕಾರು ಜನ ಇರುತ್ತಾರೆ. ಇಬ್ಬರು ಮುಂದೆ ಹಾಡಿದರೆ ಉಳಿದವರು ಅದನ್ನು ರಿಪೀಟ್ ಮಾಡುತ್ತಾರೆ. ಎಲ್ಲರ ಕೈಯಲ್ಲಿ ತಾಳಗಳಿರುತ್ತವೆ. ಈ ಮೊದಲು ವಿವರಿಸಿರುವಂತೆ ಹಾಡಿನ ಪಕ್ಕವಾದ್ಯ ಡಪ್ಪು ಇಡೀ ಪ್ರದರ್ಶನವನ್ನು ಆವರಿಸಿಕೊಂಡಿರುತ್ತದೆ. ಪ್ರತಿ ಹಾಡಿನ ಆರಂಭ ಮತ್ತು ಮುಕ್ತಾಯದಲ್ಲಿ ಬರುವ ಲಘು ಮುಕ್ತಾಯಗಳನ್ನು ಇಲ್ಲಿ ಬಳಸುತ್ತಿದ್ದರು. ನಂತರ ಹಾರ್ಮೋನಿಯಂ ಹಾಡಿನ ಜೊತೆಗೆ ಪಕ್ಕವಾದ್ಯವಾಗಿ ಬಳಸಲ್ಪಡತೊಡಗಿತು. ಈ ಪ್ರಥಮ ಘಟ್ಟದ ಸಣ್ಣಾಟದ ಹಾಡುಗಳಿಗೆ ಹಾರ್ಮೋನಿಯಂ ಪಕ್ಕವಾದ್ಯ ಅವಶ್ಯವೇನಲ್ಲ. ಆದರೆ ಅದನ್ನು ಅನಿವಾರ್ಯವಾಗಿಸಿಕೊಂಡರು. ಸಣ್ಣಾಟಕ್ಕೆ ನಾಟಕದ ಅಂಶಗಳನ್ನು ಸೇರಿಸಿ ಕಸಿಮಾಡಿ ಹೊಸ ಪ್ರಕಾರವೊಂದನ್ನು ಸೃಷ್ಟಿಸಿದ ಲಿಖಿತ ಸಂಭಾಷಣೆಗಳು ಮತ್ತು ಹಾಡಿನ ಶಿಸ್ತು ಶೈಲಿಯನ್ನಾಧರಿಸಿ ಹಾಡಿನ ಧಾಟಿಗಳು ಇವು ಸೇರಲ್ಪಟ್ಟ ನಾಟಕದ ಅಂಶಗಳು. ಈ ಸಣ್ಣಾಟಗಳ ಮುಖ್ಯ ಲಕ್ಷಣವಾಯಿತು. ಸಂಸಾರದ ನಿಸ್ಸಾರತೆ, ಲೌಕಿಕ ಜೀವನದ ನಿಷ್ಫಲತೆ, ವೇದಾಂತ ತತ್ವಗಳು, ನೀತಿ ಧರ್ಮಗಳು ಇಲ್ಲಿ ದೀರ್ಘವಾಗಿ ಚರ್ಚಿಸಲ್ಪಟ್ಟಿವೆ.

ಸಣ್ಣಾಟದ ಹಾಸ್ಯ ಪಾತ್ರಗಳು ವಿಶಿಷ್ಟವಾಗಿವೆ. ದೂತೆಯ ಪಾತ್ರ ಪ್ರಥಮ ಘಟ್ಟದ ಸಣ್ಣಾಟಗಳಲ್ಲಿ ಸಾಮಾನ್ಯವಾಗಿದ್ದು ದ್ವಿತೀಯ ಘಟ್ಟಕ್ಕೂ ಮುಂದುವರೆಯಿತು. ಕೇವಲ ಸೇವಕಿಯಾಗಿರಬೇಕಾದ ದೂತೆ ಸೂತ್ರಧಾರ ಮತ್ತು ವಿದೂಷಕ ಇವರಿಬ್ಬರ ಕಾರ್ಯ ನಿರ್ವಹಿಸುವಳು. ದೂತೆ ಪಾತ್ರಧಾರಿ ಸ್ತ್ರೀ ವೇಷ ಹಾಕಿರುವುದಿಲ್ಲ. ಅವನಿಗೆ ಮೇಕಪ್ ಕೂಡಾ ಇರುವುದಿಲ್ಲ. ಒಂದು ದಡಿ ಧೋತರವನ್ನು ಸೀರೆಯ ಸೆರಗಿನಂತೆ ಹೊದ್ದುಕೊಂಡಿರುತ್ತಾನೆ. ಆಟ ಮುಂದುವರೆದಂತೆ

ಅದನ್ನೂ ತೆಗೆದಿಡುವನು. ಮಾಮೂಲಿ ಪುರುಷ ವೇಷದಲ್ಲಿರುವ ಅವನನ್ನು ದೂತೆ ಎಂಬ ಸ್ತ್ರೀ ಎಂದು ಭಾವಿಸುವದರಲ್ಲಿ ಪ್ರೇಕ್ಷಕರು ಗೊಂದಲಗೊಳ್ಳುವುದಿಲ್ಲ. ದ್ವಿತೀಯ ಘಟ್ಟದ ಸಣ್ಣಾಟದಲ್ಲಿ ಲಾಲೂ (ಬೀಸೂ) ಎಂಬ ಹಾಸ್ಯ ಪಾತ್ರದ ಪ್ರವೇಶವಾಯಿತು. ನಪುಂಸಕನಾದ ಇವನು ವೇಶ್ಯೆಯರ ಮನೆಯ ಸೇವಕ. ಈ ಪಾತ್ರವು 'ಮಲ್ಲಮ್ಮ' ನಾಟಕದಲ್ಲಿರುವ ಇಂಥದೇ ಪಾತ್ರದ ಅನುಕರಣೆಯಾಗಿದೆ. ಬಿಗಿಯಾದ ಕಥಾಬಂಧದಲ್ಲಿ ಈ ಎರಡೂ ಹಾಸ್ಯ ಪಾತ್ರಗಳಿಗೆ ದೊರೆಯುವ ಅವಕಾಶ ತೀರ ಕಡಿಮೆ. ಆಗಾಗ ಅಡ್ಡಸೋಗುಗಳು ನೇರವಾಗಿ ಪ್ರವೇಶಿಸಿ ತೂಕಡಿಸುವ ಪ್ರೇಕ್ಷಕರನ್ನು ಎಚ್ಚರಿಸಿ ನಗಿಸಿ ಲವಲವಿಕೆಯ ವಾತಾವರಣವನ್ನು ನಿರ್ಮಿಸುತ್ತವೆ.

ಸಣ್ಣಾಟದ ಮಂಟಪ ಚಿಕ್ಕದಿರುತ್ತದೆ. ಇದು ಸ್ಥಳೀಯ ಸಲಕರಣೆಗಳಿಂದ ನಿರ್ಮಿಸಿದ ಸರಳ ರಚನೆ. ಹಿಂಭಾಗಕ್ಕೆ ಒಂದು ಪರದೆ ಕಟ್ಟಿರುತ್ತಾರೆ. ಮೊದಲು ಹಿಲಾಲದ ಬೆಳಕಿನಲ್ಲಿ ಪ್ರದರ್ಶನಗಳು ನಡೆಯುತ್ತಿದ್ದವು. ನಂತರ ಪೆಟ್ರೋಮ್ಯಾಕ್ಸ್ ಬಂದವು. ಈಗ ವಿದ್ಯುದ್ದೀಪಗಳ ಬಳಕೆ ಸಾಮಾನ್ಯವಾಗಿದೆ. ಎಲ್ಲ ಪಾತ್ರಗಳು ಮುಖಕ್ಕೆ ಬಣ್ಣ ಹಚ್ಚಿಕೊಳ್ಳುತ್ತಾರೆ. ವೇಷಭೂಷಣ ಭರ್ಜರಿಯಾಗಿರುವದಿಲ್ಲ. ದಿನನಿತ್ಯದ ಉಡುಗೆಗಳಲ್ಲಿಯೇ ಸ್ವಲ್ಪ ಚೆನ್ನಾಗಿರುವ ಅಂಗಿ, ಧೋತರ, ಪೇಟಾ, ಸೀರೆಗಳನ್ನು ಬಳಸಿಕೊಳ್ಳುತ್ತಾರೆ. ಸಣ್ಣಾಟಗಳಲ್ಲಿ ಪಾತ್ರವಹಿಸುವ ವೃತ್ತಿ ನಟಿಯರ ಪರಂಪರೆಯೆ ಇದೆ. ಇವರಿಗೆ ಚಿಮಣಾಗಳೆಂದು ಹೆಸರು. ಇವರು ಸಾಮಾನ್ಯವಾಗಿ ದೇವದಾಸಿ ಹಿನ್ನೆಲೆಯಿಂದ ಬಂದವರು. ನಾಲ್ಕಾರು ಆಟಗಳ ನಾಯಕಿ ಪಾತ್ರದ ಹಾಡು ಮಾತುಗಳನ್ನು ಕಲಿತಿರುತ್ತಾರೆ. ಹಳ್ಳಿಹಳ್ಳಿಗಳಿಗೆ ಹೋಗಿ ಅಲ್ಲಿಯ ಸ್ಥಳೀಯ ತಂಡದ ಪ್ರದರ್ಶನದಲ್ಲಿ ಪಾತ್ರವಹಿಸಿ ಸಂಭಾವನೆ ಪಡೆದುಕೊಂಡು ಬರುತ್ತಾರೆ.

ಸಣ್ಣಾಟ ಸಾಮಾನ್ಯರ ಆಟ, ಅಲ್ಲಿ ಬರುವ ಹಾಡುಗಾರಿಕೆಯ ಧಾಟಿಗಳು ವೈವಿಧ್ಯಪೂರ್ಣವಾಗಿವೆ. ಧಾಟಿಯನ್ನೇ ಅಳತೆಗೋಲನ್ನಾಗಿ ಇಟ್ಟುಕೊಂಡಾಗ ಸಣ್ಣಾಟಗಳಲ್ಲಿ ಮುಖ್ಯವಾಗಿ ನಾಲ್ಕು ಪ್ರಕಾರಗಳು ಕಂಡುಬರುತ್ತವೆ. ೧. ಶರಣರಾಟ ೨. ದಾಸರಾಟ ೩. ರಾಜಾನಾಟ ೪. ಸಾಮಾಜಿಕ ಆಟ. ಈ ಪ್ರಕಾರಗಳಿಗೆ ಕೊಟ್ಟ ಹೆಸರುಗಳನ್ನು ಕೇಳಿದೊಡನೆ ಶರಣರ ಚರಿತ್ರೆಗಳನ್ನು ಕುರಿತು ಬರೆದುವು. ಶರಣರಾಟವೆಂದು, ವೈಷ್ಣವ ಕಥೆಗಳನ್ನು ಅವಲಂಬಿಸಿದ್ದ ದಾಸರಾಟವೆಂದೂ ಭಾವಿಸುವದು ಸರಿಯಲ್ಲ.

ರಾಜ ಮಹಾರಾಜರ ಜೀವನದ ಘಟನೆಗಳನ್ನು ವಸ್ತುವನ್ನಾಗಿ ಮಾಡಿಕೊಂಡಂಥ ಆಟ ಸಾಮಾಜಿಕ ಆಟವಲ್ಲ. ಕಥಾ ವಸ್ತುವಿಗಿಂತಲೂ ಹಾಡುಗಾರಿಕೆ ಮಹತ್ವದ್ದು. ಬಯಲಾಟದಲ್ಲಿ ಅದೇ ಅದರ ಮೂಲ ಮಾಧ್ಯಮ. ಹೀಗೆ ನೋಡುವಲ್ಲಿ ಶರಣರಾಟಕ್ಕೂ, ದಾಸರಾಟಕ್ಕೂ ಹಾಡುಗಾರಿಕೆಯಲ್ಲಿ ಬಹಳ ವ್ಯತ್ಯಾಸವಿದೆ. ಇದನ್ನು ಗಮನಿಸಿದ ಹಳ್ಳಿಗರು ೪೦ ವರ್ಷಗಳ ಪೂರ್ವದಲ್ಲಿ ಶರಣರಾಟಕ್ಕೆ ಕಾದ್ರಳ್ಳಿಕತೆಯೆಂದೂ, ದಾಸರಾಟಕ್ಕೆ ಇಂಗಳ್ಳಿ ಕತೆಯೆಂದೂ ಹೆಸರಿಸುತ್ತಿದ್ದರು. ಇದನ್ನು ನಾ ಕೇಳಿಬಲ್ಲೆ. ಸಣ್ಣಾಟಗಳನ್ನು ಹಾಡಿಗಾರಿಕೆಯ ಮಾನದಿಂದ ಹೀಗೆ ವಿಂಗಡಿಸಬಹುದು.

ಸಣ್ಣಾಟಗಳು

ಪೌರಾಣಿಕವಸ್ತು	ಐತಿಹಾಸಿಕ	ಸಾಮಾಜಿಕ ಆಟ	ದಾಸರಾಟ
ಶರಣರಾಟ	ರಾಜನಾಟ	ಕೌಟುಂಬಿಕ	ಶ್ರೀಕೃಷ್ಣ ಪಾರಿಜಾತ

ಸಣ್ಣಾಟಕ್ಕೆ ಮುಖ್ಯವಾಗಿ ಬೇಕಾದುದು ಡಪ್ಪು. ಹಾಡಿನ ವೈಖರಿಗೆ ಆ ವಾದ್ಯ ಹೊಂದಿಕೊಂಡಷ್ಟು ಮಿಕ್ಕ, ತೊಗಲು ವಾದ್ಯಗಳು ಹೊಂದಲಾರವು. ಆದ್ದರಿಂದಲೇ ಸಣ್ಣಾಟಗಳು ಡಪ್ಪಿನಾಟವೆಂದು ಪ್ರಸಿದ್ಧವಾಗಿವೆ. ಇವಕ್ಕೆ ಕಥಾವಸ್ತು ಪುರಾಣ, ಇತಿಹಾಸ, ಸಾಮಾಜಿಕ ಘಟನೆ ಯಾವುದಿದ್ದರೂ ನಡೆಯುತ್ತದೆ. ಶಿವಶರಣರು, ಹರಿದಾಸರು, ಸಾಧುಸಂತರು, ಮಾರ್ಕಂಡೇಯ, ಅನಸೂಯಾ, ಸಂಗ್ಯಾ-ಬಾಳ್ಯಾ, ಸತಿಸಕ್ಕುಬಾಯಿ ಮುಂತಾದವರ ಚರಿತ್ರೆಗಳು ಈ ಆಟಕ್ಕೆ ಹೊಂದಿಕೊಳ್ಳುತ್ತವೆ.[೭] ಅವರಿಗೆ ತಕ್ಕಂತೆ ವೇಷಭೂಷಣ ಅಲ್ಲಿರುತ್ತದೆ. ಬಣ್ಣಗಾರಿಕೆಗೆ ವಿಶೇಷ ಮಹತ್ವ ಅಲ್ಲಿಲ್ಲ. ಹಾಡಿಕೊಂಡು ಕುಣಿಯುತ್ತಲೇ ಕಥೆಯನ್ನು ಮುಂದುವರೆಸಿಕೊಂಡು ಹೋಗುವುದೇ ಸಣ್ಣಾಟದ ನಿಜವಾದ ಮಾಧ್ಯಮ, ಸಣ್ಣಾಟದ ನಿಜವಾದ ಕಸವು. ಸಣ್ಣಾಟದ ಹಾಡುಗಳು ಜನಪದ ಧಾಟಿಯಲ್ಲಿ, ತತ್ವಪದ, ಶರಣರ ಸ್ವರ ವಚನ, ದಾಸರ ಹಾಡುಗಳು ಛಾಯೆಯಲ್ಲಿಯೇ ಇವು ನಿರ್ಮಿತವಾಗಿವೆ. ಒಂದೇ ಧಾಟಿಯೇ ವಿವಿಧ ಪ್ರಕಾರಗಳನ್ನು ಬಳಸಿಕೊಂಡು ಒಂದೊಂದು ಪ್ರಕಾರದ ಸಣ್ಣಾಟ ಪ್ರದರ್ಶನಗೊಳ್ಳುತ್ತದೆ. ಈ ಹಾಡುಗಳನ್ನು ಕೇಳಿದ ಕಿವಿ ಇದು ಈ ಆಟದ ಹಾಡಿನ ಧಾಟಿ, ಇದು ಆ ಆಟದ ಹಾಡಿನ ರೀತಿ ಎಂದು ವಿಭಾಗಿಸಬಲ್ಲವು. ಶರಣರಾಟದ ಹಾಡುಗಳು ಏರು ಇಳಿವುಗಳ ತಾನಕ್ಕೆ ಮಹತ್ವ ನೀಡಿದೆ, ಒಂದೇ ಮಟ್ಟದಲ್ಲಿ ತ್ವರಿತಗತಿಯಿಂದ ಸಾಗುತ್ತವೆ. ದಾಸರಾಟದ ಹಾಡುಗಳಲ್ಲಿ ಏರಿಳಿತ ಬಹಳ. ಹಾಡನ್ನು ಪ್ರಾರಂಭಿಸುತ್ತಲೆ ಅರೋಹಣ ತಾಳ, ಸಾವಕಾಶವಾಗಿ ಅವರೋಹಣಕ್ಕೆ ಇಳಿದು ಮುಂದೆ ನಿಧಾನವಾಗಿ ಸಮತೋಲಕ್ಕೆ ಬಂದು ನಿಲ್ಲುವುದೇ ಆ ಧಾಟಿಯ ವೈಶಿಷ್ಟ್ಯ.

ದಾಸರಾಟ ಪ್ರಭೇದಗಳಾದ ರಾಧಾನಾಟ, ಶ್ರೀಕೃಷ್ಣ ಪಾರಿಜಾತ, ಶಿವಪಾರಿಜಾತ ಮುಂತಾದ ಸಣ್ಣಾಟಗಳಲ್ಲಿ ಈ ವೈಶಿಷ್ಟ್ಯವನ್ನು ಕಾಣುತ್ತೇವೆ. ಇದರಂತೆ ನೀಲಕಂಠಪ್ಪ ಪತ್ತಾರ, ಅಲ್ಲಮಪ್ರಭು ಇವೇ ಮೊದಲಾದ ಆಟಗಳನ್ನು ಶರಣರಾಟ ಪ್ರಕಾರಗಳಿಂದ ಅಲ್ಪಮಟ್ಟಿಗೆ ಭಿನ್ನವಾಗಿರುವುದರಿಂದಲೂ ಅದನ್ನು ಭಿನ್ನವಾಗಿ ಹಾಡಿನ ಧಾಟಿ ಸಂಗ್ಯಾ-ಬಾಳ್ಯಾ, ಸತಿಸಕ್ಕುಬಾಯಿ ಕಥೆಗಳಲ್ಲಿ ಕಂಡುಬರುತ್ತವೆ. ಇವನ್ನು ಸಾಮಾಜಿಕ ಆಟದ ಗುಂಪಿಗೆ ಹಾಕಲಾಗಿದೆ. ಪ್ರತಿಯೊಂದು ಹಾಡಿನ ಮೊದಲ ಚುಟುಕನ್ನು ತ್ವರಿತವಾಗಿ ಹಾಕಲಾಗಿದೆ. ಈ ಪ್ರಕಾರಗಳಲ್ಲಿ ಕಾಣುತ್ತೇವೆ. ಒಟ್ಟಿನಲ್ಲಿ ಸಣ್ಣಾಟಗಳ ಧಾಟಿ ತ್ವರಿತ ಗತಿಯಲ್ಲಿದ್ದು, ಡಪ್ಪಿನ ಚಿಟಕಿನ ಗತಿಗೆ ಹೊಂದಿಕೊಂಡು ಹೋಗುವಲ್ಲಿ ಅದರ ವೈಶಿಷ್ಟ್ಯವಿದೆಯೆಂದು ಹೇಳಬಹುದು.

ಒಟ್ಟಾರೆಯಾಗಿ ಶೈವ ಮತ್ತು ವೈಷ್ಣವರ ಮತ ಪ್ರಚಾರದ ಉದ್ದೇಶದಿಂದ ಹುಟ್ಟಿಕೊಂಡ ಸಣ್ಣಾಟವು ಮೊದಲು ಬೆಳಗಾವಿ ಜಿಲ್ಲೆಯಲ್ಲಿ ರೂಪ ತಳೆಯಿತು. ನಂತರ ಸುತ್ತಮುತ್ತಲಿನ ಜಿಲ್ಲೆಗಳಲ್ಲೂ ಜನಪ್ರಿಯತೆ ಗಳಿಸಿತು. ಮೂಲತಃ ಅಪ್ಪರಾಳದಲ್ಲಿ "ಭಾಮಾ ಕಲಾಪಂ" ದಿಂದ ತಮ್ಮಣ್ಣನ ಮೂಲಕ ಉದಯಿಸಿ, ನಂತರ ಕೃಷ್ಣಾ ತೀರಗುಂಟ ಬಾಗಲಕೋಟೆ, ಬೆಳಗಾವಿ, ವಿಜಯಪುರ ಸುತ್ತಮುತ್ತಲ ಪರಿಸರದಲ್ಲಿ ಹಬ್ಬುತ್ತಾ ಕುಲಗೋಡದ ತಮ್ಮಣ್ಣನ ಮೂಲಕ "ಕೃಷ್ಣ ಪಾರಿಜಾತ" ಎಂಬ ಸಣ್ಣಾಟವು ಬಹಳ ಪ್ರಸಿದ್ಧಿ ಪಡೆಯಿತು. ಪ್ರಸ್ತುತ ಶ್ರೀ ಕೃಷ್ಣ ಪಾರಿಜಾತ ನಾಟಕವು ರಂಗಭೂಮಿಯಲ್ಲಿ ತನ್ನದೆ ಅಸ್ತಿತ್ವ ಪಡೆದುಕೊಂಡು ಭಿನ್ನವಾಗಿದೆ.[೮]

ದೊಡ್ಡಾಟದಷ್ಟು ವಿಶಾಲವಾದ ರಂಗಸ್ಥಳ ಸಣ್ಣಾಟಕ್ಕೆ ಬೇಕಿಲ್ಲ. ಸುಮಾರು ೧೬ ಅಡಿ ಉದ್ದ, ೧೬ ಅಡಿ ಅಗಲದ ಅಟ್ಟ ಎರಡು ಅಥವಾ ಮೂರು ಅಡಿಗಳಷ್ಟು ಎತ್ತರವಿರುತ್ತದೆ. ಮುಂಭಾಗದಿಂದ ಎಂಟು ಅಡಿಗಳಷ್ಟು ಹಿಂದಕ್ಕೆ ಒಂದು ಬಟ್ಟೆಯನ್ನು ಇಳಿಬಿಟ್ಟಿರುತ್ತಾರೆ. ಬಟ್ಟೆಯ ಹಿಂಭಾಗದ ಸ್ಥಳವೇ 'ಒಳಅಟ್ಟ'. ಅಂದರೆ ನೇಪಥ್ಯ ಗೃಹ. ಹಿಮ್ಮೇಳದವರು ಇಲ್ಲಿ ನಿಲ್ಲುತ್ತಾರೆ. ರಂಗಸ್ಥಳದ ನಾಲ್ಕು ಮೂಲೆಗಳಲ್ಲೂ ಬಿದಿರಿನ ಗಳುಗಳನ್ನು (ಕಂಬ) ನೆಟ್ಟು ಹಿಂಬದಿಯನ್ನು ಚಾಪೆಕಟ್ಟಿ ಮುಚ್ಚುತ್ತಾರೆ. ರಂಗದ ಮೇಲ್ಭಾವಣಿಯನ್ನು ಹಾಗೆಯೇ ಮುಚ್ಚಿ ಅಟ್ಟದ ನಾಲ್ಕೂ ಕಡೆಗಳಲ್ಲಿ ತೆಂಗಿನಗರಿ, ಬಾಳೆಕಂಬ ಕಟ್ಟುತ್ತಾರೆ.

ಸಣ್ಣಾಟವು ಪದ್ಯದ ಅರ್ಥವನ್ನು ಒಡೆದು ಹೇಳುವ ಪಾತ್ರಧಾರಿಯ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ದೊಡ್ಡಾಟದಷ್ಟು ಆರ್ಭಟ ಇದರಲ್ಲಿಲ್ಲ. ಇಡೀ ನಾಟಕದ ಮುನ್ನಡೆಯನ್ನು ಸೂತ್ರಧಾರ ನಿಯಂತ್ರಿಸುತ್ತಾನೆ. ಸಣ್ಣಾಟದ ಆರಂಭದಲ್ಲಿ ಮೊದಲು ಗಣಸ್ತುತಿ, ತದನಂತರ ಶೈವರ ಆಟವಾದರೆ ಶಿವಪಾರ್ವತಿಯರು ಕಾಣಿಸಿಕೊಳ್ಳುತ್ತಾರೆ. ವೈಷ್ಣವರ ಆಟವಾದರೆ ರಾಧಾ ಕೃಷ್ಣರು ಕಾಣಿಸಿಕೊಳ್ಳುತ್ತಾರೆ. ಸಾಮಾಜಿಕ ಸಣ್ಣಾಟವಾದರೆ ಗಣಸ್ತುತಿಯ ನಂತರವೇ ಆಟ ಪ್ರಾರಂಭವಾಗುತ್ತದೆ.

ಸಣ್ಣಾಟದಲ್ಲಿ ಮಾತಿಗೇ ಪ್ರಾಶಸ್ತ್ಯ. ಪಾತ್ರಧಾರಿ ಹಾಡಿನೊಂದಿಗೆ ಮೂರು ಬಾರಿ ಸುತ್ತುತ್ತಾ ಕುಣಿಯುತ್ತಾನೆ. ಇದಕ್ಕೆ ಚಲ್ತಿ ಎನ್ನುತ್ತಾರೆ. ಖಂಜರಿಯಂತಹ ವಿಶಿಷ್ಟ ರೀತಿಯ ಚರ್ಮ ವಾದ್ಯ ಡಪ್ಪನ್ನು ಬಳಸುವದರಿಂದ ಮೊದಮೊದಲು ಸಣ್ಣಾಟವನ್ನು "ಡಪ್ಪಿನಾಟ" ವೆಂದೂ ಕರೆಯುತ್ತಿದ್ದರು. ಡಪ್ಪು ಎನ್ನುವದು ತಮಟೆಗಿಂತಲೂ ಚಿಕ್ಕದಾದ ಚರ್ಮವಾದ್ಯ. ಸಣ್ಣಾಟದಲ್ಲಿ ಹಾರ್ಮೋನಿಯಂ ಮತ್ತು ತಬಲಾ ವಾದ್ಯಗಳನ್ನು ಬಳಸುತ್ತಾರೆ. ಗಣೇಶನ ಪೂಜೆ, ನಾಟಕದ ಕೊನೆಯಲ್ಲಿ ಮಂಗಳ ಇವೆಲ್ಲಾ ಸಣ್ಣಾಟದಲ್ಲೂ ಇರುತ್ತವೆ.

ಅಟ್ಟದ ಮೇಲೆ ಬಲಭಾಗದಲ್ಲಿ ಡಪ್ಪಿನವನು ಇರುತ್ತಾನೆ. ಡಪ್ಪಿನವನು ನಿಂತಲ್ಲಿಂದ ಆಗಾಗ್ಗೆ ಸ್ಥಳ ಬದಲಾಯಿಸುತ್ತಿರುತ್ತಾನೆ. ಎಡಗಡೆಯಲ್ಲಿ ಹಾರ್ಮೋನಿಯಂ ವಾದಕನಿರುತ್ತಾನೆ. ಇವರ ಮಧ್ಯೆ ಮೇಳಗಾರ ಇರುತ್ತಾನೆ. ಸಣ್ಣಾಟದ ವೇಷಭೂಷಣ ಅತ್ಯಂತ ಸರಳ. ಪಾತ್ರಧಾರಿಗಳು ಬೆನ್ನಿನ ಹಿಂದಕ್ಕೆ ಉದ್ದವಾದ ಬಣ್ಣದ ಬಟ್ಟೆಯೊಂದನ್ನು ಕಟ್ಟಿಕೊಳ್ಳುತ್ತಾರೆ. ಸ್ತ್ರೀ ಪಾತ್ರಗಳನ್ನು ಪುರುಷರೇ

ನಿರ್ವಹಿಸುತ್ತಾರೆ. ಸ್ತ್ರೀ ಪಾತ್ರದಾರಿಗಳು ತಲೆಗೆ ಟೋಪಿ, ಮೂಗಿಗೆ ಬೊಟ್ಟು, ಕಿವಿಗೆ ಬೆಂಡೋಲೆ ಹಾಕಿಕೊಳ್ಳುತ್ತಾರೆ.

ಸಾಮಾಜಿಕ ಸಣ್ಣಾಟಗಳಲ್ಲಿ ಸಮಕಾಲೀನ ಪ್ರಜ್ಞೆ ಇರುವುದು ನಿಚ್ಚಳವಾಗಿ ಕಂಡುಬರುತ್ತದೆ. ೧೨ನೇ ಶತಮಾನದ ಅಂತ್ಯದಲ್ಲಿ ಪತ್ತಾರ ಮಾಸ್ತರ (ಪ್ರಾಥಮಿಕ ಶಾಲೆಯ ಶಿಕ್ಷಕರು) ರಚಿಸಿದ "ಸಂಗ್ಯಾ-ಬಾಳ್ಯಾ" ಎಂಬ ಜನಪ್ರಿಯ ಸಣ್ಣಾಟವು ಸಾಂಪ್ರದಾಯಿಕ ರಂಗಾಂಶಗಳನ್ನೆಲ್ಲಾ ಬಳಸಿಕೊಂಡು ಸಮಕಾಲೀನ ಸಮಾಜದ ಚಿತ್ರಣವನ್ನು ಜನಪದ ಶೈಲಿಯಲ್ಲಿ ಬಿಂಬಿಸುವ ಒಂದು ಅಪರೂಪದ ಕೃತಿಯಾಗಿದೆ.

"ವೈಷ್ಣವ ಪಂಥದ ಸಣ್ಣಾಟಗಳಲ್ಲಿ ಆಂಧ್ರದ "ಭಾಮಾ ಕಲಾಪಂ" ನ ವಸ್ತುವನ್ನುಳ್ಳ ಶ್ರೀಕೃಷ್ಣ ಪಾರಿಜಾತ ಅತ್ಯಂತ ಪ್ರಸಿದ್ಧಿ ಪಡೆದಿದೆ. ಪಾರಿಜಾತದ ಕಥೆಗಾರನನ್ನು ಇತರ ಪಾತ್ರಗಳು 'ದೂತೆ' ಎಂದು ಸಂಬೋಧಿಸುತ್ತಾರೆ. ಪಾರಿಜಾತದ ಆಟವು ಗಣೇಶನ ಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ. ಹಿಮ್ಮೇಳದಲ್ಲಿ ತಾಳಧಾರಿಯ ಜತೆಗೆ ಇನ್ನಿಬ್ಬರು ಸಂಗೀತಗಾರರಿರುತ್ತಾರೆ. ಪ್ರವೇಶಿಸುವ ಪಾತ್ರಗಳನ್ನು ದೂತೆ ಪರಿಚಯ ಮಾಡಿಕೊಡುತ್ತಾನೆ."[೬]

ಸಣ್ಣಾಟದ ಪ್ರದರ್ಶನಗಳಲ್ಲಿ ಮೊದಮೊದಲು ದೀವಟಿಗೆ ಅಥವಾ ಪಂಜನ್ನು ಉಪಯೋಗಿಸುತ್ತಿದ್ದರು. ಇತ್ತೀಚೆಗೆ ಪೆಟ್ರೋಮ್ಯಾಕ್ಸ್ ದೀಪಗಳು, ವಿದ್ಯುದ್ದೀಪ, ಧ್ವನಿವರ್ಧಕಗಳನ್ನು ಬಳಸುತ್ತಾರೆ.

ಕ್ರಮೇಣ ವೃತ್ತಿ ರಂಗಭೂಮಿಯ ಪ್ರಭಾವಕ್ಕೊಳಗಾದ ಸಣ್ಣಾಟಗಳು ಮೊದಲಿನ ಸರಳತೆ ಹಾಗೂ ನಾಟಕೀಯ ಘನತೆಯನ್ನು ಕಳೆದುಕೊಂಡವು. ನಿರ್ಮಾಪಕರಿಗೆ, ಸಣ್ಣಾಟದ ಪ್ರಸಾಧನ, ವೇಷಭೂಷಣಗಳನ್ನು ವರ್ಣರಂಜಿತಗೊಳಿಸುವ ಚಪಲವುಂಟಾಯಿತು. ಪೌರಾಣಿಕ ಪಾತ್ರಗಳು ತುಟಿಗೆ ರಂಗು ಹಚ್ಚಿಕೊಂಡು ಕಪ್ಪು ಕನ್ನಡಕ ಧರಿಸಿದವು. ವೃತ್ತಿರಂಗದ ಹಾಡುಗಳು ಸಿನಿಮಾ ಗೀತೆಗಳು ಸಣ್ಣಾಟಕ್ಕೆ ನಡುನಡುವೆ ತಲೆಹಾಕಿದವು. ದೂತೆಯ ಬದಲು ಹಾಸ್ಯಗಾರ 'ಲಲ್ಯ' ಎಂಬ ಖೋಜ ರಂಗದ ಮೇಲೆ ಕಾಣಿಸಿಕೊಂಡನು.

ಸುದೈವವಶಾತ್ ಹಳೆಯ ಸಣ್ಣಾಟ ಕಲಾವಿದರಲ್ಲಿ ಅನೇಕರು ಇನ್ನೂ ಜೀವಂತವಿರುವದರಿಂದ ಸಾಂಪ್ರದಾಯಿಕ ಸಣ್ಣಾಟ ಬದುಕಿ ಉಳಿದಿದೆ. ಈ ರಂಗಕಲೆಯ ಕಾಯಕಲ್ಪ ಕಾರ್ಯ ತುರ್ತಾಗಿ ನಡೆಯಬೇಕಾಗಿದೆ. ಒಟ್ಟಾರೆಯಾಗಿ ರಂಗಭೂಮಿ ಒಂದು ಜೀವಂತ ಕಲೆ. ಸಮಕಾಲೀನ ಸ್ಥಿತಿಗತಿಗಳಿಗೆ ಭಾವನಾತ್ಮಕವಾಗಿ ಮತ್ತು ವಿಚಾರಾತ್ಮಕವಾಗಿ ಸ್ಪಂಧಿಸುತ್ತಾ ಹೊಸಹೊಸ ಪ್ರಯೋಗಗಳಿಗೆ ಪ್ರೇರೇಪಿಸುತ್ತಾ ನಿರಂತರವಾಗಿ ಸಕ್ರಿಯವಾಗುತ್ತಾ ಹೋಗುವ ಮಾಧ್ಯಮ. ಯಾಕೆಂದರೆ ಶಾಸ್ತ್ರೀಯ ಸಂಗೀತ ಅಥವಾ ನೃತ್ಯದಂತೆ ಈ ಮಾಧ್ಯಮಕ್ಕೆ ಗುರು ಪರಂಪರೆಯಿಲ್ಲ. ಇದ್ದರೂ ಕೂಡಾ ಗುರುಗಳೆನ್ನಿಸಿಕೊಂಡವರು -ಕೊಳ್ಳುವವರು ಹತ್ತಾರು ಮಂದಿ. ಇಲ್ಲಿ ಪ್ರಯೋಗವೇ ಪರಂಪರೆಯಾಗಿದೆ. ಬದುಕಿನ ಪ್ರತಿಯೊಂದು ದಿನವು ಪ್ರಯೋಗಾಭ್ಯಾಸ.

೩.೪. ಶ್ರೀ ಕೃಷ್ಣ ಪಾರಿಜಾತ : ಹುಟ್ಟು ಬೆಳವಣಿಗೆ :

ಮಾನವನ ಉದಯದೊಡನೆಯೇ ಜಾನಪದ ಉದಯವಾಗಿದೆಯೆನ್ನಬೇಕಾಗುತ್ತದೆ. ಸಂಸ್ಕೃತಿ ಬೆಳೆದಂತೆ, ವಿಕಾಸ ಪಥದಲ್ಲಿ ಜ್ಞಾನಸಾಧನೆ ಸಂವರ್ಧನೆಗೊಂಡಂತೆ ಅವನ ಬದುಕಿನೊಡನೆ ಒಂದಲ್ಲ ಒಂದು ರೀತಿಯಲ್ಲಿ ಅವಿನಾಭಾವ ಸಂಬಂಧವನ್ನು ಜನಪದ ಸಾಹಿತ್ಯ ಉಳಿಸಿಕೊಂಡು ಬಂದಿದೆ. ನಾಗರಿಕತೆಯ ಸುಳಿಯಿಂದ ದೂರವಾಗಿ ಶುದ್ಧ ಜಾನಪದದ ಆವರಣದಲ್ಲಿ ಬದುಕುವ ಆದಿವಾಸಿಗಳ ಬದುಕನ್ನು ಪರಿಶೀಲಿಸಿದಾಗ ಅವರ ಬದುಕಿನ ಸಮಗ್ರವೂ ಜಾನಪದವೇ ಆಗಿರುತ್ತದೆ. ಶಿಷ್ಟ ವಿದ್ಯೆಯ ಪ್ರಭಾವದಿಂದ ವಂಚಿತವಾದ ಅವರು ತಮ್ಮದೇ ಆದ ಸಾಂಪ್ರದಾಯಿಕ ಜ್ಞಾನದ ಪರಂಪರೆಯನ್ನು ಪಡೆದುಕೊಂಡಿರುತ್ತಾರೆ. ಅವರ ಪಾಲಿಗೆ ಪ್ರಕೃತಿಯೇ ಗುರು, ಜೀವನವೇ ವಿದ್ಯಾಕ್ಷೇತ್ರ, ಬಾಳಿನ ಸೋಲು, ಗೆಲುವುಗಳಲ್ಲಿ, ತಿರುವು ಮುರುವುಗಳಲ್ಲಿ, ತಮ್ಮ ಅಗತ್ಯಕ್ಕೆ ತಕ್ಕಂತೆ ತಮ್ಮದೇಯಾದ ವಿದ್ಯಾ ಸಂಪ್ರದಾಯವನ್ನು ಬೆಳೆಸಿಕೊಳ್ಳುತ್ತಾರೆ. ದಕ್ಷಿಣ ಅಮೆರಿಕಾದ ಇಂಡಿಯನ್ನರ ಪಾಲಿಗೆ ಅಲ್ಲಿನ ಜನಪದ ಕಥೆಗಳೇ ಸಕಲ ವಿದ್ಯೆಯ ಆಗರ. ಆಫ್ರಿಕೆಯ ಗಾದೆಗಳಲ್ಲಿ ನ್ಯಾಯ, ನೀತಿ, ಧರ್ಮಗಳೆಲ್ಲ ಸಮಾವೇಶಗೊಳ್ಳುತ್ತವೆ. ನ್ಯಾಯ ತೀರ್ಮಾನಕ್ಕೂ ಗಾದೆಗಳನ್ನೇ ಸಂಪೂರ್ಣವಾಗಿ ಅವಲಂಬಿಸಿರುತ್ತಾರೆ. ಕರ್ನಾಟಕದ ಕಾಡು ಗೊಲ್ಲರಿಗೆ ಮತ ಸಂಬಂಧವಾದ ಆಚಾರ ವಿಚಾರಗಳನ್ನು ಕೆಲವು ಲಾವಣಿಗಳೇ ಸಿದ್ಧಪಡಿಸುತ್ತವೆ. ಸಾಮಾನ್ಯರ ಪಾಲಿಗೆ ಅವರ ಕತೆ, ಗೀತೆ, ಗಾದೆಗಳು ಅವರ ಜೀವನಕ್ಕೆ ಮಾರ್ಗದರ್ಶಕವಾಗಬಲ್ಲ ಅಮೂಲ್ಯ ಜ್ಞಾನದ ಗಣಿಗಳೂ ಆಗುತ್ತವೆ. ಜೊತೆಗೆ ಮನರಂಜನೆಯ ಮುಖ್ಯ ಸಾಧನಗಳು ಆಗುತ್ತವೆ.

ಬಯಲಾಟದ ಪ್ರಬೇಧಗಳಲ್ಲಿ ಮುಖ್ಯವಾಗಿ, ಮೂಡಲಪಾಯ, ಪಡುವಲಪಾಯ. ಇದರೊಂದಿಗೆ ದೊಡ್ಡಾಟ– ಸಣ್ಣಾಟ, ಘಟ್ಟದ ಕೋರೆ, ಬಡಗತಿಟ್ಟು, ಉತ್ತರ ಕನ್ನಡ ಶೈಲಿ, ಡಪ್ಪಿನಾಟ, ಕೃಷ್ಣ ಪಾರಿಜಾತ ಮುಂತಾದವುಗಳು ಪ್ರದರ್ಶಿತಗೊಳ್ಳುತ್ತವೆ.

ಕ್ರಿ.ಶ. ೧೯೦೦ರ ಸುಮಾರಿಗೆ ಕನ್ನಡ ನಾಡಿನ ತುಂಬ ಬಯಲಾಟಗಳು ತಮ್ಮ ಪರಾಕಾಷ್ಠತೆಯನ್ನು ಮೆರೆದಿದ್ದವು. ಡಾ. ಶ್ರೀರಾಮ ಇಟ್ಟಣ್ಣವರ ಹೇಳುವಂತೆ, "ಉತ್ತರ ಕರ್ನಾಟಕದ ದೊಡ್ಡಾಟ, ಸಣ್ಣಾಟಗಳ ಪರಂಪರೆಯ ಒಂದು ಸ್ಪಷ್ಟ ಚಿತ್ರಣ ನಮಗೆ ಇಂದಿಗೂ ಸಿಕ್ಕಿಲ್ಲ. ದೊಡ್ಡಾಟ, ಸಣ್ಣಾಟಗಳ ಬಗೆಗೆ ಬರೆದಿಟ್ಟ ಚರಿತ್ರೆಯಾಗಲೀ, ಲಕ್ಷಣ ಗ್ರಂಥಗಳಾಗಲಿ ಒಂದು ಇಲ್ಲ. ಹೆಸರಿಗೆ ತಕ್ಕಂತೆ ಅವುಗಳ ಚರಿತ್ರೆಯೂ ಬಯಲಲ್ಲೇ ಬರೆದ ಕಥೆಯಾಗುಳಿದಿದೆ. ಆದುದರಿಂದ ಇದಮಿತ್ಥಂ ಎಂದು ಹೇಳಬೇಕಾದ ಉತ್ತರಗಳಿಗಿಂತ ಇಂದು ನಮ್ಮಲ್ಲಿ ಪ್ರಶ್ನೆಗಳೇ ಅಧಿಕವಾಗಿವೆ ಎನ್ನುತ್ತಾರೆ".[೧೦]

ಉತ್ತರ ಕರ್ನಾಟಕದ ಹಳ್ಳಿ ಪಟ್ಟಣಗಳಲ್ಲಿ ಶೋಧಿಸಿದರೆ ನೂರಾರು ಆಟದ ಕಥೆಗಳು, ಕಾಗದದ ಹಸ್ತಪ್ರತಿ ಲಿಖಿತ ಪ್ರತಿಯಲ್ಲಿ ದೊರೆಯುತ್ತವೆ. ಕನ್ನಡ, ಮೋಡಿ, ನಾಗರ ಲಿಪಿಯಲ್ಲಿ ಲಿಖಿತವಾದ ಸುಮಾರು ೭೦–೮೦ ವರ್ಷಗಳ ಹಿಂದೆ ಅಲ್ಪ ಸಂಖ್ಯೆಯಲ್ಲಿ ಮುದ್ರಿತವಾದ ಈ

ಗ್ರಂಥರಾಶಿ ಹಾಗೂ ಕುಲಗೆಟ್ಟು ಜೀರ್ಣಾವಸ್ಥೆಯಲ್ಲಿದ್ದರೂ ಆಗೀಗ ಪ್ರದರ್ಶನವಾಗುತ್ತಿರುವ ಪ್ರಯೋಗಗಳು ಮಾತ್ರ ಕಾಣಸಿಗುತ್ತವೆ.

"ಕನ್ನಡದ ಅಟ್ಟದಾಟಗಳನ್ನು ಐದು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ೧. ದೊಡ್ಡಾಟ ೨. ಸಣ್ಣಾಟ ೩. ಪಾರಿಜಾತ ೪. ದಾಸರಾಟ ೫. ಯಕ್ಷಗಾನ. ಇವು ಕರ್ನಾಟಕದ ಪ್ರಮುಖ ಆಟಗಳು. ಈ ಜನಪ್ರಿಯ ಬಯಲಾಟಗಳಲ್ಲಿ ಶ್ರೀ ಕೃಷ್ಣ ಪಾರಿಜಾತವೊಂದು, ಡಾ. ಚಂದ್ರಶೇಖರ ಕಂಬಾರರವರು, ಉತ್ತರ ಕರ್ನಾಟಕದ ಬಯಲಾಟಗಳ ಕುರಿತು ಪ್ರಸ್ತಾಪಿಸುತ್ತಾ"[೧೧] ಗೊಂಬೆಯಾಟ, ತೊಗಲು ಗೊಂಬೆಯಾಟಗಳನ್ನುಳಿದು ಮಿಕ್ಕ ದೊಡ್ಡಾಟ, ಸಣ್ಣಾಟ, ಕೃಷ್ಣ ಪಾರಿಜಾತ, ದಾಸರಾಟ ಪ್ರತಿಯೊಂದು ಪ್ರಕಾರವು ತನ್ನ ಗುಣವೈಶಿಷ್ಟ್ಯಗಳನ್ನು ಈಗಲೂ ಕಾಯ್ದುಕೊಂಡು ಬರುತ್ತಿವೆ. ಅವರೇ ಹೇಳುವ ಹಾಗೆ ಪಾರಿಜಾತವೂ ಒಂದು ಸ್ವತಂತ್ರ ದೃಶ್ಯ ಪ್ರಕಾರ ಎಂಬುದನ್ನು ಅರಿಯಬಹುದು.

'ಪಾರಿಜಾತ' ಒಂದು ಜನಪದ ರಂಗಭೂಮಿಯ ಆಟ. ಇದರಲ್ಲಿ ಅನೇಕ ವಿಧಗಳಿದ್ದರೂ ಪಾರಿಜಾತವೆಂದರೆ ಶ್ರೀಕೃಷ್ಣ ಪಾರಿಜಾತವೆಂದೇ ಹೇಳುವಷ್ಟು ಜನಪ್ರಿಯವಾಗಿದೆ. ಕೃಷ್ಣ ಪಾರಿಜಾತ ಇದನ್ನು ಅಭಿನಯಿಸಿದ ಪ್ರಸಿದ್ಧ ತಂಡಗಳಲ್ಲಿ ಪ್ರಮುಖವಾಗಿ ಕೌಜಲಗಿ ನಿಂಗಮ್ಮ, ಸವಡಿ ಮಲ್ಲಯ್ಯ, ಚೂಡಪ್ಪ, ಅರಿಯಾರ, ಕುಂಚನೂರ, ಜಮಖಂಡಿ ಅಪ್ಪಾಲಾಲ್, ಮಹಾಲಿಂಗಪುರ, ಬೆನಕಟ್ಟಿ, ಬೈಲಹೊಂಗಲದ ಒಂದೆರೆಡು ತಂಡಗಳು ಪ್ರಸಿದ್ಧವಾಗಿವೆ.

ಕರ್ನಾಟಕದಲ್ಲಿ ಶ್ರೀಕೃಷ್ಣ ಪಾರಿಜಾತ ಸೆಲೆಯೊಡೆದುದು ರಾಯಚೂರು ಜಿಲ್ಲೆಯಲ್ಲಿ. ಮುಂದೆ ಆಟವಾಗಿ ಬೆಳೆಯುತ್ತ ಜನಪದರ ಕಲಾಭಿವ್ಯಕ್ತಿಗೆ ವಾಹಕವಾಗುತ್ತಾ ಸುಮಾರು ನೂರು ವರ್ಷಗಳಿಂದೀಚೆಗೆ ಲಕ್ಷೋಪಲಕ್ಷ ಪ್ರೇಕ್ಷಕರ ಮನ ಸೆಳೆದಿದೆ. ವಿಜಯಪುರ, ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಕೃಷ್ಣೆಯ ಎಡಬಲದಲ್ಲಿ ಹಾಗೂ ಕೃಷ್ಣಾ ಘಟಪ್ರಭಾ ಮಧ್ಯ ಪ್ರದೇಶ ಅಥವಾ ತೀರಪ್ರದೇಶಗಳು ಪಾರಿಜಾತದ ಸೊಬಗನ್ನು ಹೆಚ್ಚಿಸಿವೆ.

ವಿಷ್ಣುಮಹಿಮೆ ಅಥವಾ ಶ್ರೀ ಕೃಷ್ಣ ಚರಿತ್ರೆ ಪುರಾಣ ವಲಯದಲ್ಲಿ ಪಡೆದುಕೊಂಡ ಹರವು ಬಹಳ ದೊಡ್ಡದು. ಪುರಾಣ ಪುಟಗಳನ್ನು ಅವಲೋಕಿಸಿದಾಗ ಶ್ರೀ ಕೃಷ್ಣ ಪಾರಿಜಾತಕ್ಕೆ ಸಂಬಂಧಪಟ್ಟ ವಿಷಯ ತೀರ ಸಣ್ಣದು. ಈ ಕಥೆಯಲ್ಲಿ ಸುತ್ತಮುತ್ತಲಿನ ಘಟನಾವಳಿಗಳು ನಾಟಕೀಯ ಗುಣಗಳಿಂದ ಕೂಡಿದ್ದರಿಂದ ಪಾರಿಜಾತ ವಿದ್ವಾಂಸರ ಮನ್ನಣೆ ಪಡೆದಂತೆ ಸಾಮಾನ್ಯರನ್ನು ಆಕರ್ಷಿಸಿತು.

ಶ್ರೀಕೃಷ್ಣ ಪಾರಿಜಾತಕ್ಕೆ ಆಕರವಾಗಿರುವ ವಿಷಯ ಅನೇಕ ಆಯಾಮಗಳ ಮೂಲಕ ಅಟ್ಟದ ಮೇಲಿನ ಆಟವಾಗಿ ಜಾನಪದಕ್ಕೆ ತೊಡಗಿದ ಮೇಲೆ ಸಾಕಷ್ಟು ಸ್ಥಿತ್ಯಂತರಗಳನ್ನು ಕಂಡಿದೆ.

"ಕರ್ನಾಟಕದ ಏಕೀಕರಣದ ಪಿತಾಮಹರೆನಿಸಿದ ಕೌಜಲಗಿ ಶ್ರೀನಿವಾಸರಾಯರು ಸ್ವಾತಂತ್ರ್ಯ ಯೋಧ ಸಾಹಿತಿ ಕೌಜಲಗಿ ಹಣಮಂತರಾಯರು, ಸಾಹಿತಿ ಸಂಶೋಧಕರಾದ ಕೆ.ಜಿ. ಕುಂದಣಗಾರರು

ಹುಟ್ಟಿ ಬೆಳೆದ ಈ ನೆಲದಲ್ಲಿ ಕೌಜಲಗಿ ನಿಂಗಮ್ಮವೆಂಬ ಪಾರಿಜಾತ ಪುಷ್ಪ ಅರಳಿದ್ದು ಹೆಮ್ಮೆಯ ಸಂಗತಿ."೨

ಕ್ರಿ.ಶ ೪ನೇ ಶತಮಾನದಲ್ಲಿ ವೈದಿಕಧರ್ಮ ಬೌದ್ಧಧರ್ಮವನ್ನು ಎದುರಿಸಲಾಗದೆ ಜನಪ್ರಿಯವಾಗುತ್ತಿದ್ದ ಭಾಗವತ ಧರ್ಮದೊಡನೆ ಸ್ನೇಹ ಸಂಬಂಧವನ್ನು ಬೆಳೆಸಿ ವೈದಿಕ ಸಾಹಿತ್ಯ ವಿಷ್ಣುವನ್ನು ಭಗವಂತನೊಡನೆ ಸಮೀಕರಿಸಿತು. ಮುಂದೆ ವೈಷ್ಣವ ಧರ್ಮವೆಂಬುದು ಭಾಗವತದ ಧರ್ಮದ ಇನ್ನೊಂದು ಪರಿಭಾಷೆಯಾಗಿ ರೂಪುಗೊಂಡಿದೆ. ವೈದಿಕ ಧರ್ಮದ ಫಲವಾಗಿ ಭಾಗವತ ಧರ್ಮ ಕೂಡ ವೈದಿಕವಾಗಿ ಪರಿಣಮಿಸಿತು.

ವೈದಿಕ ಸಂಪ್ರದಾಯದಲ್ಲಿ ಸೇರಿಕೊಂಡ ಭಕ್ತಿಪಂಥ ದಕ್ಷಿಣದ ಆಳ್ವಾರರಿಂದ ಅಸ್ತಿತ್ವ ಉಳಿಸಿಕೊಂಡು ಮುಂದೆ ರಾಮಾನುಜರಿಂದ ಗಟ್ಟಿಯಾಗಿ ಕಾಲೂರಿ, ಮಧ್ವಾಚಾರ್ಯರ ಮೂಲಕ ಕರ್ನಾಟಕದ ಧಾರ್ಮಿಕ ನೆಲೆಯಲ್ಲಿ ಒಂದು ಮಹಾ ಸಂಘಟನೆಯಾಗಿ ಬೆಳೆದು ಬಂದಿತು. ತಮಿಳುನಾಡಿನ ಆಳ್ವಾರರು ಒಂದರ್ಥದಲ್ಲಿ ದಕ್ಷಿಣ ಭಾರತದ ಭಕ್ತಿಯ ಸಂಪತ್ತು ವೈದಿಕ ಮತ್ತು ಭಾಗವತದ ಸುಂದರ ಸಮನ್ವಯದಂತಿದ್ದಾರೆ. ಆಳ್ವಾರರು ಕ್ರಿಸ್ತಶಕದ ಆರಂಭದಿಂದ ಕ್ರಿ.ಶ. ೯ನೇ ಶತಮಾನದವರೆಗಿನ ಅವಧಿಯಲ್ಲಿ ಜೀವಿಸಿದ್ದರೆಂದು ವಿದ್ವಾಂಸರು ವಾದಿಸುತ್ತಾರೆ. ಕೃಷ್ಣ ಮತ್ತು ವಿಷ್ಣುವಿನಲ್ಲಿ ಭೇದವೆನಿಸಿದವರಲ್ಲ. ಕೃಷ್ಣ ಮತ್ತು ವಿಷ್ಣುವಿನ ಸಮಾಗಮವೆಂದರೆ ಎರಡು ಮತಗಳ ಏಕತೆ. ಆಳ್ವಾರರ ಬೋಧನೆಯಲ್ಲಿ ವೇದಗಳ ಉಕ್ತಿ ತುಂಬಿರುವಂತೆ ಭಾಗವತರ ಭಕ್ತಿ ಪರವಶತೆಯು ಎದ್ದು ಕಾಣುತ್ತದೆ. ಅಭಿವ್ಯಕ್ತಿಯಲ್ಲಿ ಸಮನ್ವಯ ವ್ಯಕ್ತಿತ್ವದಲ್ಲಿ ಪ್ರಮುಖವಾಗಿ ಭಕ್ತಿ ಪೂರಿತವಾದದು. ಆಳ್ವಾರರದು ಅರ್ಪಣಾಭಾವ. "ತಾನೊಲಿದವರಿಗೆ ಆತ್ಮ ತನ್ನ ಮೈಯನ್ನು ವಿವರವಾಗಿ ತೆರೆದು ತೋರುತ್ತದೆ. ಶ್ರುತಿ ವಾಕ್ಯಕ್ಕೆ ಈ ಆಳ್ವಾರರಿಗಿಂತ ಉತ್ತಮ ನಿದರ್ಶನ ಸಿಗಲಾರದು."

ತಮಿಳು ಪ್ರಾಚೀನ ಕಾವ್ಯಗಳಲ್ಲಿ 'ಶಿಲಪ್ಪಧಿಕಾರಮ್' ಎಂಬುದು ಒಂದು ಉದ್ಗ್ರಂಥ. ಕ್ರಿಸ್ತಾಬ್ದದ ಪ್ರಾರಂಭದಲ್ಲಿ ರಚಿತವಾದುದು. ಇದರಲ್ಲಿ ಅಲೆಮಾರಿ ಜನಾಂಗದ ಸ್ತ್ರೀಯೊಬ್ಬಳು ಭವಿಷ್ಯ ಹೇಳುವ, ಕಣಿ ಹೇಳುವವಳಾಗಿ ರಾಜರಾಣಿಯರಲ್ಲಿಗೆ ಬರುವ ವರ್ಣನೆಯಿದೆ. ಈ ನಾರಿಗೆ ಮುಖದ ತುಂಬೆಲ್ಲಾ ಸುಂದರವಾದ ಬಣ್ಣದ ಚುಕ್ಕೆಗಳು. ಹೀಗೆ ಚುಕ್ಕೆಗಳಿದ್ದಂತೆ ಅವಳ ರೂಪದಲ್ಲಿ ಮೋಹಿತರಾದ ಗಂಧರ್ವ ಮೊದಲಾದ ಶ್ರೀ ಮಾನವರು ಅವಳನ್ನು ಅಪಹರಿಸಲಾರರು ಎಂದು ನಂಬಿಕೆ. ಸಂಚಾರಿ ನಟಿ, ನೃತ್ಯಗಾತಿ, ಕಣಿಹೇಳುವ ಕೊರವಂಜಿ ಇವಳು. ಇದೇ ದೃಶ್ಯ ಕಾವ್ಯವನ್ನೇ ನೃತ್ಯರೂಪಕ್ಕೆ ಅಳವಡಿಸಿದ 'ಕೊರವಂಜಿ' ನೃತ್ಯ ನಾಟ್ಯವಿದೆ. ಇದು ಭರತನಾಟ್ಯ ನೃತ್ಯಕ್ಕಿಂತ ಭಿನ್ನವಾಗಿದೆ. ತಂಜಾವೂರು ವಿಭಾಗದಲ್ಲಿ ಈ ತರಹದ ನೃತ್ಯ ಇಂದಿಗೂ ಜನಪ್ರಿಯವಾಗಿದೆ. ಇದರಲ್ಲಿ ವಶಿಷ್ಠ ದೇವಸ್ಥಾನದ ಅಧಿದೇವತೆಯನ್ನು ಅರಸುತ್ತ ನಾಯಕ, ನಾಯಕಿಯರು ನರ್ತಿಸುತ್ತಾರೆ. ಆದರೆ ಕರ್ನಾಟಕದ ಒಂದು ಜನಪದ ರಂಗಭೂಮಿ ಉತ್ತರಾರ್ಧದಲ್ಲಿ ಬರುವ ಒಂದು ಜನಪ್ರಿಯ ಪಾತ್ರ 'ಕೊರವಂಜಿ' ಎಂದಿದೆ. ಮೇಲೆ ವರ್ಣಿಸಿದ ಎಲ್ಲಾ ಲಕ್ಷಣಗಳನ್ನು

ಮತ್ತು ನೃತ್ಯ ಅಭಿನಯವನ್ನು ಇಲ್ಲಿ ಕಾಣಬಹುದು. 'ಪಾರಿಜಾತ'ವೆನ್ನುವುದು ಒಂದು ಜನಪದ ರಂಗಭೂಮಿಯ ಆಟ. ಈ ಆಟ ಪ್ರಾರಂಭವಾಗುವ ವಿಧಾನ ಈ ರೀತಿಯಾಗಿ ಕಂಡುಬರುತ್ತದೆ.

ಶ್ರೀ ಗಣೇಶನ ಸ್ತುತಿಯೊಂದಿಗೆ ಆಟದ ಪ್ರಾರಂಭ, ನಂತರ ಸ್ಥಾನಿಕ ದೇವತೆಗಳ ಪೂಜೆ. ಈ ತಂಡದಲ್ಲಿ ಕಥೆಗಾರ, ಭಾಗವತ(ಈತನನ್ನು ನಟ ನಟಿಯರು 'ದೂತಿ' ಎಂದೇ ಸಂಬೋಧಿಸುವರು) ಇರುತ್ತಾರೆ. ಹಾಡು ಹೇಳಿ ಪಾತ್ರಗಳ ಹಿಮ್ಮೇಳವನ್ನು ಕಲ್ಪಿಸಲು ಇನ್ನಿಬ್ಬರು ಅಥವಾ ಮೂವರು ತಾಳದೊಂದಿಗೆ ಇರುವರು. ಹಾರ್ಮೋನಿಯಂ, ಮದ್ದಳೆಗಳನ್ನು ಕಾಣಬಹುದು. ಏಳೆಂಟು ವರ್ಷದ ಹುಡುಗನಿಗೆ ಗಣೇಶನ ಸೊಂಡಿಲು, ಕಿರೀಟಗಳನ್ನು ಕಟ್ಟಿ ಆಸನದ ಮೇಲೆ ಪವಡಿಸಿದಂತೆ, ಗಣೇಶನ ಶೃತಿಯೊಂದಿಗೆ ಕೃಷ್ಣ ಪಾರಿಜಾತವು ಪ್ರಾರಂಭವಾಗುತ್ತದೆ. ಇಲ್ಲಿ ರಂಗಭೂಮಿಯ ವಾದ್ಯಗಳ ಮಿಶ್ರಣವನ್ನು ಕಾಣಬಹುದು. ಹಾರ್ಮೋನಿಯಂ, ತಬಲಾ, ತಾಳ ಮತ್ತು ಕೆಲವು ಬಾರಿ ಶಹನಾಯಿಗಳನ್ನು ಕಾಣಬಹುದು. ಮೂಡಲಪಾಯದ ದೊಡ್ಡಾಟದಲ್ಲಿಯ ಸಾರಥಿಯ ಸ್ಥಾನವನ್ನು ಇಲ್ಲಿ 'ಭಾಗವತ'ನು ವಹಿಸುವನು. ಅಂದರೆ ರಂಗವನ್ನು ಪ್ರವೇಶಿಸಿದ ಪ್ರತಿ ಪಾತ್ರವನ್ನು ಸ್ವಾಗತಿಸಿ ಅವರನ್ನು ಪ್ರೇಕ್ಷಕರಿಗೆ ಪರಿಚಯಮಾಡಿಕೊಡುವುದೇ ಆಗಿದೆ. ಅನೇಕ ಸಲ ಪಾತ್ರಗಳೊಂದಿಗೆ ಸಂಭಾಷಣೆಯಲ್ಲಿ ತೊಡಗುವುದೂ ಉಂಟು. ಭಾಗವತನನ್ನು ಪಾತ್ರಗಳು "ದೂತಿ" ಎಂದು ಸಂಬೋಧಿಸುತ್ತೇವೆ. ಹೆಣ್ಣು ವೇಷದಲ್ಲಿ ಸ್ತ್ರೀಯರನ್ನೇ ಕಾಣಬಹುದು. ನಾಯಕಿ, ಉಪನಾಯಕಿ ತೊಂದರೆಯ ಸಂದರ್ಭಗಳಲ್ಲಿ ಅದರಲ್ಲಿಯೂ ಅವಳ ಪ್ರಿಯಕರನಿಗೆ 'ವಿಷಯ' ತಿಳಿಸಬೇಕಾದ ಪ್ರಸಂಗಗಳಲ್ಲಿಯೂ 'ದೂತಿ' ಬೇಕೆ ಬೇಕು. 'ದೂತ'ನಿದ್ದರೂ ಅವನಿಂದ 'ಗುಟ್ಟು' ಉಳಿಯಲಾರದೆಂದೂ, ಅಥವಾ ಸ್ತ್ರೀಯರು ದೂತನೊಂದಿಗೆ ಸರಾಗವಾಗಿ ಮಾತನಾಡುವುದು ಸಾಂಪ್ರದಾಯಕ ಸ್ತ್ರೀಯರಿಗೆ ಕಠಿಣವಾಗುವುದರಿಂದ 'ದೂತಿ'ಯೆಂದು ಸಂಬೋಧಿಸುತ್ತಿರಬೇಕು.

೧೮೮೦ರ ಸುಮಾರಿಗೆ ಕೌಜಲಗಿ ನಿಂಗಮ್ಮ ಎಂಬ ನಟಿ ತನ್ನ ತಂಡದೊಂದಿಗೆ ಕೃಷ್ಣ ಪಾರಿಜಾತದ ಆಟಗಳನ್ನು ಆಡುತ್ತ ಕರ್ನಾಟಕದ ಹಳ್ಳಿಗಳನ್ನು ತಿರುಗಿದ್ದಾಗಿ ತಿಳಿದುಬಂದಿದೆ. ಕೃಷ್ಣ ಪಾರಿಜಾತದಲ್ಲಿ ಇತರ ಜನಪದ ಆಟದ ರಚನೆಗಿಂತ ಹೆಚ್ಚಿನ, ಕ್ರಮಬದ್ಧವಾದ ಸಂಭಾಷಣೆ, ರಂಗಭೂಮಿಯ ಲಾಲಿತ್ಯವುಳ್ಳ ಹಾಡುಗಳ ಸಂಗೀತ, ಸ್ತ್ರೀಪಾತ್ರದಲ್ಲಿ ಇವು ಹೆಚ್ಚಿನ ಜನಾದರಣೀಯ ಕೇಂದ್ರಗಳಾದವು. ಈ ಸುಮಾರಿಗೆ ಜನಪದ ಸಂಗೀತವನ್ನು ಅಭ್ಯಾಸಿಸುವುದನ್ನು, ಹಾಡುವುದನ್ನು ಬಿಟ್ಟು ಮರಾಠಿ ರಂಗಭೂಮಿಯ ಲಘು ಸಂಗೀತದತ್ತ ಹೆಚ್ಚು ಆಕರ್ಷಿತರಾದರು. ಜನಪದ ರೀತಿ ನೀತಿಗಳ ಶೈಥಿಲ್ಯವು ಸ್ಪಷ್ಟವಾಗಿ ಕಾಣಬರಲು ಪ್ರಾರಂಭಿಸಿದವು.

೩.೫. ಶ್ರೀಕೃಷ್ಣ ಪಾರಿಜಾತ ಪೂರ್ವ ರಂಗ :

ಪಟ್ಟಣಕ್ಕೆ ಮೊಸರು ಮಾರಲು ಹೊರಟ ಗೊಲ್ಲತಿಯ ಪ್ರವೇಶ. ಸುಂಕಕ್ಕಾಗಿ ಗೊಲ್ಲನ ಕಾಟ, ಸಂವಾದವು ವಿವಿಧ ವಿಷಯಗಳನ್ನು ಬಳಸಿ, ಸಾಗಿ ಹಾಸ್ಯದ ಹೊನಲು ಹರಿಯುತ್ತದೆ.

"ಹೆಪ್ಪ ಮುರಿಯದ ಮೊಸರು
ಜಪ್ಪಿಸಿ ನಾ ತಂದೆ..."

ಎಂದು ಗೊಲ್ಲತಿ ಶ್ರೇಷ್ಠತರವಾದ ಮೊಸರನ್ನು ಮಾರುವುದಾಗಿಯೂ, ನಂತರ ಮೊಸರು ಕಡೆದು ಬೆಣ್ಣೆ ಪಡೆಯುವಂತೆ ಭಕ್ತಿ ಮಾರ್ಗದಲ್ಲಿ ಸಾಗಿ ದೇವಸಾನಿಧ್ಯ ಪಡೆಯಬೇಕೆಂದು ಧಾರ್ಮಿಕ ವಿಚಾರಗಳು ಸಹ ಬರುತ್ತವೆ. ಅವಳಲ್ಲಿ ಸುಂಕ ಕೊಡಲು ಕಾಸಿಲ್ಲ. ಅವಳು ಕೊಡಳು, ಇವನು ಬಿಡಲ್ಲ, ನಂತರ ಮಧ್ಯಸ್ತಿಕೆ ವಹಿಸಿಕೊಡಲು ಸಮೀಪದ ಗೋಕುಲಕ್ಕೆ ಹೊರಡುವರು. ಇಲ್ಲಿ ಪಾರಿಜಾತದ ಕಥೆ, ಮಹಾಕಾವ್ಯಗಳಲ್ಲಿ ವರ್ಣಿಸಿದ ಭಾಗದಂತೆ ನಡೆಯುತ್ತದೆ. ಕೃಷ್ಣನು ಪಾರಿಜಾತ ಪುಷ್ಪವನ್ನು ರುಕ್ಮಿಣಿಗೆ ಕೊಡುವನು. ಅದನ್ನು ನಾರದ ಮಹರ್ಷಿ ಕೃಷ್ಣನಿಗೆ ಅರ್ಪಿಸಿರುವನು. ಕೃಷ್ಣನ ಇನ್ನೋರ್ವ ಸತಿ ಸತ್ಯಭಾಮೆ, ಅವಳಿಗೆ ರುಕ್ಮಿಣಿಯಲ್ಲಿ ಸವತಿ ಮತ್ಸರ. ಕೃಷ್ಣನು ರುಕ್ಮಿಣಿಯಲ್ಲಿ ಹೆಚ್ಚು ಅನುರಾಗ ಹೊಂದಿರುವನು, ಅವಳಲ್ಲಿ ಅವನ ಪ್ರೇಮ ಹೆಚ್ಚು ಎಂದು ಭಾವಿಸಿ, ಅನೇಕ ದಿನಗಳಿಂದ ತನ್ನ ಸೌಧದತ್ತ ಕೃಷ್ಣ ಬಾರದಿರುವ ಕಾರಣವನ್ನು ಗೊತ್ತು ಹಚ್ಚುವವಳಂತೆ ವಿಚಾರ ಮಗ್ನಳಾಗಿರುವಳು? ನಾರದರ ಸವಾರಿ ಚಿತ್ತೈಸಿ, ಕೃಷ್ಣನು ಅಪರೂಪವಾದ ಪಾರಿಜಾತ ಪುಷ್ಪವನ್ನು ರುಕ್ಮಿಣಿಗೆ ಮಾತ್ರ ಕೊಟ್ಟನೆಂದೂ ಅದೂ ಪರಮಾತ್ಮನೇ ಅವಳ ಮುಡಿಗೆ ಸಿಲುಕಿಸಿದನೆಂದೂ ವರ್ಣಿಸಿ ಹೇಳಿದಾಗ, ಮೊದಲೇ ಸವತಿ ಮತ್ಸರ ತುಂಬಿದ ಸತ್ಯಭಾಮೆಯಲ್ಲಿಗೆ ಬಂದಾಗ ಕಂಡಿದ್ದೇನು? ಮುನಿದಸತಿ, ವಿಷಯವನ್ನು ಊಹಿಸಿ ಕಾಡಿಸಿ ಅವಳಿಂದ ತಿಳಿದು ಅವಳಿಗಾಗಿ ಅಮರಾವತಿಯಿಂದ ಪಾರಿಜಾತ ಪುಷ್ಪವನ್ನೇ ಅಲ್ಲ ಆ ಮರವನ್ನೇ ತಂದು ಕೊಡುವುದಾಗಿ ಹೇಳಿ ಅಮರಾವತಿಯತ್ತ ಪ್ರಯಾಣ.

ಆನಂತರ ಕಥೆ ಸಾಗಿ ಪಾರಿಜಾತ ಪುಷ್ಪವನ್ನು ಸತ್ಯಭಾಮೆಯು ಪಡೆಯುವಳು. ಸತ್ಯಭಾಮೆಯಲ್ಲಿ ಅಹಂಕಾರವು ಉದಯಿಸಿ ಕೃಷ್ಣನಿಗೆ ತಾನು ಮೆಚ್ಚಿದ ಮಡದಿಯೆಂಬ ಭಾವನೆಯಲ್ಲಿ ಗರ್ವದ, ಮೋಹದ ಮಮಕಾರವು ಮೂಡುವುದು. ಈ ಮಮಕಾರವನ್ನು ಹೋಗಲಾಡಿಸಲು ನಿಶ್ಚಯಿಸಿದ ನಾರದರು ಸತ್ಯಭಾಮೆಗೆ ವ್ರತವೊಂದನ್ನು ಆಚರಿಸಲು ಹೇಳಿ, ಕೃಷ್ಣನ ತುಲಾಭಾರದ ದಿನದಂದು ತನ್ನಲ್ಲಿ ಸರ್ವ ಆಭರಣಗಳನ್ನು ತುಲಾಭಾರದಲ್ಲಿ ತುಂಬಿ, ಪರಮಾತ್ಮನು ಇನ್ನೊಂದೆಡೆಯಲ್ಲಿ ತೂಗಿದರೆ, ಭಂಡಾರ ಬರಿದಾದರೂ ತೂಕ ಸರಿಹೋಗಲಿಲ್ಲ. ಗಾಬರಿಸಿದ ಸತ್ಯಭಾಮಾ ರುಕ್ಮಿಣಿಯಲ್ಲಿಗೆ ಹೋಗಿ ಸಹಾಯಕ್ಕಾಗಿ ಮೊರೆಯಿಡುವಳು. ರುಕ್ಮಿಣಿ ತುಲಾಭಾರದ ಸ್ಥಳಕ್ಕೆ ಬಂದು ಭಕ್ತಿಯಿಂದ ಭಗವಂತನನ್ನು ಸ್ಮರಿಸಿ ಒಂದು ತುಳಸಿ ದಳವನ್ನು ತುಲಾ ತಟ್ಟೆಗೆ ಹಾಕಲು ತಟ್ಟೆ ಮೇಲಕ್ಕೆ ಏಳುವುದು. ಭಕ್ತಿಯ ಭಾವನೇ ಶ್ರೇಷ್ಠವೆಂದು, ಅಹಂಕಾರ, ಮಮಕಾರಗಳು ತರವಲ್ಲವೆಂದೂ ಜನ ರಮ್ಯವಾಗುವಂತೆ ಈ ಜನಪದ ರಂಗಭೂಮಿಯ ಕತೆ.

ಕೊರವಂಜಿಯ ಹಾವ ಭಾವ ನೃತ್ಯಗಳು ರಂಜನೀಯವಾಗಿವೆ. ಗಡಸಾದ ತತ್ವಜ್ಞಾನದ ಸಂಭಾಷಣೆಗಳನ್ನು ನಾವು ಇಲ್ಲಿ ಕಾಣಬಹುದು. ಕುಳಿತ ರಸಿಕರು ತಮ್ಮಲ್ಲಿಯ ಸಂದೇಹ ನಿವಾರಣೆಗಾಗಿ ಕೊರವಂಜಿಯತ್ತ ಪ್ರಶ್ನೆಗಳನ್ನು ಕೇಳುವ ಅಪರೂಪದ ಪ್ರಸಂಗಗಳೂ ಉಂಟು.

ಕೆಲವು ಸಲ ಪೀಡಿಸುವುದಕ್ಕಾಗಿಯೇ ವ್ಯಂಗೋಕ್ತಿ, ಪ್ರಶ್ನೆಗಳನ್ನು ಕೇಳುವುದುಂಟು. ಕೃಷ್ಣನೇ ಕೊರವಂಜಿಯಾಗಿ ಪ್ರವೇಶಿಸುವನು. ಹಾಸ್ಯದ ಹೊನಲಿನೊಂದಿಗೆ ತತ್ವಜ್ಞಾನದ ಮಾತುಗಳೂ ಬರುವವು. ಒಂದು ಸಲ ರಸಿಕರೊಬ್ಬರು ಕೊರವಂಜಿಗೆ ಭಗವಂತನ ಮುಖ ಯಾವ ದಿಕ್ಕಿಗಿದೆ? ಎಂದು ಪ್ರಶ್ನಿಸಿದರು. ಇಂತಹ ಪ್ರಸಂಗಗಳಾಗಿದ್ದರೆ 'ಅಧಿಕ ಪ್ರಸಂಗ' ಎಂದು ಮುಂದೊರೆಯಬಹುದಿತ್ತು. ಆದರೆ ಇಲ್ಲಿ ಅದು ಸಾಧ್ಯವಿಲ್ಲ. ಕೊರವಂಜಿ ಗಾಬರಿ ಆಗಲಿಲ್ಲ. ಇಷ್ಟು ತಿಳಿಯದೇ ಭಗವಂತನ ಮುಖವು ಎಣ್ಣೆ ದೀಪವು ಯಾವ ದಿಕ್ಕನ್ನು ತೋರಿಸುತ್ತದೆಯೋ ಆ ದಿಕ್ಕಿನತ್ತ. ಚತುರೋಕ್ತಿ, ಪ್ರಸಂಗಾವಧಾನದ ಲಕ್ಷಣಗಳು ಕೊರವಂಜಿ ಪಾತ್ರಧಾರಿಯಲ್ಲಿ ಸುಲಭವಾಗಿ ಗುರುತಿಸಬಹುದು.

ಕೃಷ್ಣ ಪಾರಿಜಾತದ ಕರ್ತೃ ಯಾರೆಂದು ತಿಳಿದುಬಂದಿಲ್ಲ, ಯಾವುದೇ ಜನಪದ ಆಟವನ್ನು ಇಂತವರೇ, ಇವರೊಬ್ಬರೇ ಅದರ ಕರ್ತೃ ಎಂದು ಹೇಳುವುದು ಕಠಿಣಸಾಧ್ಯ. ಇದರಲ್ಲಿಯಂತೂ ಪೂರ್ವ ರಂಗವು ದಾಸರಾಟ, ರಾಧಾ ನಾಟಕದ ಪ್ರತಿಛಾಯೆ, ಸಂಗೀತ ಬದಲಾವಣೆ, ಕರ್ನಾಟಕ ಮತ್ತು ಮರಾಠಿ ರಂಗಭೂಮಿಯ ಪ್ರಭಾವ ಇತ್ತೀಚೆಗಂತೂ ಚಲನಚಿತ್ರ ಹಾಡುಗಳ ಪ್ರಭಾವ. ಆದರೂ ಅದನ್ನು ಸುಧಾರಿಸಿ ಒಂದು ನಿಶ್ಚಿತ ರೂಪಕ್ಕೆ ಕಳೆದ ಶತಮಾನದ ಪ್ರಾರಂಭದಲ್ಲಿ ರಾಯಚೂರು ಜಿಲ್ಲೆಯ ಅಪರಾಳ ತಮ್ಮಣ್ಣನು ತಂದನೆಂದು ತಿಳಿದಿದೆ. ತಮ್ಮಣ್ಣ ಶ್ರೀಕೃಷ್ಣನ ಭಕ್ತ. ಯಾರದೋ ಅಪರಾಧಕ್ಕಾಗಿ ನಿರಪರಾಧಿಯಾದ ಈತನಿಗೆ ಜೈಲು ವಾಸ. ಒಂದು ದಿನ ರಾತ್ರಿ ಈತನಿಗೆ ಕನಸಿನಲ್ಲಿ ಕೃಷ್ಣ ಪರಮಾತ್ಮನು ಪಾರಿಜಾತ ಆಟದ ಹೊಳವು ಕೊಟ್ಟು ಅದೃಶ್ಯನಾದನಂತೆ. ಸರಿ ಜೈಲಿನಲ್ಲಿಯೇ 'ಶ್ರೀಕೃಷ್ಣ ಪಾರಿಜಾತ'ವನ್ನು ಬರೆದು ಮುಗಿಸಿದರು. ಆ ವೇಳೆಗೆ ಅವನಿಗೆ ತೊಡಿಸಿದ ಕೋಳಗಳು ತಮ್ಮಷ್ಟಕ್ಕೆ ತಾವೇ ಕಳಚಿದವಂತೆ. ಈತನ ರೂಪರೇಖೆಯ ಆಟವನ್ನು ಕುಲಗೋಡ ತಮ್ಮಣ್ಣನೆಂಬ ಇನ್ನೊಬ್ಬ ಜನಪದ ಕಲಾವಿದ ತನ್ನ ಜಾಣ್ಮೆಯನ್ನೂ, ರಂಗಭೂಮಿಯ ಸಂಗೀತವನ್ನೂ ಸೇರಿಸಿ ಇಂದು ನಾವು ಕಾಣುವ 'ಆಟವು' ತಯಾರಾಯಿತೆಂದು ಹೇಳುವರು. ಇದರಲ್ಲಿ ಶಿರುಗುಪ್ಪಿಯ ಸದಾಶಿವಪ್ಪನವರ ಪಾಲೂ ಇದೆ.

ಸ್ತ್ರೀ ಪಾತ್ರಕ್ಕಾಗಿ ನಟನ ಬದಲು ನಟಿಯು ಬಂದುದು ಹೆಚ್ಚಿನ ಪ್ರಸಿದ್ಧಿ ಪಡೆಯುವ ಕಾರಣಗಳಲ್ಲಿ ಒಂದಾಗಿದೆ. ಅತೀ ಜನಪ್ರಿಯವಾದ ಕೃಷ್ಣ ಪಾರಿಜಾತದ ಸಂಗೀತದಲ್ಲಿ ದ್ರುತ್ ಲಯಗಾರಿಕೆಗಾಗಿ ಅರ್ಥಪೂರ್ಣ ಸ್ವರವಿನ್ಯಾಸಗಳು, ಕರ್ನಾಟಕೀಯ ಕೆಲವು ರಾಗಗಳ ಬದಲಾಗಿ ಹಿಂದೂಸ್ಥಾನಿ ಶಾಸ್ತ್ರೀಯ ಹಾಡುಗಳು, ಕೆಲವು ಛಾವಳಿಗಳಿದ್ದು ರುದ್ರ ಗಾಯನ ಶೈಲಿ ಮೊದಲಾದವುಗಳು ಇಂದಿಗೂ ಕೇಳಿಬಂದರೂ ನಟರಲ್ಲಿಯ ಸಂಗೀತದ ಅಭ್ಯಾಸದ ಕೊರತೆಯಿಂದಾಗಿ ಸಂಗೀತ ಸೊರಗಿದೆ ಎಂದರೆ ತಪ್ಪಾಗಲಾರದು. ಅದರಂತೆ ವೇಷ ಜನಪದ ಸೊಗಡಿನಿಂದ ಸರಿಯುತ್ತ ನಾಟಕದ ಪಾತ್ರಗಳಂತೆ ಇನ್ನೂ ಹೇಳುವುದಾದರೆ ಚಲನಚಿತ್ರದ ಅನುಕರಣೆ ಜಾಸ್ತಿಯಾಗಿದೆ ಎಂದು ಹೇಳಲು ವಿಷಾದವೆನಿಸುತ್ತದೆ. ಅಂದರೆ ಶ್ರೀಕೃಷ್ಣಾವತಾರದ ಸಾಂಪ್ರದಾಯಿಕ ಉಡುಗೆ-ತೊಡುಗೆಗೆ ವರ್ಣಾಲಂಕಾರ, ಸಂಗೀತ ಶೈಲಿ ಇತ್ಯಾದಿ ಅಂಶಗಳು ಮಾಸ ಹತ್ತಿರುವುದು ಶೋಚನೀಯ.

ಶ್ರೀಕೃಷ್ಣ ಪಾರಿಜಾತ ಕರ್ತೃಗಳ ಬಗ್ಗೆ ಪಂಡಿತರು ನಿರ್ಧರಿಸಿದ್ದಾರೆ. ೧೯ನೇ ಶತಮಾನದ ಆರಂಭದಲ್ಲಿ ಒಂದು ಭಾಗವನ್ನು ಅಪರಾಳ ತಮ್ಮಣ್ಣ, ಉಳಿದಭಾಗ ಶಿರುಗುಪ್ಪಿ ಸದಾಶಿವಪ್ಪನಿಂದ ಪೂರ್ತಿಗೊಂಡಿದೆ ಎಂದು ದೊರೆತ ಲಿಖಿತ ಆಧಾರಗಳಿಂದ ನಿರ್ಧರಿಸಿದ್ದಾರೆ.

ಕನ್ನಡ ಶ್ರೀಕೃಷ್ಣ ಪಾರಿಜಾತ ಸೆಲೆಯೊಡೆದುದು ರಾಯಚೂರ ಜಿಲ್ಲೆಯಲ್ಲಾದರೂ ಅದು ಆಟವಾಗಿ ಬೆಳೆಯುತ್ತ ಜನಪದರ ಕಲಾಭಿವ್ಯಕ್ತಿಗೆ ವಾಹಕವಾಗುತ್ತ ಸುಮಾರು ನೂರು ವರ್ಷಗಳಿಂದೀಚೆಗೆ ಲಕ್ಷೋಪಲಕ್ಷ ಪ್ರೇಕ್ಷಕರ ಮನಸೆಳೆದಿದೆ. ವಿಜಯಪುರ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ–ಕೃಷ್ಣೆಯ ಎಡಬಲದಲ್ಲಿ ಇನ್ನೂ ನಿಖರವಾಗಿ ಹೇಳುವುದಾದರೆ ಕೃಷ್ಣಾ ಮತ್ತು ಘಟಪ್ರಭಾ ಮಧ್ಯಪ್ರದೇಶ ಅಥವಾ ತೀರಪ್ರದೇಶಗಳು ಪಾರಿಜಾತದ ಸೊಬಗನ್ನು ವರ್ಧಿಸಿವೆ. ವಿಷ್ಣು ಮಹಿಮೆ ಅಥವಾ ಶ್ರೀಕೃಷ್ಣ ಚರಿತ್ರೆ ಪುರಾಣವಲಯದಲ್ಲಿ ಪಡೆದುಕೊಂಡ ಹರಹು ಬಹಳ ದೊಡ್ಡದು. ಪುರಾಣ ಪುಟಗಳ ಮೊತ್ತವನ್ನು ಗಮನಿಸಿದರೆ ಶ್ರೀಕೃಷ್ಣ ಪಾರಿಜಾತಕ್ಕೆ ಸಂಬಂಧಪಟ್ಟ ವಿಷಯ ತೀರ ಸಣ್ಣದು. ಹೀಗಿದ್ದೂ ಅದರ ಸುತ್ತಮುತ್ತಲಿನ ಘಟನಾವಳಿಗಳು ನಾಟಕೀಯ ಗುಣಗಳಿಂದ ಕೂಡಿದ್ದರಿಂದ ಪಾರಿಜಾತ ವಿದ್ವಾಂಸರು ಮನ್ನಣೆ ಪಡೆದಂತೆ ಸಾಮಾನ್ಯರನ್ನೂ ಆಕರ್ಷಿಸಿತು.

ಶ್ರೀಕೃಷ್ಣ ಪಾರಿಜಾತಕ್ಕೆ ಆಕರವಾಗಿರುವ ವಿಷಯ ಅನೇಕ ದಿಕ್ಕುಗಳಿಂದ ಬಂದದ್ದು. ಅಟ್ಟದ ಮೇಲೆ ಆಟವಾಗಿ ಬಂದ ಮೇಲೂ ಅದು ಸ್ಥಿತ್ಯಂತರಗಳನ್ನು ಕಂಡಿದೆ. ಆದರೂ ಪಾರಿಜಾತ ವಸ್ತುವಿನ ಮೂಲ ಚೌಕಟ್ಟು ಹಾಗೆಯೇ ಉಳಿದದ್ದು ಜನಪದರ ಪುರಾಣ ಪ್ರಿಯತೆಯನ್ನು ಸೂಚಿಸುತ್ತದೆ. ಪಾರಿಜಾತ ಆಟದ ನಿರ್ಮಾತೃ, ನಟವರ್ಗ ಹಾಗೆಯೇ ಪ್ರೇಕ್ಷಕರ ಈ ಪ್ರೀತಿ ಕೇವಲ ಕಲೆಯ ಹಿನ್ನೆಲೆಯಲ್ಲಿಯೇ ಬೆಳೆದು ಬಂದುದಲ್ಲ. ಭಾರತೀಯ ಯಾವುದೇ ಕಲೆಯ ಹಿಂದೆ ಕೆಲಸ ಮಾಡಿರುವ ದೈವಿಕಪ್ರಜ್ಞೆ ಅಥವಾ ಮತಭಾವನೆಯ ಹಿನ್ನಲೆಯಲ್ಲಿಯೂ ಈ ಪ್ರೀತಿ ಬೆಳೆದು ಬಂದಿದೆ. ಹೀಗಾಗಿ ಶ್ರೀಕೃಷ್ಣ ಪಾರಿಜಾತದ ಆಕರವನ್ನು ಎರಡು ನಿಟ್ಟಿನಿಂದ ನಾವು ಅವಲೋಕಿಸಬೇಕಾಗುತ್ತದೆ; ೧. ಭಾರತದ ಉತ್ತರ ದಕ್ಷಿಣ ಭಾಗಗಳಲ್ಲಿ ಒಂದು ದೊಡ್ಡ ಪರಂಪರೆಯಾಗಿ ಅಂತರಂಗವನ್ನು ಬೆಳಗಿಹೋದ ಭಕ್ತಿ ಪಂಥದ ಬೆಳವಣಿಗೆ. ೨. ಜನಪದ ಆಟವಾಗಿ ಪಾರಿಜಾತ ಎದ್ದು ನಿಲ್ಲುವಲ್ಲಿ ನೆರವಾದ ಹೊರಗಿನ ಕಲಾ ಪರಿಸರದ ಪ್ರೇರಣೆ.[೧೩]

ಆಳ್ವಾರರು ವೈದಿಕ ಮತ್ತು ಭಾಗವತ ಧರ್ಮಗಳ ಸಂಕಟದಿಂದ ಆವಿರ್ಭವಿಸಿದ ಈ ಹೊಸಪರಂಪರೆಯನ್ನು ಪ್ರಸಾರ ಮಾಡಲು ಬೀದಿಗಿಳಿದರು; ಹಾಡುಹೇಳುತ್ತ ಜನರಲ್ಲಿ ವಿಷ್ಣು ಭಕ್ತಿಯನ್ನು ಜಾಗೃತಗೊಳಿಸಿದರು. ಆಳ್ವಾರರೇ ಸ್ವತಃ ಎಲ್ಲ ಸಮುದಾಯವರೂ ಆಗಿದ್ದುದರಿಂದ ಸಮಾಜದ ಎಲ್ಲ ಅಂತಸ್ತಿನ ಜನರು ಈ ಭಕ್ತಿ ಪಂಥವನ್ನು ತೆರೆದ ಹೃದಯದಿಂದ ಸ್ವಾಗತಿಸುವಂತಾಯಿತು. ಎಲ್ಲರೂ ಈ ಎಡೆಗೆ ಆಕರ್ಷಿತರಾದರೂ, ಈ ಆಕರ್ಷಣೆಯ ಮುಂದಿನ ಬಹುದೊಡ್ಡ ಕೊಡುಗೆ ರಾಮಾನುಜಾಚಾರ್ಯರು.

ಆಳ್ವಾರರು ಹೇಳಿದ ಪ್ರಪತ್ತಿಯೇ ೧೨ನೇ ಶತಮಾನದ ಆದಿಭಾಗದ ರಾಮಾನುಜಾಚಾರ್ಯರಿಗೆ ಮುಖ್ಯವಾಯಿತು. "ಕರ್ಮಯೋಗಕ್ಕಿಂತಲೂ ಜ್ಞಾನಯೋಗ ಸುಲಭ, ಜ್ಞಾನಯೋಗಕ್ಕಿಂತಲೂ ಭಕ್ತಿಯೋಗ ಸುಲಭ. ಇವೆಲ್ಲವುಗಳಿಗಿಂತಲೂ ಪ್ರಪತ್ತಿಯೋಗ ಅತ್ಯಂತ ಸುಲಭ. ಈ ಯೋಗಗಳಲ್ಲಿ ಮೊದಲ ಮೂರು ಯೋಗಗಳು ಮೊದಲ ಮೂರು ವರ್ಣದವರಿಗೆ ಮಾತ್ರ ಸಾಧ್ಯ. ಪ್ರಪತ್ತಿ ಎಲ್ಲರಿಗೂ ಸಾಧ್ಯ. ಪ್ರಪತ್ತಿ ಎಂದರೆ ದೇವರಿಗೆ ಸಂಪೂರ್ಣವಾಗಿ ಶರಣುಹೋಗುವುದು. ಈ ಮಾರ್ಗ ಅತ್ಯಂತ ಸುಲಭವಾದ ಮಾರ್ಗ. ಈ ಮಾರ್ಗವನ್ನು ಎಲ್ಲ ಸಮುದಾಯದವರೂ ಅನುಸರಿಸಬಹುದು ಎಂದು" ರಾಮಾನುಜಾಚಾರ್ಯರು ಭಕ್ತಿಯ ಬಾಗಿಲನ್ನು ಎಲ್ಲರಿಗೂ ತೆರೆದರು.

೧೨ನೇ ಶತಮಾನದಲ್ಲಿ ಮದ್ವಾಚಾರ್ಯರಿಂದ ಭಕ್ತಿಪಂಥದ ಸ್ವರ್ಣಯುಗ ಆರಂಭಗೊಂಡಿತು. ಹರಿಯೇ ಸರ್ವಶ್ರೇಷ್ಠನಾದವನು ಎಂಬ ದೃಢವಾದ ನಂಬುಗೆ ಆಚಾರ್ಯರದು. "ಹರಿಯೇ ಸರ್ವೋತ್ತಮನು. ಜಗತ್ತು ಸತ್ಯ, ಭೇದ ನಿಜವಾದುದು. ಜೀವಗಣಗಳು ಹರಿಯ ಆಶ್ರಿತರು. ಜೀವಿಗಳಲ್ಲಿ ತಾರತಮ್ಯವುಂಟು, ಮುಕ್ತಿ ಎಂದರೆ ನಿಜವಾದ ಸುಖದ ಅನುಭೂತಿ. ಅದರ ಸಾಧನೆ ನಿರ್ಮಲವಾದ ಭಕ್ತಿಯಿಂದ ಪ್ರತ್ಯಕ್ಷ ಅನುಮಾನ, ಶಬ್ದ ಇವು ಮೂರು ಪ್ರಮಾಣಗಳು. ಹರಿ ಅಖಿಲ ಅಮ್ನಾಯಗಳಿಂದ (ವೇದಗಳಿಂದ) ತಿಳಿಯಲು ಮಾತ್ರ ಸಾಧ್ಯ" ಎಂಬುದು ಮಧ್ವಾಚಾರ್ಯರ ತತ್ವ ಪ್ರಣಾಲಿ. ಮಧ್ವಾಚಾರ್ಯರು ಎಷ್ಟರಮಟ್ಟಿಗೆ ಕನ್ನಡದ ಸಾಮಾನ್ಯ ಜನಕ್ಕೆ ಅರ್ಥವಾದರೋ, ಅವರ ಅನುಯಾಯಿಗಳು ಮಾತ್ರ ಎಲ್ಲರಿಗೂ ಗೊತ್ತು. ಕಾಲಕ್ರಮದಲ್ಲಿ ಮಧ್ವಾಚಾರ್ಯರ ತತ್ವಗಳನ್ನೇ ಬದುಕಿನ ಪರಮೋದ್ದೇಶವನ್ನಾಗಿ ಮಾಡಿ ಅವುಗಳನ್ನು ಪ್ರಾಯೋಗಿಕ ಬದುಕಿಗೆ ಒಡ್ಡಿದ ಕರ್ನಾಟಕದ ಹರಿದಾಸರ ಪರಂಪರೆ ಬಹಳ ದೊಡ್ಡದು.

ಇವರಲ್ಲಿ ದಾಸಕೂಟ, ವ್ಯಾಸಕೂಟವೆಂದು ಎರಡು ವಿಭಾಗಗಳನ್ನು ಕಲ್ಪಿಸುತ್ತಾರೆ. "ಸಂಸ್ಕೃತದಲ್ಲಿ ಮಾಧ್ವಮತವನ್ನು ಪ್ರಸಾರಮಾಡುವವರು ವ್ಯಾಸ ಕೂಟಕ್ಕೆ ಸೇರಿದವರಾದರೂ; ಮಾತೃ ಭಾಷೆಯಲ್ಲಿ ಮಾಧ್ವಮತದ ತತ್ವಗಳನ್ನು ಪಸರಿಸಿದವರು ದಾಸಕೂಟಕ್ಕೆ ಸೇರಿದರು; ಕರ್ನಾಟಕದ ಜನಜೀವನ ಮತ್ತು ಸಾಹಿತ್ಯದ ಮೇಲೆ ದಾಸಕೂಟದಿಂದಾದ ಪರಿಣಾಮ ಅಷ್ಟಿಷ್ಟಲ್ಲ. ಮಧ್ವಾಚಾರ್ಯರು ಅನುಯಾಯಿಗಳಾದ ಈ ಹರಿದಾಸ ಪರಂಪರೆಗೆ ಮಹಾಪೂರ ಬಂದದ್ದು ವಿಜಯನಗರದ ಶ್ರೀಕೃಷ್ಣ ದೇವರಾಯನ ಕಾಲಕ್ಕೆ. ಈ ಕಾಲದ ದಾಸರಲ್ಲಿ ಮುಖ್ಯರಾದವರು ಪುರಂದರದಾಸ ಮತ್ತು ಕನಕದಾಸರು. ಹರಿಬೋಧೆ ಹಳ್ಳಿಯ ಪಾಮರರಿಗೆಲ್ಲ ಹತ್ತಿರವಾದುದು ಇವರಿಂದ. ತತ್ವದ ದರ್ಶನ ಸಾಮಾನ್ಯರಿಗೆ ಬೇಕು ಎಂದರೆ ಸರಳನುಡಿಯ ಮಾಧ್ಯಮ ಬಹಳ ಪ್ರಮುಖವಾಗುತ್ತದೆ. ಆಡುಭಾಷೆಗೆ ಹತ್ತಿರವಾದ ತಿರುಳುಗನ್ನಡದಲ್ಲಿ ರಚಿತವಾದ ದಾಸರ ಕೀರ್ತನೆಗಳು ದರ್ಶನದ ಸಾರವನ್ನು ಒದಗಿಸಿಕೊಡುತ್ತವೆ, ಕೀರ್ತನೆಗಳ ಗಾನಶೈಲಿ ಕೃಷ್ಣನ ಕೊಳಲಾಗಿ ಮನಮೋಹಿಸಿತು. ಪುರಂದರದಾಸ ಕನಕದಾಸರಷ್ಟೇ ಅಲ್ಲ ಜಗನ್ನಾಥದಾಸ, ವಿಜಯದಾಸರಂಥವರು ಕಂಡ ದರ್ಶನ ಭಕ್ತಾದಿಗಳಿಗೆಲ್ಲ ಅಮೃತ ಕುಂಭವಾಯಿತು.

ಹೀಗೆ ಆಳ್ವಾರರಿಂದ ದಕ್ಷಿಣದಲ್ಲಿ ಪ್ರಾರಂಭಗೊಂಡ ವಿಷ್ಣುಭಕ್ತಿಪಂಥ ನಿರಂತರ ಪ್ರವಾಹವಾಗಿ ರಾಮಾನುಜ ಮತ್ತು ಮಾಧ್ವರಿಂದ ಬೆಳೆ ಬೆಳೆದು ಹರಿದಾಸರು ಬೋಧನೆಗಳಲ್ಲಿ ಮೈದುಂಬಿಕೊಂಡು ಸಮಾಜದ ಕೊಳೆಯನ್ನು ಕಳೆಯಬಲ್ಲ ಗಂಗೆಯಾದಂತೆ, ಆತ್ಮೋದ್ಧಾರದ ಕೇಂದ್ರವೂ ಆಯಿತು. ಹೀಗೆ ದಕ್ಷಿಣ ಭಾರತದ ಭಕ್ತಿಮಾರ್ಗ ವೈಷ್ಣವ ಮತದ ಪ್ರಕಾರ ವಿಷ್ಣು ಒಬ್ಬನನ್ನೇ ನಂಬಿಕೊಂಡು ಕೃಷ್ಣ–ವಿಷ್ಣು ಅಭಿನ್ನರೂ ಎಂದೂ ನಂಬಿ ಸಾಗಿದರು. ಇಲ್ಲಿ "ವಿಷ್ಣುವಿನ ಚರಣಗಳಿಗೆ" ಎಂದರೂ ಸರಿಯೇ "ಕೃಷ್ಣನ ಚರಣಗಳಿಗೆ" ಎಂದರೂ ಸರಿಯೇ ಭಕ್ತಿಮಾತ್ರ ಒಮ್ಮುಖವಾಗಿದೆ.

ಉತ್ತರ ಭಾರತದ ಸ್ಥಿತಿ ಹೀಗಿಲ್ಲ. ಈ ಭಕ್ತಿ ರಾಮ–ಕೃಷ್ಣರಿಬ್ಬರಲ್ಲಿ ಹಂಚಿಹೋಗುತ್ತದೆ. ಮತ್ತೆ ಕೃಷ್ಣಭಕ್ತಿ ರಾಧೆ–ಕೃಷ್ಣರ ಮತ್ತು ರುಕ್ಮಿಣಿ–ಕೃಷ್ಣರ ಪ್ರೇಮದಲ್ಲಿ ಕವಲು ಪಡೆದಿದೆ.

೧೨ನೇ ಶತಮಾನದ ಜಯದೇವನ ಗೀತಗೋವಿಂದ ರಾಧಾಕೃಷ್ಣ ಭಕ್ತಿಗೆ ನಾಂದಿ ಹಾಡಿತು. ದಕ್ಷಿಣ ದೇಶದಲ್ಲಿ ಹುಟ್ಟಿ ಬೆಳೆದ ನಿಂಬಾರ್ಕ ವೃಂದಾವನದಲ್ಲಿ ನಿಂತು ಉತ್ತರ ಭಾರತದ ತುಂಬ ಈ ರಾಧಾಕೃಷ್ಣ ಭಕ್ತಿಯನ್ನು ಪ್ರಚಾರ ಮಾಡಿದನು. ಇದೇ ರೀತಿ ದಕ್ಷಿಣದಿಂದ ವಲಸೆ ಹೋದವರಲ್ಲಿ ವಲ್ಲಭಾಚಾರ್ಯನೂ ಒಬ್ಬ. ಕ್ರಿ.ಶ. ೧೪೭೯ರಲ್ಲಿ ಜನಿಸಿದ ಈತ ಭಾರತದ ತುಂಬ ಸಂಚರಿಸಿ ರಾಧಾ–ಕೃಷ್ಣ ಭಕ್ತಿಯನ್ನೇ ಪ್ರಸಾರ ಮಾಡಿದನು. ರಾಧಾ–ಕೃಷ್ಣ ಪಂಥದ ಅನುಯಾಯಿಗಳಲ್ಲಿ ದೊಡ್ಡ ಹೆಸರು ಚೈತನ್ಯನದು. ೧೫ನೇ ಶತಮಾನದ ಅಂತ್ಯ ಮತ್ತು ೧೬ನೇ ಶತಮಾನದ ಆದಿಯಲ್ಲಿ ಬದುಕಿದ್ದ ಚೈತನ್ಯ ನಿಂಬಾರ್ಕ ಮತ್ತು ವಲ್ಲಭಾಚಾರ್ಯರ ಮಾರ್ಗಕ್ಕೆ ಹೊರತಾದವನಲ್ಲವಾದರೂ 'ಚೈತನ್ಯಪಂಥ' ವೆಂಬ ಹೆಸರಿನಿಂದ ಈತನ ಅನುಯಾಯಿಗಳು ಈ ರಾಧಾಕೃಷ್ಣ ಪಂಥವನ್ನು ಹರಡಿದರು. ಭಗವಂತನೊಂದಿಗೆ ಸಂಬಂಧ ಬೆಳೆಸಲು ಪ್ರೇಮವೊಂದೇ ಆದರ್ಶಮಾರ್ಗ. ಈ ಪ್ರೇಮದ ಸಾಕಾರಮೂರ್ತಿ ರಾಧೆಯೆಂಬುದು ಚೈತನ್ಯನ ಅಭಿಮತ

೩.೬. ಪಾರಿಜಾತ ಬೆಳವಣಿಗೆಗೆ ಮೂಲ ಪ್ರೇರಣೆಗಳು :

ಕನ್ನಡದಲ್ಲಿ ಶ್ರೀಕೃಷ್ಣ ಪಾರಿಜಾತಕ್ಕೆ ಮೊದಲು, ಪುರಾಣದಲ್ಲಿ ಅಡಕವಾದ ಪಾರಿಜಾತ ವಿಷಯವನ್ನು ವಸ್ತುವಾಗಿಸಿಕೊಂಡು ಸಂಸ್ಕೃತ ಪಾರಿಜಾತ ನಾಟಕಗಳು ಹುಟ್ಟಿಕೊಂಡಿವೆ. ಇವುಗಳಿಂದ ಪ್ರೇರಣೆ ಪಡೆದಿರಬಹುದಾದ ತೆಲಗು ಯಕ್ಷಗಾನ ಕೂಚುಪುಡಿಗಳೂ ಸಿಗುತ್ತವೆ. ಕೆಲವು ವಿದ್ವಾಂಸರು ಅಪರಾಳ ಪಾರಿಜಾತಕ್ಕೆ ಪ್ರಸನ್ನವೆಂಕಟದಾಸರ 'ಸತ್ಯಭಾಮಾ ವಿಲಾಸ' ಆಧಾರವೆಂಬ ಅಭಿಪ್ರಾಯ ತಾಳಿದ್ದಾರೆ. ಈಗ ಇವನ್ನೆಲ್ಲ ಕ್ರಮವಾಗಿ ಪರಾಮರ್ಶಿಸಬಹುದು.

ಸಂಸ್ಕೃತ ನಾಟಕ : ಉಮಾಪತಿಮಿಶ್ರಣ 'ಪಾರಿಜಾತಾಪಹರಣ' ಕೀರ್ತನಶೈಲಿಯ ಪ್ರಪ್ರಥಮ ನಾಟಕವೆನಿಸಿದೆ. ಇದು ಸಂಸ್ಕೃತ ಮತ್ತು ಹಿಂದಿ ಮಿಶ್ರಿತ ಭಾಷೆಯಲ್ಲಿದೆ. ಈ ನಾಟಕದಲ್ಲಿ ಮಾತನಾಡುವ ಭಾಷೆ ಸಂಸ್ಕೃತ. ಆದರೆ ಗೀತಗಳೆಲ್ಲ ಹಿಂದಿಯಲ್ಲಿ ಬರೆಯಲ್ಪಟ್ಟಿವೆ. ಇದರ ಕಥಾವಸ್ತು ಈ ರೀತಿಯಾಗಿದೆ. ನಾಟ್ಯಕಾರನು ಪ್ರಾರಂಭದಲ್ಲಿ ಭವಾನಿ ವಂದನೆಯನ್ನು ಮಾಡಿ,

ತರುವಾಯ ವರಾಹ ವಿಷ್ಣುವಿನ ಸ್ತುತಿಗೈಯುತ್ತಾನೆ. ಆಮೇಲೆ ಮಿಥಿಲಾಪಥಿಯ ಶಕ್ತಿಯ ಪರಿಚಯ ಮಾಡಿಕೊಡುತ್ತಾನೆ. ನಟಿಗೆ ಒಂದು ವಿಶೇಷ ಪ್ರಕಾರದ ಕಲರವವು ಕೇಳಿ ಬರುತ್ತದೆ. ಸೂತ್ರಧಾರನು ನಟಿಗೆ ಶ್ರೀಕೃಷ್ಣನು ರುಕ್ಮಿಣಿಯ ಸಂಗಡ ವನದಲ್ಲಿ ಶೋಭಿಸಿದ್ದಾನೆ, ಅಲ್ಲಿಗೆ ಹೋಗಿ ಅವರನ್ನು ಕೂಡಬೇಕಾಗಿದೆ ಎಂಬ ಸೂಚನೆಯನ್ನು ಕೊಡುತ್ತಾನೆ. ಇಬ್ಬರೂ ಪ್ರಸ್ಥಾನ ಮಾಡುತ್ತಾರೆ. ಇಲ್ಲಿಗೆ ಪ್ರಸ್ತಾವನೆಯು ಮುಕ್ತಾಯವಾಗುತ್ತದೆ.[೧೪]

ಶ್ರೀಕೃಷ್ಣ ಪ್ರವೇಶದ ಪೂರ್ವದಲ್ಲಿ ರಂಗಸ್ಥಲದ ಹಿಂದೆ ಕೃಷ್ಣನ ಯಶದಗಾನವಾಗುತ್ತದೆ. ಗಾನಸಮಾಪ್ತವಾಗುತ್ತಲೇ ಶ್ರೀಕೃಷ್ಣನು ರುಕ್ಮಿಣಿಯ ಸಂಗಡ ಮಂಚದ ಮೇಲೆ ಕಾಣುತ್ತಾನೆ. ಇಷ್ಟು ಹೊತ್ತಿಗೆ ನಾರದನು ಪ್ರವೇಶಿಸಿ ಕೃಷ್ಣ ಮಹಿಮೆಯನ್ನು ಹಾಡುತ್ತಾನೆ. ಇದೇ ಸಮಯದಲ್ಲಿ ಸತ್ಯಭಾಮೆಯ ಪ್ರಿಯಸಖಿ ಸುಮುಖಿ ಬಂದು ನಾರದನೊಂದಿಗೆ ಸಂಭಾಷಣೆಗೆ ತೊಡಗುತ್ತಾಳೆ. ನಾರದ ಮತ್ತು ಸುಮುಖಿ ಕೃಷ್ಣನ ಕಡೆಗೆ ಬಂದ ಮೇಲೆ ನಾರದ ಮತ್ತು ಕೃಷ್ಣನ ಮಾತುಕತೆ ಪ್ರಾರಂಭವಾಗುತ್ತದೆ. ಶ್ರೀಕೃಷ್ಣನಿಗೆ ನಾರದ ಪುಷ್ಪಹಾರ ಕೊಡುತ್ತಾನೆ. ಆಗ ಸತ್ಯಭಾಮಾ ರಂಗಮಂಚದ ಮೇಲೆ ಬರುತ್ತಾಳೆ. ಆದರೆ ಶ್ರೀಕೃಷ್ಣ ಆ ಹೂವನ್ನು ರುಕ್ಮಿಣಿಗೆ ಕೊಡುತ್ತಾನೆ. ಸುಮುಖಿ ಉತ್ತೇಜಿತಗೊಳಿಸುವುದರಿಂದ ಸತ್ಯಭಾಮಾ ಮುನಿಸಿನಿಂದ ಹಟಮಾಡುತ್ತಾಳೆ. ತನ್ನ ಆಭರಣಗಳನ್ನು ಒಗೆದು ಅಳಲು ಪ್ರಾರಂಭಿಸುತ್ತಾಳೆ. ಕೃಷ್ಣ ಸತ್ಯಭಾಮಳನ್ನು ಸಮಾಧಾನ ಮಾಡಲು ಯತ್ನಿಸಿದರೆ ಅವಳು ಪಾರಿಜಾತ ಗಿಡ ತರಲು ಆಗ್ರಹ ಮಾಡುತ್ತಾಳೆ. ಶ್ರೀಕೃಷ್ಣ ನಾರದನನ್ನೇ ಪಾರಿಜಾತ ವೃಕ್ಷ ತರಲು ಇಂದ್ರಪುರಿಗೆ ಕಳಿಸುತ್ತಾನೆ. ಒಂದು ಕಡೆ ನಾರದ ಶ್ರೀಕೃಷ್ಣನ ಸಂದೇಶ ತೆಗೆದುಕೊಂಡು ಇಂದ್ರಪುರಿಗೆ ಹೋಗುತ್ತಾನೆ. ಮತ್ತೊಂದು ಕಡೆಗೆ ಕೃಷ್ಣ ಅರ್ಜುನನಿಗೆ ಇಂದ್ರನ ಸಂಗಡ ಯುದ್ಧಮಾಡಲು ಸಿದ್ಧನಾಗಿರಲು ಹೇಳುತ್ತಾನೆ.

ನಾರದನಿಂದ ಕೃಷ್ಣನ ಸಂದೇಶವನ್ನು ಕೇಳಿದ ಇಂದ್ರ ಯುದ್ಧವಿಲ್ಲದೆ ವೃಕ್ಷವನ್ನು ಕೊಡುವುದಿಲ್ಲವೆನ್ನುತ್ತಾನೆ. ಶ್ರೀಕೃಷ್ಣನು ಇಂದ್ರನ ತೀರ್ಮಾನವನ್ನು ಕೇಳಿದ ಮೇಲೆ ಗರುಡ ಮತ್ತು ಅರ್ಜುನರನ್ನು ಕರೆದುಕೊಂಡು ಹೋಗಿ ಇಂದ್ರನ ಮೇಲೆ ಯುದ್ಧಸಾರಬೇಕಾಯಿತು. ಯುದ್ಧದಲ್ಲಿ ಇಂದ್ರನೇ ಸೋತನು; ಪಾರಿಜಾತವೃಕ್ಷ ಸತ್ಯಭಾಮೆಯ ಅಂಗಳದಲ್ಲಿ ನೆಡಸಲ್ಪಟ್ಟಿತು. ಸತ್ಯಭಾಮಾ ನಾರದನಿಗೆ ಏನಾದರೂ ಬೇಡಲು ನಿವೇದಿಸುತ್ತಾಳೆ. ನಾರದ ಅವಳಿಂದ ಕೃಷ್ಣನನ್ನು ದಾನರೂಪವಾಗಿ ಬೇಡುತ್ತಾನೆ. ಇದೇ ರೀತಿ ಸುಭದ್ರಾಳಿಂದ ಅರ್ಜುನನನ್ನು ಬೇಡುತ್ತಾನೆ. ಕೊನೆಗೆ ಶ್ರೀಕೃಷ್ಣನನ್ನು ಸತ್ಯಭಾಮೆಯ ಕೈಗೆ ಮತ್ತು ಅರ್ಜುನನನ್ನು ಸುಭದ್ರಾಳ ಕೈಗೆ ಒಂದೊಂದು ಆಕಳ ಬೆಲೆಗೆ ಮಾರುತ್ತಾನೆ. ಭರತವಾಕ್ಯದೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

ಉಮಾಪತಿಯ ನಾಟಕ ಮತ್ತು ಮೇಲೆ ಉಲ್ಲೇಖಗೊಂಡ ಪಾರಿಜಾತಗಳನ್ನು ನೋಡಿದರೆ, ಪಾರಿಜಾತ ಪ್ರಸಂಗ ಮೊದಲು ಉತ್ತರದಲ್ಲಿಯೇ ಜನಪ್ರಿಯವಾಗಿತ್ತೆಂಬ ಮಾತು ಸ್ಪಷ್ಟವಾಗುತ್ತದೆ. ಕ್ರಿ.ಶ. ೧೨ ಮತ್ತು ಕ್ರಿ.ಶ. ೧೩ನೇ ಶತಮಾನಗಳಲ್ಲಿ ಸಂಸ್ಕೃತದ ಕವಿರಾಜ ಮತ್ತು ಕನ್ನಡದ

ರುದ್ರಭಟ್ಟರು ಪುರಾಣಗಳಿಂದ ವಿಷಯವನ್ನು ಗ್ರಹಿಸಿ ತಮ್ಮ ಕೃತಿಗಳನ್ನು ನಿರ್ಮಿಸಿದರು. ಮುಂದಿನ ಶತಮಾನದಲ್ಲಿ ಇದೇ ವಿಷಯವನ್ನು ಗ್ರಹಿಸಿ ನಾಟಕ ಮಾಡಿದ ತರುವಾಯ ಶಂಕರದೇವ, ಜಗತ್ಪ್ರಕಾಶಮಲ್ಲ ಮುಂತಾದವರೆಲ್ಲ ಈ ಕೃತಿ ನಿರ್ಮಿತಿಗೆ ಕೈಹಾಕಿದ್ದಾರೆ. ೧೨ನೇ ಶತಮಾನದಲ್ಲಿ ಭಕ್ತಿಪಂಥದ ಬೆಳವಣಿಗೆ ಕ್ರಮೇಣ ಕ್ರಮಕೈಗೊಳ್ಳಲು ತೊಡಗಿದ್ದರಿಂದ ಭಗವತ್ ಪಾರಮ್ಯ ಮತ್ತು ಸಾಹಿತ್ಯಾವಕಾಶ ಸಂಗಡವೇ ಮುನ್ನಡೆಯುವ ಸಾಧ್ಯತೆ ಇಂತಲ್ಲಿ ಪ್ರಾಪ್ತವಾಯಿತು. ಕ್ರಿ.ಶ. ೧೨ರಿಂದ ಕ್ರಮಗೊಂಡ ಭಕ್ತಿಪಂಥವನ್ನು ಅವಲೋಕಿಸಿದರೆ ಈ ವಿಷಯ ಇನ್ನೂ ಮನದಟ್ಟಾಗುತ್ತದೆ.

ಈವರೆಗಿನ ವಿವೇಚನೆಯಿಂದ ತೆಲುಗಿಗಿಂತಲೂ ಮೊದಲು ಸಂಸ್ಕೃತ ಭಾಷೆಯಲ್ಲಿ ಪಾರಿಜಾತಕ್ಕೆ ಸಂಬಂಧಪಟ್ಟ ನಾಟಕಗಳು ಇದ್ದುವಷ್ಟೇ ಅಲ್ಲ ಅವೇ ತೆಲುಗಿಗೆ ಬಂದು ಪಾರಿಜಾತ ಯಕ್ಷಗಾನಗಳಿಗೆ ಪ್ರೇರಣೆ ನೀಡಿರಬಹುದು ಎಂಬ ಊಹೆ ಪ್ರಬಲವಾಗುತ್ತದೆ.

ಸಂಸ್ಕೃತ ನಾಟಕಗಳು ದೇಶದ ತುಂಬ ಪ್ರಸಾರಗೊಳ್ಳುವಲ್ಲಿ ಚಾರಣರು ವಹಿಸಿದ ಪಾತ್ರ ದೊಡ್ಡದು. ಚಾರಣರು ಸದಾಕಾಲ ಸಂಚರಿಸಿ ಜನಸಾಮಾನ್ಯರ ಮಧ್ಯನಿಂತು ಅವರ ಭಾಷೆಯಲ್ಲಿಯೇ ಸಂಸ್ಕೃತ ಭೂಯಿಷ್ಠವಾದ ಭಾಷೆಯ ಕಾವ್ಯಗಳನ್ನು ಸರಳೀಕರಿಸಿ ವಿವರಿಸಿದರು. ಇಂಥ ಚಾರಣರಿಂದಲೇ ಸಂಸ್ಕೃತ ನಾಟಕಗಳು ತೆಲುಗಿನ ಯಕ್ಷಗಾನಕ್ಕೆ ಪ್ರೇರಣೆ ನೀಡಿರಬೇಕು. ಪಾರಿಜಾತಾಪಹರಣಕ್ಕೆ ಸಂಬಂಧಿಸಿದ ಯಕ್ಷಗಾನಗಳು ಹೀಗೆಯೇ ಉದ್ಭವಗೊಂಡಿರಬೇಕು. ಅನುವಾದದ ಮೂಲಕವೂ ಸಂಸ್ಕೃತ ನಾಟಕಗಳು ಅನೇಕ ಪ್ರಾಂತೀಯ ಭಾಷೆಗಳಿಗೆ ಪ್ರವೇಶಿಸಿರುವುದಕ್ಕೆ ಉಲ್ಲೇಖವುಂಟು. ದಟ್ಟವಾಗಿ ನಡೆದ ಅನುವಾದ ಸಂದರ್ಭದಲ್ಲಿ ಪಾರಿಜಾತಕ್ಕೆ ಸಂಬಂಧಿಸಿದ ಸಂಸ್ಕೃತ ನಾಟಕಗಳು ತೆಲುಗು ಭಾಷೆಯನ್ನು ಪ್ರವೇಶಿಸಿದ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. ತೆಲುಗು ಪಾರಿಜಾತ ಯಕ್ಷಗಾನ, ಕೂಚುಪುಡಿಯ ಬಹಳಷ್ಟು ಕೃತಿಗಳಿಗೆ ಸ್ಫೂರ್ತಿ ಚಾರಣರು ಮತ್ತು ಅನುವಾದಗಳು ಎಂಬಲ್ಲಿ ಯಾವ ಸಂಶಯವೂ ತೋರುವುದಿಲ್ಲ.

೩.೭. ತೆಲುಗಿನ ಯಕ್ಷಗಾನ ಮತ್ತು ಕೂಚುಪುಡಿ :

ದಕ್ಷಿಣದಲ್ಲಿ ಆಳ್ವಾರರಿಂದ ರೂಪುಗೊಂಡ ಭಕ್ತಿಪಂಥ ಉತ್ತರದಿಂದ ಬಂದ ರಾಧಾಕೃಷ್ಣ ಪಂಥಗಳ ಪ್ರಭಾವ ೧೬ನೇ ಶತಮಾನದಲ್ಲಿ ತಲೆಯೆತ್ತಿದ ತೆಲುಗಿನ ಯಕ್ಷಗಾನ ಮತ್ತು ಕೂಚುಪುಡಿಗಳ ಮೇಲೆ ಗಾಢವಾಯಿತು. ತೆಲುಗಿನ ಯಕ್ಷಗಾನ ಮತ್ತು ಕೂಚುಪುಡಿಗಳ ಬೆಳವಣಿಗೆಯ ಪರಿಶೀಲನೆಯಲ್ಲಿ ಈ ವಿಷಯದ ಸ್ಪಷ್ಟತೆಯಿದೆ.

ಡಾ.ಚಂದ್ರಶೇಖರ ಕಂಬಾರ ಅವರು "ಇದರ ಮೇಲೆ (ಕನ್ನಡ ಪಾರಿಜಾತ) ಆಂಧ್ರದ ಕೂಚುಪುಡಿ ನೃತ್ಯವಾದ ಭಾಮಾಕಲಾಪ ಮತ್ತು ಕನ್ನಡ ಯಕ್ಷಗಾನದ ಪ್ರಭಾವ ಅತ್ಯಂತ ಸ್ಪಷ್ಟವಾಗಿದೆ" ಎಂದಿದ್ದಾರೆ. ಈ ಹೇಳಿಕೆ ಸತ್ಯವಾದರೂ ಪ್ರಭಾವ ಬೀರಿದ ತೆಲುಗಿನ ಯಕ್ಷಗಾನದ

ಪ್ರಸ್ತಾಪ ಇಲ್ಲಿ ಉಕ್ತಗೊಂಡಿಲ್ಲ. ಕನ್ನಡ ಪಾರಿಜಾತ ಪರಂಪರೆಗೆ ಮೂಲದಲ್ಲಿ ತೆಲುಗಿನ ಯಕ್ಷಗಾನ ಮತ್ತು ಕೂಚುಪುಡಿಗಳು ಪ್ರೇರಣೆ ನೀಡಿವೆ. ಇದನ್ನು ಪರಿಶೀಲಿಸಿ ಒಂದು ನಿರ್ಣಯಕ್ಕೆ ಬರುವುದಾದರೆ ನಾವು ತೆಲುಗಿನ ಯಕ್ಷಗಾನ ಮತ್ತು ಕೂಚುಪುಡಿಗಳ ಬೆಳವಣಿಗೆಯನ್ನು ನೋಡುವುದು ಅವಶ್ಯವೆನಿಸುತ್ತದೆ. ಪಾರಿಜಾತಕ್ಕೆ ಸಂಬಂಧಪಟ್ಟ ತೆಲುಗಿನ ಯಕ್ಷಗಾನ ಕೃತಿಗಳು ಬಹುದೊಡ್ಡ ಪ್ರಮಾಣದಲ್ಲಿ ಒಬ್ಬ ಕವಿಯಿಂದ ಪ್ರಭಾವಿತವಾಗಿದ್ದರೆ ಕೂಚುಪುಡಿ ನೃತ್ಯ ಒಬ್ಬ ನೃತ್ಯಶಿಕ್ಷಕನಿಂದ ಆರಂಭಗೊಂಡಿತು. ನಂದಿತಿಮ್ಮಣ್ಣ ಮತ್ತು ಸಿದ್ಧೇಂದ್ರಯೋಗಿಗಳು ಕ್ರಮವಾಗಿ ಈ ಎರಡು ಪ್ರವಾಹಗಳಿಗೆ ಕಾರಣೀಪುರುಷರು.

ವಿಜಯನಗರದ ಕೃಷ್ಣದೇವರಾಯನ(ಕ್ರಿ.ಶ. ೧೫೦೯–೨೯) ಆಸ್ಥಾನದಲ್ಲಿದ್ದ ಅಷ್ಟದಿಗ್ಗಜಗಳಲ್ಲಿ ಒಬ್ಬ ನಂದಿತಿಮ್ಮಣ್ಣ. ಈತನಿಗೆ ಮುಕ್ಕುತಿಮ್ಮಣ್ಣ ಎಂಬ ಬೇರೊಂದು ಹೆಸರುಂಟು. ಈತ ಬರೆದ ತೆಲುಗು ಕಾವ್ಯ 'ಪಾರಿಜಾತಪಹರಣಮು', ಮೂಲತಃ ಪಾರಿಜಾತಕ್ಕೆ ಸಂಬಂಧಪಟ್ಟ ಹರಿವಂಶದ ಕಥಾಭಾಗವನ್ನು ಈ ಕೃತಿ ಒಳಗೊಂಡಿದೆ. ಇದು ಕನ್ನಡದ ರುದ್ರಭಟ್ಟನ ಜಗನ್ನಾಥವಿಜಯದ(ಕ್ರಿ.ಶ. ೧೩ನೆಯ ಶತಮಾನ) ಪ್ರಭಾವಕ್ಕೆ ಒಳಗಾಗಿದ್ದು, ಆ ಕಾವ್ಯದ ಪಾರಿಜಾತ ಕಥಾ ಪ್ರಸಂಗಕ್ಕೆ ಸಂಬಂಧಪಟ್ಟ ಪದ್ಯಗಳನ್ನು ಹೋಲುವ ಅನೇಕ ಪದ್ಯಗಳು ಇದರಲ್ಲಿವೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ನಂದಿತಿಮ್ಮಣ್ಣ ಸಂಸ್ಕೃತ ಹರಿವಂಶ ಅಥವಾ ಕನ್ನಡ ರುದ್ರಭಟ್ಟನ ಕಾವ್ಯದಿಂದ ಪ್ರಭಾವಿತನಾಗಿದ್ದರೂ ಸತ್ಯಭಾಮಾಳ ಪಾತ್ರಚಿತ್ರಣದಲ್ಲಿ ಸ್ವತಂತ್ರ ಧೋರಣೆಯನ್ನು ವಹಿಸಿದನು. "ತಿಮ್ಮಣ್ಣನು ತನ್ನ ಗ್ರಂಥದಲ್ಲಿ ಬರುವ ಸತ್ಯಭಾಮೆಯ ಪಾತ್ರ ನಿರ್ಮಾಣದಲ್ಲಿ ತನ್ನ ಸರ್ವಶಕ್ತಿಯನ್ನು ವಿನಿಯೋಗಿಸಿದ್ದಾನೆ. ವಸ್ತುವನ್ನು ಹರಿವಂಶದಿಂದ ಆರಿಸಿಕೊಂಡಿದ್ದರೂ ಸತ್ಯಭಾಮೆಯ ಪಾತ್ರದಲ್ಲಿ ವಾಚಕರಿಗೆ ಆತ್ಮೀಯತೆಯುಂಟಾಗುವುದು ತಿಮ್ಮಣ್ಣನ ಪ್ರತಿಭಾವೈಖರಿಯಿಂದ" ಎಂದು ತಿಳಿದುಬರುತ್ತದೆ.

ಹದಿನಾರನೆಯ ಶತಮಾನದ ಆದಿಯಲ್ಲಿ ಹುಟ್ಟಿದ ಈ ಕಾವ್ಯ ಅಥವಾ ಸತ್ಯಭಾಮೆಯ ಪಾತ್ರ ಎಷ್ಟೊಂದು ಜನಪ್ರಿಯವಾಯಿತೆಂದರೆ, ಈ ಕಾವ್ಯದ ಪ್ರಭಾವದಿಂದಲೇ ಆಂಧ್ರದಲ್ಲಿ ಪಾರಿಜಾತಕ್ಕೆ ಸಂಬಂಧಪಟ್ಟ ಎಷ್ಟೋ ಯಕ್ಷಗಾನ ಕೃತಿಗಳು ಹುಟ್ಟಿಕೊಂಡವು. ಕೆಲವು ಕೃತಿಗಳಂತೂ ನೇರವಾಗಿ ತಿಮ್ಮಣ್ಣನನ್ನು ಅನುಸರಿಸಿರುವ ವಿಷಯವನ್ನು ಡಾ.ಎಸ್.ವ್ಹಿ.ಜೋಗಾರಾವು ಅವರು ತಮ್ಮ 'ಆಂಧ್ರ ಯಕ್ಷಗಾನ ವಾಙ್ಮಯ ಚರಿತ್ರ' ಗ್ರಂಥದಲ್ಲಿ ಪ್ರಸ್ತಾಪಿಸಿದ್ದಾರೆ. ನರಕೂರಿ ನಾರಾಯಣನ(೧೭೭೭–೧೮೦೫) 'ಪಾರಿಜಾತಪಹರಣ', ಮಾತೃಭೂತಕವಿಯ(೧೭೮೭ ರಿಂದ ೯೮) 'ಪಾರಿಜಾತಾಪಹರಣ' ಮರುಧೂರಿ ತಾತಾಚಾರ್ಯರ (೧೯೧೯) 'ಸತ್ಯಭಾಮಾ ಮಾನಸೋಲ್ಲಾಸ ನಾಟಕಮು, ರಾವಿ ಕೊಂಡಪೇಟ ಚೆನ್ನರಾಯುಡು, ರಾಮತೀರ್ಥಹರಿ ಸತ್ಯ ವರಪುಗೋಪಾಲಡು (೧೯೦೩,೧೯೦೪) ಇವರ ಸಂಯುಕ್ತ ಕೃತಿ 'ಪಾರಿಜಾತಮು', ವೆಂಕಟೇಶಾಂಕಿತ (೧೯೦೫) 'ಪಾರಿಜಾತಪಹರಣಮು' ಇವು ಇಂಥ ಕೃತಿಗಳು. ಕವಿಯ ಹೆಸರು ಗೊತ್ತಿಲ್ಲದ 'ಕೃಷ್ಣವೇಷಮು'

ಎಂಬ ಕೃತಿ ನೇರವಾಗಿ ತಿಮ್ಮಣ್ಣನಿಂದ ಪ್ರಭಾವಗೊಂಡ ಮತ್ತು ಈ ಮಾರ್ಗದಲ್ಲಿ ನಿರ್ಮಾಣಗೊಂಡ ತೆಲುಗಿನ ಯಕ್ಷಗಾನ ಪಾರಿಜಾತ ಪರಂಪರೆಯನ್ನು ಹೀಗೆ ಸಂಗ್ರಹಿಸಬಹುದು. ಶ್ರೀರಾಮ ಇಟ್ಟಣ್ಣವರ ಸಂಶೋಧನಾ ಮಹಾಪ್ರಬಂಧದಲ್ಲಿ ಈ ಕೆಳಗಿನಂತೆ ವಿವರಿಸುವರು.

ತೆಲುಗಿನ ಯಕ್ಷಗಾನ – ಪಾರಿಜಾತ ಪರಂಪರೆ :

ಅ.ನಂ ಕೃತಿಯ ಹೆಸರು	ಕರ್ತೃ	ಕಾಲ
೧. ಪಾರಿಜಾತಾಪಹರಣಮು	ಶ್ರೀ ನಾರಾಯಣ ತೀರ್ಥಲು	ಕ್ರಿ.ಶ.೧೭೦೦
೨. ಪಾರಿಜಾತ ನಾಟಕಮು	ಜ್ಯೋತಿ ರಾಮಯ್ಯ	೧೭೩೭–೧೮೧೫
೩. ಪಾರಿಜಾತಪಹರಣ	ನರಕೂರಿ ನಾರಾಯಣ	೧೭೭೭–೧೮೦೫
೪. ಪಾರಿಜಾತ	ಪುರುಜಾಲು ಲಕ್ಷ್ಮೀನಾರಾಯಣ	೧೭೯೮
೫. ಕೃಷ್ಣ ವಿಲಾಸಮು	ಭಾರತುಲ ಶ್ರೀರಂಗಕವಿ	೧೮೦೧–೧೮೭೯
೬. ಪಾರಿಜಾತ ಹರಣಮು	ಶ್ರೀನಿವಾಸ	೧೮೦೧–೧೮೨೮
೭. ಪಾರಿಜಾತ	ಭಾರತಿ ರಾಮರಾಜ	ಕ್ರಿ.ಶ. ೧೮೧೩
೮. ಪಾರಿಜಾತಾಪಹರಣಮು	ತರಿಗೊಂಡ ವೆಂಗಮಾಂಬ	೧೮ನೇ ಶ.ದ ಉತ್ತರಾರ್ಧ
೯. ಪಾರಿಜಾತಮು	ನಂದನವರಮುಸಿಂಗ	೧೯೦೧–೧೯೦೨
೧೦. ಪಾರಿಜಾತಮು	ರಾವಿಕೊಂಡಪೇಟ ಚೆನ್ನ ರಾಯುಡು, ರಾಮತೀರ್ಥ ಹರಿ ಸತ್ಯವರಪು ಗೋಪಾಲಡು,	೧೯೦೩ –೧೯೦೪
೧೧. ಪಾರಿಜಾತಹರಣಮು	ವೆಂಕಟೇಶ್ವರಾಂಕಿತ	೧೯೦೫
೧೨. ಭಾಮಾ ಕಲಾಪ	ಉಪ್ಪುಲೂರಿ ವೀರ ರಾಘವ ಗಂಗಾಧರ	೧೯ನೇ ಶ.
೧೩. ಪಾರಿಜಾತಮು	ಚೆಲ್ಲನಾರಾಯಣ ಕವಿ	೧೯ನೇ ಶ.ದ ಪೂರ್ವಾರ್ಧ
೧೪ ಭಾಮಾ ಕಲಾಪ	–	೧೮೧೬–೧೮
೧೫. ಭಾಮಾ ಕಲಾಪ	–	೧೯೧೯
೧೬. ಸತ್ಯಭಾಮಾ	ಮಾನಸೋಲ್ಲಾಪ ನಾಟಕಮು ಮರುಧೂರಿ ತಾತಾಚಾರ್ಯ	ಕ್ರಿ.ಶ.೧೯೧೯

೧೭. ಕೃಷ್ಣ ವೇಷಮು	–	–
೧೮. ಕೃಷ್ಣ ಸಂಬಂಧಿ ಕಥ	–	–
೧೯. ಪಾರಿಜಾತಪಹರಣ	ಮಾತೃ ಭೂತಕವಿ	೧೭೮೭–೯೮
೨೦. ಪಾರಿಜಾತ ಅಥವಾ ಭಾಮಾಕಲಾಪ	–	–
೨೧. ಭಾಮಾಕಲಾಪಮು	ಭಮಿಡಿ ಪಾಟಿ ಅಪ್ಪಕವಿ	–
೨೨. ಸತ್ಯಭಾಮಾ ಸಂವಾದ ಅಥವಾ ಭಾಮಾ ಕಲಾಪ	ಗುಡಿಮೆಟ್ಲು ರಾಮಯ್ಯ	–
೨೩. ಭಾಮಾ ಕಲಾಪ	–	–
೨೪. ಶ್ರೀಕೃಷ್ಣ ಪಾರಿಜಾತ	–	–

ತೆಲುಗಿನ ಈ ಪಾರಿಜಾತ ಪರಂಪರೆಯನ್ನು ನೋಡಿದ ಮೇಲೆ ಈಗ ಕೂಚುಪುಡಿಯ ವಿಷಯವನ್ನು ಎತ್ತಿಕೊಳ್ಳಬಹುದು. ಕೂಚುಪುಡಿ ನೃತ್ಯದ ಆದ್ಯ ಪ್ರವರ್ತಕ ಸಿದ್ಧೇಂದ್ರ ಯೋಗಿ. ಸಿದ್ಧೇಂದ್ರಯೋಗಿ ಕಾಲವಿಷಯಕ್ಕೆ ಭಿನ್ನಾಭಿಪ್ರಾಯವಿದೆ. ಇವನ ವೈಯಕ್ತಿಕ ಬದುಕು, ಆ ಬದುಕಿನಲ್ಲಿ ಸಂಭವಿಸಿದ ಆಕಸ್ಮಿಕ ತಿರುವುಗಳು, ಧರ್ಮ ಮತ್ತು ಕಲೆ ಎರಡೂ ನಿಟ್ಟಿನಲ್ಲಿ ಒಂದೊಂದು ಪಂಥವನ್ನೇ ನಿರ್ಮಿಸಿದವು.[೧೫]

ಆಂಧ್ರದ ಶ್ರೀಕಾಕುಲಂ ಪ್ರದೇಶದಲ್ಲಿ ಸಿದ್ಧೇಂದ್ರಯೋಗಿ ತನ್ನ ಬಾಲ್ಯದಲ್ಲಿ ಜಯದೇವನ 'ಗೀತಗೋವಿಂದ'ದ ದೃಶ್ಯಗಳನ್ನು ದೇವಾಲಯಗಳಲ್ಲಿ ನೋಡಿದ್ದ. ರಾಜ ಪ್ರತಿನಿಧಿಯಾಗಿದ್ದ ನರಹರಿತೀರ್ಥ ಗೀತಗೋವಿಂದ ಕಾವ್ಯ ಮತ್ತು ಅಭಿನಯ ಎರಡಕ್ಕೂ ಹರವಾದ ಪ್ರಚಾರ ದೊರಕಿಸಿಕೊಟ್ಟ ಕಾಲ ಅದು. ಉಡುಪಿ ಮಠದಲ್ಲಿ ಆಧ್ಯಾತ್ಮ, ಅಭಿನಯ ಎರಡರಲ್ಲೂ ಪರಿಣತಿ ಹೊಂದಿದ್ದ ಸಿದ್ದೇಂದ್ರ ಯೋಗಿ ತನ್ನದೇ ಆದ ಸ್ವತಂತ್ರ ದೃಷ್ಟಿ ಬೆಳೆಸಿಕೊಂಡಿದ್ದವನು. ಬಾಲ್ಯದಲ್ಲಿ ಗೀತಗೋವಿಂದದ ದೃಶ್ಯಗಳು ಅವನನ್ನು ಸೆರೆಹಿಡಿದಿರಬಹುದು. ಆದರೆ ತನ್ನಲ್ಲಿ ಅಡಗಿದ್ದ ನೃತ್ಯಾಭಿನಯಗಳಿಗೆ ಒಂದು ಪರಿಣತಿ ಬಂದಮೇಲೆ ಆ ಕಲೆಗೆ ರಾಧೆಯ ಬದಲು ಸತ್ಯಭಾಮೆಯನ್ನು ಜೋಡಿಸಿದ. ರಾಧೆಯ ನಿಸ್ವಾರ್ಥ ಪ್ರೇಮಕ್ಕಿಂತಲೂ ಸತ್ಯಭಾಮೆಯ ಸ್ವಾರ್ಥಪ್ರೇಮ ಸಿದ್ದೇಂದ್ರಯೋಗಿಗೆ ಹಿಡಿಸಿದೆ. ತೀರ ಸಹಜ ಮಾನವೀಯ ಗುಣವೇ ಇದಾಗಿರುವುದು, ಅವನ ಈ ಮೆಚ್ಚುಗೆಗೆ ಕಾರಣವಾಗಿರಬಹುದು.

ಸತ್ಯಭಾಮಾಳ ವ್ಯಕ್ತಿತ್ವದ ಈ ಹಿನ್ನೆಲೆಯಲ್ಲಿ ಒಂದು ಪಂಥವೇ ಸಿದ್ದೇಂದ್ರಯೋಗಿಯಿಂದ ಅವಿರ್ಭವಿಸಿತು. ಸಿದ್ದೇಂದ್ರಯೋಗಿ 'ಭಾಮಾಕಲಾಪ'ದ ದೃಶ್ಯಗಳನ್ನು ತನ್ನ ಶಿಷ್ಯರಿಗೆ ಕಲಿಸಿದ ಮೇಲೆ ಪ್ರಯೋಗಗಳಿಗೆ ಮೊದಲಾಯಿತು. ಆತನ ಈ ಪಂಥ, ನೃತ್ಯಗಳಿಗೆ ಮಾರು ಹೋಗಿ

ಒಂದು ಕಾಲಕ್ಕೆ ಹರವಾಗಿ ಪ್ರಚಾರ ದೊರಕಿಸಿಕೊಂಡ ರಾಧಾಪಂಥವನ್ನು ಮರೆಯುವಂತಾಯಿತು. ಭಾಮಾಕಲಾಪದಲ್ಲಿ ಸತ್ಯ-ರುಕ್ಮಿಣಿಯರ ಸವತಿ ಮುಖ್ಯವಾಗಿದೆ. ಇದರಲ್ಲಿ ಮಾಧವಿಯೆಂಬ ಸಖಿ ಪಾತ್ರವೊಂದು ಸಿದ್ದೇಂದ್ರಯೋಗಿಗಳ ಅಪೂರ್ವ ಸೃಷ್ಟಿ. ಅರ್ವಾಚೀನ ಯಕ್ಷಗಾನ ಕೃತಿಗಳ ಮೇಲೆ ಭಾಮಾ ಕಲಾಪದ ಪ್ರಭಾವ ಹೆಚ್ಚಾಯಿತು. ಈ ಮಾರ್ಗದಲ್ಲಿ ಪಾರಿಜಾತ ಕೃತಿಯಂಥ ವೃತ್ತಾಂತಗಳು ಯಕ್ಷಗಾನಗಳಾಗಿ ಮೂಡಿದವು. ಅವುಗಳಲ್ಲಿಯೂ ಮಾಧವಿ ಪಾತ್ರವಿದೆ. ಸವತಿ ಮತ್ಸರ ಮುಖ್ಯವಾಗಿದೆ. ಸವತಿಯರ ಸಂದರ್ಭ, ಸಾದೃಶ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಯಕ್ಷಗಾನಗಳಲ್ಲಿ ಶಿವ ಪಾರಿಜಾತ, ಶಿವಕೇಶವ ಪಾರಿಜಾತವೆಂಬ ದೃಶ್ಯಕೃತಿಗಳು ನಿರ್ಮಾಣಗೊಂಡವು. ಉಲ್ಲೇಖನಾರ್ಹವಾದ ಒಂದು ಮಾತೆಂದರೆ ಪ್ರದರ್ಶನಾ ಪ್ರಕ್ರಿಯೆಯಲ್ಲಿ ಸಾಮಾನ್ಯ ಯಕ್ಷಗಾನಗಳಿಗೆ ಹೊರತಾದ ಭರತವಿದ್ಯಾ ವಿಶೇಷತೆ ಇಲ್ಲಿದೆ, ನೃತ್ಯ ಪ್ರಧಾನವಾಗಿದೆ. ನೃತ್ಯಕಳಾನುಕೂಲವಾಗಿ ರಸೈಕ ರಮ್ಯವಾಗಿ ಪ್ರದರ್ಶನಕ್ಕೆ ತಕ್ಕಂತೆ ಪಾತ್ರ ಸಾಮಗ್ರಿಗಳಿವೆ. ಭರತ ವಿದ್ಯಾ ದುರಂಧರವಾದ ಕೂಚುಪುಡಿ ಭಾಗವತರು ತೆಲಗು ಭೂಮಿಯ ಮೇಲೆ ನಾಲ್ಕು ಕಡೆಗಳಲ್ಲಿ ಸಂಚಾರ ಮಾಡಿರುವುದರಿಂದ ಭಾಮಾಕಲಾಪಕ್ಕೆ ಸಾಕಷ್ಟು ಪ್ರಚಾರ ದೊರಕಿತು. ಅದೇ ಪ್ರಮಾಣದಲ್ಲಿ ಅದರ ಪ್ರಭಾವವು ಅಧಿಕವಾಯಿತು.

ತೆಲುಗು ಪಾರಿಜಾತ ಯಕ್ಷಗಾನದ ಅನೇಕ ಕೃತಿಗಳು ನಂದಿತಿಮ್ಮಣ್ಣನ ಪ್ರಭಾವ ಪಡೆದಿರುವುದು ಸಿದ್ದೇಂದ್ರಯೋಗಿಯಿಂದ ಆರಂಭಗೊಂಡ ಅಭಿನಯದ ಬ್ರಾಹ್ಮಣ ವಂಶಗಳು ಇಂದಿಗೂ ತೆಲಗು ನಾಡಿನಲ್ಲಿ ಜೀವಂತವಾಗಿರುವುದು. ಈ ಎರಡು ಅಂಶಗಳಿಂದ ನಿರ್ಮಾಣಗೊಂಡ ತೆಲಗು ಪಾರಿಜಾತ ಪರಂಪರೆಯನ್ನು ಸಹಜವಾಗಿ ಊಹಿಸಬಹುದು.

ಇದು ಇಡಿಯಾಗಿ ತೆಲುಗಿನ ಯಕ್ಷಗಾನದ ನಡೆಯಾದರೆ ಇದರ ಒಂದು ಅಂಗವೆಂಬಂತೆ 'ಕೊರವಂಜಿ' ಸಂಪ್ರದಾಯವೂ ಅಲ್ಲಿದೆ. ಪಾರಿಜಾತಕ್ಕೆ ಹಿನ್ನೆಲೆಯನ್ನು ತೆಲುಗಿನ ಯಕ್ಷಗಾನ ಹೇಗೆ ಒದಗಿಸಿತು ಎಂಬುದನ್ನು ಸಮೀಕ್ಷಿಸುವಲ್ಲಿ ತೆಲುಗಿನಲ್ಲಿಯೇ ನಡೆದು ಬಂದ ಕೊರವಂಜಿ ಪರಂಪರೆಯ ಅರಿವು ಅವಶ್ಯವೆನಿಸುತ್ತದೆ. "ಕೊರವ, ಕುರವ ಎಂಬುದು ಆಂಧ್ರದ ಒಂದು ಆದಿವಾಸಿ ಸಮುದಾಯದ ಹೆಸರು. 'ಅಂಜಿ' ಅಂದರೆ ಪಾದ, ಹೆಜ್ಜೆ. ಕೊರವಂಜಿ ಎಂದರೆ ಕೊರವ ಸಮುದಾಯದವರ ಪಾದವಿನ್ಯಾಸ, ನೃತ್ಯ ಎಂದು ಅರ್ಥ. ಇವರು ಜಾತ್ರೆಯ ಕಾಲಕ್ಕೆ ನೃತ್ಯದ ಮೂಲಕ ಜನರಿಗೆ ಮನರಂಜನೆ ನೀಡಿ ಹಣ ಪಡೆಯುತ್ತಿದ್ದುದಾಗಿ ತಿಳಿದುಬರುತ್ತದೆ. ಇವರು ಕಣಿ ಹೇಳುವ ಕಾಯಕವನ್ನು ಪರಂಪರಾಗತವಾಗಿ ನಡೆಸಿಕೊಂಡು ಬಂದಿದ್ದಾರೆ. ತಿರುಪತಿ ವೆಂಕಟೇಶನು ಕೊರವಂಜಿ ವೇಶದಿಂದ ಪದ್ಮಾವತಿಯಲ್ಲಿಗೆ ಹೋಗಿ ಕಣಿ ಹೇಳಿ ಬರುತ್ತಾನೆ. ಬಹುಶಃ ಈ ಕಥಾಂಶ ಭಕ್ತಕವಿಗಳನ್ನು ಹೆಚ್ಚು ಆಕರ್ಷಿಸಿತು. ಹೀಗೆ ಕೊರವಂಜಿಯಾಗುವ ಹಲವಾರು ಕಥೆಗಳನ್ನು ಹೆಣೆದರು. ಹದಿನೇಳನೆಯ ಶತಮಾನದ ಹೊತ್ತಿಗೆ ತೆಲುಗು ಸಾಹಿತ್ಯದಲ್ಲಿ ಕೊರವಂಜಿ ಕೃತಿಗಳ ನಿರ್ಮಾಣ ಪ್ರಾರಂಭವಾಯಿತು. ತಮ್ಮ ಇಷ್ಟ ದೇವರನ್ನು ಕೊರವಂಜಿ ವೇಷದಲ್ಲಿ ನೋಡಿ ನಲಿಯುವ ಮೋಜಿನ ಹವ್ಯಾಸ ಬೆಳೆಯಿತು. ಕೊರವಂಜಿ ಪಾತ್ರ ಕಾವ್ಯದಲ್ಲಿ

ಒಂದು ತಂತ್ರವಾಗಿ ಬಳಸಲ್ಪಡತೊಡಗಿರು. ಈ ಹುಚ್ಚು ರಾಮಾನುಜಾಚಾರ್ಯರನ್ನು ಕೊರವಂಜಿಯನ್ನಾಗಿ ಮಾಡುವವರೆಗೂ ಹೋಯಿತು.

ಭಾಮಾಪಂಥದ ತಾತ್ವಿಕ ವಿಷಯ, ಕೂಚುಪುಡಿಯ ಅಭಿನಯದ ಶಾಸ್ತ್ರೀಯತೆ ಹೇಗೇ ಇರಲಿ ಭಾಮೆಯ ಮಾನವೀಯ ಗುಣಗಳು ಮಾತ್ರ ಆಂಧ್ರದ ಕಾವ್ಯ, ಬಯಲಾಟಗಳ ಮುಖಾಂತರ ಅನಾವರಣಗೊಂಡವು. ಹೀಗೆ ಬೆಳೆದ ಪಾರಿಜಾತ ಪರಂಪರೆ ಆಂಧ್ರದ ಸೀಮೆಯಲ್ಲಿ ಹುಟ್ಟಿ ಬೆಳೆದ ಕನ್ನಡಿಗರನ್ನು ಆಕರ್ಷಿಸದೆಯೇ ಇರುತ್ತದೆಯೇ? ಕ್ರಿ ಶ. ೧೭೫೦ರ ಸುಮಾರಿಗೆ ಪಾರಿಜಾತ ವಿಷಯ ಹರವಾದ ಪ್ರಚಾರ ದೊರಕಿಸಿಕೊಂಡ ಹೊತ್ತಿಗೆ ಅಪರಾಳ ತಮ್ಮಣ್ಣ, ಶಿರಗುಪ್ಪಿ ಸದಾಶಿವಪ್ಪ ಇಂತಹ ಕೃತಿಯನ್ನು ಓದಿದ್ದಾರೆ ಅಥವಾ ಇಂತಹ ಅನೇಕ ಕೃತಿಗಳ ಓದಿನ ಪರಿಣಾಮ ಅವರ ಮೇಲೆ ದಟ್ಟವಾದ ಪ್ರಭಾವ ಬೀರಿ ಇಂತಹ ಒಂದು ಕೃತಿ ರಚನೆಗೆ ಪ್ರೇರಣೆ ಒದಗಿದೆ. ಹದಿನೆಂಟನೆ ಶತಮಾನದ ಉತ್ತರಾರ್ಧದ ತರಿಗೊಂಡವೆಂಗಮಾಂಬ ಎಂಬವಳ ಕೃತಿ 'ಪಾರಿಜಾತಹರಣಮು' ತದ್ರೂಪವಾಗಿ ಕನ್ನಡದ ಕಾವ್ಯ 'ಅಪರಾಳ ಪಾರಿಜಾತ' ವನ್ನೆ ಹೋಲುತ್ತದೆ. ಶ್ರೀಕೃಷ್ಣ ಪಾರಿಜಾತ ವೃಕ್ಷವನ್ನು ತರುವುದನ್ನು ಸತ್ಯಭಾಮೆಗೆ ಹೇಳುವುದರೊಂದಿಗೆ ಈ ಕೃತಿ ಪ್ರಾರಂಭವಾಗುತ್ತದೆ.

ಸತ್ಯಭಾಮಾ ವಿರಹ, ಸತ್ಯಭಾಮಾ ಕೃಷ್ಣರ ಸಂದೇಶಗಳು ಸಂವಾದಗಳು ಸತ್ಯಭಾಮಾನಲ್ಲಿಗೆ ಸರಸ್ವತಿ ಕೊರವಂಜಿಯಾಗಿ ಬರುವುದು, ಸತ್ಯಭಾಮಾ ತಪಸ್ಸು ಸ್ವಾಮಿಯನ್ನು ಪ್ರಸನ್ನ ಮಾಡಿಕೊಳ್ಳುವದು, ನರಕಾಸುರ ವಧೆ, ಪಾರಿಜಾತಹರಣ, ಇಂದ್ರೋಪೇಂದ್ರರಲ್ಲಿ ಯುದ್ಧ ವಿಜೇತರು ಸತ್ಯಭಾಮೆಯ ಮನೆಗೆ ಬಂದ ಕೂಡಲೆ ಸವತಿ ಜಗಳ, ರುಕ್ಮಿಣಿಯ ತೀರ್ಪು–ಇಷ್ಟು ಘಟಾನುವಳಿಗಳೂ ತರಿಗೊಂಬವೆಂಗಮಾಂಬ ಕೃತಿಯಲ್ಲಿವೆ. ಕನ್ನಡ ಪಾರಿಜಾತದಲ್ಲಿ ಸರಸ್ವತಿಯ ಬದಲಾಗಿ ಕೃಷ್ಣ ಕೊರವಂಜಿಯಾಗಿ ಬರುತ್ತಾನೆ ಎಂಬದೊಂದು ಬಿಟ್ಟರೆ, ಪ್ರತಿಯೊಂದು ಘಟನೆಯು ಅನುಕ್ರಮವಾಗಿ ಕನ್ನಡ ಪಾರಿಜಾತಕ್ಕೆ ಹೊಂದಿಕೊಳ್ಳುತ್ತದೆ. "ವೆಂಗಮಾಂಬಳ ಕೃತಿಯಲ್ಲಿ" ಬ್ರಹ್ಮ ಸಿಂಗನಾಗುವ ವಿಷಯ ಕನ್ನಡ ಪಾರಿಜಾತದಲ್ಲಿ ಇಲ್ಲ. ಕನ್ನಡ ಪಾರಿಜಾತ ಈ ಕೃತಿಯಿಂದಲೆ ಹುಟ್ಟಿತೆಂಬುದಕ್ಕೆ ಆಧಾರವಿಲ್ಲ. ಎರಡೂ ಕೃತಿಗಳಿಗೆ ಮೂಲವಾಗಿ ಇನ್ನೊಂದು ಪಾರಿಜಾತವಿರಲೂಬಹುದು. ಅವಶ್ಯವಾಗಿ ಗಮನಿಸಬೇಕಾದ ಒಂದು ಮಾತೆಂದರೆ ವೆಂಗಮಾಂಬಳಿಗೆ ಮೊದಲು ಈ ಮಾದರಿಯ ಮೂರು ನಾಲ್ಕು ಯಕ್ಷಗಾನಗಳು ಹುಟ್ಟಿಕೊಂಡಿದ್ದವು. ಇವುಗಳಿಗಿಂತ ಮೊದಲು ತೆಲುಗಿನಲ್ಲಿ ಪಾರಿಜಾತವನ್ನು ಬಯಲಾಟವಾಗಿ ಆಡಿದ ಬಗ್ಗೆ ದಾಖಲೆ ಇದೆ. ಆದರೆ ಅಪರಾಳ ಪಾರಿಜಾತಕ್ಕೆ ಮೊದಲು ಕನ್ನಡದಲ್ಲಿ ಪಾರಿಜಾತಗಳಿದ್ದುವೆಂಬುದಕ್ಕಾಗಲಿ, ಶ್ರೀಕೃಷ್ಣ ಪಾರಿಜಾತವನ್ನು ಅಪರಾಳ ಪಾರಿಜಾತಕ್ಕೆ ಮೊದಲು ಆಡುತ್ತಿದ್ದರೆಂಬುದಕ್ಕಾಗಲಿ ಆಧಾರಗಳಿಲ್ಲ. ಈಗಾಗಲೇ ಒಂದು ಪರಂಪರೆಯನ್ನು ಪಡೆದುಕೊಂಡು ಕ್ರಮಕ್ಕೆ ತೊಡಗಿದ ಕಡೆಯಿಂದಲೇ ಕೃತಿಯನ್ನು ಆಮದು ಮಾಡಿಕೊಳ್ಳುವ ಸಾಧ್ಯತೆ ಹೆಚ್ಚು. ಆದ್ದರಿಂದ ಅಪರಾಳ ಪಾರಿಜಾತದ ಕರ್ತೃ ಈಗಾಗಲೇ ಆಟವಾಗಿ ನಿರಂತರವಾಗಿ ತೆಲುಗಿನ ಪಾರಿಜಾತದಿಂದ ವಿಷಯವನ್ನು ಗ್ರಹಿಸಿರಲು ಸಾಕು.

ಅಪರಾಳ ತಮ್ಮಣ್ಣ ತನ್ನ ಕಾವ್ಯ ಭಾಗದಲ್ಲಿ ಕೊರವಂಜಿಯ ಪಾತ್ರದ ಪ್ರಾರಂಭಕ್ಕೆ ತೆಲುಗು ಪದ್ಯಗಳನ್ನು ಜೋಡಿಸಿದ್ದಾನೆ. ಯಾವುದೇ ಭಾಷೆಯನ್ನು ಕೂಲಂಕುಷವಾಗಿ ಅಭ್ಯಾಸ ಮಾಡಲಾರದೇ ಒಮ್ಮೆಲೇ ಪದ್ಯ ಕಟ್ಟುವುದು ಅಸಾಧ್ಯ. ಖಂಡಿತವಾಗಿಯೂ ಅಪರಾಳ ತಮ್ಮಣ್ಣ ತೆಲುಗು ಬಲ್ಲವನಾಗಿರಬೇಕು. ತೆಲುಗು ಭಾಷೆಯಲ್ಲಿ ಪದ್ಯಗಳನ್ನು ರಚಿಸುವ ಶಕ್ತಿ ಪಡೆದ ತಮ್ಮಣ್ಣ ತೆಲುಗು ಸಾಹಿತ್ಯದ ಅಭ್ಯಾಸವನ್ನು ಮಾಡಿರಬೇಕು. ಇಂಥ ಹೊತ್ತಿನಲ್ಲಿ ನಂದಿ ತಿಮ್ಮಣ್ಣನ "ಪಾರಿಜಾತಪಹರಣಮು", ಸಿದ್ಧೇಂದ್ರಯೋಗಿಯ 'ಭಾಮಾ ಕಲಾಪ' ನೇರವಾಗಿ ದೃಷ್ಟಿಗೆ ಬಿದ್ದಿರಬೇಕು. ಇವೆರೆಡೂ ಕೃತಿಗಳು ಹರವಾದ ಪ್ರಚಾರ ಪಡೆದು ಆ ಭಾಷೆಯವರೆಗೆ ಸಾಹಿತ್ಯ ಮಾರ್ಗ, ಅಭಿನಯ ಮಾರ್ಗ ಎರಡೂ ಆಗಿರುವ ಹೊತ್ತಿನಲ್ಲಿ ಈ ದಿಸೆಯ ಹಲವಾರು ಕೃತಿಗಳನ್ನೂ ಅಪರಾಳ ತಮ್ಮಣ್ಣ, ಸಿರಗುಪ್ಪ ಸದಾಶಿವಪ್ಪ ಓದಿದ್ದಾರೆ. ತರುವಾಯ 'ಶ್ರೀಕೃಷ್ಣ ಪಾರಿಜಾತ' ಕೃತಿಯನ್ನು ರಚಿಸಿದ್ದಾರೆ.

ಈ ಪ್ರಭಾವದಡಿಯಲ್ಲಿ ಅಪರಾಳ ತಮ್ಮಣ್ಣನಿಗಾಗಲೀ, ಸಿರಗುಪ್ಪ ಸದಾಶಿವಪ್ಪನಿಗಾಗಲೀ ತೆಲುಗು ಮಾದರಿಯ ಕೂಚುಪುಡಿ ಅಥವಾ ಯಕ್ಷಗಾನ ಕೃತಿಯನ್ನು ರಚಿಸುವ ಉದ್ದೇಶವಿಲ್ಲ. ಅಪರಾಳ ಪಾರಿಜಾತವನ್ನು ಇಡಿಯಾಗಿ ಅವಲೋಕಿಸಿದರೆ ಇದರಲ್ಲಿ ವಿಷ್ಣುಪಾರಮ್ಯವನ್ನು ಕೀರ್ತಿಸಿ ಕೀರ್ತನ ಕಾವ್ಯವಾಗಿಸುವ ಕವಿ ಉದ್ದೇಶ ಸ್ಪಷ್ಟವಾಗುತ್ತದೆ. ಈ ವಿಷಯವನ್ನು ಮುಂದಿನ ಪ್ರಕರಣದಲ್ಲಿ ಸಮಾಲೋಚಿಸಲಾಗುವುದು. ತೆಲುಗಿನ ಪ್ರಭಾವ ಕನ್ನಡ ಶ್ರೀಕೃಷ್ಣಪಾರಿಜಾತ ಕೃತಿಯ ಮೇಲೆ ಆಗಿದೆ. ಅಷ್ಟೇ ಅಲ್ಲ, ಬಯಲಾಟದ ಮೇಲೆಯೂ ಈ ಪ್ರಭಾವ ಸ್ಫುಟವಾಗಿದೆ. ಪಾರಿಜಾತ ಬಯಲಾಟದ ಗೊಲ್ಲತಿಯ ಪ್ರವೇಶಕ್ಕೆ 'ಗೊಲ್ಲಕಲಾಪಮು' ಆಧಾರವಾಗಿರುವಂತೆ ತೋರುತ್ತದೆ. 'ಗೊಲ್ಲಕಲಾಪಮು' ಸಿದ್ಧೇಂದ್ರಯೋಗಿಯ ಮತ್ತೊಂದು ಕೃತಿ.

"ಇದು ಕುಚುಪುಡಿಯ ಇನ್ನೊಂದು ವಿಶೇಷ. ಇದು ಗೌಳಿಗಿತ್ತಿ ಮತ್ತು ಬ್ರಾಹ್ಮಣನೊಬ್ಬನ ನಡುವೆ ನಡೆದ ತಾತ್ವಿಕ ಸಂದೇಶವೇ ಆಗಿದೆ. ಈ ಭಾಗವನ್ನು ಸರಿಯಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ಸಂಸ್ಕೃತದ ಸ್ವಾಮ್ಯ ಅವಶ್ಯ ಇರಬೇಕಾಗುತ್ತದೆ. ಇದು ಕ್ರಮಬದ್ಧ ಕಥೆಯಾಗಿರದೇ ವಿಶದವಾದ ಮತಾನುಚರಣೆಯಲ್ಲಿನ ಯಜ್ಞಗಳ ನಿಷ್ಪ್ರಯೋಜಕ ಮಾನಸಿಕ ಯಜ್ಞದ ಶ್ರೇಷ್ಠತೆ, ಆದರ್ಶಪ್ರಾಯ ಸಂಸಾರಿಕ ಜೀವನ ಮತ್ತು ಪಿಂಡೋತ್ಪತ್ತಿ ಕರ್ಮಗಳಂತೆ ವಿವಿಧ ಸಾಂಸ್ಕೃತಿಕ ಪ್ರಕರಣಗಳನ್ನು ಕುರಿತ ಪ್ರವಚನವಾಗಿದೆ. ಇದೊಂದು ಸಾಮಾಜಿಕ ವಿಡಂಬನೆಯಾಗಿದ್ದು, ಮನೋರಂಜನೆಗಿಂತ ಹೆಚ್ಚಾಗಿ ಬೋಧಪರವಾದುದಾಗಿದೆ. ಗೌಳಗಿತ್ತಿ, ತಾನು ಸಂಸ್ಕೃತಿ, ಜ್ಞಾನ, ಶಿಕ್ಷಣ ಹಾಗೂ ಗೌರವದಲ್ಲಿ ಬ್ರಾಹಣರಿಗಿಂತ ಕೀಳಾದವಳಲ್ಲ ಎಂಬುದನ್ನು ಸಿದ್ಧಪಡಿಸುತ್ತಾಳಲ್ಲದೆ ಶೂದ್ರನಾಗಿ ಹುಟ್ಟಿದ ಮನುಷ್ಯನೊಬ್ಬ ದೀಕ್ಷೆ ಪಡೆದ ಅನಂತರ ಬ್ರಾಹ್ಮ್ಯವನ್ನು ಗಳಿಸಿಕೊಳ್ಳಬಹುದೆಂದು ವಾದಿಸುತ್ತಾಳೆ." ಇದು ಆಂಧ್ರದಲ್ಲಿ ಸ್ವತಂತ್ರ ದೃಶ್ಯ. ಮೇಲೆ ಉಲ್ಲೇಖಿಸಿದಂತೆ ಇದು ಸಮಾಜವನ್ನು ವಿಶ್ಲೇಷಿಸುವ ವೈಚಾರಿಕತೆಯನ್ನು ಪಡೆದಿದೆ. ಕನ್ನಡ ಪಾರಿಜಾತದ ಗೌಳಿಗಿತ್ತಿ ಶರೀರ ಆತ್ಮ

ಮುಂತಾಗಿ ಅಧ್ಯಾತ್ಮಿಕ ವಿಷಯಗಳಿಗೆ ಒತ್ತುಕೊಡುತ್ತಾಳೆ. ವಿಷಯ ಏನೇ ಇರಲಿ, ಕುಲಗೋಡ ತಮ್ಮಣ್ಣ ಇಂಥ ಒಂದು ದೃಶ್ಯ ನೋಡಿರಬಹುದೇ ಅನಿಸುತ್ತದೆ.

ಕೂಚುಪುಡಿಯ ರಂಗಸಂಪ್ರದಾಯದ ಅನೇಕ ಅಂಶಗಳನ್ನು ಕನ್ನಡ ಪಾರಿಜಾತ ಪ್ರಯೋಗದಲ್ಲಿ ಕಾಣಬಹುದು. ೧. ಪಾತ್ರ ತಾನೇ ಹಾಡುವದು ೨. ಪಾತ್ರದ ಹಾಡಿಕೆಗೆ ಹಿಮ್ಮೇಳವೊಂದು ಆಧಾರವಾಗಿರುತ್ತದೆ. ೩. ಶ್ಲೋಕಗಳು ಬಳಸಲ್ಪಡುತ್ತವೆ. ೪. ಸಂಗೀತ ಶಾಸ್ತ್ರೀಯವಾಗಿರುತ್ತದೆ. ೫. ಪಾತ್ರ ಪ್ರವೇಶಕ್ಕೆ ಮೊದಲು ವ್ಯಕ್ತಿಗಳಿಬ್ಬರು ಪಾತ್ರಕ್ಕೆದುರಾಗಿ ಪರದೆ ಹಿಡಿದಿರುತ್ತಾರೆ.

ಬಿ. ಕನಕಲಿಂಗೇಶ್ವರರಾವ್ ಕೂಚುಪುಡಿ ವಿಷಯಕ್ಕೆ ಹೇಳುವ ಅಂಶಗಳೊಂದಿಗೆ ಡಾ. ಸುಂಕಾಪೂರ ಅವರು ಕುಣಿತದ ವಿಷಯಕ್ಕೆ ಹೇಳುವ ಮಾತುಗಳನ್ನು ಗಮನಿಸಬೇಕಾಗುತ್ತದೆ. "ಪಾರಿಜಾತದ ಕುಣಿತ ಹಾಗೂ ಎರಡೂ ಪಾದಗಳನ್ನು ನೆಲಕ್ಕೆ ಹೊಸೆಯುತ್ತ ಮುಂದೆ ಸಾಗುವುದರಲ್ಲಿಯೇ ಸಾರ್ಥಕ್ಯ ಪಡೆಯುತ್ತದೆ. ಇಂತಹ ಕುಣಿತವನ್ನು ನಾವು ಮತ್ತೆಲ್ಲಿಯೂ ಕಾಣಲಾರೆವು. ಈ ಕುಣಿತ ಕೂಚುಪುಡಿಯಲ್ಲಿ ತಲೆಯ ಮೇಲೆ ಬಿಂದಿಗೆ ಹೊತ್ತು ಹಿಂದು ಮುಂದು ಸರಿಯುತ್ತ ಕುಣಿಯುತ್ತಾರೆ." ಶ್ರೀ ಬಿ.ಕನಕಲಿಂಗೇಶ್ವರರಾವ್ ಅವರು ಹೇಳುವ ಕೂಚುಪುಡಿಯ ಉಳಿದ ಲಕ್ಷಣಗಳು ಕನ್ನಡ ಪಾರಿಜಾತ ಬಯಲಾಟದಲ್ಲಿ ಹೇಗೆ ಸಮಾವೇಶಗೊಂಡಿವೆಯೆಂಬುದನ್ನೂ, ಹಾಗೇ ಕನ್ನಡದ ಯಕ್ಷಗಾನದ ಪ್ರಭಾವವನ್ನೂ ಇದೇ ಪ್ರಬಂಧದಲ್ಲಿ ಮುಂದಿನ ಪ್ರಕರಣದಲ್ಲಿ ಕಾಣಬಹುದು.[೧೬]

೩.೮. ಪ್ರಸನ್ನ ವೆಂಕಟದಾಸರ ಸತ್ಯಭಾಮ ವಿಲಾಸ :

ಅಪರಾಳ ತಮ್ಮಣ್ಣನ ಶ್ರೀಕೃಷ್ಣ ಪಾರಿಜಾತ ಕಾವ್ಯಕ್ಕೆ ಪ್ರಸನ್ನ ವೆಂಕಟದಾಸರ ಕೃತಿಯೇ ಆಧಾರವಾಗಿದೆ ಎಂಬ ಮಾತನ್ನು ಡಾ. ಎಂ.ಎಸ್. ಸುಂಕಾಪೂರ ಅವರು ಹೇಳುತ್ತಾರೆ. "ಶ್ರೀ ಪ್ರಸನ್ನ ವೆಂಕಟದಾಸರು ಕ್ರಿ.ಶ. ೧೬೮೦–೧೭೫೨ರ ಸುಮಾರಿಗೆ ಶ್ರೀಕೃಷ್ಣ ಪಾರಿಜಾತವೆಂಬ ಗೀತನಾಟಕವನ್ನು ರಚಿಸಿದುದನ್ನು ಗಮನಿಸಬೇಕು. ಈ ಕೃತಿಯಲ್ಲಿ ಬಂದಿರುವ ಹಾಡುಗಳು ಸಂಭಾಷಣೆಯ ರೂಪದಲ್ಲಿದ್ದು ಹೃದಯಂಗಮವಾಗಿದೆ. ಲಘು ಸಂಗೀತಕ್ಕೆ ಮೊಟ್ಟ ಮೊದಲು ಸ್ಥಾನ ದೊರೆತುದುದು ಈ ಕೃತಿಯಲ್ಲಿಯೇ. ಇದನ್ನೋದಿಕೊಂಡು ಅಪರಾಳ ತಮ್ಮಣ್ಣ ಶ್ರೀಕೃಷ್ಣಪಾರಿಜಾತವೊಂದನ್ನು ಬರೆದ." ಪ್ರೊ. ಭುಜೇಂದ್ರ ಮಹೀಶವಾಡಿಯವರು ಅಪರಾಳ ಪಾರಿಜಾತದ ಮೇಲಾದ ತೆಲುಗು ತಮಿಳಿನ ಪ್ರಭಾವವನ್ನು ಗುರುತಿಸುವದರೊಂದಿಗೆ ಅಪರಾಳ ಪಾರಿಜಾತಕ್ಕೆ ಹಿಂದೆ ಕನ್ನಡದ್ದೇ ಆದ ಪರಂಪರೆ ಇತ್ತೆಂದು ಹೇಳಿ ಅನೇಕ ಕವಿಗಳನ್ನು ಉಲ್ಲೇಖಿಸುತ್ತಾರೆ. "ಅಪರಾಳ ತಮ್ಮಣ್ಣನಿಗೆ ಸ್ಫೂರ್ತಿ ನೀಡಿದೆಯೆಂದು ಹೇಳಲಾದ ಪ್ರಸನ್ನ ವೆಂಕಟದಾಸರ (೧೬೮೦–೧೭೫೨) ಶ್ರೀಕೃಷ್ಣ ಪಾರಿಜಾತ ಅಥವಾ ಸತ್ಯಭಾಮ ವಿಲಾಸವು ಒಂದು ಲಘು ಗೀತ ನಾಟಕವಾಗಿದೆ. ನಾರದ ಕೊರವಂಜಿಯೆಂಬ ಅವರ ಇನ್ನೊಂದು ಕೃತಿಯೂ ಗೀತ ನಾಟಕವಾಗಿದೆ. ಹೆಳವನಕಟ್ಟೆಯ ಗಿರಿಯಮ್ಮನ (ಸು.೧೭೫೦) ಬ್ರಹ್ಮ ಕೊರವಂಜಿ,

ಮುಮ್ಮಡಿ ಕೃಷ್ಣರಾಜರ (೧೭೫೪-೧೮೫೮) ಭಾಮಾ ಕಥೆ ಅಥವಾ ಪಾರಿಜಾತಪಹರಣದ ಕಥೆ ಮತ್ತು ಪ್ರಸನ್ನ ಕೃಷ್ಣ ಕೊರವಂಜಿ ಕಥೆ ಯಕ್ಷಗಾನಗಳು, ಚಂದ್ರಸಾರವರ್ಣಿಯ (೧೭೭೫-೧೮೭೦) ಮನ್ಮಥ ಕೊರವಂಜಿ, ವಸುದೇವ ಪಾರಿಜಾತ ಯಕ್ಷಗಾನಗಳು, ರಾಯಣ್ಣನ (ಸು.೧೭೨೦) ಪದ್ಮಾವತಿ ಯಕ್ಷಗಾನ, ಸಾಮಿಕವಿ (ಸು.೧೭೫೦) ಯ ಬಿಳಿಯಕಲ್ಲ ರಂಗಸ್ವಾಮಿಯ ಪಾರಿಜಾತ ಯಕ್ಷಗಾನ, ವೆಂಕನ (ಸು. ೧೮೦೦) ಪಾರ್ವತಿ ಕೊರವಂಜಿ ಯಕ್ಷಗಾನ, ಅನಂತನಾಥ ಕವಿಯ (ಸು. ೧೮೦೦) ಮನ್ಮಥ ಕೊರವಂಜಿ ಯಕ್ಷಗಾನ ಮತ್ತು ಕವಿಗಳ ಹೆಸರು ಗೊತ್ತಿಲ್ಲದ ಸು. ೧೭೧೦ರ ಕರ್ನಾಟಕ ಕೊರವಂಜಿ, ಸು. ೧೮೩೦ರ ಪ್ರಸನ್ನ ಕೃಷ್ಣ ಕೊರವಂಜಿ ಅಥವಾ ನವಪಾರಿಜಾತ ಯಕ್ಷಗಾನ, ಸು. ೧೮೩೦ರ ಅಮ್ಮಣ್ಣಿ ಪಾರಿಜಾತ ಯಕ್ಷಗಾನ ಮುಂತಾದ ಕೃತಿಗಳೆಲ್ಲವೂ ಅಪರಾಳ ತಮ್ಮಣ್ಣನ ಕೃತಿ (ಸು. ೧೮೫೦)ಗಿಂತಲೂ ಮೊದಲೇ ರಚಿತವಾಗಿವೆ. ಅವನಿಗಿಂತ ಪೂರ್ವದಲ್ಲಿ ಸುಮಾರು ಒಂದು ನೂರು ವರ್ಷದ ಪರಂಪರೆ ಇದೆ.

ಮೇಲಿನ ಇಬ್ಬರೂ ವಿದ್ವಾಂಸರು ಅಪರಾಳ ತಮ್ಮಣ್ಣನ ಕಾಲವನ್ನು ಸರಿಯಾಗಿ ನಿಷ್ಕರ್ಷಿಸದೇ ಹೋದುದು ಮೇಲಿನ ತಪ್ಪು ಅಭಿಪ್ರಾಯಗಳಿಗೆ ಆಸ್ಪದ ನೀಡಿತು. ಪ್ರಸನ್ನ ವೆಂಕಟದಾಸರು (ಕ್ರಿ.ಶ. ೧೬೮೦-೧೭೫೨) ತಮ್ಮಣ್ಣನಿಗಿಂತಲೂ ಪೂರ್ವದವರಲ್ಲ. ಪ್ರಸನ್ನ ವೆಂಕಟದಾಸರು ಅಪರಾಳ ತಮ್ಮಣ್ಣನ ಹಿರಿಯ ಸಮಕಾಲೀನರಾಗುತ್ತಾರೆ. ಅಥವಾ ಅಪರಾಳ ತಮ್ಮಣ್ಣನ ಕಾಲ ಇನ್ನೂ ಹಿಂದೆ ಸರಿಯುವ ಸಾಧ್ಯತೆಗಳಿವೆ. (ಅಪರಾಳ ತಮ್ಮಣ್ಣನ ಕಾಲದ ವಿವೇಚನೆಯನ್ನು ಮುಂದಿನ ಪ್ರಕರಣದಲ್ಲಿ ಮಾಡಲಾಗಿದೆ.) ಬಿ. ಬಿ. ಮಹಿಷವಾಡಿಯವರು ಕೊಡುವ ಪಟ್ಟಿಯಲ್ಲಿ ಪ್ರಸನ್ನ ವೆಂಕಟದಾಸರ ತರುವಾಯ ಬರುವ ಹೆಳವನಕಟ್ಟೆ ಗಿರಿಯಮ್ಮ ಪ್ರಾಯಶಃ ಅಪರಾಳ ತಮ್ಮಣ್ಣನ ಸಮಕಾಲೀನಳಾಗುತ್ತಾಳೆ ಅಥವಾ ಕಿರಿಯವಳಾಗುತ್ತಾಳೆ. ಉಳಿದವರೆಲ್ಲ ಅಪರಾಳ ತಮ್ಮಣ್ಣನಿಗಿಂತ ಈಚಿನವರು. ಪ್ರಸನ್ನ ವೆಂಕಟದಾಸರು ನಾರದ ಕೊರವಂಜಿ, ಹೆಳವನಕಟ್ಟೆ ಗಿರಿಯಮ್ಮನ ಬ್ರಹ್ಮ ಕೊರವಂಜಿ ಕಥೆಗಳಿಗೂ ಅಪರಾಳ ಪಾರಿಜಾತ ಕಾವ್ಯದ ಕಥೆಗೂ ಸಂಬಂಧವಿಲ್ಲ. ಇನ್ನು ಪ್ರಸನ್ನ ವೆಂಕಟದಾಸರು ಪಾರಿಜಾತ ಕೃತಿಯನ್ನು ಅಪರಾಳ ತಮ್ಮಣ್ಣ ನೋಡಿದ್ದಾನೆ ಎಂದರೂ, ಆ ಕೃತಿಯ ಪ್ರಭಾವ ಅಪರಾಳ ಪಾರಿಜಾತದ ಮೇಲೆ ಆಗಿರುವ ಸಾಧ್ಯಾಸಾಧ್ಯಾತೆಗಳನ್ನೀಗ ಚರ್ಚಿಸಬಹುದು.

ಪ್ರಸನ್ನ ವೆಂಕಟದಾಸರ ಕೃತಿ- 'ಸತ್ಯಭಾಮಾ ವಿಲಾಸ' ಒಂದು ಕಥನ ಕೀರ್ತನವೇ ಹೊರತು ಡಾ. ಸುಂಕಾಪೂರ ಮತ್ತು ಬಿ.ಬಿ. ಮಹಿಷವಾಡಿ ಅವರು ಗುರ್ತಿಸಿದಂತೆ ಗೀತನಾಟಕವಲ್ಲ. ಪುರಾಣದ ಪಾರಿಜಾತ ಪ್ರಸಂಗವನ್ನು ಎತ್ತಿಕೊಂಡು ಶ್ಲೋಕ-ಪದಗಳೊಂದಿಗೆ ಕಥೆಯನ್ನು ಹೆಣೆಯಲಾಗಿದೆ. ಆದ್ದರಿಂದ ಈ ಕೃತಿ ರಚನೆಯಲ್ಲಿ ಪ್ರಸನ್ನ ವೆಂಕಟದಾಸರಿಗಿದ್ದ ಉದ್ದೇಶ ಹಾಡಿನಲ್ಲಿ ಕಥೆ ಹೇಳಬೇಕೆಂಬುದೇ ಹೊರತು ನಾಟಕವಾಗಿಸುವುದಲ್ಲ. ಈ ಕೃತಿಯಲ್ಲಿ ಅಡಕವಾಗಿರುವ ಪಾರಿಜಾತ ಕಥೆ ಹೀಗಿದೆ.

ಒಂದು ದಿನ ದ್ವಾರಕಾ ನಗರಕ್ಕೆ ನಾರದನು ಬಂದು ಕೃಷ್ಣನಿಗೆ ಹೂವೊಂದನ್ನಿತ್ತನು. ಅದನ್ನವನು ರುಕ್ಮಣಿಗೆ ಮುಡಿಸಿದ, ಇದು ಸತ್ಯಭಾಮೆಯ ಕಿವಿಗೆ ಮುಟ್ಟಿತು. ಇದು ಅವಳಿಗೆ ಅಸಹನೀಯವಾಗಿ ಮತ್ಸರ ದಹಿಸತೊಡುಗುತ್ತದೆ. ರುಕ್ಮಿಣಿಯಲ್ಲಿಯೇ ಕೃಷ್ಣನಿಗೆ ಸ್ನೇಹವೆಗ್ಗಳ ಕಣಾ ಎಂದು ಕರಬುತ್ತಾಳೆ: ಭೂಮಿಯ ಮೇಲೆ ಇದ್ದು ಫಲವೇನು ಎಂದು ದುಃಖಿಸುತ್ತಾಳೆ. ಕದ್ದು ಬೆಣ್ಣೆಯ ಮೆದ್ದು ಪುಃಶ್ಚಾಲಿಯೊಳಿದ್ದಾತನಾ ಬುದ್ಧಿಯಾ ತಿದ್ದಿ ನೋಡದೆ ಸೋತೆ ಎಂದು ಬೈಯುತ್ತಾಳೆ. ಕ್ರೋಧ, ಕಳವಳಿಕೆಯಿಂದ ಧೊಪ್ಪನೆ ನೆಲದ ಮೇಲೆ ಬಿದ್ದಳು. ಅವಳ ನಿಟ್ಟುಸಿರು, ಕಂಬನಿಗಳಿಗೆ ಕೊನೆಯಿಲ್ಲ. ಮೂರ್ಛೆ ಹೋದ ಅವಳನ್ನು ಸೇವಕಿಯರು ಮಂಚದ ಮೇಲೆ ಹಾಕಿ ಉಪಚರಿಸಿದರು. ಸುದ್ದಿ ಕೇಳಿದ ಕೃಷ್ಣ ಆತುರದಿಂದ ಸತ್ಯಭಾಮೆಯ ಅಂತಃಪುರಕ್ಕೆ ಬಂದನು. ಮಂಚದ ಮೇಲೆ ಕುಳಿತುಕೊಂಡು ಶ್ರೀಕೃಷ್ಣ ನಾನಾ ಪರಿಯಾಗಿ ಸಂತೈಸುತ್ತಾನೆ. ಕಂದಕಂದರ್ಪನಾಣೆ ಎನ್ನಲ್ಲಿ ಕಪಟವಿಲ್ಲ ಎನ್ನುತ್ತಾನೆ.

ಅವಳು ನಿರಾಭರಣೆಯಾಗಿ ದುಃಖಿಸುತ್ತಿರುವದನ್ನು ಕಂಡು ಕೃಷ್ಣನಿಗೆ ಕಳವಳ. ಅವಳನ್ನು ತೊಡೆಯ ಮೇಲೆ ಮಲಗಿಸಿಕೊಂಡು ಕಳಕಳಿಯಿಂದ ಕೇಳಿಕೊಂಡ ಮೇಲೆ ಸತ್ಯಭಾಮೆ ಎದ್ದು ಕುಳಿತಳು. ಬಿಗುಮಾನದಿಂದಲೇ, "ಕಪಟಿಗೆ (ರುಕ್ಮಿಣಿ) ದಿವ್ಯ ಕುಸುಮವನ್ನು ಕೊಟ್ಟೆ ಮಾನಭಂಗ ನನಗಾಯಿತು" ಎನ್ನುತ್ತಾಳೆ. ತನ್ನನ್ನು ತಾನು ಸಮರ್ಥಿಸಿಕೊಳ್ಳುತ್ತಾನೆ ಶ್ರೀಕೃಷ್ಣ "ಹಿರಿಯವಳಾದ ರುಕ್ಮಣಿಗೆ ಹೂವನ್ನು ಕೊಟ್ಟರೆ ನೀನು ಮುನಿಯುವದೇ? ಅದರ ಭೂರುಹವನ್ನು ಈ ನಗರಕ್ಕೆ ತಂದು ನಿನ್ನ ಅಂಗಳದಲ್ಲಿ ನೆಡುವ ವಿಚಾರದಲ್ಲಿದ್ದೇನೆ, ಬಣ್ಣನೆಯ ಮಾತಲ್ಲ. ಇಂದ್ರನಲ್ಲಿಗೆ ಹೋಗಿ ರನ್ನದ ತರುವನ್ನು ನಿನಗೀಯುತ್ತೇನೆ."

ಇಷ್ಟು ಸಮಾಧಾನ ಹೇಳುವದಲ್ಲದೇ ಕೃಷ್ಣ ತಾನೇ ತನ್ನ ಕೈಯಾರೆ ಸತ್ಯಭಾಮೆಯನ್ನು ಶೃಂಗರಿಸುತ್ತಾನೆ.

ಗರುಡನನ್ನು ಹತ್ತಿ ಹೋಗಿ ಮತ್ತನಾಗಿದ್ದ ಭೌಮಾಸುರನನ್ನು ಸೀಳಿ ಅವನ ಮಗನಿಗೆ ಸಂಪತ್ತನ್ನೆಲ್ಲಾ ಮರಳಿ ಕೊಟ್ಟು ಹದಿನಾರು ಸಾವಿರ ಕನ್ಯೆಯರನ್ನು ತಂದನು. ಇಂದ್ರನಲ್ಲಿಗೆ ಹೋಗಿ, ಅದಿತಿಗೆ ಕುಂಡಲವನ್ನಿತ್ತು ಇಂದ್ರನಿಂದ ಪೂಜೆ ಪಡೆದನು. ಕೃಷ್ಣನು ಮಂದರ ತರುವದನ್ನು ತಡೆಯಲು ಇಂದ್ರ ಶಚಿಯರು ಕೃಷ್ಣನೊಂದಿಗೆ ಕಾಡಬೇಕಾಯಿತು. ಗರುಡನೂ ತನ್ನ ಗರಿಯಿಂದ ದಾಳಿಯಿಟ್ಟನು. ಕೊನೆಗೂ ಕೃಷ್ಣನದೇ ಮೇಲುಗೈಯಾಗಿ ದ್ವಾರಕಾವತಿಗೆ ಪಾರಿಜಾತ ವೃಕ್ಷವನ್ನು ತಂದು ಸತ್ಯಭಾಮೆಯ ಅಂಗಳದಲ್ಲಿ ನಿಲ್ಲಿಸಿದನು.

ಈ ವೃಕ್ಷದಡಿಯಲ್ಲಿ ಲೆತ್ತದಾಟವಾಡೋಣವೆನ್ನುತ್ತಾಳೆ ಸತ್ಯಭಾಮೆ. ಹಾಗೆ ಆಡಿದರೆ ಜನರು ತನ್ನನ್ನು ಸ್ತ್ರೈಣನೆನ್ನುತ್ತಾರೆ ಎಂದು ಹಿಂಜರಿಯುತ್ತಾನೆ ಕೃಷ್ಣ. ಹಾಗಾದರೆ ಈ ವಸ್ತ್ರಭೂಷಣವೇಕೆ? ಈ ಶರೀರವೇಕೆ? ಎಂದು ಮುನಿದುಕೊಂಡು ಕದ ಹಾಕಿಕೊಂಡು ಮಲಗಿಬಿಟ್ಟಳು. ಕೊನೆಗೂ ಕೃಷ್ಣನೇ ಸೋತು ಕದ ತೆಗೆಯಿಸಿ ಅವಳೊಂದಿಗೆ ಲೆತ್ತದಾಟವಾಡಿದನು. 'ಈ ಸತ್ಯಭಾಮೆ ವಿಲಾಸದ

ಪದ್ಯ ಪದ ಲೇಸಾಗಿ ನರನಾರಿಯರು ಘೋಷ ಭರಿತರಾಗಿ ಪಾಡಲು ಸೂಖನೀವಾ ಶ್ರೀಷಾ ಪ್ರಸನ್ನ ವೆಂಕಟೇಶಾ' ಎಂಬುದರೊಂದಿಗೆ ಈ ಕಥನ ಕೀರ್ತನ ಮುಕ್ತಾಯ ಪಡುತ್ತದೆ.

೩.೯. ಅಪರಾಳ ತಮ್ಮಣ್ಣನ ಗೀತರೂಪಕದ ಪಾರಿಜಾತ :

ಸತ್ಯಭಾಮೆಯ ಕೋಪತಾಪಗಳೇ ಇಲ್ಲಿ ಮುಖ್ಯ. ನರಕಾಸುರ ವಧೆ, ಕೃಷ್ಣ-ಇಂದ್ರರ ಯುದ್ಧ ಇವು ಲಕ್ಷ್ಯವಲ್ಲ. ಇದೆಲ್ಲಾ ಸ್ಥೂಲವಾಗಿ ಅಪರಾಳ ಪಾರಿಜಾತವನ್ನೇ ಹೋಲುತ್ತಿದ್ದರೂ ಒಂದಕ್ಕೊಂದು ಪ್ರಭಾವ ಪಡೆದಿವೆಯೆಂದು ಹೇಳಲು ಸಮರ್ಥ ಆಧಾರಗಳೇನೂ ಇಲ್ಲ. ಮಾನವೀಯ ಸ್ವಭಾವಗಳು ಅಪರಾಳ ಪಾರಿಜಾತದಲ್ಲಿ ಹರಿದಾಡುವಂತೆ ಇಲ್ಲಿ ಹರಿದಾಡುವುದಿಲ್ಲ. ಸಂದರ್ಭದ ಪ್ರತಿ ಕ್ಷಣದಲ್ಲಿಯೂ ಪಾತ್ರಗಳ ಸ್ವಭಾವವನ್ನು ಪೃಥಃಕರಿಸುವ ಬಗ್ಗೆ ಇಲ್ಲಿಲ್ಲ. ನಮಗೆ ಇಲ್ಲಿ ಸತ್ಯಭಾಮೆ, ಕೃಷ್ಣರನ್ನು ಹೊರತುಪಡಿಸಿ ಬೇರಾರೂ ಪ್ರತ್ಯಕ್ಷವಾಗಿ ಭೆಟ್ಟಿಯಾಗುವದೇ ಇಲ್ಲ. ನಾರದರ ಕಾಪಟ್ಯ, ರುಕ್ಮಿಣಿ ಸತ್ಯಭಾಮೆಯರ ವಿರಸ, ಶಚಿ-ಸತ್ಯಭಾಮೆಯರ ಮನಸ್ತಾಪ ಇವಾವೂ ಇಲ್ಲಿ ವಿವರಗೊಂಡಿಲ್ಲ. ಸತ್ಯಭಾಮಾ ವಿಲಾಸದ ಸತ್ಯಳ ಕೋಪ-ತಾಪ ಕೂಡ ಕಾವ್ಯದ ವ್ಯಾಪ್ತಿಯನ್ನು ಪಡೆದಿಲ್ಲ. ಇದು ಕೇವಲ ಕಥೆಯೆಂದರೆ ಸಾಕು. ಪ್ರಸನ್ನ ವೆಂಕಟದಾಸರ ಇಷ್ಟು ಕಥಾಭಾಗ ಹರಿವಂಶ ಪುರಾಣದಲ್ಲಿಯೇ ಇದೆ. ಪ್ರಸನ್ನ ವೆಂಕಟದಾಸ, ಅಪರಾಳ ತಮ್ಮಣ್ಣ, ಸಿರಗುಪ್ಪಿ ಸದಾಶಿವಪ್ಪ ಮೂವರೂ ಇದೇ ಪುರಾಣದಿಂದ ಈ ಸಂದರ್ಭವನ್ನು ಸಮಸಮವಾಗಿ ಸ್ವೀಕರಿಸಿದರು. ಸತ್ಯಭಾಮಾ ವಿಲಾಸ ೧೨ ಶ್ಲೋಕ (ಪ್ರತಿ ಶ್ಲೋಕ ೮ ಚರಣವಿದ್ದು), ೧೨ ಪದ (ಪ್ರತಿ ಪದ ೮ ಚರಣವಿದ್ದು), ಶ್ಲೋಕ, ಪದ ಎರಡೂ ಅಲ್ಲದ ೬ ಸಾಲಿನ ಉಪಸಂಹಾರದ ಪದ್ಯವೊಂದು - ಹೀಗೆ ಒಟ್ಟು ೧೫೦ ಸಾಲಿನ ಕಥನ ಕೀರ್ತನವಿದು. ಅದೇ ಅಪರಾಳ ತಮ್ಮಣ್ಣ ಮತ್ತು ಸಿರಗುಪ್ಪಿ ಸದಾಶಿವಪ್ಪರಿಂದ ನಿರ್ಮಾಣಗೊಂಡ ಶ್ರೀಕೃಷ್ಣ ಪಾರಿಜಾತ ಡೆಮ್ಮಿ ಅಳತೆಯ ೧೬೨ ಪುಟಗಳಲ್ಲಿ ವಿಸ್ತ್ರುತಗೊಂಡ ಕಾವ್ಯ. ಹೀಗೆ ಪ್ರಸನ್ನ ವೆಂಕಟದಾಸ ಪಾರಿಜಾತ ಪ್ರಸಂಗವನ್ನು ಕಥೆಯ ಚೌಕಟ್ಟಿಗೆ ಸೀಮಿತಗೊಳಿಸಿದ, ಅಪರಾಳ ಪಾರಿಜಾತ ಇದನ್ನು ಕಾವ್ಯದ ಮಟ್ಟಕ್ಕೆ ಹಿಗ್ಗಿಸಿಕೊಂಡಿದೆ.

ಅಪರಾಳ ಕಾವ್ಯದ ಶಿಲ್ಪ, ನಿರೂಪಣೆ-ಎರಡೂ ನಿಟ್ಟಿನಲ್ಲಿ ವ್ಯಕ್ತವಾಗುವ ಕವಿಯ ಸ್ವತಂತ್ರಶಕ್ತಿ ಓದುಗನ ಅಂತರಂಗಕ್ಕೆ ಥಟ್ಟನೆ ಗೊತ್ತಾಗುವ ವಿಷಯ. ಇದು ಅವನ ಕಾಲದ ಯಾವುದೇ ಕನ್ನಡ ಕೃತಿಯಿಂದ ಅನುಕರಣಗೊಂಡದ್ದಲ್ಲ. ಈಗಿನ ಮಟ್ಟಿಗಂತೂ ಕನ್ನಡ ಪಾರಿಜಾತ ಕಾವ್ಯ ಪರಂಪರೆಗೆ ಅಪರಾಳ ತಮ್ಮಣ್ಣನೇ ಆದಿ. ಗುಣದ ದೃಷ್ಟಿಯಿಂದಲೂ ಅವನದೇ ದೊಡ್ಡ ಸಾಧನೆ.

೩.೧೦. ಕುಲಗೋಡ ತಮ್ಮಣ್ಣ :

ಬೆಳಗಾವಿ ಜಿಲ್ಲೆಯ ಕುಲಗೋಡ ಗ್ರಾಮದ ತಮ್ಮಣ್ಣ ಶ್ರೀಕೃಷ್ಣ ಪಾರಿಜಾತದ ಪರಂಪರೆಯನ್ನು ಬಳ್ಳಾರಿ ಜಿಲ್ಲೆಯ ಅಪರಾಳ ತಮ್ಮಣ್ಣನ ಗೀತರೂಪಕದ ಪಾರಿಜಾತ ನಾಟಕವನ್ನು ಶುದ್ಧ ಬಯಲಾಟವನ್ನಾಗಿ ಬೆಳಗಾವಿ, ಬಾಗಲಕೋಟೆ, ವಿಜಯಪುರದ ಕೃಷ್ಣಾ ತೀರದಗುಂಟ ಕಲಾಪರಿಸರವನ್ನು ಬೆಳಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕುಲಗೋಡ ತಮ್ಮಣ್ಣನಿಗಿಂತ ಮೊದಲು ಸಣ್ಣಾಟಗಳ ಸಾಮ್ರಾಟನಾದ ಸಂಗ್ಯಾಬಾಳ್ಯಾ ಸಣ್ಣಾಟವು ಪತ್ತಾರ ಮಾಸ್ತರನ ಮೂಲಕ

ಜಗದ್‌ಜಾಹಿರವಾಗಿ ಬ್ರೀಟಿಷ್‌ರ ಅಧೀನಕ್ಕೊಳಗಾಗಿ ನಾಟಕ ನಿಂತುಹೋಯಿತು. ಅದೇ ಸಂದರ್ಭದಲ್ಲಿ ತಮ್ಮಣ್ಣನು ವೈಷ್ಣವ ಪರಂಪರೆಯ ಕೃಷ್ಣ ಪಾರಿಜಾತವನ್ನು ಹಲವು ಕಲಾವಿದರನ್ನು ಕಟ್ಟಿಕೊಂಡು ಬೆಳೆಸಿದನು. ಅದರಲ್ಲಿ ಪ್ರಸಿದ್ಧಿ ಹೊಂದಿದ ಸಿರಗುಪ್ಪಿ ಸದಾಶಿವಯ್ಯ ಲೋಕಾಪುರದ ಕೃಷ್ಣ ದೇಶಪಾಂಡೆ, ಕೌಜಲಗಿ ನಿಂಗಮ್ಮ ನಂತರ ಸೊಣ್ಣದ ನಾರಾಯಣ ಪತ್ತಾರ, ನಾರಾಯಣ ಬಡಿಗೇರ ಮುಂತಾದ ಕಲಾವಿದರು ತಮ್ಮ ಅಸ್ತಿತ್ವವನ್ನು ಕೃಷ್ಣ ಪಾರಿಜಾತದ ಮೂಲಕ ಕುಲಗೋಡ ತಮ್ಮಣ್ಣ ಪಾರಿಜಾತ ಪರಂಪರೆಯನ್ನು ಮುಂದುವರಿಸಿದರು.

ಕನ್ನಡದ ಶ್ರೀಕೃಷ್ಣ ಪಾರಿಜಾತ ಬಯಲಾಟಕ್ಕೆ ಹಿನ್ನೆಲೆಯಾಗಿರುವ ಸಂಸ್ಕೃತ ನಾಟಕ, ತೆಲುಗಿನ ಯಕ್ಷಗಾನ, ಕೂಚುಪುಡಿಗಳ ಸಮೀಕ್ಷೆಯನ್ನು ಇದುವರೆಗೆ ಮಾಡಲಾಯಿತು. ಇದುವರೆಗಿನ ಎಲ್ಲ ಅಂಶಗಳನ್ನೂ ಆಧಾರವಾಗಿಟ್ಟಕೊಂಡು ನೋಡಿದರೆ ಸ್ಪಷ್ಟವಾಗುವ ವಿಷಯವೆಂದರೆ– ಕನ್ನಡ ಪಾರಿಜಾತ ಬಯಲಾಟ ವಿಶೇಷವಾಗಿ ಪ್ರಭಾವಗೊಂಡದ್ದು ತೆಲುಗಿನಿಂದ, ಈ ಪ್ರಕರಣದ ಒಟ್ಟು ನಿರ್ಣಯವನ್ನು ಈ ಕೆಳಗಿನ ಅಂಶಗಳಿಂದ ಕ್ರೋಢೀಕರಿಸಬಹುದು.

೧. ಕನ್ನಡ ಶ್ರೀಕೃಷ್ಣ ಪಾರಿಜಾತಕ್ಕೆ ವಸ್ತುವನ್ನೊದಗಿಸಿದ್ದು ಪಾರಿಜಾತ ಸಂಬಂಧಿ ತೆಲಗು ಯಕ್ಷಗಾನಗಳು ಮತ್ತು ಕೂಚುಪುಡಿಗಳು.

೨. ತೆಲುಗಿನ ಯಕ್ಷಗಾನ ಮತ್ತು ಕೂಚುಪುಡಿಗಳ ರಂಗಪ್ರಯೋಗದ ಕೆಲವು ಪ್ರಕ್ರಿಯೆಗಳನ್ನು ನಮ್ಮ ಪಾರಿಜಾತ ಬಯಲಾಟ ಆಮದು ಮಾಡಿಕೊಂಡಿದೆ.

೩. "ಕೊರವಂಜಿ", "ಗೊಲ್ಲಕಥಾ"ದಂಥ ತೆಲುಗಿನ ಜನಪ್ರಿಯ ದೃಶ್ಯಗಳು ಕನ್ನಡ ಪಾರಿಜಾತದಲ್ಲಿ ಮಿಳಿತಗೊಂಡಿವೆ.

೪. ಕನ್ನಡ ಶ್ರೀಕೃಷ್ಣ ಪಾರಿಜಾತ ಪರಂಪರೆಗೆ ಅಪರಾಳ ತಮ್ಮಣ್ಣನಿಂದ ಪ್ರಾರಂಭಗೊಂಡ ಕಾವ್ಯವೇ ಆದಿಕೃತಿ.

ಒಂದು ಮಾತು: ಕನ್ನಡ ಶ್ರೀಕೃಷ್ಣಪಾರಿಜಾತ ಬಯಲಾಟ ಬೇರೆ ಭಾಷೆಯಿಂದ ಪಡೆದುಕೊಂಡ ಪ್ರಭಾವ ಏನೇ ಇದ್ದರೂ ಅದು ನೆಪಮಾತ್ರ. ಈ ರಂಗಭೂಮಿಯ ನೆಲ ನಮ್ಮದು, ಗಾಲಿ, ಹಲಗೆಗಳಿಂದ ನಿರ್ಮಾಣಗೊಂಡ ಅಟ್ಟ ನಮ್ಮದು. ಅದರ ಮೇಲೆ ನಡೆಯುವ ಮಾತು, ಹಾಡು, ಅಭಿನಯ ಎಲ್ಲ ಕನ್ನಡ ಉಜ್ವಲ ಜಾನಪದ ಪರಂಪರೆಯ ಪ್ರಾಯೋಗಿಕ ಸತ್ಯಾಂಶಗಳು. ಬಾಹ್ಯ ಪ್ರಭಾವ ಏನೇ ಇದ್ದರೂ, ಅದು ಪಾರಿಜಾತ ರಂಗದ ಹಿಂಬದಿ ಘಟ್ಟದ ಪರದೆ ಮಾತ್ರ.

ಅಡಿ ಟಿಪ್ಪಣಿ

೧. ಡಾ. ಎಂ.ಎಸ್. ಸುಂಕಾಪುರ, ಕನ್ನಡ ಬಯಲಾಟ, ೧೯೭೭, ಪು-೦೫

೨. ಡಾ. ಎಚ್.ಕೆ. ರಂಗನಾಥ, ಕರ್ನಾಟಕ ರಂಗಭೂಮಿ, ೧೯೭೮ (೨೦೧೪)

೩. ಡಾ. ಬಸವರಾಜ ಮಲಶೆಟ್ಟಿ, ಉತ್ತರ ಕರ್ನಾಟಕದ ಬಯಲಾಟಗಳು, ೧೯೮೩, ಪು-೧೧೧

೪. ಗಿರಡ್ಡಿ ಗೋವಿಂದರಾಜ, ನಾಟಕ ಸಾಹಿತ್ಯ ಮತ್ತು ರಂಗಭೂಮಿ, ೧೯೮೯, ಪು-೧೧೭

೫. ಡಾ. ಬಸವರಾಜ ಮಲಶೆಟ್ಟಿ, ಉತ್ತರ ಕರ್ನಾಟಕದ ಬಯಲಾಟಗಳು, ೧೯೮೩, ಪು-೧೪೭

೬. ೩. ಡಾ. ಬಸವರಾಜ ಮಲಶೆಟ್ಟಿ, ಉತ್ತರ ಕರ್ನಾಟಕದ ಬಯಲಾಟಗಳು, ೧೯೮೩, ಪು-೧೫೩

೭. ಡಾ. ಎಚ್. ಆಯ್. ತಿಮ್ಮಾಪೂರ, ಸಣ್ಣಾಟಗಳು, ೧೯೯೯, ಕರ್ನಾಟಕ ವಿಶ್ವವಿದ್ಯಾಳಯ, ಧಾರವಾಡ, ಪು-೧೨

೮. ಶ್ರೀರಾಮ ಇಟ್ಟಣ್ಣವರ, ಶ್ರೀಕೃಷ್ಣ ಪಾರಿಜಾತ : ಒಂದು ಅಧ್ಯಯನ, ೧೯೯೧, ಪು-೦೫, ೩೩

೯. ಶ್ರೀರಾಮ ಇಟ್ಟಣ್ಣವರ, ಶ್ರೀಕೃಷ್ಣ ಪಾರಿಜಾತ : ಒಂದು ಅಧ್ಯಯನ, ೧೯೯೧, ಪು-೧೭

೧೦. ಶ್ರೀರಾಮ ಇಟ್ಟಣ್ಣವರ, ಶ್ರೀಕೃಷ್ಣ ಪಾರಿಜಾತ : ಒಂದು ಅಧ್ಯಯನ, ೧೯೯೧, ಪು-೦೩

೧೧. ಡಾ. ಚಂದ್ರಶೇಖರ ಕಂಬಾರ, ಉತ್ತರ ಕರ್ನಾಟಕದ ಜಾನಪದ ರಂಗಭೂಮಿ, ೧೯೬೫, ಪು-೧೬೮

೧೨. ಅಶೋಕ ನರೋಡೆ, ಜಾನಪದ ಜಗತ್ತು, ೨೦೧೮, ಪು-೧೨೩

೧೩. ಶ್ರೀರಾಮ ಇಟ್ಟಣ್ಣವರ, ಶ್ರೀಕೃಷ್ಣ ಪಾರಿಜಾತ : ಒಂದು ಅಧ್ಯಯನ, ೧೯೯೧, ಪು-

೧೪. ಶ್ರೀರಾಮ ಇಟ್ಟಣ್ಣವರ, ಶ್ರೀಕೃಷ್ಣ ಪಾರಿಜಾತ : ಒಂದು ಅಧ್ಯಯನ, ೧೯೯೧, ಪು-೧೧

೧೫. ಶ್ರೀರಾಮ ಇಟ್ಟಣ್ಣವರ, ಶ್ರೀಕೃಷ್ಣ ಪಾರಿಜಾತ : ಒಂದು ಅಧ್ಯಯನ, ೧೯೯೧, ಪು-೧೫,೧೬

೧೬. ಶ್ರೀರಾಮ ಇಟ್ಟಣ್ಣವರ, ಶ್ರೀಕೃಷ್ಣ ಪಾರಿಜಾತ : ಒಂದು ಅಧ್ಯಯನ, ೧೯೯೧, ಪು-೮೨

ಅಧ್ಯಾಯ : ನಾಲ್ಕು

ಪಾರಿಜಾತದ ಬೆಳವಣಿಗೆಯಲ್ಲಿ ಪಾಂಚಾಳರ ಪ್ರಾತಿನಿಧ್ಯ

೪.೧ ಪ್ರವೇಶ

೪.೨. ಜನಪದ ಕಾವ್ಯಗಳಲ್ಲಿ ಪಾಂಚಾಳರು

೪.೩. ಪಾಂಚಾಳ (ವಿಶ್ವಕರ್ಮ)ರ ಪರಂಪರೆ

೪.೪. ಕಲೆಗಳ ನೆಲೆಗೆ ವ್ಯಕ್ತಿಗಳ ತನುವಿಕೆ

೪.೫. ಶ್ರೀಕೃಷ್ಣ ಪಾರಿಜಾತದ ಪಾಂಚಾಳ ಕಲಾವಿದರು ಹಾಗೂ ಸಂಘಟಿಸಿದ ಕಂಪನಿಗಳು

೪.೫.೧. ಶ್ರೀ ಶ್ಯಾಮರಾವ ಬಸಪ್ಪ ಬಡಿಗೇರ

೪.೫.೨. ಶ್ರೀ ನಾಗೇಂದ್ರ ಮಾನಪ್ಪ ಕಂಬಾರ

೪.೫.೩. ಶ್ರೀ ಬಸಪ್ಪ ಬಡಿಗೇರ :

೪.೫.೪. ಶ್ರೀ ಭೀಮೇಸಿ ಕಂಬಾರ ಮತ್ತು ಶ್ರೀ ಈರಣ್ಣ ಬಡಿಗೇರ (ಉದಪುಡಿ)

೪.೫.೫. ಶ್ರೀ ಅಶೋಕ ಬಡಿಗೇರ

೪.೫.೬. ಶ್ರೀ ನಾರಾಯಣ ಪತ್ತಾರ

೪.೫.೭. ಶ್ರೀ ಹನಮಂತ ಬಡಿಗೇರ (ಮುಧೋಳ)

೪.೫.೮. ಶ್ರೀ ಹಣಮಂತ ಬಡಿಗೇರ (ಉದುಪುಡಿ)

೪.೫.೯. ಶ್ರೀ ಕಾಡಪ್ಪ ಕಾ. ಕಂಬಾರ

೪.೫.೧೦. ಶ್ರೀ ಗೋವಿಂದಪ್ಪ ಪತ್ತಾರ

೪.೫.೧೧. ಶ್ರೀ ಭೀಮಪ್ಪ ಈಶ್ವರಪ್ಪ ಕಂಬಾರ

೪.೫.೧೨. ಶ್ರೀ ಮಾರುತಿ ಶಂಕ್ರಪ್ಪ ಕಮ್ಮಾರ

೪.೫.೧೩. ಬಾಳಪ್ಪ ಪಕೀರಪ್ಪ ಕಣಮುಚನಾಳ

ಅಧ್ಯಾಯ : ೪

ಪಾರಿಜಾತದ ಬೆಳವಣಿಗೆಯಲ್ಲಿ ಪಾಂಚಾಳರ ಪ್ರಾತಿನಿಧ್ಯ

೪.೧ ಪ್ರವೇಶ :

ವಿವಿಧ ಸಮುದಾಯಗಳ ಅಧ್ಯಯನಗಳು ವ್ಯಾಪಕವಾಗಿ ನಡೆಯಬೇಕಾದ ಅಗತ್ಯವಿದೆ. ಎಷ್ಟೋ ಕಾಲದಿಂದ ಶೋಷಣೆಗೆ ಒಳಗಾದ ಹಲವು ಸಮುದಾಯಗಳಿವೆ. ಪ್ರಗತಿ ಸಾಧಿಸಲಾಗದೆ, ಸಮಾಜದಲ್ಲಿ ಹಿರಿಯ ಸ್ಥಾನಗಳನ್ನು ಅಲಂಕರಿಸಲಾಗದೆ, ಮೂಲೆ ಗುಂಪಾಗಿ ಉಳಿದಿರುವ ಸಮುದಾಯಗಳೂ ಇವೆ. ಎಲ್ಲವಕ್ಕೂ ಶಿಕ್ಷಣ ತುಂಬಾ ಮುಖ್ಯವಾಗುತ್ತದೆ. ಯಾವುದೇ ಸಮುದಾಯ ಶಿಕ್ಷಣದಿಂದ ವಂಚಿತರಾಗಬಾರದಷ್ಟೆ. ವಿಶ್ವಕರ್ಮರ ಬಗ್ಗೆ ಸ್ಥೂಲವಾಗಿ ವಿವೇಚಿಸಿ ವಿಶ್ಲೇಷಿಸಿ ಸಂಶೋಧಿಸಿ ಜನ ಮಾನಸಕ್ಕೆ ಪರಿಚಯಿಸುವದು ಒಂದು ಕರ್ತವ್ಯವೇ ಆಗಿದೆ.

ಸಂಶೋಧನಾ ವ್ಯವಸಾಯದಲ್ಲಿ ತೊಡಗಿಸಿಕೊಂಡಿರುವದು ವಿಶ್ವಕರ್ಮ ಸಮುದಾಯದ ಸಾಂಸ್ಕೃತಿಕ ಗುರುತನ್ನು ಕುರಿತಂತೆ. "ಶ್ರೀಕೃಷ್ಣ ಪಾರಿಜಾತದಲ್ಲಿ ಪಾಂಚಾಳರ ಪ್ರಾತಿನಿಧ್ಯ; ತಾತ್ವಿಕ ವಿವೇಚನೆ". ಮಾನವ ಪ್ರಾಕೃತಿಕ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಹಲವಾರು ಅದ್ಭುತಗಳನ್ನು ನಿರ್ಮಿಸಿದ್ದಾನೆ. ಭವ್ಯ ಕಟ್ಟಡಗಳು, ಕೋಟೆ ಕೊತ್ತಲಗಳು, ಅರಮನೆಗಳು, ಗೋಪುರಗಳು, ಸರೋವರಗಳು, ಬಯಲಾಟಗಳ ಕಲೆಗಳ ಉಪಕರಣಗಳು, ಕೃಷಿ ಉಪಕರಣಗಳು ಮುಂತಾದವುಗಳ ನಿರ್ಮಿತಗಳಿಗೆ ಲೆಕ್ಕವಿಲ್ಲ. ಒಂದು ಕ್ಷಣ ಇವನ್ನೆಲ್ಲ ನೋಡಿದರೆ ಹೇಗೆ ನಿರ್ಮಿಸಿದರೋ ಎನ್ನುವುದು ಸಹಜವಾಗಿ ಮೂಖವಿಸ್ಮಿತರನ್ನಾಗಿಸುತ್ತವೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳುವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಕಮ್ಮಾರ, ಬಡಿಗ, ಅಕ್ಕಸಾಲಿಗ, ಶಿಲ್ಪಿ ಹಾಗೂ ಕಂಚುಗಾರ ಇವರು ವಿಶ್ವಕರ್ಮರು. ಪಾಂಚಾಳರು, ವಿಶ್ವಬ್ರಾಹ್ಮಣರು, ಪಂಚಕರ್ಮಿಯರು, ಆಚಾರಿ ಮುಂತಾದ ಹೆಸರುಗಳಿಂದ ಗುರುತಿಸಿಕೊಂಡಿರುವ ಇವರು ಇತಿಹಾಸದಲ್ಲಿ ಪ್ರಮುಖವಾದ ಸ್ಥಾನವನ್ನು ಗಳಿಸಿಕೊಂಡಿದ್ದಾರೆ.

ಜಾನಪದ ಹಾಗೂ ಸಾಹಿತ್ಯ ಕೃತಿಗಳಲ್ಲಿ ಸಮುದಾಯದ ರೀತಿ-ನೀತಿಗಳನ್ನು ಕುರಿತು ಉಲ್ಲೇಖವಾಗಿರುವುದನ್ನು ಕಾಣಬಹುದು. ಇವುಗಳ ಮೂಲಕ ಪಾಂಚಾಳರ ಕೆಲಸಗಳನ್ನು ಗುರುತಿಸಲು ಸಾಧ್ಯ. ಜಾನಪದ ಹಾಗೂ ಸಾಹಿತ್ಯ ಕೃತಿಗಳ ಅವಲೋಕನದಿಂದ ಪಾಂಚಾಳ ಸಮುದಾಯ ಜೀವನದ ವಿವಿಧ ಮುಖಗಳ ಸ್ಪಷ್ಟ ಚಿತ್ರಣವು ದೊರೆಯುತ್ತದೆ. ಇವರು ಪರಂಪರಾಗತವಾಗಿ ಮುಂದುವರೆಸಿಕೊಂಡು ಬಂದಿರುವ ತಮ್ಮ ಕಲೆಯ ಪ್ರಾವೀಣ್ಯತೆಯಿಂದ ರಾಜ-ಮಹಾರಾಜರುಗಳಿಂದ ಗೌರವ, ಸನ್ಮಾನವನ್ನು ಪಡೆದುಕೊಂಡವರು. ಕೃಷಿ ಕುಟುಂಬಗಳಿಗೆ ಬೇಕಾದ ಸಲಕರಣೆಗಳನ್ನು ಸಕಾಲಕ್ಕೆ ಒದಗಿಸಿ ರೈತಾಪಿ ಸಮುದಾಯಗಳಿಂದ ಆಯಗಾರರು ಎಂದು ಕರೆಸಿಕೊಂಡಿದ್ದಾರೆ. ಅಂದು ಗ್ರಾಮದಲ್ಲಿದ್ದ ಗ್ರಾಮ ಸಭೆಯಲ್ಲಿ ಇವರು ಖಾಯಂ ಸದಸ್ಯರಾಗಿ ಗ್ರಾಮದ ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸಿದವರು.

ಕೆರೆ ದೇವಾಲಯಗಳನ್ನು ಕಟ್ಟಿಸಿ ಅವುಗಳಿಗೆ ಸ್ವತಃ ದಾನಗಳನ್ನು ನೀಡಿದ ಕೊಡಗೈ ದಾನಿಗಳಾಗಿದ್ದಾರೆ. ತಮ್ಮ ವೃತ್ತಿಯ ನೀತಿ-ನಿಯಮಗಳನ್ನು ಕಾಪಾಡಿಕೊಂಡು ಬರಲು ಸಂಘ-ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿದ್ದರು. ಸಾಮಂತರಾಗಿ, ಮಂತ್ರಿಗಳಾಗಿ, ಭಂಡಾರಿಗಳಾಗಿ, ರಾಜರುಗಳಾಗಿ, ಕವಿಗಳಾಗಿ, ವೈದ್ಯರುಗಳಾಗಿ, ಜ್ಯೋತಿಷಿಗಳಾಗಿ ಇವರು ಗೌರವ ಸ್ಥಾನಗಳನ್ನು ಅಲಂಕರಿಸಿದ್ದರು ಎಂದು ಶಾಸನಗಳಿಂದ ತಿಳಿದುಬರುತ್ತದೆ.

ಪಾಂಚಾಳರ ಬದುಕಿನ ವಿಧಾನ, ವೃತ್ತಿ, ಸಾಮಾಜಿಕ, ಧಾರ್ಮಿಕ ನೆಲೆಗಳು ಆಧುನಿಕ ಪೂರ್ವ ಸಂದರ್ಭದಲ್ಲಿ ಕೇವಲ ಹೊಟ್ಟೆ ಪಾಡಿನ ಸ್ವ-ಕೇಂದ್ರಿತ, ವ್ಯವಹಾರವಾಗಿರಲಿಲ್ಲ. ನಾಡಿನ ಉತ್ಪಾದಕ ಸಮುದಾಯಗಳಿಗೆ ಆಡಳಿತದ ನೆಲೆಗಳಿಗೆ ಪೂರಕವಾಗಿ ಕೃಷಿ, ಯುದ್ಧಕ್ಕೆ ಸಂಬಂಧಿಸಿದ ಉಪಕರಣ ಸಾಮಗ್ರಿ ತಯಾರಿಕೆಯಲ್ಲಿದ್ದ ಸಮುದಾಯ. ಸಂಸ್ಕೃತಿಯ ನೆಲೆಗಳಾದ ದೇವಾಲಯ, ಕಲೆ, ವಸ್ತುಗಳ ನಿರ್ಮಾಣ, ನಿರ್ವಹಣೆಗಳಲ್ಲಿಯೂ ಅವರು ಪ್ರಮುಖ ಪಾತ್ರವಹಿಸುತ್ತಿದ್ದರು. ಸಮಾಜ ಸಂರಚನೆಗಳಲ್ಲಿ ಪ್ರಮುಖ ಅಂಗವಾಗಿದ್ದು ಪಾಂಚಾಳ ವೃತ್ತಿ ಸಮುದಾಯದ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಬದುಕಿನ ನೆಲೆಗಳನ್ನು ಈ ಅಧ್ಯಾಯದಲ್ಲಿ ಹಿಡಿದಿಡಲು ಪ್ರಯತ್ನಿಸಿದೆ.

ಕೃಷಿ ಹಾಗೂ ಕೃಷಿಯೇತರ ಉಪಕರಣಗಳ ನಿರ್ಮಾತೃಗಳನ್ನೇ ಕಮ್ಮಾರ, ಬಡಿಗೇರ, ಅಕ್ಕಸಾಲಿಗ, ಕಂಚುಗಾರ ಹಾಗೂ ಶಿಲ್ಪಿ ಎಂದು ಕರೆಯುತ್ತ ಬಂದಿದ್ದೇವೆ.

ಈ ಮೇಲಿನ ಎಲ್ಲಾ ಅಂಶಗಳಿಂದಲೇ ದೇಶದ ಬೆನ್ನೆಲುಬು ರೈತ. ಆದರೆ ರೈತನ ಬೆನ್ನೆಲುಬು ಪಾಂಚಾಳ ಎಂದರೆ ಅತಿಶಯೋಕ್ತಿ ಎನಿಸಲಾರದು. ಪಾಂಚಾಳ ಸಮುದಾಯ ತಯಾರಿಸುವ ವಸ್ತುಗಳು, ನೇಕಾರಿಕೆ, ಚಮ್ಮಾರ, ಕುರುಬ, ಮಡಿವಾಳ ಎಲ್ಲಾ ಸಮುದಾಯಗಳ ಆದಿದೈವದ ನಿರ್ಮಾಣದ ಕೆಲಸಗಳಲ್ಲಿ ಇವರೇ ಮುಖ್ಯರು. ಪಾಂಚಾಳರು ತಮ್ಮ ವೃತ್ತಿಯ ಮೂಲಕ ಸಮಾಜದಲ್ಲಿ ಸಾಂಸ್ಕೃತಿಕವಾಗಿ ವಿಶೇಷ ಸ್ಥಾನ ಪಡೆದವರಾಗಿದ್ದಾರೆ.

೪.೨. ಜನಪದ ಕಾವ್ಯಗಳಲ್ಲಿ ಪಾಂಚಾಳರು :

ಹಿಂದಿನ ಕಾಲದಲ್ಲಿ ಪಾಂಚಾಳ ಸಮುದಾಯದವರು ಹೊಲ ಗದ್ದೆಗಳಲ್ಲಿ ದುಡಿಯುವ ಅವಶ್ಯಕತೆ ಇರಲಿಲ್ಲ. ಇವರು ಗ್ರಾಮದ ಸಾಮಾಜಿಕ ಕಾರ್ಯಕ್ರಮಗಳಲ್ಲಿ ನೆರವಾಗಬೇಕಿತ್ತು. ಯಕ್ಷಗಾನದ ಆಟಗಳು, ರಂಗ ಕುಣಿತ ಹಾಗೂ ವೃತ್ತಿಯ ಮುಖಾಂತರ ಗ್ರಾಮದ ಜನತೆಯ ತಿಳುವಳಿಕೆಯ ವಿಸ್ತಾರಕ್ಕೆ ಸಹಾಯವಾಗುತ್ತಿದ್ದರು. ಇಂತಹ ಸಮುದಾಯವನ್ನು ಕುರಿತು ಜನತೆಗೆ ಅವರ ವೃತ್ತಿ ಸಲಕರಣೆಗಳನ್ನೇ ಉಪಯೋಗಿಸಿಕೊಂಡು ಜನಪದ ಕಾವ್ಯಗಳನ್ನು ಕಟ್ಟಿದ್ದಾರೆ. ಈ ಕಾವ್ಯಗಳ ಮೂಲಕ ಪಾಂಚಾಳರ ಇತಿಹಾಸವನ್ನು ಗುರುತಿಸಲಿಕ್ಕೆ ಆಕರಗಳಾಗಿ ನಿಲ್ಲುತ್ತವೆ.

ಜನಪದ ಕಾವ್ಯಗಳಲ್ಲಿ ಅತ್ಯಂತ ಮಹತ್ವವುಳ್ಳ ಕೃತಿ ಮಂಟೆಸ್ವಾಮಿ ಕಾವ್ಯ. ಮೈಸೂರು ಪ್ರಾಂತ್ಯದಲ್ಲಿ ಹೆಚ್ಚು ಪ್ರಚಲಿತವಿರುವ ಇದು ಸಿದ್ದಪ್ಪಾಜಿಯ ಹುಟ್ಟು ಬೆಳವಣಿಗೆ ಮತ್ತು ನಡೆದುಬಂದ ದಾರಿ, ಇವುಗಳ ಕುರಿತು ಯತಾರ್ಥವಾದ ಮಾಹಿತಿಯನ್ನು ಒದಗಿಸುತ್ತದೆ. ಕಾವ್ಯದಲ್ಲಿ ಒಂದು ಕಡೆ ಸಿದ್ದಪ್ಪಾಜಿ ಮೂಲತಃ ಕಮ್ಮಾರನಾಗಿದ್ದು, ಆತನ ಕುರಿತು ವಿವರಗಳನ್ನು ನೀಡುವುದು. ಜೊತೆಗೆ ಪಾಂಚಾಳ ಒಕ್ಕಲುಗಳಾದ ಕಾಳೋಜಿ, ದಿಂಬೋಜಿ, ಬೇಟೋಜಿ, ಎರೆಡೋಜಿ, ನಿಂಗೋಜಿ, ಚನ್ನೋಜಿ, ಸರಸೋಜಿ ಎಂಬ ಏಳು ಜನ ವೋಜ ಕುಲ ದನಿಗಳಿದ್ದು, ಇವರಿಗೆ ಏಳು ಕುಲುಮೆಗಳು, ಕುಲುಮೆಗಳಲ್ಲಿ ತಲಕಾಡಿನ ಸಖಿ ಚಾಮರಾಜ ಒಡೆಯರಿಗೆ ಕತ್ತಿ, ಫಿರಂಗಿ, ಬಂದೂಕು ಮುಂತಾದವುಗಳನ್ನು ತಯಾರು ಮಾಡಿ ಕೊಡುತ್ತಿದ್ದರು ಎಂದು ಉಲ್ಲೇಖಿಸಲಾಗಿದೆ. ಮುಂದುವರೆದು ಕಾವ್ಯದಲ್ಲಿ ಬಸವಚಾರಿಯು ಮಂಟೇಸ್ವಾಮಿಯನ್ನು ಬೈಯುವ ಸಂದರ್ಭದಲ್ಲಿ ಪಾಂಚಾಳರ ಪದಗಳನ್ನು ಬಳಸಿರುವುದನ್ನು ಕಾಣುತ್ತೇವೆ.

ಉದಾಹರಣೆಗೆ:

"ಇವನ ಇಕ್ಕಳದಲ್ಲಿ ಇಡಕಂಡು,
ರಾಮಗೋಲಲ್ಲಿ ಬಡಿದು,
ಕೇಳು ನನ್ನ ಮಡದೀ
ಅವನ್ಗೇ ಕಾದುಗಟ್ಟಿತಗದು,
ಅವನ ಅಂಗ್ಯೆ ಮೇರೆ ಮಡಗಿ
ದೊಡ್ಡ ಬಾಚಿ ತೆಗೆದು
ಚಿಕ್ಕ ಬಾಚಿ ತೆಗೆದು
ಅಡಗಲ್ಲಿನ ಮೇಲೆ ಅವನ ಕೆಡಿಕಂಡು ನನ್ನ ಮಡದಿ
ಅವನ ಮರವ ಕೆತ್ತುದಂಗೆ ನಾನು ತುಂಡು ತುಂಡಾಗಿ ಕೆತ್ತುತೀನಿ".

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಪಾಂಚಾಳ ಸಮುದಾಯದ ವೃತ್ತಿ ಪದಗಳ ಹಿನ್ನೆಲೆಯಲ್ಲಿ ಬಸವಾಚಾರಿ ಬೈದಿರುವುದನ್ನು ಕಾಣುತ್ತೇವೆ. ಇಕ್ಕಳ, ರಾವುಗೋಲು, ಗಟ್ಟಿ ದೊಡ್ಡಬಾಚಿ, ಚಿಕ್ಕಬಾಚಿ, ಅಡಿಗಲ್ಲು ಮುಂತಾದವುಗಳು ವೃತ್ತಿಪದಗಳಾಗಿವೆ. ಈ ವೃತ್ತಿ ಪದಗಳ ಬಳಕೆ ಹಿಂದೆ ಈ ಸಮುದಾಯ ಸಂಸ್ಕೃತಿಯೇ ಬದುಕಿನ ರೀತಿ ಅಭಿವ್ಯಕ್ತಗೊಂಡಿರುವುದು ಗಮನಿಸಬೇಕಾದ ಅಂಶವಾಗಿದೆ.

ಡಾ. ಎಸ್.ಎಸ್. ಅಂಗಡಿಯವರ ಬಡಗಿ ವೃತ್ತಿಪದ ಮಂಜರಿಯಲ್ಲಿ ಚರ್ಚಿಸುತ್ತ ಕೃಷಿಯು ಗ್ರಾಮೀಣ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಕೃಷಿಕರು ವರ್ಷದುದ್ದಕ್ಕೂ ತಮ್ಮ ನೆರವಿಗೆ ಕೆಲಸಗಾರರು ಹಾಗೂ ಆಯಗಾರರನ್ನು ಸ್ಮರಿಸುವುದು ಹಿಂದಿನಿಂದಲೂ ಬಂದ ವಾಡಿಕೆಯಾಗಿದೆ.

ಹಿನ್ನೆಲೆಯಲ್ಲಿ ಹಂತಿಪದಗಳನ್ನು ಹಾಡುವ ಸಂದರ್ಭದಲ್ಲಿ ಅವರನ್ನು ಸ್ಮರಿಸಿಕೊಂಡು ಕೃತಾರ್ಥರಾಗುವುದುಂಟು.

ಉದಾಹರಣೆಗೆ:

ಯರಝುರವಿ ಬಡಿಗ್ಯಾನ ಬೇಗಾನೆ ಬರಹೇಳಿ
ಭಾರೀಯ ಉಳಬಾಚಿ ಸಹವಾನಿ/ದ್ಯಾಮಣ್ಣ
ಭಾರೀಯ ತೇರ ಕಡೆದಾರು॥

ಬೂದಿಗೊಪ್ಪ ಬಡಿಗ್ಯಾನ ತಟ್ಟನೆ ಬರಹೇಳಿ
ಕಟ್ಟು ಉಳಬಾಚಿ ಸಹವಾಗಿ /ಶ್ಯಾಸಪ್ಪ
ಭಾರೀಯ ತೇರು ಕಡೆದಾರು॥

ಬಡಬಾಯಿ ತುಂಬ ಎಲಿ ಅಡಕೆ। ಹಣೆಮ್ಯಾಲೆ
ಬಂಡಿಗಾಲಿಯಂಥ ಕುಂಕುಮ॥

ಕಂದವ್ವ ನೆತ್ತಿಕೊಂಡು ಕಂಡೆ ಬಡಿಗರ ಮುನಿರ
ಸಧ್ಯಕ್ಕೆ ಬೇಕಣ್ಣ ಕಡೆಗೋಲು। ನಮ್ಮನೀಯ
ಕಾಳೆಮ್ಮ ಹಾಲು ಕಡೋದೈತಿ॥

ಬಡಿಗ್ಯಾರ ಓಣ್ಯಾಗ ಸಡಗೀನ್ನೆನ್ಹೇಳಲಿ
ಬಿಳಿಯಂಗಿ ಬೆಳ್ಳಿ ಉಡದಾರ । ಹಾಕ್ಕೊಂಡು
ಬಡಿಗಣ್ಣ ಡೆಡ್ಡು ಬಿಗುದಾನೋ॥

ಉಕ್ಕಿನ ಉಳಬಾಚಿ ಹತ್ತೆಳೆಯ ಜನಿವಾರ
ಮುತ್ತ ಸುರದಂಗೆ ಬೆವತನ । ಮಾನಪ್ಪ
ಅಚ್ಚ ಬಡಿಗ್ಯಾನ ಮುಗನವ್ವ॥

ಕಡಗೋಲು ಕುಡುಗೋಲು ಸೆಡ್ಡು ಮಡ್ಡೆಯ ಕೋಲು
ಬಡಗಿ ಬ್ಯಾಕೋಲು ಬಾರಕೋಲು । ಉರ್ಗೋಲು
ಸಮದತ್ತಿ ಬಡಿಗ್ಯಾ ಮಾಡ್ಯಾಣ॥

ಜಾಲಿಯ ಗಿಡಾ ಕಡಿದ ಮಾರುದ್ದ ನಗಾ ಮಾಡಿ
ಯರಗಟ್ಟಿ ಬಡಿಗಯಾ ಮಾಡ್ಯಾಣ । ನಗಾ ನೋಡಿ
ಮಂದಿ ಹೌಹಾರಿ ನಿಂತಾರೋ॥

ಕರಿಯ ಗೊಂಗಡಿ ತಂದ ಮುರಿದ ಟೊಪ್ಪಿಗೆ ಮಾಡಿ
ಹೊತ್ತಾನೊ, ಬಡಿಗ್ಯಾ ಹೆಗಲಿಗೆ । ಕೂರಿಗೆ ದಿಂಡ
ಇಟ್ಟಾನ ರೈತನ ಮನಿ ಮುಂದ॥

ಅರಿಯ ಮೇಟಿ ಅರಮಳಾ ಎದ್ದತಿ
ಯರಝುರ ಬಡಿಗ್ಯಾ ಮಾಡ್ಯಾಣ
ಜಂತಿ ಕುಂಟಿಯ ಹಗ್ಗ ಎಂತವನೋ ಕೆತ್ಯಾನೋ
ಅಂತರಲಿ ಇರುವ ಬಡಿಗ್ಯಾ । ಕತ್ತಿದ ಕುಂಟಿ
ಚಿಂತಿಲ್ಲದ ಕುಂಟಿ ತೆಗಿದಾನೋ॥

ಒತ್ತುವ ಕೂರಿಗೆ ಮುಂದ ಬಿದ್ದಾನೋ ಮಳಿದೇವ
ಎದ್ದಾನೋ ಒಕ್ಕಲಿಗ ಬೆಳೆತಾನ । ಕೂರಗಿ ಕುಂಟಿ
ಬಿದ್ದಾನೋ ಬಡಿಗ್ಯಾನ ಮನಿ ಮುಂದ ॥

ನನ್ನೂರ ತೇರವ ಯಾರ್‍ಯಾರ ಮಾಡ್ಯಾರ
ಅಚ್ಚ ಆಯಗಾರ ತಿಳಿಮಾಡಿ । ಬಡಿಗ್ಯಾನ
ಚಿಕ್ಕ ಬಣ್ಣ ಹಚ್ಚಾರೆ॥

ಈ ಹಂತಿಪದದಲ್ಲಿ ಬಡಿಗ್ಯಾನ, ಬಡಿವಾರ ಅವನು ಹಚ್ಚುವ ಕುಂಕಮ, ಹಾಕುವ ಬಟ್ಟೆ, ಉಡುದಾರ, ಜನಿವಾರ, ರೈತಾಪಿ ಜನಗಳಿಗೆ ಮಾಡಿಕೊಡುವ ಕೆಲಸ, ಮಳೆಗಾಲದ ಸಂದರ್ಭ ಬಡಿಗ್ಯಾನ ಮನೆ ಮುಂದೆ ಬೀಳುವ ಕೂರಿಗೆ ಕುಂಟೆಯ ರಾಶಿ, ಊರಿನ ತೇರು ಇಂತಹ ಅನೇಕ ವಿಷಯಗಳನ್ನು ತಿಳಿಸುವುದರ ಜೊತೆಗೆ ದಿನನಿತ್ಯದ ಕೆಲಸಗಳನ್ನು ಹಂತಿಪದದ ಮೂಲಕ ಕಟ್ಟಿಕೊಟ್ಟಿದ್ದಾರೆ.

ಹೊಸಬಾಗಣಿ ಟೋಪಿನ ಸೇರೆ ನೀರೆ
ಅಕಿ ಕಾಳಮ್ಮನ ದೇವಿ ಪೂಜೆ॥
ಬಾಳವೇ ನಮ್ಮ ಗೆಜ್ಜೆ ಸಲಾವೇನೆ ॥ಪ॥
ಆಕೇನೆ ಕಾಳಮ್ಮಾ ಶಿವಪೂಜೆಗಾವಾಗಿ
ಆಕಾಸ ಘಂಟೆ ಡಣಲೆಂದೇ
ಬಾಳವೇ–
ಅಂಬರದಾಗಣಿ ತೆಂಗಿನ ತಿಳಿನೀರೆ
ರೆಂಬೆ ಕಾಳಮ್ಮ ಶಿವಪೂಜೇ ॥೧॥
ಬಾಳವೇ

ಹೀಗೇ ಮುಂದುವರೆಯುತ್ತ ಕುಲದೇವತೆ ಹರಕೆ ತೀರಿಸುವ ಸಂದರ್ಭದಲ್ಲಿ ಹೊಸ ಬಾಗಣಿ, ಟೋಪಿನ ಸೀರೆ ಮುಂತಾದವುಗಳಿಂದ ಕಾಳಮ್ಮನ ಪೂಜೆ ಮಾಡುತ್ತಾರೆ.

ಆ ಸಂದರ್ಭದಲ್ಲಿ ಆಕಾಶದಿಂದ ತೂಗಿಸಿ ತಿಳಿನೀರಿನಂತೆ ಕಾಳಮ್ಮನಿಗೆ ಅಭಿಷೇಕ ನೆರವೇರುತ್ತದೆ. ಜೊತೆಗೆ ಢಣ ಢಣವೆಂಬ ಘಂಟೆಯ ನಾದ ಮೊಳಗುತ್ತದೆ. ಇಷ್ಟೊಂದು ಸಮೃದ್ಧವಾಗಿ ಭಕ್ತಿಯಿಂದ ಪಾಂಚಾಳರು ಆರಾಧಿಸುವುದನ್ನು ಜನಪದಕಾರರು ಕಟ್ಟಿಕೊಟ್ಟಿದ್ದಾರೆ.

೪.೩. ಪಾಂಚಾಳ (ವಿಶ್ವಕರ್ಮ)ರ ಪರಂಪರೆ :

ವಿಶ್ವಕರ್ಮನ ಅಥವಾ ವಿಶ್ವಕರ್ಮ ಪೌರಾಣಿಕ ವ್ಯಕ್ತಿ. ಸೃಷ್ಟಿಕರ್ತನ ಹೆಸರುಗಳಲ್ಲಿ ಒಂದು. ಆದಿಪುರುಷನೇ ವಿಶ್ವಕರ್ಮ, ಮನುಷ್ಯನ ಸೃಷ್ಟಿಯ ಸಂಕೇತ. ವಿಶ್ವಕರ್ಮ ದೇವತೆಗಳ ಶಿಲ್ಪಿ, ಬಡಗಿ, ಕುಶಲಕರ್ಮಿಗಳ ಸ್ಫೂರ್ತಿ ಚೇತನ. ವಿಶ್ವಕರ್ಮ ಎಂದರೆ "ಎಲ್ಲ ನೆರವೇರಿಸುವವನು. ಎಲ್ಲದರ ಸೃಷ್ಟಿಕರ್ತ ಎಲ್ಲ ಮಾಡುವವ" ಎಂದು ಸ್ಥೂಲ ಅರ್ಥ. ಋಗ್ವೇದದ ಪ್ರಕಾರ ವಿಶ್ವಕರ್ಮ ಸೃಷ್ಟಿಕರ್ತ, ದೇವರ ಅಮೂರ್ತರೂಪ. ವಿಶ್ವಕರ್ಮನನ್ನು ವಿಶ್ವದ ಪ್ರಮುಖ ವಾಸ್ತುಶಿಲ್ಪಿ ಎಂದು ತಿಳಿಯಲಾಗಿದೆ. ಅಲ್ಲದೇ ಮುಂದಿನ ಉಪನಿಷದೀಯ ಬ್ರಹ್ಮನ ಮೂಲ ಪರಿಕಲ್ಪನೆ ಸಹ ಈತ ಕುಶಲಕರ್ಮಿಗಳ ಮತ್ತು ವಾಸ್ತುಶಿಲ್ಪಿಗಳ ದೈವ.

ಬಹುಕಾಲದ ಹಿಂದೆ ಧರ್ಮಪ್ರಜಾಪತಿ ಎಂಬುವವನು ಇದ್ದನು. ಇವನು ಬ್ರಹ್ಮನ ಮಾನಸಪುತ್ರರಲ್ಲಿ ಒಬ್ಬನಾಗಿದ್ದನು. ದಕ್ಷನ ಹೆಣ್ಣು ಮಕ್ಕಳಲ್ಲಿ ಒಬ್ಬಳಾದ ವಸು ಎಂಬುವವಳನ್ನು ವಿವಾಹವಾಗಿದ್ದನು. ಈ ದಂಪತಿಗಳಿಗೆ ಎಂಟು ಮಕ್ಕಳು. ಆ ಎಲ್ಲರನ್ನೂ ಅಷ್ಟವಸ್ತುಗಳೆಂದು ಕರೆಯುತ್ತಿದ್ದರು.

ಈ ಅಷ್ಟವಸ್ತುಗಳಲ್ಲಿ ಒಬ್ಬ ಪ್ರಾಸ ಗುಣವಂತ, ಪರೋಪಕಾರಿ, ತ್ಯಾಗಿ, ಹೃದಯವಂತ. ಇವನ ಸದ್ಗುಣಗಳನ್ನು ಗ್ರಹಿಸಿದ ದೇವತೆಗಳ ಗುರುವಾದ ಬೃಹಸ್ಪತಿ ತನ್ನ ಮಗಳು ಬ್ರಹ್ಮವಾದಿನಿಯನ್ನು ಇವನಿಗೆ ಮದುವೆ ಮಾಡಿಕೊಟ್ಟನು. ಅವಳನ್ನು ಯೋಗಸ್ವಿನಿ ಎಂದೂ ಕರೆಯುತ್ತಿದ್ದರು. ಪ್ರಭಾಸ ಅತಿಥಿ ಸತ್ಕಾರಕ್ಕೆ ಹೆಸರಾಗಿದ್ದನು. ಅವನಿಗೆ ತಕ್ಕಂತೆ ಅವನ ಹೆಂಡತಿ ಅನುಕೂಲಳಾಗಿದ್ದಳು. ಪ್ರಭಾಸ ಮತ್ತು ಅವನ ಪತ್ನಿ ಮನೆಗೆ ಬಂದ ಅತಿಥಿಗಳನ್ನು ಸತ್ಕರಿಸುತ್ತಿದ್ದರು. ಆತನ ಮನೆಗೆ ದೇವರುಗಳು, ವಿದ್ವಾಂಸರೂ ಬರುತ್ತಿದ್ದರು. ಬೃಹಸ್ಪತಿಗಳ ಅಳಿಯ ಎಂದರೆ ಸಾಮಾನ್ಯವೇ, ಪ್ರಭಾಸ ದಂಪತಿಗಳಿಗೆ ಎಷ್ಟೇ ಸಿರಿಸಂಪದಗಳಿದ್ದರೂ ಬಹುಕಾಲ ಮಕ್ಕಳಾಗಿರಲಿಲ್ಲ. ಎಲ್ಲ ದೇವರುಗಳ ಮೊರೆ ಹೊಕ್ಕಿದ್ದಾಯಿತು. ಪ್ರಭಾಸ ತನಗೆ ಹುಟ್ಟುವ ಮಗ ಗುರುಹಿರಿಯರಲ್ಲಿ ಭಕ್ತಿಉಳ್ಳವನೂ, ಕಟ್ಟಡಗಳು ದೇವಾಲಯಗಳಂತಹ ರಚನೆಗಳನ್ನು ಮಾಡಬಲ್ಲ ನಿರ್ಮಾಣ ಕುಶಲನೂ ಆಗಿರಬೇಕು ಎಂದು ಆಶಿಸಿದ್ದನು.

ದೇವರಿಗೆ ಕಡೆಗೂ ಅವನ ಮೊರೆ ಕೇಳಿಸಿತು. ಅದು ಭೂಲೋಕದ ಭಾಗ್ಯವೋ ಏನೋ ಎಂಬುವಂತೆ ಬ್ರಹ್ಮವಾದಿನಿ ಗರ್ಭಿಣಿಯಾದಳು. ನವಮಾಸಗಳು ಕಳೆದು ಹತ್ತನೆಯ ತಿಂಗಳು ಪ್ರಾಪ್ತವಾಗಲು ಶುಭದಿನದಂದು ಉತ್ತಮ ವೇಳೆಯಲ್ಲಿ ಒಂದು ಗಂಡು ಮಗುವನ್ನು ಪ್ರಸವಿಸಿದಳು.

ಪ್ರಭಾಸ ಹಿಗ್ಗಿ ಹೋದನು. ತನ್ನ ಮಗ ಇಂಥವನೇ ಆಗಿರಬೇಕೆಂದು ಮೊದಲೇ ನಿರ್ಧರಿಸಿದ್ದ. ಅವನು ಮಗುವಿಗೆ ವಿಶ್ವಕರ್ಮ ಎಂದು ಹೆಸರಿಟ್ಟನು. ವಿಶ್ವಕರ್ಮ ನೋಡಲು ಮುದ್ದಾಗಿದ್ದನು. ಅವನ ಮುಖ ಕಾಂತಿಯಿಂದ ಕೂಡಿರುತ್ತಿತ್ತು. ಸದಾ ಚಟುವಟಿಕೆಯಿಂದಿರುತ್ತಿದ್ದನು.

ಚಿಕ್ಕಂದಿನಲ್ಲೇ ಹೊಸಹೊಸದಾಗಿ ಏನಾದರೂ ಒಂದು ನಿರ್ಮಾಣ ಮಾಡುತ್ತಿದ್ದನು. ಅವು ಸುಂದರವಾದ ಆಕೃತಿಗಳಿರಬಹುದು, ಆಸನಗಳೋ, ಆಕರ್ಷಕ ಮೆಟ್ಟಿಲುಗಳೋ ಇರಬಹುದು. ಪ್ರಭಾಸ ಮಗನ ಆಸಕ್ತಿ ಕಂಡು ಹರ್ಷಿಸಿದ. ತನ್ನ ಮಗ ಜಗತ್ಪ್ರಸಿದ್ಧನಾಗುತ್ತಾನೆ ಎಂದು ತಿಳಿದ.

ವಿಶ್ವಕರ್ಮ ಬಾಲಕ ಒಂದು ದಿನ ಮಣ್ಣಿನಿಂದ ಹಸುಕರುಗಳನ್ನು ಮಾಡಿ ಅವುಗಳಿಗೆ ಗಿಡದ ರಸಗಳನ್ನು ಹಚ್ಚಿ ಬಣ್ಣಗಳನ್ನು ತುಂಬಿದ. ನೋಡಲು ನಿಜವಾದ ಹಸುಕರುವೋ ಎನಿಸುವಷ್ಟು ಸುಂದರವಾಗಿದ್ದವು.

ಒಮ್ಮೆ ತಂದೆಯೊಡನೆ ತಪೋವನಗಳಲ್ಲಿ ಸುತ್ತಾಡುತ್ತಿದ್ದಾಗ ಋಷಿಗಳ ಪರ್ಣಕುಟೀರಗಳನ್ನು ನೋಡಿ ನೊಂದುಕೊಂಡ. ಇವರೇಕೆ ಎಲೆ ಮನೆಗಳಲ್ಲಿ ವಾಸಿಸುವರು, ಗೋಡೆ ಛಾವಣಿಗಳಿಂದ ಕೂಡಿದ ಮನೆಗಳನ್ನು ಕಟ್ಟಿಕೊಂಡಿರಬಾರದೇ? ಮಳೆ ಬಿದ್ದಾಗ ರಕ್ಷಣೆಯೂ ಇರುತ್ತದೆ ಎಂದು ಆಲೋಚಿಸಿದನು. ಚಿಕ್ಕ ವಯಸ್ಸಿಗೆ ಇಂತಹ ಕಲ್ಪನೆಗಳನ್ನು ವಿಶ್ವಕರ್ಮ ಮೂಡಿಸಿಕೊಂಡ. ಆಗೆಲ್ಲ ಜನ ಗುಹೆಗಳೊಳಗೆ ವಾಸಿಸುತ್ತಿದ್ದುದು ಉಂಟು. ಮರದ ದೊಡ್ಡ ಪೊಟರೆಗಳು ಇಲ್ಲವೇ ಮರದ ಅಡಿಯಲ್ಲೋ ಇರುತ್ತಿದ್ದರು. ಇವನ್ನು ಕಂಡ ಮೇಲೂ ವಿಶ್ವಕರ್ಮನಿಗೆ ಗೃಹಗಳ ನಿರ್ಮಾಣದ ಕಡೆ ಆಸಕ್ತಿ ಹೆಚ್ಚಿತು. ಇವನ ಆಸಕ್ತಿ ಕಂಡ ಜನ ಮುಂದೆ ಇವನೊಬ್ಬ ವಾಸ್ತುಶಿಲ್ಪಿಯಾಗುವನು ಎಂದು ಹೇಳಿಕೊಳ್ಳುತ್ತಿದ್ದರು. ಬೆಳೆಯುವ ಪೈರು ಮೊಳಕೆಯಲ್ಲಿ ಎಂಬುವಂತೆ ವಿಶ್ವಕರ್ಮ ಮುಂದೆ ತಾನು ಏನಾಗುವನೆಂದು ತೋರುತ್ತಿದ್ದನು.

ಮಕ್ಕಳಿಗೆ ತಂದೆ ಬಾಲ್ಯದೊಳು ಅಕ್ಕರದ ವಿದ್ಯೆ ಕಲಿಸಬೇಕು. ಪ್ರಭಾಸ ಮಗನಿಗೆ ಶುಭ ಮುಹೂರ್ತದಲ್ಲಿ ಉಪನಯನ ಮಾಡಿ ವಿದ್ಯಾಭ್ಯಾಸಕ್ಕಾಗಿ ಗುರುಕುಲಕ್ಕೆ ಕಳುಹಿಸಿದನು. ವಿಶ್ವಕರ್ಮನಿಗೆ ಗುರುಗಳಲ್ಲಿ ವಿಶೇಷ ಭಕ್ತಿ ಇದ್ದಿತು. ಯಾವಾಗ ಗುರುವಿನ ಪೂಜ್ಯಭಾವನೆ ಇರುವದೋ ಅವರಿಗೆ ವಿದ್ಯೆ ಕಲಿಯುವ ಆಸಕ್ತಿ ಇರುತ್ತದೆ. ವಿಶ್ವಕರ್ಮ ಪ್ರತಿನಿತ್ಯವೂ ಗುರುಸೇವೆ ಮಾಡಿಕೊಂಡು ಹಲವು ವರ್ಷಗಳ ಕಾಲ ವಿದ್ಯೆ ಕಲಿತನು.

ವೇದ, ಉಪನಿಷತ್ತು, ಪುರಾಣ, ಧರ್ಮ ಶಾಸ್ತ್ರಗಳನ್ನೂ, ತರ್ಕ, ಜ್ಯೋತಿಷ್ಯ, ಸಾಹಿತ್ಯ ಮತ್ತು ನೀತಿ ಶಾಸ್ತ್ರಗಳನ್ನು ಕಲಿತನು. ವಿಜ್ಞಾನ ಅವನ ಪ್ರಿಯವಾದ ವಿಷಯವೇ ಆಗಿತ್ತು. ಆಯುರ್ವೇದ, ಧನುರ್ವೇದ, ಗಾಂಧರ್ವ ವಿದ್ಯೆ ಮತ್ತು ಶಿಲ್ಪ ವಿದ್ಯೆಗಳೆಂಬ ನಾಲ್ಕು ಉಪವೇದಗಳನ್ನು ಮನನ ಮಾಡಿದನು. ಕುದುರೆ ಸವಾರಿ, ಅಂಗಸಾಧನೆ ಈ ವಿದ್ಯೆಗಳೂ ಆತನಿಗೆ ಕರಗತವಾದುವು. ಚಿತ್ರಕಲೆಯನ್ನೂ ಕಲಿತನು. ವಿಶ್ವಕರ್ಮ ಯಾವ ವಿದ್ಯೆಯನ್ನೇ ಕಲಿಯಲಿ ಆಳವಾಗಿ ಅಭ್ಯಾಸ ಮಾಡುತ್ತಿದ್ದನು. ವಿದ್ಯಾರ್ಥಿಗಿರಬೇಕಾದ ಏಕಾಗ್ರತೆ ಅವನಲ್ಲಿದ್ದಿತು.

ಗುರುಕುಲದಲ್ಲಿ ಸಾಮಾನ್ಯವಾಗಿ ಶಿಷ್ಯರೆಲ್ಲರೂ ಭಿಕ್ಷೆ ಬೇಡಿ ತಂದು ಗುರುಗಳಿಗೆ ಅರ್ಪಿಸಿ ನಂತರ ಅವರು ಕೊಟ್ಟದ್ದನ್ನು ಸೇವಿಸುವದು ಪದ್ಧತಿ. ಭವತಿ ಭಿಕ್ಷಾಂದೇಹಿ ಎಂದು ದಿನವೂ

ಪಾತ್ರೆ ಹಿಡಿದು ಹೋಗಬೇಕಾಗುತ್ತಿತ್ತು. ವಿಶ್ವಕರ್ಮ ಆ ಪದ್ಧತಿಯಂತೆ ನಡೆದುಕೊಂಡನು. ಇದರಿಂದ ಅವನಿಗೆ ಎಲ್ಲ ವಿದ್ಯೆಗಳೂ ಕರಗತವಾಗಿ ವಿದ್ಯಾಭ್ಯಾಸ ಮುಕ್ತಾಯದ ಘಟ್ಟ ತಲುಪಿತು. ಗುರುಗಳು ವಿಶ್ವಕರ್ಮನನ್ನು ಕರೆದು ಮೈದಡವಿ "ಮಗೂ ನೀನು ಎಲ್ಲ ವಿದ್ಯೆಗಳಲ್ಲೂ ಪಾರಂಗತನಾಗಿರುವೆ, ಇಲ್ಲಿಗೆ ಗುರುಕುಲ ವಿದ್ಯಾಭ್ಯಾಸ ಮುಗಿದಂತಾಯಿತು. ಇನ್ನು ನೀನು ನಾಡಿಗೆ ಹೋಗಿ ದೇಶ ಸೇವೆಯ ಕಾರ್ಯದಲ್ಲಿ ತೊಡಗಬಹುದು ನಿನಗೆ ಶುಭವಾಗಲಿ" ಎಂದು ಹೇಳಿದರು. ಗುರುಗಳಿಂದ ವಿದ್ಯೆ ಕಲಿತ ಮೇಲೆ ಶಿಷ್ಯರು ಗುರುದಕ್ಷಿಣೆ ಸಲ್ಲಿಸಬೇಕು ಇದು ಕ್ರಮ. ವಿಶ್ವಕರ್ಮ ಕಲಿತ ಗುರುಕುಲದಲ್ಲಿ ಗುರು, ಗುರುಪತ್ನಿ ಹಾಗೂ ಗುರುವಿನ ಪುತ್ರ-ಪುತ್ರಿ ಇದ್ದರು. ಒಬ್ಬೊಬ್ಬರ ಬಯಕೆಯನ್ನು ಈಡೇರಿಸಬೇಕಾಗುತ್ತದೆ ಎಂಬುದನ್ನು ವಿಶ್ವಕರ್ಮ ಬಲ್ಲವನಿದ್ದನು.

ವಿಶ್ವಕರ್ಮ ಗುರುಗಳಿಗೆ ವಂದಿಸಿ "ಮಹಾತ್ಮರೇ ನನಗೆ ಸಕಲ ವಿದ್ಯೆಗಳನ್ನೂ ಕಲಿಸಿರುವ ತಮಗೆ ಇತರ ಶಿಷ್ಯರಂತೆ ಗುರುದಕ್ಷಿಣೆಯನ್ನು ನಾನೂ ಸಲ್ಲಿಸುವೆ. ತಮ್ಮ ಅಪೇಕ್ಷೆಯಂತೆ ಸಲ್ಲಿಸುವದು ಧರ್ಮ. ತಮಗೂ ನನಗೆ ಮಾತೃಶ್ರೀ ಸಮಾನರಾದ ತಮ್ಮ ಪತ್ನಿಗೂ ಹಾಗೂ ತಮ್ಮ ಪುತ್ರ-ಪುತ್ರಿಯರಿಗೆ ಏನು ನನ್ನಿಂದ ಆಗಬೇಕೆಂಬುದನ್ನು ಹೇಳಿದರೆ ನಡೆಸಿಕೊಡುವೆನು" ಎಂದು ಭಿನ್ನವಿಸಿಕೊಂಡನು. ಗುರುಗಳು ತಮಗೆ ಒಂದು ಎಲೆಮನೆ ಮಾಡಿಕೊಡಲು ಹೇಳಿದರು. ಮನೆ ಸೋರಬಾರದು, ಚಳಿಗಾಲದಲ್ಲಿ ಬೆಚ್ಚಗೂ, ಬೇಸಿಗೆ ಕಾಲದಲ್ಲಿ ತಂಪಾಗಿಯೂ ಇರಬೇಕು. ಎಲೆಮನೆ ಎಂದೂ ಹಳೆಯದೆನಿಸಬಾರದು ಎಂದು ನಿಬಂಧನೆಗಳನ್ನು ಹಾಕಿದರು. ಗುರು ಪತ್ನಿ ತಮಗೊಂದು ರವಿಕೆ, ಹೊಸ ಚಿನ್ನಾಭರಣಗಳನ್ನೂ ಮತ್ತು ಎಲ್ಲಿಗೆಂದರಲ್ಲಿಗೆ ಒಯ್ಯಬಹುದಾದ ಮರದ ಮನೆ ಕಟ್ಟಿಕೊಡು ಎಂದು ಕೇಳಿಕೊಂಡಳು. ಗುರುಪುತ್ರ ತನಗೆ ಉತ್ತಮ ಪಾದರಕ್ಷೆಯನ್ನು, ಗುರುಪುತ್ರಿ ತನಗೆ ಆನೆ ದಂತದ ಆಟದ ಒಡವೆಗಳು, ಅಡುಗೆ ಪಾತ್ರೆಗಳು, ಪೀಠೋಪಕರಣಗಳನ್ನು ಮಾಡಿಕೊಡಲು ಕೇಳಿಕೊಂಡರು.

ಗುರುಕುಲದವರ ಬಯಕೆಗಳು ಸಾಮಾನ್ಯವಾದುವಾಗಿರಲಿಲ್ಲ. ಆ ಎಲ್ಲವನ್ನು ಪೂರೈಸಲು ಕೆಲವು ದಿನಗಳು ತಿಂಗಳುಗಳೇ ಬೇಕಾಗುತ್ತದೆ ಎಂದು ವಿಶ್ವಕರ್ಮ ತಿಳಿದನು. ಸಹಜವೇ, ಆದರೆ ಅದನ್ನು ತೋರುಗೊಡದೇ ವಿಶ್ವಕರ್ಮ ಗುರುಗಳಿಗೆ "ಪೂಜ್ಯರೇ ನೀವು ನಾಲ್ವರೂ ಕೇಳಿದುದನ್ನು ಒಂದು ತಿಂಗಳೊಳಗಾಗಿ ಮಾಡಿಕೊಡುವೆನು. ನಾನು ಹೋಗಲು ತಮ್ಮ ಅನುಮತಿ ಕೊಡಿ" ಎಂದು ಕೇಳಿಕೊಂಡನು. ಗುರುಗಳು ಅನುಮತಿ ನೀಡಿದರು. ವಿಶ್ವಕರ್ಮ ಅಲ್ಲಿಂದ ಹೊರಟನು. ಗುರುದಕ್ಷಿಣೆಗಾಗಿ ವಿಶ್ವಕರ್ಮ ಗುರುದಕ್ಷಿಣೆ ಸಲ್ಲಿಸುದಾಗಿಯೇನೋ ಮಾತು ಕೊಟ್ಟ. ಕೊಟ್ಟ ಮಾತಿಗೆ ತಪ್ಪಿದರೆ ಗುರುಗಳಿಗೆ ತಕ್ಕ ಶಿಷ್ಯ ಎನಿಸಿಕೊಳ್ಳಲಾಗದು. ಗುರುದಕ್ಷಿಣೆ ಕೊಡುವದು ಕರ್ತವ್ಯ.

"ಅಯ್ಯಾ ನಿನ್ನ ಉದ್ದೇಶ ಒಳ್ಳೆಯದೇ ಚಿಂತಿಸಬೇಡ, ಒಂದು ಒಳ್ಳೆಯ ಕೆಲಸಕ್ಕೆ ಅದರದೇ ಆಶೀರ್ವಾದ ಇರುತ್ತದೆ. ನೀನು ಈಗಲೇ ಕಾಸಿಗೆ ಹೋಗಿ ಶಿವನನ್ನೇ ಮೆಚ್ಚಿಸಲು ಅವನನ್ನು

ಭಕ್ತಿಯಿಂದ ಪೂಜಿಸು. ನಿನ್ನ ಇಷ್ಟಾರ್ಥ ನೆರವೇರುತ್ತದೆ. ಬರಿಯ ಗುರುಕುಲದವರ ಬಯಕೆಗಳನ್ನು ಪೂರೈಸುವದೇನು? ಮೂರೂ ಲೋಕಗಳ ಮಹಾ ಪುರುಷರ ಕೋರಿಕೆಗಳನ್ನು ಈಡೇರಿಸಲು ಸಾಮರ್ಥ್ಯ ಲಭಿಸುತ್ತದೆ. ಶಿವನೊಲಿದರೆ ಭಯವಿಲ್ಲ, ಅವನ ಕೃಪೆಯಿಂದ ನೀನು ಬ್ರಹ್ಮನಂತೆ ಹಲವು ಸೃಷ್ಟಿಗಳನ್ನೇ ಮಾಡುವವನಾಗುವೆ" ಎಂದನು. ಮಹರ್ಷಿಗಳು ವಿಶ್ವಕರ್ಮನನ್ನು ಕಾಶಿಗೂ ಕರೆದೊಯ್ದು ಶಿವನನ್ನು ಕುರಿತು ತಪಸ್ಸು ಮಾಡಲು ಪ್ರಶಸ್ತವಾದ ಜಾಗ ತೋರಿದರು. ಬಳಿಕ ತಮ್ಮ ಕಾರ್ಯ ಕುರಿತು ಹೊರಟರು.

ವಿಶ್ವಕರ್ಮನ ತಪಸ್ಸು ಕಠಿಣಮಯವಾಗಿದ್ದಿತು. ಕೆಲವು ದಿನವಷ್ಟೇ ಆಹಾರ ಅದೂ ಗಡ್ಡೆ, ಗೆಣಸು ತಿನ್ನುತ್ತಿದ್ದನು. ಆ ಬಳಿಕ ಬರಿಯ ಗಾಳಿ ಸೇವಿಸಿ ತಪಸ್ಸು ಮಾಡಿದನು. ಹಗಲಿರುಳೂ ಧ್ಯಾನ ಮಾಡುತ್ತಿದ್ದನು. ಅವನ ಗುರಿ ವಿಶ್ವೇಶ್ವರ ಸಾಕ್ಷಾತ್ಕಾರ, ಶಿವಕರುಣೆಯ ಲಾಭ ಪಡೆಯುವದು ಸುಲಭವೇ? ಶಿವನಾರು? ಸರ್ವಗತ ಸರ್ವತೋಮುಖ, ಸರ್ವಬಾವನ, ಸರ್ವಮಯ, ಸರ್ವಪೂಜಿತ, ಸರ್ವಸಾರ್ಥಕ, ಸರ್ವಗುಣನಿಲಯ, ಸರ್ವಸರ್ವಾಕ್ರಮ, ಸ್ರಮಾಹಿತಿ, ಸರ್ವೇಶ್ವರೇಶ್ವರ, ಸರ್ವದುಃಖಾವಹ ವಿಶ್ವಕರ್ಮನಿಗೆ ಶಿವ ಪ್ರತ್ಯಕ್ಷನಾದ ಅರಿವಾಯಿತು. ಕಣ್ಣು ಬಿಟ್ಟು ಆ ನಿರುಪಮ ನಿರಾಮಯವನ್ನು ನೋಡಿ, ವಿಶ್ವಕರ್ಮ ನೀನು ಬೆಳ್ಳಿ, ಕಬ್ಬಿಣ, ತಾಮ್ರ ಮೊದಲಾದ ವಿವಿಧ ಲೋಹಗಳಿಂದ ಹಲವಾರು ಆಕೃತಿಗಳನ್ನು ಮಾಡುವ ವಿದ್ಯೆ ನಿನಗೆ ಕರಗತವಾಗಲಿ ಮರಗೆಲಸ, ಕಲ್ಲಿನ ಕೆತ್ತನೆ, ನವರತ್ನ ರಚನೆ, ಗಾಳಿ, ನೀರು, ಬೆಂಕಿ, ಆಕಾಶ ಮತ್ತು ಭೂಮಿ ಈ ಪಂಚಭೂತಗಳ ಶಕ್ತಿಯೇ ಸಿದ್ಧಿಸಲಿ. ನೀರು, ಬೆಂಕಿ, ಸುಗಂಧ ದ್ರವ್ಯಗಳ ತಯಾರಿಕೆ ಎಲ್ಲ ನಿನಗೆ ಸಿದ್ಧಿಸಲಿ. ನಿನ್ನಿಂದ ಭೂಲೋಕ ಸುರಲೋಕಗಳಲ್ಲಿ ವಿಧ ವಿಧವಾದ ಗೃಹಗಳು, ಅರಮನೆಗಳು, ದೇವಾಲಯಗಳು, ಗುಡಿಗೋಪುರಗಳು, ಉದ್ಯಾನಗಳು, ನಗರಗಳು, ಕೆರೆ ಕಾಲುವೆಗಳು ಇಂಥ ಅನೇಕ ನಿರ್ಮಾಣಗಳು ಆಗಲಿ. ಇಷ್ಟೇ ಅಲ್ಲ ರಥ, ವಾಹನ, ಯಂತ್ರಗಳು, ಆಯುಧಗಳು, ಆಭರಣಗಳು, ಅಲಂಕಾರ ಸಾಧನಗಳು ಈ ಒಂದೊಂದನ್ನು ಎಲ್ಲರಿಗೂ ಮೆಚ್ಚುಗೆಯಾಗುವಂತೆ ನೀನು ರಚಿಸಬಲ್ಲವನಾಗುವೆ.

ಇನ್ನು ಇವನಿಗೆ ಪಾಕವಿಜ್ಞಾನ, ಸಂಗೀತ, ನೃತ್ಯ, ಗಮಕ ಕಲೆಗಳೂ, ಇಂದ್ರಜಾಲ ಮೊದಲಾದ ವಿದ್ಯೆಗಳು ಕರತಲಾಮಲಕವಾಗಲಿ. ಗುರುದೇವ, ಗುರುಪತ್ನಿ, ಗುರುಪುತ್ರಿ ಹಾಗೂ ಗುರುಪುತ್ರ ಇವರು ಬಯಸಿದುದನ್ನೆಲ್ಲ ಶಿವನ ಅನುಗ್ರಹದಿಂದ ನಿರ್ಮಿಸಿ ತಯಾರಿಸಿಕೊಟ್ಟನು. ಗುರುಗಳು ವಿಶ್ವಕರ್ಮನನ್ನು ಆಶೀರ್ವದಿಸಿ "ಶಿಷ್ಯ ನಿನ್ನಂತಹ ಶಿಷ್ಯನನ್ನು ಪಡೆದು ನಾನು ಧನ್ಯನಾದೆ. ಹೋಗಿ ಬಾ, ನಿನ್ನ ತಂದೆ-ತಾಯಿಯರನ್ನು ಕಂಡು ಅವರಿಗೂ ಸಂತೋಷ ಉಂಟು ಮಾಡು" ಎಂದು ಕಳುಹಿಸಿಕೊಟ್ಟರು.

ವಿಶ್ವಕರ್ಮ ಊರಿಗೆ ಹಿಂತಿರುಗಿ ತಂದೆ ತಾಯಿಯರನ್ನು ಕಂಡು ನಮಸ್ಕರಿಸಿ ತಾನು ಗುರುಕುಲದಲ್ಲಿ ಎಲ್ಲ ಅರ್ಹವಿದ್ಯೆಗಳನ್ನು ಕಲಿತು ಬಂದೆನೆಂದು ಹೇಳಿಕೊಂಡನು. ಪ್ರಭಾಸನಿಗೂ ಸಂತೋಷವಾಯಿತು. ತನ್ನ ಮಗ ಎಲ್ಲ ವಿದ್ಯೆಗಳಲ್ಲಿ ಪಾರಂಗತನಾಗಿ ಬಂದಿರುವನು. ಮಿಗಿಲಾಗಿ

ಲೋಕೋಪಕಾರ ಕೆಲಸಗಳನ್ನು ಮಾಡುವ ಶಕ್ತಿ ಸಂಪಾದಿಸಿರುವನು ಎಂದು ಹಿರಿಹಿರಿ ಹಿಗ್ಗಿದನು. ಕೆಲಕಾಲ ಅರಮನೆಯಲ್ಲಿ ಉಳಿದು ವಿಶ್ವಕರ್ಮ ತನ್ನ ವಿದ್ಯೆಗಳನ್ನು ಪ್ರದರ್ಶಿಸುತ್ತಾ ತಂದೆ ತಾಯಿಯರಿಗೆ ಸಂತೋಷ ಉಂಟು ಮಾಡಿದನು.

ಕೆಲದಿನಗಳಾದವು, ವಿಶ್ವಕರ್ಮನು ನಿರ್ಮಾಣಗಳನ್ನು ಕೈಕೊಂಡನು. ವಿಶ್ವಕರ್ಮ ನಿರ್ಮಿಸಿದ ಮೊದಲ ರಚನೆ ವಾರಣಾಸಿಯ ವಿಶ್ವನಾಥ ಮಂದಿರ. ಕಾಶಿಯಲ್ಲಿ ಶರೀರ ಬಿಟ್ಟವರಿಗೆ ಮುಕ್ತಿ ಲಭ್ಯ. ಗಂಗಾನದಿ ದಡದ ದಿವ್ಯಕ್ಷೇತ್ರ ಕಾಶಿ. ವಿಶ್ವಕರ್ಮ ಕಾಶಿ ವಿಶ್ವೇಶ್ವರನ ಮಂದಿರ ನಿರ್ಮಿಸಿ ಊರಿಗೆ ಮರಳಿದನು. ನಂತರ ಪ್ರಹ್ಲಾದನ ಮಗಳಾದ ವಿರೋಚನೆಯನ್ನು ಮದುವೆಯಾದನು.

ವಿಶ್ವಕರ್ಮನ ವಂಶಪರಂಪರೆ :

ತಂದೆ–ವಸು ಇವನ ಮಡದಿ(ಪತ್ನಿ) ಧರ್ಮಪ್ರಜಾಪತಿ

ಈ ದಂಪತಿಗಳಿಗೆ ಎಂಟು ಮಕ್ಕಳಲ್ಲಿ ಒಬ್ಬ, ಇವನ

ತಂದೆ–ಪ್ರಭಾಸ ಪತ್ನಿ–ಬ್ರಹ್ಮವಾದಿನಿ(ಬೃಹಸ್ಪತಿಯ ಮಗಳು)

ಇವರ ದಂಪತಿಗಳ ಮಗ, ವಿಶ್ವಕರ್ಮ ಇವನ ಪತ್ನಿ – ವಿರೋಚನೆ (ಪ್ರಹ್ಲಾದನ ಮಗಳು)

ವಿಶ್ವಕರ್ಮನ ಮಕ್ಕಳು :

೧ ಗಂಡುಮಗ–ವಿಶ್ವರೂಪಾಚಾರ್ಯ

೨ ಹೆಣ್ಣುಮಗಳು–ಸಂಜ್ಞಾದೇವಿ ಹಾಗೂ ಬೃಹಷ್ಪತಿ

ವೇದಗಳು ನಾಲ್ಕು. ಋಗ್ವೇದ ಮೊದಲನೆಯ ವೇದ. ಇದರಲ್ಲಿ ವಿಶ್ವಕರ್ಮನ ಅಂತಿಮ ವಾಸ್ತವತೆ, ಅಲಂಕಾರಿಕ ನಿರೂಪಣೆ ಯಜುರ್ವೇದದ ಪುರುಷ ಸೂಕ್ತದಲ್ಲೂ ಕಂಡುಬರುತ್ತದೆ. ತ್ವಷ್ಟ್ಯ ಇಂದ್ರನಿಗೆ ತನ್ನ ಲೋಹ ಹತಾರದಿಂದ ವಜ್ರಾಯುಧವನ್ನು ಮಾಡಿದವನು. ಕಲಾತ್ಮಕ ಕೆಲಸವನ್ನು ಪ್ರೀತಿಸುತ್ತಾನೆ. ವೈದಿಕ ಯುಗದಲ್ಲಿ ವಿಶ್ವಕರ್ಮ ಎಂಬ ಶಬ್ದ ಇಂದ್ರನ ಒಂದು ವಿಶೇಷಣವಾಗಿ ತೋರುತ್ತದೆ. ಹಾಗೆ ಅದು ತೋರಿ ಬಂದಿತು ಕೂಡ. ಇಂದ್ರನಷ್ಟೇ ಅಲ್ಲ ಸೂರ್ಯ ಮತ್ತು ಅಗ್ನಿಗಳ ವಿಶೇಷಣ ಕೂಡ.

ಆ ಕಾಲದಲ್ಲಿ ಮಂದ್ರೆ ಬ್ರಹ್ಮನ ಸೃಷ್ಟಿಕರ್ತನ ಪರಿಕಲ್ಪನೆ ವೃದ್ಧಿಸಿದ್ದು ವಾಸ್ತೋಸ್ಪತಿ ಮತ್ತು ಬೃಹಸ್ಪತಿ ಅಥವಾ ಬ್ರಾಹ್ಮಣಸ್ಪತಿಗಳ ಪರಿಕಲ್ಪನೆಯೊಂದಿಗೆ ಹಾಸುಹೊಕ್ಕಾಗಿರಬಹುದು. ವೈದಿಕ ಯುಗದ ಕೊನೆ ಹಂತದಲ್ಲಿ ಮತ್ತು ಏಕದೇವೋಪಾಸನೆಯ ಬೆಳವಣಿಗೆ ಕಾಲದಲ್ಲಿ ಈ ವಾಸ್ತವಿಕ ದೇವರ ಪರಿಕಲ್ಪನೆ ಹೆಚ್ಚು ಅಮೂರ್ತವಾಗಿ ಯಾರೊಬ್ಬರು ಅಗೋಚರ ಸೃಜನಶೀಲ ಶಕ್ತಿ ವಿಶ್ವಕರ್ಮ ಶ್ರೇಷ್ಠ ದೈವವಾಗಿ ಹೊರಹೊಮ್ಮಿದ್ದನ್ನು ನೋಡಬಹುದು.

ವೈದಿಕೋತ್ತರ ಮತ್ತು ಬ್ರಾಹ್ಮಣರ ಯುಗದಲ್ಲಿ ವಿಶ್ವಕರ್ಮ ಋಷಿ ಹಾಗೂ ಶಿಲ್ಪಿ ಎರಡೂ ಆಗಿ ಕಂಡುಬರುತ್ತಾನೆ. ಯಜುರ್ವೇದದಲ್ಲಿ ಪಂಚ ಋಷಿಗಳ ಹೆಸರುಗಳಲ್ಲಿ ಒಬ್ಬನಾಗಿ ಕಾಣಿಸುತ್ತಾನೆ.

ವಿಶ್ವಕರ್ಮ ಸೂರ್ಯ ನಾರಾಯಣ ಒಂದು ವಿಶೇಷಣವಾದರೂ ಸೂರ್ಯನ ಏಳು ಕಿರಣಗಳಲ್ಲಿ ಒಂದು ಕೂಡ ವಿಶ್ವಕರ್ಮ ಎಂದು ತಿಳಿಯಲಾಗಿದೆ. ಅಥರ್ವ/ಅಂಗೀರಸ ಗೋತ್ರದ ಭುವನ ವಿಶ್ವಕರ್ಮ ಒಬ್ಬ ವೈದಿಕ ಋಷಿ. ಇವನು ಋಗ್ವೇದ ೮೦, ೮೧, ೮೨ ಸೂಕ್ತಗಳ ಲೇಖಕನಾಗಿದ್ದನು. ಪ್ರಭಾಸ ವಿಶ್ವಕರ್ಮ ಒಬ್ಬ ಶಿಲ್ಪಿ. ಪ್ರಭಾಸನ ಮಗ. ಇವನು ಸ್ಥಾಪತ್ಯ ವೇದ/ ವಾಸ್ತುಶಾಸ್ತ್ರ ಅಥವಾ ನಾಲ್ಕನೇ ಉಪವೇದವನ್ನು ಪ್ರಚುರ ಪಡಿಸಿದವನು. ೬೪ ಯಾಂತ್ರಿಕ ಕಲೆಗಳ ಅಧ್ಯಕ್ಷ.

ವಿಶ್ವಕರ್ಮ ಶ್ರೇಷ್ಠಕರ್ಮಿ. ಕುಶಲ ಕಲೆಗಾರಿಕೆಯಲ್ಲಿ ಶ್ರೇಷ್ಠತೆ ಮತ್ತು ಗುಣಮಟ್ಟದ ಸಾರವೇ ವಿಶ್ವಕರ್ಮ. ಮಹಾಭಾರತ ಮತ್ತು ಹರಿವಂಶಗಳಲ್ಲಿ ವಿಶ್ವಕರ್ಮ, ವಾಸು, ಪ್ರಭಾಸ ಮತ್ತು ಯೋಗ ಸಿದ್ಧಿಗಳ ಮಗ. ಮಹಾಭಾರತವು ವಿಶ್ವಕರ್ಮನನ್ನು ಕಲೆಗಳ ಒಡೆಯ, ಸಾವಿರಾರು ಕರಕುಶಲ ಕಲೆಗಳ ನಿರ್ವಾಹಕ. ದೇವತೆಗಳ ಬಡಗಿ, ಕುಶಲಕರ್ಮಿಗಳ ಅತ್ಯಂತ ಪ್ರಸಿದ್ಧ. ಎಲ್ಲ ಆಭರಣಗಳ ವಿನ್ಯಾಸಕಾರ ಮತ್ತು ಮಹಾನ್ ವಾಸ್ತು ದೈವ, ಎಂದು ವರ್ಣಿಸಿದೆ. ವರ್ಣಚಿತ್ರಗಳಲ್ಲಿ ವಿಶ್ವಕರ್ಮ ಒಂದು ಕಿರೀಟ ಧರಿಸಿರುವಂತೆ ಹಾಗೂ ತನ್ನ ಕೈಗಳಲ್ಲಿ ಒಂದು ನೀರಿನ ಹೂಜಿ, ಒಂದು ಮಸ್ತಕ, ಒಂದು ಕಾಣಿಕೆ ಹಾಗೂ ಕರಕುಶಲಗಾರನ ಹತಾರಗಳನ್ನು ಇಟ್ಟುಕೊಂಡಿರುವಂತೆ ಚಿತ್ರಿಸಲಾಗಿದೆ.

೪.೪. ಕಲೆಗಳ ನೆಲೆಗೆ ವ್ಯಕ್ತಿಗಳ ತನುವಿಕೆ :

ವಿಶ್ವಕರ್ಮ ಜಯಂತಿಯನ್ನು ಪ್ರಾಯಶಃ ಎಲ್ಲಾ ಕಲಾವಿದರ, ಕೈಗಾರಿಕಾ ನಿಲಯಗಳಲ್ಲಿ, ಕರಕುಶಲಗಾರರ ಮತ್ತು ನೇಕಾರರ ಮನೆಗಳಲ್ಲಿ ಆಚರಿಸುವರು. ಇದೊಂದು ಹಬ್ಬವಾಗಿ ಆಚರಣೆಯಲ್ಲಿದೆ. ಈ ಹಬ್ಬವನ್ನು ಬಹುಮಟ್ಟಿಗೆ ಗಣೇಶನ ಪೂಜೆಯೊಂದಿಗೆ ಕನ್ಯಾ ಸಂಕ್ರಾಂತಿ ದಿನ ಸಪ್ಟೆಂಬರ್ ೧೭ ರಂದು ಆಚರಿಸುವ ರೂಢಿ ಇದೆ. ಈ ವಿಶಿಷ್ಟ ದಿನವೇ ಪ್ರಸ್ತುತ ವಿಶ್ವಕರ್ಮ ಜನರ ಪಿತೃಗಳು ನೇಗಿಲನ್ನು ಕಂಡುಹಿಡಿದು ಮಾನವತೆಗೆ ವರವಾಗಿ ಕೊಟ್ಟರು. ನೇಗಿಲು ಪ್ರಾಚೀನ ಭಾರತೀಯ ನಾಗರಿಕತೆಯ ಪ್ರಾತಿನಿಧಿಕ ಸಂಕೇತ. ಅದು ಕರಕುಶಲವೃತ್ತಿ ಹಾಗೂ ಬೇಸಾಯವನ್ನು ಪ್ರತಿನಿಧಿಸುತ್ತದೆ. ಅದು ಮಾನವನ ಇತಿಹಾಸ ಪಥವನ್ನೇ ಒಟ್ಟಾರೆ ಬದಲಾಯಿಸಿತು. ಇದು ಸ್ಥಳೀಯ ಗುಂಪು ಸಂಸ್ಕೃತಿಯಿಂದ ವಿಶ್ವಮಾನವ ಸಂಸ್ಕೃತಿಗೆ ಒಂದು ಬದಲಾವಣೆ ಆಯಿತು. ಅದರಲ್ಲಿ ಭಾರತದ ವಿಶ್ವಕರ್ಮರು ಮೊದಲಿಗೆ ಉಪಕ್ರಮಿಸಿದರು. ಕಾಕತಾಳೀಯವಾಗಿ ಇದು ಋಷಿಶಿಲ್ಪಿ ವಿಶ್ವಕರ್ಮನ ಹುಟ್ಟುಹಬ್ಬದ ದಿನವೂ ಆಗಿದೆ. ಆದುದರಿಂದ ಭಾರತೀಯರು ಹಿಂದೆ ಈ ದಿನವನ್ನು ವಿಶ್ವಕರ್ಮನ ಮತ್ತವನ ವಂಶಜರನ್ನು ಗೌರವಿಸುವ ದಿನವಾಗಿ ಆಚರಿಸುತ್ತಿದ್ದರು. ವಿಶ್ವಕರ್ಮ ಸಮುದಾಯದ ಕುಲದೇವತೆ ಕಾಳಿಕಾ ಕುಮಟೇಶ್ವರಿ ಆಗಿರುವಳು.

ವಿಧೇಯಕ ೧೬(೪) ರಡಿ ಪಟ್ಟಿ ಮಾಡಿರುವ ಹಿಂದುಳಿದ ವರ್ಗಗಳಲ್ಲಿ ವಿಶ್ವಕರ್ಮ ಸಮುದಾಯವೂ ಸೇರಿದೆ. ಯಾದಗಿರಿ, ಅರಕಲಗೂಡು ತಾಲೂಕಿನ ಅರೆಮಾದನಹಳ್ಳಿ, ಹೊಸೂರು, ಮುಂಬಯಿ ಇಲ್ಲೆಲ್ಲ ವಿಶ್ವಕರ್ಮ ಮಠಗಳಿವೆ.

೪.೫. ಶ್ರೀಕೃಷ್ಣ ಪಾರಿಜಾತದ ಪಾಂಚಾಳ ಕಲಾವಿದರು ಹಾಗೂ ಸಂಘಟಿಸಿದ ಕಂಪನಿಗಳು :

೪.೫.೧. ಶ್ರೀ ಶ್ಯಾಮರಾವ ಬಸಪ್ಪ ಬಡಿಗೇರ :

ಶ್ರೀ ಶ್ಯಾಮರಾವ ಬಸಪ್ಪ ಬಡಿಗೇರವರು ಪಾರಿಜಾತದ ಹಿರಿಯ ಕಲಾವಿದರು. ಬಡಿಗತನದ ಮನೆತನದಲ್ಲಿ ಜನಿಸಿದ ಇವರು, ಇಂದಿನ ಮುದೋಳ ತಾಲೂಕಿನ ನಾವಲಗಿಯವರು. ತಮ್ಮ ೨೦ನೇ ವಯಸ್ಸಿಗೆ ಪಾರಿಜಾತ ಕ್ಷೇತ್ರ ಪ್ರವೇಶಿಸಿದರು. ಸುಮಾರು ೬೦ ವರ್ಷಗಳವರೆಗೆ ಪಾರಿಜಾತ ಕಂಪನಿಯಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸಿದವರು. ರಂಗಭೂಮಿಯ ಪ್ರಥಮ ನಟಿಯೆಂದು ಪ್ರಸಿದ್ಧಳಾದ ಕೌಜಲಗಿ ನಿಂಗಮ್ಮನ ಆಟದ ಕಂಪನಿಯಲ್ಲಿ ಶ್ರೇಷ್ಠ ಕಲಾವಿದರಾಗಿ ಆ ಕಲಾವಿದೆಯ ಒಡನಾಟದಲ್ಲಿ ಕಲಾಸೇವೆಗೈದು ಅಪಾರವಾದ ಅನುಭವ ಪಡೆದವರು. ಆ ಕಲಾವಿದೆಯ ಜೊತೆಗೆ ಕಳೆದ ಕಲಾಬದುಕಿನ ಕ್ಷಣಗಳನ್ನು ನಮ್ಮೊಂದಿಗೆ ಭಾವುಕರಾಗಿ ಹಂಚಿಕೊಂಡಿದ್ದಾರೆ. ಅವರೊಡನೆ ನಡೆಸಿದ ಸಂದರ್ಶನದ ಆಯ್ದ ಭಾಗಗಳಿವು.

ಸಂದರ್ಶಕ – ನಿಮ್ಮ ಹೆಸರು

ಶ್ಯಾಮರಾವ – ಶ್ಯಾಮರಾವ ಬಸಪ್ಪ ಬಡಿಗೇರ

ಸಂದರ್ಶಕ – ವಯಸ್ಸು?

ಶ್ಯಾಮರಾವ – ೯೦ ವರ್ಷ

ಸಂದರ್ಶಕ – ಎಷ್ಟನೇ ವಯಸ್ಸಿನಲ್ಲಿ ಆಟ ಪ್ರಾರಂಭಿಸಿದ್ದೀರಿ?

ಶ್ಯಾಮರಾವ – ೩೦ನೇ ವಯಸ್ಸಿಗೆ ಪ್ರಾರಂಭ ಮಾಡೇನಿ, ೬೦ ವರ್ಷ ಮಾಡೇನಿ.

ಸಂದರ್ಶಕ – ಪ್ರಥಮ ಆಟ ಆಡಿದ್ದು ಯಾವಾಗ?

ಶ್ಯಾಮರಾವ – ನಾವಲಗಿ ಕಂಪನಿಯೊಳಗೆ, ಹನಮಂತ ದೇವರ ಗುಡಿಮುಂದೆ.

ಸಂದರ್ಶಕ – ನಿಮ್ಮ ಊರು?

ಶ್ಯಾಮರಾವ – ಖುದ್ದು ನಾವಲಗಿ

ಸಂದರ್ಶಕ – ನಾವಲಗಿ ಕಂಪನಿ ಎಷ್ಟು ವರ್ಷವಿತ್ತು?

ಶ್ಯಾಮರಾವ – ೩–೪ ವರ್ಷ ನಾವಲಗಿ ಕಂಪನಿ ಇತ್ತು.

ಸಂದರ್ಶಕ – ಬೇರೆ ಯಾವ ಕಂಪನಿಯಲ್ಲಿ ಮಾಡಿದ್ದೀರಿ?

ಶ್ಯಾಮರಾವ – ಸೌದಿ ಕಂಪನಿ, ನಾವಲಗಿ ಕಂಪನಿ, ಕಲ್ಲಪ್ಪ ಪಟ್ಟಣಶೆಟ್ಟಿ ಕಂಪನಿ.

ಸಂದರ್ಶಕ – ಒಟ್ಟು ಎಷ್ಟು ವರ್ಷಗಳವರೆಗೆ ಆಡಿದ್ದೀರಿ?

ಶ್ಯಾಮರಾವ – ೩೫ ವರ್ಷಗಳು

ಸಂದರ್ಶಕ – ನೀವು ಕೌಜಲಗಿ ನಿಂಗವ್ವನ ನೋಡಿದ್ದೀರಾ?

ಶ್ಯಾಮರಾವ – ನೋಡಿನಿ

ಸಂದರ್ಶಕ – ನೀವು ಆಡುವಾಗ ನಿಂಗವ್ವನ ಕಂಪನಿ ಇತ್ತಾ?

ಶ್ಯಾಮರಾವ – ಇತ್ತು ಅವರ ಕಂಪನಿಯಲ್ಲಿ ಸೇವಾ ಮಾಡೇನಿ

ಸಂದರ್ಶಕ – ಯಾವ ಪಾತ್ರ ಮಾಡುತ್ತಿದ್ದೀರಿ?

ಶ್ಯಾಮರಾವ – ಕೃಷ್ಣನ ಪಾತ್ರ

ಸಂದರ್ಶಕ – ನಿಂಗವ್ವ ಯಾವ ಪಾತ್ರ ಮಾಡುತ್ತಿದ್ದಳು?

ಶ್ಯಾಮರಾವ – ದೊರೆಸಾನಿ ಪಾತ್ರ ಮಾಡ್ತಿದ್ಲು

ಸಂದರ್ಶಕ – ಆವಾಗ ನಿಮಗೆಷ್ಟು ವಯಸ್ಸು?

ಶ್ಯಾಮರಾವ – ೬೦ ದಾಟಿತ್ತು

ಸಂದರ್ಶಕ – ನಿಂಗವ್ವಳಿಗೆ ವಯಸ್ಸೆಷ್ಟಿತ್ತು?

ಶ್ಯಾಮರಾವ – ೬೦–೮೦ ಇರ್ಬೇಕು

ಸಂದರ್ಶಕ – ಯಾವ ಪಾತ್ರ ಮಾಡೀರಿ?

ಶ್ಯಾಮರಾವ – ಕೃಷ್ಣನ ಪಾತ್ರ

ಸಂದರ್ಶಕ – ಸಣದಿ ರಾಮಣ್ಣ ಗೋಂದಳಿ ಇದ್ದರೇನು?

ಶ್ಯಾಮರಾವ – ಅವರು ಹೋದ ಬಳಿಕ ನಾನು ಮಾಡಲು ಪ್ರಾರಂಭಿಸಿದ್ದು, ನಾನು ಅಂದಾಜು ೩೦–೩೫ ವರ್ಷಗಳವರೆಗೆ ಮಾಡೇನೆ.

ಕೌಜಲಗಿ ನಿಂಗವ್ವನ ಕಂಪನಿಯ ಪಾತ್ರ ವಿವರ

ನಿಂಗವ್ವ – ದೊರೆಸಾನಿ, ಸತ್ಯಭಾಮೆ

ರುಕ್ಮಿಣಿ – ಕಾಖಂಡಕಿ ಚಂದ್ರಬಾಯಿ

ಅಪ್ಪಣ್ಣ ಕೆಸರಗೊಪ್ಪ – ದೂತಿ (ಭಾಗವತ)

ಭೀಮೇಶಿ ಅಲಗೂರ– ಗೊಲ್ಲತಿ

ನಾರದ, ಬಾಗಲ ಗೋಪಾಲ ಪಾತ್ರಗಳು ಇರಲಿಲ್ಲ.

೪.೫.೨. ಶ್ರೀ ನಾಗೇಂದ್ರ ಮಾನಪ್ಪ ಕಂಬಾರ :

ತಮ್ಮ ೨೮ನೇ ವಯಸ್ಸಿನಲ್ಲಿ ಜನಪದ ರಂಗಭೂಮಿಯನ್ನು ಪ್ರವೇಶ ಮಾಡಿದ ನಾಗೇಂದ್ರ ಮಾನಪ್ಪ ಕಂಬಾರವರು ಕೌಜಲಗಿಯವರು. ಕಳೆದ ೩೨ ವರ್ಷಗಳಿಂದ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಕೃಷ್ಣ ಪಾರಿಜಾತದಲ್ಲಿ ಕೃಷ್ಣ ಮತ್ತು ಕೊರವಂಜಿ ಪಾತ್ರ ಮಾಡುತ್ತ ಜನ

ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಪಾರಿಜಾತದ ಪ್ರಸಿದ್ಧ ಕಂಪನಿಗಳಾದ ಶಿವಗುರೆಪ್ಪನವರ ಕಂಪನಿ, ಖಾನಪುರ ಕಂಪನಿ, ಕೌಜಲಗಿ ನಿಂಗಮ್ಮನ ಕಂಪನಿ, ಚಿಮ್ಮಡದ ಕಂಪನಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ೨೦೦೩ರಲ್ಲಿ ಇವರಿಗೆ 'ಜ್ಞಾನವಿಜ್ಞಾನ' ಪ್ರಶಸ್ತಿ ಲಭಿಸಿದೆ. ಶ್ರೇಷ್ಠ ಅಭಿನಯಕ್ಕೆ ಕಲಾಸೇವೆ ಸನ್ಮಾನಗಳು ಲಭಿಸಿವೆ, ಅವರೊಡನೆ ನಡೆಸಿದ ಸಂದರ್ಶನದ ಆಯ್ದ ಭಾಗಗಳಿವು.

ಸಂ – ಹೆಸರು

ನಾ – ನಾಗೇಂದ್ರ ಮಾನಪ್ಪ ಕಂಬಾರ

ಸಂ – ಊರು

ನಾ – ಕೌಜಲಗಿ

ಸಂ – ವಯಸ್ಸು

ನಾ – ೬೮ ವರ್ಷ, ೧೯೪೫ ರಲ್ಲಿ ಜನನ

ಸಂ – ಕಲಾಸೇವೆ

ನಾ – ೩೨ ವರ್ಷ

ಸಂ – ನಿಮ್ಮ ಕಂಪನಿಯ ಹೆಸರು

ನಾ – ವಿಶ್ವಕರ್ಮ ಶ್ರೀ ಕೃಷ್ಣ ಪಾರಿಜಾತ ಬಯಲಾಟ ಮೇಳ

ಸಂ – ಕೌಜಲಗಿಯಲ್ಲಿ ಎಷ್ಟನೇ ವಯಸ್ಸಿಗೆ ಆಟ ಪ್ರಾರಂಭಿಸಿದ್ದೀರಿ

ನಾ – ೧೯೭೦ ರಲ್ಲಿ, ಅಂದೇ ನನಗೆ ೨೮ ವರ್ಷಾಗಿತ್ತು, ಆಗ ಆಟಾ ಆಡಾಕ ಚಾಲೂ ಮಾಡೇನಿ.

ಸಂ – ಯಾವ ಪಾತ್ರ ಮಾಡುತ್ತೀರಿ

ನಾ – ಪ್ರಾರಂಭಿಕ ಕೃಷ್ಣ ಕೊರವಂಜಿ ಪಾತ್ರಗಳನ್ನು ಮಾಡ್ತಿದ್ದೆ.

ಸಂ – ಈಗ

ನಾ – ಕೃಷ್ಣ ಪಾತ್ರ

ಸಂ – ಕಲಾಸೇವೆಯಿಂದ ನಿಮಗಾದ ಅನುಭವ

ನಾ – ಬಡತನ ಪರಿಸ್ಥಿತಿ ಇತ್ತು, ಬಡಿಗತನ, ಕಮ್ಮಾರಿಕೆ ಮಾಡ್ತಿದ್ವಿ, ಆರ್ಥಿಕ ಪರಿಸ್ಥಿತಿ ಸುಧಾರಣೆ ಆಯ್ತು, ಸಂಘ ಸಂಸ್ಥೆಗಳಿಂದ ಸನ್ಮಾನಗಳು ಆದವು. ಜಾನಪದ ಯಕ್ಷಗಾನ ಅಕಾಡೆಮಿ, ಪ್ರಶಸ್ತಿ ಬಂತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರು ೨೦೦೩ರಲ್ಲಿ ಜ್ಞಾನವಿಜ್ಞಾನ ಪ್ರಶಸ್ತಿ ಕೊಟ್ಟು ಸನ್ಮಾನಿಸಿದ್ದಾರೆ.

ಸಂ – ಬಿರುದುಗಳು

ನಾ – ಇಲ್ಲ ಸನ್ಮಾನ ಮಾಡಿದ್ದಾರೆ, ಪ್ರಮಾಣ ಪತ್ರಗಳನ್ನು ಕೊಟ್ಟಿದ್ದಾರೆ, ಕಾರವಾರಕ್ಕೆ ಕರೆಸಿ ಸನ್ಮಾನ ಮಾಡಿ ಪ್ರಶಸ್ತಿ ಕೊಟ್ರು.

ಸಂ – ನೀವು ಪ್ರಥಮ ಪಾರಿಜಾತ ನೋಡಿದ್ದು ಯಾವಾಗ?

ನಾ – ೧೨ ನೇ ವರ್ಷದಾಗ ಆಟಾ ನೋಡೇನೆ. ಪ್ರತಿವರ್ಷ ನಮ್ಮೂರಿಗೆ ಓಕುಳಿಯೊಳಗೆ ಪಾರಿಜಾತ ನೋಡೇನಿ.

ನಿಂಗಮ್ಮನ ಕಂಪನಿಯ ಪಾತ್ರ ವಿವರ:

ಕೃಷ್ಣ – ಬರಗಿ ರಾಚಯ್ಯನವರು

ಕೊರವಂಜಿ – ಶಿವಗುರಿ ನರಸಾಪೂರ

ಭಾಗವತ – ಹಿಡಕಲ್ ಭೀಮಪ್ಪ

ಮರಿಬಾಗವತ – ಬಿಸನಾಳ ಅಪ್ಪಣ್ಣಪ್ಪ

ರುಕ್ಮಿಣಿ – ಬಿಸನಾಳ ಅಪ್ಪಣ್ಣಪ್ಪ

ದೊರೆಸಾನಿ – ಚಂದ್ರಪ್ಪ

ಹಾರ್ಮೋನಿಯಂ – ಮಹಾದೇವಪ್ಪ

ತಬಲಾ – ಅಮ್ಮಲಜೇರಿ ಶಂಕರಯ್ಯ ಸ್ವಾಮಿಗಳು

ಮಾಲಿಕಳು – ಚಂದ್ರವ್ವ

ನಾವು ಆಟವಾಡುವಾಗ ಶಿವಗೂರಿ ಗೊಲ್ಲತಿ ಪಾತ್ರ ಮಾಡಿದ್ರು, ನಂತರ ಕೊರವಂಜಿ ಮಾಡಾಕತ್ರು.

ಸಂ – ನಿಂಗಮ್ಮನ ಕಂಪನಿ ಆಟ ಹೇಗಿತ್ತು?

ನಾ – ಆಟ ಭರ್ಜರಿಯಾಗಿತ್ತು, ಒಬ್ಬರಿಗೊಬ್ರು ಶಾಣ್ಯಾರು ಇದ್ರು, ಹೊಂದಿಕೆ ಇತ್ತು, ಪಾತ್ರ ಮಾಡಾಕ ಶಾಣ್ಯಾರ ಇದ್ರು, ಕೊರವಂಜಿ ಪಾತ್ರಕ್ಕೆ ಶಿವಗುರಿ ಬಾಳ ಪ್ರಸಿದ್ಧ ಕರ್ನಾಟಕದ ಕೋಗಿಲೆ ಅಂತ ಅನಿಸಿಕೊಂಡ್ರು, ಆದರೂ ೧೯೮೬ರಿಂದ ೯೦ ರವರೆಗೆ ನರಸಾಪೂರ ಕಂಪನಿಯೊಳಗ ಕೃಷ್ಣನ ಪಾತ್ರ ೪ ವರ್ಷ ಮಾಡೇನ್ರಿ. ಕೌಜಲಗಿಯೊಳಗ ೧೮ ವರ್ಷ ಮಾಡೇನಿ. ನಂತರ ಸೂರ (ಧ್ವನಿ) ಬಿದ್ದು ಕಂಪನಿ ಬಿಟ್ಟು ಹೋದ್ರು, ಒಂದು ವರ್ಷ ಸ್ತಬ್ಧ ಉಳಿದಿದೆ. ನಂತರ ನಾನು ಶಿವಗುರೆಪ್ಪ ಕಂಪನಿಯಲ್ಲಿ ೬ ವರ್ಷ ಮಾಡಿದೆ. ಅಜ್ಜಾರ ತೀರ್ಕೊಂಡ್ರು, ಹಾರ್ಮೋನಿಯಂ ಬಾರಸೋ ಹುಡುಗ ಮೊಮ್ಮಗ ತೀರ್ಕೊಂಡ ಕಂಪನಿ ನಿಂತಿತು.

ಸಂ – ನೀವು ಮತ್ತೆ ಯಾವ ಕಂಪನಿಲಿ ಕೆಲಸ ಮಾಡಿರಿ?

ನಾ – ಖಾನಪೂರ ಕಂಪನಿ– ಅಪ್ಪಾಸಾಹೇಬ ತಿಗಡಿ ಕೃಷ್ಣ ಪಾರಿಜಾತ ಕಂಪನಿ–ಹಿರೇಬಾಗೇವಾಡಿ. ೪ ವರ್ಷ ಸೂರು–ಕಂಠಿ ಕೌಜಲಗಿ ನಿಂಗಮ್ಮನ ಕಂಪನಿ – ೧ ವರ್ಷ ನಿಂಗಪ್ಪ ತೀರ್ಕೊಂಡ ನಂತ್ರ, ಮ್ಯಾಳ ಕೂಡಿಸಿಕೊಂಡ ಮಾಡೇನಿ ಚಿಮ್ಮಡ ಕೃಷ್ಣ ಪಾರಿಜಾತ ಕಂಪನಿ – ೩ ವರ್ಷ ಮಾರುದ್ರಪ್ಪ ಚನ್ನಮಲ್ಲಪ್ಪ ಬಿಜಾಪೂರ ಈಗಲೂ ಇದೆ ಕಂಪನಿಯಿಂದ ಮಾಡುತ್ತಿದ್ದೇನೆ.

ಸಂ – ಪಾರಿಜಾತವನ್ನೇ ಆಯ್ಕೆ ಮಾಡಿಕೊಳ್ಳಲು ಕಾರಣ?

ನಾ – ನನಗೆ ಕೃಷ್ಣನ ಪಾತ್ರ ಮನಸ್ಸಿಗೆ ಹಿಡಿಸಿತು. ಆಧ್ಯಾತ್ಮ ಇರೂದರಿಂದ ಇದನ್ನು ಓದಬೇಕು, ಕಲಿಯಬೇಕು, ಮಾಡಬೇಕು ಅಂತ ಮನಸ್ಸಿಗೆ ಅನಿಸ್ತು. ಟಕ್ಕಳಕಿಯರ ಆಟಾನು ನೋಡಿದ್ದೆ, ಅದರಲ್ಲಿನ ಭಾಷೆ ಆಧ್ಯಾತ್ಮಿಕತೆ ಮನಸ್ಸಿಗೆ ಖುಷಿ ಕೊಟ್ತು. ಆದರೆ ಶ್ರೀಕೃಷ್ಣಪಾರಿಜಾತ ಕಲಾವಿದರನ್ನು ಕೂಡಿಸಿಕೊಂಡು ಕುಲಗೋಡದಿಂದ ಆಟ ಆಡಿಸಿ ನಂತರ ಚಿಟಗುಪ್ಪಿ ರಾಮಣ್ಣ ಮಾಸ್ತರ ಕೂಡಿಸಿಕೊಂಡು ಬಂದ್ವಿ, ನಾನು ಕೃಷ್ಣ ಕೊರವಂಜಿ ಮಾಡ್ಬೇಕು ಅಂತಾ ಹೇಳಿದ್ರು, ನಮ್ಮ ಆಟ ಚಾಲೂ ಆತು.

ಸಂ – ಪಾರಿಜಾತ ಮೇಲೆ ಟಿ.ವ್ಹಿ., ಸಿನಿಮಾ ಪ್ರಭಾವ ಆಗಿದೆಯೇ?

ನಾ – ಹೌದು, ಈಗ ಆ ಪ್ರಭಾವದಿಂದ ಪಾರಿಜಾತ ಕಡಿಮೆಯಾಗಿದೆ. ಪ್ರಾರಂಭಕ್ಕೆ ೧ ವರ್ಷಕ್ಕೆ ೭೫ ಆಟಾ ಮಾಡ್ತಿದ್ವಿ, ಈಗ ೧ ವರ್ಷಕ್ಕ ೩೫ ಮಾಡ್ತಿವಿ.

ಸಂ – ಒಂದು ಪ್ರಯೋಗಕ್ಕೆ ಎಷ್ಟು ಸಂಭಾವನೆ?

ನಾ – ೪೦೦೦–೫೦೦೦ ರೂಪಾಯಿಗಳು ಒಬ್ಬರಿಗೆ ೨೦೦ ರೂ. ಊಟ– ೨೦, ವಾದ್ಯ ರಿಪೇರಿಗಳಿಗೆ ಹಣ ಖರ್ಚಾಗ್ತಿತ್ತು. ಈ ಖರ್ಚ ತಗದು ಉಳಿದಿದ್ದು ಮಾಲೀಕರಿಗೆ.

ಸಂ – ನಿಮ್ಮ ಗುರುಗಳು?

ನಾ – ಮಾನಪ್ಪ ಕಂಬಾರ ಮಣ್ಣಿಕೇರಿ. ೮ ತಿಂಗಳ ಶಿಕ್ಷಣ ಪಡೆದೆ. ಕುಲಗೋಡದ ರಾಮಣ್ಣ ಚಿಟಗುಪ್ಪಿ ಗಂಗಾಧರ ಬಡಿಗೇರವರು ನಮ್ಮ ಮ್ಯಾಳಕ್ಕೆಲ್ಲ ಶಿಕ್ಷಣ ಕೊಟ್ರು, ಹವಭಾವ ಸನ್ನಿವೇಶ ಎಲ್ಲಾ ಕಲಿಸಿದ್ರು.

ಸಂ – ನಿಮಗೆ ಇಷ್ಟವಾದ ಪಾತ್ರ?

ನಾ – ಕೃಷ್ಣ ನಂತರ ಕೊರವಂಜಿ

ಸಂ – ಸಿನಿಮಾಕ್ಕೂ ಪಾರಿಜಾತಕ್ಕೂ ವ್ಯತ್ಯಾಸವಿದೆಯೇ?

ನಾ – ಪಾರಿಜಾತ ಅಭಿನಯ, ಹಾವ–ಭಾವ ಹಾಡುಗಾರಿಕೆ, ಕಂಠಸಿರಿ ಮನಕ್ಕೆ ಆನಂದ ನೀಡುತ್ತದೆ, ಸಿನಿಮಾ ಇಷ್ಟು ಪ್ರಭಾವ ಬೀರುವುದಿಲ್ಲ.

ಸಂ – ಒಟ್ಟು ಪಾರಿಜಾತದ ಕುರಿತು ನಿಮ್ಮ ಅಭಿಪ್ರಾಯ?

ನಾ – ಎಲ್ಲಾ ಕಲೆಗಳಲ್ಲಿ ಪಾರಿಜಾತ ಶ್ರೇಷ್ಠ ಆಧ್ಯಾತ್ಮಕತೆ ಇದೆ. ಒಂದನೇ ಪಟ್ಟಿಯೊಳಗ ಹಾಡಬೇಕು. ಶಿರಗುರೆಪ್ಪ ತಮ್ಮ ಕಂಠದಿಂದಲೇ ಬೆಳೆದು ಬಂದ್ರು, ಮಾನಪ್ಪ ಕಂಬಾರ ಮಣ್ಣಿಕೇರಿ, ಗಂಗಾಧರ ಬಡಿಗೇರ ಇವರ ಮಾರ್ಗದರ್ಶನದಲ್ಲಿ ಕಂಪನಿ ಮುಂದುವರಿಯಿತು.

೪.೫.೩. ಶ್ರೀ ಬಸಪ್ಪ ಬಡಿಗೇರ :

ಯಂಡಿಗೇರಿ ಶ್ರೀ ಕೃಷ್ಣ ಪಾರಿಜಾತ ಕಂಪನಿ :

ವಾತಾಪಿಯಿಂದ ಪಶ್ಚಿಮಾಭಿಮುಖವಾಗಿ ೫೦ ಕಿ.ಮಿ. ಚಲಿಸಿದರೆ ತಾಲೂಕಿನ ಕೊನೆಯ ಹಳ್ಳಿಯೇ ಯಂಡಿಗೇರಿ. ಯಂಡಿಗೇರಿಯನ್ನುವುದು ಊರಲ್ಲಾ. ಅದು ಇಂಡೇಶ್ವರ ಅನ್ನುವುದು ಹಿರಿಯರ ಯುಕ್ತಿಯಂತೆ ಯಂಡಿಗೇರಿ ಗ್ರಾಮ ಪುಟ್ಟ ಗ್ರಾಮವಾದರೂ ಧಾರ್ಮಿಕ ಹಾಗೂ ಅಧ್ಯಾತ್ಮಿಕ ಒಲವುಳ್ಳ ಊರು. ಕಲಾದಗಿಯ ಪಂಚಗ್ರಹ ಸಂಸ್ಥಾನಮಠದ ಮೂಲ ಪುರುಷರಾದ ಶ್ರೀ ಗುರಲಿಂಗೇಶ್ವರ ವಂಶಸ್ಥರಾದ ಶ್ರೀ ವಿರುಪಾಕ್ಷಯ್ಯ ಹಿರೇಮಠರು ಯಂಡಿಗೇರಿಯಲ್ಲಿ ಪಾರಿಜಾತ ಹುಟ್ಟಲು ಕಾರಣ. ಇವರ ಗುರುಗಳು ಕಿರಸೂರಿನವರು ಎಂದು ಹೇಳುತ್ತಾರೆ ಇಲ್ಲಿಯ ಜನ

ಭಾಗವತ ವಿರುಪಾಕ್ಷಯ್ಯ ಹಿರೇಮಠ

ಕೃಷ್ಣ	–	ಗಣಪತಿ ಬಡಿಗೇರ
ಗೋಪಾಲ	–	ರಾಮನಗೌಡ ಪಾಟೀಲ
ರುಕ್ಮೀಣಿ	–	ಬಸನಗೌಡ ಪಾಟೀಲ
ಗೊಲ್ಲತಿ	–	ಯಮನಪ್ಪ ಕರಿಯಪ್ಪನವರ
ಸತ್ಯಭಾಮಾ	–	ಲೋಕಪ್ಪ ಗಾಣಿಗೇರ
ಕೊರವಂಜಿ ನಾರದ	–	ಬಸಪ್ಪ ಬಡಿಗೇರ
ಹಾರ್ಮೋನೊಯಂ	–	ಕಲ್ಲಪ್ಪ ಹೂಗಾರ
ತಬಲಾ	–	ಡೊಂಕಪ್ಪ ಹೂಗಾರ
ಹಿಮ್ಮೇಳ	–	ಬಸಯ್ಯ ಮಠಪತಿ

ಈ ಎಲ್ಲಾ ಕಲಾವಿದರು ಕೂಡಿಕೊಂಡು ಪ್ರಥಮ ಬಾರಿಗೆ ಯಂಡಿಗೇರಿಯಲ್ಲಿ ಶ್ರೀ ಕೃಷ್ಣ ಪಾರಿಜಾತ: ಪ್ರಾತಿನಿಧಿಕ ಕಂಪನಿಗಳು, ಪಾರಿಜಾತ ರಂಗಪ್ರಯೊಗ ಪ್ರಾರಂಭಿಸಿದರು. ಯಂಡಿಗೇರಿ

ಜನರು ಬೀಳಗಿ ತಾಲೂಕು ಕಿನಬಾಡಗಿ ಬೂದಿಹಾಳ, ಶ್ರೀ ಗುರು ಫಕೀರೇಶ್ವರ ಜಾತ್ರೆಗೆ ಹೋಗುವುದು ವಾಡಿಕೆ. ಆರಿತಿ ಪಾರಿಜಾತ ಕಂಪನಿ ಸಮೇತ ಜಾತ್ರೆಗೆ ಸೇವೆ ಮಾಡಲು ತಂಡದವರು ಹೋದರು. ಆಗಿನ ಕಾಲದಲ್ಲಿ ಮೈಕ್ ಹಾಗೂ ವಿದ್ಯುತ್ ವ್ಯವಸ್ಥೆ ಇರಲಿಲ್ಲ. ರಾತ್ರಿ ಒಂದರ ಸಮಯ ಶ್ರೀ ಬಸಪ್ಪ ಬಡಿಗೇರ ಇವರು ನಾರದನ ವೇಷಹಾಕಿ ಬಂದು "ನಾರಾಯಣ ಹರಿ ಗೋವಿಂದ" ಎಂಬ ಪದ ಹಾಡಿದರೆ ತಂಪತ್ತಿನ ಸಮಯ ಜಮಖಂಡಿ ತಾಲೂಕಿನ ಬಬಲಾದಿ ಬೀದರಿನಲ್ಲಿ ನಾಟಕ ಮಾಡಿದರೆ, ಬೀದರಿನ ಗ್ರಾಮದವರು ಬಂದು ಒಂದು ದಿನ ಪ್ರದರ್ಶನ ನೀಡಲು ಕೇಳಿದಾಗ ಮರುದಿವಸ ಬೀದರಿಗೆ ಹೋಗಿ ಅಲ್ಲಿ ಆಟಾಮಾಡಿ ಮರಳಿ ಯಂಡಿಗೇರಿಗೆ ಬಂದರಂತೆ. ಏಳು ಫುಟ್ ಎತ್ತರದ ಬಸಪ್ಪ ಅಜ್ಜ ಒದರಿದರೆ ಪೆಟಗಿನ ಸೂರು ಸಾಲತ್ತಿದ್ದಿಲ್ಲಾ ಅಂತ ಇಲ್ಲಿಯ ಹಿರ‍್ಯಾರು ಹೇಳತಾರ. ಬಸಪ್ಪ ಬಡಿಗೇರ ಇವರ ದೃಷ್ಟಿಯಲ್ಲಿ ಪಾರಿಜಾತ ಕಲಿಬೇಕಾದರೆ ಕನಿಷ್ಟ ೧(ಒಂದು) ವರ್ಷವಾದರೂ ತಾಲೀಮ ಮಾಡಿ ಅಟ್ಟ ಏರಬೇಕಂತ. ಹಾಗಾದರೆ ಪಾರಿಜಾತ ಅಂತ ಇಲ್ಲದಿದ್ರೆ ಪಾರಿಜಾತ ಅಂತ ಅಂತಿದ್ರಂತೆ ಬಸಪ್ಪನವರು.

ಕನಿಷ್ಟ ೧೦ ವರ್ಷಗಳವರೆಗೆ ಪಾರಿಜಾತ ಕ್ಷೇತ್ರಕ್ಕೆ ಈ ತಂಡ ಸೇವೆ ಸಲ್ಲಿಸಿತು. ಹೊಸ, ರಾಗ, ತಾಳಗಳನ್ನು ದೃಢೀಕರಿಸಿ ಒಳ್ಳೆಯ ರೀತಿಯಲ್ಲಿ ಅಭಿನಯಿಸಿದರು. ಕೃಷ್ಣನ ಪಾತ್ರಧಾರಿಯ ಕಲಾವಿದ ಬಸಪ್ಪ ಬಡಿಗೇರ ಮರಣ ಹೊಂದಿದ ಬಳಿಕ ತಂಡ ಸುಮಾರು ೧೯೨೪ರಲ್ಲಿ ನಿಂತು ಹೋಯಿತಂತೆ.

೪.೫.೪. ಶ್ರೀ ಭೀಮೇಸಿ ಕಂಬಾರ ಮತ್ತು ಶ್ರೀ ಈರಣ್ಣ ಬಡಿಗೇರ (ಉದಪುಡಿ) :

ದಾದನಟ್ಟಿ ಪಾರಿಜಾತ ಕಂಪನಿ ಎಂಬ ಹೆಸರಿನಿಂದ ಉತ್ತರ ಕರ್ನಾಟಕದ ಜನಪದ ಕಲೆಯು ಸದಾ ಹಚ್ಚ ಹಸಿರಾಗಿ ದಿನಾಲೂ ನೂತನದಂತೆ ನೋಡುಗರ ಕೇಳುಗರ ಮನಗೆದ್ದು ದಿನದಿನಕ್ಕೂ ನವ್ಯತೆಯ ಶಕ್ತಿಯೊಂದಿಗೆ ಬೆಳೆಯುತ್ತಾ ಸಾಗಿದ್ದು, ಕೆಲವರ ಅಭಿಪ್ರಾಯದಂತೆ ಪಾರಿಜಾತದಲ್ಲಿ ಪಾತ್ರ ಮಾಡುವುದೆಂದರೆ ದೇವಲೋಕಕ್ಕೆ ಹೋಗಿ ಪಾರಿಜಾತ ಪುಷ್ಪ ತಂದಂತ ಪ್ರಯಾಸ. ಅಂತಹ ಕಾರ್ಯವು ನಿಜವಾಗಿಯು ಗ್ರಾಮೀಣ ಪರಿಸರದಲ್ಲಿ ಉಳಿದು ಬೆಳೆದು ಸಾಗಿದೆ.

ಮುಧೋಳ ತಾಲೂಕಿನ ದಾದನಟ್ಟಿಯಲ್ಲಿ ಸಿದ್ದಪ್ಪ ಕೃಷ್ಣಗೌಡರು ತಂಡಕಟ್ಟಿ ಅದರಲ್ಲಿ ಬಡತನದಲ್ಲಿಯೇ ಬೆಳೆದ ಶ್ರೀಮತಿ ಕಾಶೀಬಾಯಿ ದಾದನಟ್ಟಿಯವರು ತಮ್ಮ ೮ನೆ ವಯಸ್ಸಿನಲ್ಲಿ ಸಂಗೀತ ಸುಮಧುರ ಕಂಠದಿಂದ ಗಣಪತಿ ಪೂಜಾ, ಗೌಳಗಿತ್ತಿ, ಬಾಲಕೃಷ್ಣನಾಗಿ ನಟಿಸುತ್ತಾ ಬಂದಿದ್ದಾರೆ

ಕೃಷ್ಣ.	–	ಕೊರವಂಜಿ ಪಾತ್ರದಲ್ಲಿ–ಸಿದ್ದಪ್ಪ ಕೃಷ್ಣಗೌಡರ
ಭಾಗವತರಾಗಿ	–	ಮಲ್ಲಿಕಾರ್ಜುನ ಮುದಕವಿ

ಹಾರ್ಮೋನಿಯಂ – ಭೀಮೇಸಿ ಕಂಬಾರ

ಸತ್ಯಭಾಮಾ – ಗೌಳಗಿತ್ತಿ–ಸಿದ್ದಣ್ಣ ಕೃಷ್ಣಗೌಡರ

ತಬಲಾ–ಹನಮಂತ ಪೂಜಾರಿಯ ತಂಡವು. ಹೀಗೆ ಮೂರು ವರ್ಷ ಕಲಾಸೇವೆಗೈದು ಮುಂದುವರೆದುಕೊಂಡಿತು. ಮುಂದೆ ಕಾಶೀಬಾಯಿಯವರು ಶ್ರೀ ಸಂಗಪ್ಪ ಯಾದವಾಡ ಅವರಿಂದ ರಾಗಗಳ ಕಲ್ಪನೆ ಪಡೆದು ಎರಡನೆಯ ಪಾರಿಜಾತ ತಂಡದಲ್ಲಿ ಶ್ರೀ ದ್ಯಾವಪ್ಪ ಯಾದವಾಡ, ಕೃಷ್ಣನ ಪಾತ್ರದಲ್ಲಿ ದೊರೆಸ್ಯಾನಿ, ಸತ್ಯಭಾಮಾ, ಗೌಳಿಗಿತ್ತಿ ಪಾತ್ರಗಳಲ್ಲಿ ಮಲ್ಲಮ್ಮಾ ಶಿರೋಳದವರು.

ಹಾರ್ಮೋನಿಯಂ – ಕಮಲಸಾಬ ದಾದನಟ್ಟಿ

ತಬಲಾ – ಕೃಷ್ಣಪ್ಪ ತುಳಸಿಗೇರಿ

ರುಕ್ಮಿಣಿ – ಕಾಶೀಬಾಯಿ ದಾದನಟ್ಟಿ

ಆಗ ಎರಡು ಮೂರು ಪಾತ್ರಗಳ ಕೊರತೆಯಿಂದ ತಂಡವು ಮುರಿದು ಹೋಯಿತು. ನಂತರ ಸೊನ್ನ ಕಂಪನಿಯಲ್ಲಿ ಒಂದು ವರ್ಷ ಸೇವೆ ಸಲ್ಲಿಸಿ ದಾದನಟ್ಟಿಗೆ ಬಂದು ಕಾಶೀಬಾಯಿ ದಾದನಟ್ಟಿ ಅವರೇ ಸ್ವಂತ ಸಂಘ ಕಟ್ಟಿದರು. ಈ ಕಂಪನಿಯಲ್ಲಿ;

ಕೃಷ್ಣ – ದೇವೆಂದ್ರಪ್ಪ ಯಾದವಾಡ

ಭಾಗವತ – ಭೀಮೇಸಿ ಕಂಬಾರ

ಸತ್ಯಭಾಮಾ – ಕಾಶೀಬಾಯಿ ದಾದನಟ್ಟಿ

ಗೌಳಗಿತ್ತಿ ದೊರೆಸ್ಯಾನಿ

ರುಕ್ಮಿಣಿ – ವಿಮಲವ್ವ ಹಳ್ಳೂರ ತಾ.ಗೋಕಾಕ

ಹಾರ್ಮೋನಿಯಂ – ಕಮಲಸಾಬ ದಾದನಟ್ಟಿ

೨–೩ ವರ್ಷದಲ್ಲಿ ಕಂಪನಿ ಮುರಿದು ಹೋಯಿತು. ನಂತರ ಲೋಕಾಪುರ ದೇಶಪಾಂಡೆಯವರು ಕಾಶೀಬಾಯಿಯವರಿಗೆ ಮಾರ್ಗದರ್ಶನ ನೀಡಿದರು. ಕೆಲವು ದಿನಗಳಲ್ಲಿ ಆಟದ ಮೇಳ ಮುರಿದು, ಇವರು ಒಬ್ಬರೇ ಆದರು. ಆಗ ಕಾಶೀಬಾಯಿ ದಾದನಟ್ಟಿಯವರೆ ಶ್ರೀಮಂಜುನಾಥ ಸಂಘ ದಾದನಟ್ಟಿ ಎಂದು ೧೯೭೫ರಲ್ಲಿ ಸಂಘ ಸ್ಥಾಪನೆಯಾಯಿತು. ಈ ತಂಡದಲ್ಲಿ,

ಕೃಷ್ಣ – ಹನಮಂತ ಭಜಂತ್ರಿ ಮೂಡಲಗಿರಿ

ಭಾಗವತ – ವೆಂಕಣ್ಣ ರೊಳ್ಳಿ ಲೋಕಾಪುರ

ಭಾಗವತ–ಬಸವರಾಜ ಹೊಸಮನಿ ಚಿಕ್ಕಾಲಗುಂಡಿ, ಗೌಳಗಿತ್ತಿ, ಸತ್ಯಭಾಮಾ, ಕೊರವಂಜಿ ಪ್ರಸಂಗ ಬಂದರೆ ಕೃಷ್ಣ, ರುಕ್ಮಿಣಿ ಪಾತ್ರಗಳನ್ನು ಕಾಶೀಬಾಯಿ ದಾದನಟ್ಟಿ ನಿರ್ವಹಿಸುತ್ತಾ ಬಂದಿದ್ದಾರೆ.

ನಾರದ	–	ಸುಂದ್ರವ್ವ ಚಿಮ್ಮಡ
ರುಕ್ಮಿಣಿ	–	ವಿಸಾಲಾಬಾಯಿ ತೇರದಾಳ ಸುಂದ್ರವ್ವ ಚಿಮ್ಮಡ
ಹಾರ್ಮೋನಿಯಂ	–	ಸತ್ಯಪ್ಪ ಚಿಗರಿ
ತಬಲಾ	–	ದೇವೆಂದ್ರಪ್ಪ ಹುಲ್ಯಾಳ
ಹಿಮ್ಮೇಳ	–	ಶಂಕರೆಪ್ಪ ಹೆರಕಲ್, ಶಂಕರೆಪ್ಪ ಕಬಾಡಿ, ಚಿದಾನಂದ ಹಲಗಲಿ ದಾದನಟ್ಟಿ

ಹೀಗೆ ಸುಮಾರು ವರ್ಷಗಳಿಂದ ಸಂಘದಲ್ಲಿ ಪಾತ್ರಧಾರಿಗಳಿಗೆ ವರ್ಷಕ್ಕೆ ೧೦೦ರಿಂದ ೧೫೦ ರೂಪಾಯಿಗಳನ್ನು ಪಾತ್ರ ನಿರ್ವಹಿಸಿದಕ್ಕೆ ಕೊಡುತ್ತಿದ್ದರು. ೧೯೯೬ರಲ್ಲಿ ನಾಟಕ ಅಕಾಡೆಮಿ ಪ್ರಶಸ್ತಿ ೧೯೯೯ರಲ್ಲಿ ರಾಜ್ಯೋತ್ಸವ ಪ್ರಶಸ್ತಿಗಳಿಂದ, ಹಲವಾರು ಸ್ಥಳೀಯ ಸಂಘ-ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳು, ಬಂದಿವೆ. ಅಲ್ಲದೆ ಭಾರತ ಸರಕಾರ ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ಹಾಗೂ ಸಂಘದ ಪರವಾಗಿ ಪಾರಿಜಾತ ರಂಗ ತರಬೇತಿ ಪಾರಿಜಾತೋತ್ಸವ ಸನ್ಮಾನ ಹೀಗೆ ಹಲವಾರು ಕ್ರಿಯಾತ್ಮಕ ಕಾರ್ಯಕ್ರಮ ಮಾಡುತ್ತಾ ಸಾಗಿದ್ದಾರೆ.

ಇದೇ ರೀತಿ ದಾದನಟ್ಟಿಯಲ್ಲಿ ಇನ್ನೊಂದು ತಂಡ ಮಲ್ಲಿಕಾರ್ಜುನ ಮುದಕವಿ ಅವರ ನೇತೃತ್ವದಲ್ಲಿ ನಡೆದಿದೆ,

ಕೃಷ್ಣ	–	ಈರಣ್ಣ ಬಡಿಗೇರ ಸ.ಉದಪುಡಿ
ಭಾಗವತ	–	ಮಲ್ಲಿಕಾರ್ಜುನ ಮುದಕವಿ ಭೀಮೇಸಿ ಕಂಬಾರ
ಸತ್ಯಭಾಮಾ, ಗೌಳಗಿತ್ತಿ	–	ಶಾಂತಾ ದಾದನಟ್ಟಿ, ಕೊರವಂಜಿ
ರುಕ್ಮೀಣಿ	–	ಶಾರದಾ ಜಂಬಗಿ, ದಾದನಟ್ಟಿ ದೊರೆಸ್ಯಾನಿ
ಹಾರ್ಮೋನಿಯಂ	–	ಕಮಲಸಾಬ ದಾದನಟ್ಟಿ
ತಬಲಾ	–	ಹನಮಂತ ಪೂಜಾರಿ

೧೦ ವರ್ಷದಿಂದ ಸಂಘ ಕಟ್ಟಿ ಆಡುತ್ತಾ ಸಾಗಿದ್ದಾರೆ. ಪಾರಿಜಾತ ಕ್ಷೇತ್ರದಲ್ಲಿ ವಿಶೇಷ ಸೇವೆ ಸಲ್ಲಿಸಿದ ಕೆಲವೇ ಕೆಲವು ತಂಡಗಳಲ್ಲಿ ದಾದನಟ್ಟಿಯ ತಂಡ ಒಂದು. ಈ ತಂಡದ ಮುಖ್ಯ ಕಲಾವಿದ ಈರಣ್ಣ ಬಡಿಗೇರ ಹಾಗೂ ಭೀಮೇಶಿ ಕಂಬಾರ ಇವರನ್ನು ಸಂಘ-ಸಂಸ್ಥೆಗಳು ಸನ್ಮಾನಿಸಿವೆ.

೪.೫.೫. ಶ್ರೀ ಅಶೋಕ ಬಡಿಗೇರ :

ಅಶೋಕ ಬಡಿಗೇರ (ಬಾಳಿಗೇರಿ) ಇದೇ ಸಾರವಾಡ ಪಾರಿಜಾತ ಕಂಪನಿ ತಂಡದಲ್ಲಿ ತಬಲಾ ವಿದ್ಯೆ ಕಲಿತು ಉತ್ತಮ ವಾದಕನನ್ನು ತಯಾರಿಸಿದ ಕೀರ್ತಿ ಈ ತಂಡಕ್ಕೆ ಸಲ್ಲುತ್ತದೆ.

ಸಾರವಾಡ ತಂಡವು ಸುಮಾರು ೪೦-೫೦ ವರ್ಷ ಪಾರಿಜಾತ ಕ್ಷೇತ್ರಕ್ಕೆ ತನ್ನದೇ ಆದ ವಿಶಿಷ್ಟ ರೀತಿಯ ಹಾಗೂ ಹೊಸ ಮಾದರಿಯ ಸೇವೆ ಸಲ್ಲಿಸುತ್ತಾ ಇದೆ. ತಂಡ ಇನ್ನೂ ಭಿನ್ನಾಭಿಪ್ರಾಯವಿಲ್ಲದೇ ವಿಜಯಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಯಲ್ಲಿ ಉಳಿದ ಕೆಲವೊಂದು ತಂಡಗಳಲ್ಲಿ ಈ ಸಾರವಾಡ ತಂಡವು ಒಂದು ಉತ್ತಮ ತಂಡ. ಈ ತಂಡದಲ್ಲಿ ಉತ್ತಮ ಅಭಿನಯ, ಲಯ, ಮಾತುಗಾರಿಕೆ ನೋಡಿದರೆ ವಿಚಿತ್ರವೆನಿಸುವುದು. ಇಂತಹ ಗ್ರಾಮೀಣ ಭಾಗದಲ್ಲಿಯೂ ಹಲವಾರು ಕಷ್ಟಕಾರ್ಪಣ್ಯಗಳನ್ನು ಸಹಿಸಿ ಶ್ರೀಕೃಷ್ಣ ಪಾರಿಜಾತ ಪರಂಪರೆ ಉಳಿವಿಗೆ ಶ್ರಮಿಸುತ್ತಿರುವ ಈ ಕಲಾವಿದರ ಜೀವನ ಸಾರ್ಥಕ ಎನ್ನುವದು ಸೂಕ್ತ. ಇದೇ ರೀತಿ ತಂಡ ಮುಂದುವರೆದರೆ ಮಾದರಿತಂಡ ಹಾಗೂ ಮುಂದುವರೆದ ತಂಡವಾಗಿ ಪರಿವರ್ತನೆಯಾಗುತ್ತದೆ.

ಸದ್ಯ ಇರುವ ತಂಡದ ಪಾತ್ರ ಪರಿಚಯ

ಶ್ರೀಕೃಷ್ಣ	–	ಶಿವನಗೌಡ ಮ, ಕೋಟಿ
ಸತ್ಯಭಾಮಾ	–	ಕೊರವಂಜಿ, ಗುರಪಾದಯ್ಯ ಧಾರವಾಡಮಠ
ಗೌಳಗಿತ್ತಿ	–	ಮಲ್ಲಪ್ಪ.ಶಿ. ಯರನಾಳ
ರುಕ್ಮಿಣಿ	–	ಶ್ರೀಮತಿ ಈಶ್ವರವ್ವ ಮಾದರ
ದೊರೆಶಾನಿ		
ಭಾಗವತ	–	ಈಶ್ವರಯ್ಯ ಸಂ.ಪೂಜಾರಿ
ಮರಿ ಭಾಗವತ	–	ಅಪ್ಪಾಲಾಲ ಸನದಿ
ಹಾರ್ಮೋನಿಯಂ	–	ರಾಚಯ್ಯ ಹೀರೆಮಠ
ತಬಲಾ	–	ಶಾವಾಜಿ ನಂ. ನಿಕ್ಕಂ

ಈ ಎಲ್ಲ ಕಲಾವಿದರನ್ನು ಕೂಡಿಕೊಂಡು ಸಾರವಾಡ ಪಾರಿಜಾತ ಪರಂಪರೆ ತನ್ನದೇ ಆದ ಗೊತ್ತುಗುರಿಗಳನ್ನು ಹೊಂದಿ ಈ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದೆ. ಇದೇ ಸೇವೆ ಮುಂದುವರೆದರೆ ಪಾರಿಜಾತ ಕ್ಷೇತ್ರದಲ್ಲಿ ಈ ಸಾರವಾಡ ಶ್ರೀಕೃಷ್ಣ ಪಾರಿಜಾತದ ಪರಂಪರೆ ಅಜರಾಮರವಾಗಿ ಉಳಿಯುತ್ತದೆ.

ಒಟ್ಟಿನಲ್ಲಿ ಎಲ್ಲಾ ಪಾರಿಜಾತ ತಂಡಗಳು ಹಲವು ರೀತಿಯ ಏಳುಬೀಳುಗಳ ಮಧ್ಯೆಯು ಒಂದು ಪ್ರದರ್ಶಿತ ರೂಪ ಉಳಿಸಿಕೊಂಡು ಬಂದಿರುವವು. ಪಾರಿಜಾತ ತಂಡಗಳು ಸಂಪೂರ್ಣ ಸಾಮಾಜಿಕವಾಗಿ ಹಲವು ಸ್ತರದ ಜನರು ಒಂದು ತಂಡಗಳಲ್ಲಿದ್ದರೂ ಸ್ಥಾನ-ಮಾನಗಳು ಗೌಣವಾಗಿ ಕಲೆಯೇ ಅಲ್ಲಿ ಸರ್ವಶ್ರೇಷ್ಠ ಎನ್ನುವ ಮಾತನ್ನು ತಂಡಗಳಿಂದ ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಇಂಥ ಹಲವು ಬಗೆಯ ಅನುಭವಗಳು ಏಕಾಕೃತಿಗೊಂಡು ಒಂದು

ಪ್ರದರ್ಶಿತ ರೂಪ ತಯಾರಾಗಬೇಕಾದರೇ ಬಹಳಷ್ಟು ಅಡತಡೆಗಳೂ ಎದುರಾಗುತ್ತವೆ. ಒಂದು ವ್ಯಕ್ತಿಯಿಂದ ಸಮಷ್ಠಿ-ಸಮದೃಷ್ಟಿಯಿಂದ ಪಾಂಚಾಳ ಸಮುದಾಯದ ಕಲಾ ಪರಿಸರದ ಕರಕೌಶಲ್ಯಗಳನ್ನು ಅಧ್ಯಯನಿಸಬಹುದಾಗಿದೆ.

೪.೫.೬. ಶ್ರೀ ನಾರಾಯಣ ಪತ್ತಾರ :

ವೃತ್ತಿಯಿಂದ ಅಕ್ಕಸಾಲಿಗನಾಗಿ, ಪ್ರವೃತ್ತಿಯಿಂದ ಜನಪದ ಕಲಾವಿದನಾಗಿ ನಾಡಿನ ತುಂಬಾ ಕಲೆಯನ್ನು ಪಸರಿಸಿದ ನಾರಾಯಣ ದುಂಡಪ್ಪ ಪತ್ತಾರರು ಒಬ್ಬರು. ಮೂಲತಃ ಬೀಳಗಿ ತಾಲೂಕಿನ ಸೊನ್ನ ಗ್ರಾಮದವರು. ೧೯೫೨ರ ಸುಮಾರಿನಲ್ಲಿ ದುಂಡಪ್ಪ ಹಾಗೂ ಬಾಳಮ್ಮ ದಂಪತಿಗಳ ಮಗನಾಗಿ ಜನಿಸಿದವರು. ಪ್ರಸ್ತುತ ಹೆಗಲಿಗೆ ಹೆಗಲಾಗಿರುವ ಶ್ರೀಮತಿ ರುಕ್ಮಿಣಿ ಹಾಗೂ ನಾಲ್ಕು ಜನ ಮಕ್ಕಳೊಂದಿಗೆ ಬದುಕು ಸಾಗಿಸುತ್ತಿರುವ ನಾರಾಯಣ ಪತ್ತಾರರದು ಚಿಕ್ಕ ಹಾಗೂ ಸುಖ ಕುಟುಂಬವಾಗಿದೆ. ಮನೆಯವರ ಸಹಕಾರದಿಂದಲೇ ಒಬ್ಬ ಹಿರಿಯ ಕಲಾವಿದರಾಗಿ ನಮ್ಮ ಮುಂದೆ ಇದ್ದಾರೆ. ಇಂದು ತಂತ್ರಜ್ಞಾನ ಹಾಗೂ ಪ್ರಸಾರ ಮಾಧ್ಯಮ ವರ್ಗ ಒತ್ತಡದಲ್ಲಿ ಜನಪದ ಕಲಾ ಆಸ್ವಾದಕರು ನೈಜಕತೆಯನ್ನು ಮರೆತವರೆ ಹೆಚ್ಚು ಇರುವಾಗ ಇಂಥ ಅಳಿವಿನ ಅಂಚಿನಲ್ಲಿ ಜಾನಪದ ಉಸಿರನ್ನು ಗಟ್ಟಿ ಉಳಿಸಿಕೊಂಡಿದ್ದಾರೆ. ಮುಂದಿನ ಪೀಳಿಗೆಗೆ ವರ್ಗಾವಣೆ ಮಾಡುವ ಪ್ರಯತ್ನದಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಅವರೇ ನಾರಾಯಣ ಪತ್ತಾರ ಅವರು.

ಕಲೆ ಯಾರ ಸ್ವತ್ತಲ್ಲ. ಅದು ತಾತ್ಕಾಲಿಕವೂ ಅಲ್ಲ. ಕಲೆಯು ಆಸ್ವಾದಕರ ಕೂಸಾಗುತ್ತದೆ. ಎತ್ತಿಕೊಂಡವರನ್ನು ಅಪ್ಪಿಕೊಳ್ಳುತ್ತದೆ. ನಿತ್ಯ ಪೂಜಿಸುವವರನ್ನು ಉನ್ನತಕ್ಕೇರಿಸುತ್ತದೆ. ಕಲೆಯೇ ಒಂದು ಜೀವನ ಮಾರ್ಗ, ಆ ಮಾರ್ಗಕ್ಕೆ ಬಂದವರೆಲ್ಲ ಅನುಭವಿಗಳಾಗಿ ತತ್ವ ಚಿಂತನೆಗೆ ಒಳಪಡಿಸಿಕೊಂಡಿದ್ದಾರೆ. ಅಂಥವರ ಪರಿಸರದಲ್ಲಿ ಬೆಳೆದು ಬಂದವರು ಇವರು. ತಂದೆಯಿಂದಲೇ ಜಾನಪದ ರಂಗಕ್ಕೆ ಬಂದಿದ್ದಾರೆನ್ನುತ್ತಾರೆ.

ತಂದೆಯಿಂದ ಮಗನಿಗೆ ವರ್ಗಾಂತರ :

ಗ್ರಾಮದಲ್ಲಿ ಕಲಾವಿದರ ಜಂಗುಳಿಯೇ ಇತ್ತು. ಬಿಡುವಿನ ಸಂಜೆ ವೇಳೆಗೆ ಸಮಾವೇಶಗೊಂಡು ಸಮುದಾಯ, ಬೇಧ, ತಾರತಮ್ಯವಿಲ್ಲದೆ, ಒಂದೇ ಮನೆಯವರಂತೆ ಬಲಗೊಳ್ಳುವ ಜನಪದ ಕಲೆಗೆ ತಮ್ಮನ್ನು ತೊಡಗಿಸಿಕೊಂಡವರು. ಇಮಾಮಸಾಬ ಮಕಾನದಾರ, ಗೈಬುಸಾಬ ಕುದರಿ, ಬಂದಿಸಾಬ ಘಟ್ನಿ, ಗೂಡೂಸಾಬ ಘಟ್ನಿ, ಅಲ್ಲದೆ ಮ್ಮಲ್ಲಪ್ಪ ದೇಸಾಯಿ (ಸೊನ್ನ) ಹಾಗು ದುಂಡಪ್ಪ ಪತ್ತಾರ ಇವರೂ ಆ ಸಮೂಹದಲ್ಲಿದ್ದ ಕಲಾವಿದರು. ಪ್ರತಿಯೊಬ್ಬರು ಒಂದೊಂದು ಕಲೆಯನ್ನು ಕರಗತ ಮಾಡಿಕೊಂಡವರಾಗಿದ್ದರು. ಇಂತಹ ಪರಿಸರವು ಅಲ್ಲಿನ ಕಲಾವಿದರಿಗೆ ಸಂಜೀವಿನಿಯಾಗಿತ್ತೆಂದು ತೋರುತ್ತದೆ. ಜನಪದ ಕಲಾವಿದನಾದ ನಾರಾಯಣ ಮಾಸ್ತರ ಹಿಂದಿನವರ ಕುಡಿಯಾಗಿ ಇಂದು ಬೆಳೆದು ನಮ್ಮ ಮುಂದಿದ್ದಾರೆ. ಜನಮೆಚ್ಚುವಂತೆ ತಮ್ಮ ಕಲಾ ಅಭಿವ್ಯಕ್ತಿಯನ್ನು ತೋರ್ಪಡಿಸಿದ್ದಾರೆ.

ಸೊನ್ನ ಪರಿಸರವು ಗ್ರಾಮದ ಅತೀ ಚಿಕ್ಕ ಘಟಕವಾಗಿತ್ತು. ದುಂಡಪ್ಪ ಪತ್ತಾರರು ತಮ್ಮ ಬಿಡುವಿನ ವೇಳೆಗೆ ಊರ ಥಾವಡಿ ಕಟ್ಟೆಯ ಮೇಲೆ ಕುಳಿತು ಜನಪದ ಕಲಾವಿದರೊಂದಿಗೆ ಧ್ವನಿಗೂಡಿಸುವ ಭಜನಾ ಕಲಾವಿದರು. ಸಂಜೆ ವೇಳೆಗೆ ಊರ ಹನುಮ ದೇವರ ಗುಡಿಯಲ್ಲಿ ನಿಜಗುಣರ, ಸರ್ಪಭೂಷಣರ ಕೈವಲ್ಯದ ಜೊತೆಗೆ ಶರೀಫರಂತ ತತ್ವಪದಕಾರರ ನುಡಿಗಳು ಭಜನೆಗೆ ಮೇಳೈಸಿದ್ದವು. ತಾಳ, ರಾಗದಲ್ಲಿ ಮೈ ಮರೆತ ಕಲಾವಿದರು ಅನುಭಾವದತ್ತ ಜಾರುತ್ತಿದ್ದರು. ಇಂಥ ಪರಿಸರದಲ್ಲಿ ದುಂಡಪ್ಪ ಪತ್ತಾರ ಅವರು ತನ್ನ ಕರುಳ ಬೆಳಕಿನ ಬೀಜವಾದ ನಾರಾಯಣನನ್ನು ಕರೆದುಕೊಂಡು ಹೋಗಿ ಅವನಿಗೆ ಹಾಡಿನ ಅಭಿರುಚಿ ಹಚ್ಚಿದರು. ಇದು ಬಯಸಿದರೂ ಬರುವುದಲ್ಲ, ಅಂತಃಶಕ್ತಿಯ ಪ್ರೇರಣೆಯಾದಾಗ ಬಲಗೊಳ್ಳುತ್ತದೆ. ಬಲಗೊಂಡಾಗ ಚಿಗಿಯುತ್ತದೆ. ಬರಬರುತ್ತಾ ಕಮರಿ ಹೋಗಬಹುದು. ಆದರೆ ಕಮರಿ ಹೋಗುವ ಲಕ್ಷಣಗಳು ಬಂದಾಗ ಗುರುಗಳ ಮಾರ್ಗದರ್ಶನ ಬೇಕಾಗುತ್ತದೆ. ನಾರಾಯಣ ಪತ್ತಾರರಿಗೆ ಇಮಾಮಸಾಬ ಮಕಾನದಾರರ ಮಾರ್ಗದರ್ಶನವಾಗಿ ಒಬ್ಬ ಕಲಾವಿದನನ್ನಾಗಿಸುವಲ್ಲಿ ಮಹತ್ವದ್ದಾಗಿದೆ.

ಬಡತನವು ಕಲಿಕೆಗೆ ಎಂದೂ ಅಡ್ಡಪಡಿಸುವುದಿಲ್ಲ. ಅದು ಆಸಕ್ತಿ ಮೂಡಿಸುತ್ತಿರುತ್ತದೆ. ಪರಿಸರವು ಮಾತ್ರ ಸವಲತ್ತುಗಳಿಲ್ಲದೆ ಕೊರತೆ ಅನುಭವಿಸುವಂತೆ ನಿರ್ಮಾಣ ಮಾಡುತ್ತದೆ. ಕಲಾವಿದರಿಗೆ ಇಂಥ ಜನಪದ ಪರಿಸರಕ್ಕೆ ವೇದಿಕೆಯಾಗಿ ಆಶ್ರಯ ಬಯಸುತ್ತದೆ. ಆಸಕ್ತಿ ಸ್ವ-ಸಾಮರ್ಥ್ಯದಿಂದ ಸಾಕ್ಷರತಾ ಶಾಲೆ ಕಲಿತ ನಾರಾಯಣ ಪತ್ತಾರರವರು ತಮ್ಮ ೧೮ನೇ ವಯಸ್ಸಿನಲ್ಲಿ ಸಂಗೀತಕ್ಕೆ ಮಾರುಹೋದರು. ಇವರಿಗೆ ಇಮಾಮಸಾಬ ಮಕಾನದಾರ ಕಲಾವಿದರು ಹಾರ್ಮೋನಿಯಂ ತರಬೇತಿ ನೀಡಿ ಜಾನಪದ ಕಲಾ ಲೋಕದಲ್ಲಿ ನಾರಾಯಣ ಪತ್ತಾರ ಮಾಸ್ತರನನ್ನಾಗಿ ಮಾಡಿದ್ದಾರೆ. ನಂತರ ಖ್ಯಾತನಾಮರಾದ ಪಾರಿಜಾತ ಕಲಾವಿದ ಬರಗಿ ರಾಚಯ್ಯನವರಿಂದ ಹಿಮ್ಮೇಳ ಸಂಗೀತ ಶಿಕ್ಷಣ ಪಡೆದು ಅವಕಾಶ ಸಿಕ್ಕಾಗ, ಅವಕಾಶ ಮಾಡಿಕೊಂಡು ಧೂತಿ ಪಾತ್ರವನ್ನು ನಿರ್ವಹಿಸಿದರು. ಒಬ್ಬ ಕಲಾವಿದನಿಗೆ ಅವಕಾಶವೆಂಬುದು ಅತೀ ಮುಖ್ಯವಾಗಿದೆ. ಕಲೆ ಮನೆ ಮಾಡಿಕೊಂಡಿದ್ದರೂ ಅವಕಾಶಕ್ಕಾಗಿ ಕಾದು ಕುಳಿತರೆ ಅದು ತಾನಾಗಿ ಬರುವುದಿಲ್ಲ. ಕಲಾವಿದರು ಅವಕಾಶ ನಿರ್ಮಾಣ ಮಾಡಿಕೊಂಡು ಬೆಳೆಯಬೇಕಾಗುತ್ತದೆ. ಅಂದಾಗಲೇ ಒಳ್ಳೆ ಪ್ರತಿಭೆಯನ್ನು ಅಭಿವ್ಯಕ್ತಿಪಡಿಸಲು ರಂಗವೇದಿಕೆ ಸಿದ್ಧಗೊಳ್ಳುತ್ತದೆ. ಈ ಹೊತ್ತಿಗಾಗಲೇ ವಿವಿಧ ಕ್ಷೇತ್ರಗಳನ್ನೊಳಗೊಂಡವರ ಜೀವನ ಕಥೆ ವಿಧಾನ ಅನುಭವದ ದ್ರವ್ಯವಾಗಿ ಬದಲಾಗುತ್ತಿರುವ, ಎದುರಾಗುತ್ತಿರುವ ತನ್ನ ಗತಿಯನ್ನು ಬದಲಾಯಿಸಿಕೊಳ್ಳುವ ಸ್ವ-ಸಾಮರ್ಥ್ಯ ಹುಟ್ಟುತ್ತದೆ. ಇಂಥ ಜಾಡಿನಲ್ಲೇ ತನ್ನ ಅಭಿವ್ಯಕ್ತಿಯನ್ನು ವ್ಯಕ್ತಪಡಿಸಿದ ನಾರಾಯಣ ಪತ್ತಾರವರು ಬಹುಮುಖ ಪ್ರತಿಭೆಯ ಜನಪದ ಕಲಾವಿದರಾಗಿದ್ದಾರೆ.

ಜನಪದ ಕಲೆಗಳನ್ನು ಮುಂದಿನ ಪೀಳಿಗೆಗೆ ವರ್ಗಾಯಿಸಲು ಹೊಸ ತಿಳುವಳಿಕೆಗೆ ಅನ್ವಯಗೊಳಿಸಲು ಚೇತರಿಸಬೇಕಾಗುತ್ತದೆ. ವೈಜ್ಞಾನಿಕ ಕಾಲಘಟ್ಟದಲ್ಲಿ ಇದಕ್ಕೆ ಮತ್ತೆ ಮತ್ತೆ

ಆವಿಷ್ಕಾರ ಕೊಟ್ಟಾಗ ಬೆಳೆಯಬಹುದಾಗಿರುವ ಸಾಧ್ಯತೆಯನ್ನು ಒಪ್ಪುತ್ತಾರೆ. ಇವರ ಇನ್ನೊಂದು ಜಾನಪದ ಮುಖ ನೋಡಿದಾಗ ಜಾನಪದವು ಕೇವಲ ಕಾಲ್ಪನಿಕ ಮೊತ್ತವಲ್ಲ, ಅನುಭವದ ಜನ್ಯ, ಜೀವನ ವಿಕಾಸ, ಜನಪದ ಸಂಸ್ಕೃತಿ ಸದ್ಭಳಕೆ ಎಂದು ಅಭಿಪ್ರಾಯವ್ಯಕ್ತಪಡಿಸುತ್ತಾರೆ. ಇವರಲ್ಲಿ ಅಡಗಿಕೊಂಡಿರುವ ಜನಪದ ಕಲಾ ಪ್ರತಿಭೆಯನ್ನು ಬೆಳೆಸಬೇಕೆಂದಿರುವವರು ತರಬೇತಿ ಪಡೆಯುವುದು ಒಳಿತೆಂದು ತೋರುತ್ತದೆ.

೪.೫.೭. ಶ್ರೀ ಹನಮಂತ ಬಡಿಗೇರ (ಮುಧೋಳ) :

ಜನಪದ ಕಲಾಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆ ಕೊಟ್ಟ ಚಿನ್ನದ ಭೂಮಿ ಮುಧೋಳ ತಾಲ್ಲೂಕಿನ ಹಲವಾರು ಕಲಾವಿದರು ಬೆಳಕಿಗೆ ಬಂದು, ದೀಪವಾಗಿ ಉರಿದು ಮತ್ತೊಬ್ಬರಿಗೆ ಬೆಳಕಾದರೆ, ಇನ್ನೂ ಕೆಲವರು ದೀಪ ಹಚ್ಚುವ ಮುನ್ನವೇ ಆರಿ ಹೋದವರು ಅದೆಷ್ಟೋ. ಜನಪದ ಕಲಾಕ್ಷೇತ್ರ ಬೆಳಗಲು ತೆರೆಯ ಮುಂದಿನ ಕಲಾವಿದರ ಸರಿಸಮಾನವಾದ ಕೊಡುಗೆ, ತೆರೆಯ ಹಿಂದಿನ ಕಲಾವಿದರೂ ಸಹ ನೀಡಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ.

ಬಡಿಗ ವೃತ್ತಿಯನ್ನು ಕಲಿತು, ಸಂಸಾರ ರಥವನ್ನು ಸಾಗಿಸಲೆಂದು ಚಿಕ್ಕ ವಯಸ್ಸಿನಲ್ಲಿಯೇ ಮಾವನ ಮನೆಯಲ್ಲಿ ವೃತ್ತಿ ಅನುಭವಕ್ಕಾಗಿ ಬಿಟ್ಟು ಬಂದ ತಂದೆಗೆ ಕೆಲವೇ ವರ್ಷದಲ್ಲಿ ತನ್ನ ಮಗ ಸಂಗೀತದಲ್ಲಿ (ಶ್ರೀಕೃಷ್ಣ ಪಾರಿಜಾತ, ಭಜನೆ) ಅದ್ಭುತ ಸಾಧನೆ ಮಾಡುವುದರ ಜೊತೆಗೆ ತಮ್ಮ ಮೂಲ ವೃತ್ತಿಯಲ್ಲೂ ಯಶಸ್ಸನ್ನು ಕಂಡದ್ದನ್ನು ನೋಡಿ ಹೆಮ್ಮೆ ಪಟ್ಟವರು ಹೆತ್ತವರು.

ಜೂನ್ ೧೫, ೧೯೪೬ರಲ್ಲಿ ತಾಯಿಯ ತವರುಮನೆ ಬೆಳಗಾವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಹೊಸ ಯರಗುದ್ರಿ ಗ್ರಾಮದಲ್ಲಿ ಬಾಳಪ್ಪ ಬಡಿಗೇರ ದಂಪತಿಗಳ ಪುತ್ರನಾಗಿ ಜನ್ಮತಾಳಿದ ಈ ಕಲಾವಿದ ಸ್ವಗ್ರಾಮ ಉತ್ತೂರಲ್ಲಿ ಬೆಳೆದು ಬಾಲ್ಯದಲ್ಲಿ ಶಾಲೆಗೆ ಹೋಗಬೇಕಾದ ಸಮಯದಲ್ಲಿ ತಲೆಗೆ ಸರಿಯಾಗಿ ವಿದ್ಯೆ ಹತ್ತದ ಕಾರಣ ವಿದ್ಯೆಯನ್ನು ಅರ್ಧಕ್ಕೆ ಬಿಟ್ಟು ಗಲ್ಲಿ-ಗಲ್ಲಿ ತಿರುಗುವ ಸಮಯದಲ್ಲಿ ತಂದೆ ಬಾಳಪ್ಪ ಬಡಿಗೇರ ಹೀಗಾದರೆ ಮಗ ಹಾಳಾಗುತ್ತಾನೆ ಎಂದು ಮಾವನ ಮನೆಯಾದ ಹೊಸ ಯರಗುದ್ರಿ ಗ್ರಾಮದ ಭೀಮಪ್ಪ ಅವರ ಮನೆಯಲ್ಲಿ ಇಟ್ಟು ಈತನಿಗೆ ಎಲ್ಲ ತರಹದ ಬಡಿಗ ವೃತ್ತಿಯನ್ನು ಕಲಿಸು ಎಂದು ಹೇಳಿ ಬರುತ್ತಾರೆ. ಆದರೆ ಅಲ್ಲಿ ನಡೆದದ್ದೇ ಬೇರೆ, ಬಡಿಗತನ ವೃತ್ತಿಯಲ್ಲಿ ಪಳಗಿದನೇನೋ ನಿಜ. ಆದರೆ, ಅವರ ಮನೆಯಲ್ಲಿ ರಕ್ತಗತವಾಗಿ ಬಂದ ಜನಪದ ಕಲೆ ಈ ಬಾಲಕನ ಹೃದಯ ತಟ್ಟಿತು.

ಮಾವ ಭೀಮಪ್ಪ ಕಂಬಾರ ಮೂಲ ಹವ್ಯಾಸಿ ಕಲಾವಿದ. ಭಜನಾ ಕಲಾವಿದ, ಕರಡಿ ಮಜಲು ಕಲಾವಿದ. ಹೀಗೆ ಎಲ್ಲ ವಿದ್ಯೆಯಲ್ಲಿ ಎತ್ತಿದ ಕೈ. ಈ ಕಾರಣಕ್ಕಾಗಿ ಮನೆಯಲ್ಲಿ ದಪ್ಪು (ದಮಡಿ), ತಬಲ ಮತ್ತು ಹಾರ್ಮೋನಿಯಂ ಎಲ್ಲ ಸಂಗೀತ ಸಲಕರಣೆಗಳಿದ್ದವು. ಯಾರು ಇಲ್ಲದ ಸಮಯದಲ್ಲಿ ಕದ್ದು ಮುಚ್ಚಿ ಕಲಿತು ಒಂದು ದಿನ ತನ್ನ ಮಾವನ ಜೊತೆಗೆ ಹಾಗೂ ಅಜ್ಜನ

ಜೊತೆಗೆ ಸರಿಸಾಟಿಯಾಗಿ ದಪ್ಪು, ತಬಲ, ಹಾರ್ಮೋನಿಯಂನ್ನು ಬಾರಿಸಿದಾಗ ದಿಗ್ಭ್ರಾಂತರಾಗುವ ಸಮಯ ಮಾವ ಮತ್ತು ಅಜ್ಜನದಾಗಿತ್ತು. ಹೀಗೆ ವೃತ್ತಿಯ ಜೊತೆಗೆ ಕಲೆಯನ್ನು ಕಲಿತು ನಂತರ ಉತ್ತೂರ ಗ್ರಾಮಕ್ಕೆ ಬಂದು ಬಡಿಗತನ ವೃತ್ತಿಯ ಜತೆಗೆ ಗ್ರಾಮದ ಮಠದಲ್ಲಿ ನಡೆಯುವ ಭಜನೆಯಲ್ಲಿ ನಿರಂತರವಾಗಿ ಭಾಗಿಯಾಗುತ್ತಿದ್ದನು.

೧೯೭೬ರಲ್ಲಿ ಶ್ರೀಕೃಷ್ಣ ಪಾರಿಜಾತದ ಹಿರಿಯ ಕಲಾವಿದ ಶಿವಾನಂದ ಬಡಿಗೇರ ನೇತೃತ್ವದಲ್ಲಿ ಶ್ರೀ ಕೃಷ್ಣ ಪಾರಿಜಾತ ಕಂಪನಿ ಪ್ರಾರಂಭವಾಯಿತು. ಇಂತಹ ಸಮಯದಲ್ಲಿ ಹಿಮ್ಮೇಳದಲ್ಲಿ ಹಾರ್ಮೋನಿಯಂ ಕಲಾವಿದರು ಬೇಕಾದ ಸಂದರ್ಭದಲ್ಲಿ ಕಂಡುಬಂದವರೆ ಉತ್ತೂರ ಸೇರಿದಂತೆ ರಾಜ್ಯ ಮತ್ತು ಮಹಾರಾಷ್ಟ್ರದ ಹಲವಾರು ಸ್ಥಳದಲ್ಲಿ ಸತತ ಹತ್ತು ವರ್ಷಗಳ ಕಾಲ ಹಾರ್ಮೋನಿಯಂ ವಾದಕನಾಗಿ ಕಾರ್ಯ ಮಾಡುವ ಸಂದರ್ಭದಲ್ಲಿ ಕಂಡು ಬಂದವರೆ ಈ ಹನಮಂತ ಬಡಿಗೇರ. ಈ ಸಮಯದಲ್ಲಿ ಉತ್ತೂರ ಸೇರಿದಂತೆ ಮಹಾರಾಷ್ಟ್ರ ರಾಜ್ಯದ ಹಲವಾರು ಸ್ಥಳದಲ್ಲಿ ಸತತ ವರ್ಷಗಳ ಕಾಲ ಹಾರ್ಮೋನಿಯಂ ವಾದಕನಾಗಿ ಕಾರ್ಯ ಮಾಡುವ ಸಂದರ್ಭದಲ್ಲಿ ೧೯೮೬ರಲ್ಲಿ ಹಲವಾರು ಕಾರಣಗಳಿಂದ ಈ ಕಂಪನಿ ಒಡೆದು ಹೋಯಿತು. ಇಂತಹ ಸಮಯದಲ್ಲಿ ಕಲಾವಿದರಿಗೆ ದಿಕ್ಕು ತೋಚದಂತಾಯಿತು.

ಇಂತಹ ಸಮಯದಲ್ಲಿ ಮಾಲೀಕ ಶಿವಾನಂದ ಬಡಿಗೇರ ತನ್ನನ್ನು ನಂಬಿದ ಕಲಾವಿದರಿಗೆ ಅನ್ಯಾಯವಾಗಬಾರದು ಎನ್ನುವ ಕಾರಣಕ್ಕೆ, ಶಿರೋಳದ ಮಲ್ಲಮ್ಮ ಹುಗ್ಗೆನವರ ಹೊಸ ಕಂಪನಿ ಪ್ರಾರಂಭ ಮಾಡಿ, ನಂತರ ಆ ಕಂಪನಿಯಲ್ಲಿ ಕರ್ನಾಟಕದ ಹಂಪಿ ಉತ್ಸವ, ರನ್ನ ವೈಭವ, ಹಗರಿಬೊಮ್ಮನಹಳ್ಳಿ, ಸಿಂದಗಿ, ವಿಜಯಪುರ, ಬಾಗಲಕೋಟೆ, ಬೆಳಗಾವಿ, ಧಾರವಾಡ, ಗುಲ್ಬರ್ಗಾ, ಮಹಾರಾಷ್ಟ್ರದ ಜತ್ತ, ಉಗಾರ, ಐನಾಪೂರದಲ್ಲಿ ಹಾಗೂ ಆಕಾಶವಾಣಿ ಧಾರವಾಡದ, ಆಕಾಶವಾಣಿ ವಿಜಯಪುರ, ದೂರದರ್ಶನ ಚಂದನ ವಾಹಿನಿ, ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ, ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಸೇರಿದಂತೆ ಸುಮಾರು ೩೦೦ ಕ್ಕೂ ಅಧಿಕ ಗ್ರಾಮಗಳಲ್ಲಿ ೬೦೦೦ಕ್ಕೂ ಅಧಿಕ ಶ್ರೀಕೃಷ್ಣ ಪಾರಿಜಾತ ಪ್ರದರ್ಶನದಲ್ಲಿ ಹಾರ್ಮೋನಿಯಂ ವಾದಕನಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಸದ್ಯ ಕಂಪನಿಯು ನಿಂತಿದ್ದು, ಇಂತಹ ಕಂಪನಿಯ ಕರೆ ಬಂದಾಗ ಯಾವ ಸ್ವಾರ್ಥ, ಭಾವನೆಯಿಲ್ಲದೆ ಕಲೆಯನ್ನು ಧಾರೆ ಎರೆಯುತ್ತಾ ಸಾಗಿರುವ ಈ ಕಲಾವಿದನ ಹಾರ್ಮೋನಿಯಂ ಸಾಥ್ ಇದ್ದರೆ ಸಾಕು ಜನ ಸೇರುವಂತೆ ಮಾಡುವ ಆಕರ್ಷಣೆ ಈ ಕಲಾವಿದನ ಕಲೆಗೆ ಇದೆ. ಈ ಕಲಾವಿದ ನಿಜಕ್ಕೂ ಜನಮನ ತಲುಪುವಲ್ಲಿ ಸಾಧ್ಯವಾಗಿಲ್ಲ ಎನ್ನುವ ಕೊರಗು ಅವರಿಗಿಲ್ಲ. ಆದರೆ, ಆ ಕಲೆಯನ್ನು ಈ ಕಲಾವಿದನನ್ನು ಗುರುತಿಸುವ ಜವಾಬ್ದಾರಿಯಲ್ಲಿ ಸಮಾಜ ಹಾಗೂ ಸರ್ಕಾರ ಮರೆತಿದೆ ಎನ್ನುವ ಮಾತು ನಿಜ.

ಬಹುಮುಖ ಕಲಾವಿದ : ಕೇವಲ ಹಾರ್ಮೋನಿಯಂ ವಾದಕ ಮಾತ್ರವಲ್ಲ. ಹನಮಂತ ಬಡಿಗೇರ ಅದ್ಭುತ ತಬಲ ಹಾಗೂ ಡಪ್ಪು, ಕರಡಿ ಮಜಲು ವಾದಕ. ಹಲವಾರು ಗ್ರಾಮದಲ್ಲಿ

ಈ ಕಲಾವಿದನ ಕರಡಿ ಮಜಲು ಕಲೆಗೆ ತಲೆದೂಗದವರಿಲ್ಲ. ಜೊತೆಗೆ ಸುಮಾರು ೨೦೦ ಕ್ಕೂ ಅಧಿಕ ಸಾಮಾಜಿಕ, ಕೌಟುಂಬಿಕ ಹಾಗೂ ನಿಜಗುಣ ಶಿವಯೋಗಿ, ಕೈವಲ್ಯ ಪದ್ಧತಿಯ ಕಲೆಗಳನ್ನು, ಹಂತಿ ಪದ, ಕವ್ವಾಲಿ ತರಹದ ಹಲವಾರು ಪದಗಳನ್ನು ಹಾಡುವ ಬಹುಮುಖ ಕಲಾವಿದ. ಸದ್ಯ ಗ್ರಾಮದಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುವ ಹದಿನೈದು ನೂರು ರೂಪಾಯಿಗಳಲ್ಲಿ ಸಂಜೆ ಗತ್ತಲಿನಲ್ಲಿ ಪಯಣ ಮಾಡುತ್ತಾ ಸಾಗಿದ್ದಾನೆ. ಇಂತಹ ಕಲಾವಿದರ ಬದುಕು ಹಸನು ಮಾಡಲು ಸಂಘ ಸಂಸ್ಥೆ, ಸರ್ಕಾರ ಮುಂದೆ ಬಂದಾಗ ಮಾತ್ರ ತಮ್ಮ ಜೀವನವನ್ನೇ ಕಲೆಗಾಗಿ ಮುಡಿಪಾಗಿಟ್ಟು ನಮ್ಮ ಸಂಸ್ಕೃತಿ ಪರಂಪರೆಯನ್ನು ಬೆಳಗಿಸುವ ಕಲಾವಿದರ ಬದುಕು ಹಸನಾಗಬೇಕಿದೆ.

೪.೫.೮. ಶ್ರೀ ಹಣಮಂತ ಬಡಿಗೇರ (ಉದುಪುಡಿ) :

ತಮ್ಮ ಅಸಾಧಾರಣ ಕಲಾಪ್ರತಿಭೆಯಿಂದ ತಾವು ವಾಸಿಸುವ ಪ್ರದೇಶದಲ್ಲಿ ಜನಪದ ಕಲೆಯನ್ನು ಉಳಿಸಿ, ಬೆಳೆಸಿ ಅದು ನಶಿಸಿ ಹೋಗದಂತೆ ಉಳಿಸಿಕೊಂಡು ಬಂದಂತಹ ಬೆರಳೆಣಿಕೆಯ ಕಲಾವಿದರಲ್ಲಿ ಶ್ರೀ ಹಣಮಂತ ಬಡಿಗೇರ (ಉದುಪುಡಿ) ಅವರೊಬ್ಬರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಹಣಮಂತ ಬಡಿಗೇರ ಅವರು ದಿನಾಂಕ: ೦೧-೦೭-೧೯೪೫ರಲ್ಲಿ ರಾಮದುರ್ಗ ತಾಲೂಕಿನ ಉದುಪುಡಿ ಗ್ರಾಮದಲ್ಲಿ ಜನಿಸಿದರು. ಸೋದರಮಾವ ಕಾಳಪ್ಪ, ಮಲ್ಲಪ್ಪ ಬಡಿಗೇರ ಇವರು ಮುಧೋಳ ತಾಲೂಕಿನ ಮೆಟಗುಡ್ಡದವರು. ಮೊದಮೊದಲು ಹಲಕಿ ಗ್ರಾಮದಲ್ಲಿದ್ದ ಹೇಮರಡ್ಡಿ ಮಲ್ಲಮ್ಮ ನಾಟಕದಲ್ಲಿ ಮಲ್ಲಮ್ಮನ ಪಾತ್ರದ ಅಭಿನಯದ ಮೂಲಕ ನಟನೆಯ ಹುಚ್ಚು ಹಿಡಿಸಿಕೊಂಡರು. ತದನಂತರ ಪಾರಿಜಾತ ಕಾಲದ ಸುವರ್ಣಯುಗವಾದ ೧೯೫೮ರ ಕಾಲಘಟ್ಟದಲ್ಲಿ ಹಾರ್ಮೋನಿಯಂ ಕಲಾವಿದರಾಗಿ ನಾಟಕದ ಮಾಸ್ತರ (ಗುರು) ರಾಗಿ ಕಲಾಸೇವೆಯಲ್ಲಿ ಮುಂದುವರಿದರು.

ಹೂವಿನಕಡೆ ದುಂಬಿ ಬರುವ ಹಾಗೆ, ಸಕ್ಕರೆ ಕಂಡರೆ ಇರುವೆ ಧಾವಿಸಿ ಬರುವ ಹಾಗೆ, ಇಳಿಜಾರಿನ ಕಡೆ ನೀರು ಹರಿಯುವ ಹಾಗೆ ಉತ್ತಮವಾದ ಶಾಂತಮೂರ್ತಿಯಂತಿರುವ ಗುರುವಿನ ಕಡೆ ಶಿಷ್ಯವೆಂಬ ದುಂಬಿಗಳು ಆಕರ್ಷಿತರಾಗಿ ಬರುವಂತೆ ಹಲವಾರು ಶಿಷ್ಯರು ಇವರ ಮಾರ್ಗದರ್ಶನದಲ್ಲಿ ರೂಪುಗೊಂಡರು. ಬೆಳಗಾವಿ, ಬಾಗಲಕೋಟೆ, ವಿಜಯಪುರ, ಧಾರವಾಡ ಜಿಲ್ಲೆಗಳಲ್ಲಿ ಅಪಾರ ಸಂಖ್ಯೆಯ ಶಿಷ್ಯ ಪರಂಪರೆಯನ್ನು ಹೊಂದಿದ್ದಾರೆ.

ಶ್ರೀಮತಿ ಮಲ್ಲಮ್ಮ ಮ್ಯಾಗೇರಿ ಹೆಸರಾಂತ ಕಲಾವಿದೆ. ಶ್ರೀ ಹಣಮಂತ ಬಡಿಗೇರ ಅವರ ಹೆಮ್ಮೆಯ ಶಿಷ್ಯರಾಗಿದ್ದಾರೆ. ಟಕ್ಕಳಕಿ ವಿಠ್ಠಲ ಅವರ ಕಂಪನಿ, ಕಮಲವ್ವ ಮೆಟಗುಡ್ಡ ಪಾರಿಜಾತ ಕಂಪನಿ, ಶ್ರೀರಾಮಲಿಂಗೇಶ್ವರ ಪಾರಿಜಾತ ಕಂಪನಿಗಳಲ್ಲಿ ಅಭಿನಯಿಸುವ ಪ್ರಬುದ್ಧ ಕಲಾವಿದರು ಮತ್ತು ಹಿಮ್ಮೇಳ ವಾದಕರು ಬಡಿಗೇರ ಅವರ ಗರಡಿಯಲ್ಲಿ ಪಳಗಿದ ಕಲಾವಿದರಾಗಿದ್ದಾರೆ.

ಶ್ರೀಯುತ ಹಣಮಂತ ಬಡಿಗೇರರವರು ಮೊದಲಿಗೆ ತಮ್ಮ ಹುಟ್ಟೂರಾದ ಉದುಪುಡಿಯಲ್ಲಿ ರಾಮಲಿಂಗೇಶ್ವರ ಭಜನಾ ಮಂಡಳಿಯಲ್ಲಿ ಭಜನಾ ಕಲಾವಿದರಾಗಿ ಶ್ರೀ ಮಳೆಪ್ಪ ಕಂಬಾರ, ಸಾ: ಮೆಟಗುಡ್ಡ, ಇವರ ಸೋದರ ಮಾವನಿಂದ ಕಲಿತು ೧೯೫೮-೭೧ ರವರೆಗೆ ಸುದೀರ್ಘ ಹದಿಮೂರು ವರ್ಷಗಳವರೆಗೆ ಕಲಿತು ಹಾರ್ಮೋನಿಯಂ ಕಲಾವಿದರಾದರು. ಪಾರಿಜಾತ ಮಾಸ್ತರರಾಗಿ ಹೆಸರು ಮಾಡಿದರು.

ವಿದ್ಯೆ ನಿಂತ ನೀರಾಗಬಾರದು, ಹರಿಯುವ ನೀರಾಗಬೇಕೆಂಬುದೆ ಹಣಮಂತ ಬಡಿಗೇರ ರವರ ಬಯಕೆ.

ಶ್ರೀ ರಾಮಲಿಂಗೇಶ್ವರ ಪಾರಿಜಾತ ಕಂಪನಿ ಉದುಪುಡಿ ೧೯೭೨-೮೭, ಶ್ರೀಕೃಷ್ಣ ಪಾರಿಜಾತ ದಾದನಟ್ಟಿ, ೧೯೮೭-೯೦, ಶ್ರೀಕೃಷ್ಣಾಜಿ ದೇಶಪಾಂಡೆ ಲೋಕಾಪೂರ ೧೯೯೦-೯೮, ಶ್ರೀ ಫಲಹಾರೇಶ್ವರ ಪಾರಿಜಾತ ಸಂಘ ಅವರಾದಿ, ತಾ: ರಾಮದುರ್ಗ, ೨೦೦೦-೧೬ ಹವ್ಯಾಸಿ ಕಲಾವಿದರಾಗಿ, ಶ್ರೀಕೃಷ್ಣ ಪಾರಿಜಾತ ಸಂಘ, ಸೊನ್ನ, ತಾ: ಬೀಳಗಿ, ಶ್ರೀಕಾಂತ ಹೂಗಾರರವರ ಜೊತೆ ತುರ್ತು ಕರೆ ಬಂದರೆ ಹೋಗಿ ಪ್ರೋತ್ಸಾಹ ನೀಡುವುದು, ಶ್ರೀಕೃಷ್ಣ ಪಾರಿಜಾತ ಸಂಘ ಸುನ್ನಾಳ, ತಾ: ರಾಮದುರ್ಗ, ಶ್ರೀ ಶಂಕ್ರಪ್ಪ ಲಕ್ಕಪ್ಪಗೋಳ ಜೊತೆ ೧೯೯೦-೧೯೯೮, ಶ್ರೀಕೃಷ್ಣ ಪಾರಿಜಾತ ಸಂಘ ಚಿಪ್ಪಲಕಟ್ಟಿ, ತಾ: ರಾಮದುರ್ಗ, ಶ್ರೀ ಲಚ್ಚೆಪ್ಪ ಬಡಿಗೇರವರ ಜೊತೆಗೆ ೧೯೯೦-೨೦೦೦, ಹೀಗೆ ಶ್ರೀಯುತರು ಹಲವಾರು ತಂಡಗಳಲ್ಲಿ ತಮ್ಮ ಕಲಾ ಸೇವೆಯನ್ನು ಮಾಡಿದ್ದಾರೆ, ಮಾಡುತ್ತಿದ್ದಾರೆ.

ಹಾರ್ಮೋನಿಯಂ ಕಲಾವಿದರಾದ ಶ್ರೀ ಹನಮಂತ ಬಡಿಗೇರರವರು ತಂದೆಯಿಂದ ಬಂದ ಹಳೆಮನೆ, ೩ ಎಕರೆ ಒಣಬೇಸಾಯ ಸಾಗುವಳಿ ಭೂಮಿ, ಎಮ್ಮೆ ಸಾಕಾಣಿಕೆಯನ್ನು ಅವರ ಶ್ರೀಮತಿ ಶೇಖುಬಾಯಿ ಹಾಗೂ ಸೊಸೆಯು ನೋಡಿಕೊಂಡು ಹೋಗುವರು. ಮಗ ಬೇಸಾಯ ಮಾಡುವುದರ ಜೊತೆಗೆ ಸಂಸಾರವನ್ನು ನಿಭಾಯಿಸಿಕೊಂಡು ಹೋಗುತ್ತಿದ್ದಾರೆ. ಶ್ರೀಯುತರ ಕಲೆಯನ್ನು ಕಂಡು ಅನೇಕ ಕಲಾವಿದರು ಆಮಂತ್ರಿಸಿದ್ದಾರೆ, ಗೌರವಿಸಿದ್ದಾರೆ. ಸೋದರ ಮಾವನಿಂದ ಬಂದ ಕಲೆಯನ್ನು ಪ್ರದರ್ಶಿಸುತ್ತ ರಾಜ್ಯ, ದೇಶದ ಮೂಲೆ ಮೂಲೆಯಲ್ಲಿ ಹೆಸರಾಗಿದ್ದಾರೆ.

ದಿಲ್ಲಿ, ಮೈಸೂರು ದಸರಾ, ಹಂಪಿ ಉತ್ಸವ, ಚಾಲುಕ್ಯ ಉತ್ಸವ, ನವರಸಪುರ ಉತ್ಸವ, ಗಡಿನಾಡು ಉತ್ಸವದಲ್ಲಿ ಭಾಗಿಯಾಗಿ ತಮ್ಮ ಕಲಾರಸಿಕತೆಯನ್ನು ತೋರಿಸಿದ್ದಾರೆ. ಧಾರವಾಡ ಆಕಾಶವಾಣಿ ಮೂಲಕವೂ ಇವರ ಪ್ರತಿಭೆ ಹಾಗೂ ಅಮೋಘ ಸೇವೆಯನ್ನು ಮನಗಂಡು ರಾಜ್ಯ ಮಟ್ಟದ ಜಾನಪದ ಅಕಾಡೆಮಿ ಪ್ರಶಸ್ತಿ ೨೦೦೧ ರಲ್ಲಿ ಪಡೆದು ಕಲಾರಸಿಕರಿಂದ ಗೌರವಿಸಿಕೊಂಡಿದ್ದಾರೆ.

ಇವರಿಗೆ ಕಲಾ ಮಾಸಾಶನ ಹಾಗೂ ಹಿರಿಯ ನಾಗರಿಕ ಸೌಲಭ್ಯದಲ್ಲಿ ಬಸ್ ಪ್ರಯಾಣ ರಿಯಾಯತಿ ದೊರೆತಿದೆ.

ಸಂಗೀತ ಉಪಕರಣಕ್ಕೆ ಪ್ರತ್ಯೇಕ ಕೊಠಡಿಯಿಲ್ಲ, ಗುಡಿ-ಗುಂಡಾರಗಳಲ್ಲಿ, ನಾಟಕದ ತಾಲೀಮು (ದುರ್ಗಮ್ಮ) ಕೋಣೆಗಳಲ್ಲಿ ಇಡುತ್ತಿದ್ದಾರೆ. ಶ್ರೀ ಹಣಮಂತ ಬಡಿಗೇರವರ ಕಲೆ ಮುಂದಿನ ಪೀಳಿಗೆಗೆ ಉಳಿಯಲೆಂದು ಶಿಷ್ಯ ವೃಂದಕ್ಕೆ ದಾರಿದೀಪವಾಗಿದ್ದಾರೆ. ಅದು ಉಳಿಯಲಿ ಎಂಬುದು ಅವರ ಹಾರೈಕೆಯಾಗಿದೆ.

*** ಶ್ರೀ ರಾಘವೇಂದ್ರ ಶ್ರೀಕೃಷ್ಣ ಪಾರಿಜಾತ ಸಂಘ :**

ಶ್ರೀ ನಾರಾಯಣ ಪತ್ತಾರ ಮಾಸ್ತರ ೧೯೭೦ ರ ಸುಮಾರಿಗೆ ಶ್ರೀಕೃಷ್ಣ ಪಾರಿಜಾತ ಸಂಘವನ್ನು ಹುಟ್ಟುಹಾಕಿದರು. ಅದು ತಕ್ಷಣವೆ ಬೆಳಕು ಕಾಣದೆ ಹೋಯಿತು. ಕಾರಣ ಒಂದು ಸಂಸ್ಥೆಯ ಹುಟ್ಟು ಅನೇಕ ಗ್ರಹಿಕೆಗಳನ್ನು ಒಳಗೊಂಡು ಅದರ ಬೆಳವಣಿಗೆಗೆ ಮುಂದಾಲೋಚನೆ ಕೊಡಬೇಕಾಗುತ್ತದೆ. ಎಲ್ಲರೂ ಸಂಘ ಕಟ್ಟಿದ್ದು ಇದೆ. ಹತ್ತರಲ್ಲಿ ಇನ್ನೊಂದು ಎಂದು ಸೇರಿಸಿದ್ದರೆ ಪಾರಿಜಾತವೆನ್ನುವ ಪದಕ್ಕೆ ಧಕ್ಕೆ ಆಗುತ್ತದೆನ್ನುವುದನ್ನು ಅರಿಯಬೇಕಾಗುತ್ತದೆ. ಕಲಾವಿದರಿಗೆ ಅಷ್ಟೇ ಗೌರವ ಸಂಭಾವನೆ ನೀಡುವುದು ಸಂಘದೊಡೆಯನ ಗುರುತರ ಜವಾಬ್ದಾರಿ ಇರುವಾಗ ಅದು ಅನಾನುಕೂಲವಾಗಿ ಸಂಸ್ಥೆಯು ಮುರಿದುಹೋಯಿತು. ಇವರಿಗೆ ಆದ ಕಷ್ಟ ಅಷ್ಟಿಷ್ಟಲ್ಲ. ಬಳಸಿದ ಪೇಟಿಯನ್ನು ಮಾರಿದ್ದಾರೆ, ಕೈಸುಟ್ಟುಕೊಂಡಿದ್ದಾರೆ. ಇದಕ್ಕೆ ಕಾರಣ ಮತ್ತಾರೂ ಇರದೇ ಇರಬಹುದು. ಅವರ ಅಲಕ್ಷ್ಯತನ ಮತ್ತು ನಂಬಿಗಸ್ತ ಕಲಾವಿದರ ಕೊರತೆ ಇರಬೇಕೆನೋ. ಅಂತೂ ಸಂಘ ಕಟ್ಟಿದವರ ಬದುಕು ಕಷ್ಟವೆನ್ನುವುದು ಇದರಿಂದ ಗೋಚರವಾಗುತ್ತದೆ. ಶ್ರೀ ನಾರಾಯಣ ಪತ್ತಾರ ಮಾಸ್ತರ ಕಷ್ಟ ಎದುರಿಸಿದ್ದು ಅದನ್ನು ಉಳಿಸಿಕೊಂಡು ಬಂದಿದ್ದು ಇದೆಲ್ಲ ಇದಕ್ಕೆ ಮೆಚ್ಚಬೇಕು.

*** ಗೌರವ ಸನ್ಮಾನಗಳು :**

ಒಬ್ಬ ಕಲಾವಿದನಿಗೆ ಗೌರವ, ಸನ್ಮಾನಗಳೆಂದರೆ ಜನರ ಮಧ್ಯದಲ್ಲಿ ಶಾಲು ಹೊದಿಸಿ ಕೊರಳಲ್ಲಿ ಹಾರ ಹಾಕಿದರೆ ಅದೇ ಅವರಿಗೆ ಸಂತೋಷ. ಜನರು ಚಪ್ಪಾಳೆ ತಟ್ಟಿದರೆ ಅವರ ಕಲೆ ಸಾರ್ಥಕವೆಂದು ಭಾವಿಸುತ್ತಾರೆ. ಶ್ರೀಯುತ ನಾರಾಯಣ ಪತ್ತಾರವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಬಂದಾಗ ಎಂಥ ಖುಷಿ. ಇದಲ್ಲದೆ ಆಕಾಶವಾಣಿ ಕಲಾವಿದರಾಗಿ, ಅಖಿಲ ಕರ್ನಾಟಕ ಶ್ರೀಕೃಷ್ಣ ಪಾರಿಜಾತದಲ್ಲಿ ಭಾಗಿಯಾಗಿ ಕರ್ನಾಟಕ ಸರ್ಕಾರ ಸಹಯೋಗದಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಲಾಪ್ರದರ್ಶನ ನೀಡಿದ್ದಾರೆ. ಅಂದಿನ ದಿನ ೫ ರೂಪಾಯಿ ಗೌರವ ಧನ ಪಡೆದು ಈಗ ಸಾವಿರಾರು ರೂಪಾಯಿಗಳ ಗೌರವಧನಕ್ಕೆ ಕಲಾಸೇವೆ ಮುಂದುವರೆದಿದೆ.

ಕರ್ನಾಟಕ ಕಲಾ ಚೇತನ, ಗುರುಸೇವಾರತ್ನ, ಕಲಾರತ್ನ, ಕರ್ನಾಟಕ ಪದ್ಮಭೂಷಣ ಮುಂತಾದ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ತಮ್ಮ ಜನಪದ ಕಲಾಸೇವೆ ಸುಮಾರು ೫೦ ವರ್ಷಗಳು ಸಾಗಿದ್ದು ಇದೆ. ನಾರಾಯಣ ಪತ್ತಾರ ಮಾಸ್ತರ ಆಗಿ ಕಲಾವಿದರ ಸಾಲಿಗೆ ಜಾನಪದ ಕ್ಷೇತ್ರಕ್ಕೆ ಹೆಸರು ತಂದುಕೊಟ್ಟವರಲ್ಲಿ ಇವರೆಂದು ಹೇಳಬೇಕಾದುದು ಅವಶ್ಯವಾಗಿದೆ. ಇದೇ ರೀತಿ ಅನೇಕ ಕಲಾವಿದರು ತಮ್ಮ ಸೇವೆ ಸಲ್ಲಿಸಿ ಗೌರವಕ್ಕೆ ಪಾತ್ರರಾಗಬೇಕೆಂದು ಹಾರೈಸುತ್ತೇನೆ.

೪.೫.೯. ಶ್ರೀ ಕಾಡಪ್ಪ ಕಾ. ಕಂಬಾರ :

ಉತ್ತರ ಕರ್ನಾಟದಲ್ಲಿ ಅಪಾರ ಜನಪ್ರಿಯತೆ ಗಳಿಸಿರುವುದರಿಂದ ಕಲಾವಿದರ ಮತ್ತು ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ಪಾರಿಜಾತ ಬದಲಾವಣೆ ಹೊಂದುತ್ತ ಬಂದಿರುತ್ತದೆ. ಸಂಗೀತ ಮತ್ತು ಆಧ್ಯಾತ್ಮ ಹಾಗೂ ಹಾಸ್ಯವನ್ನು ಒಳಗೊಂಡಿರುವುದು ಈ ರಂಗಕಲೆಯ ವಿಶಿಷ್ಟ ಎನ್ನಬಹುದು.

ಪಾರಿಜಾತದ ಸಂಗೀತವು ವಿಶೇಷವಾದದು, ಜನಪದ ಕಲೆಗಳಾದ ಸಣ್ಣಾಟ, ದೊಡ್ಡಾಟಗಳಿಂದ ವಿಭಿನ್ನ ಸಂಗೀತವನ್ನು ಒಳಗೊಂಡಿದೆ, ಪಾರಿಜಾತವು ಗ್ರಾಮಾಂತರ ಪ್ರದೇಶಗಳಲ್ಲೆಲ್ಲಾ ಸಂಚರಿಸಿ ಗ್ರಾಮೀಣ ಭಾಗದ ಪ್ರೇಕ್ಷಕರಿಗೆ ಶಾಸ್ತ್ರೀಯ ಸಂಗೀತದ ರುಚಿ ಉಣಬಡಿಸಿದ್ದು ಗಮನಾರ್ಹವಾಗಿದೆ. ಹಾರ್ಮೋನಿಯಂ, ತಬಲಾ, ತಾಳ ಇವು ಪಾರಿಜಾತದ ಮುಖ್ಯ ವಾದ್ಯ ಪರಿಕರಗಳು.

ತಬಲಾ ಹಿಂದುಸ್ತಾನಿ ಶೈಲಿಯ ತಾಳವಾದ್ಯ. ಪಾರಿಜಾತದಲ್ಲಿ ಆರಂಭಕ್ಕೆ ಕರ್ನಾಟಕಿ ಶೈಲಿ ಪ್ರಚಾರದಲ್ಲಿದ್ದಾಗ ಮದ್ದಳೆ ಬಾರಿಸುತ್ತಿದ್ದರಂತೆ, ಹಿಂದೂಸ್ತಾನಿ ಸಂಗೀತದ ಪ್ರವೇಶವಾದ ಮೇಲೆ ಅವರೊಂದಿಗೆ ತಬಲಾ ಪಾರಿಜಾತ ಅಟ್ಟವೇರಿತು. ಪಾರಿಜಾತ ತಬಲಾವಾದನ ಶೈಲಿಯೇ ವಿಶಿಷ್ಟವಾದದು. ಇಂತಹ ವಿಶಿಷ್ಟ ತಬಲಾವಾದಕರಾಗಿದ್ದ ಮುಧೋಳ ತಾಲೂಕಿನ ಭಂಟನೂರ ಗ್ರಾಮದ ಕಾಡಪ್ಪ ಕಾಳಪ್ಪ ಕಂಬಾರ ಇವರು ಇಂತಹ ಕಲಾವಿದರ ಸಾಲಿಗೆ ಸೇರಿದವರು.

ಕಾಡಪ್ಪ ಕಾಳಪ್ಪ ಕಂಬಾರ ದಿನಾಂಕ ೦೮-೦೫-೧೯೪೪ ರಲ್ಲಿ ಮುಧೋಳ ತಾಲೂಕಿನ ಭಂಟನೂರು ಗ್ರಾಮದಲ್ಲಿ ಕಾಳಪ್ಪ ಹಾಗೂ ತಾರವ್ವ ಎಂಬ ದಂಪತಿಗಳ ಉದರದಲ್ಲಿ ಜನಿಸಿದರು. ಇವರು ಬಾಲ್ಯದಲ್ಲಿ ಕೃಷ್ಣಪ್ಪ ರಂಗಣ್ಣವರ ಅವರು ನಡೆಸುತ್ತಿದ್ದ ಪಾರಿಜಾತ ತಾಲೀಮು ನೋಡಲು ಹೋಗುತ್ತಿದ್ದರು. ಆಗ ಇವರಿಗೆ ತಾಳಗಳನ್ನು ಮುಟ್ಟುವುದು, ಅವುಗಳನ್ನು ನೋಡುವುದು ಹಾಗೂ ತಾಳಗಳನ್ನು ನುಡಿಸುವುದರಲ್ಲಿ ಬಹಳಷ್ಟು ಆಸಕ್ತಿ ಇತ್ತೆಂದು ಹಿರಿಯರು ಹೇಳುತ್ತಾರೆ.

ಬಾಲಕ ಕಾಡಪ್ಪ ತಾಳಮುಟ್ಟುವುದನ್ನು ನೋಡಿ ಹಾಗೂ ಇವರ ಆಸಕ್ತಿಯನ್ನು ನೋಡಿ ಇವನನ್ನು ತಾಳವಾದ್ಯವನ್ನು ನುಡಿಸಲು ಕೃಷ್ಣಪ್ಪ ರಂಗಣ್ಣ ಅವರು ಇವರನ್ನು ಕಂಪನಿಗೆ ಕರೆದುಕೊಂಡರು. ಹೀಗೆ ಕ್ರಮೇಣ ತಬಲಾ ವಾದನವನ್ನು ಹಾಗೂ ತಾಳವಾದ್ಯವನ್ನು ನುಡಿಸಲು ಪ್ರಾರಂಭಿಸಿದರು.

ಇವರು ಮೊದಲಿಗೆ ಕೃಷ್ಣಪ್ಪಜ್ಜ ರಂಗಣ್ಣ ಇವರ ಪಾರಿಜಾತ ಕಂಪನಿಯಲ್ಲಿ ಹಿಮ್ಮೇಳದ ಕಲಾವಿದರಾಗಿ ಸೇವೆ ಪ್ರಾರಂಭಿಸಿದರು. ಹಲವಾರು ವರ್ಷಗಳ ಕಾಲ ಇವರು ಅದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ನಂತರ ಲೋಕಾಪುರದ ಕೃಷ್ಣಾಜಿ ದೇಶಪಾಂಡೆ ಕಂಪನಿ, ಮಂಜುನಾಥ ಶ್ರೀಕೃಷ್ಣ ಪಾರಿಜಾತ ಕಂಪನಿ ದಾದನಟ್ಟಿ, ಹಣಮಪ್ಪ ಪೂಜಾರಿ ಚಿತ್ರಭಾನುಕೋಟೆ ಇವರ ಪಾರಿಜಾತ ಕಂಪನಿ, ಪಾಂಡುರಂಗ ಭಜನಾ ತಂಡ, ಭಂಟನೂರ, ಹನುಮಾನ ಭಜನಾ ತಂಡ ಜುನ್ನೂರ, ದುರ್ಗಾದೇವಿ ಭಜನಾ ತಂಡ ಭಂಟನೂರ, ಗುರುನಾಥರೂಢ ಭಜನಾ ತಂಡ ಕುಳಲಿ, ಹೀಗೆ ಇನ್ನೂ ಅನೇಕ ಕಂಪನಿಗಳಲ್ಲಿ ಕೆಲಸ ನಿರ್ವಹಿಸಿದ್ದಾರೆ.

ಕಾಡಪ್ಪ ಇವರು ಮೂಲತಃ ಉದ್ಯೋಗದಲ್ಲಿ ಕಂಬಾರ ಮತ್ತು ಬಡಗಿತನ ಕೆಲಸ ಮಾಡುತ್ತಿದ್ದರು. ಕಾಡಪ್ಪ ಇವರಿಗೆ ಮೂರು ಜನ ಅಣ್ಣ ತಮ್ಮಂದಿರು, ಅಣ್ಣ ಕಿಷ್ಟಪ್ಪ ಹಾಗೂ ಶ್ಯಾಮನ್ನ, ತಮ್ಮ ವೆಂಕಪ್ಪ, ಇವರೂ ಸಹ ಕಂಬಾರ ಕೆಲಸವನ್ನು ಮಾಡುತ್ತಿದ್ದರು. ಇವರಿಗೆ ನಾಲ್ಕು ಜನ ಅಕ್ಕಂದಿರು, ಹಿರಿಯಕ್ಕ ಅಕ್ಕವ್ವ ಹಾಗೂ ಚಂದವ್ವ, ಲಕ್ಷ್ಮವ್ವ, ಮಾನವ್ವ ಎಂಬ ಸಹೋದರಿಯರು ಇದ್ದರು.

ತಂದೆ, ತಾಯಿ ಹಾಗೂ ಅಕ್ಕಂದಿರು, ಅಣ್ಣ ತಮ್ಮಂದಿರು ಇವರ ಕಲೆಯನ್ನು ಮೆಚ್ಚಿ ಇವರಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದರು. ಹಾಗೆಯೇ ಹೆಂಡತಿ ಅನುಸೂಯ ಕೂಡ ಪ್ರೋತ್ಸಾಹ ನೀಡುತ್ತಿದ್ದರು. ಇವರಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ಮೊದಲನೆಯವನು ಪುಂಡಲೀಕ, ಇವನು ಏಳನೇ ತರಗತಿಯವರೆಗೆ ಶಿಕ್ಷಣ ಮುಗಿಸಿ, ತಮ್ಮ ಮೂಲ ವೃತ್ತಿಯಾದ ಬಡಗಿತನ ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇನ್ನೊಬ್ಬ ಮಗ ಸುರೇಶ, ಇವನು ಸಹ ಐ.ಟಿ.ಐ. ಮುಗಿಸಿಕೊಂಡು ತಮ್ಮ ಮೂಲ ವೃತ್ತಿಯನ್ನು ಮಾಡುತ್ತಿದ್ದಾನೆ.

ಇವರು ತಬಲಾವಾದನ ಹಾಗೂ ತಾಳ ವಾದ್ಯಗಳಲ್ಲಿ ವಿಶೇಷ ಅರ್ಹತೆಯನ್ನು ಪಡೆದಿದ್ದರು. ಇವರು ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ. ರಾಜ್ಯಮಟ್ಟದ ಭಜನಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದಾರೆ ಹಾಗೂ ವಿವಿಧ ಪಾರಿಜಾತ ತಂಡಗಳಲ್ಲಿ ತಬಲಾ ವಾದನವನ್ನು ನುಡಿಸಿ ಪುರಸ್ಕಾರ ಪಡೆದಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಇವರಿಗೆ ಕಲಾವಿದರ ಮಾಶಾಸನ ದೊರೆಯುತ್ತಿತ್ತು. ಶ್ರೀಕೃಷ್ಣ ಪಾರಿಜಾತ ಕ್ಷೇತ್ರಕ್ಕೆ ಇವರ ಸೇವೆ ಸ್ಮರಣೀಯವಾದದ್ದು. ಆದರೆ ಇವರು ದಿನಾಂಕ: ೦೩-೦೬-೨೦೧೫ ರಂದು ತಮ್ಮ ಕಲೆಯ ಲೋಕವನ್ನು ಬಿಟ್ಟು ವಿಧಿವಶರಾದರು. ಇವರು ಮಾಡಿದ ಕಲಾಸೇವೆ ಜನರ ಮನಸ್ಸಿನಲ್ಲಿ ಅಜರಾಮರಾಗಿ ಉಳಿದಿದೆ. ಇದಲ್ಲದೆ ಹಲವಾರು ಶಿಷ್ಯ ಬಳಗವನ್ನು ಈ ನಾಡಿಗೆ ಬಿಟ್ಟು ಹೋಗಿದ್ದಾರೆ.

೪.೫.೧೦. ಶ್ರೀ ಗೋವಿಂದಪ್ಪ ಪತ್ತಾರ :

ಶ್ರೀಕೃಷ್ಣ ಪಾರಿಜಾತ ಬಯಲಾಟದ ಮುಖ್ಯಪಾತ್ರದಾರಿಗಳಿಗೆ ಮೆರಗು ಕೊಡುವ ಆಟದ ಯಶಸ್ಸಿಗೆ ಕಾರಣಕರ್ತರು ಹಿಮ್ಮೇಳ ಕಲಾವಿದರು. ಈ ಸಂಗೀತ ಬಳಗದಲ್ಲಿ ತನ್ನದೇಯಾದ ವಿಶೇಷವಾದ ಸಾಧನೆ ಮಾಡಿದ ನಮ್ಮ ನಾಡಿನ ತಬಲಾ ವಾದಕ ಶ್ರೀ ಗೋವಿಂದಪ್ಪ ದುಂಡಪ್ಪ ಪತ್ತಾರ. ಇದು ಒಂದು ದೈತ್ಯ ಪ್ರತಿಭೆ ಎಂದರೆ ತಪ್ಪಾಗಲಾರದು.

ಶ್ರೀಯುತ ಗೋವಿಂದಪ್ಪ ದುಂಡಪ್ಪ ಪತ್ತಾರವರು ದಿನಾಂಕ: ೦೫-೦೩-೧೯೫೯ ರಂದು ಸೊನ್ನ ಗ್ರಾಮದಲ್ಲಿ ಜನಿಸಿದರು. ಈಗ ಇವರಿಗೆ ೬೦ ವರ್ಷ ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಶ್ರೀ ಗೋವಿಂದಪ್ಪರವರು ಬಾಲ್ಯದಲ್ಲಿಯೇ ಸಂಗೀತದ ಒಲವು ಬೆಳೆಯಿಸಿಕೊಂಡವರು.

ಏಕೆಂದರೆ, ಅವರ ತಂದೆಯವರು ಕೂಡ ಹಾರ್ಮೋನಿಯಂ ಹಾಗೂ ತಬಲಾವಾದಕರಾಗಿದ್ದವರು. ತಂದೆಯನ್ನು ಮೀರಿಸುವಂಥ ಸಾಧನೆಯನ್ನು ಮಾಡಿದವರು. ಅವರ ಸಂಗೀತದ ಮೊದಲ ಗುರು ದಿ. ದುಂಡಪ್ಪ ಪತ್ತಾರವರು. ನಂತರ ದಿ. ಶಂಕರೆಪ್ಪ ಹೂಗಾರ, ಸಾ: ಗದ್ದನಕೇರಿ ಇವರಿಂದ ಸಂಗೀತ ವಿದ್ಯೆಯನ್ನು ಕಲಿತರು. ಈಗ ತಮ್ಮದೇಯಾದ ಶಿಷ್ಯ ಬಳಗವನ್ನು ತಯಾರು ಮಾಡಿದ್ದಾರೆ. ಅಂತಹವರಲ್ಲಿ ಸಿದ್ದು ಮಾಳಿ, ಸಾ: ನಿಡೋಣಿ ಅವರು ಪತ್ತಾರವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದಾರೆ.

ಶ್ರೀ ಗೋವಿಂದಪ್ಪನವರು ಸಕಲ ಕಲೆಯನ್ನು ಬಲ್ಲವರು. ಮುಖ್ಯವಾಗಿ ತಬಲಾ ವಾದಕರು ಆಗಿದ್ದರೂ ಕೂಡಾ ಪಾರಿಜಾತದ ಪಾತ್ರದಾರಿಗಳ ಆಕಸ್ಮಿಕ ಅನುಪಸ್ಥಿತಿಯಲ್ಲಿ ಅವರ ಪಾತ್ರಕ್ಕೆ ಜೀವ ತುಂಬಿ ಸೈ ಎನಿಸಿಕೊಂಡವರು. ಉದಾಹರಣೆಗೆ, ಸತ್ಯಭಾಮ, ಕೊರವಂಜಿ ಪಾತ್ರಗಳನ್ನು ಅದ್ಭುತವಾಗಿ ನಿರ್ವಹಿಸುತ್ತಿದ್ದರು. ಇಂದು ಹಾರ್ಮೋನಿಯಂ ಮಾಸ್ತರರಾಗಿ, ತಾಳವಾದಕರಾಗಿ ಹಾಡುಗಾರಿಕೆ, ಅಭಿನಯದಲ್ಲೂ ತಮ್ಮದೇಯಾದ ಛಾಪು ಮೂಡಿಸಿದ್ದಾರೆ. ಸತತವಾಗಿ ೩೫ ವರ್ಷಗಳಿಂದ ದಣಿವರಿಯದ ಕಲಾಸೇವೆಯನ್ನು ಮಾಡಿಕೊಂಡು ಬಂದಿರುತ್ತಾರೆ.

ಮೊದಲಿಗೆ ಶ್ರೀಯುತರು ತಮ್ಮದೇಯಾದ ರಾಘವೇಂದ್ರ ಶ್ರೀಕೃಷ್ಣ ಪಾರಿಜಾತ ಕಂಪನಿ, ಸೊನ್ನ ಎಂಬ ಕಂಪನಿಯನ್ನು ತೆರೆದು ಸತತವಾಗಿ ೨೦ ವರ್ಷಗಳ ಕಾಲ ಕರ್ನಾಟಕದ ತುಂಬೆಲ್ಲಾ ತಮ್ಮ ಪಾರಿಜಾತವನ್ನು ಪ್ರದರ್ಶಿಸಿದ್ದಾರೆ. ನಂತರದಲ್ಲಿ ಹಲವಾರು ಕಾರಣಗಳಿಂದಾಗಿ ಕಂಪನಿ ಮುಚ್ಚಲ್ಪಟ್ಟಿತ್ತು. ಸಂಗೀತದ ಗೀಳು ಹಚ್ಚಿಕೊಂಡ ಅವರು ಸುಮ್ಮನೆ ಕೂರದೆ ಹೊಟ್ಟೆ ಹೊರೆಯಲು ಮಕ್ಕಳನ್ನು ಸಾಕಲು ಅನಿವಾರ್ಯವಾಗಿ ಶಿರೋಳದ ಮಲ್ಲವ್ವ ಹುಗ್ಗೆನ್ನವರ ಪಾರಿಜಾತ ಕಂಪನಿಯಲ್ಲಿ ತಬಲಾವಾದಕರಾಗಿ ೧೫ ವರ್ಷ ಸೇವೆ ಮಾಡಿದರು.

ಶ್ರೀ ಗೋವಿಂದ್ಪನವರು ಪಾರಿಜಾತದ ಕಂಪನಿಯು ಮುಚ್ಚಿದಾಗ ನಿಲ್ಲಲು ನೆಲೆಯಿಲ್ಲದೆ ಹೊಟ್ಟೆಗೆ ಹಿಟ್ಟುಯಿಲ್ಲದೆ ನಿರಂತವಾಗಿ ಅಲೆದಾಡಿದರು. ಬದುಕಲು ಹಾಗೂ ಕುಟುಂಬವನ್ನು ಬದುಕಿಸಲು ಅಂತಹ ಪರಿಸ್ಥಿತಿಯಲ್ಲೂ ಕೂಡಾ ಕಲಾಸೇವೆಯನ್ನು ಬಿಡಲಿಲ್ಲ. ಸೇವೆಯನ್ನು ಮಾಡುತ್ತಾ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಾ ಒಳ್ಳೆಯ ಸ್ಥಾನಮಾನ ಕೊಡುವಲ್ಲಿ ಯಶಸ್ವಿಯಾದರು. ಪಾರಿಜಾತ ಗೀಳನ್ನು ಕಂಡು ಅನೇಕರು ಅನೇಕ ಮಾತನಾಡಿದರು. ಅವರ ಕೊಂಕು ಮಾತುಗಳಿಗೆ ಕಿವಿಕೊಡದೆ ಕುಟುಂಬ ಅವರಿಗೆ ಬೆನ್ನೆಲುಬಾಗಿ ನಿಂತಿತು. ಈಗಲೂ ಕೂಡಾ ಅವರಿಗೆ ಪ್ರೋತ್ಸಾಹ ಸಹಕಾರ ನೀಡುತ್ತಿದ್ದಾರೆ.

*** ಪ್ರಶಸ್ತಿ ಪತ್ರಗಳು ಮತ್ತು ಪುರಸ್ಕಾರಗಳು :**

ಕರ್ನಾಟಕ ವಿಕಾಸ ರತ್ನ ಪ್ರಶಸ್ತಿ, ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಇಂಜಿನೀಯರಿಂಗ್ ಪ್ರತಿಷ್ಠಾನ(ರಿ), ಮಲೆನಾಡ ಉತ್ಸವ ೨೦೧೦ – ಅತ್ಯುತ್ತಮ ತಬಲಾವಾದಕ, ಮೈಸೂರು ದಸರ ೨೦೧೩ – ಅತ್ಯುತ್ತಮ ತಬಲಾವಾದಕ, ಬಾಗಲಕೋಟ ಜಿಲ್ಲಾ ಜಾನಪದ ವೈಭವ ೨೦೧೪–

ಪ್ರಶಂಶನಾ ಪತ್ರ. ಅಖಿಲಭಾರತ ಯಕ್ಷಗಾನ ಬಯಲಾಟ ಸಾಹಿತ್ಯ ಸಮ್ಮೇಳನ ಶಿವಮೊಗ್ಗ ೨೦೧೬, ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ, ದೆಹಲಿ- ಅಭಿನಂದನ ಪ್ರಶಸ್ತಿ-೨೦೧೧, ಕರ್ನಾಟಕ ಕಲಾರತ್ನ ಪ್ರಶಸ್ತಿ ೨೦೧೦ (ಕನ್ನಡ ಚಲನಚಿತ್ರ ಅಮೃತ ವರ್ಷಾಚರಣೆ), ಅಖಿಲ ಭಾರತ ಯಕ್ಷಗಾನ ಬಯಲಾಟ ೨೦೧೩ ಶಿರಸಿ, ಕಲಾಭೂಷಣ ಪ್ರಶಸ್ತಿ ೨೦೧೬, ಗಾನಯೋಗಿ ಶ್ರೀ ಪಂಚಾಕ್ಷರಿ ಕಲಾವಿದರ ಸಂಘ (ರಿ) ಮುಧೋಳ, ಕಲಾಶ್ರೀ ಪ್ರಶಸ್ತಿ ೨೦೧೫, ಅಂತರಾಷ್ಟ್ರೀಯ ಸನಾದಿ ಅಪ್ಪಣ್ಣ ಕಲಾಕಾರರ ಸಂಘ (ರಿ), ಬೀಳಗಿ, ಧಾರವಾಡ ಉತ್ಸವ ೨೦೧೪. ಹೀಗೆ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಪ್ರಶಸ್ತಿ ಪುರಸ್ಕಾರಗಳು ಬಂದರೂ ಬಡತನವನ್ನು ನೀಗಿಸಲು ಆಗಲಿಲ್ಲ. ಇಂತಹ ಕಲಾಪುತ್ರನಿಗೆ ಕೇಂದ್ರ ಸರ್ಕಾರದಿಂದ ಕೊಡಮಾಡುವ ಮಾಶಾಸನ ಬಿಟ್ಟರೆ ರಾಜ್ಯ ಸರ್ಕಾರದಿಂದ ಯಾವುದೇ ಪ್ರೋತ್ಸಾಹಧನ ಇವರಿಗೆ ಬಂದಿಲ್ಲ. ಕಲಾವಿದರ ಬಾಳು ಈ ರೀತಿಯಾದರೆ ನಮ್ಮ ಕರ್ನಾಟಕ ಕಲೆಗಳು ಒಂದಲ್ಲ ಒಂದು ದಿನ ಕಣ್ಮರೆಯಾಗುವ ಕಾಲ ಬಹಳ ದಿನ ಉಳಿದಿಲ್ಲ. ಇನ್ನಾದರೂ ಸರ್ಕಾರಗಳು ಅವರ ಕಲೆಗೆ ಪ್ರೋತ್ಸಾಹ ನೀಡುವ ಮನಸ್ಸು ಮಾಡಬೇಕು.

೪.೫.೧೧. ಶ್ರೀ ಭೀಮಪ್ಪ ಈಶ್ವರಪ್ಪ ಕಂಬಾರ :

ಕನ್ನಡ ನಾಡು ದೇಶದ ಸಂಸ್ಕೃತಿ ಸಂಪ್ರದಾಯಕ್ಕೆ ಹಲವಾರು ಸುಪತ್ರರನ್ನು ಒದಗಿಸುತ್ತಾ ಬಂದಿದೆ. ನಮ್ಮ ನಾಡಿನ ಕಲೆಗಾರರಲ್ಲಿ ಪ್ರತಿಭೆಗಳಿಗೆ ಬಡತನವಿಲ್ಲ. ಸರಾಸರಿ ಜಿಲ್ಲೆಗೊಂದು ಸಾವಿರಾದರೂ ಸಿಗುತ್ತಾರೆ. ಅಂತಹದರಲ್ಲಿ ಶ್ರೀಯುತರಾದ ಭೀಮಪ್ಪ ಈಶ್ವರಪ್ಪ ಕಂಬಾರ ಕೂಡಾ ಒಬ್ಬರು.

ಇವರು ದಿನಾಂಕ: ೦೧-೦೬-೧೯೫೬ ರಲ್ಲಿ ಈಶ್ವರಪ್ಪ ಹಾಗೂ ಲಕ್ಷ್ಮವ್ವ ದಂಪತಿಗಳ ಏಳು ಮಕ್ಕಳಲ್ಲಿ, ಇವರು ಮೂರನೆಯ ಮಗನಾಗಿ ಜನಿಸಿದರು. ಇವರು ಪ್ರಾರಂಭದಲ್ಲಿ ಉತ್ತಮ ಜೀವನ ನಡೆಸೋದಕ್ಕೆ ಕೈಯಲ್ಲಿ ಕಾಸಿರಲಿಲ್ಲ. ವಾಸಕ್ಕೆ ಒಂದು ಒಳ್ಳೆಯ ಮನೆಯೂ ಕೂಡಾ ಇರಲಿಲ್ಲ. ಇವರ ಮೂಲ ಉದ್ಯೋಗ ಕಂಬಾರಿಕೆ ಆಗಿತ್ತು. ಜೊತೆಗೆ ಮೂರ್ತಿ ಕೆತ್ತನೆಯನ್ನು ಮಾಡುತ್ತಿದ್ದರು. ಪ್ರಯತ್ನಪಟ್ಟು ೭ನೇ ತರಗತಿಯವರೆಗೆ ಭೀಮಪ್ಪನವರಿಗೆ ವಿದ್ಯಾರ್ಜನೆ ಮಾಡಿಸಿದರು.

ನಾಟಕವೆಂಬುದು ಸಂಕೀರ್ಣ ಕಲೆ. ಇದರಿಂದ ಸಾಹಿತ್ಯ, ನಿರ್ದೇಶನ ಅಭಿನಯ ಹಾಗೂ ಪ್ರಸಾಧನ ಹಲವಾರು ರಂಗಕಲೆಯ ಅನುಭವಗಳನ್ನು ಹೊಂದಿದವರು. ಇವರು ಮೂಲತಃ ವಿವಿಧ ಪಾತ್ರ ಅಭಿನಯಿಸುತ್ತ ನಂತರ 'ಭಾಗವತ' (ದೂತ) ಪಾತ್ರ ಮಾಡಲಿಕ್ಕೆ ಪ್ರಾರಂಭಿಸಿದರು.

ಮೊಟ್ಟ ಮೊದಲು ಇವರು ಭೀಮಪ್ಪ ರಾಮಪ್ಪ ಬಿರಾದಾರ ಪಾಟೀಲ, ಸಾ: ಕಮಕೇರಿ, ತಾ: ರಾಮದುರ್ಗ ಎಂಬುವರ ಗುರುಮುಖೇನ ಪಾರಿಜಾತ ಕಲಿಯಲಿಕ್ಕೆ ಪ್ರಾರಂಭಿಸಿದರು. ಮೊದಲಿಗೆ ಕೊರವಂಜಿ ಪಾತ್ರ (೧೯೭೦) ವನ್ನು ಪ್ರಾರಂಭಿಸಿದರು. ನಂತರದಲ್ಲಿ ಛಬ್ಬಿ ಶ್ರೀಕೃಷ್ಣ

ಪಾರಿಜಾತ ಕಂಪನಿಯಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸಿದರು. ೧೯೭೫ ರ ನಂತರ ಇವರು ಊರೂರು ಅಡ್ಡಾಡಿ ಬೇರೆ ಬೇರೆ ಶ್ರೀಕೃಷ್ಣ ಪಾರಿಜಾತ ಕಂಪನಿಯಲ್ಲಿ ಭಾಗವಹಿಸುವುದನ್ನು ನೋಡಿದ ಊರಿನ ಜನರು ಇವರಿಗೆ ಊರಲ್ಲಿಯೇ ಕಂಪನಿ ಮಾಡಿ ಅದರಲ್ಲಿ ಭಾಗವಹಿಸಲಿಕ್ಕೆ ಹೇಳಿದರು. ಊರಲ್ಲಿ ಮೂಲತಃ ಅತ್ಯಂತ ಪ್ರಾವೀಣ್ಯತೆಯನ್ನು ಪಡೆದ ವಯೋವೃದ್ಧರಾದ ಸಗರೆಪ್ಪ ಯಾದವಾಡ ಇವರು ಸಕಲ ಕಲಾವಲ್ಲಬರು, ಹಾರ್ಮೋನಿಯಂ, ತಬಲಾ, ತಾಳ ಹಾಗೂ ಶಾಸ್ತ್ರೋಕ್ತದಲ್ಲಿ ಪರಿಣಿತರು. ಇವರ ಪರಂಪರೆಯಲ್ಲಿ ಭೀಮಪ್ಪ, ಸಿದ್ದಪ್ಪ, ಕಮಲಸಾಬ, ದೇವೇಂದ್ರಪ್ಪ ಹಾಗೂ ಊರಿನ ಹಲವಾರು ಹೆಣ್ಣುಮಕ್ಕಳು ಪಾರಿಜಾತ ತರಬೇತಿಯನ್ನು ಪಡೆದುಕೊಂಡರು. ಮುಂದಿನ ದಿನಮಾನಗಳಲ್ಲಿ ಮಲ್ಲಿಕಾರ್ಜುನ ಮುದಕವಿ ಇವರ ಮುಂದಾಳತ್ವದಲ್ಲಿ ಹೊಸ ಕಂಪನಿಯನ್ನು ಹುಟ್ಟುಹಾಕಲಾಯಿತು. ಈ ಕಂಪನಿ ಮುಖಾಂತರ ರಾಜ್ಯ ಅಂತರ್‌ರಾಜ್ಯದಲ್ಲಿ ಕಲಾಪ್ರದರ್ಶನ ನೀಡಿ ಊರಿಗೆ ಕಲಾತಂಡಕ್ಕೆ ಹೆಸರು ತಂದವರು ಭೀಮಪ್ಪ ಕಂಬಾರ. ನಂತರ ಕೃಷ್ಣ ದೇಶಪಾಂಡೆಯವರ ಹತ್ತಿರ ಹೆಚ್ಚಿನ ವಿದ್ಯಾಭ್ಯಾಸ ಮಾಡಿ ವಿಶೇಷ ಭಾಗವತ ಕಲಾವಿದರಾಗಿ ಹೊರಹೊಮ್ಮಿದರು.

ಸಹ ಕಲಾವಿದರಾದ ಮಲ್ಲಮ್ಮ ಹುಗ್ಗೆಣ್ಣವರ, ಸಾ: ಶಿರೋಳ ಹಾಗೂ ಶ್ರೀಕೃಷ್ಣ ಪಾರಿಜಾತ ಕಂಪನಿ, ಸೊನ್ನ ಕಂಪನಿಗಳಲ್ಲಿ ಆಗಾಗ ಕಲಾಸೇವೆಯನ್ನು ನೀಡಿ ನಾಡವರಿಗೆ ಪರಿಚಿತರಾದರು. ಶಾಂತ ಹಲಗತ್ತಿಯಂತಹ ಹಲವಾರು ಕಲಾವಿದೆಯರಿಗೆ ಪಾರಿಜಾತದ ದೀಕ್ಷೆಯನ್ನು ಕೊಟ್ಟಿದ್ದಾರೆ. ಇವರ ಅಖಂಡ ಕಲಾಸೇವೆಯನ್ನು ಕಂಡು ಕರ್ನಾಟಕ ಸರ್ಕಾರ ಮಾಶಾಸನ ನೀಡಿ ಇವರ ಕಲಾಪ್ರತಿಭೆಯನ್ನು ಪ್ರೋತ್ಸಾಹಿಸಿದೆ. ಶ್ರೀಯುತರಿಗೆ ಹಲವಾರು ಪ್ರಶಸ್ತಿ ಪರಸ್ಕಾರಗಳು ಸಂದಿವೆ. ಅಂತಹದರಲ್ಲಿ ವಿಶ್ವೇಶ್ವರಯ್ಯ ಪ್ರತಿಷ್ಠಾನದಿಂದ ಹುಬ್ಬಳ್ಳಿ ಹಬ್ಬದಲ್ಲಿ ಸನ್ಮಾನ ದೊರೆತಿದೆ. ೨೦೦೩ ರಲ್ಲಿ ಸಂಗೀತ ನಾಟಕ ಅಕಾಡೆಮಿ, ಸ್ವರ್ಣ ಜಯಂತಿ, ಫೆಸ್ಟಿವಲ್ ಆಫ್ ಟ್ರೆಡಿಶನಲ್ ಥಿಯೇಟರ್ಸ್ ಆಫ್ ಇಂಡಿಯಾದಲ್ಲಿ ಇವರಿಗೆ ಪ್ರಶಸ್ತಿಗಳು ದೊರೆಕಿವೆ.

೨೦೦೭ ರಲ್ಲಿ ಹಂಪಿ ವಿಶ್ವವಿದ್ಯಾಲಯ, ತಮಿಳು ವಿಶ್ವವಿದ್ಯಾಲಯ, ತೆಲಗು ವಿಶ್ವವಿದ್ಯಾಲಯ (ಹೈದರಾಬಾದ) ಇವೆಲ್ಲ ವಿಶ್ವವಿದ್ಯಾಲಯಗಳು ಪ್ರಮಾಣ ಪತ್ರ ನೀಡಿ ಗೌರವಿಸಿವೆ. ೨೦೧೦ ರಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಸಂಭ್ರಮದಲ್ಲಿ, ೨೦೧೭ ರಲ್ಲಿ ಮೈಸೂರಿನ ಸ್ಪಂದನ ಕಾರ್ಯಕ್ರಮದಲ್ಲೂ ಪ್ರಶಸ್ತಿ, ೨೦೧೪ ರಲ್ಲಿ ಧಾರವಾಡದಲ್ಲೂ ವಿನಯ ಕುಲಕರ್ಣಿ ಅವರಿಂದ ಪ್ರಶಸ್ತಿ ಪುರಸ್ಕಾರ, ಸನ್ಮಾನಗಳು ದೊರಕಿವೆ. ಅಖಿಲ ಕರ್ನಾಟಕ ಮಕ್ಕಳ ಸಾಹಿತ್ಯ ಮತ್ತು ಸಾಂಸ್ಕೃತಿಕ ೪ನೇ ಸಮ್ಮೇಳನದಲ್ಲೂ ಭಾಗವಹಿಸಿ ಕೀರ್ತಿಗೆ ಭಾಜನರಾಗಿದ್ದಾರೆ.

ಮಧ್ಯಪ್ರದೇಶದಲ್ಲಿಯೂ ಕೂಡಾ ಶ್ರೀಕೃಷ್ಣ ಪಾರಿಜಾತ ಆಟ ಪ್ರದರ್ಶಿಸಿ ನಮ್ಮ ನಾಡಿನ ಕೀರ್ತಿಯನ್ನು ಎಲ್ಲೆಡೆ ಬೆಳಗಿಸಿದ್ದಾರೆ. ಶ್ರೀಕೃಷ್ಣ ಪಾರಿಜಾತದಂತಹ ಆಟಗಳು ಸದಾವಕಾಲಗಳಲ್ಲಿಯೂ ಜೀವಂತವಾಗಿರುವಂತೆ ತಮ್ಮ ಜೀವನವನ್ನೇ ಕಲಾಕ್ಷೇತ್ರಕ್ಕೆ ತ್ಯಾಗ ಮಾಡಿದಂತಹ ವ್ಯಕ್ತಿ ಭೀಮಪ್ಪ ಈ. ಕುಂಬಾರ.

೪.೫.೧೨. ಶ್ರೀ ಮಾರುತಿ ಶಂಕ್ರಪ್ಪ ಕಮ್ಮಾರ :

ಕಮ್ಮಾರಿಕೆ, ಬಡಿಗತನ ಕಸುಬಿನ ಮನೆಯಲ್ಲಿ ಹಿರಿಯ ಮಗನಾಗಿ ೨೨/೦೧/೧೯೩೯ ರಂದು ಜನಿಸಿದರು. ಬಡತನದಲ್ಲಿಯೇ ಜೀವನ ಸಾಗಿಸುತ್ತಾ ನಡೆದ ಕುಟುಂಬದಲ್ಲಿ ಹಿರಿಯವನಾದ ಮಾರುತಿ ಕೇವಲ ೪ನೇ ತರಗತಿಯವರೆಗೆ ಓದಿ ಅನಿವಾರ್ಯತೆಗೆ ಒಳಗಾಗಿ ಶಾಲೆಗೆ ವಿದಾಯ ಹೇಳಿದರು.

ಮುಂದೆ ತಂದೆಯೊಂದಿಗೆ ಕೆಲಸ ಕಾರ್ಯಗಳಲ್ಲಿ ಕೈಗೂಡಿಸಿ ಸಹಾಯ ಮಾಡುತ್ತಾ ನಡೆದರು. ಮಾರುತಿಯವರಿಗೆ ಮುಂದೆ ಸಂಗೀತದಲ್ಲಿ ಆಸಕ್ತಿ ಮೂಡಿತು. ಗ್ರಾಮದಲ್ಲಿನ ಗ್ರಾಮದೇವತೆಯ ಗುಡಿಯಲ್ಲಿ ಪ್ರತಿನಿತ್ಯ ಭಜನೆ ಕಾರ್ಯಕ್ರಮ ನಡೆಯುತ್ತಿತ್ತು. ಹನುಮಪ್ಪ ಕಕರಡ್ಡಿ, ಲಕ್ಷ್ಮಣ ಮೇಟಿ, ರಾಯಪ್ಪ ಪೂಜಾರ, ಹನಮಪ್ಪ ದಾಸರ ಇವರೊಂದಿಗೆ ಸೇರಿ ಸುಮಾರು ಎಂಟು ವರ್ಷಗಳ ಕಾಲ ಸುತ್ತಮುತ್ತಲಿನ ಗ್ರಾಮಗಳಲ್ಲಿ ತಾಲೂಕಾ, ಜಿಲ್ಲಾ ಸ್ಥಳಗಳಲ್ಲಿ ಭಜನಾ ಪ್ರದರ್ಶನ ನೀಡಿದರು.

ಇವರ ತಂಡದಲ್ಲಿ ಒಂದಿಬ್ಬರು ಕಲಾವಿದರು ನಿಧನರಾದಾಗ ಭಜನಾ ಸಂಘವು ಮುರಿದು ಹೋಯಿತು. ತದನಂತರ ಪಾರಿಜಾತ ಕಲಿಸುವ ಗುರುಗಳಾದ ಮಳಿಯಪ್ಪ ಬಡಿಗೇರ ಹಾಗೂ ಪಾಂಡುರಂಗ ನಾರಪ್ಪನವರ ಹಾಗೂ ಲಕ್ಷ್ಮಣ ಮಾಸ್ತರರೊಂದಿಗೆ ಸೇರಿ ಪಾರಿಜಾತ ಸಂಘ ಕಟ್ಟಿದರು. ಪಾರಿಜಾತ ಕಂಪನಿಯೊಂದಿಗೆ ಹಲವಾರು ಕಂಪನಿಗಳಲ್ಲಿ ಪಾರಿಜಾತ ಕಲಾವಿದನಾಗಿ ಸೇವೆಗೈದರು.

ಕಲಿಯಬೇಕೆನ್ನುವ ಉತ್ಸಾಹಿ ಯುವಕರಿಗೆ ಈಗಲೂ ಪಾರಿಜಾತ, ಭಜನಾ ಕಲೆಯನ್ನು ಕಲಿಸಬಲ್ಲೆ ಎನ್ನುವ ಉತ್ಸಾಹದಲ್ಲಿ ಇರುವ ಮಾರುತಿಯವರು, ಈಗಲೂ ಜನಪದ ಕಲೆಯ ಉಳಿವಿಗಾಗಿ ಪ್ರಯತ್ನಿಸುತ್ತಿರುವ ಶ್ರೇಷ್ಠ ಕಲಾವಿದರಾಗಿದ್ದಾರೆ.

೪.೫.೧೩. ಬಾಳಪ್ಪ ಪಕೀರಪ್ಪ ಕಣಮುಚನಾಳ :

ಬಾಳಪ್ಪನವರು ಕ್ರಿಶ. ೧೯೪೩ರಲ್ಲಿ ವಿಜಯಪುರ ತಾಲೂಕಿನ ಕಣಮುಚನಾಳದಲ್ಲಿ ಜನಿಸಿದರು. ನಾಲ್ಕನೇಯ ತರಗತಿಯವರೆಗೆ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಓದಿ ಶಾಲೆ ಬಿಟ್ಟರು. ಬಾಲ್ಯದಲ್ಲಿಯೇ ಬಯಲಾಟ ನಾಟಕಗಳ ಗೀಳು ಹಚ್ಚಿಸಿಕೊಂಡು, ಕಲಾಸೇವೆಗೆ ಅಣಿಯಾದರು. ಯುದ್ಧಕಾಂಡ, ವನಕಾಂಡ, ಬಬ್ರುವಾಹನ, ಬಯಲಾಟಗಳಲ್ಲಿ ಪಾತ್ರವಹಿಸಿ ಜನರ ಮೆಚ್ಚುಗೆ ಪಡೆದರು. ಇದಾದ ಮೇಲೆ ಶ್ರೀಕೃಷ್ಣ ಪಾರಿಜಾತ ಆಟದಲ್ಲಿ ವಿವಿಧ ಪಾತ್ರಗಳಲ್ಲಿ ಸುಮಾರು ಆರು ವರ್ಷ ಶ್ರಮಿಸಿದರು. ರೇಣುಕಾ ಯಲ್ಲಮ್ಮ ನಾಟಕದಲ್ಲಿ ತೊಡಗಿ ಆರು ವರ್ಷ ಕಲಾಸೇವೆ ಮಾಡಿದರು. ಇವರು ಹೇಮರೆಡ್ಡಿ ಮಲ್ಲಮ್ಮ ನಾಟಕದಲ್ಲಿ ೨೦ ವರ್ಷ ಪಾತ್ರಧಾರಿಯಾಗಿ ಸೇವೆ ಸಲ್ಲಿಸಿದ್ದಾರೆ.

೧೯೮೭ರ ಸುಮಾರು ಶ್ರೀ ಮಲ್ಲಿಕಾರ್ಜುನ ಭಜನಾ ಸಂಘ ಯೋಗಪುರ ಕಾಲನಿ ವಿಜಯಪುರದಲ್ಲಿ ಸ್ಥಾಪಿಸಿ ಇದೇ ಕಲೆಯಲ್ಲಿ ಶ್ರಮಿಸಿದ್ದಾರೆ. ಇವರ ಈ ಸಂಘದಲ್ಲಿ ಎಂಟು ಜನ ಕಲಾವಿದರಿದ್ದು, ಅವರ ವಿವರ ಈ ಕೆಳಗಿನಂತೆ ಇರುತ್ತದೆ:

೧. ಶ್ರೀ ಮೌನೇಶ ಕಲ್ಲಪ್ಪ ಬಡಿಗೇರ, ವಯಸ್ಸು ೬೪ ಹಿಮ್ಮೇಳ ಗಾಯಕ ಶ್ರೀಯುತ ಬಾಳಪ್ಪನವರು ದಿನಾಂಕ: ೧೩-೦೧-೨೦೦೦ ದಿಂದ ಕರ್ನಾಟಕ ಸರಕಾರದ ಗೌರವ ಮಾಶಾಸನ ಪಡೆಯುತ್ತಿದ್ದಾರೆ.

ಅಡಿ ಟಿಪ್ಪಣಿ

೧. ಡಾ. ಶ್ರೀರಾಮ ಇಟ್ಟಣ್ಣವರ, ಶ್ರೀಕೃಷ್ಣ ಪಾರಿಜಾತ : ಒಂದು ಅಧ್ಯಯನ, ಪು-೭೬

೨. ಡಾ. ಚಂದ್ರಶೇಖರ ಕಂಬಾರ, ಉತ್ತರ ಕರ್ನಾಟಕದ ಬಯಲಾಟಗಳು

೩. ಡಾ. ವೀರೇಶ ಬಡಿಗೇರ, ಸೊನ್ನ ಪಾರಿಜಾತ ಕಂಪನಿ, ಪು-೬೫

೪. ಡಾ. ವೀರೇಶ ಬಡಿಗೇರ, ಕೌಜಲಗಿ ನಿಂಗಮ್ಮ, ಪು-೨೦

೫. ಡಾ. ಸಿ.ಕೆ. ನಾವಲಗಿ, ಕುಲಗೋಡ ದರ್ಶನ

೬. ಡಾ, ಅಶೋಕ ನರೋಡೆ, ಜಾನಪದ ಜಗತ್ತು, ಪು-೨೨೦

೭. ಡಾ. ಶಿವಾನಂದ ಶೆಲ್ಲಿಕೇರಿ, ಪಾರಿಜಾತ ಹಿಮ್ಮೇಳ ಗಾಯಕರು

೮. ಡಾ. ವಿಜಯಕುಮಾರ ಕಟಗಿಹಳ್ಳಿಮಠ, ಹಣತೆಗಳು

ಅಧ್ಯಾಯ : ಐದು

ಪಾಂಚಾಳರಿಗೂ ಹಾಗೂ ಜನಪದ ಕಲೆಗಳಿಗೂ ಇರುವ ಸಂಬಂಧ

೫.೧. ಪ್ರಸ್ತಾವನೆ

೫.೨. ಪಂಚಾಳರು ಮತ್ತು ಜನಪದಕಲೆಗಳ ಸಂಬಂಧ

೫.೨.೧. ದೊಡ್ಡಾಟ

೫.೨.೨. ಸಣ್ಣಾಟ

೫.೨.೩. ಕೃಷ್ಣ ಪಾರಿಜಾತ

೫.೨.೪. ಪಗಡೆ ಆಟ

೫.೨.೫. ಸೂತ್ರದ ಗೊಂಬೆಯಾಟ

೫.೩.ಪಾಂಚಾಳರು : ಕೆಲವು ಹವ್ಯಾಸಿ ಗಾಯಕರ ಕಲೆಗಳು

೫.೩.೧. ಭಜನೆಗಳು

೫.೩.೨. ಕೊಳಲು/ಉಸಿರು

೫.೩.೩. ಲಾವಣಿ ಪದಗಳು

೫.೩.೪. ಹಂತಿ ಪದಗಳು

೫.೩.೫. ಹೋಳಿ ಹಾಡುಗಳು

೫.೪. ಪಾಂಚಾಳರು : ಜನಪದ ಕುಣಿತಗಳು

೫.೪.೧. ಡೊಳ್ಳು ಕುಣಿತ(ಮೇಳ)

೫.೪.೨. ಮೊಹರಂ ಹಬ್ಬದ ಹಾಡು ಹಾಗೂ ಕುಣಿತ

೫.೪.೩. ಪುರವಂತರು (ವೀರಗಾಸೆ)

೫.೪.೪. ಮದ್ದಳೆ ಹಾಗೂ ಇತರ ವಾದ್ಯಗಳು

೫.೪.೫. ಕರಡಿ ಮಜಲು

೫.೫. ಪಾಂಚಾಳರು ದೈವಿ ಆರಾಧನೆಯ ಪದಗಳು

೫.೫.೧. ದೇವಿ ಪೂಜಾ ಮತ್ತು ಕಾಳಿಕಾದೇವಿ ವಿಗ್ರಹ ತಯಾರಿಕೆ

೫.೫.೨. ಪೂಜಾ ವಿಧಾನಗಳು

೫.೫.೩. ಧಾರ್ಮಿಕ ಆಚರಣೆಗಳು

ಅಧ್ಯಾಯ : ೫

ಪಾಂಚಾಳರಿಗೂ ಹಾಗೂ ಜನಪದ ಕಲೆಗಳಿಗೂ ಇರುವ ಸಂಬಂಧ

೫.೧. ಪ್ರಸ್ತಾವನೆ :

ಜನಪದ ಕಲೆಗಳಲ್ಲಿ ವಾದ್ಯಗಳಿಗೆ ಹಾಗೂ ಹಾಡುಗಳಿಗೆ ಅಗ್ರತಾಂಬೂಲ ಯಾವುದೇ ಗಾಯನ ಪ್ರಧಾನ ಕಲೆಯಿರಿಲಿ ಅವುಗಳಿಗೆ 'ವಾದ್ಯವೆ' ಜೀವ ಜೀವಾಳವಾಗಿರುತ್ತದೆ. ಹಾಡುಗಾರರು ದೇವರಲ್ಲಿ ಭಕ್ತಿ ಗೌರವ ಇರುವಷ್ಟೇ ವಾದ್ಯಗಳ ಮೇಲೆಯೂ ಭಕ್ತಿ, ಗೌರವ, ಪ್ರೀತಿ, ನಂಬಿಕೆ ಇಟ್ಟಿದ್ದರು. ಬದುಕಿಗೆ ವಾದ್ಯಗಳ ಕಲೆ ಆಧಾರವಾಗಿದೆ. ಕಾರ್ಯಕ್ರಮದ ಜೀವ ತುಂಬುವ ಸಾಧನಗಳಾಗಿವೆ. ಗಾಯನಕ್ಕೆ ಮುಂಚೆ ವಾದ್ಯಕ್ಕೆ ನಮಸ್ಕರಿಸುತ್ತಾರೆ. ವೃತ್ತಿಗಾಯಕರಿರಲಿ ಹವ್ಯಾಸಿ ಗಾಯಕರಿರಲಿ, ನೃತ್ಯಪಟುಗಳಿರಲಿ ವಾದ್ಯಗಳಿಲ್ಲದೆ ಏನೂ ಇಲ್ಲ. ಪಾಂಚಾಳರು ವಾದ್ಯವೇ ಸರ್ವಸ್ವ ಪಕ್ಕ ವಾದ್ಯಗಳೇ ಉಸಿರೆಂದು ನಂಬಿರುವರು.

ಪಾಂಚಾಳರ ಸೃಜನ ಶೀಲತೆ ನೆಲೆಗಳನ್ನು ಅರ್ಥಮಾಡಿ ಕೊಳ್ಳಬೇಕಾದರೆ, ಮೊದಲಿಗೆ ಜನಪದ ಕಲೆಗಳ ಬಗ್ಗೆ ತಿಳಿದುಕೊಳ್ಳಬೇಕು. ಪಾಂಚಾಳರ ಬದುಕಿನ ಸಮಸ್ತ ಜೀವನಾನುಭಗಳು ಅವರ ಅಭಿವ್ಯಕ್ತಿಯ ವೈವಿಧ್ಯಮಯವಾಗಿರುತ್ತವೆ. ಇಂತಹ ಸಂಸ್ಕೃತಿಯಲ್ಲಿ ರೂಪುಗೊಂಡ ಸಾಹಿತ್ಯ ಪ್ರಕಾರಗಳಲ್ಲಿ ಗೀತ ಸಾಹಿತ್ಯವು ಒಂದು. ಗ್ರಾಮೀಣ ಪ್ರದೇಶಗಳಲ್ಲಿ ಹಳ್ಳಿಯಹಾಡು ಎಂದು ಹೆಸರಾಗಿರುವುದು. ಆದರೆ, ಈ ಗೀತ ಪ್ರಕಾರವು ಅನಕ್ಷರಸ್ಥರ ನಡುವೆ ಹುಟ್ಟಿ ನಿರಂತರವಾಗಿ ಉಳಿದುಕೊಂಡು ಬಂದಿದೆ.

"ಸರಳತೆ ಭಾವತೀವ್ರತೆ ನೇರ ಅಭಿವ್ಯಕ್ತಿ ರೂಪಾಂತರಗಳು ಜನಪದ ಗೀತೆಯ ಮೂಲ ಗುಣಗಳು. ಪಾಂಚಾಳರ ಕುಲಕಸಬುಗಳು ಸೂಕ್ಷ್ಮ ಜ್ಞಾನ ಕೌಶಲ್ಯಗಳಿಂದ ಕೂಡಿರುತ್ತವೆ. ಅವುಗಳ ಜೊತೆಗೆ ಇತರೆ ಹವ್ಯಾಸಿ ಕಲೆಗಳನ್ನು ಮೈಗೂಡಿಸಿಕೊಂಡಿರುವ ಉದಾ: ಜನಪದ ಹಾಡುಗಾರನೊಬ್ಬ ಏಕಕಾಲದಲ್ಲಿ ಕವಿ, ಗಾಯಕ, ಶೋತೃ, ಇವು ಮೂರು ಆಗಿರುತ್ತಾನೆ. ಎಂದು ಹೇಳುತ್ತಾರೆ.[೧]

ಅಭಿನಯ, ಕುಣಿತ, ಸಂಗೀತ, ಶಿಲ್ಪ, ಚಿತ್ರ ಮುಂತಾದ ಕರಕುಶಲತೆಗಳು ಲಲಿತ ಕಲೆಗಳಲ್ಲಿ ಸೇರಿಕೊಳ್ಳುತ್ತವೆ. ಪರಂಪರೆ ಆಚರಣೆಯ ಹಿನ್ನೆಲೆಯಲ್ಲಿ ಕಲೆಗಿಂತ ಧಾರ್ಮಿಕ ಕಲೆಯೂ ಬಹುಮುಖ್ಯ. ಅದರ ಉದ್ದೇಶವೇ ಜನರನ್ನು ಆಕರ್ಷಿಸುವುದು ಆಗಿದೆ. ಕಂಚು, ಕಟ್ಟಿಗೆ, ಕಬ್ಬಿಣ, ಕಲ್ಲು, ಹಾಗೂ ಬೆಳ್ಳಿ, ಬಂಗಾರ ಮುಂತಾದ ಪ್ರಕೃತಿಯ ವಸ್ತುಗಳನ್ನು ಬಳಸಿಕೊಂಡು ತಮ್ಮ ಜ್ಞಾನ ಕೌಶಲ್ಯಗಳಿಂದ ತಯಾರಿಸಿದ ವಸ್ತುಗಳು ಚಮತ್ಕಾರದಿಂದ ಕೂಡಿರುತ್ತವೆ.

ಪಾಂಚಾಳ ಸಮುದಾಯದ ಜನಪದ ಸಾಹಿತ್ಯ ಒಂದು ನಾಡಿನ ಶಕ್ತಿ, ಜನಪದರ ಬದುಕಿನ ಪ್ರತಿಬಿಂಬ. ಸಂಸ್ಕೃತಿಯ ವಾಹಿನಿ ಅನೇಕ ವರ್ಷಗಳ ಕಾಲ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಬರುತ್ತದೆ. ಅನುಭವ ಚಿಂತನೆಯ ಜನಪದರ ಬೌದ್ಧಿಕ ವಿಚಾರಗಳು ಸಾಹಿತ್ಯ ಕಲೆಗಳಾಗಿರುವುದು. ದೊಡ್ಡಾಟ, ಸಣ್ಣಾಟ, ಕೃಷ್ಣಪಾರಿಜಾತದಂತಹ ಹವ್ಯಾಸಿ ಗಾಯಕರಾಗಿ, ಹವ್ಯಾಸಿ ಜನಪದ ಕುಣಿತಗಳಲ್ಲಿ ದೈವಿ ಆರಾಧನಾ ಕಾರ್ಯಗಳಲ್ಲಿ ಹಾಗೂ ಮೊದಲಾದ ಮನೋರಂಜನೆಯ ಜನಪದ ಪ್ರಕಾರಗಳಲ್ಲಿ ಪಂಚಾಳ ಸಮುದಾಯದವರು ಭಾಗಿಯಾಗಿರುವರು. ಶಿಲ್ಪ ಮತ್ತು ಶಿಲ್ಪಿಯು ವಿಜ್ಞಾನ ಮತ್ತು ತಂತ್ರಜ್ಞಾನವಾದಂತೆ, ಕಮ್ಮಾರನಿಗೆ ಘನತೆ ತಂದುಕೊಟ್ಟ ಲೋಹ ಕಬ್ಬಿಣ, ಪತ್ತಾರನು ಬೆಳ್ಳಿ, ಬಂಗಾರದ ಕುಶಲತೆಗೆ ಹೆಸರಾದಂತೆ ಕಂಚುಗಾರನು ತಾಮ್ರ, ಹಿತ್ತಾಳೆ, ಸತುನ್ನು ಕರಗಿಸಿ ಜೇಡಿ ಮಣ್ಣಿನ ಉಸುಕಿನಲ್ಲಿ ಹಾಕಿ ಅಚ್ಚುಗಳಿಂದ ವಿವಿಧ ವಸ್ತುಗಳನ್ನು ತಯಾರಿಸುವರು. ಬಡಿಗನು ಕಟ್ಟಿಗೆಯನ್ನು ಬಳಸಿಕೊಂಡು ಕರಕೌಶಲ್ಯಗಳ ಮೂಲಕ ಅನೇಕ ಉಪಯೋಗದ ವಸ್ತುಗಳನ್ನು ತಯಾರಿಸುವನು. ಆಯಾಕಾಲದ ಜನರ ಆಸೆ ಆಕಾಂಕ್ಷೆ, ಪ್ರಯೋಗಶೀಲತೆ, ಧ್ಯೇಯ ಸಾಧನೆಗಳು ಜೀವನ ಮಾರ್ಗಗಳ ಚಹರೆಗಳನ್ನು ಅವರ ಅವಶೇಷಗಳಿಂದ ತಿಳಿಯಬಹುದಾಗಿದೆ ಎಂದು ಡಾ. ವೀರೇಶ ಬಡಿಗೇರ ಹೇಳುತ್ತಾರೆ.[೨]

ಪ್ರಾಚೀನ ಕಾಲದ ಪಾಂಚಾಳರ ಜನಪದ ಕಲೆಗಳ ಬಗ್ಗೆ ಶಾಸನಗಳ ಮೂಲಕ ಅಲ್ಪಸ್ವಲ್ಪ ತಿಳಿದುಬರುತ್ತದೆ. ನಂತರ ೧೧-೧೨ ನೇ ಶತಮಾನದಲ್ಲಿ ಕನ್ನಡ ಸಾಹಿತ್ಯಕ್ಕೆ ವಚನ ರೂಪವನ್ನು ಕೊಡುಗೆಯಾಗಿ ನೀಡಿದ ಶಿವಶರಣರು ಜನಪದ ಸಂಸ್ಕೃತಿಯಿಂದಲೇ ಉದಯಿಸಿ ಬಂದವರು. ಕೆಳವರ್ಗಕ್ಕೆ ಸೇರಿದ ಕಂಬಾರ, ಪತ್ತಾರ, ಕಂಚುಗಾರ, ಬಡಿಗೇರ, ಶಿಲ್ಪಿ ವೃತ್ತಿ ಸಮುದಾಯದಿಂದ ಬಂದವಚನಕಾರರು ಗ್ರಾಮೀಣ ಬದುಕಿನಿಂದ ತಮ್ಮ ಅಭಿವ್ಯಕ್ತಿಯನ್ನು ಹೊರಹೊಮ್ಮಿಸಿದವರು. ಹಬ್ಬ-ಹರಿದಿನ, ಜಾತ್ರೆ, ಉತ್ಸವಗಳಲ್ಲಿ ಹಾಡು-ಕುಣಿತ, ಧರ್ಮ, ನಂಬಿಕೆ, ಗಾದೆ, ಒಗಟು, ಒಡಪು, ಮೊದಲಾದ ತಮ್ಮ ಜನಪದ ಕಲೆಗಳನ್ನು ವಚನಗಳಲ್ಲಿ ಅನುಭವ ಮತ್ತು ಅಭಿವ್ಯಕ್ತಿಗಳೆರಡೂ ಒಂದೇ ಆಗಿದ್ದವು. ಜನಪದರ ದಟ್ಟ ಪ್ರಭಾವವು ವಚನಕಾರರ ಕಾಲದಲ್ಲಿದ್ದ ಪಾಂಚಾಳರ ಕಲೆಗಳಲ್ಲಿ ಗೋಚರಿಸುತ್ತವೆ. ಜನಪದ ಕಲೆಗಳ ಒಡನಾಟವನ್ನು ಪಾಂಚಾಳರಲ್ಲಿ ಕಾಣುತ್ತೇವೆ.

೫.೨. ಪಂಚಾಳರು ಮತ್ತು ಜನಪದಕಲೆಗಳ ಸಂಬಂಧ :

೫.೨.೧. ದೊಡ್ಡಾಟ :

ಕರ್ನಾಟಕದ ನಾಟಕ ಕಲೆಗಳಲ್ಲಿ ಎರಡು ಪ್ರಕಾರಗಳಿವೆ. ಅವು ಪಡವಲಪಾಯ ಮತ್ತು ಮೂಡಲಪಾಯ ಎಂದು ಕರೆಯುವರು. ಎರಡರಲ್ಲಿಯೂ ಒಂದೆಯಾದರೂ ಕರಾವಳಿಯ ಯಕ್ಷಗಾನ, ಬಯಲುಸೀಮೆಯ ದೊಡ್ಡಾಟಗಳೆಂಬ ಪ್ರಾದೇಶಿಕ ನೆಲೆಯಲ್ಲಿ ಬೇರೆಯಾಗಿ ಕಾಣುತ್ತವೆ. ಮೂಲದ್ರಾವಿಡ ರಂಗಭೂಮಿಯಿಂದ ಭಿನ್ನತೆ ಪಡೆದುಕೊಂಡಿವೆ. ಸಂಗೀತದ ವಾದ್ಯಗಳು, ಹಾಡುವ ಲಯ, ಭಾಷಾಶೈಲಿ, ವೇಷಭೂಷಣಗಳಲ್ಲಿ ಭಿನ್ನತೆಗಳಿವೆ. ಆದ್ದರಿಂದ ಉತ್ತರ ಕರ್ನಾಟಕದಲ್ಲಿ ಆಟ ಎಂದರೆ ಬಯಲಾಟ, ಮೂಡಲಪಾಯದ ಆಟ, ದೊಡ್ಡಾಟ ಎಂದು ಕರೆಯುತ್ತಾರೆ. ಜನಪದ ರಂಗಭೂಮಿಯಲ್ಲಿ ಹೊಸ ಹೊಸ ಪ್ರಕಾರದ ಆಟಗಳು, ನಾಟಕ ಉದಯಿಸಿದಾಗ ಮೂಲ ಪರಂಪರೆಯಿಂದ ಬಂದ ಆಟವನ್ನು ಬೇರ್ಪಡಿಸಿದಾಗ ದೊಡ್ಡಾಟ, ಸಣ್ಣಾಟ, ಕೃಷ್ಣಪಾರಿಜಾತ ಮುಂತಾದವುಗಳ ಹೆಸರನ್ನು ಗುರುತಿಸಲಾಯಿತು.

ದೊಡ್ಡಾಟಗಳಲ್ಲಿ ಕಥಾವಸ್ತು ಪೌರಾಣಿಕವಾಗಿರುತ್ತದೆ. ಇಲ್ಲಿ ವೀರರೌದ್ರ ರಸ ಪ್ರಧಾನವಾಗಿರುತ್ತದೆ. ಕಾಳಗ ಪುರುಷರ ಕುಣಿತಗಳು, ಭರ್ಜರಿಯಾದ ವೇಷಭೂಷಣಗಳು, ಭವ್ಯವಾದ ರಂಗಸಜ್ಜಿಕೆ, ಉದ್ದವಾದ ಮಾತುಗಾರಿಕೆ, ಸಂಸ್ಕೃತ ಭೂಯಿಷ್ಠ ಛಾಯೆ ತುಂಬಿರುತ್ತದೆ. ದೊಡ್ಡಾಟದಲ್ಲಿ ಅವಲೋಕಿತ ಸನ್ನಿವೇಶಗಳು ದೇವ, ದೈತ್ಯ, ರಾಕ್ಷಸ, ವೀರಾಧಿವೀರ, ಕಿನ್ನರ ಕಿಂಪುರುಷರು ಮುಂತಾದ ಅತಿಮಾನುಷ ಅದ್ಭುತ ಪಾತ್ರಗಳ ಸೃಷ್ಟಿಯ ಆಟವೇ ದೊಡ್ಡಾಟ ಎಂದು ನಂಬಿರುವರು. ಉದಾ: ಬಾಗಲಕೋಟೆ ತಾಲೂಕಿನ ಮಲ್ಲಾಪುರ ಗ್ರಾಮದಲ್ಲಿ ದೊಡ್ಡಾಟ ಆಟ ಆಡುವ ಕಂಪನಿ ಕಲಾವಿದರಿದ್ದರು. ಇವಾಗ ಯಾವ ಕಲಾವಿದರೂ ಇಲ್ಲ. ಪ್ರಸ್ತುತವಾಗಿ ದೊಡ್ಡಾಟದ ಸ್ಥಾನದಲ್ಲಿ ಕೃಷ್ಣಪಾರಿಜಾತದಂತಹ ಆಟಗಳು ಬಂದಿವೆ. ಗೋಕಾಕ ತಾಲೂಕಿನ ಕುಲಗೋಡಿನಲ್ಲಿ ದೊಡ್ಡಾಟ ಕಲಾವಿದರು ಇದ್ದರು. ನಂತರ ಕುಲಗೋಡ ತಮ್ಮಣ್ಣನು ಶ್ರೀಕೃಷ್ಣ ಪಾರಿಜಾತದ ಕಡೆ ವಾಲಿದರು ಇದರಿಂದ ದೊಡ್ಡಾಟಗಳು ಉತ್ತರ ಕರ್ನಾಟಕದಲ್ಲಿ ನಿಂತುಹೋದವು.

೫.೨.೨. ಸಣ್ಣಾಟ :

"ಉತ್ತರ ಕರ್ನಾಟಕದಲ್ಲಿ ಕ್ರಿ.ಶಕ ಸುಮಾರು ೧೮೫೦ ರಿಂದ ಈಚೆಗೆ ಬೆಳೆದು ಬಂದಿರುವ ಒಂದು ವಿಶಿಷ್ಟ ರಂಗ ಪ್ರಕಾರ. ಅದಕ್ಕಿಂತ ಹಿಂದೆ ಸಣ್ಣಾಟ ಇಲ್ಲ ಎಂದು ವಿದ್ವಾಂಸರ ಸಂಶೋಧನೆಗಳಿಂದ ತಿಳಿಯುತ್ತದೆ".[೩] ಸಣ್ಣಾಟದ ಅಸ್ತಿತ್ವ ೧೯ನೇ ಶತಮಾನದಲ್ಲಿ ಉನ್ನತ ಸ್ಥಾನದಲ್ಲಿದ್ದು, ಕರ್ನಾಟಕಕ್ಕೆ ಮಹಾರಾಷ್ಟ್ರದ ತಮಾಷಾ ನಾಟಕಗಳ ಪ್ರೇರಣೆ ಆಗಿದೆ.[೪]

ಯುದ್ಧದ ವಸ್ತುಗಳನ್ನು ಹೊಂದಿದ ದೊಡ್ಡ ಆಟಗಳು ಜನರಿಗೆ ಬೇಸರ ತಂದಿರಬೇಕು. ಜನಸಾಮಾನ್ಯರ ಮನಸ್ಥಿತಿಗೆ ಹತ್ತಿರವಾದ ಚಿಕ್ಕ-ಚಿಕ್ಕ ಸನ್ನಿವೇಶಗಳನ್ನು ಆಧರಿಸಿ ಕೌಟುಂಬಿಕ

ನೀತಿ, ಭಕ್ತಿ, ಶೃಂಗಾರ, ಹಾಸ್ಯ ರಸಗಳು ಹೇರಳವಾಗಿ ಬಯಸಿದ್ದರಿಂದ ಬೇಗ ಜನಪ್ರಿಯವಾದವು. ಸಣ್ಣಾಟಗಳು ಮೊದಲು ಗೀತರೂಪಕ, ನಂತರ ಕುಣಿತ, ಹಿಮ್ಮೇಳ, ಮುಮ್ಮೇಳ, ಪಾತ್ರಗಳ ಹಾವ ಭಾವದಿಂದ ಸಂಭಾಷಣೆಗೆ ತಿರುಗಿತು. ಉದಾಹರಣೆಗೆ: ಬೆಳಗಾವಿ, ಬಾಗಲಕೋಟೆ, ವಿಜಯಪುರಗಳಲ್ಲಿ ಪಾಂಚಾಳ ಕಲಾವಿದರಿಂದ ಬೆಳೆದುಬಂತು. ಮೊದಲು ಸಂಗ್ಯಾ-ಬಾಳ್ಯ ಸಣ್ಣಾಟವನ್ನು ಬೈಲಹೊಂಗಲ ತಾಲೂಕಿನ ಶ್ರೀ ಮಹದೇವಪ್ಪ ಪತ್ತಾರ ಮಾಸ್ತರರು ರಚಿಸಿದರು. ಅದರಂತೆ ಹಳ್ಳಿಯಿಂದ ದಿಲ್ಲಿಗೆ ಶಿವಶರಣ ಭಕ್ತಿಪ್ರಧಾನ ಸಣ್ಣಾಟ ನಾಟಕಗಳು ಉದಯಿಸಿದವು. ಸಣ್ಣಾಟ ಚಿಕ್ಕ ಕಥೆ ಸ್ವಲ್ಪ ಸಮಯ. ಇದರಿಂದ ಕಲಾಸಕ್ತರಿಗೆ ಬೇಗ ಹಿಡಿಸಿತು. ಸಣ್ಣಾಟ ರಂಗಭೂಮಿಗೆ ಕಲಾತಂಡಗಳು ಎಲ್ಲೆಂದರಲ್ಲಿ ಹುಟ್ಟಿದವು. ಪಾಂಚಾಳ ಕಲಾವಿದರು ಈ ಸಣ್ಣಾಟದ ರಂಗಕಲೆಯಲ್ಲಿ ತೊಡಗಿಸಿಕೊಂಡರು. ತಾಳ, ಡಪ್ಪು, ಹಾರ್ಮೋನಿಯಂ, ಹಿಮ್ಮೇಳ, ಮುಮ್ಮೇಳದಲ್ಲಿ ಭಾಗವಹಿಸಿದರು.

'ಡಪ್ಪು' ಜನಪದ ಕಲೆಗೆ ಹಲವಾರು ಬಗೆಯಲ್ಲಿ ಪೋಷಕನ ಸ್ಥಾನದಲ್ಲಿ ನಿಂತಿದೆ.ಕೆಲವು ಬಯಲಾಟಗಳು ಡಪ್ಪಿನಾಟವೆಂದೇ ಪ್ರಚಾರಗೊಂಡಿವೆ. ಗೀಗೀಮೇಳ, ಕೋಲಾಟ, ಲೇಜಿಮ್‌ಗಳಲ್ಲಿ ಡಪ್ಪು ಬೇಕೇ ಬೇಕು. ಲಾವಣಿಯಲ್ಲಿ 'ಡಪ್ಪಿನ ಮೇಲೆ ಚಾಪು ಹಾಕುವುದು" ಎಂಬ ಮಾತು ಪದೇ ಪದೇ ಬಳಕೆಯಾಗುತ್ತದೆ. ಇದು ಡಪ್ಪಿನ ಪ್ರಾಮುಖ್ಯತೆಯನ್ನು ಸಾರುತ್ತದೆ.

ದಪ್-ದಪ್-ದಪ್ ಎಂಬ ನಾದ ಹೊರಹೊಮ್ಮಿಸುವುದರಿಂದ ಇದನ್ನು 'ದಪ್ಪು' ಎಂದು ಕರೆಯುತ್ತಾರೆ.

ಡಪ್ಪು ಸ್ವತಂತ್ರವಾಗಿಯೂ ಬಳಕೆಯಾಗುತ್ತದೆ. ಹಾಗೆ ಗೀಗೀ ಮೇಳ, ಕೋಲಾಟ. ಅಲಾವಿ ಕುಣಿತ, ಬಯಲಾಟಗಳಿಗೆ ಪೂರಕವಾಗಿಯೂ ಬಳಕೆಗೊಳ್ಳುತ್ತದೆ. ಅತ್ಯಂತ ಜನಪ್ರಿಯ ವಾದ್ಯಗಳಲ್ಲಿ 'ಡಪ್ಪು' ಕೂಡ ಮುಂಚೂಣಿಯಲ್ಲಿ ನಿಲ್ಲುತ್ತದೆ.

೫.೨.೩. ಕೃಷ್ಣ ಪಾರಿಜಾತ :

ಜನಪದ ಕಲೆಗಳಲ್ಲಿ ಶ್ರೀಕೃಷ್ಣ ಪಾರಿಜಾತವನ್ನು 'ರಾಜನೆಂದು' ಕರೆಯುವರು. ಉತ್ತರ ಕರ್ನಾಟಕದ ತುಂಬಾ ಚಿರ ಪರಿಚಿತವಾದ ಶ್ರೀಕೃಷ್ಣ ಪಾರಿಜಾತವು ಜನಸಾಮಾನ್ಯರ ಹತ್ತಿರಕ್ಕೆ ಬಂದಿರುವದು. ಅವರ ಬದುಕಿನ ಭಾವನೆಗಳನ್ನು ನಾಟಕದ ಮೂಲಕ ಸುಖ-ದುಃಖಗಳನ್ನು ಹಂಚಿಕೊಳ್ಳುವರು. ಪಾಂಚಾಳ ಕಲಾವಿದನಾದ ಕುಲಗೋಡು ತಮ್ಮಣ್ಣನಿಂದ ಶ್ರೀಕೃಷ್ಣ ಪಾರಿಜಾತ ಹುಟ್ಟಿತು. ಪ್ರದರ್ಶನ ಕಲೆಗಳಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಪಾಂಚಾಳರು ಕುಲಕಸುಬುಗಳನ್ನು ಬೆಳಿಗ್ಗೆ ಇಲ್ಲವೇ ಸಾಯಂಕಾಲ ಮಾಡಿ ಮುಗಿಸುವರು. ಇನ್ನುಳಿದ ಸಮಯವನ್ನು ಪಾರಿಜಾತ ಕಲಿಕೆ, ತಾಳ, ಹಾರ್ಮೋನಿಯಂ, ತಬಲಾ ಮುಂತಾದ ಕಲೆಗಳಲ್ಲಿ ಗುರುತಿಸಿಕೊಳ್ಳುವರು. ಪಾಂಚಾಳರು ಬೆಳಗಾವಿ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳಲ್ಲಿ ಜನಪದ ಕಲೆಗಳನ್ನು ಮೈಗೂಡಿಸಿಕೊಂಡಿರುವರು. ಶ್ರೀಕೃಷ್ಣಪಾರಿಜಾತ ಮಹಾಭಾರತದಲ್ಲಿ ಬರುವ ಶ್ರೀಕೃಷ್ಣನ ಅವತಾರಗಳನ್ನು ನಾಟಕರೂಪದಲ್ಲಿ ಪ್ರದರ್ಶನಗೊಳ್ಳಿಸುವುದರಲ್ಲಿ ಸಿದ್ಧಹಸ್ತರು. ಉದಾಹರಣೆಗೆ ಲೋಕಪೂರ ಶ್ರೀಕೃಷ್ಣ

ದೇಶಪಾಂಡೆ ನಾಟಕ ಕಂಪನಿ, ಕೌಜಲಗಿ ನಿಂಗವ್ವ ಶ್ರೀಕೃಷ್ಣ ಪಾರಿಜಾತ ಕಂಪನಿ, 'ಸೊನ್ನಾ ಗ್ರಾಮದ ನಾರಾಯಣ ಗೋ ಪತ್ತಾರ 'ಶ್ರೀ ಕಾಳಿಕಾ ನಾಟಕ ಕಂಪನಿ' ಮುಂತಾದವುಗಳು.

ಶ್ರೀಕೃಷ್ಣ ಪಾರಿಜಾತವು ಒಂದು ಅದ್ಭುತ ಕಲೆಯಾಗಿದೆ. ಅದರಲ್ಲಿ ಬರುವ ಕೃಷ್ಣ, ನಾರದ, ರುಕ್ಮೀಣಿ, ಸತ್ಯಭಾಮ, ಕೊರವಂಜಿ ಮುಂತಾದ ಪಾತ್ರಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತ ಸಾಗುತ್ತವೆ. ವೇಷಭೂಷಣ, ಭಾಷೆ, ಶೈಲಿ, ವಾದ್ಯಗಳ ಲಯ, ಜನಪದ ವಿಚಾರ-ವಿನಿಮಯಕ್ಕೆ ಸಾಕ್ಷಿಯಾಗುತ್ತದೆ. ಪಾಂಚಾಳ ಸಮುದಾಯದ ನಾರಾಯಣ ಗೋ ಪತ್ತಾರ, ಸೋನ ಇವರು ಪೆಟಿಗೆ ಮಾಸ್ತರರಾಗಿ ಕೃಷ್ಣ, ಕೊರವಂಜಿ ಪಾತ್ರಗಳನ್ನು ನಿರ್ವಹಿಸಿದ ರೀತಿ ರೋಮಾಂಚನವಾದದ್ದು.

ಕೊರವಂಜಿ ಕಲೆ ಜನಪದ ಕಲೆಯಾಗಿದ್ದು, ನಂತರ ಶಾಸ್ತ್ರೀಯ ನೃತ್ಯ, ನಾಟಕ ಪ್ರಕಾರವಾಗಿ ಬೆಳವಣಿಗೆಯಾಯಿತು. ಕೊರವಂಜಿ ಜಾತ್ರೆ-ಉತ್ಸವಗಳಲ್ಲಿ ಸಾಮೂಹಿಕವಾಗಿ ನರ್ತಿಸಿ ಮನರಂಜನೆ ನೀಡುವುದಾಗಿತ್ತು. ಶಿವ ದೇವಸ್ಥಾನಗಳಲ್ಲಿ ಈ ಕಲೆಯನ್ನು ಪ್ರದರ್ಶಿಸುವ ನಟರು, ಕಲಾವಿದರು, ತರಬೇತಿದಾರರು, ಆಯೋಜಕರು ಮುಂತಾದವರು ದೇವದಾಸಿ ಕುಲದವರಾಗಿದ್ದು, ಗುಡ್ಡಗಾಡು ಕಲೆಯಾಗಿದ್ದು ಕೊರವಂಜಿ ನೃತ್ಯವು ಶಾಸ್ತ್ರೀಯ ಕಲೆಯಾಗಿ ಹೊರಹೊಮ್ಮುವ ತಂಜಾವೂರ ನಾಯಕ ಅರಸರಿಂದ ಹಿಡಿದು ಮರಾಠ ಪೇಶ್ವೆಗಳವರೆಗೂ ಆಳಿದ ಅರಸರ ಕೊಡುಗೆ ದೊಡ್ಡದು. ನೃತ್ಯ, ಸಂಗೀತದಂತಹ ಲಲಿತಕಲೆಗಳಿಗೆ ಹೆಚ್ಚಿನ ಮಹತ್ವ ಸಿಕ್ಕಿತು ಎಂದು ಡಾ. ವೀರೇಶ ಬಡಿಗೇರ ಅವರು ಅಭಿಪ್ರಾಯಪಡುತ್ತಾರೆ.

ಶ್ರೀ ನಾರಾಯಣ ಪತ್ತಾರ ಅವರು ಕೊರವಂಜಿಯ ಕುಣಿತ, ಹಾಡು, ಮನಸ್ಸಿನ ಭಾವದ ಭಂಗಿಗಳು ಜನಾಸಕ್ತರಿಗೆ ರಸದೌತಣ ನೀಡುತ್ತವೆ.

ಕೊರವಂಜಿ ಹಾಡು ಕೋಲಾಟ ಪದ (ಡಾ. ವೀರೇಶ ಬಡಿಗೇರ, ೨೦೫)

"ಲೋಕ ಲೋಕವನೆಲ್ಲ ತಿರುಗುವ ಕೊರಮಿ
ದೇಶ ದೇಶವನೆಲ್ಲ ಸುತ್ತವ ಕೊರಮಿ
ಮುತ್ತನೆ ಕೊಟ್ಟೇನು ಬಾರೆ ಕೊರವಂಜಿ
ನಿಮ್ಮನೆ ಮುತ್ತು ನಮಗೇನು ಬೇಕು
ಮುತ್ತುವೆ ನಮ್ಮನೆ ಮಗ್ಗಲ ಜೋಳ ॥೧॥
ಬಗ್ಗುತ ಬಳಕುತ ಬಂದಳೇ ಕೊರಮಿ
ಮುಂದಕೆ ಮೂರ್‍ಹೆಜ್ಜೆ ಹೋದಳು ಕೊರಮಿ
ಹಿಂದಾಕೊಂದರ್‍ಹೆಜ್ಜೆ ಬಂದಳೇ ಕೊರಮಿ ॥೨॥"

ಇಂತಹ ಪದಗಳಲ್ಲಿರುವ ಕಲೆಗಳ ಅಭಿವ್ಯಕ್ತಿಯು ರಸಪೂರ್ಣವಾದದ್ದು. ಇದರಿಂದ ಜನಪದ ಸಂಬಂಧಗಳನ್ನು ಗಟ್ಟಿಗೊಳಿಸುವಲ್ಲಿ ಪ್ರಮುಖ ಪಾತ್ರ ಕಟ್ಟಿಕೊಡುತ್ತವೆ.

೫.೨.೪. ಪಗಡೆ ಆಟ :

ಈ ಕಲೆ ಪ್ರಾಚೀನ ಕಾಲದಿಂದ ಬಂದಿದೆ. ಜಾತ್ರೆ, ಉತ್ಸವ, ಹಬ್ಬ-ಹರಿದಿನಗಳಲ್ಲಿ ರಾತ್ರಿವೇಳೆ ಆಡುವರು. ಈ ಪಗಡೆ ಆಟ ಆಡಲು ಆರರಿಂದ ಹತ್ತು ಜನ ಸೇರಿ ಎರಡು ಕಡೆ ಎದುರುಬದರು ಕುಳಿತುಕೊಳ್ಳುವರು. ಚೌಕಾಕಾರದ ಪಟ್ಟಿಯನ್ನು ಮಧ್ಯದಲ್ಲಿಟ್ಟು ಕಟ್ಟಿಗೆಯಿಂದ ತಯಾರಿಸಿದ ಬಣ್ಣ ಬಣ್ಣದ ಆರು ಕವಡೆ ಕಾಯಿಗಳಿಂದ ಆಡುವರು. ಮಹಾಭಾರತದಲ್ಲಿ ಕೌರವ-ಪಾಂಡವರು ಈ ಆಟವನ್ನು ಆಡುತ್ತಿದ್ದರು. ಪಾಂಡವರು ಸೋತಾಗ ದ್ರೌಪದಿಯನ್ನು ಪಣಕ್ಕಿಟ್ಟು ಆಡಿದ್ದರು. ಈ ಆಟಗಳು ಗ್ರಾಮದ ಮಧ್ಯ ಇರುವ ದೇವತೆಯ ಗುಡಿಯಲ್ಲಿ ಆಡುವುದರಿಂದ ಗ್ರಾಮದೇವತೆಯ ಪೂಜಾರಿಗಳಾದ ಪಾಂಚಾಳರು ಈ ಪಗಡೆ ಆಟದ ಕೌಶಲ್ಯದ ಒಡನಾಟಗಳಿದ್ದವು.

೫.೨.೫. ಸೂತ್ರದ ಗೊಂಬೆಯಾಟ :

ಸೂತ್ರದ ಗೊಂಬೆಯಾಟ ಭಾರತದ ಪ್ರಾಚೀನ ರಂಗ ಕಲೆಯಾಗಿದೆ. ಸೂತ್ರದ ಗೊಂಬೆಯಾಟಗಳು ಪೂರ್ವ ರಾಷ್ಟ್ರಗಳಲ್ಲಿ ಉದಯಿಸಿ ಎಲ್ಲಾ ಕಡೆ ಹರಡಿತು. ಈ ಆಟವು ಮಾನವನನ್ನು ಪರಮಾತ್ಮನೊಂದಿಗೆ ಹೋಲಿಸಿ ಜಗತ್ತಿನ ಸೂತ್ರಧಾರನೆ ಈ ಲೋಕವನ್ನು ಆಡಿಸುತ್ತಾನೆ. ನಾವೆಲ್ಲರೂ ಪಾತ್ರದಾರಿಗಳು. ಕಾಳಿದಾಸ ವಿಶಾಖದತ್ತ, ರನ್ನ, ಬಸವಣ್ಣ, ಕುಮಾರವ್ಯಾಸ, ಮುಂತಾದವರು ತಮ್ಮ ಕಾವ್ಯಗಳಲ್ಲಿ ಸೂಚಿಸಿದ್ದಾರೆ. ಅದಕ್ಕಾಗಿ ಸೂತ್ರದ ಗೊಂಬೆಯಾಟವು ಪ್ರಾಚೀನವಾದದ್ದು. ಬಾಗಲಕೋಟೆ, ಜಮಖಂಡಿ, ಮುಧೋಳ, ಬೈಲಹೊಂಗಲ ಕಡೆಗಳಲ್ಲಿ ಸೂತ್ರದಗೊಂಬೆ ಆಡಿಸುವವರು ಸಿಗುತ್ತಾರೆ. ಕಟ್ಟಿಗೆಯಿಂದ ತಯಾರಾದ ಮರದ ಗೊಂಬೆಗಳನ್ನು ಬಳಕೆಗೆ ತಂದರು. ಈ ಕಲೆಯನ್ನು ಪೋಷಿಸಿ ಬೆಳೆಸಿದರು.

ಈ ಗೊಂಬೆಯಾಟ ಮೂಲತಃ ಒಂದು ನಿರ್ದಿಷ್ಟ ಸಮುದಾಯಕ್ಕೆ ಸೇರಿದ ಕಲೆ ವಿಶ್ವಕರ್ಮ ಸಮುದಾಯಕ್ಕೆ ಸೇರಿದ್ದು. ಜನರು ಈ ವೃತ್ತಿಯನ್ನು ಪಾರಂಪರಿಕವಾಗಿ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಹಬ್ಬ ಉತ್ಸವ ಜಾತ್ರೆಗಳಲ್ಲಿ ರಾಜ್ಯ, ರಾಷ್ಟ್ರೀಯ ಹಬ್ಬಗಳಲ್ಲಿ, ರಾತ್ರಿ ವೇಳೆ ಈ ಕಲೆಯ ಪ್ರದರ್ಶನ ಮಾಡುತ್ತಾರೆ. ಮಹಾಭಾರತ, ರಾಮಾಯಣ, ಪೌರಾಣಿಕ ಕಥೆಯ ನಾಯಕ-ನಾಯಕಿಯರು ಶಿವ, ಪಾರ್ವತಿ, ಗಣೇಶ ಮುಂತಾದ ಪಾತ್ರಕ್ಕೆ ಜೀವ ತುಂಬುವ ಶಕ್ತಿ ಪಾಂಚಾಳ ಕಲಾವಿದರಿಗಿದೆ. ಸೂತ್ರದ ಗೊಂಬೆಗಳನ್ನು ತಯಾರಿಸುವವರು ಅವರೇ, ಆಡಿಸುವರು ಅವರೇ. ಹೀಗಾಗಿ ಪಂಚಾಳರು ಸಕಲ ಕಲಾ ವಲ್ಲಭರು. ಕಾಯಕದಲ್ಲೇ ಕೌಶಲ್ಯತೆಗಳನ್ನು ಬೆಳೆಸಿಕೊಂಡವರು.

೫.೩.ಪಾಂಚಾಳರು : ಕೆಲವು ಹವ್ಯಾಸಿ ಗಾಯಕರ ಕಲೆಗಳು :

೫.೩.೧. ಭಜನೆಗಳು :

ದೇವರನ್ನು ಸ್ತುತಿಸಿ, ಹೊಗಳಿ ಹಾಡುವುದೇ ಭಜನೆ. ಇದು ಗೀತ ಪ್ರಧಾನವಾದದ್ದು. ನಡುಗನ್ನಡ ಕಾಲದ ಭಕ್ತಿಯುಗ ಈ ಭಜನೆಯ ಸಂಪ್ರದಾಯಕ್ಕೆ ನಾಂದಿ ಹಾಡಿತೆಂದು

ಹೇಳಬಹುದು. ಶೈವ ಮತ್ತು ವೈಷ್ಣವ ಪಂಥಗಳೆರಡರಲ್ಲಿಯೂ ಈ ಸಂಪ್ರದಾಯವಿದೆ. ವೈಷ್ಣವ ಭಜನೆ ಪಂಡರಾಪುರದ ವಿಠೋಭಾ ಹಾಗೂ ಮಂತ್ರಾಲಯದ ರಾಘವೇಂದ್ರ ಹೆಸರಿನಲ್ಲಿ ಜರುಗಿದರೆ, ಶೈವ ಭಜನೆ ಶಿವ ಮತ್ತು ಶಿವಶರಣರ ಹೆಸರಿನಲ್ಲಿ ನಡೆಯುತ್ತದೆ. ತಾಳ, ತಂಬೂರಿ, ದಮಡಿ, ಪೆಟ್ಟಿಗೆಯನ್ನು ವಾದ್ಯ ಪರಿಕರಗಳಾಗಿ ಬಳಸುತ್ತಾರೆ. ಭಜನಾ ಹಾಡುಗಳಿಗೆ ಸಾಹಿತ್ಯಿಕ ಆಕರಗಳು ಶಿಶುನಾಳ ಶರೀಫ, ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಕಡಕೋಳ ಮಡಿವಾಳಪ್ಪ, ಕೂಡಲೂರು ಬಸವಲಿಂಗ, ರಾಮಾಪುರದ ಬಿಕ್ಕಪ್ಪ, ಧಾರವಾಡದ ಚಿಕ್ಕಪ್ಪಯ್ಯ, ಬಬಲಾದಿ ಶಿವಪ್ಪಯ್ಯ ಬಸರಕೋಡ, ಸರ್ವಜ್ಞ, ಶರಣ-ಶರಣೆಯರ ಹಾಡುಗಳನ್ನು ಭಜನೆಗೆ ಬಳಸುತ್ತಾರೆ.

ಭಜನೆ ಕರ್ನಾಟಕದಾದ್ಯಂತ ಕಂಡುಬರುತ್ತದೆ. ಒಂದೊಂದು ಭಾಗದಲ್ಲಿ ಹಾಡುವ ಭಜನೆಗಳ ಹಿನ್ನೆಲೆ ಹಾಗೂ ಪ್ರಕಾರಗಳ ಮಟ್ಟಿಗೆ ಸ್ವಲ್ಪ ವ್ಯತ್ಯಾಸವಾದರೂ ಒಟ್ಟಾಗಿ ಭಜನೆ ಮೇಳಗಳು ಒಂದಲ್ಲ ಒಂದು ರೀತಿಯಲ್ಲಿ ನಾಡಿ ಉದ್ದಗಲಕ್ಕೂ ವ್ಯಾಪಿಸಿವೆ. ಇದು ಸಾಮೂಹಿಕ ಭಜನೆ ಮೇಳದ ರೂಪದ್ದು. ಇಲ್ಲಿಯ ಸಂಖ್ಯೆಯನ್ನು ನಿರ್ದಿಷ್ಟವಾಗಿ ಹೇಳದೆ ಒಂದಕ್ಕಿಂತ ಹೆಚ್ಚು ಎನ್ನುವುವಿ ಸೂಕ್ತ. ತಾಳ, ತಪ್ಪಡಿ, ಏಕತಾರಿ, ಚಾಟು, ಶೃತಿ ಮೊದಲಾದ ವಾದ್ಯ ವಿಶೇಷಗಳು ಇಲ್ಲಿರುತ್ತವೆ.

ಭಜನೆಗಳಲ್ಲಿ ನಾನಾ ವಿಧಗಳಿವೆ. ಅವುಗಳಲ್ಲಿ ೧. ಏಕತಾರಿ ಭಜನೆ ೨. ಪಾರಿಜಾತ ಭಜನೆ ಎಂದು ವಿಂಗಡಿಸಿದ್ದಾರೆ.

ಏಕತಾರಿ ಭಜನೆಗೆ ಹಾಡಿನ ಜೊತೆಗೆ ತಾಳ, ದಮಡಿ, ಕೈಪೆಟ್ಟಿಗೆ ಬಳಸುತ್ತಾರೆ. ಪಾರಿಜಾತ ಭಜನೆಗೆ ಕಾಲ್ಪಟ್ಟಿಗೆ, ದಮಡಿ, ಕಂಚಿನ ದೊಡ್ಡ ತಾಳಗಳನ್ನು ಬಳಸುತ್ತಾರೆ. ಗಾಯಕನು ನಿಂತುಕೊಂಡು ಪಾರಿಜಾತ ಆಟದವರು ಹಾಡುವ ಹಾಗೆ ರಾಗವನ್ನು ಎತ್ತರಿಸುತ್ತಾ ಹಿಂದಕ್ಕೆ ಬಾಗಿ ತಾರಕಕ್ಕೆ ಮುಟ್ಟಿಸುವುದರಿಂದ ಇದಕ್ಕೆ ಪಾರಿಜಾತ ಭಜನೆ ಎಂದು ಹೆಸರು. ಭಜನಾ ತಂಡಗಳು ಜಾತ್ರೆ, ಉತ್ಸವ, ಹಬ್ಬ-ಹರಿದಿನ, ವ್ಯಕ್ತಿ ಮರಣ ಹೊಂದಿದಾಗ ಗ್ರಾಮಗಳಿಗೆ ಹೋಗಿ ಭಜನೆಮಾಡಿ ಸಂಭಾವನೆ ಪಡೆಯುತ್ತಾರೆ. ಕೆಲವರು ಈ ಕಲೆಯಿಂದ ರಾಜ್ಯಮಟ್ಟದ ಪ್ರಶಸ್ತಿ, ಮಾಸಾಶನ ಪಡೆಯುತ್ತಾರೆ.

೧. ಶ್ರೀ ತಮ್ಮಣ್ಣ ಬಡಿಗೇರ, ಶ್ರೀ ಓಂಕಾರ ಭಜನಾ ಮಂಡಳಿ, ಯಕ್ಕುಂಡಿ, ವಿಜಾಪುರ ಜಿಲ್ಲೆ

೨. ಮಹಾದೇವಪ್ಪ ಸೊ. ದೊಡ್ಡಬಡಿಗೇರ, ಶ್ರೀ ಕಾಳಿಕಾದೇವಿ ಭಜನಾ ಮಂಡಳಿ, ಆಚನೂರು, ಬಾಗಲಕೋಟೆ ಜಿಲ್ಲೆ

ಆಡು ಮುಟ್ಟದ ಸೊಪ್ಪು ಇಲ್ಲಾ ಎಂಬಂತೆ ಭಜನಾ ಕಲಾವಿದರು, ಭಜನಾ ಮಂಡಳಿಗಳಿಲ್ಲದ ಗ್ರಾಮಗಳಲ್ಲಿ ಉತ್ತರ ಕರ್ನಾಟಕದ ಜಾನಪದ ಸಂಪತ್ತು ಆಗಾದವಾದದ್ದು. ಇಲ್ಲಿನ ವಿಶಿಷ್ಟ

ಪ್ರಕಾರಗಳಾದ ಗೀಗಿ, ಲಾವಣಿ, ಭಜನೆ, ಏಕತಾರಿ, ಡೊಳ್ಳಿನ ಹಾಡು, ಚೌಡಿಕೆ ಪದಗಳು, ಹೋಳಿ ಪದಗಳು ಹೀಗೆ ಸಾಂಪ್ರದಾಯಿಕ ಆಟಗಳಲ್ಲಿ ಪರಿಷ್ಕರಣೆ ತರುವ ಪ್ರಯತ್ನ ಈಚೆಗೆ ನಡೆದಿದೆ.[೬]

೫.೩.೨. ಕೊಳಲು/ಉಸಿರು :

ಪಾಂಚಾಳ ಕಲಾವಿದರು ಉಸಿರು ವಾದ್ಯಗಳನ್ನು ತಮ್ಮ ಇತರೆ ಕೆಲಸಗಳ ಬಿಡುವಿನ ಸಮಯ ಇದ್ದಾಗ ಕಲಿಯುವರು. ಕಾಳಿ ಆರಾಧಕರಾದ ವಿಶ್ವಕರ್ಮ ಮೂಲದ ಈ ಪರಂಪರೆಯ ಸಂತರು ಹೆಣ್ಣನ್ನು ದುರ್ಗೆ ಹಾಗೂ ಮಾತೆಯ ರೂಪದಲ್ಲಿ ಆರಾಧಿಸುವಂತವರು. ಪ್ರಕೃತಿಯಲ್ಲಿ ಸಿಗುವ ವಸ್ತುಗಳನ್ನು ಬಳಸಿಕೊಂಡು ಒಂದೊಂದು ವಸ್ತುವಿಗೆ ನಾದಮಯ ಕಂಡುಕೊಂಡರು. ಪಾಂಚಾಳರು ತಯಾರಿಸಿದ ಬಿದುರಿನ ವಸ್ತುವನ್ನು ಒಣಗಿಸಿ ಹದಗೊಳಿಸಿದ ನಂತರ ಉಸಿರಿನ ಮೂಲಕ ನಾದವನ್ನು ಕಂಡುಕೊಂಡರು. ಈ ರೀತಿ ಪಾಂಚಾಳರು ಜನಪದ ಕಲೆಗಳಲ್ಲಿ ಕೊಳಲನ್ನು ಉಸಿರು ವಾದ್ಯವಾಗಿ ಪ್ರಸ್ತುತ ಪಡಿಸಿದರು. ಮಾರನಾಳ ಗ್ರಾಮದ ಶ್ರೀಶ್ರೀಶ್ರೀ ಪ್ರ ಜಗನ್ನಾಥ ಸ್ವಾಮಿಗಳು ಮಹಾಪುರುಷರು ಮಳೆ ರಾಜೇಂದ್ರ ಮುರಗ ಮಠ ಕೊಳಲು ವಾದಕರು, ಸಿತಾರವಾದಕರು, ತಬಲ ಬಾರಿಸುವುದು ಹೀಗೆ ಪಾಂಚಾಳ ಸಮುದಾಯದ ಕಲೆ ಸಂಗೀತಗಳ ಅಧ್ಯಾತ್ಮಿಕ ಒಡನಾಟಗಳಿಂದ ಅವರ ಜ್ಞಾನ ಕುಶಲತೆಗೆ ಪ್ರಾಮುಖ್ಯವಿದೆ.

ಕೊಳಲು ಮತ್ತು ಉಸಿರನ್ನು ಪಾಂಚಾಳರಲ್ಲಿ ಒಬ್ಬರಾದ ಕಂಚುಗಾರರು ತಯಾರಿಸುತ್ತಾರೆ. ಕಂಚುಗಾರರು ಹಿತ್ತಾಳೆಯಿಂದ ತಯಾರಿಸಿದ ಕೊಂಬು ಹೆಚ್ಚು ನಾದವನ್ನು ಹೊರಡಿಸುತ್ತದೆ. ಇದು ನೋಡಲು ಎತ್ತಿನ ಕೊಂಬಿನಂತಿದ್ದು, ಅಥವಾ ಉದ್ದಾದ ಸಹನಾಯಿಯಂತೆ ಇರುತ್ತದೆ. ಉತ್ತರ ಕರ್ನಾಟಕದಲ್ಲಿ ಅರ್ಧ ವರ್ತುಲಾಕಾರದಲ್ಲಿ ಅಥವಾ ಉದ್ದಾದ ರೀತಿಯಲ್ಲಿರುತ್ತದೆ. ಊದುವ ಭಾಗ ಒಂದು ಇಂಚು ದಪ್ಪ ಇರುತ್ತದೆ. ಒಂದಿಂಚಿನ ವೃತ್ತಾಕಾರದಿಂದ ಪ್ರಾರಂಭವಾಗಿ ತುದಿಯಲ್ಲಿ ಸುಮಾರು ನಾಲ್ಕೈದು ಇಂಚಿನಷ್ಟು ಅಗಲವಾಗಿರುತ್ತದೆ. ಎರಡು ತುದಿಗಳ ನಡುವಿನ ಅಂತರ ಸುಮಾರು ಐದು ಅಡಿ ಇರುತ್ತದೆ. ಕೊನೆಯ ಭಾಗದಲ್ಲಿ ಗಗ್ಗರಿ ಆಕಾರದ ಅಲಂಕಾರ ಇರುತ್ತದೆ.

ಉಸಿರಿನ ಮೂಲಕ ಹೊರಹೊಮ್ಮಿಸುವ ಕೆಲವು ಕಲೆಗಳು ಜನಪದರಲ್ಲಿವೆ. ಒಂದೇ ರಂಧ್ರವಿರುವ ವಾದ್ಯಗಳು, ಒಂದಕ್ಕಿಂತ ಹೆಚ್ಚು ರಂಧ್ರವುಳ್ಳ ವಾದ್ಯಗಳು. ಇವೆರಡು ವಾದ್ಯಗಳಲ್ಲಿ ಪೀಪಿಗಳಿರುವುದಿಲ್ಲ. ಕೊಂಬು, ಕಹಳೆ, ಶಂಖ ಒಂದೇ ರಂಧ್ರವಿದ್ದ ವಾದ್ಯಗಳಾಗದರೆ, ಕೊಳಲು ಮತ್ತು ಪುಂಗಿ ಒಂದಕ್ಕಿಂತ ಹೆಚ್ಚು ರಂಧ್ರವಿರುವ ವಾದ್ಯಗಳಾಗಿವೆ. ಪೀಪಿ ಮತ್ತು ರಂದ್ರಗಳಿರುವ ವಾದ್ಯಗಳೆಂದರೆ ನಾಗಸ್ವರ, ಶಹನಾಯಿ, ಭಜಂತ್ರಿ ಮುಂತಾದವುಗಳು ಈ ವಿಭಾಗದಲ್ಲಿ ಸಮಾವೇಶಗೊಳ್ಳುತ್ತವೆ.

ಪೆಟಿಗೆ (ಹಾರ್ಮೋನಿಯಂ), ಸನ್ನೆಕೋಲು, ಗಣೆವಾದ್ಯ, ಚೀನಿವಾದ್ಯ, ಪುಗುಡಿ ಇತ್ಯಾದಿಗಳು ವಿಶಿಷ್ಟ ಜನಪದ ವಾದ್ಯಗಳು. ಜನಪದ ವಾದ್ಯಗಳು,ಜನಪದ ಸಂಗೀತ ಕುರಿತಾಗಿ ಪ್ರತ್ಯೇಕವಾಗಿ

ಅಧ್ಯಯನವಾಗಬೇಕಿದೆ. ಪ್ರತಿಯೊಂದು ಪ್ರಕಾರದ ಕುರಿತಾಗಿ ವಿಸ್ತೃತವಾದ ಅಧ್ಯಯನವಾದರೆ ಜನಪದ ವಾದ್ಯಗಳ ಕುರಿತಾಗಿ ಸಮಗ್ರ ಮಾಹಿತಿ ಲಭಿಸುತ್ತದೆ.

೫.೩.೩. ಲಾವಣಿ :

ಲಾವಣಿ ಎಂಬುದು ಹಾಡಿನ ರೂಪದಲ್ಲಿರುವ ಒಂದು ಕಥೆ. ಜನಪದ ಕಲೆಗಳ ವಸ್ತುಗಳನ್ನಾಧರಿಸಿ ಐತಿಹಾಸಿಕ, ಚಾರಿತ್ರಿಕ ಲಾವಣಿ ಎಂಬುದು. ಆಂಗ್ಲ ಲಾವಣಿ ಸಾಹಿತ್ಯಕ್ಕೆ ಬಳಸಲಾಗುತ್ತಿರುವ ಪಾಶ್ಚಾತ್ಯ ಸಾಹಿತ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಗುರುತಿಸುತ್ತಾರೆ. ಮೊದಲು ನೃತ್ಯ ಗೀತೆ ಜೊತೆ ಸಂಬಂಧ ಕಲ್ಪಿಸಿ ನಂತರ ದೂರವಾದದ್ದು ಕಂಡುಬರುತ್ತದೆ. ಫ್ಲೀಟರು ಸಂಗ್ರಹಿಸಿದ ಲಾವಣಿಗಳನ್ನು ಕ್ಯಾತನಹಳ್ಳಿ ರಾಮಣ್ಣ ಸಂಪಾದಿಸಿ ಪ್ರಕಟಿಸಿದ್ದಾರೆ. ಸಂಗೊಳ್ಳಿ ರಾಯಣ್ಣ, ಹಲಗಲಿ ಬೇಡರ, ಕಟ್ಟಿ ಚೆನ್ನ, ಬಸರಕೋಡ, ನಾಡಗೌಡರು ಕಿತ್ತೂರು ಚೆನ್ನವನ ಸೊಸೆ ಈರವ್ವ ಮುಂತಾದವುಗಳು ಬಾಗಲಕೋಟೆ, ವಿಜಯಪುರ, ಬೆಳಗಾವಿ ಜಿಲ್ಲೆಗಳಲ್ಲಿ ಹೇರಳವಾಗಿ ದೊರಕುತ್ತವೆ.

ಜನಪದ ಸಾಹಿತ್ಯ ಕಲೆಗಳಲ್ಲಿ ಉತ್ತರ ಕರ್ನಾಟಕವು ಸಮೃದ್ಧವಾಗಿದ್ದು, ಅನೇಕ ಕಲೆಗಳಿಗೆ ಹೆಸರಾಗಿದೆ. ಜನಪದ ಗೀತ ಸಂಪ್ರದಾಯಗಳಲ್ಲಿ ಹೆಣ್ಣು, ಗಂಡು, ಶಿಶು ಹೀಗೆ ಸಂಪ್ರದಾಯದ ಹಾಡುಗಳು ವೈವಿಧ್ಯತೆಯಲ್ಲಿ ಗಮನಾರ್ಹವಾಗಿವೆ. ಕುಟ್ಟುವ, ಬೀಸುವ, ಹಂತಿ ಹಾಡು, ನಾಟಿಯ (ಬಿತ್ತುವುದು), ಲಾಲಿಪದ, ಆಚರಣೆ ಪದಗಳು, ಮದುವೆ, ಮೈನೆರೆದಾಗ, ಮೋಹಕ ಪದಗಳು ಡೊಳ್ಳಿನ ಹಾಡುಗಳು, ಲಾವಣಿಯ ಹರದೇಶಿ–ನಾಗೇಶಿ ಮುಂತಾದ ಗೀತರೂಪದ ಜನಪದ ಕಲೆಗಳನ್ನು ಒಂದಿಲ್ಲೊಂದು ಸಂದರ್ಭದಲ್ಲಿ ಪಾಂಚಾಳ ಸಮುದಾಯವು ಉಪಯೋಗಿಸಿರುವುದು ಕಂಡುಬರುತ್ತದೆ.

ಲಾವಣಿ ಅತ್ಯಂತ ಪ್ರಾಚೀನ ರೂಪಗಳಲ್ಲಿ ಒಂದು. ಪದ್ಯರೂಪದ ಸಣ್ಣಕತೆ ಎಂದು ಇದನ್ನು ಕರೆಯಬಹುದು. ಜನಪದ ಪ್ರಕಾರಗಳಂತೆ ಇದು ಸ್ವಭಾವಿಕವಾದ ಹುಟ್ಟಿಕೊಂಡು ವೈದಿಕ ಸಾಹಿತ್ಯದ ಗಾದೆಗಳು, ಲಾವಣಿ ಪ್ರಾಚೀನ ರೂಪವೆಂದು ಗುರುತಿಸುವರು. ಲಾವಣಿ ಜನಪದ ಜನಸಾಮಾನ್ಯರ ಸ್ವತ್ತು. ಹಾಡುವವರು, ಕೇಳುವವರು ರಚಿಸಿದವರು ಎಲ್ಲರೂ ಜನಪದರೆ. ಆದ್ದರಿಂದ ಲಾವಣಿಯ ಆಸಕ್ತಿ ಕಥೆ ಹೇಳುವುದು, ನಂತರ ಸಂಗೀತದ ಭಾಗವಾದದ್ದು ತಿಳಿಯುತ್ತದೆ.

“ಜನಸಾಮಾನ್ಯರ ಬಹುಪಾಲು ಲಾವಣಿಗಳು ಹಾಡುವಾಗ ಜನಪದ ವಾದ್ಯ ವಿಶೇಷಗಳನ್ನು ಬಳಸಲಾಗುತ್ತದೆ. ವಾದ್ಯಗಳು ಲಾವಣಿ ಹಾಡುಗಾರಿಕೆಗೆ ವಿಶಿಷ್ಟ ಅವಕಾಶವನ್ನು ಕಲ್ಪಿಸುತ್ತವೆ. ಹಾಡುವವರಲ್ಲಿ, ಕೇಳುವವರಲ್ಲಿ ವಿಶೇಷ ಸ್ಫೂರ್ತಿಯನ್ನು ತುಂಬುತ್ತವೆ. ವಾದ್ಯಗಳನ್ನು ಬಳಸದ ಸಂದರ್ಭದಲ್ಲಿ ಹಿಮ್ಮೇಳ ಆ ಕಾರ್ಯವನ್ನು ಮಾಡುತ್ತದೆ. ಮುಖ್ಯ ಗಾಯಕನ ಕಂಠ ಕ್ರಮವನ್ನು ಕಡಿಮೆ ಮಾಡುವಲ್ಲಿ ಹಿಮ್ಮೇಳ ಮತ್ತು ವಾದ್ಯಗಳೆರಡು ನೆರವಾಗುತ್ತವೆ. ಮೊದಲ ಚರಣವನ್ನು

ಎತ್ತಿಕೊಟ್ಟರೆ ಹಿಮ್ಮೇಳದವರು ಮುಂದಿನ ಚರಣಗಳನ್ನು ಜೋಡಿಸಿ ಪದ್ಯವನ್ನು, ವಾಕ್ಯವನ್ನು ಪೂರ್ತಿ ಮಾಡುತ್ತಾರೆ. ವಾದ್ಯ ಮತ್ತು ಹಿಮ್ಮೇಳ ಎರಡೂ ಜೊತೆಗೂಡಿ ಲಾವಣಿ ಹಾಡುಗಾರಿಕೆಗೆ ವಿಶೇಷ ಕಳೆಯನ್ನು ತರುವುದು. ಇದರಲ್ಲಿ ನೃತ್ಯ ಬೆರೆಯುವ ನಿದರ್ಶನಗಳುಂಟು. ಸಂಗೀತ, ಸಾಹಿತ್ಯ, ನೃತ್ಯಗಳಿಂದ ಮುಪ್ಪುರಿಗೊಂಡ ಲಾವಣಿ ಮೇಳಗಳ ಆಕರ್ಷಣೆ ಅದ್ವಿತೀಯವಾಗುತ್ತದೆ."[೭]

ಉತ್ತರ ಕರ್ನಾಟಕದ ಕೃಷ್ಣಾ ತೀರದ ಬೆಳಗಾವಿ, ವಿಜಯಪುರ, ಬಾಗಲಕೋಟೆ ಮುಂತಾದ ಸ್ಥಳಗಳಲ್ಲಿ ಈ ಜನಪದ ಲಾವಣಿ ಸಂಪ್ರದಾಯವು ಚಾಲ್ತಿಯಲ್ಲಿದೆ. ಸಣ್ಣ ಸಣ್ಣ ಗುಂಪುಗಳಾಗಿ ಪಾಂಚಾಳರ ಪ್ರತಿಭೆಯ ಸಾಮೂಹಿಕ ಕಾರ್ಯವೊಂದು ಉದ್ದೇಶದಿಂದ ಒಂದು ಕಡೆ ಹಾಡು, ನೃತ್ಯ, ಸಂಗೀತವೂ, ಹೊಸ ಗೀತವೂ ಆಗಿ ಪರಿಣಮಿಸಿದೆ.

೫.೩.೪. ಹಂತಿ ಪದಗಳು :

ಭಾರತ ದೇಶವು ಹಳ್ಳಿಗಳ ನಾಡು. ಈ ಹಳ್ಳಿಗಳಲ್ಲಿರುವ ಉದ್ಯೋಗ ಕೃಷಿ ಕೆಲಸಗಳಾದ ನಾಟಿ ಮಾಡುವುದು, ಉತ್ತುವುದು, ಬಿತ್ತುವುದು, ಕೊಯಿಲು 'ರಾಶಿ' ಮಾಡಬಹುದಾಗಿದೆ. ಮಳೆಗಾಲದಲ್ಲಿ ಚೆನ್ನಾಗಿ ಮಳೆ ಬಂದಾಗ ರೈತರು ಸಂತೋಷದಿಂದ ಹಿಂಗಾರಿ, ಮುಂಗಾರಿ ಬೆಳೆಗಳನ್ನು ಬೆಳೆಯುತ್ತಾರೆ. ಈ ಬೆಳೆ ಬಂದಾಗ ಹೊಲದಲ್ಲಿ ೫ ರಿಂದ ೧೦ ಅಡಿ ಸುತ್ತಳತೆಯ ಕಣ ಮಾಡಿ ಮಧ್ಯದಲ್ಲಿ ಬನ್ನಿಗಿಡದ ಕಂಬ ನೆಟ್ಟು ಕಣ ಶುದ್ಧೀಕರಿಸಿ ಗಟ್ಟಿ ಮಾಡುವರು. ಕಣದಲ್ಲಿ ಬಂದಂತಹ ಬೆಳೆಗಳನ್ನು ಹಾಕಿ ಜೋಳದ ತೆನೆ, ಕಡಲೆ, ತೊಗರಿ, ರಾಶಿ ಮಾಡುವ ವಿಧಾನ ವಿಶೇಷವಾದದ್ದು.

ಒಕ್ಕಲಿಗರು ಕಣದಲ್ಲಿ ಹಾಕಿರುವ ರಾಶಿಗೆ ಎತ್ತುಗಳನ್ನು ಕಟ್ಟಿ ರಾಶಿ ತುಳಸಿ ಹದಗೊಳಿಸುವಾಗ ಪದಗಳಿಗೆ ಹಂತಿ ಪದಗಳನ್ನು ಹೇಳುವರು. ಈ ಹಂತಿ ಪದಗಳು ಏರುಧ್ವನಿಯಲ್ಲಿ ರಾಗಬದ್ಧವಾಗಿ ಕಂಡುಕೊಂಡ ಬದುಕಿನ ಅನುಭವಗಳನ್ನು ಹಾಡಿನ ರೂಪದಲ್ಲಿ ಹೇಳುವರು. ವರ್ಷದ ಉದ್ದಕ್ಕೂ ಆಯಾ ರೂಪದ ಕಾಯಕವು ಇಂತಹ ಕಣಗಳಲ್ಲಿ ಬಂದು ರಾಶಿ ಮಾಡುವ ಸಂದರ್ಭದಲ್ಲಿ ತೊಡಗಿಕೊಳ್ಳುವರು. ಹಂತಿ ಪದಗಳು ಇವತ್ತಿಗೂ ಉತ್ತರ ಕರ್ನಾಟಕ ಭಾಗದಲ್ಲಿ ಚಾಲ್ತಿಯಲ್ಲಿವೆ.[೮]

೫.೩.೫. ಹೋಳಿ ಹಾಡುಗಳು :

ಉತ್ತರ ಕರ್ನಾಟಕದ ಕಾಮನದಹನ ಕಾಲದಲ್ಲಿ ಹಾಡುಗಳನ್ನು ಹಾಡುವದರೊಂದಿಗೆ ಹಲಗೆ ಬಾರಿಸುವ ಮೂಲಕ ಕಾಮಣ್ಣನಿಗೆ ಸಂಬಂಧಿಸಿದ ಶಿಷ್ಟರು ದುಷ್ಟರನ್ನು ಸಂಹಾರ ಮಾಡುವ ವಿಧಾನವೇ ಹೋಳಿ ಹಬ್ಬ. ಇದನ್ನೇ ಹೋಳಿ ಹಾಡು ಎಂದು ಕರೆಯುವರು. ಹೋಳಿ ಹಬ್ಬವನ್ನು 'ಕಾಮನಹಬ್ಬ' ಎಂದು ಕರೆಯುವರು. ಪುರಾಣಗಳಲ್ಲಿ ಉಲ್ಲೇಖಗಳಿವೆ. ದಕ್ಷಿಣ ಭಾಗಕ್ಕಿಂತ ಉತ್ತರ ಕಡೆ ಹೆಚ್ಚಿನ ಆಚರಣೆ ಮಾಡುತ್ತಾರೆ. ನಿಜವಾದ ಹಬ್ಬ ಹುಣ್ಣಿಮೆ ದಿನ ಆಗುವುದು. ಕಾಮನ ಚಿತೆ ಉರಿಯಲಾರಂಭಿಸುತ್ತದೆ. ಕಟ್ಟಿಗೆ ರಾಶಿ ಸುಟ್ಟು ಬೂದಿಯಾಗುವವರೆಗೂ

ಜಗಿದಾಡುವುದು ಕಾಮನ ಬೆಂಕಿಯನ್ನು ಒಯ್ದು ಸುಮಂಗಲಿಯರು ತಮ್ಮ ತಮ್ಮ ಮನೆಯ ಒಲೆಗಳನ್ನು ಹೊತ್ತಿಸಿ ಹೋಳಿಗೆ ಮಾಡುವುದು ರೂಢಿಯಲ್ಲಿದೆ. ಕಾಮನ ಬೆಂಕಿಯಲ್ಲಿ ಕಡ್ಲಿ, ಗೆಣಸು, ಸುಟ್ಟು ತಿಂದರೆ ಹಲ್ಲು ಗಟ್ಟಿಯಾಗುತ್ತವೆ ಎಂದು ಭಾವಿಸುವವರು ಸಾಕಷ್ಟಿದ್ದಾರೆ.

ಹೋಲಿ ಹುಣ್ಣಿಮೆಯ ಮೊದಲು ಬರುವ ಮಾಘ ಅಮವಾಸ್ಯೆಯಿಂದಲೇ ಓಣಿ ಓಣಿಗಳಲ್ಲಿ ಹಲಗೆಯ ಸಹನಾಯಿ ಧ್ವನಿ ಸಪ್ಪಳ ಕಿವಿಗಡಚಿಕ್ಕುವಂತೆ ಕೇಳಿಬರುತ್ತದೆ. ಹೋಳಿ ಹುಣ್ಣಿಮೆಯ ಬರುವನ್ನು ಈ ಹಲಗೆಯ ಧ್ವನಿ ಸಾರಿಸಾರಿ ಹೇಳುತ್ತದೆ.

ಚಿಕ್ಕ ಮಕ್ಕಳು ಮೊದಲುಗೊಂಡು ದೊಡ್ಡವರು ಸಹಿತ ಸಂತೋಷದಿಂದ ಪ್ರತಿದಿನ ರಾತ್ರಿ ಊಟವಾದ ಮೇಲೆ ಎಲ್ಲರೂ ಕುಡಿಕೊಂಡು ಹಲಗೆಯ ಮೇಳದಲ್ಲಿ ಪಾಲ್ಗೊಳ್ಳುತ್ತಾರೆ. ಇಲ್ಲಿ ಜಾತಿಬೇಧ, ವರ್ಗಬೇಧ ಇರುವುದಿಲ್ಲ. ಈ ಕುಣಿತದಲ್ಲಿ ಪಾಂಚಾಳರು ಪಾಲ್ಗೊಂಡು ಕುಣಿಯುತ್ತಾರೆ. ಈ ಹಬ್ಬದ ಆಕರ್ಷಣೆ ಸಾಂಪ್ರದಾಯಿಕ ತುರಾಯಿ ಹಲಗೆ ವಾದನ ನಾಯಕ ಗತ್ತಿನೊಂದಿಗೆ ಬಾರಿಸುತ್ತಿರುತ್ತಾನೆ. ಹಿಮ್ಮೇಳದವರು ಕುಣಿಯುತ್ತಿರುತ್ತಾರೆ.

ಹುಣ್ಣಿಮೆಯ ದಿನ ಮಂಟಪದಲ್ಲಿ ಕಾಮನನ್ನು ಮತ್ತು ರತಿಯನ್ನು ಕುರಿಸಿರುತ್ತಾರೆ. ಕಾಮನನಷ್ಟೇ ರತಿಯು ಸುಂದರಳು. ಇಂತಹ ಸುಂದರ ಕಾಮರತಿಯನ್ನು ನೋಡಲು ದೂರದ ಊರಿನ ಜನ ತಂಡತಂಡವಾಗಿ ಬರುತ್ತಾರೆ. ನೋಡು ಆನಂದಪಡುತ್ತಾರೆ. ಅಂದು ಸಂಜೆ ಕಾಮನ ಮೇರವಣಿಗೆ ನಡೆಯುತ್ತದೆ. ಬಂಡಿಯ ಮೇಲೆ ಕಾಮನ ಕುರಿಸಿ, ಅಲಂಕರಿಸಿ, ಮೋಜು, ಮಜಲು ಮಾಡುವುದು ಬಾಗಲಕೋಟೆ ಜಿಲ್ಲೆಯಲ್ಲಿ ಬಹು ಕಾಲದಿಂದ ಸಾಗಿಬಂದ ಸಂಪ್ರದಾಯವಾಗಿದೆ. ಬಂಡಿಯ ಮುಂದೆ ಊರು ಜನರು ಸಾಲು ಸಾಲಾಗಿ ನಿಂತು ಕೈಯಲ್ಲಿ ಹಲಗೆ ಹಿಡಿದು ಬಾರಿಸುತ್ತಾ ಕುಣಿದಾಡುತ್ತಾರೆ. ಈ ಕುಣಿತದಲ್ಲಿ ಪಾಂಚಾಳರ ಒಂದು ಭಾಗ ಭಾಗಿಯಾಗಿರುತ್ತದೆ. ಮತ್ತು ಹಲೆಗೆಯ ಗುಣಿಯನ್ನು ತಯಾರಿಸಿ ಕೊಡುತ್ತಾರೆ. ಮರುದಿನ ಐದು ದಿನಗಳವರೆಗೆ ಬಣ್ಣ ಬಂಡಿಗಳು ಎದುರು ಬದುರು ನಿಂತು ಬಣ್ಣವನ್ನು ಎರಚಾಡುವರು.

ಕರಿ ಕಟ್ಟುವ ಸಂಪ್ರದಾಯ ಹೋಳಿ ಹಬ್ಬದ ಮತ್ತೊಂದು ವಿಶೇಷ. ಮಳೆ ಬೆಳೆಗಳು ಚೆನ್ನಾಗಿ ಬಂದ ಮೇಲೆ ಕಾರುಹುಣ್ಣಿಮೆಗೆ ಎತ್ತುಗಳನ್ನು ಮೈತೊಳೆದು ಬಣ್ಣಗಳಿಂದ ಸಿಂಗರಿಸಿ ಅಗಸಿ ಹೊರಗಿನಿಂದ ಬಿಳಿ ಕರಿ ಕೆಂದು ಎತ್ತುಗಳನ್ನು ಓಡಿಸುವರು. ನಂತರ ಊರ ಅಗಸಿ ಬಾಗಿಲ ಕೊಬ್ಬರಿ ಬೇವು-ಬೆಲ್ಲದ ಕರಿಯನ್ನು ಕಟ್ಟಿದ್ದನ್ನು ಹರಿಯುವರು. ಈ ತರಹದ ಆಚರಣೆಗಳನ್ನು ಆಚಾರ್ಯರು ಅಥವಾ ಪಾಂಚಾಳರ ಮನೆಯಿಂದ ಬರುವ ಸಡಗರವು ವಿಶೇಷವಾದದ್ದು. ಈ ತರಹದ ಹೋಳಿ ಹಬ್ಬದ ಆಚರಣೆಯ ಹಾಡುಗಳನ್ನು ಬಾಗಲಕೋಟೆ ತಾಲೂಕಿನ ಬೇವೂರು, ರಾಂಪುರ, ಶಿರೂರು, ಭಗವತಿ ಮುಂತಾದ ಗ್ರಾಮಗಳಲ್ಲಿ ಚಾಲ್ತಿಯಲ್ಲಿವೆ.

ಹಲಗೆ : ಜನಪದ ವಾದ್ಯಗಳಲ್ಲಿ ಹಲಗೆ ನಾನಾ ರೂಪವನ್ನು ತಾಳಿದ್ದರಿಂದ ಅನೇಕ ಕಲಾವಿದರು ಈ ವಾದ್ಯಗಳನ್ನು ಬಳಸಿದುಂಟು. ಉದಾ: ಪಂಡಿತ ಸೋಮಪ್ಪ ಬಡಿಗೇರ

ಸಾ.ಸೋರಗಾವಿ ತಾ. ಮುದೋಳ ಮತ್ತು ಶ್ರೀ ಗಣಪತ್ತೆಪ್ಪ ಕಮ್ಮಾರ ಸಾ. ಯಳ್ಳಿಗುತ್ತಿ ತಾ. ಬೀಳಗಿ ಇವರು ತಾಳ ಇತರ ವಾದ್ಯಗಳೊಂದಿಗೆ ಹಲಿಗಿ ವಾದ್ಯದ ಲಹರಿಗಳನ್ನ ಈ ಮುಂದಿನಂತೆ ಗುರುತ್ತಿಸಿದ್ದಾರೆ. ಚಿಟಹಲಗೆ, ರಣಹಲಗೆ, ಜಗ್ಗಲಿಗೆ, ತಮಟೆ, ಪರೆ, ಸಂಪ್ರದಾನ, ಕಣಹಲಗೆ ಮುಂತಾದ ಬೇರೆ ಬೇರೆ ನಾಮಗಳಿವೆ. 'ಹಲಗೆಯಿಲ್ಲದ ಊರಿಲ್ಲ, ಒಲೆಯಿಲ್ಲದ ಮನೆಯಿಲ್ಲ' ವೆಂಬ ಪಡೆನುಡಿಯು ಹಲಗೆಯ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಜಾತ್ರೆ-ಉತ್ಸವ, ಮದುವೆ-ಮಸಣ, ಎತ್ತುಗಳ ಮೆರವಣೆಗೆ, ಕುದುರೆ ಕುಣಿತ, ಲೇಜಿಮ್ ಮೇಳ , ವ್ಯಕ್ತಿಗಳ ಮೆರವಣಿಗೆ, ಗೆಲುವಿನ ಸಂಭ್ರಮ ಸಾದರ ಪಡಿಸಲು, ಸುದ್ದಿ ಮುಟ್ಟಿಸುವ ಡಂಗೂರ ಸಾರಲು ಇತ್ಯಾದಿ ಪ್ರಚಾರ ಮಾಧ್ಯಮದ ಸಾಧನವಾಗಿ ಹಲಗೆ ಬಳಕೆಯಾಗುತ್ತದೆ. ಇಷ್ಟು ವ್ಯಾಪಕವಾಗಿ ಬಳಕೆಯಾಗುವ ಇದು ನಿರ್ದೇಶಿಸುತ್ತದೆ. ಹಲಗೆ ವಾದನ ಕಲೆ ವಿಶಿಷ್ಟ ವಾದನ ಕಲೆಯಾಗಿ ನಾಡಿನ ಹಳ್ಳಿ-ಹಳ್ಳಿಗಳಲ್ಲಿ ಬೆಳೆದಿದೆ. ವಿವಿಧ ಬಗೆಯ ವಿಶಿಷ್ಟ ಧ್ವನಿಗಳನ್ನು ಹಲಗೆಯ ಮೂಲಕ ಹೊರಡಿಸುವ ಪರಿಣಿತರಿದ್ದಾರೆ. ಚಿಟ್ಟಲಗಿ ಮೇಳದಲ್ಲಿ ತ್ವರಿತ ಹಾಗೂ ರಭಸಗತಿಯಿದೆ. ಹಲಗೆಯ ಬಡಿತದಲ್ಲಿ ವಿವಿಧ ಗತ್ತುಗಾರಿಕೆಗಳಿವೆ. ಕುದುರೆಗತ್ತು, ಗಂಧಾರಗತ್ತು, ದೇವರಗತ್ತು, ಹಣಮಂತನ ಗತ್ತು, ದೀನಬಾಜು, ಭೂತಾಲ, ಚಿತ್ರಾಟ ಮೊದಲಾದ ಗತ್ತುಗಳಲ್ಲಿ ಹಲಗೆಯನ್ನು ಬಾರಿಸುವುದುಂಟು. ಪಾಂಚಾಳ ಕಲಾಕಾರನ ನೈಪುಣ್ಯತೆಗೆ ಸಾವಲೊಡ್ಡುವ ಕಲೆಯಿದು.

ಬಾಗಲಕೋಟೆ ಜಿಲ್ಲೆಯ ಹೋಳಿಹಬ್ಬದ ಸಂದರ್ಭದಲ್ಲಿ ಹದಿನೈದು ದಿನಗಳವರೆಗೆ ಹಲಗೆಯ ಮೇಳಗಳಿಂದ ಒಂದೊಂದು ಓಣಿಯ ಹಲಗೆ ಮೇಳದ ಕಲಾವಿದರು ವಿಶಿಷ್ಟ ರೀತಿಯ ಹಲಗೆ ಲಯ ಬಾರಿಸುತ್ತ ತಮ್ಮ ಕಲೆಯನ್ನು ನಾಡಿನ ತುಂಬಾ ಜನಪ್ರಿಯ ಪಡೆದ ಹತ್ತಾರು ಹಲಗೆಗಳು ಒಂದೆಡೆ ಕೂಡಿ ಬಾರಿಸುವಾಗಲೂ ಧ್ವನಿಯ ಏರಿಳಿತದಲ್ಲಿ ವ್ಯತ್ಯಾಸವಾಗದು. ಇಡಿಯಾಗಿ ನುಡಿಸಲಿ ಬಿಡಿ-ಬಿಡಿಯಾಗಿ ನುಡಿಸಲಿ ಹಲಗೆ ವಾದ್ಯಕ್ಕೊಂದು ಸಮಷ್ಠಿ ಸ್ವರೂಪ ಪ್ರಾಪ್ತವಾಗುತ್ತದೆ. ಹಲಗೆ ಮೇಳಗಳಲ್ಲಿ ಹತ್ತಾರು ವೈವಿಧ್ಯಮಯವಾದ ಕಲೆಗಳನ್ನು ಪ್ರದರ್ಶಿಸುತ್ತಾರೆ. ಹಲವಾರು ಭಂಗಿಗಳಲ್ಲಿ ಈ ವಾದ್ಯ ನುಡಿಸುವುದುಂಟು. ಯುಗಾದಿ, ಪಂಚಮಿ ದೀಪಾವಳಿ, ಸಂಕ್ರಮಣ, ಮಹಾನವಮಿ, ಹೋಳಿ ಇತ್ಯಾದಿ ಸಾಂಸ್ಕೃತಿಕ ಸಂದರ್ಭದಲ್ಲಿ ಈ ವಾದ್ಯದ ಬಳಕೆಯಾಗುತ್ತದೆ. ಧಾರ್ಮಿಕ, ಸಾಮಾಜಿಕ, ಸಂವಹನದ ಸಾಧನವಾಗಿ ಪ್ರಚಾರದ ಮಾಧ್ಯಮವಾಗಿ ಹಲಗೆ ಬಳಕೆಯಿದೆ.

೫.೪. ಪಾಂಚಾಳರು : ಜನಪದ ಕುಣಿತಗಳು :

೫.೪.೧. ಡೊಳ್ಳು ಕುಣಿತ(ಮೇಳ) :

ಡೊಳ್ಳು ಹಾಡಿನ ರೂಪ ತುಂಬಾ ಪ್ರಾಚೀನವಾದುದ್ದು. ಇತ್ತೀಚಿನ ದಿನಗಳಲ್ಲಿ ಹೆಚ್ಚು ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡಿದೆ. ಹಾಡಿನ ಲಯ, ಸಂಭಾಷಣೆ, ಡೊಳ್ಳು ವಾದ್ಯದ ನಾದದಿಂದ ಕುಣಿತ ಮೊದಲಾದವುಗಳಿಂದ ವಿಶಿಷ್ಠ ಮೇಳವಾಗಿ ಈ ರೂಪಕದ ಬಗ್ಗೆ

ಇಲ್ಲಿಯವರೆಗೆ ನಡೆದ ಅಧ್ಯಯನದ ವಿವರವನ್ನು ಗುರುತಿಸಬಹುದು. ಸಿಂಪಿ ಲಿಂಗಣ್ಣ (೧೯೭೪-೨೦೯) ಶಿವಾನಂದ ಗುಬ್ಬನ್ನವರ (೧೯೯೩) ಎಲ್.ಹನುಮಂತಯ್ಯ(೧೯೫೮) ಎಫ್.ಟಿ.ಹಳ್ಳಿಕೇರಿ ಮುಂತಾದವರು. ಕುರುಬರ ಸಾಂಸ್ಕೃತಿಕ ನಲೆಗಳು ಮತ್ತು ಅವರ ಡೊಳ್ಳು ಹಾಡುಗಳ ಕುರಿತು ಗಂಭೀರವಾಗಿ ಚರ್ಚಿಸಿದ್ದಾರೆ. ಕುರುಬರ ಸ್ವರಚನೆಗಳಾಗಿವೆ.

ಕರ್ನಾಟಕದ ಬಾಗಲಕೋಟೆ, ವಿಜಯಪುರ, ಬೆಳಗಾವಿ ಜಿಲ್ಲೆಗಳಲ್ಲಿ ಡೊಳ್ಳು ಕುಣಿತ ಹೆಚ್ಚು ಪ್ರಚಲಿತವಾಗಿದೆ. ಡೊಳ್ಳು ಎನ್ನುವ ವಾದ್ಯ ವಿಶೇಷ ಸಮಾರಂಭಯೊಂದಿಗೆ ನಡೆಯುವ ಈ ಕುಣಿತ ಕುರುಬ ಜಾತಿಯೊಂದಿಗೆ ನೇರವಾದ ಸಂಬಂಧ ಹೊಂದಿದೆ. ಇತ್ತೀಚೆಗೆ ಬೇವೂರು ಗ್ರಾಮದ ಈರಣ್ಣ ಬಡಿಗೇರ ಅವರು ಈ ಕಲೆಯಲ್ಲಿ ತಾಳ ವಾದಕರಾಗಿ ಪಾಲ್ಗೊಳ್ಳುತ್ತಾರೆ.

ಡೊಳ್ಳಿನ ಹಾಡುಗಳು ಕುರುಬರ ಸ್ವರಚನೆಗಳಾಗಿವೆ. ಆದರೂ ಸಾಹಿತ್ಯಿಕ ಜನಪದ ಕಲೆಗಳಲ್ಲಿ ಪ್ರಾಮುಖ್ಯತೆ ಪಡಿದಿವೆ. ಪಾಂಚಾಳರಿಗೂ ಡೊಳ್ಳಿಗೂ ಏನು ಸಂಬಂಧ? ಇಲ್ಲಿ ಡೊಳ್ಳು ಹಲಗೆಯ ಪಳಿಯನ್ನು ಹಸಿದು ಇದ್ದಾಗ ಸೂತ್ತಲೂ ಬರುವಂತೆ (ಬಾಗುವಂತೆ) ಹದಮಾಡುವದು ಮುಂದೆ ಅದಕ್ಕೆ ಆಡಿನ ಚರ್ಮ, ಎಮ್ಮೆ, ಇತರೆ ಚರ್ಮ ಜೋಡಿಸಿ ಬಿಗಿದು ಕೊಡುವರು. ಬಾರಿಸಲಿಕ್ಕೆ ಕಟ್ಟಿಗೆಯ ಕೋಲು, ಬಡಿಗೆ, ಮಾಡಿ ಕೊಟ್ಟವರು ಪಾಂಚಾಳರು. ಜನಪದ ಪ್ರದರ್ಶನ ರೂಪಕಗಳಲ್ಲಿ ಸಕಲ ಜ್ಞಾನವುಳ್ಳವರು. ಅಷ್ಟೇ ಅಲ್ಲದೆ ಬಿಜಾಪೂರ ತಾಲೂಕಿನ ಆ ಮೇಳದಲ್ಲಿ ಸದಾಶಿವ ಬಡಿಗೇರ ಅವರು ಡೊಳ್ಳು ಬಾರಿಸುವ ಕಲಾವಿದರು ಆಗಿರುವರು.

ವಾದ್ಯಬಳಗದಲ್ಲಿ 'ಡೊಳ್ಳು' ಮಹಾರಾಜನ ಸ್ಥಾನದಲ್ಲಿದೆ. ಇದೊಂದು ಪೌರುಷ ಪ್ರಧಾನ ವಾದ್ಯ. ಶಕ್ತಿ ಸಾಮರ್ಥ್ಯ ಹಾಗೂ ಕೌಶಲ್ಯವನ್ನು ಏಕಕಾಲಕ್ಕೆ ಓರೆಗಲ್ಲಿಗೆ ಹಚ್ಚಿ ನೋಡುವಂಥದು. ಹಾಲುಮತದವರು ಡೊಳ್ಳಿನ ಕಲಾರಾಧಕರು. ಕುರಿಗಳನ್ನು ಹೊಂಚು ಹಾಕಿ ಕಬಳಿಸಲು ಬರುವ ಹಿಂಸಿಸುವ ಪ್ರಾಣಿಗಳನ್ನು ಹೆದರಿಸಲು ಈ ವಾದ್ಯ ರೂಪಗೊಂಡಿದೆಯೆಂಬ ಪ್ರತೀತಿಯಿದೆ. "ಕುರಿಯ ಮೇಲೆ ಕಣ್ಣಿರಲಿ, ಡೊಳ್ಳಿನ ಮೇಲೊಂದು ಕೈಯಿರಲಿ ಬೀರಾ" ಎಂಬ ಮಾತಲ್ಲಿ ಅನ್ವಯವಾಗುತ್ತದೆ. ಈ ವಾದ್ಯದ ಹುಟ್ಟು, ಬೆಳವಣಿಗೆ ಪೌರಾಣಿಕ ಹಿನ್ನಲೆಯನ್ನು ವಿವರಿಸುತ್ತಾರೆ. ಇದೆಲ್ಲ ಸದ್ಯ ಅಪ್ರಸ್ತುತ. ಯಾವ ಬದಲಾವಣೆಯನ್ನು ಬಯಸದೆ ಮೂಲದಲ್ಲಿ ಇದ್ದ ಸ್ವರೂಪದಲ್ಲಿಯೇ ಉಳಿದಿರುವ ವಾದ್ಯವಿದು. ಇದರ ರಚನೆ ತುಂಬಾ ಸರಳ. ಪೊಳ್ಳಗಿರುವ ಸಿಲಿಂಡರಿಗೆ ಎರಡೂ ಬದಿಗೆ ಚರ್ಮದ ಹೊದಿಕೆ ಹಾಕಿ ಮಾಡಲಾಗುತ್ತದೆ.

ಡೊಳ್ಳಿನ ಮೇಳ, ಡೊಳ್ಳಿನವಾಲಗ, ಬಡ್ಡಿ ವಾಲಗ ಮುಂತಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಡೊಳ್ಳನ್ನು ಕುತ್ತಿಗೆಗೆ ನೇತುಹಾಕಿ ಇಲ್ಲವೆ ಟೊಂಕಕ್ಕೆ ಕಟ್ಟಿಕೊಂಡು ಬಾರಿಸುತ್ತಾರೆ. ಜಾತ್ರೆ, ತೇರು, ಪಲ್ಲಕ್ಕಿ ಉತ್ಸವ ಬೀರದೇವರ ರಥೋತ್ಸವ, ದೀಪಾವಳಿ, ಯುಗಾದಿಗಳಂತಹ ಹಬ್ಬಗಳಲ್ಲಿ, ಧಾರ್ಮಿಕ ಸಮಾರಂಭ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಡೊಳ್ಳಿನ ಮೇಳ ಜರುಗುತ್ತದೆ. ಮೆರವಣಿಗೆಯಲ್ಲಿ ಧೀರ-ಗಂಭೀರವಾಗಿ ಹೆಜ್ಜೆ ಹಾಕುತ್ತ ಮಠ-ಮಂದಿರಗಳ ಮುಂದೆ ಕೆಲ

ಹೊತ್ತು ನಿಂತು ವಾದ್ಯ ಸೇವೆ ಸಲ್ಲಿಸಿ ಮುಂದುವರೆಯುತ್ತಾರೆ. ಎಲ್ಲ ಧಾರ್ಮಿಕ ಸಮಾರಂಭಗಳಲ್ಲಿ ಡೊಳ್ಳು ಕುಣಿತ ಮಾಡುತ್ತಾರೆ. ಈ ಡೊಳ್ಳು ಒಂದು ನಿರ್ದಿಷ್ಟ ಕಾಲಮಾನಕ್ಕೆ ಅಥವಾ ಜನಾಂಗಕ್ಕೆ ಸಂಬಂಧಿಸಿದ ಕುಣಿತವಾಗಿ ಉಳಿದಿಲ್ಲ. ಗ್ರಾಮ ದೇವರ ಮದುವೆ-ಮುಂಜಿ, ಹಬ್ಬ, ಜಾತ್ರೆ, ಉತ್ಸವ, ಗಣಪತಿ ವಿಸರ್ಜನೆ ಮುಂತಾದ ಸಮಾರಂಭಗಳಲ್ಲಿ ವಿಶೇಷವಾಗಿ ಹಾಲುಮತ ಸಮುದಾಯದವರು ಮುಖ್ಯವಾಗಿ ಡೊಳ್ಳು ಕುಣಿತ ಅಥವಾ ಡೊಳ್ಳು ಬಾರಿಸುವುದು ಇದ್ದೇ ಇರುತ್ತದೆ.

ಡೊಳ್ಳುವಾದನ ತಾರಕಕ್ಕೆ ಏರಿದಾಗ ಆವೇಶಪೂರಿತವಾಗಿ ಕುಣಿಯುವಾಗ, ಲಾಗ ಹಾಕುವುದು ಸಾಮಾನ್ಯವಾದ ದೃಶ್ಯ. ಡೊಳ್ಳಿನ ವಾದನದ ವೇಗ ಕ್ರಮೇಣ ವೃದ್ಧಿಸುತ್ತ ಹೋಗಿ ಉತ್ತುಂಗ ಶಿಖರ ತಲುಪಿದಾಗ, ಗಂಭೀರ ವಾದ್ಯವೃಂದದಿಂದ ಇಡೀ ಪರಿಸರವೇ ಭಾವೋನ್ಮಾದಕ್ಕೆ ಒಳಗಾಗುತ್ತದೆ. ಹಾಡುವ ಬೈಟಕ್ಕೆ ಮುಂಚೆ ಕೆಲ ನಿಮಿಷ ಡೊಳ್ಳು ಬಾರಿಸುತ್ತಾರೆ. ಅದಕ್ಕೆ 'ಸರಿಪಟ್ಟ'ವೆಂದು ಕರೆಯುತ್ತಾರೆ. "ಡೊಳ್ಳು ದಿಲ್ಲಿಗೆ ಹೋದರೂ ಒಂದೇ ಪೆಟ್ಟು" ಎಂಬ ಮಾತಿನಿಂದ ಹಳ್ಳಿಯಿರಲಿ ಡೊಳ್ಳುಬಾರಿಸುವ ವಿಧವಾಗಿರುತ್ತದೆ ಎಂಬುದನ್ನಿದು ಸೂಚಿಸುತ್ತದೆ. ಒಂದು ಗುಣಿ ಪೆಟ್ಟು ಆಮೇಲೊಂದು ಪೆಟ್ಟು, ಡೊಳ್ಳು ವಾದ್ಯಕಲೆ. ಹಾಡು ರಹಿತವೂ ಹೌದು, ಹಾಡು ಸಾಹಿತ್ಯವೂ ಹೌದು. ಕುಣಿತವನ್ನು ಒಳಗೊಂಡ ಕಲೆಯೂ ಆಗಿರುತ್ತದೆ.

೫.೪.೨. ಮೊಹರಂ ಹಬ್ಬದ ಹಾಡು ಹಾಗೂ ಕುಣಿತ :

ಮೊಹರಂ ಇದು ಮಹಮ್ಮದೀಯರ, ಒಂದು ತಿಂಗಳಲ್ಲಿ ಬರುವ ಐದು ದಿನಗಳ ಆಚರಣೆಯಾಗಿ ಹೆಸರುವಾಸಿಯಾಗಿದೆ. ಇಸ್ಲಾಂ ಹಿಜರಿ ಶಕೆಯ ವರ್ಷದ ಆರಂಭದ ತಿಂಗಳು. ಈ ಮೊಹರಂಗೆ ಐತಿಹಾಸಿಕ ಪರಂಪರೆ ಇರುತ್ತದೆ. ಈ ತಿಂಗಳಲ್ಲಿ ನಡೆದ ಕರ್ಬಲಾ ಮೈದಾನದ ಧರ್ಮಯುದ್ಧದಲ್ಲಿ ಹುತಾತ್ಮರಾದ ಪ್ರವಾದಿಗಳನ್ನು ಕುರಿತು ನಡೆಯುವ ಶೋಕಾಚರಣೆಯೇ 'ಮೊಹರಂ' ಆಚರಣೆ. ಇದಕ್ಕೆ 'ಅಲಾಯಿ' ಹಬ್ಬವೆಂದು ಕರೆಯುತ್ತಿದ್ದರು. ಅಲಾಯಿ, ಅಲಾವಿ, ಅಲಾಬ ಎಂಬ ಹೆಸರುಗಳಿಂದ ಬಂದಿದೆ. ವಿಶ್ವದ ತುಂಬಾ ಆಚರಣೆ ಮಾಡುತ್ತಾರೆ. ಇದು ಅರಬ್ಬಿ ಭಾಷಿಯ ಪದ. ಭಾರತ ದೇಶದಲ್ಲಿ ಹಿಂದೂ ಮುಸ್ಲಿಂ ಸಮುದಾಯಗಳು ಕೂಡ ಆಚರಿಸುವ ಈ ಹಬ್ಬದಲ್ಲಿ ಹಿಂದೂ-ಮುಸ್ಲಿಮರಿಗೆ ಚಂದ್ರನೊಬ್ಬನೆ ಎಂಬ ಭಾವನೆಯಿದೆ. ಪಾಂಚಾಳರು ಅಲಾಯಿ ಮೊಹರಂ ಹಬ್ಬದಲ್ಲಿ ದೇವರ ಮೂರ್ತಿಗಳನ್ನು, ಬೆಳ್ಳಿ-ಬಂಗಾರ ಕಬ್ಬಿಣ ಕಟ್ಟಿಗೆ ಮುಂತಾದವುಗಳಿಂದ ತಯಾರು ಮಾಡಿಕೊಡುತ್ತಿದ್ದರು. ಮೊಹರಂ ಹಬ್ಬದ ವಿಶೇಷ ದಿನದಲ್ಲಿ ಡೋಲಿಯು ಆಚರಣೆಗೆ ಒಳಪಡುತ್ತದೆ. ಇದರಲ್ಲಿ ಕುಳಿತುಕೊಳ್ಳುವ ಬೊಸಿ ಮತ್ತು ಬಿ.ಬಿ. ಫಾತಿಮಾ ಕುಂದುರುವ ಸ್ಥಳಯನ್ನು ಚೌಕಾಕಾರವಾಗಿ ವಿಶೇಷ ಕಟ್ಟಿಗೆಯಿಂದ ಬಡಿಗನು ತಯಾರುಮಾಡಿ ಕೊಡುವನು.

ವಿಜಯಪುರದ ಬಹಮನಿಶಾಹಿ ಮನೆತನಗಳ ಕಾಲದಲ್ಲಿ ಮೊಹರಂ ಹಬ್ಬ ಬಹಳ ಪ್ರಸಿದ್ಧಿ ಇದೆ. ಇವತ್ತಿಗೂ ವರ್ಷಕ್ಕೊಮ್ಮೆ ಬರುವ ಜಾತ್ರೆಯಿದು. ಪ್ರತಿ ಹಳ್ಳಿಗಳಲ್ಲಿ ಹಿಂದೂ ಮುಸ್ಲಿಂರು ಕೂಡಿ ಆಚರಿಸುವರು. ಹೆಜ್ಜೆ ಕುಣಿತ, ರಿವಾಯಿತ, ಹಲಿಗೆಮೇಳ, ಕಳ್ಳೊಳ್ಳಿ ಇಂತಹ ಆಚರಣೆಗಳಲ್ಲಿ ಪಾಂಚಾಳರ ಪಾತ್ರ ಬಹು ಮುಖ್ಯವಾಗಿತ್ತು. ಜನಪದ ಕಲೆಗಳಲ್ಲಿ ಪಾಂಚಾಳರ ಸಂಬಂಧವಿತ್ತು. ಉತ್ತರ ಕರ್ನಾಟಕದ ಪ್ರಾಚೀನ ಜನಪದ ಹಬ್ಬಗಳಲ್ಲಿ ಮೊಹರಂ ಹಬ್ಬವು ಪ್ರಮುಖ. ಹಿಂದೂ, ಮುಸ್ಲಿಂರ ಭಾವೈಕ್ಯತೆಯ ಸಂಕೇತವಾಗಿದೆ. ಮೊಹರಂ ಆಚರಣೆ ವೇಳೆ ಹಲಗೆ ಬಾರಿಸುವುದು, ಹೆಜ್ಜೆ ಹಾಕುತ್ತಾ ವಿವಿಧ ರೀತಿಯ ಆಟವಾಡುವುದು, ರಾತ್ರಿಯಿಡಿ ರಿವಾಯತ ಪದಗಳು ಜರಗುವವು.

"ಮೊಹರಂ ಹಬ್ಬದಲ್ಲಿ ಹೇಳುವ ಹಸನ್ ಮತ್ತು ಹುಸೇನ್‌ರ ಬಲಿದಾನದ ಕಥೆಗಳು ಹಂತಿ ಪದಗಳೆಂದು ಕರೆಯುವರು. ಇವುಗಳಲ್ಲಿ ಆಡುಮಾತಿನ ಸರಳ ಸೌಂದರ್ಯವು ಕಾರ್ಯ ಮತ್ತು ಶೋಕದ ಪರಿಣಾಮಕಾರಿಯಾದ ಭಾವನೆಗಳೂ ಇವೆಯೆಂದು ಶ್ರೀ ಬಿ.ಎ. ಸನದಿ ಅವರ ಅಭಿಪ್ರಾಯ.[೯]

ಮೊಹರಂ ಆಚರಣೆ ಮತ್ತು ಮೊಹರಂ ಕಣಿತ ಮುಸ್ಲಿಮರಿಗೆ ಸೀಮಿತವಾಗಿದ್ದರೂ ಕಾಲಾಂತರದಲ್ಲಿ ಹಿಂದೂಧರ್ಮ ಹಾಗೂ ಸಂಸ್ಕೃತಿಯ ಪ್ರಭಾವಗಳ ಮೇಲಾಗಿ ಹಿಂದೂಗಳು ಆ ಉತ್ಸವಗಳಲ್ಲಿ ಪಾಲ್ಗೊಳ್ಳಲಾರಂಭಿಸಿದರು. ಇತರ ಹಿಂದೂ ಸಮುದಾಯದವರು ಜಾತಿ, ಮತವೊಂದನ್ನು ಪರಿಗಣಿಸದೇ ಖ್ಯಾತ ರಚನೆಯತ್ತ ಕಲಾವಿದರನ್ನು ಪಾಂಚಾಳರಿಗೆ ವೀಳ್ಯಕೊಟ್ಟು ಆಮಂತ್ರಿಸಿ, ಹಾಡು ಕೇಳಿ, ಕುಣಿದು ಕುಪ್ಪಳಿಸಿ, ಪಾಂಚಾಳರನ್ನು ಸನ್ಮಾನಿಸುವ ಪರಂಪರೆ ಬಾಗಲಕೋಟೆ ಜಿಲ್ಲೆಯ ಗಂಜಿಹಾಳ, ಅಚನೂರು, ಬೇವೂರು, ದಣ್ಣೂರು ಮುಂತಾದ ಹಳ್ಳಿಗಳಲ್ಲಿ ಈಗಲೂ ಮುಂದುವರೆಸಿಕೊಂಡು ಬಂದಿರುವುದು ವಿಶೇಷವಾಗಿದೆ.

ಈ ಕುಣಿತದಲ್ಲಿ ೨೦ರಿಂದ ೩೦ ಕಲಾವಿದರು ಇರುತ್ತಾರೆ. ಪಾಂಚಾಳರು ಸರಿಸಮಾನವಾಗಿ ಭಾಗವಹಿಸುವುದೊಂದು ವಿಶೇಷವಾಗಿದೆ. ಹಬ್ಬದ ದಿನ ಹಿಂದೂಗಳು, ಮುಸ್ಲಿಮರು ಕೂಡಿ ಯಾವ ಬೇಧ-ಭಾವಗಳಿಲ್ಲದೆ ರಿವಾಯತಿ (ಕರ್ಬಲ್) ಮೇಳಗಳನ್ನು ರಚಿಸಿಕೊಂಡು ಕನ್ನಡದ ಹಾಡುಗಳನ್ನು ಹಾಡುತ್ತಾ, ಕುಣಿಯುತ್ತಾ ಮನೆಯಿಂದ ಮನೆಗೆ ಸಂಚರಿಸುವರು.

ಜನಪದ ಸಾಹಿತ್ಯದಲ್ಲಿ ಪ್ರಚಲಿತವಿರುವ ಶಿಶುಪ್ರಾಸ, ಮದುವೆ ಹಾಡು ಮೊದಲಾದವು ಮುಸ್ಲಿಮರಲ್ಲೂ ಕಂಡುಬರುತ್ತವೆ. ಉತ್ತರ ಕರ್ನಾಟಕದಲ್ಲಿ ಮೊಹರಂ ಹಬ್ಬದ ಆಚರಣೆಗಳು ಪ್ರಮುಖ ಸ್ಥಾನವಹಿಸುತ್ತವೆ. ಮೊಹರಂ ಪದಗಳು ಕನ್ನಡದಲ್ಲಿದ್ದರೂ ಅವುಗಳಲ್ಲಿ ಉರ್ದು ಪದಗಳು ಸೇರಿಕೊಂಡು ಕನ್ನಡ ಭಾಷಾ ಬೆಳವಣಿಗೆಗೆ ಸಹಾಯಕವಾಗಿವೆ. "ದಸ್ತಗಿರಿ ಅಲ್ಲಬಾಯಿ"ಯವರು ಪಿಎಚ್.ಡಿ. ಸಂಶೋಧನಾ ಪ್ರಬಂಧದಲ್ಲಿ ಏಳು ವಿಧಗಳನ್ನು ಗುರುತಿಸುತ್ತಾರೆ. ಆದರೆ ಕನ್ನಡ ಭಾಷೆಯಲ್ಲಿ ದೊರೆಯುವ ಈ ಪದಗಳು ಹಿಂದೂ-ಮುಸ್ಲಿಂರ ನಡುವೆ

ಕೊಂಡಿಯಾಗಿಸಿ ಭಾವೈಕ್ಯತೆಗೆ ಹಾದಿ ಮಾಡಿಕೊಡುತ್ತವೆ. ಇಸ್ಲಾಮಿನ ಇತಿಹಾಸವನ್ನರಿಸಲು ಸಹಕರಿಸುವ ಈ ಪದಗಳು ಲಾವಣಿ ಶೈಲಿಯಲ್ಲಿರುವುದರಿಂದ ಹಾಡಲು ಅನುಕೂಲವಾಗಿದೆ. ಮುಸ್ಲಿಂ ಆಚರಿಸುವ ಪ್ರತಿ ಹಬ್ಬದ ಹಿಂದೆ ಐತಿಹ್ಯವಿದ್ದೇ ಇರುತ್ತದೆ. ಬಕ್ರೀದ್, ರಂಜಾನ್, ಉರುಸ್ ಮತ್ತು ಈದ್‌ಮಿಲಾದ್ ಮುಂತಾದವುಗಳು ಸಾಮರಸ್ಯದ ಸಂಕೇತವಾಗಿವೆ.

೫.೪.೩. ಪುರವಂತರು (ವೀರಭದ್ರ ಕುರಿತು) :

ಜನಪದ ಕಲಾಮೇಳಗಳಲ್ಲಿ ಶೈವ ಸಂಪ್ರದಾಯಕ್ಕೆ ಸೇರಿದ ಉತ್ತರ ಕರ್ನಾಟಕದ ಒಂದು ಜನಪದ ಧಾರ್ಮಿಕ ವೀರನೃತ್ಯ. ವೀರಭದ್ರನ ಅವತಾರಗಳನ್ನು ಕಲೆಗಳ ಮೂಲಕ ಅಭಿವ್ಯಕ್ತಗೊಳಿಸುವುದು. ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಲಿಂಗಬೀರ್, ಲಿಂಗಧೀರ, ಲಿಂಗವೀರ ಕುಣಿತವೆಂದೂ ಕರೆಯುವುದುಂಟು.

ಪಾಂಚಾಳ ಸಮುದಾಯದ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ನಾರಾಯಣ ಬಡಿಗೇರ ಅವರ ಕಲೆಯು ಅದು ಪುರವಂತಿಗೆಯು ಜಾತ್ರೆ, ಉತ್ಸವ, ಹಬ್ಬ-ಹರಿದಿನಗಳಲ್ಲಿ ಬರುವ ಮದುವೆ-ಮುಂಜಿಗಳಲ್ಲಿ ವಿಶೇಷವಾದುದು. ಪಾಂಚಾಳ ಸಮುದಾಯದವರು ಈ ಕಲೆಯಲ್ಲಿ ಭಾಗವಹಿಸುವರು. ಪುರವಂತ ಕುಣಿತ, ವೀರಗಾಸೆ ಕುಣಿತವನ್ನು ವೀರಭದ್ರನ ಪ್ರತೀಕವಾಗಿ ದುರಹಂಕಾರಿಯಾದ ದಕ್ಷಬ್ರಹ್ಮನನ್ನು ಸಂಹಾರ ಮಾಡಿದ ಕಾರಣವಾಗಿ ಮಾಡುತ್ತಾರೆ. ವೀರಭದ್ರನು ಶೈವ ಪಂಥದ ಆಚರಣೆಯಾದ ಪುರವಂತಿಕೆಯು ಕಾಲಾಂತರದಲ್ಲಿ ವೀರಶೈವರ ವೀರಗಾಸೆ ಆಚರಣೆಯಾಗಿರಬಹುದು. ಪುರವಂತಿಕೆ ವೀರಗಾಸೆ ಎರಡರಲ್ಲೂ ವಿಶೇಷ ಭೇದವಿಲ್ಲ. ಮೂಲ ಉದ್ದೇಶ ಒಂದೇ ಇದ್ದರೂ ಪ್ರಾದೇಶಿಕ (ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ) ಭಾಗಗಳಲ್ಲಿ ಆಚರಣೆಯಲ್ಲಿ ಸ್ವಲ್ಪ ಭಿನ್ನತೆ ಕಾಣಿಸಿಕೊಂಡಂತಿದೆ.

ವಿಜಯಪುರ, ಬಾಗಲಕೋಟೆ ಭಾಗದಲ್ಲಿ ಈ ಪುರವಂತಿಕೆಯ ಆಚರಣೆ ವಿಶೇಷವಾಗಿ ಗೋಚರಿಸುತ್ತದೆ. ಧಾರ್ಮಿಕ ಮೂಲವಾದ ಈ ಆಚರಣೆ ಇಂದು ಸಾಮಾಜಿಕ ಚಟುವಟಿಕೆಗಳಲ್ಲಿಯೂ ಮನರಂಜನೆಗಾಗಿ ಜರುಗುತ್ತಿರುವುದನ್ನು ಕಾಣುತ್ತೇವೆ. ಇದಕ್ಕಾಗಿ ಕೆಲವು ಕಲಾವಿದರ ಪರಿಚಯ ಕಾಣಬಹುದು.

ಪಾಂಚಾಳ ಸಮುದಾಯದವರು ಪುರವಂತರಾಗಿ ವೀರಭದ್ರನ ವೇಷಭೂಷಣ ತೊಟ್ಟುಕೊಂಡು ಕೈಯಲ್ಲಿ ಶಸ್ತ್ರ ಹಿಡಿದುಕೊಂಡು ತಮ್ಮ ಸೇವೆ ಸಲ್ಲಿಸುವರು. ಈ ಸಂದರ್ಭದಲ್ಲಿ 'ಒಡಬು' (ಒಡಪು) ಹೇಳುತ್ತಾ ಗುರುವಿನ ಗುರುವಾದ ವೀರಭದ್ರನನ್ನು ಕುರಿತು ಹಾಡುತ್ತಾರೆ. ಶಹನಾಯಿ ಸಂಬಾಳಗಳ ತಾಳಗತ್ತಿನೊಂದಿಗೆ ಪುರವಂತರು ಕುಣಿಯುತ್ತಾರೆ. ನೆಲದ ಮೇಲೆ ನಡೆಯುವಾಗಲೂ ಮಡಿ ಮಾಡಿದ ಅರಿವೆ ಹಾಸುವರು. ಇದನ್ನು ನೆಲಮಡಿ ಎಂದು ಕರೆಯುವರು. ಹಾಡು, ಒಡಪು ಹೇಳುತ್ತಾ ಕೈ, ಹೊಟ್ಟೆ, ಎದೆ, ಕೊರಳು, ಗಲ್ಲ, ತುಟಿ, ನಾಲಿಗೆ ಹೀಗೆ ದೇಹದ

ವಿವಿಧ ಭಾಗಗಳಲ್ಲಿ ಪಂಚಲೋಹದ ಶಸ್ತ್ರ ಚುಚ್ಚಿಕೊಳ್ಳುವರು. ಪುರವಂತರ ಸೇವೆಮಾಡಿ ವೀರಭದ್ರನ ಉಪಾಸಕರಾದ ಪಾಂಚಾಳರು ವೀರಶೈವರಲ್ಲಿಯೂ ಇದೊಂದು ಧಾರ್ಮಿಕ ಆಚರಣೆಯಾಗಿ ಬೆಳೆದುಬಂದಿದೆ. ವೀರಭದ್ರನ ಹೆಸರಿನಲ್ಲಿ ನಡೆಯುವ ಈ ಆಚರಣೆ ಜಾತ್ರೆಯ ಪ್ರಮುಖ ಕ್ರಿಯೆಗಳಲ್ಲಿ ಒಂದಾಗಿದೆ.

ಪುರವಂತರ ವೇಷಭೂಷಣಗಳು ರೌದ್ರತೆಯ ಸಂಕೇತವಾಗಿ ಕೆಂಪು ಕಾಸೆ, ಪಂಜೆ ಕೆಂಪು ಇಲ್ಲವೆ ಹಸಿರು, ರುಮಾಲು ಧರಿಸುತ್ತಾರೆ. ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ 'ಮಹಾರುದ್ರ'ನ ಪ್ರತಿಮೆಯಿರುವ ಹಲಗೆಯನ್ನು ಇಲ್ಲವೇ ದೇಹದಲ್ಲಿ ಚುಚ್ಚಿಕೊಳ್ಳುವ ಪಂಚಲೋಹಗಳಿಂದ ಸಿದ್ಧಪಡಿಸಿದ ಶಸ್ತ್ರಗಳ ಗುಚ್ಛವನ್ನು ಹಿಡಿದಿರುತ್ತಾರೆ. ಕೆಂಪು ಇಲ್ಲವೆ ಹಸಿರು ಗಲೀಪ ಹಾಕಿಕೊಂಡು ಹಿತ್ತಾಳೆ, ಬೆಳ್ಳಿಯ ಗಗ್ಗರಗಳನ್ನು ಸೊಂಟಕ್ಕೆ ಕಟ್ಟಿಕೊಂಡಿರುತ್ತಾರೆ. ಕೊರಳು, ರಟ್ಟೆ, ಮುಂಗೈಗಳಿಗೆ ರುದ್ರಾಕ್ಷಿ ಸರಗಳನ್ನು ಕಟ್ಟಿಕೊಂಡು ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡಿರುತ್ತಾರೆ. ಮುಖಕ್ಕೆ ಕೆಂಪು, ಬಿಳಿಯ ಬಣ್ಣವನ್ನು ಹಚ್ಚಿಕೊಂಡು ಪ್ರಳಯ ಕಾಲದ ಮಹಾರುದ್ರನಂತೆ ಕಾಣುವ ವೇಷವನ್ನು ಧರಿಸುತ್ತಾರೆ. ಶಹನಾಯಿ, ಸಂಬಾಳಗಳ ತಾಳಗತ್ತಿನೊಂದಿಗೆ ಕುಣಿಯುತ್ತಾರೆ. ಮೆರವಣಿಗೆ ಮೂಲಕ ಹೋಗುವಾಗ ವೀರಭದ್ರನ ಒಡಪುಗಳನ್ನು ಮತ್ತು ವೀರಭದ್ರನ ವ್ಯಕ್ತಿತ್ವವನ್ನು ಸಾರುತ್ತಾರೆ.

೧. ಮನೋಹರ ರಾಚಪ್ಪ ಬಡಿಗೇರ

೨. ವಿಠಲ ರಾಮಪ್ಪ ಬಡಿಗೇರ

೩. ಈರಪ್ಪ ರಾಮಪ್ಪ ಬಡಿಗೇರ, ಕೋಡಿಹಾಳ

೪. ರಾಮಪ್ಪ ಕಾಳಪ್ಪ ಬಡಿಗೇರ

ಪುರವಂತರು ವೀರಭದ್ರ ವೇಷ ಧರಿಸಿದವ ಉರಿಯುವ ಕರ್ಪೂರವನ್ನು ಅಂಗೈ ಹಾಗೂ ನಾಲಿಗೆ ಮೇಲಿಟ್ಟುಕೊಳ್ಳುವ, ನೀರು ತುಂಬಿದ ಚೆಂಬನ್ನು ಹೊತ್ತು ನೀರು ಚೆಲ್ಲದಂತೆ ಸುತ್ತಿಸುವುದು. ಇದರಂತೆ ಅಕ್ಕಿ ಮುಂತಾದ ಚಮತ್ಕಾರಗಳು ಮೂಲದ ಶಸ್ತ್ರ ಪವಾಡಗಳುಂಟು. ಇಂತಹ ಪವಾಡಗಳನ್ನು ಮಾಡುವುದರಲ್ಲಿ ಅಗ್ರಗಣ್ಯರು. ಕೆಂಡ ಹಾಯಿವುದು ಮುಂತಾದವುಗಳು ಪಾಂಚಾಳ ಸಮುದಾಯ ನಡೆಸಿಕೊಂಡು ಬಂದ ಪುರವಂತಿಕೆಯ ಆಚರಣೆಯು. ಮದುವೆ-ಮುಂಜೆ, ಗೃಹಪ್ರವೇಶ, ಶುಭ ಸಮಾರಂಭದ ದಿನಗಳಲ್ಲಿ ಆಚರಿಸುವ 'ಗುಗ್ಗಳ' ಎಂಬ ಸೇವೆಯನ್ನು ಮಾಡುವಾಗ ಕಡ್ಡಾಯವಾಗಿ ವೀರಭದ್ರ ಕುಣಿತವಿರುತ್ತದೆ. ಒಮ್ಮೊಮ್ಮೆ ಕಲಾವಿದ ವೀರಭದ್ರ ಅವತಾರಗಳಲ್ಲಿ ತಪ್ಪಿ ಸುಸ್ತಾಗಿ ಬೀಳುವುದು ಸಹಜ.

ಪಾಂಚಾಳ ಸಮುದಾಯದವರು ಈ ಪುರವಂತಿಕೆಯ ಆಚರಣೆ ಸಂದರ್ಭದಲ್ಲಿ ಕಟ್ಟುನಿಟ್ಟಿನ ಮಡಿ-ಮೈಲಿಗೆ ಧರಿಸುವುದು ಸಾಮಾನ್ಯವಾಗಿರುತ್ತದೆ. ಹದವರಿತ ಶಸ್ತ್ರಗಳು, ವಿಭೂತಿ, ರುದ್ರಾಕ್ಷಿಗಳು ಮುಂತಾದವುಗಳನ್ನು ಬಳಸಿಕೊಳ್ಳುವರು.

ನಮ್ಮ ವೀರಭದ್ರ ದೇವರು ಹುಟ್ಟಿದಾಗಲೇ
ಹೂವಿನಕಾಶಿ, ವಿಷ್ಣುಕಾಶಿ, ಬ್ರಹ್ಮಕಾಶಿ, ಮೆಟ್ಟವ ಹೊನ್ನಿನ ಆವಿಗೆ
ಸಾವಿರ ಶಿರಸ್ಸು, ಮೂರು ಸಾವಿರ ಕಣ್ಣು, ಎರಡು ಸಾವಿರ ಭುಜ
ಗಜಾದಂಡು, ಗಜಾಕುಂಶ, ಚಪ್ಪಗೊಡಲಿ
ಚನ್ನವೀರ ಬತ್ತೀಸ ಆಯುಧ ಹಿಡಿದು
ಕರಗಸದ ಬಾಣ, ಕುಂಜರದ ಬಾಹು
ಜಂಜು ಬಿರಗಣ್ಣು, ಬಿಲ್ಲುಧಹಿಸು, ಹೆಗ್ಗಾಳೆ ಪಿಡಿಯೋ ಗಂಡಗತ್ತರಿ
ಕೈಯೆಂಬ ಕಠಾರಿ, ಈಟಿ ರಣಚೂರಿ ರೌದ್ರಾಕಾರದಿಂದ ಹೂಂಕರಿಸುತ್ತ
ಕೋಲಲಯೆಂದು ಹರಿದು ಹೋದುದಕ್ಕೆ ಬಂದು
ವಿಷ್ಣುವೇ ಮೊದಲಾದ ದೇವತೆಗಳನ್ನು ಸೆರೆ ಹಿಡಿದ
ದಕ್ಷಬ್ರಹ್ಮನ ಶಿರವನು ಅಗ್ನಿಗೆ ಆಹುತಿ ಕೊಟ್ಟು
ಸರಸ್ವತಿಯ ಮೂಗನೇ ಕೊಯ್ದು
ಅಗ್ನಿಯ ನಾಲಿಗೆ ಹರಿದು ಸಪ್ತಭಾಗ ಮಾಡಿ
ಅರವತ್ತಾರು ಕೋಟಿ ರಾಕ್ಷಸರನ್ನು ಕೆಂಗಣ್ಣಿನಿಂದ ಸುಟ್ಟು
ಕೆಂಡವೊಕಳಿಯನ್ನು ಹಾಕುತ್ತ ಬರುತಿರಲು
ದಕ್ಷನ ಪತ್ನಿಯು ಬಂದು ಪಾದಕ್ಕೆ ಎರಗಲು
ಆಗ ನಮ್ಮ ವೀರಭದ್ರನು ಅವಳ ಪತಿಗೆ ಕುರಿ ತಲೆಯನ್ನಿಟ್ಟು
ಕೈಲಾಸಕ್ಕೆ ಬಂದದ್ದನ್ನು ಕಂಡು ಶಿವನು ಭಪ್ಪರೆ ಭಲೆರೆ ಎಂದು
ರತ್ನಕೆತ್ತಿದ ಸಿಂಹಾಸನದ ಮೇಲೆ ಕೂಡ್ರಿಸಿ
ಹೂ ಮಳೆಗೆರೆದನು ಖಡೇ ॥ಖಡೇ॥[೧೦]

ಈ ರೀತಿಯಾಗಿ ಪುರವಂತರ ಕಲೆಯನ್ನು ಪಾಂಚಾಳರು ಸೇವೆ ಮಾಡುತ್ತಾ, ಒಡಪುಗಳನ್ನು ಹೇಳುತ್ತಾರೆ. ಮುರನಾಳ ರಾಜೇಂದ್ರ ಮಳಿಯಪ್ಪನ ಜಾತ್ರೆ, ಉತ್ಸವ, ಹಬ್ಬ-ಹರಿದಿನಗಳಲ್ಲಿ ಈ ಕಾರ್ಯವೆಸಗುತ್ತಾರೆ.

ಸಂಬಾಳ : ಗೊಂದಲಿಗರು-ಪುರುವಂತರು ಇದನ್ನು ವಿಶೇಷವಾಗಿ ಬಳಸುತ್ತಾರೆ. 'ಗೊಂದಲ' ಪ್ರಸಂಗದಲ್ಲಿ ಪುರವಂತರು ಕುಣಿತ, ಹಾಡುಗಳಲ್ಲಿ 'ಸಂಬಾಳ ವಾದ್ಯ'ವೇ ಪ್ರಮುಖವಾಗಿರುತ್ತದೆ. ಜೋಡು ಬೋಗಾಣಿಯನ್ನು ಬಳಸಿಕೊಂಡು , ಅದಕ್ಕೆ ಚರ್ಮ ಹೊದಿಸಿ ರೂಪಿಸಿದ ವಾದ್ಯ

ವಿಶೇಷವಿದು. ಕೊರಳಿಗೆ ನೇತುಹಾಕಿಕೊಂಡು ಬಾರಿಸುವ ವಾದ್ಯ. ಹಾಡಿನ ಸ್ವರಕ್ಕನುಸಾರವಾಗಿ ಕಟ್ಟಿದ ಹಗ್ಗವನ್ನು ಬಿಗಿಗೊಳಿಸುವುದು ತನ್ನ ತೊಡೆಯ ನಡುವೆ ಹಿಡಿದು ಹಗ್ಗಕ್ಕೆ ಒತ್ತು ಕೊಡುತ್ತ ಬಾರಿಸುವಾಗ ಒಂದು ವಿಲಕ್ಷಣ ಧ್ವನಿ ಹೊರಡುತ್ತದೆ. ವೀಕ್ಷಕ ಸಮುದಾಯವನ್ನು ರಂಜಿಸುತ್ತದೆ. ಚೌತಾಳ-ತ್ರಿತಾಳಗಳಲ್ಲಿ ಸಂಬಾಳವನ್ನು ಹೆಚ್ಚಾಗಿ ಬಳಸುವುದು ವಾಡಿಕೆ. ಪುರುವಂತರ ಕುಣಿತದ ಸಂದರ್ಭದಲ್ಲಿ (ಅಡತಾಳ) ಅರ್ಧತಾಳ ಬಾರಿಸುವರಂತೆ.(ಅಡತಾಳ ಅರ್ಧತಾಳ-ಆಟತಾಳ ಆಗಿರಬೇಕು)

೫.೪.೩.೧. ಶ್ರೀ ಮನೋಹರ ರಾಚಪ್ಪ ಬಡಿಗೇರ :

ಮನೋಹರ ಜನನ ೦೧-೦೮-೧೯೪೭ರಂದು ವಿಜಯಪುರ ತಾಲೂಕಿನ ಬಿಜ್ಜರಗಿಯಲ್ಲಿ ಆಗಿದೆ. ತಮ್ಮ ಊರಿನ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಆರನೇ ತರಗತಿಯವರೆಗೆ ಓದಿ ಬಡತನದಿಂದ ಶಿಕ್ಷಣ ಅರ್ಧಕ್ಕೆ ನಿಂತಿತು. ಇವರ ಕಲೆಯು ತಲೆತಲಾಂತಗಳಿಂದ ಬೆಳೆದುಕೊಂಡು ಬಂದ ವೀರಗಾಸೆ ಮನೆತನ. ಹೀಗಾಗಿ ಮನೋಹರ ಅವರಿಗೂ ಈ ಕಲೆಯಲ್ಲಿ ಆಸಕ್ತಿ ಮೂಡಿಬಂತು. ಬಾಲ್ಯದಿಂದಲೇ ವೀರಭದ್ರದೇವರ ಒಡಪುಗಳನ್ನು ಬಾಯಿಪಾಠವಾಗಿ ಹೇಳುತ್ತಿದ್ದರಂತೆ. ತಂದೆಯ ನಂತರ ಈ ಕಲೆಯನ್ನು ಮುಂದುವರೆಸಲು ಬಯಸಿದಾಗ ಶಿಷ್ಟಾಚಾರದಂತೆ ಇವರಿಗೆ ೧೯೬೮ರಲ್ಲಿ ಪಟ್ಟಗಟ್ಟಿ ಮಂತ್ರೋಪದೇಶ ಮಾಡಿದುದಾಗಿ ಹೇಳುತ್ತಾರೆ. ಈ ಕಲಾವಿದರು ಸಾಮಾನ್ಯವಾಗಿ ವಿಶ್ವಕರ್ಮರೇ ಆಗಿರುವುದನ್ನು ಕಾಣುತ್ತೇವೆ.

ವೀರಗಾಸೆ ಕುಣಿತದ ಹಿನ್ನೆಲೆ ಕುರಿತು ಒಂದು ಪೌರಾಣಿಕ ಕಥೆಯಿದೆ, ದಕ್ಷಬ್ರಹ್ಮನಿಗೂ ಅವನ ಅಳಿಯನಾದ ಶಿವನಿಗೂ ಕಾರಣಾಂತರದಿಂದ ವೈರತ್ವವುಂಟಾಗುತ್ತದೆ. ದಕ್ಷಬ್ರಹ್ಮನ ಯಾಗಕ್ಕೆ ಪಾರ್ವತಿಗೆ ಈ ಆಮಂತ್ರಣವಿತ್ತು. ಆದರೆ ಶಿವನಿಗೆ ಆಮಂತ್ರಿಸುವುದಿಲ್ಲ. ಶಿವನು ಬೇಡವೆಂದರೂ ಕೇಳದೆ ಪಾರ್ವತಿ ತಂದೆಯ ಯಜ್ಞಕ್ಕೆ ಹೋಗುತ್ತಾಳೆ. ಆದರೆ ಅವಳಿಗೆ ಅಲ್ಲಿ ಗೌರವ ಸಿಗುವುದೊತ್ತಟ್ಟಿಗಿರಲಿ, ತಂದೆಯಿಂದ ಅಳಿಯನ ನಿಂದೆ ಕೇಳುವ ಪ್ರಸಂಗ ಬರುತ್ತದೆ. ಇದರಿಂದ ಕುಪಿತಳಾದ ಪಾರ್ವತಿ ತಂದೆಗೆ ಶಾಪಹಾಕಿ ಯಜ್ಞಕುಂಡಲದಲ್ಲಿ ಬಿದ್ದು ಸಾಯುತ್ತಾಳೆ. ಇದನ್ನೆಲ್ಲ ಗಮನಿಸುತ್ತಿದ್ದ ಶಿವನು ಉಗ್ರವಾಗಿ ತಾಂಡವ ನೃತ್ಯ ಮಾಡುತ್ತಿರುವಾಗ ದಕ್ಷಬ್ರಹ್ಮನ ಯಾಗವನ್ನು ನಾಶಮಾಡಿ ಅವನ ರುಂಡವನ್ನು ಚೆಂಡಾಡುತ್ತಾನೆ. ಯದ್ದಕ್ಕೆ ಹೋಗುವಾಗ ಶಿವನು ಶರಣು ಬಂದವರನ್ನು ರಕ್ಷಿಸು ಎಂದು ಹೇಳಿದ. ಮಾತನ್ನು ನೆನೆಸಿಕೊಂಡು ಉತ್ತರ ದಿಕ್ಕಿನಲ್ಲಿ ಮಲಗಿದ, ಟಗರಿನ ರುಂಡವನ್ನು ಕತ್ತರಿಸಿ ತಂದು ದಕ್ಷಬ್ರಹ್ಮನ ಮುಂಡಕ್ಕೆ ಜೋಡಿಸಿ ಅವನ ಪ್ರಾಣದಾನ ಮಾಡುತ್ತಾನೆ. ಈ ಸಂದರ್ಭದಲ್ಲಿ ವೀರಭದ್ರನು ತೋರಿದ ಪ್ರತಾಪದ ಪ್ರತೀಕವೇ ಈ ಕಲೆ. ಶ್ರೀ ಮನೋಹರ ಬಡಿಗೇರರವರು ಹಬ್ಬ ಹರಿದಿನಗಳಲ್ಲಿ ಜಾತ್ರೆ ಉತ್ಸವಗಳಲ್ಲಿ ಮದುವೆ ಸಮಾರಂಭಗಳಲ್ಲಿ ಈ ಕಲೆಯನ್ನು ಹಳ್ಳಿ-ಪಟ್ಟಣಗಳಲ್ಲಿ ಪ್ರದರ್ಶಿಸುತ್ತ ಬಂದಿದ್ದಾರೆ. ಹಾಗೆಯೇ ನೂರಾರು ಆಸಕ್ತ ಕಲಾವಿದರಿಗೆ ತರಬೇತಿ ನೀಡಿ ಅವರನ್ನು ಸಿದ್ದಪಡಿಸಿ ಕಲಾ ಲೋಕಕ್ಕೆ

ಅರ್ಪಿಸಿದ್ದಾರೆ. ಇವರು ವೇಷಭೂಷಣಗಳಿಂದ ಸಜ್ಜಾಗಿ ಕೈಯಲ್ಲಿ ಖಡ್ಗ ಹಾಗೂ ಶಸ್ತ್ರಗಳನ್ನು ಹಿಡಿದುಕೊಂಡು ಸಂಬಾಳ ತಾಳಬಾಳ ಗತ್ತಿನೊಂದಿಗೆ ಕುಣಿಯತೊಡಗಿದರೆ ನೋಡುವವರಿಗೆ ರೋಮಾಂಚನವಾಗುವುದು. ಮಧ್ಯಮಧ್ಯ ಒಡಪುಗಳನ್ನು ಹೇಳುವ ಕಲೆ ಅದ್ಭುತವಾದದು. ಇವರು ನೂರಕ್ಕೂ ಹೆಚ್ಚು ಒಡಪುಗಳನ್ನು ಹೇಳುತ್ತಾರೆ. ಮೈತುಂಬ ಶಸ್ತ್ರ ಚುಚ್ಚಿಕೊಂಡ ಗಾಯಗಳಿವೆ.

ಇವರು ಭಾಗವಹಿಸಿ ಕಲಾ ಪ್ರದರ್ಶನ ಮಾಡಿದ ಪ್ರಮುಖ ಕಾರ್ಯಕ್ರಮಗಳ ವಿವರ ಇಂತಿವೆ:

೧. ಶ್ರೀ ಮೌನೇಶ್ವರ ಹಾಗೂ ಕಾಳಿಕಾದೇವಿ ಜಾತ್ರೆ ಕಕಮರಿ ದಿನಾಂಕ: ೦೧-೦೫-೧೯೯೪

೨. ಶ್ರೀ ವೀರಭದ್ರೇಶ್ವರ ಜಾತ್ರೆ ಬಿಜ್ಜರಗಿ, ದಿನಾಂಕ: ೧೯-೦೪-೧೯೯೪

೩. ಶ್ರೀ ವೀರಭದೇಶ್ವರ ಜಾತ್ರೆ ದರಿದೇವರಗುಡ್ಡ, ಕನಮಡಿ ದಿನಾಂಕ: ೦೪-೦೬-೧೯೯೭

೪. ಶ್ರೀ ಅಂಭಾಭವಾನಿ ಜಾತ್ರೆ ಸಿದ್ಧನಾಥ, ದಿನಾಂಕ: ೦೪-೦೮-೧೯೯೯

೫. ಶ್ರೀ ವೀರಭದ್ರೇಶ್ವರ ಜಾತ್ರೆ ಹೊನವಾಡ, ದಿನಾಂಕ: ೦೪-೦೮-೧೯೯೯

೬. ಶ್ರೀ ವೀರಭದ್ರೇಶ್ವರ ಜಾತ್ರೆ, ಕನ್ನೂರ ದಿನಾಂಕ: ೦೯-೦೯-೧೯೭೧

೭. ಶ್ರೀ ಕಾಳಿಕಾದೇವಿ ಜಾತ್ರೆ ವಿಜಯಪುರ ದಿನಾಂಕ: ೦೮-೧೧-೧೯೭೩

೮. ಶ್ರೀ ವೀರಭದ್ರೇಶ್ವರ ಜಾತ್ರೆ ಜಾಲಗೇರಿ, ದಿನಾಂಕ: ೦೯-೧೨-೧೯೭೪

೯. ಶ್ರೀ ವೀರಭದ್ರೇಶ್ವರ ಜಾತ್ರೆ, ಯಂಕಂಚಿ, ದಿನಾಂಕ: ೧೫-೧೨-೧೯೬೭೪

೧೦. ಶ್ರೀ ವೀರಭದ್ರೇಶ್ವರ ಜಾತ್ರೆ, ಬಾಳಿಗೇರಿ, ದಿನಾಂಕ: ೦೭-೦೧-೧೯೭೫

೧೧. ಶ್ರೀ ವೀರಭದ್ರೇಶ್ವರ ಜಾತ್ರೆ, ತಾಂಬಾ, ದಿನಾಂಕ: ೦೮-೦೨-೧೯೭೬

೧೨. ಶ್ರೀ ವೀರಭದ್ರೇಶ್ವರ ಜಾತ್ರೆ, ನಿಡಗುಂದಿ, ದಿನಾಂಕ: ೧೨-೦೫-೧೯೭೭

೧೩. ಶ್ರೀ ಮೌನೇಶ್ವರ ಜಾತ್ರೆ ಮಸೂತಿ ದಿನಾಂಕ: ೧೫-೦೯-೧೯೭೮

೧೪. ಶ್ರೀ ಮೌನೇಶ್ವರ ಜಾತ್ರೆ ಕಾಳಗಿ, ದಿನಾಂಕ: ೧೯-೦೮-೧೯೭೯

೧೫. ಶ್ರೀ ಶಾಂತೇಶ್ವರ ಜಾತ್ರೆ ಇಚಿಡಿ, ದಿನಾಂಕ: ೧೦-೦೨-೨೦೦೧

೧೬. ಶ್ರೀ ವೀರಭದ್ರೇಶ್ವರ ಜಾತ್ರೆ ಸಾತಲಗಾಂವ ದಿನಾಂಕ: ೧೫-೦೩-೨೦೦೨

೧೭. ಶ್ರೀ ಮೌನೇಶ್ವರ ಜಾತ್ರೆ ನರಗುಂದ ದಿನಾಂಕ: ೧೮-೦೨-೨೦೦೪

೧೮. ಶ್ರೀ ಅಜಾತ ನಾಗಲಿಂಗ ಪುರಾಣ ಮುಕ್ತಾಯ ನವಲಗುಂದ, ದಿನಾಂಕ: ೧೬-೦೪-೨೦೦೪

೧೯. ಶ್ರೀ ವೀರಭದ್ರೇಶ್ವರ ಜಾತ್ರೆ ಬನಹಟ್ಟಿ, ದಿನಾಂಕ: ೨೧-೦೩-೨೦೦೪

೨೦. ಶ್ರೀ ಪವಾಡ ಬಸವೇಶ್ವರ ಜಾತ್ರೆ ವಿಜಯಪುರ ದಿನಾಂಕ: ೦೧-೦೭-೨೦೦೫

ಇವರಿಗೆ ದೊರೆತ ಪ್ರಶಸ್ತಿಗಳು ಸಾಕಷ್ಟು ಇದ್ದು, ಅವುಗಳಲ್ಲಿ ಕೆಲವು :

೧. ದಿನಾಂಕ: ೨೩-೧೦-೨೦೦೫ ರಂದು ವಿಜಯಪುರದಲ್ಲಿ ನಡೆದ ವೀರರಾಣಿ ಕಿತ್ತೂರ ಚನ್ನಮ್ಮನ ೧ ಮತ್ತು ೨ನೇ ವಿಜಯೋತ್ಸವ ಸಂದರ್ಭದಲ್ಲಿ ಪ್ರಶಸ್ತಿ ಪತ್ರದ ಸಹಿತ ಸನ್ಮಾನ.

೨. ದಿನಾಂಕ: ೧೯೯೭-೯೮ ರಂದು ಬಿಜ್ಜರಗಿಯಲ್ಲಿ ಶ್ರೀ ಬಿ.ಎ. ಕಡೆ ಅಂಗಡಿ ಸಂಯುಕ್ತ ಪ.ಪೂ. ಕಾಲೇಜಿನಲ್ಲಿ ಪ್ರಶಸ್ತಿ ಪತ್ರದ ಜೊತೆಗೆ ಸನ್ಮಾನ.

೩. ದಿನಾಂಕ: ೧೨-೦೩-೨೦೦೪ ರಂದು ಬಿಜ್ಜರಗಿ ಶ್ರೀ ಕಾಳಿಕಾದೇವಿ ಮೂರ್ತಿ ಪ್ರತಿಷ್ಠಾಪನ ಸಮಾರಂಭದಲ್ಲಿ ಪಡೆದ ಪ್ರಶಸ್ತಿ ಪತ್ರ

೪. ದಿನಾಂಕ: ಮೂಡಬಿದರೆಯಲ್ಲಿ ನಡೆದ ಅ.ಬಾ. ೭೧ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಶಸ್ತಿ ಪತ್ರ ಪಡೆದರು.

ಹೀಗೆ ಅನೇಕ ಕಡೆ ಕಲಾ ಪ್ರದರ್ಶನ ಮಾಡಿ ಸೈ ಎನಿಸಿಕೊಂಡಿದ್ದಾರೆ. ಕಡುಬಡತನವಿದ್ದರೂ ಕಲೆಯನ್ನು ಮರೆತಿಲ್ಲ. ಇವರು ಮಾಸಾಶಾನಕ್ಕಾಗಿ ಅರ್ಜಿ ಸಲ್ಲಿಸಿ ಸರಕಾರದ ನೆರವಿನ ದಾರಿ ಕಾಯುತ್ತಿದ್ದಾರೆ.

೫.೪.೪. ಮದ್ದಳೆ ಹಾಗೂ ಇತರ ವಾದ್ಯಗಳು :

ಜನಪದ ವಾದ್ಯಗಳು ಪ್ರಮುಖವಾಗಿ ಎರಡು ರೀತಿಯಲ್ಲಿವೆ :

೧. ಊದುವ ವಾದ್ಯ ೨. ಬಾರಿಸುವ ವಾದ್ಯ

ಕೆಲವು ವಾದ್ಯಗಳನ್ನು ಬಾಯಿಯಿಂದ ಊದಿ ಸ್ವರವನ್ನು ಹೊರಡಿಸಲಾಗುದು. ಉದಾ: ಶಹನಾಯಿ, ಕೊಳಲು,ಪುಂಗಿ, ಸಾರಂಗ, ಶಂಖ, ಮುಂತಾದವುಗಳು. ಬಾರಿಸುವ ವಾದ್ಯಗಳು, ತಾಳ, ಸಮಾಳ, ತುಂತುಣಿ, ದಪ್ಪು, ಕಣಿ, ದಮಡಿ, ಗಂಟೆ, ಜಾಗಟೆ, ಕರಡಿ, ದಿಮ್ಮು, ಹಲಗೆ, ಮದ್ದಳೆ, ಡೊಳ್ಳು, ಕೋಲು, ಏಕತಾರಿ, ಮುಂತಾದವುಗಳನ್ನು ಕೈಯಿಂದ ಬಾರಿಸುವುದರಿಂದ ಅವುಗಳು ಬಾರಿಸುವ ವಾದ್ಯಗಳಾಗುತ್ತವೆ.

ವಾದ್ಯ, ಪರಿಕರಗಳನ್ನು "ಸೂಕ್ಷ್ಮವಾಗಿ" ವೀಕ್ಷಿಸಿದರೆ ಅವುಗಳನ್ನು ಈ ರೀತಿ ವಿಂಗಡಿಸಬಹುದು.

೧. ಚರ್ಮ-ಕಾಷ್ಠ ವಾದ್ಯಗಳು ೨. ತಂತಿ ವಾದ್ಯಗಳು ೩. ಲೋಹ ವಾದ್ಯಗಳು

೪. ಉಸಿರ ವಾದ್ಯಗಳು

ಚರ್ಮವಾದ್ಯಗಳು ಪ್ರಾಚೀನ ಕಾಲದಿಂದಲೂ ಬಳಕೆಯಾಗುತ್ತ ಬಂದಿರುವ ವಾದ್ಯಗಳಾಗಿವೆ. ಆದಿ ಮಾನವ ಪ್ರಾಣಿಗಳ ಬೇಟೆಯಾಡಿ, ಮಾಂಸಾಹಾರಿ ಆಗಿರುವಾಗಲೇ ತೊಗಲಿನ ವಾದ್ಯ

ರೂಪಿಸಿಕೊಂಡಿರುವ ಸಾಧ್ಯತೆಯಿದೆ. ಶಿಲಾಯುಗದ-ಆದಿಶಿಲಾಯುಗದ ಪೂರ್ವದಲ್ಲಿಯೇ ಚರ್ಮವಾದ್ಯಗಳನ್ನು ಬಳಕೆಗೆ ತಂದಿರಬಹುದು. 'ಚರ್ಮವಾದ್ಯಗಳು ದ್ರಾವಿಡರು ನೀಡಿದ ಕಾಣಿಕೆ. ಆದರೆ 'ತಂತಿ ವಾದ್ಯಗಳು ಆರ್ಯರ ಬಳವಳಿ'ಎಂಬ ಮಾತನ್ನು ಗಮನಿಸಿದಾಗಲೂ ಇವೆರಡೂ ವಾದ್ಯಗಳ ಪರಿಕಲ್ಪನೆಯುಂಟಾಗುತ್ತದೆ. ಚರ್ಮವಾದ್ಯಗಳು ಏರುಧ್ವನಿಯ ಸಂಕೇತವಾದರೆ, ಇನ್ನುಳಿದವು ಸೌಮ್ಯಧ್ವನಿಗೆ ಪ್ರತೀಕವಾಗುತ್ತವೆ. ಇವೆರಡೂ ಹಿತಮಿತವಾಗಿ ಬೆರೆಕೆಯಾದಾಗ ಕೇಳುಗರಿಗೆ ಆನಂದ. ಈ ವಾದ್ಯಗಳನ್ನು ಇಡಿಯಾಗಿ ಬಳಸಿಕೊಂಡಾಗಲೂ ಸಂತೋಷ. ಬಿಡಿ_ಬಿಡಿಯಾಗಿ ಬಳಸಿಕೊಂಡಾಗಲೂ ಸಂತೋಷ. ಸಾಮೂಹಿಕ ವಾದ್ಯಗಳ ಮೇಳ-ಧ್ವನಿ, ಆಯಾ ಸಂದರ್ಭಕ್ಕೆ ಕಳೆಕಟ್ಟುತ್ತವೆ. ಆಯಾ ವಾದ್ಯಗಳ ನಿರ್ಮಾಣ ತನ್ನದೇ ಆದ ದೈವಾರಾಧನೆಗಾಗಿ, ದೇವರಲ್ಲಿಯೂ ತಾರತಮ್ಯವಿದೆ. ಕೆಲ ದೇವರು ಉಗ್ರ ಸ್ವರೂಪದವುಗಳು.ಅವುಗಳಿಗೆ ಏರುವಾದ್ಯ ಅಂದರೆ ಕರ್ಣ ಕಠೋರ ವಾದ್ಯಗಳೇ ಆಗಬೇಕು. ಸೌಮ್ಯ ದೇವತೆಗಳಿಗೆ ಸೌಮ್ಯವಾದ ವಾದ್ಯಗಳಾಗಬೇಕು. ಯುದ್ಧದ ಸಮಯದಲ್ಲಿ ಸೈನಿಕರನ್ನು ಹುರಿದುಂಬಿಸಲು ಬಳಸಲಾಯಿತು. ಅಂತಹ ವಾದ್ಯಗಳು ರಣವಾದ್ಯಗಳಾದವು. ಕಹಳೆ, ಹಲಗೆ, ಡಪ್ಪು ಮುಂತಾದವುಗಳು ಉತ್ಸಾಹ ಚಿಮ್ಮಿಸುವ ಸಾಮಾಗ್ರಿಗಳಾಗಿ ರೂಪುಗೊಂಡವು.

ಸಂಗೀತದಲ್ಲಿ 'ವಾದ್ಯಕ್ಕಾಗಿಯೇ ವಾದ್ಯ' ವೆಂಬ ಪ್ರಕಾರವೂ ಇದೆ. ಯಾವ ಹಾಡಿನ ಜಾಡು ಹಿಡಿಯದೆ, ಯಾವ ನರ್ತನದ ಗೊಡವೆಗೂ ಹೋಗದೇ, ವಾದ್ಯಗಳ ಸಂಯೋಜನೆಯು ಜನಪದರಲ್ಲಿದೆ. ಪರಸ್ಪರ ಹೊಂದಾಣಿಕೆಯುಳ್ಳ ಕೆಲವು ವಾದ್ಯಗಳನ್ನು ಯಾವುದೋ ಒಂದು ರಾಗಕ್ಕೆ, ಯಾವುದೋ ಒಂದು ತಾಳ-ಗತಿಗೆ ಹೊಂದಿಸಿ ನುಡಿಸಿದಾಗ ಕಿವಿಗೆ ಇಂಪಾಗುತ್ತದೆ. ಇದಕ್ಕೆ ನಿದರ್ಶನವೆಂದರೆ 'ಕರಡಿ ಮಜಲು'. ಕರಡಿಮಜಲು ಪ್ರಾಚೀನ ಕಾಲದಿಂದಲೂ ಈ ನಾಡಿನಲ್ಲಿ ಸಾಗಿಬಂದಿರುವ ವಾದ್ಯಮೇಳ. ವೈಯ್ಯಾಕರಣಿ ಕೇಶರಾಜ ತನ್ನ ಶಬ್ದಮಣಿದರ್ಪಣದಲ್ಲಿ 'ಶೃತಿಕಷ್ಟ ಸಂಧಿ"ಗೆ ಉದಾಹರಣೆಯನ್ನು ನೀಡುತ್ತ 'ಕರಡೆಯ ಗಿರ್ಘಟದಂತೆ ಶೃತಿ ಕಷ್ಟ'ವೆಂದು ಸಾರಿದ್ದಾನೆ. (ಶಬ್ದಮಣಿದರ್ಪಣ ಪದ್ಯ-೭೩, ಪುಟ ಸಂ,೬೮) ಅವನಿಗಿಂತಲೂ ಮೊದಲಿನಿಂದಲೇ ಈ ವಾದ್ಯ ಮೇಳ ಪ್ರಚಾರದಲ್ಲಿರುವುದು ಇದರಿಂದ ಸ್ಪಷ್ಟವಾಗುತ್ತದೆ.[೧೧]

ಕರಡಿ ಮೇಳದಲ್ಲಿ-ಕರಡೆ, ದಿಮ್ಮು, ಚಪಾತಾಳ, ಸನಾದಿ ಇವುಗಳಿರುತ್ತವೆ. ಭಜಂತ್ರಿಯರ ವಾದ್ಯಗಳು ಜೋರಾಗಿ ಮೊಳಗುತ್ತವೆ. ಕರಡೆಯ ಆವೇಶ-ಆರ್ಭಟಕ್ಕೆ ನಾಲ್ಕು ದಿಮ್ಮುಗಳು ಧಿಮುಗುಡಲಾರಂಭಿಸುತ್ತವೆ. ಚಪಾತಾಳ ಚಕಮಕಿಸುತ್ತದೆ. ಇದಕ್ಕೆ ಪೂರಕವಾಗಿ ಸನಾದಿ-ಭಜಂತ್ರಿಗಳು ವಿಜೃಂಭಿಸುತ್ತವೆ. ಆವೇಶಪೂರ್ಣ ಬಡಿತ, ಆತುರದ ನುಡಿತ, ಕಠೋರ ವಾದ್ಯಗಳಾದರು ಹಿತಮಿತಿ ಸಂಯೋಜನೆಯಿಂದ ಮಧುರ-ಮನೋಹರವಾಗಿ ಪರಿಣಮಿಸುತ್ತವೆ. ಸನ್ನಿವೇಶಕ್ಕೆ ಮೆರಗನ್ನುಂಟು ಮಾಡುತ್ತವೆ. ಪರಶಿವನ ಹಣೆಗಣ್ಣಿನಿಂದ ಮೂಡಿ ಬಂದ ವೀರಭದ್ರ ದೇವರು ದಕ್ಷಬ್ರಹ್ಮನ ಯಜ್ಞವನ್ನು ಧ್ವಂಸಗೊಳಿಸಲು ಹೊರಟ ಸಂದರ್ಭದಲ್ಲಿ ಈ ಕರಡೆಯ ಮಜಲಿನ

ಉತ್ಸಾಹ ದುಮ್ಮಜಲಾಗಿ ಪರಿವರ್ತನೆಗೊಳ್ಳುತ್ತದೆ. ಕೇಳುವವರ ಮೈಯಲ್ಲಿ, ನೋಡುಗರ ಎದೆಯಲ್ಲಿ ಅತ್ಯುತ್ಸಾಹ ತುಂಬುವಂತೆ ವಾದ್ಯಮೇಳ ಜರಗುತ್ತದೆ. ಇಲ್ಲಿ ಹಾಂಡೆಂಬುದೇ ಇರುವುದಿಲ್ಲ. ನೃತ್ಯದ ಸುಳಿವೂ ಇಲ್ಲ. ಕೇವಲ ವಾದ್ಯಗಳ ಆರ್ಭಟ ತಾರಕ ಸ್ವರಕ್ಕೇರಿರುತ್ತದೆ. ಹೀಗೆ ತಾಸುಗಟ್ಟಲೇ ಈ ಪ್ರದರ್ಶನ ಮುಂದುವರಿಯುತ್ತದೆ. ಕಲಾವಿದರನ್ನು ಕಣ್‌ತುಂಬ ಕಾಣುವುದೇ ಒಂದು ಆನಂದ. ವಾದ್ಯಮೇಳ ಕೇಳುವುದೇ ಪರಮಾನಂದವೆನಿಸುತ್ತದೆ.

ಈ ವಾದ್ಯಗಳಲ್ಲಿ ಕರಡಿಯ ಬದಲಾಗಿ 'ಹಲಗಿ'ಯನ್ನು ಬಳಸಿದರೆ ಅದರ ಗತ್ತೇ ಬೇರೆ. ಆಗ ಅದನ್ನು 'ಹಲಗೆಮಜಲು' ಎಂದು ಕರೆಯುವುದುಂಟು. ಹಲಗೆಯ ಬದಲಾಗಿ 'ತಾಸೆ' ನುಡಿಸಿದರೆ ಅದು 'ತಾಸೆ ಮಜಲು' ಎನಿಸಿಕೊಳ್ಳುತ್ತದೆ. ತಾಸೆ ವಾದ್ಯದ ಸ್ಥಾನದಲ್ಲಿ 'ಸಮಾಳ' ಬಳಸಿಕೊಂಡರೆ ಅದಾ 'ಸಮಾಳ ಮಜಲು' ಆಗಿ ಪರಿವರ್ತನೆಯಾಗಿಬಿಡುತ್ತದೆ. ಇದೇ ರೀತಿ 'ಕಣಿವಾದನ'. ಈ ರೀತಿಯಾಗಿ 'ಮೂಲವಾದ್ಯ'ವೊಂದನ್ನು ಬದಲುಗೊಳಿಸಿದರೆ ಭಾಜನದಲ್ಲಿ ಅಪೂರ್ವ ಬದಲಾವಣೆ! ವಾದ್ಯಗಳ ಸ್ಥಾನಪಲ್ಲಟದಿಂದ ಬೇರೊಂದು ಲೋಕ ಸೃಷ್ಟಿಯಾಗುತ್ತದೆ. ವಾದ್ಯ ಮೇಳಗಳಲ್ಲಿ ಎಂತಹ ವ್ಯತ್ಯಾಸ. ಎಷ್ಟೊಂದು ವೈವಿಧ್ಯತೆ ಸಂಪ್ರಾಪ್ತವಾಗುತ್ತದೆ ಎಂಬುದು ತಿಳಿದವರಿಗೆ ಅದರ ರಸಸ್ವಾದ ಉಂಟಾಗುತ್ತದೆ.

೫.೪.೫. ಕರಡಿ ಮಜಲು :

ಜನಪದ ಕಲೆಗಳಲ್ಲಿ ಉತ್ತರ ಕರ್ನಾಟಕದ ವಾದ್ಯ ಕಲಾವಿದರು ಜನಪ್ರಿಯವಾಗಿರುವ ಒಂದು ಜನಪದ ಮೇಳಗಾನ. ಇದರಲ್ಲಿ ಸಾಮಾನ್ಯವಾಗಿ ಏಳುಜನ ವಾದ್ಯಗಾರರಿರುತ್ತಾರೆ. ಇದರಲ್ಲಿ ಕರಡೆಯವನು ಪ್ರಧಾನ. ಸೊಂಟಕ್ಕೆ ಕಟ್ಟಿಕೊಂಡು ಮಧ್ಯದಲ್ಲಿ ನಿಂತಿರುತ್ತಾನೆ. ಚೆಳ್ಳಮ್ಮ (ಕಂಚಿನ ಎರಡು ತಾಳಗಳು) ಹಿಡಿದು ಬಾರಿಸುವಾತ ಪಕ್ಕದಲ್ಲಿರುತ್ತಾನೆ.

ಕರಡಿ ಮಜಲು ಅನೇಕ ಜನವರ್ಗಕ್ಕೆ ಸೇರಿರುವುದರಿಂದ ಇದು ನಿರ್ದಿಷ್ಟ ಜಾತಿಯೊಂದಕ್ಕೆ ಸೀಮಿತವಾದ ಕಲೆಯಾಗಿಲ್ಲ. ಇತರ ಎಲ್ಲಾ ಜಾತಿಯವರು ಸೇರಿರುತ್ತಾರೆ. ಈ ಕರಡಿ ವಾದ್ಯ ತಯಾರಿಸಲು ಕಬ್ಬಿಣ, ಮರ, ಚರ್ಮ ಹಾಗೂ ನಾರು (ಹಗ್ಗ) ಮುಖ್ಯವಾಗಿರುತ್ತದೆ. ಕಂಬಾರ, ಬಡಿಗ ಮತ್ತು ಮಾದಿಗ ಈ ಮೂರು ಅಥವಾ ನಾಲ್ಕು ಸಮುದಾಯಗಳ ಶ್ರಮದಿಂದ ಕರಡಿ ವಾದ್ಯ ತಯಾರಾಗುತ್ತದೆ. ತಯಾರುಗುದಷ್ಟೇ ಅಲ್ಲದೇ ಆಸಕ್ತಿವಂತ ಪಾಂಚಾಳರೂ ಸಹ ಈ ಮೇಳದ ಗುಂಪಿನಲ್ಲಿ ಸೇರಿರುತ್ತಾರೆ.

ಕರಡಿಯವನಿಗೆ ಆಹ್ವಾನ ಕೊಡುವಂತೆ ರಾಗಾಲಾಪನೆ ಮಾಡುವ ಜೋಡು ಸನಾದಿ (ಊದು ವಾದ್ಯ)ಯವರಿಬ್ಬರು ಎದುರಿಗೆ ಇರುತ್ತಾರೆ. ಇವರ ಜೊತೆಗೆ ಉದ್ದವಾದ ಸನಾದಿಯನ್ನು ಹಿಡಿದು (ಶ್ರುತಿ) ಬಾಂವ್ ಎಂದು ಪ್ರಾರಂಭದಿಂದ ಕೊನೆಯ ತನಕ ಊದುವ ಇನ್ನೊಬ್ಬನು ಇರುತ್ತಾನೆ. ಇಲ್ಲಿ ಒಬ್ಬ ಲಾವಣಿಕಾರನು ಇರುತ್ತಾನೆ. ಇವನು ಪ್ರಣಯದ ಹಾಗೂ ದೇವರಿಗೆ ಸಂಬಂಧಿಸಿದ ಜನಪದ ಗೀತೆಗಳನ್ನು ಹಾಡುತ್ತಾನೆ. ಗ್ರಾಮದ ಜಾತ್ರೆ, ಉತ್ಸವಗಳಲ್ಲಿ ಕರಡಿ

ಮಜಲು ಬಾರಿಸುವುದುಂಟು. ಸಾಮಾನ್ಯ ಜನರ ಸಮೂಹದಲ್ಲಿ ವಾದ್ಯ ಮೇಳಗಳನ್ನು ಜನಪದರ ಆಸಕ್ತಿ ಕುತೂಹಲ ಕೆರಳಿಸುವ ಮತ್ತು ಸಂಗೀತದ ವಾದ್ಯ ಇಂಪಾಗಿ ಆಲಿಸುವರು.

ಕರಡಿ ಮಜಲಿನಲ್ಲಿ ವಿವಿಧ ಪ್ರಕಾರಗಳಿವೆ. ಒಂದು ಹಲಗೆಯ ನಾದದಿಂದ ಹೊರಡುವ ಸ್ವರವು ಮೂರು ನಾಲ್ಕು ಜನ ಸೇರಿ ನುಡಿಸುವವರಿಗೆ ಹಲಗೆ ಮಜಲು, ಎರಡು ತಾಳ ನಾದಕ್ಕೆ ಒತ್ತು ಕೊಟ್ಟರೆ ತಾಳಮೇಳ ಮಜಲು ಎನ್ನುವರು. ನಂತರ ತಾಳ, ಹಲಗೆ, ಕರಡಿ, ಸನಾದಿ ಎಲ್ಲವೂ ಸೇರಿ ಕರಡೆ ಮಜಲು ಎಂದು ಕರೆಯುವರು. ಉತ್ತರ ಕರ್ನಾಟಕ ಜನಪದ ಕಲಾಮೇಳಗಳಲ್ಲಿ ಕರಡಿ ಮಜಲು ಭಜಂತ್ರಿಯವರು ಬಾರಿಸುವುದುಂಟು. ನಂತರ ಹವ್ಯಾಸಿ ಕಲಾವಿದರು ಇದರಲ್ಲಿ ಭಾಗಿಯಾಗುವುದು ಕಂಡುಬರುತ್ತದೆ.

ಕರಡಿ ಮಜಲು ಬಾರಿಸುವ ಪಾಂಚಾಳ ಸಮುದಾಯದ ಶ್ರೀ ಅಶೋಕ ಬಡಿಗೇರ ಹಲಗೆಯ ಚರ್ಮ ವಾದ್ಯಕ್ಕೆ ಪ್ರಸಿದ್ಧರಾದವರು. ತಾಳ ನುಡಿಸುವವರು ಹಂದಿಗೂಂದದ ಭೀಮಶಿ ಕಂಬಾರ. ಸ್ವತಃ ತಾಳ ತಯಾರಿಕರು. ಹಲವು ಬಗೆಯ ತಾಳ ತಯಾರಿಯ ಜೊತೆಗೆ ಅವುಗಳ ನುಡಿಸುವ ನಾದಲಯವು ಕರಗತವಾಗಿತ್ತು.

ಕರಡಿ ವಾದ್ಯವನ್ನು ನುಡಿಸುವ ಕೋಲುಗಳಲ್ಲಿ ಎಡಗೈಯಲ್ಲಿ ಕೋಲು, ಒಂದು ಗೇಣು ಉದ್ದ ಹಾಗೂ ಕಿರು ಬೆರಳಿನಷ್ಟು ದಪ್ಪ ಇರುತ್ತವೆ. ಅದೇ ರೀತಿ ಬಲಗೈ ಕೋಲು ಕಿರು ಬೆರಳು ಗಾತ್ರಕ್ಕಿಂತ ದೊಡ್ಡದಾಗಿರುತ್ತದೆ. ಕರಡಿಯೊಂದಿಗೆ ತಾಳ, ದಿಮ್ಮು, ಚೌಗಡ, ಸಹನಾಯಿ, ಶೃತಿ ಮೊದಲಾದ ವಿಶೇಷ ವಾದ್ಯ ಪರಿಕರಗಳಿರುತ್ತವೆ. ಮುಖ್ಯವಾಗಿ ಹಬ್ಬ, ಜಾತ್ರೆ, ಗಣೇಶೋತ್ಸವ, ಮದುವೆ-ಮುಂಜಿ ಎಲ್ಲ ರೀತಿಯ ಧಾರ್ಮಿಕ ಉತ್ಸವಗಳಲ್ಲಿ ಕರಡಿ ಮಜಲು ನಡೆಯುತ್ತದೆ. ಉದಾ: ವೀರಗಾಸೆ, ಪುರವಂತಕೆ ಮೇಳಕ್ಕೆ ರೌದ್ರೆಯನ್ನು ಒದಗಿಸುವುದಕ್ಕಾಗಿ ಈ ವಾದ್ಯವನ್ನು ಬಳಸಲಾಗುತ್ತದೆ.

೫.೪.೫.೧. ಶ್ರೀ ಸಿದ್ದಪ್ಪ ಕಂಚು ಚರ್ಮ ವಾದ್ಯದ ಕಲಾವಿದ :

ಬಾಗಲಕೋಟ ಜಿಲ್ಲೆಯ ರಬಕವಿ-ಬನಹಟ್ಟಿ ತಾಲೂಕಿನ ನಾವಲಗಿ ಗ್ರಾಮದ ಸಿದ್ದಪ್ಪ ಸಂಗಪ್ಪ ಕಂಚು ಇವರು ಚರ್ಮ ವಾದ್ಯದ ಮೂಲಕ ನಾಡಿನಾದ್ಯಂತ ಗಮನಸೆಳೆದಿದ್ದಾರೆ.

ದಮಡಿ ವಾದ್ಯ, ಕರಡಿ ವಾದ್ಯ, ಕಣಿವಾದನ, ದಿಮ್ಮುವಾದ್ಯ, ತಾಳವಾದ್ಯದ ಮೂಲಕ ಸಿದ್ದಪ್ಪ ಕಂಬಾರ ಹೆಸರು ಗಳಿಸಿದ್ದಾರೆ. ಇವರು ಮೂರನೇ ತರಗತಿಯವರೆಗೆ ಮಾತ್ರ ಓದಿರುವ ಅವರು ವಾದ್ಯ ನುಡಿಸುವುದರಲ್ಲಿ ಅವರನ್ನು ಮೀರಿಸುವವರು ಇಲ್ಲ. ೫೮ ರ ಆಸುಪಾಸಿನ ಸಿದ್ದಪ್ಪ ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿ ವಾದ್ಯ ನುಡಿಸಲು ಕಲಿತರು. ಗ್ರಾಮದ ಹನುಮನ ದೇವಸ್ಥಾನದಲ್ಲಿ ಪರಪ್ಪ ಕೆಂಪು ಅವರ ಮಾರ್ಗದರ್ಶನದಲ್ಲಿ ವಾದ್ಯ ನುಡಿಸುವುದನ್ನು ಕಲಿತರು. ರಾಜ್ಯ, ಹೊರ ರಾಜ್ಯಗಳಲ್ಲಿ ಅವರು ನೀಡಿದ ವಾದ್ಯದ ಮೋಡಿಗೆ ತಲೆದೂಗಿದವರಿಲ್ಲ. ಬೆಳಗಾವಿ

ಮತ್ತು ಮೂಡಬಿದರೆಯಲ್ಲಿ ನಡೆದ ಅಖಿಲ ಕನ್ನಡ ಸಾಹಿತ್ಯ ಸಮ್ಮೇಳನದಲ್ಲೂ ತಮ್ಮ ಕಲೆಯ ಪ್ರದರ್ಶನ ಮಾಡಿದ್ದಾರೆ. ಧಾರವಾಡ ಆಕಾಶವಾಣಿ ಕೇಂದ್ರ ಇವರ ಕಣಿವಾದನ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದೆ.

೧. ಮೈಸೂರಿನ ದಸರಾ ಉತ್ಸವದಲ್ಲಿ

೨. ೨೦೦೪ರಲ್ಲಿ ಉಡುಪಿಯ ಪರ್ಯಾಯ ಉತ್ಸವದಲ್ಲಿ

೩. ಗೌರಿಬಿದನೂರಿನಲ್ಲಿ ನಡೆದ ಕುವೆಂಪು ಅವರ ಜನ್ಮ ಶತಮಾನೋತ್ಸವದಲ್ಲಿ

೪. ೨೦೦೭ರಲ್ಲಿ ಶಿವಮೊಗ್ಗ ಜಿಲ್ಲೆಯ ಹೊಸನಗರದಲ್ಲಿ ರಾಮಚಂದ್ರ ಮಠದಲ್ಲಿ ನಡೆದ ವಿಶ್ವ ಗೋವು ಸಮ್ಮೇಳನದಲ್ಲಿ

೫. ೨೦೧೨ರಲ್ಲಿ ಕರ್ನಾಟಕದ ಸಂಗೀತ ಪರಿಷತ್ತಿನ ಆಶ್ರಯದಲ್ಲಿ ಎರಡನೇಯ ಜಾನಪದ ಚರ್ಮವಾದ್ಯ ಸಮ್ಮೇಳನ

೬. ೨೦೧೪ ರಲ್ಲಿ ಹಂಪಿಯಲ್ಲಿ ನಡೆದ ಹಸ್ತಪ್ರತಿ ಸಮ್ಮೇಳನದಲ್ಲಿ

೭. ಬೆಂಗಳೂರಿನಲ್ಲಿ ನಡೆದ ಸುಗ್ಗಿ-ಹುಗ್ಗಿ ಕಾರ್ಯಕ್ರಮದಲ್ಲಿ

೮. ೨೦೦೬ರಲ್ಲಿ ಚಾಮರಾಜ ನಗರದಲ್ಲಿ ನಡೆದ ಗಡಿನಾಡು ಉತ್ಸವದಲ್ಲಿ

೯. ಕಿತ್ತೂರು ಉತ್ಸವದಲ್ಲಿ

೧೦. ಆಂಧ್ರಪ್ರದೇಶದ ಶ್ರೀಶೈಲಂದಲ್ಲಿ ನಡೆದ ಕಾರ್ಯಕ್ರಮದಲ್ಲಿ

೧೧. ಅಥಣಿಯ ಮೋಠಗಿ ಮಠದಲ್ಲಿ

೧೨. ಹಿಪ್ಪರಗಿಯ ಸಿದ್ದರಾಮೇಶ್ವರ ಸ್ವಾಮೀಜಿಯವರಿಂದ

೧೩. ಇಂಚಟಗೇರಿ ಪ್ರಭುಜಿಯವರಿಂದ

೧೪. ಇಂಚಲದ ಶಿವಾನಂದ ಭಾರತಿ ಸ್ವಾಮೀಜಿಯವರಿಂದ

೧೫. ಹಳಿಂಗಳಿ ಕಮರಿಮಠ ಶಿವಾನಂದ ಸ್ವಾಮೀಜಿ, ಇಂತಹವರ ಉತ್ಸವಗಳಲ್ಲಿ ವಾದ್ಯ ನುಡಿಸಿ ಅವರುಗಳಿಂದ ಮಾನ-ಸನ್ಮಾನ ಪಡೆದಿದಿದ್ದಾರೆ.

* **ಗೌರವ ಪುರಸ್ಕಾರ :**

ಬಾಗಲಕೋಟೆಯ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು.

೧. ವಿಶ್ವಜ್ಞ ಕಾಡದೇವರ - ಸಿದ್ದಪ್ಪ ಕಂಚೆ- ಬಿಡಿ ಲೇಖನ

೫. ಕಲೆಗೆ ಜೀವ ತುಂಬಿದ ಶಿವಪುತ್ರಪ್ಪ ತಾರಿವಾಳ, ಸಾ: ಹುನಗುಂದ, ಜಿ: ಬಾಗಲಕೋಟ

ಶಿವಪುತ್ರಪ್ಪ ತಾರಿವಾಳ ಸಾ: ಹುನಗುಂದ ತಮ್ಮ ಇಪ್ಪತ್ತನೇ ವಯಸ್ಸಿನಲ್ಲಿ ಕಲಾವಿದ ಭೀಮೇಶಿ ಭಜಂತ್ರಿಯವರ ಮಾರ್ಗದರ್ಶನದಲ್ಲಿ "ಬಸವೇಶ್ವರ ಭಜನಾ ಮಂಡಳಿ ಸಂಗೀತ ಬಳಗದ" ಗರೂರ್ ಸರ್ ಪ್ರೇರಣೆಯಿಂದ ವೇದಿಕೆ ಮೇಲೆ ಹಾಡಲು ಆರಂಭಿಸಿದ ಶಿವಪುತ್ರಪ್ಪ ಐದೂವರೆ ದಶಕದಿಂದ ಮಠ ಮಾನ್ಯಗಳಲ್ಲಿ ಸಭೆ ಸಮಾರಂಭ, ಶಿವಾನುಭವ ಗೋಷ್ಠಿಯಲ್ಲಿ ಎಲ್ಲದ್ದಕ್ಕಿಂತಲೂ ಮಿಗಿಲಾಗಿ, ಮೃತರ ಮನೆಗಳಲ್ಲಿ ಅಹೋರಾತ್ರಿ ನಿದ್ದೆಗೆಟ್ಟು ದಾಸರಪದ, ಶರಣರ ವಚನ, ಹಂತಿಪದ, ಶಿಶುನಾಳ ಶರೀಫರ ತತ್ವಪದಗಳನ್ನು ಹಾಡಿದ್ದಾರೆ. ಕೆಲವು ದಿನಗಳು ಕೃಷ್ಣ ಪಾರಿಜಾತದ ದೂತಿ ಪಾತ್ರ ನಿರ್ವಹಿಸಿದ್ದಾರೆ.

ಎಪ್ಪತ್ತರ ಇಳಿ ವಯಸ್ಸಿನಲ್ಲಿ ಮಾಗದ ಕಂಚಿನ ಕಂಠ, ದಾಸರ, ಶರಣರ, ಭಾಗವತ, ಪದಗಳ ಹಾಡುಗಾರಿಕೆಗೆ ಜೀವಂತಿಕೆ ನೀಡುತ್ತಾ ನಿಃಸ್ವಾರ್ಥ ಸೇವೆಗೈಯುತ್ತಾ, ಭಜನಾ ಕಲೆ ಉಸಿರಾಗಿಸಿಕೊಂಡ ಅಪರೂಪದ ಕಲಾವಿದ ಹುನಗುಂದ ಪಟ್ಟಣದ ಶಿವಪುತ್ರಪ್ಪ ತಾರಿವಾಳ. ಕಲೆಗಾಗಿ ಒಂದು ರೂಪಾಯಿಯನ್ನೂ ಪಡೆಯದೇ ನಿಸ್ವಾರ್ಥ ಸೇವೆ ಮಾಡುತ್ತಿದ್ದಾರೆ. ಸ್ವ-ಪ್ರೇರಣೆಯಿಂದ ಹಾರ್ಮೋನಿಯಂ ಕಲಿತು, ಖ್ಯಾತ ಪ್ರವಚನಕಾರ್ತಿ ಇಂದುಮತಿ ಸಾಲಿಮಠ, ಟಿ.ವ್ಹಿ. ನಗೆಹಬ್ಬ, ಸಂಜೆ ಹಾಸ್ಯ, ಮುಂತಾದ ಕಾರ್ಯಕ್ರಮಗಳಲ್ಲಿ ಅವರಿಗೆ ತಿಂಗಳುಗಟ್ಟಲೇ ಹಾರ್ಮೋನಿಯಂ ಸಾಥ್ ನೀಡಿ ಪ್ರಶಂಸೆಗೆ ಭಾಜನರಾಗಿದ್ದಾರೆ.

೧. ಕಲಬುರ್ಗಿ ತಾಲ್ಲೂಕು ಸಾಹಿತ್ಯ ಸಮ್ಮೇಳನ

೨. ಹುನಗುಂದ ತಾಲ್ಲೂಕ ಇಳಕಲ್ ಹಬ್ಬ

೩. ಹುನಗುಂದ ತಾಲ್ಲೂಕ ಗೊರಬಾಳ, ಇದ್ದಲಗಿ, ಚಿತ್ತವಾಡಗಿ, ಬಾದವಾಡಗಿ ಮುಂತಾದ ಕಡೆ ಕಾರ್ಯಕ್ರಮ ನೀಡಿದ್ದಾರೆ.

ಚಿದಾನಂದಪ್ಪ ಸಪ್ಪಂಡಿ ಮಾರ್ಗದರ್ಶನದಲ್ಲಿ ಗುರುಬಸವ ಮಠ ಮಾಸ್ತರ ಬಗೆಗೆ ಕವನ ರಚನೆ, ಸಂಯೋಜನೆ ಸೈ ಎನಿಸಿಕೊಂಡಿದ್ದಾರೆ. ಎಪ್ಪತ್ತೇಳರ ಇಳಿವಯಸ್ಸಿನಲ್ಲಿ ಪಾದರಸದ ಚಟುವಟಿಕೆ ಇರುವ ಶಿವಪುತ್ರಪ್ಪ (ಹೇಳುತ್ತಾರೆ) "ನನಗೆ ಕಡಿಮೆ ಸೂರನ್ಯಾಗ ಹಾಡಾಕ ಬರಲ್ಲ, ನಾಲ್ಕರ ಪಟ್ಯಾಗ ಹಾಡ್ತೀನಿ, ಹಾಡಿದಷ್ಟು ನನ್ನ ಆರೋಗ್ಯಕ್ಕೆ ಒಳ್ಳೆಯದು, ಬಿ.ಪಿ, ಶುಗರ್ ಏನೂ ಇಲ್ಲ. ಇದಕ್ಕೆ ಕಾರಣ ಸಂಗೀತ ಕಾಚಾ ಕುಳಿತಂಗ ನನಗೆ ಹಾಡ ಕುಳಿತಾವು, ಬೆಳತನಕ ಹಾಡ್ತಿನಿ, ನನ್ನ ಕಂಠ ಬೀಳುದಿಲ್ಲ" ಎಂದು ಹೆಮ್ಮೆಯಿಂದ ಹೇಳುತ್ತಾರೆ ಶಿವಪುತ್ರಪ್ಪನವರು.

* **ಶಿವಪುತ್ರಪ್ಪ ತಾರಿವಾಳರಿಗೆ ಸಂದ ಗೌರವ ಪುರಸ್ಕಾರಗಳು:**

೧. ಹುನಗುಂದ ತಾಲ್ಲೂಕು ರಾಜ್ಯೋತ್ಸವ ಪ್ರಶಸ್ತಿ

೨. ಮಠ ಮಾನ್ಯಗಳ ಸನ್ಮಾನ ಪಡೆದಿರುವರು

೩. ಶಾಲಾ ಕಾಲೇಜುಗಳು ಮಾನ ಸನ್ಮಾನ ಮಾಡಿವೆ.

ಎಲೆಮರಿ ಕಾಯಿಯಂತೆ ಇಳಿ ವಯಸ್ಸಿನಲ್ಲೂ ನಿರಂತರ ಸಂಗೀತ ಸೇವೆ ಮಾಡುವುದು ನಮ್ಮೆಲ್ಲರಿಗೂ ಮಾದರಿ. ಇಂತಹ ಅಪರೂಪದ ಕಲಾವಿದರು.

೫.೫. ಪಾಂಚಾಳರು. ದೈವಿ ಆರಾಧನೆಯ ಪದಗಳು :

೫.೫.೧. ದೇವಿ ಪೂಜಾ ಮತ್ತು ಕಾಳಿಕಾದೇವಿ ವಿಗ್ರಹ ತಯಾರಿಕೆ :

"ಆಚಾರಃ ಪರಮೋಧರ್ಮ ಆಚಾರ ಪರಮಂತಪಃ

ಅಚಾರಃ ಪರಮ ಜ್ಞಾನಮೊಚಾರಾತ್ಕಿಂ ನಸಾಧ್ಯತೆ"

ಎಂಬ ಸಂಸ್ಕೃತ ಶ್ಲೋಕದಲ್ಲಿ ವಿಶ್ವಕರ್ಮರ ಆಚರಣೆಗಳು ಆಚಾರವೇ ಶ್ರೇಷ್ಠವಾದ ಧರ್ಮ. ತಪಸ್ಸು ಮತ್ತು ಜ್ಞಾನ ಆಚಾರದಿಂದ ಸಾಧ್ಯ. ನಂಬಿಕೆ ಮತ್ತು ಆಚರಣೆಗಳು ಧರ್ಮದ ಎರಡು ಕಣ್ಣುಗಳು. ಪಾಂಚಾಳರ ದೇವತೆ ಕಾಳಿಕಾಂಬೆ, ಶಿರಸಂಗಿವಾಸಿಯಾಗಿದ್ದಾಳೆ. ಋಷಶೃಂಗರ ತಪೋಭೂಮಿ, ರಾಮಾಯಣ, ಮಹಾಭಾರತದ ಉಲ್ಲೇಖಗೊಂಡಿರುವ ಸ್ಥಳ ಶಿರಸಂಗಿ. ಐದು ರಾಕ್ಷಸರನ್ನು ರುಂಡ ಸಂಹರಿಸಿರುವ ಕಾಳಿಕಾದೇವಿಯ ಸ್ಥಳ ಶಿರಸಂಗಿ ಗ್ರಾಮ.

ಪಾಂಚಾಳರು ಅನೇಕ ದೇವಿ ಮೂರ್ತಿಗಳನ್ನು ನಿರ್ಮಿಸುವರು. ಕಟ್ಟಿಗೆ, ಕಲ್ಲು, ಕಂಚು, ಬೆಳ್ಳಿ, ಬಂಗಾರ ಇತ್ಯಾದಿಗಳು. ಉದಾ: ಕಟ್ಟಿಗೆಯಿಂದ ಗ್ರಾಮದೇವತೆಗಳಾದ ದುರಗವ್ವ, ದ್ಯಾಮವ್ವ, ಮರಗವ್ವ ಮುಂತಾದ ದೇವತೆಗಳನ್ನು ತಯಾರಿಸುವರು. ದ್ಯಾಮವ್ವನ ಮೂರ್ತಿ (ಕುದುರೆ, ಸವಾರಿ) ಕಟ್ಟಿಗೆಯ ಕೆತ್ತನೆಯ ಕೆಲಸ ಬಹಳ ಸೂಕ್ಷ್ಮವಾದದ್ದು. ಅಷ್ಟೇ ಕೌಶಲ್ಯದಿಂದ ಕೂಡಿರುತ್ತದೆ. ಕಬ್ಬಿಣದ ಮೊಳೆ, ಇತ್ತರೆ ಯಾವ ವಸ್ತು ಬಳಸುವದಿಲ್ಲ. ಏಕೆಂದರೆ ದೇವತೆ ಶಕ್ತಿ ಕಳೆದುಕೊಳ್ಳುತ್ತಾಳೆ ಎಂಬ ಭಾವನೆಗಳು ಪಾಂಚಾಳ ಸಮುದಾಯದಲ್ಲಿದೆ.

೫.೫.೨. ಪೂಜಾ ವಿಧಾನಗಳು :

ಪಾಂಚಾಳರನ್ನು ಆಚಾರ್ಯ, ವಿಶ್ವಕರ್ಮ, ವಿಶ್ವಬ್ರಾಹ್ಮಣರೆಂದು ಕರೆಯುವರು. ಅವರು ಹಿಂದು ಧರ್ಮದ ನಿಯಮಗಳನ್ನು ಅನುಸರಿಸುವರು. ವಿಶ್ವಕರ್ಮ ಆರಾಧ್ಯ ದೇವರಾದವರು ಕಾಳಿಕಾದೇವಿ, ದ್ಯಾಮವ್ವ, ದುರ್ಗಾದೇವಿ. ಈ ದೇವತೆಗಳ ಪೂಜೆ ಪುನಸ್ಕಾರಗಳು ಪ್ರತಿದಿನ ಎರಡು ಸಲ ಜರುಗುತ್ತಿರುವೆ. ಪ್ರತಿವರ್ಷ 'ಯುಗಾದಿಯ ಪಾಡ್ಯ' ವಿಶೇಷ ದಿನವಾಗಿದ್ದು, ಪಾಲ್ಗುಣ ಬಹುಳ ಅಮವಾಸ್ಯೆಯ ದಿನದಿಂದ ಶ್ರೀಕಾಳಿಕಾಂಬೆಯ ಪಾಲಕಿ ಉತ್ಸವವಿರುತ್ತದೆ. ಮೂರ್ತಿಯನ್ನು ಹೊರತೆಗೆಯುವುದು ಮೂರು ವರ್ಷಕ್ಕೊಮ್ಮೆ. ಉತ್ಸವ ದೇವ ದರ್ಶನಕ್ಕಾಗಿ ತಮ್ಮ ತಮ್ಮ ಊರಿನಿಂದ ಬಂದು ರಾತ್ರಿಯಿಡಿ ದೇವಿಯ ದರ್ಶನ ಪಡೆದು ಪಾವನವಾಗುವರು.

ಸಕಲ ಪಾಂಚಾಳರು ಪ್ರಾಚೀನ ಕ್ಷೇತ್ರ ಭೇಟಿಯಾಗಿ ಹುಟ್ಟಿದ್ದಕ್ಕೆ ಸಾರ್ಥಕ. ಯುಗಾದಿಯು ವಿಶ್ವಕರ್ಮರಿಗೆ ವರ್ಷದ ಆರಂಭದ ಹಬ್ಬವಾಗಿದೆ. ಬೆಳಗಿನ ಮುಹೂರ್ತದಲ್ಲಿ ಅಭ್ಯಂಜನ ಸ್ನಾನ ಮಾಡಿ ಮನೆಯನ್ನು ತಳಿರು, ತೋರಣಗಳಿಂದ ಸಿಂಗರಿಸಿ ಹೊಸ ವಸ್ತ್ರವನ್ನು ಧರಿಸಿ ದೇವತಾ

ಪೂಜೆಯನ್ನು ನೆರವೇರಿಸುತ್ತಾರೆ. ದೇವರಿಗೆ ನಿವೇದಿಸಿದ ನೈವೇದ್ಯ (ಬೇವು-ಬೆಲ್ಲ) ಗಳನ್ನು ಸರ್ವರೂ ಸ್ವೀಕರಿಸುತ್ತಾರೆ. ಸಿಹಿ ಘಟನೆಗಳು ಬರಲಿ ಎಂದು ಸರ್ವರಲ್ಲಿ ಬೇಡಿಕೊಳ್ಳುತ್ತಾರೆ. ಸಿಹಿ ಭೋಜನ ಮಾಡಿ ಹಿರಿಯರಿಂದ ಆಶೀರ್ವಾದ ಪಡೆಯುತ್ತಾರೆ. ಒಟ್ಟು ಒಂಬತ್ತು ದಿನಗಳವರೆಗೆ ಆಚರಣೆ ನಡೆಯುತ್ತದೆ. ನವಮಿ, ದಶಮಿ, ಏಕಾದಶಿ, ದ್ವಾದಶಿ, ಚತುರ್ದಶಿ, ಹುಣ್ಣಿಮೆ ಈ ರೀತಿ ಪಾಂಚಾಳರ ದಿನನಿತ್ಯದ ಪೂಜಾ ವಿಧಾನಗಳಿವೆ. (ಮಾಹಿತಿ ಸಂಗಾಪುರ ಗ್ರಾಮದ ಮಾನಪ್ಪ ಬಡಿಗೇರ ಹೇಳಿದ್ದು) ಬೆಳಿಗ್ಗೆ ೮.೩೦ ಗಂಟೆಗೆ ಈ ಸಂದರ್ಭದಲ್ಲಿ ಮಂತ್ರ ಶ್ಲೋಕಗಳೊಂದಿಗೆ ಪೂಜೆ ನೆರವೇರಿಸುವರು.[೧೨]

೫.೫.೩. ಧಾರ್ಮಿಕ ಆಚರಣೆಗಳು :

ಪಾಂಚಾಳರು ಗ್ರಾಮದೇವತೆ ನಂತರ ಇತರೆ ದೇವತೆಗಳನ್ನು ಆಚರಿಸುವರು. ಶ್ರೀಕೃಷ್ಣನಿಗೆ ತುಳಸಿಯಿಂದ ವಿಶೇಷವಾದ ಪೂಜೆ ಮಾಡಲಾಗುತ್ತದೆ. ಗ್ರಾಮದೇವತಾ ಆರಾಧನೆಯಲ್ಲಿ ಇಡೀ ಜಗತ್ತಿನಲ್ಲಿ ವಿಶ್ವ ಧರ್ಮವನ್ನು ಪಾಲಿಸುತ್ತಿರುವ ಏಕೈಕ ಸಮುದಾಯವೆಂದರೆ 'ವಿಶ್ವಕರ್ಮ ಸಮುದಾಯ' ಸಮನ್ವಯಿಕರು. ವಿಶ್ವಕರ್ಮರು ಯಾವ ಗ್ರಾಮದಲ್ಲಿ ಇರುತ್ತಾರೋ ಆ ದೇವತೆಗಳ ಜಾತ್ರೆ-ಉತ್ಸವಗಳಲ್ಲಿ ಭಕ್ತಿಪೂರ್ವಕವಾಗಿ ಭಾಗಿಯಾಗುತ್ತಾರೆ. ಕೆಲವು ಆಚರಣೆಗಳಲ್ಲಿ ತಮ್ಮ ಕೆಲಸಕ್ಕೆ ವಿಶ್ರಾಂತಿ ಪಡೆಯುವರು. ಅಮಾವಾಸ್ಯೆ, ಚಂದ್ರಮಾನ ಯುಗಾದಿ, ಸಿದ್ಧಿವಿನಾಯಕ, ಗೋಕುಲಾಷ್ಟಮಿ, ದೀಪಾವಳಿ, ನವರಾತ್ರಿ, ಮನೆ ಲಕ್ಷ್ಮಿಪೂಜೆ, ಸತ್ಯನಾರಾಯಣ ವ್ರತ ಮಾಡುವರು. ಪಾಂಚಾಳರು ತಮ್ಮ ಗೋತ್ರ, ಪ್ರವರ, ಸೂತ್ರ, ಕುಂಡ, ಶಾಖ ಸಂಪ್ರದಾಯಗಳನ್ನು ಪ್ರತಿನಿತ್ಯ ಸಂಧ್ಯಾವಂದನೆಯಲ್ಲಿ ಹೇಳಬೇಕು. ಯಜ್ಞೋಪವೀತ (ಜನಿವಾರ)ವನ್ನು ಉಪನಯನ, ಸಂಸ್ಕಾರದಿಂದ ತನ್ನ ಜೀವನದ ಕೊನೆಯ ತನಕ ಧರಿಸಬೇಕು. ಬ್ರಹ್ಮಚಾರಿ ಒಂದು ಮುಡಿ (ಮೂರುದಾರ) ಗೃಹಸ್ಥರು ೫ ಮುಡಿ (ಹದಿನೈದು ದಾರ) ಜನಿವಾರವನ್ನು ಧರಿಸಬೇಕು. ವಿಶ್ವಬ್ರಾಹ್ಮಣ ನಿತ್ಯ ಬ್ರಾಹ್ಮಿ ಮುಹೂರ್ತದಲ್ಲಿ ಎದ್ದು ಕ್ರಿಯಾದಿಗಳನ್ನು ಮುಗಿಸಿಕೊಂಡು ಸ್ನಾನ ಸಂಧ್ಯಾವಂದನೆ. ವಿಭೂತಿ ಧಾರಣೆ, ಕುಂಕುಮ/ಗಂಧ, ಬೊಟ್ಟುಧರಿಸಿ, ಪ್ರಾಣಯಾಮ, ಗಾಯತ್ರಿ ಮಂತ್ರ ಪಠಣ, ಭಗವಧ್ಯಾನ ಸೂರ್ಯನಿಗೆ ಅರ್ಘ್ಯ ಕೊಡುವುದು, ಪಿತೃ ದೇವರಿಗೆ ನಮಸ್ಕಾರ ಸಲ್ಲಿಸಿ ವೇದ ಅಧ್ಯಯನ ಕಾಲಜ್ಞಾನ ಪಡಿಸಬೇಕು. ನಂತರ ಶುದ್ಧ ಶಾಖಾಹಾರ ಮತ್ತು ಸಾತ್ವಿಕ ಆಹಾರವನ್ನೇ ಊಟ ಮಾಡಬೇಕು, ಎಂದು "ವಿಶ್ವಕರ್ಮ ಧರ್ಮವೇ ವಿಶ್ವಧರ್ಮ" ಎಂಬ ಭಾವನೆಗಳು ಮೂಡಬೇಕಾಗುತ್ತದೆ.[೧೩]

ಅಡಿ ಟಿಪ್ಪಣಿ

೧. ಡಾ.ಚಕ್ಕೆರಿ ಶಿವಶಂಕರ, ಜನಪದ ತಿಳುವಳಿಕೆ ೨೦೦೮ ಪು.ಟ. ೨೬

೨. ಡಾ. ವಿರೇಶ ಬಡಿಗೇರ, ಪಾಂಚಾಳ ಸಾಹಿತ್ಯ ಮತ್ತು ಸಂಸ್ಕೃತಿ ೨೦೧೯, ೫೩ ಮಯ ಪ್ರಕಾಶನ ಕಮಲಾಪುರ)

೩. ಶ್ರೀರಾಮ ಇಟ್ಟಣ್ಣವರ "ಶ್ರೀಕೃಷ್ಣ ಪಾರಿಜಾತ ಒಂದು ಅಧ್ಯಯನ" ಸಂಶೋಧನಾ ಪ್ರಬಂಧ ಪುಟ.ಸಂ. ೨೨

೪. ಡಾ. ರಾಮಕೃಷ್ಣ ಮರಾಠೆ ಗುರುಗಳ ಚರ್ಚೆಯಲ್ಲಿ ಪ್ರಸ್ತಾಪಿಸಿದರು ಸಂದರ್ಶನ ಸ್ಥಳ ಬೆಳಗಾವಿ ೨೫/೧೧/೨೦೧೮, ಪು-೨೨

೫. ಡಾ. ವೀರೇಶ ಬಡಿಗೇರ, ತತ್ವ ಕೊರವಂಜಿ, ೨೦೧೮, ಪು-೨೦೫

೬. ಡಾ. ಕೆ.ಎನ್. ದಿಂಡೂರ ಕೃತಿ "ವಿಜಾಪುರ ಜಿಲ್ಲೆಗೆ ಜಾನಪದ ಕಲಾವಿದರ ಕೊಡುಗೆ" ಪ್ರಸಾರಾಂಗ, ಕರ್ನಾಟಕ ವಿ.ವಿ. ಧಾರವಾಡ, ಪು-೧೧

೭. ಡಾ. ಅರವಿಂದ ಮಾಲಗತ್ತಿ, 'ಕನ್ನಡ ವಿಷಯ ವಿಶ್ವಕೋಶ', ಪು-೧೦೬೮, ಮೈಸೂರು ವಿ.ವಿ., ಕುವೆಂಪು ಅಧ್ಯಯನ ಕೇಂದ್ರ, ೨೦೦೬

೮. ಶ್ರೀ ಗಣಪತೆಪ್ಪ ಕಾಳಪ್ಪ ಬಡಿಗೇರ ದಿನಾಂಕ ೨೮/೬/೨೦೧೧ ಸಂದರ್ಶನದ ಸ್ಥಳ ಹೆರೇಕಲ್

೯. ಕರ್ಬಲ ಪದಗಳು" ಅರವಿಂದ ಮಾಲಗತ್ತಿ (ಸಂ), ಕನ್ನಡ ವಿಷಯ ವಿಶ್ವಕೋಶ ಜಾನಪದ, ಪು-೨೩೬)

೧೦. ಸಂತೋಷ ಕಾಳಣ್ಣವರ, ಮಳೆಯಪ್ಪನ ಪರಂಪರೆ ಮತ್ತು ಸಂಪ್ರದಾಯ, ಮಹಾಪ್ರಬಂಧ, ೨೦೧೪, ಪು-೧೫೭-೧೫೮

೧೧. ಕೇಶಿರಾಜ ಶಬ್ದಮಣಿ ದರ್ಪಣ, ಶ್ರತಿಕಪ್ಪಸಂದಿ, ,ಗದ್ಯ-೭೩, ಪು-೬೮

೧೨. ಮಾನಪ್ಪ ಬಡಿಗೇರ, ಸಂದರ್ಶನ, ೦೩-೦೨.೨೦೧೯, ಸ್ಥಳ ಸಂಗಮರ (ಬಾಗಲಕೋಟೆ)

೧೩. ಗಣಪತಿ ಹೊರಪೇಟೆ ಪ್ರವಚನಕಾರರು ಸಂದರ್ಶನ ದಿನಾಂಕ ೨೪/೧/೨೦೧೮ರಂದು, ಸ್ಥಳ : ತಳಗಿಗಾಳ ಇಲಾಳ

ಅಧ್ಯಾಯ : ಆರು

ಪಾಂಚಾಳರು : ಜ್ಞಾನ ಮತ್ತು ಕೌಶಲ್ಯ

೬.೧. ಪ್ರವೇಶ

೬.೨. ಪಾಂಚಾಳರು ಇತರೆ ಕಲೆಗಳ ಕೌಶಲ್ಯ

೬.೨.೧. ಬಡಿಗಿತನದ ಕೌಶಲ್ಯ (ಕಾಷ್ಠ)

೬.೨.೨. ಶಿಲ್ಪ ತಯಾರಿಕೆಯ ಕೌಶಲ್ಯ

೬.೨..೩. ಪತ್ತಾರಿಕೆ (ಅಕ್ಕಸಾಲಿಗ)ಯಲ್ಲಿ ಕೌಶಲ್ಯ

೬.೨.೪. ಕಂಚುಗಾರರ ಕೌಶಲ್ಯ

೬.೨.೫. ಕಮ್ಮಾರಿಕೆಯ, ಕೌಶಲ್ಯ

೬.೩. ಪಾರಿಜಾತದಲ್ಲಿ ಪಾಂಚಾಳರ ಜ್ಞಾನ ಕೌಶಲ್ಯಗಳು

೬.೩.೧. ಪೆಟಿಗೆ (ಹಾರ್ಮೋನಿಯಂ) ತಯಾರಿಕೆ

೬.೩.೨. ತಾಳ ತಯಾರಿಕೆ

೬.೩.೩. ತಬಲಾ ತಯಾರಿಕೆ

೬.೩.೪. ಪಾರಿಜಾತದಲ್ಲಿ ಹಿಮ್ಮೇಳ ಮುಮ್ಮೇಳ ಪಾತ್ರಧಾರಿಗಳ ಕೌಶಲ್ಯ

೬.೩.೫. ಪಾರಿಜಾತ ಕಂಪನಿ ಸಂಘಟಕರಾಗಿ

೬.೪. ಸಾಹಿತ್ಯ ಕಲೆಗಳಲ್ಲಿಯ ಪಾಂಚಾಳರ ಕೌಶಲ್ಯಗಳು

೬.೪.೧. ಪಾಂಚಾಳರ ಸಾಹಿತ್ಯ ಕ್ಷೇತ್ರದ ಜ್ಞಾನಗಳು

೬.೪.೨. ಪ್ರತಿಕಾ ಕ್ಷೇತ್ರ ಹಾಗೂ ಓದು-ಬರಹಯುಳ್ಳವರು

೬.೪.೩ ಪುರಾಣ ಪ್ರವಚನಕಾರರು

೬.೪.೪. ಜ್ಯೋತಿಷ್ಯ ಹಾಗೂ ಆಯುರ್ವೇದಿಕ ತಜ್ಞರು

೬.೪.೫. ಜಾನಪದ ಕ್ಷೇತ್ರದಲ್ಲಿ ಪಾಂಚಾಳರ ಕೌಶಲ್ಯಗಳು

ಅಧ್ಯಾಯ : ೬

ಪಾಂಚಾಳರು : ಜ್ಞಾನ ಮತ್ತು ಕೌಶಲ್ಯ

೬.೧. ಪ್ರವೇಶ :

ಪಾಂಚಾಳರು ಜನಪದ ಕಲೆಗಳಾದ ಶ್ರೀಕೃಷ್ಣಪಾರಿಜಾತ ಹಾಗೂ ಮುಂತಾದವುಗಳಲ್ಲಿ ಬಹುಮುಖ್ಯ ಕಾರ್ಯಗಳನ್ನು ನಿರ್ವಹಿಸಿದವರು. ಪಾಂಚಾಳದವನಾದ ಕುಲಗೋಡ ತಮ್ಮಣ್ಣನು ಪಾರಿಜಾತ ಪರಂಪರೆಯನ್ನು ಗೀತರೂಪಕದಿಂದ ನಾಟಕರೂಪಕ್ಕೆ ತಿರುಗಿಸಿದ್ದು ಮೊದಲ ಜ್ಞಾನದ ಕೌಶಲ್ಯವಾಗಿ ಗೋಚರಿಸುತ್ತದೆ. ನಂತರ ಪಾರಿಜಾತ ಬೆಳವಣಿಗೆಯಲ್ಲಿ ಕಂಪನಿ ಸಂಘಟಕರಾಗಿ, ಕಥೆಯ ನಿರ್ದೇಶಕರಾಗಿ, ಸಲ್ಲಿಸಿದ ಸೇವೆ ಅಗಾಧವಾದದ್ದು. ಪಾರಿಜಾತದಲ್ಲಿ ಬರುವ ಪಾತ್ರದಾರಿಗಳು ವಿಭಿನ್ನ ಕಲಾ ಶೈಲಿಯನ್ನು ವಿಶ್ಲೇಷಿಸುವುದರೊಂದಿಗೆ ಪಾಂಚಾಳರ ಜ್ಞಾನವು ಕ್ರಿಯಾ ಚಟುವಟಿಕೆಗಳಿಂದ ಕೂಡಿರುವುದು. ಆದ್ದರಿಂದ ಸಣ್ಣಾಟವಾದ ಸಂಗ್ಯಾ-ಬಾಳ್ಯಾ ನಾಟಕವನ್ನು ಪತ್ತಾರ್ ಮಾಸ್ತರ್ ರಚಿಸಿದ್ದು ವಿಶೇಷ. ಪಾಂಚಾಳ ಸಮುದಾಯವು ತಮ್ಮ ಕುಲಕಸುಬುಗಳ ಜೊತೆಗೆ ವಿವಿಧ ಜನಪದ ಕಲೆಗಳಲ್ಲಿ ತೊಡಗಿಸಿಕೊಂಡು ಪ್ರಾವೀಣ್ಯತೆ ಪಡೆದವರು.

"ಕಂಚುಗಾರರು ಕೈದುಗಾರರು ಹೊಳೆವ ಹೂ
ಮ್ಮಂಚಗಾರರು ಶಿಲ್ಪಗಾರರು
ಸಂಚುಗಾರರು ಸದ್ವಿದ್ಯಾಧಿಕರಾದ
ಪಾಂಚಾಳರರ್ದಕ್ಕೆಲದಿ"

ಎಂದು ಕನಕದಾಸರು ಮೋಹನತರಂಗಿಣಿ ಕೃತಿಯಲ್ಲಿ ದ್ವಾರಕಾ ಪುರದ ವರ್ಣನೆ ಕುರಿತು ಈ ರೀತಿ ಹೇಳುತ್ತಾರೆ. ಬೀದಿಯ ಎರಡು ಕಡೆಗೆ ಪಾಂಚಾಳರ ಕರಕುಶಲ ಅಂಗಡಿಗಳಿದ್ದವು. ಎಂಬುದನ್ನು ವರ್ಣಿಸುತ್ತಾರೆ.[೧] ಪಾಂಚಾಳ ಸಮುದಾಯ ಜ್ಞಾನ ಕುಶಲತೆಗಳಿಂದಾಗಿ ಪ್ರಾಚೀನ ಕಾಲದಿಂದ ಆಧುನಿಕದವರೆಗೆ ಎಲ್ಲಾ ವರ್ಗದ ಜನರೊಂದಿಗೆ ಬೆರೆತುಕೊಳ್ಳುತ್ತಾರೆ.

ಅಪರಾಳ ತಮ್ಮಣ್ಣನ ಕೃಷ್ಣಪಾರಿಜಾತವು ಗೀತರೂಪಕದಿಂದ ಹಲವಾರು ಬದಲಾವಣೆಗಳಾಗಿ ಈಗಲೂ ಪ್ರಚಲಿತದಲ್ಲಿದೆ. ರಂಗಭೂಮಿಯಲ್ಲಿ ರಾಗ, ನೃತ್ಯ–ಸಂಗೀತ, ಪರಿಕರಗಳು ಬದಲಾಗುತ್ತ, ಮೂಲಕತೆಯ ರೂಪಾಂತರ ಮಾಡಿ ಆಯಾ ಕಲಾಸಕ್ತರ ಅಭಿರುಚಿಗೆ ತಕ್ಕಂತೆ ಬಯಲಾಟಗಳು ಬದಲಾದವು. ಅದರಂತೆ ಪಾರಿಜಾತವು ಅನೇಕ ಕೌಶಲ್ಯಗಳನ್ನು ಒಳಗೊಂಡು ಕುಲಗೋಡ ತಮ್ಮಣ್ಣನಿಂದ ಶುದ್ಧ ಪಾರಿಜಾತ ನಾಟಕವಾಗಿ, ಬಡಕುದುರಿ ಬಸಪ್ಪ, ಶಿರಗುಪ್ಪಿ ಸದಾಶಿವಯ್ಯ, ಬರಗೀಯ ರಾಚಯ್ಯ, ನಾರಾಯಣ ಪತ್ತಾರರು, ಗೋವಿಂದಪ್ಪ ಪತ್ತಾರ್, ಕೃಷ್ಣ ದೇಶಪಾಂಡೆ, ಕೌಜಲಗಿ ನಿಂಗವ್ವ, ಆಪ್ಪಲಾಲ ನದಾಫ್ ಮುಂತಾದ ಅನೇಕ ಕಲಾವಿದರು ತಮ್ಮ ಜ್ಞಾನ ಕೌಶಲ್ಯಗಳ ಮೂಲಕ ಪಾರಿಜಾತವನ್ನು ಶ್ರೀಮಂತಗೊಳಿಸಿದ್ದಾರೆ.

ಕನ್ನಡ ಶ್ರೀಕೃಷ್ಣಪಾರಿಜಾತ ಸೆಲೆಯೊಡೆದದ್ದು ರಾಯಚೂರು ಜಿಲ್ಲೆ. ಆದರೂ ಆದು ಆಟವಾಗಿ ಬೆಳೆಯುತ್ತ ಜನಪದರ ಕಲಾಭಿವ್ಯಕ್ತಿಗೆ ವಾಹಕವಾಗುತ್ತ ಸುಮಾರು ನೂರು ವರ್ಷಗಳಿಂದೀಚೆಗೆ ಲಕ್ಷೋಪಲಕ್ಷ ಪ್ರೇಕ್ಷಕರ ಮನಸೆಳೆದಿದೆ. ಕೃಷ್ಣಾನದಿಯ ಎಡ ಬಲದಲ್ಲಿ ಬೆಳಗಾವಿ, ವಿಜಯಪುರ, ಬಾಗಲಕೋಟದಲ್ಲಿ ಪಾರಿಜಾತದ ಸೊಬಗನ್ನು ಹೆಚ್ಚಿಸಿವೆ. ವಿಷ್ಣು ಮತ್ತು ಕೃಷ್ಣನ ಮಹಿಮೆ ಪುರಾಣವಲಯದಲ್ಲಿ ಪಡೆದ ಹರವು ಸಣ್ಣದು. ಆದರೂ ಸುತ್ತಲಿನ ಘಟನಾವಳಿಗಳನ್ನು ಆಯ್ದು, ನಾಟಕೀಯ ಗುಣಗಳಿಂದ ಕೂಡಿರುವುದರಿಂದ ಜನಸಾಮಾನ್ಯರಿಗೆ ಆಕರ್ಷಿಸಿತು. ಇದೊಂದು ಕಲಾವಿದರಾದ ಜ್ಞಾನ ಪ್ರಯೋಗದ ಕಲೆಯೆನಿಸಿದೆ.

ಕನ್ನಡ ಜನಪದ ರಂಗಭೂಮಿ ಪರಂಪರೆಯ ವಿಸ್ತಾರವು ವೈವಿಧ್ಯತೆಗಳನ್ನು ಗಮನಿಸಿದವರಿಗೆ ಸಂಕ್ಷಿಪ್ತ ಸಮೀಕ್ಷೆಗೆ ಒಳಪಡುವುದಿಲ್ಲ. ಕನ್ನಡ ರಂಗಭೂಮಿ ಪ್ರಾಚೀನತೆ ಅದು ಜನಪದ ರಂಗಭೂಮಿಯ ಚಿಂತನವಾಗಿದೆ. ರಂಗ ಕೌಶಲ್ಯಗಳಲ್ಲಿ ಜನಪದ ರಂಗ ವಿನ್ಯಾಸ ಇಂದಿಗೂ ಹಳ್ಳಿಯಲ್ಲಿ ವಿಶಿಷ್ಟ ಆಚರಣೆಗಳ ಮೂಲಕವೇ ಅನುಷ್ಠಾನಗೊಳ್ಳಲಿದೆ. ಆಟ, ಬಯಲಾಟ, ನಾಟಕಗಳು, ಪೂರ್ವ–ಪಶ್ಚಿಮ ದಿಕ್ಕುಗಳ, ಬಲದಿಂದ ಅವುಗಳ ಅಸ್ತಿತ್ವ ಬೆಳಕಿಗೆ ಬಂದಿವೆ. ಪಾರಿಜಾತವು ವಿಶಿಷ್ಟವಾದದ್ದು, ಎಲ್ಲಾ ಬಯಲಾಟಗಳಲ್ಲಿ ಸಂಭಾಷಣೆಗೆ ಸಂಗೀತ ಮತ್ತು ಹಾಡು ಪೂರಕವಾಗಿದ್ದರೆ, ಪಾರಿಜಾತದಲ್ಲಿ ಹಾಡು ಮತ್ತು ಸಂಗೀತಕ್ಕೆ ಮಾತುಗಳು ಪೂರಕವಾಗುತ್ತವೆ. ಉದಾಹರಣೆಗೆ ಸಂಗ್ಯಾಬಾಳ್ಯ ಡಪ್ಪಿನ ಆಟವನ್ನು ನೋಡಬಹುದು. ಎಂದು ಶ್ರೀ.ಶಿವಾನಂದ ಶೆಲ್ಲಿಕೇರಿ (ಶಿವಾನಂದ ಶೆಲ್ಲಿಕೇರಿ, ೨೦೦೦, ಪು.ಸಂ.೨) ಹೇಳುತ್ತಾರೆ.[೨]

೬.೨. ಪಾಂಚಾಳರು ಇತರೆ ಕಲೆಗಳ ಕೌಶಲ್ಯ :

ಭಾರತೀಯ ಸನಾತನ ಸಂಸ್ಕೃತಿಯ ನಿರ್ಮಾತೃಗಳಲ್ಲಿ ವಿಶ್ವಕರ್ಮ, ವಿಶ್ವಬ್ರಾಹ್ಮಣ, ಪಾಂಚಾಳ, ಅಚಾರ್ಯ, ಮುಂತಾದ ಹೆಸರುಗಳಿಂದ ಕರೆಯುವ ಇವರನ್ನು ಕುಶಲ ಕಲೆಗಳ ಉಗಮರು ಎಂದು ಕರೆಯುವರು. "ಕುಶಲ ವೃತ್ತಿಗಳನ್ನು ಆಧರಿಸಿ ಜೀವಿಸುವ ಪಾಂಚಾಳರು ಕುಶಲಕರ್ಮಿಗಳೆಂದು, ಕುಶಲಕರ್ಮ ಎಂಬ ಪದವು ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಒಂದು ನಿರ್ಧಿಷ್ಟ ಕೆಲಸ ಅಥವಾ

ವ್ಯಾಪಾರದಲ್ಲಿ ನಿಪುಣತೆಯನ್ನು ಪಡೆದಿರುವವನು ಎಂದು ಮನುಸ್ಮೃತಿಯಲ್ಲಿ ಪ್ರಾಸಂಗಿಕವಾಗಿ ಹೇಳುತ್ತಾರೆ.

೬.೨.೧. ಬಡಿಗಿತನದ ಕೌಶಲ್ಯ (ಕಾಷ್ಠ) :

ಪಾಂಚಾಳ ಸಮುದಾಯದಲ್ಲಿ ಬಡಿಗಿತನವು ಪ್ರಮುಖ ಕುಲಕಸುಬು. ಇವರು ಒಕ್ಕಲುತನದ ರೈತರಿಗೆ ಹತ್ತಿರವಾದವರು. ಬಡಗಿಯು ಮರ ಕಡಿದು ಕೆತ್ತಿ ಗೃಹ ನಿರ್ಮಾಣದ ಉಪಕರಣಗಳು, ಗೃಹೋಪಯೋಗಿ ಉಪಕರಣಗಳು, ರೈತರ ಸಲಕರಣೆಗಳು, ಮುಂತಾದವುಗಳನ್ನು ಪಾರಂಪರಿಕವಾಗಿ ಮಾಡುತ್ತ ಬಂದಿರುವ ಕಸುಬಿಗೆ ಬಡಗಿತನ ಎನ್ನುವರು.

ವ್ಯವಸಾಯ ಸಂಬಂಧಿತ ಪಿಠೋಪಕರಣಗಳು, ಗೃಹ ನಿರ್ಮಾಣ, ಧಾರ್ಮಿಕ ಕ್ರೀಡೆ, ಶಾಲಾ–ಕಾಲೇಜುಗಳಲ್ಲಿ ಬಳಸುವ ವಸ್ತುಗಳಿಗೆ ಸಂಬಂಧಿಸಿದ ವಸ್ತುಗಳನ್ನು ಬಡಿಗರು ಮರಗಳಿಂದ ತಯಾರಿಸುತ್ತಾರೆ. ಉದಾ: ಹೊನ್ನು, ಬೀಟೆ, ಮತ್ತಿ, ಹಲಸು, ಜಾಲಿ, ಮಾವು, ನೇರಳೆ, ಬೇವು ಮೊದಲಾದವುಗಳಿಂದ ವಿವಿಧ ಉಪಕರಣಗಳನ್ನು ತಯಾರಿಸುತ್ತಾರೆ.

ಬಡಿಗ ಕಮ್ಮಾರರು ಪೊಡವಿಗದಿಕರ್ತರು
ಬಡಿದು ಬತ್ತೀಸ ಆಯುಧವ ಮಾಡಿ
ಸರ್ವರಿಗೆ ಕೊಡುವರಯ್ಯ ಬಸವಣ್ಣ[೩]

ಎಂಬ ನುಡಿಯನ್ನು ತಿಂಥಿಣಿ ಮೌನೇಶ್ವರ ವಚನ ವೃತ್ತಿ ಪ್ರಧಾನವಾದ ಉದ್ಯೋಗಗಳ ಲೋಕ ಪ್ರಾಧಾನ್ಯತೆಯನ್ನು ವಿಶ್ವಕರ್ಮ ಪರಂಪರೆಯಲ್ಲಿ ಆಗಿಹೋದ ಮಹಾ ಬಂಡಾಯಗಾರ ಮೌನೇಶ್ವರ ಎಂದು ತಿಳಿಸುತ್ತಾರೆ.

ಬಡಿಗತನ ವೃತ್ತಿಯ ಉಪಕರಣಗಳು ಉಳಿ, ಬಾಚಿ, ಕೊಡ್ತಿ, ಕತ್ತರಿ, ಗರಗಸ ಮುಂತಾದವುಗಳು. ಪಾಂಚಾಳರಲ್ಲಿ ಬಡಿಗನು ತನ್ನ ದಿನನಿತ್ಯದ ಬಡಿಗಿತನದಲ್ಲಿ ಕಟ್ಟಿಗೆಯ ವಸ್ತುಗಳನ್ನು ಮಾಡುವಾಗ ಅನೇಕ ಕೈ ಕೆಲಸದ ಉಪಕರಣಗಳನ್ನು ಬಳಸುವುದುಂಟು. ರೈತನಿಗೆ ಕೂರಿಗೆ, ಕುಂಟೆ, ಬೇಕಾಗಿರುತ್ತದೆ. ರೈತನಿಗೆ ತನ್ನ ಹೊಲದಲ್ಲಿ ಜಾಲಿಗಿಡ ಇದೆ ಅದರಲ್ಲಿ ಏನಾದರೂ ಆಗುತ್ತದೆ ಎಂಬುದು ಗೊತ್ತಿಲ್ಲ, ಅದಕ್ಕಾಗಿ ಬಡಿಗನನ್ನ ಕರೆದುಕೊಂಡು ಬಂದು ತೋರಿಸಿದರೆ ತಕ್ಷಣ, ತಟ್ಟಂತ ಮರವನ್ನು ನೋಡಿ ಅದು ಕೂರಿಗೆ ದಿಂಡು ಆಗುತ್ತದೆ ಎಂದು ಹೇಳುತ್ತಾನೆ. ಇದು ಬಡಿಗನ ಜ್ಞಾನ ಕೌಶಲ್ಯದ ಭಾಗವಾಗುತ್ತದೆ. ಆದ್ದರಿಂದ ವೃತ್ತಿಕಸುಬುದಾರರು ಸದಾ ಜ್ಞಾನಯುಳ್ಳವರು ಆಗಿರುವರು. ಪ್ರತಿ ಗ್ರಾಮದಲ್ಲಿರುವರು ರೈತರ ಒಡನಾಡಿಗಳು.

"ದೇಶದ ಬೆನ್ನೆಲುಬು ರೈತನಾದರೆ, ರೈತನ ಬೆನ್ನೆಲುಬು ಬಡಿಗನಾಗುವನು". ಬಡಿಗನಿಗೆ ಆಧಾರ ಪ್ರಕೃತಿಯ ಗಿಡ–ಮರಗಳು ಅವಶ್ಯವಾಗುತ್ತವೆ.

ಬಡಿಗೇರ್ ಓಣ್ಯಾಗ ಸೆಡಗರಕಿನ್ನೇಳಲಿ

ಬಿಳಿಯಂಗಿ ಬೆಳ್ಳಿ ಉಡುದಾರ ॥ ಹಾಕ್ಕೊಂಡು

ಬಡಿಗಣ್ಣ ಹೆಡ್ಡಿ ಬಿಗಿದನೋ

ನಾಗಸೂರಿನ ಬಡಿಗೆ ನಾಶ ತೊಟ್ಟಿಲಮಾಡಿ

ನಾದೂನಿಗೊಂದು ನನಗೊಂದು ॥ ಮನಿಯಾನ

ಸ್ವಾದರತ್ತಿಗೊಂದು ಸೊಸೆಗೊಂದು

ಈ ರೀತಿ ಬಡಿಗಿಯ ಮೆಚ್ಚುಗೆಗಳ ನುಡಿಗಳು ಸೇವೆ ಹಾಗೂ ಸಂಬಂಧಗಳನ್ನು ತಿಳಿಸುತ್ತವೆ.[೪]

೬.೨.೧.೧. ಶ್ರೀ ದ್ಯಾಮಣ್ಣ ಬಡಿಗೇರ, ಕಲಾತ್ಮಕ ಬದುಕಿನ ಕೌಶಲ್ಯಗಳು :

ಅನಗವಾಡಿಯ ಬಡಿಗ(ಕಾಷ್ಟ), ಶಿಲ್ಪ ಕಲಾವಿದ ದ್ಯಾಮಣ್ಣ ಬಡಿಗೇರ್, ಹಳ್ಳಿಯಿಂದ ಬೆಳಗಿದ ವಿಶೇಷ ಪ್ರತಿಭೆ. ಕಲಾತ್ಮಕ ಜಡವಸ್ತುಗಳಿಗೆ ಚೈತನ್ಯ ತುಂಬುವ ಅನನ್ಯ ಕಲಾವಿದ, ಬಡತನದ ಬೇಗೆಯಲ್ಲಿ ಬೆಂದು ಬದುಕು ಕಟ್ಟಿಕೊಂಡ ಈ ಕಲಾವಿದನ ಪ್ರತಿಭೆ ಅನನ್ಯವಾದುದು. ತಾವಷ್ಟೇ ಅಲ್ಲದೆ ತಮ್ಮ ಮಕ್ಕಳಿಗೂ ಈ ಕಲೆಯನ್ನು ಧಾರೆ ಎರೆದಿರುವ ಈ ಕಲಾವಿದನ ಬದುಕು ವಿಸ್ಮಯವಾದದ್ದು. ಕಲಾವಿದ ಮಣ್ಣನ್ನು ಮೂರ್ತಿಗಳನ್ನಾಗಿ ಕಾಷ್ಟ ಮತ್ತು ಶಿಲೆಯನ್ನು ಶಿಲ್ಪವನ್ನಾಗಿ ಅದಕ್ಕೆ ಬಣ್ಣವನ್ನು ಬಳಿದು ಚಿತ್ರವನ್ನಾಗಿಸುವ ಕಲೆಯು ರೊಮಾಂಚನವಾದದ್ದು. ಹೀಗೆ ವಿವಿಧ ಜಡ ವಸ್ತುಗಳಿಗೆ ದೈವತ್ವದ ಚೇತನ ಶಕ್ತಿ ತುಂಬುವ ಕೆಲಸ ಕಲಾವಿದನಿಂದಲ್ಲದೆ ಮತ್ಯಾರಿಂದಲೂ ಸಾಧ್ಯವಿಲ್ಲ. ಭಾರತ ದೇಶ ಕಲೆಯ ತವರೂರು. ನಮ್ಮ ಪೂರ್ವಜರು ಕಲೆಗೆ ಹೆಚ್ಚಿನ ಮಹತ್ವ ನೀಡಿದವರು. ಹಿಂದಿನ ಈ ಕಲೆಯ ಪರಂಪರೆಯನ್ನು ಯುವ ಶಿಲ್ಪಿಗಳು ಉಳಿಸಿ ಬೆಳೆಸುವ ಗುರುತರ ಹೊಣೆ ಹೊತ್ತಿರುವರು.

ಬಾಗಲಕೋಟೆ ತಾಲೂಕಿನ ಅನಗವಾಡಿ ಪುನರ್ ವಸತಿ ಕೇಂದ್ರದಲ್ಲಿ ಗ್ರಾಮದೇವಿಯ ದೇವಾಲಯದ ದಕ್ಷಿಣ ದಿಕ್ಕಿನಲ್ಲಿ ವಿಶ್ವಕರ್ಮ ಶಿಲ್ಪಕಲಾ ಕೇಂದ್ರ ತೆರೆದಿರುವ, ದ್ಯಾಮಣ್ಣ ಕಾಳಪ್ಪ ಬಡಿಗೇರ ಅವರು ಕಳೆದ ೩೫ ವರ್ಷಗಳಿಂದ ಕಾಷ್ಟ(ಕಟ್ಟಿಗೆ) ಕೆತ್ತನೆ ಮಾಡುವ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇವರ ಸಾಧನೆ ಗಮನಿಸಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ೨೦೧೮ನೇ ಸಾಲಿನ (ಸಂಪ್ರದಾಯ ಶಿಲ್ಪ) ಗೌರವ ಪ್ರಶಸ್ತಿಗೆ ಆಯ್ಕೆ ಮಾಡಿದ್ದು ಬಾಗಲಕೋಟೆ ಜಿಲ್ಲೆಗೆ ಹೆಮ್ಮೆಯ ವಿಷಯ.

ಕುಶಲಕರ್ಮಿ ಬಡಿಗೇರ ಮನೆತನದ ಕಾಳಪ್ಪ ಮತ್ತು ಸರಸ್ವತಿ ದಂಪತಿಗಳಿಗೆ ೨೯ ಡಿಸೆಂಬರ್ ೧೯೫೯ ರಂದು ದ್ಯಾಮಣ್ಣ ಜನಿಸಿದರು. ೫ನೇ ತರಗತಿ ಓದುವ ಸಂದರ್ಭದಲ್ಲಿ ತಂದೆ ತೀರಿಕೊಂಡರು. ನಂತರ ಶಾಲೆಗೆ ವಿದಾಯ ಹೇಳಬೇಕಾಗಿ ಬಂತು. ಬಡತನವೇ ಹಾಸುಹೊಕ್ಕಾಗಿದ್ದ ಮನೆತನದ ಜವಾಬ್ದಾರಿ ತಾಯಿಯ ಹೆಗಲೇರಿತು. ಅವ್ವ ಮತ್ತೊಬ್ಬರ

ಜಮೀನುಗಳಲ್ಲಿ ಕೂಲಿ ಕೆಲಸ ಮಾಡಿ ಸಂರಕ್ಷಣೆ ಮಾಡಿದರು. ಮೊದ ಮೊದಲು ಕೃಷಿ ಕಾರ್ಯಗಳಿಗೆ ಬೇಕಾಗುವ ಮಡಿಕೆ, ಕುಂಟೆ, ಕೂರಿಗೆ, ಎಡಿದಿಂಡು, ಎತ್ತಿನಬಂಡಿ, ಸೇರಿದಂತೆ ಮತ್ತಿತರ ವಸ್ತಗಳನ್ನು ತಯಾರಿಸುತ್ತಿದ್ದರು. ಪರಂಪರಾಗತವಾಗಿ ಶಿಲ್ಪಕಲಾ ತರಬೇತಿ ಪಡೆದು, ಕಟ್ಟಿಗೆಯೊಳಗೆ ಕೆತ್ತನೆ ಮಾಡುವ ಹವ್ಯಾಸ ಮೈಗೂಡಿಸಿಕೊಂಡರು. ಅಲ್ಲದೆ ಬಾಗಲಕೋಟೆಯ ಶಿಲ್ಪಿ ಎನ್.ಎನ್.ಬಡಿಗೇರ (ನಿರುಪಾಧಿ) ಹತ್ತಿರ ಶಿಲೆ ಕೆತ್ತನೆಯನ್ನು ಕಲಿತಿರುವೆ ಎಂದು ದ್ಯಾಮಣ್ಣನವರ ಮಾತುಗಳಲ್ಲಿ ಶ್ರಮಬದುಕಿನ ಅರ್ಥವಿತ್ತು.

ದ್ಯಾಮವ್ವ, ದುರ್ಗವ್ವ ಮುಂತಾದ ಗ್ರಾಮದೇವಿಯರ ಮೂರ್ತಿ ಕೆತ್ತನೆಯ ಕೆಲಸ. ಅವರು ಕೌಶಲ್ಯತೆಯಿಂದ ೧.೨೫ ಲಕ್ಷ ರೂ. ಸಂಭಾವನೆ ಪಡೆದುಕೊಳ್ಳುವರು. ವಿಗ್ರಹ ನಿರ್ಮಾಣಕ್ಕೆ ೩ ತಿಂಗಳು ಬೇಕಾಗುತ್ತದೆ. ೧ ತಿಂಗಳಲ್ಲಿ ನಿರ್ಮಾಣವಾಗುವ ಸಿಂಹಾಸನಕ್ಕೆ ೬೦ರಿಂದ ೭೦ ಸಾವಿರ ರೂಪಾಯಿಗಳು ಹಾಗೂ ಹತ್ತು ದಿವಸಗಳಲ್ಲಿ ನಿರ್ಮಿಸುವ ಪಲ್ಲಕ್ಕಿಗೆ ೩೦ ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುವುದಾಗಿ ಹೇಳಿದರು. ಗ್ರಾಮದೇವತೆಯ ವಿಗ್ರಹ, ಪಲ್ಲಕ್ಕಿ ತಯಾರಿಸಲು ಶಿವ ಹೊನ್ನಿ, ಅಂಕಲಿ ಹಲಸಿನ ಹಲಗೆ, ಸಾಗವಾನಿ ಕಟ್ಟಿಗೆ ಬೇಕಾಗುತ್ತದೆ. ಮುಂಡಗೋಡ, ಯಲ್ಲಾಪೂರ, ಅಳ್ನಾವರ, ಕಿರುಹೊತ್ತಿ ಮತ್ತಿತರೆಡೆ ಮರದ ದಿಮ್ಮಿಗಳನ್ನು ಖರೀದಿಸಿ ತರುವರು. ಆಧುನಿಕತೆ ಮತ್ತು ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಎಲ್ಲ ಕೆಲಸಗಳಿಗೂ ಯಂತ್ರಗಳು ಅಗತ್ಯ. ಆದರೆ ದ್ಯಾಮಣ್ಣ ಯಾವುದೇ ಯಂತ್ರಗಳನ್ನು ಬಳಸದೆ ಕಟ್ಟಿಗೆಯಲ್ಲಿ ವಿವಿಧ ಕೆತ್ತನೆ ಮಾಡುವದರಲ್ಲಿ ಹೆಸರು ಪಡೆದಿದ್ದಾರೆ. ರಾಜ್ಯದ ವಿವಿಧ ಭಾಗದಲ್ಲಿ ಕಟ್ಟಿಗೆಯಿಂದ ನಿರ್ಮಿಸಿದ ಗ್ರಾಮ ದೇವತೆಗಳ ವಿಗ್ರಹ, ದೇವಾಲಯ ಮತ್ತು ಮಠಗಳಿಗೆ ಪಲ್ಲಕ್ಕಿ, ಸಿಂಹಾಸನ ಕೆತ್ತನೆಯ ಜೊತೆಗೆ ಮಂಚ, ತೊಟ್ಟಿಲು, ಮಾಹಾದ್ವಾರ, ಚೌಕಟ್ಟು ಮತ್ತು ಪಡಕ, ನೆನಪಿನ ಕಾಣಿಕೆ, ಮಕ್ಕಳ ಗೊಂಬೆ, ತಯಾರಿಸುವಲ್ಲಿಯೂ ನಿಪುಣರು.

"ಮೊಳೆಯನ್ನು ಬಳಸದೇ ದೇವತೆಗಳ ವಿಗ್ರಹ ನಿರ್ಮಿಸುವರು. ಮೊಳೆ ಬಡಿಯುವ ಸ್ಥಳದಲ್ಲಿ ಬಿದರಿನ ಸೆಕ್ಕೆ ಬಡಿದು ಜೋಡನೆ ಮಾಡಲಾಗುತ್ತದೆ. ದೇವತೆಗಳನ್ನು ಸಿದ್ಧಪಡಿಸುವಾಗ ಮೊಳೆಯನ್ನು ಬಳಸಿದರೆ ದೇವಿಯ ಶಕ್ತಿ ಕುಂದುತ್ತದೆ, ಎಂದು ತಿಳಿದು ಮೊಳೆ ಉಪಯೋಗಿಸುವದಿಲ್ಲ. ನಾವು ಸಿದ್ಧಪಡಿಸುವ ಪಲ್ಲಕ್ಕಿ ಗ್ರಾಮ ದೇವತೆಗಳನ್ನು ರಾಜ್ಯದ ನಾನಾ ಭಾಗದಿಂದ ಭಕ್ತರು ಆಗಮಿಸಿ ತೆಗೆದುಕೊಂಡು ಹೋಗುತ್ತಾರೆ" ಎಂದು ದ್ಯಾಮಣ್ಣ ಹೇಳುತ್ತಾರೆ. ದಿನಾಂಕ ೩೦-೦೬-೨೦೧೯, ರಂದು ಸಂದರ್ಶನದ ಸಂದರ್ಭದಲ್ಲಿ ವಿವರಿಸಿದರು. ಇವರ ಹಿರಿಯ ಮಗ ಕಾಳಪ್ಪ ಕೂಡ, ಕಾಷ್ಠ ಕಾಲಾವಿದನಾಗಿದ್ದು ಬಿಡದಿಯಲ್ಲಿ ತರಬೇತಿ ಪಡೆದು ಸ್ನಾತ್ತಕೋತ್ತರ ಪದವಿ ಮಾಡುತ್ತಿದ್ದಾನೆ. ಕಿರಿಯ ಮಗ ಮಹೇಶ ಶಿಲೆಯ ಕಲಾವಿದನಾಗಲು ಅಗತ್ಯ ತರಬೇತಿ ಪಡೆದು ಹೆಚ್ಚಿನ ಅಬ್ಯಾಸ ಮಾಡುತ್ತಿರುವನು. ದ್ಯಾಮಣ್ಣ ದಂಪತಿಗೆ ಇಬ್ಬರು ಪುತ್ರರು, ಓರ್ವ ಪುತ್ರಿ ಇರುವರು.

ದ್ಯಾಮಣ್ಣ ಅವರ ಸಾಧನೆ ಗಮನಿಸಿ, ಸಂಘಸಂಸ್ಥೆಗಳಿಂದ ಹತ್ತು ಹಲವು ಪ್ರಶಸ್ತಿಗಳು ಹುಡುಕಿಕೊಂಡು ಬಂದಿವೆ. ಅವುಗಳಲ್ಲಿ ಮಖ್ಯವಾಗಿ ತಾಲೂಕಾ ಆಡಳಿತದಿಂದ ರಾಜ್ಯೋತ್ಸವ ಪ್ರಶಸ್ತಿ. ಎಂ.ಎನ್ ಫೌಂಡೇಷನ ಕುಶಲಕರ್ಮಿ ಪ್ರಶಸ್ತಿಗೆ ಭಾಜನವಾಗಿದ್ದಾರೆ. ಪಟ್ಟದಕಲ್ಲಿನಲ್ಲಿ ನಡೆದ ರಾಷ್ಟ್ರೀಯ ಉತ್ಸವ ೬೮ ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ, ಬೀಳಗಿ ತಾಲೂಕು ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನ ರಾಷ್ಟ್ರೀಯ ಪ್ರವಾಸೋದ್ಯಮ ನೃತ್ಯ ಹಾಗೂ ಸಾಹಿತ್ಯೋತ್ಸವದಲ್ಲಿ ಸನ್ಮಾನಿಸಿ ಅಭಿನಂದನಾ ಪತ್ರ ನಗದು ರೂಪಾಯಿಗಳಲ್ಲಿ ಕೊಡಮಾಡಿದ್ದು, ಪ್ರಶಸ್ತಿ ಪತ್ರ ಸ್ಮರಣಿಕೆಯನ್ನೊಳಗೊಂಡ ಗೌರವ ಪುರಸ್ಕರಗಳು ಬಂದಿವೆ. ಕೊನೆಯದಾಗಿ ಕಾಯಕದ ಬಗ್ಗೆ ಕೇಳಿದಾಗ ಅವರ ಮಾತುಗಳಲ್ಲಿ ಮೂಡಿಬಂದದ್ದು ಹೀಗೆ "ಸಂತಸ ಕೊಟ್ಟಿದೆ ಸರ್, ನನ್ನ ವಯಸ್ಸು ೬೦ ಆದರೂ ಬಿಪಿ, ಸುಗರ್ ಕಾಯಿಲೆಗಳೆ ಬಂದಿಲ್ಲಾ ಬಾಧಿಸಿಲ್ಲ. ಶಕ್ತಿ ಇರುವವರೆಗೆ ಕೆತ್ತನೆಯ ಕೆಲಸ ಮುಂದುವರಿಸಿಕೊಂಡು ಹೋಗುವೆ. ಹಳ್ಳಿಯಲ್ಲಿರುವ ನನ್ನ ಸಾಧನೆ ಗುರ್ತಿಸಿ ಶಿಲ್ಪ ಕಲಾ ಅಕಾಡೆಮಿ ಪ್ರಶಸ್ತಿ ನೀಡುತ್ತಿರುವುದು ತುಂಬಾ ಸಂತಸವನ್ನುಂಟು ಮಾಡಿದೆ".[೫]

೬.೨.೧.೨. ಶ್ರೀ ಶಾಮರಾಯರ ಗೂಳಪ್ಪ ಬಡಿಗೇರ :

ಶಾಮರಾಯನ ಜನನ ಜನಪದ ಕಲೆಗಳ ತವರೂರಾದ ಇಂಡಿ ತಾಲೂಕಿನ ಸಾಲೋಟಗಿಯಲ್ಲಿ ಆಯಿತು. ತನ್ನ ೪೧ ನೇಯ ವಯಸ್ಸಿನಲ್ಲಿಯೇ ದಿನಾಂಕ: ೦೩-೦೭-೨೦೦೧ ರಿಂದ ಕರ್ನಾಟಕ ಸರಕಾರದ ಗೌರವ ಮಾಸಾಶನ ಪಡೆಯುತ್ತಿರುವ ವಿಶೇಷ ಕಲಾವಿದನೀತ. ಕಲಿತದ್ದು ತನ್ನ ಸ್ವಂತ ಊರಾದ ಸಾಲೋಟಗಿಯಲ್ಲಿ ಕನ್ನಡ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಪಡೆದರು. ಅವರು ಬೆಂಬಿಡದ, ಬಡತನದಿಂದ ತಮ್ಮ ಪೂರ್ವಜರ ಕಾಯಕ ಬಡಿಗತನವನ್ನು ಮುಂದುವರಿಸಿದ. ಒಮ್ಮೆ ಅಡ್ಡೆಕಟ್ಟೆಯಲ್ಲಿ ರೈತರೊಡನೆ ಕಲೆಯ ಬಗ್ಗೆ ಚರ್ಚಿಸುತ್ತಿರುವಾಗ ಕೆಲವರು ಬಡಿಗತನದಲ್ಲಿ ಎಂತೆಂತಹ ಕಲಾತ್ಮಕ ಕುಸುರಿ ಕೆಲಸಗಳನ್ನು ಮಾಡಿದ್ದಾರೆಂಬುದನ್ನು ಒಬ್ಬರು ಹೇಳಿದ್ದರಂತೆ. ಆಗ ನಾನೂ ಒಂದು ಕಲೆಯನ್ನು ಏಕೆ ಮಾಡಬಾರದು? ಎಂದು ಆಲೋಚಿಸಿ ಬೀರ ಬಾಟಲಿಯಲ್ಲಿ ಒಕ್ಕಲುತನದ ಉಪಕರಣವಾದ ಚಕ್ಕಡಿಯನ್ನು ಕಲಾತ್ಮಕವಾಗಿ ಅಳವಡಿಸಿ ತೋರಿಸಿದನು. ಇದನ್ನು ನೋಡಿದ ರೈತರು ಬೆನ್ನುಚಪ್ಪರಿಸಿದರು. ಆದರಿಂದ ಸ್ಫೂರ್ತಿಗೊಂಡು ೨-೩ ದಿನಗಳಲ್ಲಿ ಇನ್ನೊಂದು ಗಾಜಿನ ಬೀರ ಬಾಟಲಿಯಲ್ಲಿ ನೊಗ ಸಹಿತ ಕೂರಿಗೆ ತಯಾರಿಸಿದನು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಹಾಗೂ ಕರ್ನಾಟಕ ಜನಪದ ಕಲೆಗಳಲ್ಲಿ ಸಂಘದ ಸಂಯುಕ್ತ ಆಶ್ರಯದಲ್ಲಿ ಸಾಲೋಟಗಿಯಲ್ಲಿ ದಿನಾಂಕ ೧೮ ಮತ್ತು ೧೯ ಎಪ್ರಿಲ್ ೧೯೯೨ ರಂದು ಜರಗಿತು. ಈ ಜನಪದ ಕಲಾ ಮಹೋತ್ಸವದಲ್ಲಿ ಅಕಾಡೆಮಿಯ ಅಂದಿನ ಅಧ್ಯಕ್ಷರಾದ ಜೀಶಂಪ ಅವರು ಈ ಕಲಾವಿದನ ಕಲೆಗೆ ಪ್ರಶಸ್ತಿ ನೀಡಿ ಗೌರವಿಸಿದರು. ಇದಾದ ಮೇಲೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಅವರು ಮತ್ತು ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ತಂಜಾವೂರು ಇವರ ಸಹಯೋಗದಲ್ಲಿ ಬೆಂಗಳೂರಿನಲ್ಲಿ ದಿನಾಂಕ:

೨೭-೦೩-೧೯೯೩ರಿಂದ ೩೧-೦೩-೧೯೯೩ರವರೆಗೆ ಐದು ದಿವಸಗಳ ಕಾರ್ಯಾಗಾರ ನಡೆಯಿತು. ಇದರಲ್ಲಿ ಸುಮಾರು ೫೦ ಜನ ಬಡಿಗ, ಕುಂಬಾರ, ಸೂತ್ರದಗೊಂಬೆ, ತೊಗಲುಗೊಂಬೆ ಮೂರ್ತಿ ತಯಾರಕ ಕಲಾವಿದರು ಭಾಗವಹಿಸಿದ್ದರು. ಮಾನ್ಯ ಜೀಶಂಪ ಅವರ ಸಹಾಯದಿಂದ ಅಲ್ಲಿ ಈ ಕಲಾವಿದನಿಗೂ ಅವಕಾಶ ದೊರೆಯಿತು. ಒಕ್ಕಲುತನದ ಉಪಕರಣಗಳನ್ನು ಅಂದರೆ ಕೂರಿಗೆದಿಂಡು, ಕುಂಟಿದಿಂಡು, ಎಡೆದಿಂಡು, ಚಕ್ಕಡಿ ತಯಾರಿಸುವುದರಲ್ಲಿ ಸಿದ್ಧಹಸ್ತನಾದ. ಈ ಕಲಾವಿದ ಗಾಜಿನ ಬೀರ ಬಾಟ್ಲಿಯಲ್ಲಿ ಕೂರಗೆದಿಂಡು, ಒಂದು ಹೊರಸು, ಖುರ್ಚಿ, ಜೋಕಾಲಿ ಮೊದಲಾದವುಗಳನ್ನು ಅಳವಡಿಸಿದ್ದಾನೆ. ಸಾಗವಾನಿ ತುಂಡಿನಿಂದ ಗುಂಡಗಡಗಿ (ಲಿಂಗದಕಾಯಿ) ಯನ್ನು ಸುಂದರವಾಗಿ ಕೆತ್ತಿದ್ದಾನೆ. ಈ ಕಲಾವಿದ ಆರಂಭದಲ್ಲಿ ಕೆಲವರ್ಷ ಸಾಲೋಟಗಿಯ ಅಕ್ಕಮಹಾದೇವಿ ಅಕ್ಕನ ಬಳಗದ ಭಜನಾ ಮೇಳದಲ್ಲಿ ಡಪ್ಪು ಬಾರಿಸುವ ಮತ್ತು ಹಾಡುವ ಕಲೆಯಲ್ಲಿ ಸೇವೆಸಲ್ಲಿಸಿದ್ದಾನೆ. ಅಂತೆಯೇ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸಹಯೋಗದಲ್ಲಿ, ಕರ್ನಾಟಕ ಜನಪದ ಕಲೆಗಳ ಸಂಘದವರು ಸಾಲೋಟಗಿಯಲ್ಲಿ ದಿನಾಂಕ: ೨೪, ೨೫ ಫೆಬ್ರುವರಿ ೧೯೮೭ ರಂದು ನಡೆಸಿದ ಜನಪದ ಕಲಾಮೇಳದಲ್ಲಿ ಈ ಕಲಾವಿದನ ಹಾಡಿಗೆ ಪ್ರಶಸ್ತಿ ನೀಡಿದ್ದಾರೆ. ಈ ಕಲಾವಿದನಿಗೆ ಕೆಲವು ಪ್ರಶಸ್ತಿಗಳು ಬಂದಿವೆ. ನಗದು ರೂಪದ ಬಹುಮಾನಗಳು ಬಂದಿವೆ. ಅವುಗಳಲ್ಲಿ ಕೆಲವು ಹೀಗಿವೆ.

೧. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು. ಜಾನಪದ ಕಲಾ ಸಂಘ ಹಲಸಂಗಿ, ಸಂಯುಕ್ತವಾಗಿ ದಿನಾಂಕ: ೧೮ ಮತ್ತು ೧೯ ನೇ ಫೆಬ್ರುವರಿ ೧೯೯೫ ರಂದು ಹಲಸಂಗಿಯಲ್ಲಿ ಆಯೋಜಿಸಿದ ಕಲಾಮೇಳದಲ್ಲಿ ಪ್ರಶಸ್ತಿ ಬಂದಿದೆ.

೨. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು, ಮತ್ತು ಜಾನಪದ ಕಲಾಕೇಂದ್ರ (ರಿ) ವಿಜಯಪುರ ಇವರು ಸಂಯುಕ್ತವಾಗಿ ವಿಜಯಪುರ ಶ್ರೀ ಕಂದಗಲ್ಲ ಹನುಮಂತರಾಯ ರಂಗಮಂದಿರದಲ್ಲಿ ದಿನಾಂಕ: ೨೯ ಹಾಗೂ ೨೦ನೇ ಸೆಪ್ಟಂಬರ್ ೨೦೦೩ ರಂದು ನಡೆಸಿದ ವಿಚಾರ ಸಂಕಿರಣ ಹಾಗೂ ಕಲಾಮೇಳದಲ್ಲಿ ಈ ಕಲಾವಿದನಿಗೆ ಪ್ರಶಸ್ತಿಯನ್ನು ನೀಡಲಾಗಿದೆ.

೩. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಜಯಪುರ ಇವರು ದಿ: ೧೯-೦೨-೧೯೯೯ ರಂದು ಸಾಲೋಟಗಿಯಲ್ಲಿ ಆಯೋಜಿಸಿದ 'ಸಾಂಸ್ಕೃತಿಕ ಸೌರಭ' ಕಾರ್ಯಕ್ರಮದಲ್ಲಿ ಶ್ರೀ ಶಾಮರಾಯನ ಕಲೆಗಳ ಪ್ರದರ್ಶನಕ್ಕೆ ಪ್ರಶಸ್ತಿಯು ದೊರೆತಿದೆ.

೪. ಕರ್ನಾಟಕ ಜಾನಪದ ಪರಿಷತ್ತು ಇವರು ನಡೆಸಿಕೊಟ್ಟ ಜಾನಪದ ಲೋಕ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿರುವ ಜಾನಪದ ಲೋಕದಲ್ಲಿ ದಿನಾಂಕ: ೧೩-೦೨-೨೦೦೫ರಂದು ಜರುಗಿದ ಸನ್ಮಾನ ಸಮಾರಂಭದಲ್ಲಿ ಜಾನಪದ ಲೋಕ ಪ್ರಶಸ್ತಿ ಪುರಸ್ಕಾರ ಸಾಲೋಟಗಿಯ ಶ್ಯಾಮರಾಯ ಗೂಳಪ್ಪ ಬಡಿಗೇರ ಅವರಿಗೆ ನೀಡಿದೆ.

ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ ಸಾಲೋಟಗಿ ಗ್ರಾಮವು ಜನಪದ ಕಲೆಗಳ ತವರೂರು. ಹಿರಿಯರೂ, ಕ್ರೀಯಾಶೀಲರೂ ಆದ ಶ್ರೀ ಯಳಸಂಗಿ ಕಲ್ಲಣ್ಣವರ ಮಾರ್ಗದರ್ಶನದಲ್ಲಿ ಸುಮಾರು ೩೦ ಕ್ಕೂ ಹೆಚ್ಚು ಜನಪದ ಕಲಾ ಪ್ರಕಾರಗಳಿಗೆ ಈ ಸಾಲೋಟಗಿ ಹೆಸರಾಗಿದೆ. ಈ ಊರಿನ ಶ್ರೀ ಶ್ಯಾಮರಾಯ ಗೋಳಪ್ಪ ಬಡಿಗೇರ ಅವರು ಬೀರ್ ಬಾಟಲಿನೊಳಗೆ ಆಟದ ಮಂಚದ ಚೌಕ ಜೋಡಿಸಿ, ಚೌಕಕ್ಕೆ ದಾರವನ್ನು ಪೋಣಿಸಿ ಸುಂದರವಾಗಿ ನೇಯಬಲ್ಲರು. ಅದೇ ರೀತಿಯ ನೊಗ ಸಹಿತ ಕೂರಗಿ ಕಂಡವರು ಬೆರಗಾಗುವುದು ಸಹಜ. ಶ್ರೀ ಬಡಿಗೇರರು ಇಂತಹ ಸೂಕ್ಷ್ಮಾತಿಸೂಕ್ಷ್ಮ ಕುಸುರಿತನದಿಂದ ಕೂಡಿದ ಕಲಾತ್ಮಕ ಹೆಣಿಗೆಯ ಜೊತೆಗೆ ಗೃಹ ಬಳಕೆಯ ಪಿಠೋಪಕರಣಗಳನ್ನು ಮತ್ತು ವ್ಯವಸಾಯಕ್ಕೆ ಬೇಕಾದ ರಂಟೆ, ಕುಂಟೆ, ಕೂರಗಿ, ಚಕ್ಕಡಿಗಳನ್ನು ತಯಾರಿಸುವಲ್ಲಿಯೂ ಸಿದ್ಧಹಸ್ತರು. ಕಳೆದ ೩೫ ವರ್ಷಗಳಿಂದಲೂ ತಮ್ಮ ಈ ಅಪರೂಪದ ಕಲೆಯನ್ನು ಕರೆದಲ್ಲಿಗೆ ಹೋಗಿ ಪ್ರದರ್ಶಿಸುತ್ತಾ ಬಂದಿರುವ ಬಡಿಗೇರರು ಆರ್ಥಿಕ ಅನಾನುಕೂಲತೆ ನಡುವೆಯೂ ತಮ್ಮ ಕುಸುರಿ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಇಂತಹ ಅಪರೂಪದ ಜನಪದ ಕರಕುಶಲಕರ್ಮಿಗೆ ಕರ್ನಾಟಕ ಜಾನಪದ ಪರಿಷತ್ತು, ಶ್ರೀ ಆದಿಚುಂಚನಗಿರಿ ಮಠಾಧೀಶರಾದ ಜಗದ್ಗುರು ಶ್ರೀ.ಶ್ರೀ.ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು ನೀಡಿರುವ ದತ್ತಿನಿದಿಯಿಂದ ಆ ದಿನ ತಾ: ೧೩-೦೨-೨೦೦೫ ರಂದು ಅವರಿಗೆ ಸಮಸ್ತ ಜನಪದ ಕರಕುಶಲ ಕಲಾವಿದರ ಪರವಾಗಿ ಹೃತ್ಪೂರ್ವಕ ವಂದನೆ, ಅಭಿನಂದನೆಗಳನ್ನು ಸಲ್ಲಿಸಿರುವರು.

೬.೨.೧.೩. ಶ್ರೀ ಗಣಪತಿ ಈರಪ್ಪ ಬಡಿಗೇರ :

ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ, ಬಲ್ಲವಿರಿದ್ದು ಬಲವಿಲ್ಲ ಸಾಹಿತ್ಯ ಎಲ್ಲರಿಗಲ್ಲ ಸರ್ವಜ್ಞ ಎನ್ನುವ ಸರ್ವಜ್ಞನ ಅಮೃತವಾಣಿಯಂತೆ ಕಲೆ ಕೆಲವರಿಗೆ ಮಾತ್ರ ಒಲಿಯುತ್ತದೆ ಎಲ್ಲರಿಗಲ್ಲ. ಅಂತಹುದರಲ್ಲಿ ಯಳ್ಳಿಗುತ್ತಿಯ ತತ್ವಪದ ಕಲಾವಿದರಾದ ಗಣಪತಿ ಈರಪ್ಪ ಬಡಿಗೇರ ಒಬ್ಬರು.

ಬೀಳಗಿ ತಾಲೂಕಿನ ಯಳ್ಳಿಗುತ್ತಿಯಲ್ಲಿ ದಿನಾಂಕ:೦೧/೦೩/೧೯೪೯ ರಂದು ಈರಪ್ಪ ಹಾಗೂ ಲಕ್ಷ್ಮೀಬಾಯಿ ದಂಪತಿಗಳ ಒಟ್ಟು ಏಳು ಜನ ಮಕ್ಕಳಲ್ಲಿ ಮೂರನೆಯವರಾಗಿ ಜನಿಸಿದರು. ಹುಟ್ಟಿನಿಂದಲೇ ಬಡತನದ ಬೇಗೆಯಲ್ಲಿ ಬೆಂದು ಬದುಕಿನ ನಿಜದರ್ಶನ ಅನುಭವಿಸಿದ ಗಣಪತಿಯವರು ಕುಲಕಸುಬು ಬಡಿಗತನದಲ್ಲಿ ಬಾಲ್ಯದಿಂದಲೇ ತಂದೆಗೆ ಸಹಕರಿಸಿ ಕೆಲಸ ಮಾಡುತ್ತಾ ಬೆಳೆದರು. ಆರ್ಥಿಕ ದುಸ್ಥಿತಿಯ ಮಧ್ಯೆ ಶಿಕ್ಷಣ ಕೇವಲ ಎರಡನೇ ತರಗತಿಗೆ ಕೊನೆಗೊಂಡಿತು. ಮುಂದೆ ಇಲಕಲ್ಲಿನಲ್ಲಿರುವ ಮಾವನ ಮನೆಯಲ್ಲಿ ಬಡಿಗತನ ಉದ್ಯೋಗ ಕಲಿತು ಕೆಲಸ ಮುಂದುವರೆಸಿದರು. ಅದೇ ಸಮಯದಲ್ಲಿ ಶಿವಬಾಯಿ ಎಂಬುವರೊಂದಿಗೆ ಮದುವೆಯಾಯಿತು. ತದನಂತರ ಕಾರಣಾಂತರಗಳಿಂದ ತಮ್ಮ ಮಾವನ ಊರಾದ ಬಸವನ ಬಾಗೇವಾಡಿಗೆ ಹೋಗಿ ನೆಲೆಸಿದರು.

ಫಕೀರಪ್ಪ ಯಲ್ಲಪ್ಪ ಜಂಬಗಿ ಎಂಬ ಕಲಾವಿದನ ಪರಿಚಯದೊಂದಿಗೆ ಅವರೊಂದಿಗೆ ಸಂಪ್ರದಾಯದಲ್ಲಿನ ತಾಳದ ಕಲೆಯನ್ನು ಕಲಿತು ಹಲವಾರು ಸಂಪ್ರದಾಣಿ ಮೇಳಗಳಲ್ಲಿ ತಾಳ ಬಾರಿಸುತ್ತಾ ಅನೇಕ ಕಾರ್ಯಕ್ರಮಗಳನ್ನು ನೀಡಿದರು. ತಡಲಗಿ ಗ್ರಾಮದ ದೊಡ್ಡಪ್ಪ ಕಾಳಪ್ಪ ಬಡಿಗೇರರವರಿಂದ ಕಲೆಯನ್ನು ಕಲಿತು ಹಲವಾರು ಕಾರ್ಯಕ್ರಮಗಳಲ್ಲಿ ವೀರಗಾಸೆಯನ್ನು ಯಶಸ್ವಿಯಾಗಿ ಪ್ರದರ್ಶಿಸಿ ಸೈ ಎನಿಸಿಕೊಂಡರು. ಆಗಲೇ ಸಂಘವನ್ನು ಕಟ್ಟಿಕೊಂಡು ಅನೇಕ ಕಾರ್ಯಕ್ರಮಗಳನ್ನು ನೀಡಿದ್ದ ಮಾವನವರಾದ ಫಕೀರಪ್ಪ ಭೀಮಪ್ಪ ಬಡಿಗೇರರವರ ಪ್ರೋತ್ಸಾಹದೊಂದಿಗೆ ಕಲಾವಿದನಾಗಿ ರೂಪುಗೊಂಡವರು. ಮುಂದೆ ಕುಟುಂಬ ಸಮೇತ ಹೆರಕಲ್ಲಗೆ ಬಂದು ನೆಲೆಸಿದಾಗ ಅಲ್ಲಿಯೂ ಕಲಾವಿದನ ಜೀವನ ಮುಂದುವರೆಸಿದರು. ತಮ್ಮ ಚಿಕ್ಕಪ್ಪನವರಿಂದ ಶಿವಭಜನೆ ಕಲೆಯ ಕುರಿತು ಆಸಕ್ತಿ ಮೂಡಿತು ಅದನ್ನು ಕಲಿಯುವ ಹಂಬಲ ವ್ಯಕ್ತಪಡಿಸಿದರು. ಆಗ ಚಿಕ್ಕ ರಾಮಾರೂಢ ಸ್ವಾಮಿಗಳ ಉಪದೇಶದೊಂದಿಗೆ ಕಲಿಯುವಂತೆ ಹೇಳಿದಾಗ ಅವರು ಸ್ವಾಮೀಜಿಗಳ ಮಾರ್ಗದರ್ಶನದಲ್ಲಿ ಶಿವಭಜನೆ ಕಲಿತು ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಸೀಮಿಕೇರಿ ಪುನರ್ವಸತಿ ಕೇಂದ್ರದಲ್ಲಿಯ ಶ್ರೀ ರಾಮಾರೂಢ ಬ್ರಹ್ಮ ವಿದ್ಯಾಶ್ರಮದಲ್ಲಿ ಪ್ರತಿವಾರವೂ ಶಿವಭಜನಾ ಕಾರ್ಯಕ್ರಮದಲ್ಲಿ ತಪ್ಪದೇ ಭಾಗವಹಿಸುತ್ತಿದ್ದರು. ನಾಲ್ಕು ಮಕ್ಕಳ ದೊಡ್ಡ ಕುಟುಂಬದ ನೊಗ ಹೊತ್ತಿರುವ ಗಣಪತಿಯವರು ಬಡಿಗತನ ವೃತ್ತಿಯೊಂದಿಗೆ ತತ್ವಪದ ಕಲಾವಿದರಾಗಿಯೂ ಸೇವೆ ಸಲ್ಲಿಸುತ್ತಿರುವದು ಹೆಮ್ಮೆಯ ವಿಷಯವಾಗಿದೆ.

೬.೨.೨. ಶಿಲ್ಪ ತಯಾರಿಕೆಯ ಕೌಶಲ್ಯ :

ಭಾರತೀಯ ಜನಪದ ಹಿನ್ನಲೆಯಲ್ಲಿ ಅನಾದಿಕಾಲದಲ್ಲಿ ಶಿಲ್ಪ ಮಾನವನ ಬಾಳಿ ಬದುಕಿದ ಪಳೆಯುಳಿಕೆಗಳ ಅಧ್ಯಯನಕ್ಕೆ ಮುಖ್ಯ ಆಕರ. ಪ್ರಾಚೀನ ದೇವಸ್ಥಾನಗಳ ಗೋಡೆಯ ಮೇಲೆ ಕೆತ್ತಿರುವ ಬೇಲೂರು, ಹಳೇಬೀಡು, ಬಳ್ಳಿಗಾವಿ, ಐಹೊಳೆ, ಪಟ್ಟದಕಲ್ಲು, ಅಜಂತಾ-ಎಲ್ಲೋರ, ಮುಂತಾದ ಕಡೆಗಳಲ್ಲಿ ಶಿಲ್ಪಿಗಳು ಭರತನಾಟ್ಯಶಾಸ್ತ್ರದ ಭಂಗಿ ಅಧ್ಯಯನ ಮಾಡದೆ, ತಿಳಿಯದೆ ಇದ್ದರೆ ಪ್ರಸಿದ್ಧ ಸ್ಥಳಗಳಲ್ಲಿ ಶಿಲಾ ಬಾಲಕಿಯರ ಕಲೆಗಳನ್ನು ಕೆತ್ತುತ್ತಿರಲಿಲ್ಲ. ಪಾಂಚಾಳರಲ್ಲಿ ಶಿಲ್ಪ ಕೆತ್ತನೆ ಕೌಶಲ್ಯ ಸೂಕ್ಷ್ಮವಾದದ್ದು. ಅದರಲ್ಲೂ ಶಿಲಾಶಾಸನವನ್ನು ರಚನೆ ಮಾಡುವಲ್ಲಿ ಸಾಮಾನ್ಯವಾಗಿ ಮೂರು ಕೆಲಸ ಮಾಡುತ್ತಾರೆ.

೧. **ಕವಿ ಅಥವಾ ಸೇನಾ ಬೋವ** : ಶಾಸನ ಪಾಠವನ್ನು ರಚಿಸುತ್ತಾನೆ.

೨. **ಲಿಪಿಕಾರ** : ಶಾಸನ ಪಾಠವನ್ನು ಕಲ್ಲಿನ ಹಲಗೆಯ ಮೇಲೆ ಬಳಪದಿಂದ ಬರೆಯುತ್ತಾನೆ.

೩. **ಕಂಡರನೇಕಾರ** : ಲಿಪಿಕಾರ ಬರೆದ ಶಾಸನ ಪಾಠವನ್ನು ಉಳಿಯಿಂದ ಕೆತ್ತುತ್ತಾನೆ.

ಪಾಂಚಾಳರ ಸಮುದಾಯದ ಶಿಲ್ಪಗಾರ ಕೂಡ ಒಬ್ಬ ಸಾಂಸ್ಕೃತಿಕವಾಗಿ ಮಹತ್ವ ಪಡೆದ ಸಮುದಾಯ ಶಿಲ್ಪಿ. ಎಂದರೆ ಶಿಲೆಯಲ್ಲಿ ಕೆಲಸ ಮಾಡುವವನಿಗೆ ಶಿಲ್ಪಿ ಎಂದು ಕರೆಯುವರು.

ಪ್ರವಾಸಿಗರ ಆಕರ್ಷಣೆಗೆ ಶಿಲ್ಪಿಗಳೇ ಕಾರಣ. ಶಿಲ್ಪಿ ಕುಶಲತೆಯ ಕೆಲಸವನ್ನು ದೇವಾಲಯಗಳ ಮೂರ್ತಿಗಳ ಕೆತ್ತನೆಯಲ್ಲಿ, ಅವರ ಕೈಚಳಕವನ್ನು ತೋರಿಸಿದ್ದಾರೆ. ಕಲಾರಾಧಕರು ಶಿಲ್ಪಿಯ ಕಲ್ಪನೆಯ ನೈಪುಣ್ಯತೆಯ ತಯಾರಿಕೆಯ ಕೌಶಲ್ಯ ವಿಶಿಷ್ಟವಾದದ್ದು. ಶಿಲ್ಪಕಲಾ ದರ್ಶನದ ಪರವಾಗಿ ಅನ್ವಯಿಸಬೇಕಾಗುತ್ತದೆ. ಏಕಾಗ್ರಚಿತ್ತದಿಂದ ಶಿಲ್ಪಿಯು ನಡೆಸುವ ಶಿಲ್ಪ ಕರ್ಮದ ಫಲವಾಗಿ ರೂಪುಗೊಳ್ಳುವ ಶಿಲ್ಪವು, ಅದನ್ನು ನೋಡುವವರಲ್ಲಿ ಸೌಂದರ್ಯ ಆರಾಧನೆಯ ಪ್ರಜ್ಞೆಯನ್ನು ಉದ್ದೀಪನಗೊಳಿಸಿ ಅವನಿಗೆ ಸಮಾಧಿಯ ಸ್ಥಿತಿಯನ್ನು ತಂದುಕೊಟ್ಟು ಆನಂದವನ್ನು ಕರುಣಿಸುತ್ತದೆ. ಆದ್ದರಿಂದ ಶಿಲ್ಪವು ಅತ್ಯಂತ ಮಹತ್ತರವು ಪೂಜ್ಯವಾದದ್ದು.

೬.೨.೨.೧. ಶ್ರೀ ಗುಂಡಪ್ಪ ಮಾಯಾಚಾರ್ಯ :

ಶಿರೂರದಿಂದ ಬಾಗಲಕೋಟೆಗೆ ಬರುವ ಮಾರ್ಗದ ರೇಲ್ವೆಗೇಟ್ ಬಳಿಯ ಎಡಗಡೆಯಲ್ಲಿ ಕಣ್ಣಿಗೆ ಬೀಳುವುದು ಶ್ರೀ ಭುವನ ಶಿಲ್ಪ ಕಲಾ ಶಾಲೆ. ಆಶ್ರಮದ ರೂಪದಲ್ಲಿ ಕಾಣುಸಿಗುತ್ತದೆ. ಒಳಗಡೆ ಪ್ರವೇಶಗೊಂಡರೆ ಸಾಕು, ನಾನಾರೀತಿಯ ಶಿಲ್ಪಕಲೆಗಳನ್ನು ತನ್ನೊಡಲಲ್ಲಿ ಕಲಾಶಾಲೆ ನೆಲ ಚೆಲ್ಲಿಕೊಂಡಿದೆ. ಎತ್ತ ನೋಡಿದರತ್ತ ನಾನಾರೀತಿಯ ಮೂರ್ತಿಗಳು ಕಣ್ಮನವನ್ನು ಸೆಳೆಯುತ್ತವೆ. ಹಲವು ಬಗೆಯ ಕಲಾಕೃತಿಗಳ ಆಗರವಾಗಿರುವ ಈ ಆವರಣ ನೋಡುಗರನ್ನು ಸೋಜಿಗಗೊಳಿಸುತ್ತದೆ. ಇಂತಹದೊಂದು ವಿಶಿಷ್ಟ ರೀತಿಯ ಕಲಾ ಶಾಲೆಯನ್ನು ನಿರ್ಮಿಸಿದವರು ಅಮರ ಶಿಲ್ಪಿ ಜಕಣಾಚಾರಿ ಪ್ರಶಸ್ತಿ ವಿಜೇತರಾದ ಗುಂಡಪ್ಪ ದೇವೇಂದ್ರಪ್ಪ ಮಾಯಾಚಾರ್ಯರವರು. ಕೇವಲ ಎರಡನೆ ತರಗತಿ ಓದಿದ ಶಿಲ್ಪಿ ಗುಂಡಪ್ಪನವರು, ಮೂಲತಃ ಬಾಗಲಕೋಟ ಜಿಲ್ಲೆಯ ಬೀಳಗಿ ತಾಲೂಕಿನ ಇತಿಹಾಸ ಗ್ರಾಮ ಹೆರಕಲ್‌ದವರು.

ಹೆರಕಲ್ಲು ಹೆಸರಿಗೆ ತಕ್ಕಂತೆ ಇಂತಹ ಅಸಾಧರಣ ಪ್ರತಿಭಾನ್ವಿತ ಪ್ರತಿಭೆಗಳಿಗೆ ಜನ್ಮ ನೀಡಿದ ಸ್ಥಳ. ಚಿಕ್ಕಂದಿನಿಂದಲೇ ತಂದೆಯನ್ನು ಕಳೆದುಕೊಂಡ ಗುಂಡಪ್ಪನವರು, ತಾಯಿಯದು ಬಡತನದ ಪಾಡು. ಸೋದರ ಮಾವ ಸಕರಪ್ಪನವರ ಮಾರ್ಗದರ್ಶನದಲ್ಲಿ ಮರದ ಕೆತ್ತನೆ ಕೆಲಸದೊಂದಿಗೆ ಶಿಲ್ಪಕಲಾ ಕೆತ್ತನೆಗೂ ಚಿಕ್ಕಂದಿನಿಂದಲೇ ತೊಡಗಿಸಿಕೊಂಡು ಬಂದು, ಗುಂಡಪ್ಪನವರ ತಾಯಿಯೊಂದಿಗೆ ಬಾಗಲಕೋಟೆಗೆ ವಲಸೆ ಬಂದುದು ಒಂದು ವರದಾನವಾಯಿತು. ಈ ನೆಲದ ಪ್ರತಿಫಲವಾಗಿ ಮಾಯಾಚಾರ್ಯರು ನಿರೀಕ್ಷಿತ ರೀತಿಯಲ್ಲಿ ತಮ್ಮ ಸತತ ಪರಿಶ್ರಮದ ಫಲವಾಗಿ ಬೆಳೆದು ಬಂದರೂ ಶಿಲ್ಪಕಲೆಯ ಅದ್ಭುತ ಸಾಧನೆಗೆ ಸಾಕ್ಷಿಯಾದರು. ತಮ್ಮ ಜೀವನದುದ್ದಕ್ಕೂ ತಮ್ಮ ಮನೆತನದ ಶಿಲ್ಪಕಲಾ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದ ಶ್ರೇಯಸ್ಸು ಇವರದು.

ಗುಂಡಪ್ಪನವರು ಕಡು ಬಡತನದಲ್ಲೂ ಆರು ಜನ ಮಕ್ಕಳ ಕುಟುಂಬವನ್ನು ಮುನ್ನಡೆಸುತ್ತ ಬಂದ ಅವರ ಪರಿಶ್ರಮವನ್ನು ಮೆಚ್ಚಲೇಬೇಕು. ಇವರು ತಮ್ಮದೆಯಾದ ಅನುಭವ ಶೈಲಿ ತಂತ್ರಜ್ಞಾನದ ಬಳಕೆಯಿಂದ ಒಬ್ಬ ಅತ್ಯುತ್ತಮ ಶಿಲ್ಪಿಯಾಗಿ ಈ ನೆಲದಲ್ಲಿ ಬೆಳೆದು ನಿಂತರು. ಅಪ್ಪಟ ದೇಶಿತನದ ಸರಳ ವ್ಯಕ್ತಿಯಾಗಿರುವ ಹೆಗ್ಗಳಿಕೆ ಇವರದು. ೧೬ ನೇ ಡಿಸೆಂಬರ್ ೧೯೨೫

ರಲ್ಲಿ ಜನಿಸಿದ ಗುಂಡಪ್ಪನವರು ೨೦ ನವ್ವೆಂಬರ್ ೨೦೦೮ ರಲ್ಲಿ ೮೩ ವಸಂತಗಳನ್ನು ಪೂರೈಸಿ ಇಲ್ಲವಾದರು. ಆದರೆ ಅವರು ಮಾಡಿದ ಕೆಲಸ ಕಾರ್ಯ ಇವರ ಕಾರ್ಯಪ್ರಕರತೆಯ ರೀತಿ ಇಂದಿಗೂ ಮಾದರಿಯಾಗಿರುವುದು.

೧೯೬೬ ಗುಂಡಪ್ಪರವರ ಜೀವನದಲ್ಲಿ ಬೆಳಕು ಚೆಲ್ಲಿದ ದೀಪಗಳ ದಿನಗಳು. ಈ ಶಿಲ್ಪಿಯ ಬದುಕಿಗೆ ಹೊಸ ತಿರುವು ದೊರಕಿತು. ಬಾಗಲಕೋಟೆಯ ಹಿರಿಯ ವರ್ತಕರೊಬ್ಬರು ಗುಂಡಪ್ಪನವರಿಗೆ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಆವರಣದಲ್ಲಿ ಸ್ಥಾಪಿಸಬೇಕೆಂದು ಕೊಂಡಿರುವ ಬೀಳೂರು ಗುರುಬಸವ ಶ್ರೀಗಳ ವಿಗ್ರಹ ಕೆತ್ತನೆ ಮಾಡಿದ್ದು ಶಿಲ್ಪಕಲಾ ಚಾತುರ್ಯಕ್ಕೆ ನಾಂದಿಯಾಯಿತು. ಅಂದಿನಿಂದ ಗುಂಡಪ್ಪನವರ ಕಲೆಯ ಬೆಳಕು ನಾಡಿನಲ್ಲಿ ಚೆಲ್ಲತೊಡಗಿತು. ಬಡತನದ ಬದುಕು ಬಂಗಾರವಾಗತೊಡಗಿತು. ತದನಂತರ ಮುಂದಿನ ದಿನಗಳಲ್ಲಿ ಕಲೆಯನ್ನು ಉಸಿರನ್ನಾಗಿಸಿಕೊಂಡು ನಡೆದರು. ಅತ್ಯಾಧುನಿಕ ಯಂತ್ರಗಳೊಂದಿಗೆ ಕಲೆಯಲ್ಲಿ ನೈಪುಣ್ಯತೆಯೊಂದಿಗೆ ತೊಡಗಿದವರಿಗೆ ಈ ವೇಳೆಯಲ್ಲಿ ಇವರಿಗೆ ಆಪ್ತಮಿತ್ರರಾದ ರಾಮಚಂದ್ರ ಪದಕಿ, ವಿ.ಜೆ. ರಾಜಪುರೋಹಿತ, ನಾರಾಯಣರಾವ ಬರಗಿ, ಜೆ.ಬಿ. ದೇಸಾಯವರ ಸಹಾಯ ಸಹಕಾರದಿಂದ ಒಂದು ಶಿಲ್ಪಕಲಾ ಕೇಂದ್ರವನ್ನು ಸ್ಥಾಪಿಸುವಷ್ಟು ಹಾದಿ ಕ್ರಮಿಸಿದ್ದರು. ೧೯೮೨ ರಲ್ಲಿ ಶ್ರೀ ಭುವನ ಶಿಲ್ಪಕಲಾ ಶಾಲೆಯನ್ನು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಶಿಲ್ಪಕಲೆಗೆ ಸಂಬಂಧಿಸಿದ ತರಬೇತಿಗೊಳಿಸಿದರು. ಈ ಸಂದರ್ಭದಲ್ಲಿ ಇವರ ಈ ಸತತ ಪರಿಶ್ರಮಕ್ಕೆ ಕೈಗೂಡಿಸಿದವರು ಇವರ ಮಕ್ಕಳು. ಇವರ ಮಕ್ಕಳಿಗೂ ಕಲೆಯ ಗುರುವಾಗಿ ಅವರಿಗೂ ಈ ಸಂಸ್ಕಾರವನ್ನು ನೀಡುವಲ್ಲಿ ಯಶಸ್ವಿಯಾದರು.[೬]

ಗುಂಡಪ್ಪರವರು ಕಣ್ಣಿಗೆ ಕಂಡದ್ದನ್ನು ಯಥಾವತ್ತಾಗಿ ಚುತ್ತವಿತ್ತಿಯೊಂದಿಗೆ ಕಾರ್ಯಮಾಡಿ ಫಲದ ಪ್ರತೀಕವಾಗಿ ಕಾಳಿಕಾ ಶಾರದಾ, ಮಾರುತಿ, ಈಶ್ವರ, ಗಣೇಶ, ಬ್ರಹ್ಮ, ವೀರಭದ್ರ, ಶಿವಾಜಿ, ನಟರಾಜ, ತಾಯಿಮಗ, ಸಜ್ಜಲಗುಡ್ಡ ಶರಣಮ್ಮ, ಸರ್ಪಭೂಷಣ, ಶಿವಯೋಗಿಗಳು, ವಿವೇಕಾನಂದ ಬಸವೇಶ್ವರ, ಗಾಂಧಿ, ಹೀಗೆ ೧೯೬೬ ರಿಂದ ಈವರೆಗೆ ಗುಂಡಪ್ಪನವರು ಮಕ್ಕಳೊಡಗೂಡಿ ಎರಡೂವರೆ ಸಾವಿರದಷ್ಟು ಶಿಲ್ಪರಚನೆಗೈದ ಶ್ರೇಯಸ್ಸು ಇವರದಾಗಿದೆ. ಎಲೆಮರೆಯ ಕಾಯಿಯಂತೆ ಮೌನ ಯೋಗಿಯಾಗಿ ಕಾಯಕದಲ್ಲಿ ನಿರಂತರವಾದ ಇವರ ಕಾಯಕವನ್ನು ಸರಕಾರ ಗುರುತಿಸಿತು. ೧೯೮೬ ರಲ್ಲಿ ಬೆಂಗಳೂರಿನ ಸರ್ಕಾರಿ ಸಮ್ಮೇಳನದ ಶಿಲ್ಪ ಕಾರ್ಯಗಾರದಲ್ಲಿ ರಚಿಸಿದ ಎರಡೂವರೆ ಅಡಿ ಎತ್ತರದ ಕಾಳಿಂಗ ಮರ್ಧನ ಶಿಲ್ಪವು, ಏಳು ದಿನಗಳಲ್ಲಿ ತಯಾರಾದ ಶಿಲ್ಪಕಲಾ ಸೌಂದರ್ಯವು ನೋಡುಗರೆಲ್ಲರಿಗೂ ಗಮನ ಸೆಳೆಯಿತು. ಇದು ಗುಂಡಪ್ಪನವರ ಕಾಯಕ ತನ್ಮಯತೆಗೆ ಸಾಕ್ಷಿಯಾಯಿತು. ಯಾವುದೇ ಶಿಲ್ಪಕಲಾ ಶಾಸ್ತ್ರದ ಅಧ್ಯಯನವಿಲ್ಲದೆ ಪ್ರತಿಭೆ ಹಾಗೂ ಕಾರ್ಯ ಮತ್ತು ದೈವಿಶಕ್ತಿಯನ್ನೇ ನಂಬಿಕೊಂಡವರು ಮಾಯಾಚಾರ್ಯರು. ಅಂತೆಯೇ ಇವರ ಪರಿಶ್ರಮವನ್ನು ಮನಗಂಡು ಇವರಿಗೆ ೧೯೮೮ರಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಬೆಂಗಳೂರು ನವೋದಯ ಸಂಸ್ಥೆಯ ತ್ರಿಭುಜನಾಚಾರ್ಯ ಅವರ ಶಿಲ್ಪಿ ಜನಕಾಚಾರ್ಯ

ಪ್ರಶಸ್ತಿಯನ್ನು ಪ್ರಧಾನ ಮಾಡಿದೆ. ಇದಲ್ಲದೆ ರಾಮದುರ್ಗದ ಅವರಾದಿಯ ಶಿಲ್ಪ ಶಿರೋಮಣಿ ಬಿರುದಿಗೆ ಭೂಷಣರಾಗಿದ್ದಾರೆ. ಮದರಾಪೂರ, ಈಚಲಕರಂಜಿಯ ಜೈನಪೀಠದ ಶಿಲ್ಪಿ ಗೌರವ ಪ್ರಶಸ್ತಿ, ಬಾಗಲಕೋಟೆ ಇವರ ಕಲಾಭಿಮಾನ ಬಳಗವು ೬೦ನೇ ಜನ್ಮದಿನದಂದು ಶಿಲ್ಪ ಪಾಂಡಿತ್ಯ ಭೂಷಣ ಬಿರುದನ್ನು ನೀಡಿ ಗೌರವಿಸಿದರೆ, ಪಂಡರಪುರದ ಸಂತ ನರಹರಿ ಸೋನಾರ ಮಂದಿರದ ಸಮಾಜ ಭೂಷಣ ಪ್ರಶಸ್ತಿ, ಬೈಲಹೊಂಗಲ ವಿಶ್ವಕರ್ಮ ಹಾಗೂ ಐಹೊಳೆ ಕಾಳಿಕಾ ಪ್ರಕಾಶನವು ಕುಶಲಶಿಲ್ಪಿ ಗುಂಡಪ್ಪ ಪುಸ್ತಕ ಗೌರವ ನೀಡಿದೆ. ಇವರ ೭೫ ವರ್ಷ ತುಂಬಿದ ಸಂದರ್ಭದಲ್ಲಿ ಮಹಾ ಶಿಲ್ಪಿ ಅಭಿನಂದನ ಗ್ರಂಥವನ್ನು ಅಮೃತ ಮಹೋತ್ಸವದ ನೆನಪಿಗಾಗಿ ಸಮರ್ಪಿಸಲಾಗಿದೆ. ಇದಲ್ಲದೆ ಶಿರಸಂಗಿಯಲ್ಲಿ, ಬೆಳಗಾವಿಯಲ್ಲಿ, ಮುಂಬೈನಲ್ಲಿ, ನವಲಗುಂದದಲ್ಲಿ, ಹಾಸನ, ಅಥಣಿ, ಗುಲಬರ್ಗಾದಲ್ಲಿ ಇವರಿಗೆ ಗೌರವ ಸನ್ಮಾನ ಮಾಡಿರುವ ಇವರ ಕಾರ್ಯಕ್ಷೇತ್ರದ ಪ್ರಖರತೆಗೆ ಸಾಕ್ಷಿಯಾಗಿದೆ. ೧೯೯೪ ರಿಂದ ೧೯೯೭ರ ಅವಧಿಯಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸದಸ್ಯರಾಗಿ ಒಂದು ಸಲ ಅಮರ ಶಿಲ್ಪಿ ಜಕಣಾಚಾರಿ ಆಯ್ಕೆ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಿದ ಶ್ರೇಯಸ್ಸು ಇವರದು.

ಹೀಗೆ ಗುಂಡಪ್ಪ ಮಾಯಾಚಾರಿಯವರು ಎತ್ತರದ ನೀಳ ಕಾಯ, ತೂಕಬದ್ಧ ನಡಿಗೆ, ಹೋರಾಟದ ಬದುಕು, ಈ ಬದುಕಿನ ಮಧ್ಯದಲ್ಲಿ ರಾಜ್ಯ ಶಿಲ್ಪಕಲಾ ಅಕಾಡೆಮಿ ಅಮರಶಿಲ್ಪಿ ಜಕಣಾಚಾರಿಯಂತಹ ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾದ ಇವರು ಕಲೆಗೆ ತಮ್ಮ ಕುಟುಂಬವನ್ನೆಲ್ಲ ಸಮರ್ಪಿಸಿದವರು. ಇವರ ಪರಿಶ್ರಮದ ಹಾದಿಯೇ ಒಂದು ಮಾದರಿ.

೬.೨..೩. ಪತ್ತಾರಿಕೆ (ಅಕ್ಕಸಾಲಿಗ)ಯಲ್ಲಿ ಕೌಶಲ್ಯ :

ಭಾರತೀಯರಲ್ಲಿ ಹೆಣ್ಣು ಮಕ್ಕಳಿಗೆ ವಿಶೇಷ ಸ್ಥಾನವಿದೆ. ಹೆಣ್ಣಿನ ಸೌಂದರ್ಯಕ್ಕೆ ಆಭರಣಗಳು ಅಲಂಕಾರಯುಕ್ತವಾಗಿ ಸೌಂದರ್ಯದ ಕಳೆಹೆಚ್ಚಿಸುತ್ತವೆ. ಬೆಳ್ಳಿ ಬಂಗಾರದ ವಸ್ತುಗಳನ್ನು ತಯಾರಿಸುವ ಅಕ್ಕಸಾಲಿಗ ಅಥವಾ ಪತ್ತಾರ. ಈ ಪತ್ತಾರರು ಪಾಂಚಾಳ ಸಮುದಾಯಕ್ಕೆ ಸೇರಿದವರಾಗಿರುವರು. ವೃತ್ತಿಯಿಂದ ಇವರು ಕರಕುಶಲ ವಸ್ತುಗಳನ್ನು ಸಿಂಹಾಸನ, ಕಿರೀಟ ತಯಾರಿಕರೆಂದೇ ಕರೆಯುವರು.

ಅಕ್ಕಸಾಲಿ ಎಂಬ ಪದವು ಅರ್ಕದ ಮೂಲಪದ. ಅರ್ಕ ಎಂದರೆ ಅರಗು, ಕರಗಿಸುವ ಭಟ್ಟಿ ಇಳಿಸಿ ಆಭರಣಗಳಿಗೆ ತುಂಬುವ ಶಾಲೆಯೇ ಅರ್ಕಸಾಲಿ ಎನ್ನುವರು. ಗ್ರಾಮೀಣ ಅಕ್ಕಸಾಲಿಯು ಚಿನ್ನ ಕರಗಿಸಲು ಇದ್ದಿಲು ಉರಿಸುವ ಕುಪ್ಪಡಿಗೆಯನ್ನು ಉಪಯೋಗಿಸುತ್ತಿದ್ದ. ವಚನಗಳಲ್ಲಿ ಕುಪ್ಪಟ್ಟಿಗೆ, ಅಗ್ಗಿಷ್ಟಿಕೆ, ಎಂದು ಕರೆಯಲಾಗಿದೆ. ಪತ್ತಾರ (ಅಕ್ಕಸಾಲಿಗ) ತನಗೆ ಬೇಕಾಗುವ ವಿವಿಧ ಬಗೆಯ ಆಯುಧಗಳನ್ನು ಉಪಯೋಗಿಸುತ್ತಾನೆ. ಆಂತಹ ಉಪಕರಣಗಳು

೧. **ಅಡಿಗಲ್ಲು :** ಸುತ್ತಿಗೆ ಸಹಾಯದಿಂದ ಬಡಿಯಲು ಬಳಸುತ್ತಾರೆ.

೨. **ಇಕ್ಕಳ :** ಕಬ್ಬಿಣದಿಂದ ಮಾಡಿರುವ ಮೂಸೆಯಲ್ಲಿ ಆಭರಣಗಳನ್ನು ಹಿಡಿದುಕೊಳ್ಳಲು ಬಳಸುವ ಸಾಧನವಾಗಿದೆ. ಪ್ರತಿಯೊಬ್ಬ ಪತ್ತಾರನು ಹೊಂದಿರುತ್ತಾನೆ.

೩. **ಅರ** : ತುಕ್ಕಿನಿಂದ ಮಾಡಿರುವ ಸಾಧನ. ಆಭರಣಗಳನ್ನು ಉಜ್ಜಲು ಬಳಸುತ್ತಾರೆ.

೪. **ಕುಮಟ** : ಬಂಗಾರವನ್ನು ಕಾಯಿಸಲು ಬಳಸುವ ಸಾಧನ

೫. **ತಿದಿ** : ಅಗ್ಗಿಷ್ಟಿಕೆ ಉರಿಸಲು ಹವಾನಿಯಂತ್ರಿತ ವಸ್ತು ತಿದಿಯನ್ನು ಬಳಸುತ್ತಾರೆ.

೬. **ಒರೆಗಲ್ಲು** : ಆಭರಣಗಳನ್ನು ಅಥವಾ ಬಂಗಾರವನ್ನು ಒರೆ ಹಚ್ಚಲು ಈ ಕಲ್ಲನ್ನು ಬಳಸುತ್ತಾರೆ. ಉಪ್ಪಿನ ದ್ರಾವಣ ಹಾಕಿ ಉಜ್ಜಿದರೆ ಬಿಳಿ ಬಂದರೆ ಬೆಳ್ಳಿ, ಹಳದಿಯ ಬಣ್ಣಕ್ಕೆ ತಿರುಗಿದರೆ ಅಪ್ಪಟ ಚಿನ್ನ ಎಂದು ಗುರುತಿಸುತ್ತಾರೆ. ಒರೆ ಹಚ್ಚುವಿಕೆ ಎನ್ನುವ ಪದವನ್ನು ಸಾಮಾನ್ಯರು ಹೆಚ್ಚಾಗಿ ಬಳಸುತ್ತಾರೆ.

"ಕೌಟಿಲ್ಯನ ಅರ್ಥಶಾಸ್ತ್ರ, ಕನಕದಾಸರ ಮೋಹನತರಂಗಿಣಿ ಕೃತಿಯಲ್ಲಿ ಬಂಗಾರದ ವಿಷಯಗಳನ್ನ ಪ್ರಸ್ತಾಪಿಸುತ್ತಾರೆ. ಆಭರಣಗಳನ್ನು ತಯಾರಿಸುವ ಅಕ್ಕಸಾಲಿಗ ಯಜ್ಞ, ಮಂತ್ರ, ಶಾಸ್ತ್ರಜ್ಞ, ವೇದಗಳ ಅಧ್ಯಯನ ಪಾರಂಗತರು ಆಚಾರವಂತರು, ಮಾತಾಪಿತೃಗಳನ್ನು ಪಾಲಿಸುವ, ಅವನು ಇತ್ಯಾದಿ ಗುಣಗಳನ್ನು ಅಳವಡಿಸಿಕೊಂಡಿರುವವ ವಿಶ್ವಕರ್ಮ ಕಾಳಿಕಾದೇವಿಯನ್ನು ನಿತ್ಯ ಪೂಜಿಸಿ ವೃತ್ತಿಯ ಕೆಲಸಕ್ಕೆ ತೊಡಗುವರು. ಮಾಂಗಲ್ಯ, ಮೂಗುತಿ, ಕಾಲುಂಗುರ, ಕಡಗ, ಬೋರ್‌ಮೊಳ, ಚೈನ್ ಮುಂತಾದ ಆಭರಣಗಳನ್ನು ತಯಾರಿಸುವರು. ಬಂಗಾರ ಬೆಳ್ಳಿಯನ್ನು ಅಳತೆ ಮಾಡಲು ಗುಲಗಂಜಿ ಅನ್ನು ಉಪಯೋಗಿಸುವುದರ ಮೂಲಕ ಅವರು ಜ್ಞಾನ ಮತ್ತು ಕೌಶಲ್ಯಗಳನ್ನು ಪತ್ತಾರರು ಹೊಂದಿರುವರು.

೬.೨.೪. ಕಂಚುಗಾರರ ಕೌಶಲ್ಯ :

ಜನಪದ ಸಾಹಿತ್ಯದಲ್ಲಿ ಕಂಚುಗಾರ ಕಲೆ ಮಹತ್ವ ಸ್ಥಾನ ಪಡೆದಿದೆ. ಪಂಚಲೋಹಗಳಲ್ಲಿ ಕೆಲಸವನ್ನು ನಿರ್ವಹಿಸುವವನಿಗೆ ಕಂಚುಗಾರ ಎಂದು ಕರೆಯುವರು. ಶಾಸನ ಕಾವ್ಯಗಳಲ್ಲಿ ಇವರಿಗೆ ಅಚ್ಚುಗಾರ, ತಂಬಟಗಾರ, ಕಾಸಾರ, ಕಲಾಯಿಗಾರ, ಕುಂಚುಗಾರ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದ ಬಗ್ಗೆ ಉಲ್ಲೇಖಗಳಿವೆ. ಡಾ.ಡಿ. ಪಾಂಡುರಂಗಬಾಬು ಅವರ ಪಾಂಚಾಳ ವೃತ್ತಿ ಪದಕೋಶ ಎಂಬ ವೃತ್ತಿಪದ ಮಂಜರಿಯ ಪ್ರಸ್ತಾವನೆಯಲ್ಲಿ ಕಂಚುಗಾರರ ಬಗ್ಗೆ (ಪುಟ ಸಂಖ್ಯೆ ೬೫)ರಲ್ಲಿ ತಿಳಿಸುತ್ತಾ. "ಕಂಚುಗಾರ ಎನ್ನುವ ವೃತ್ತಿ ಅಥವಾ ಸಮುದಾಯ ಸೂಚಕ ಪದ ನಿಷ್ಪತ್ತಿಯನ್ನು ವೃತ್ತಿಗೆ ಬಳಸುವ ಮೂಲ ಸಾಮಗ್ರಿಯಿಂದ ಸುಲಭವಾಗಿ ಗುರುತಿಸಬಹುದು. ಕಂಚು ಎಂಬ ಲೋಹವನ್ನು ಬಳಸಿ ಕೆಲಸ ಮಾಡುವವರನ್ನು ಕಂಚುಗಾರ ಎಂದು ಗುರುತಿಸಿಕೊಳ್ಳಬಹುದು ಎಂದು ತಿಳಿಸುತ್ತಾರೆ."[೮]

ಕಂಚುಗಾರರು ಸಾಮಾನ್ಯವಾಗಿ ತಮ್ಮ ದಿನನಿತ್ಯದ ಕಾಯಕದಲ್ಲಿ ತಾಮ್ರ, ಹಿತ್ತಾಳೆ, ಸೀಸ, ಮೂರರ ಮಿಶ್ರಣದಿಂದ ಕಂಚನ್ನು ತಯಾರಿಸುವರು. ಇವರು ಕಂಚಿನಿಂದ ಊಟದ ತಟ್ಟೆ, ಬಟ್ಟಲು, ಸೌಟು, ತಾಳ, ದೇವತಾಮೂರ್ತಿಗಳಂತಹ ಸಾಮಾಗ್ರಿಗಳು, ಕಾಲುಂಗರ, ಮುಂತಾದವುಗಳನ್ನು ಮಾಡುತ್ತಾರೆ. ತಾಮ್ರ, ಹಿತ್ತಾಳೆ, ಪಾತ್ರೆಗಳನ್ನು ಮಾಡುವರು. ಇದು ಅಲ್ಲದೆ ಅವುಗಳ ರಿಪೇರಿ

ಕೂಡ ಮಾಡುತ್ತಾರೆ. ಒಡೆದು ಹೋದ ತಾಮ್ರದ ಹಂಡೆ, ಕೊಡ, ಟಾಕಿ, ಮುಂತಾದವುಗಳಿಗೆ ಸತು ಹಿತ್ತಾಳೆ ಬಿಳಿಗಾರಗಳ ಮಿಶ್ರದಿಂದ ಬೆಸಿಗೆ ಹಾಕುತ್ತಾರೆ. ತಾಮ್ರದ ಪಾತ್ರೆಗಳಿಗೆ ಕುಶಲತೆಗಳಿಂದ ಡಿಸೈಯಿನ್ ಮಾಡುತ್ತಾರೆ.

ಮೊದಮೊದಲು ಮಾನವ ಕಂಚಿನ ಪಾತ್ರೆಗಳನ್ನು ಬಳಸುತ್ತಿದ್ದರು. ಶ್ರೀಮಂತರು ಅನುಕೂಲಸ್ಥರು ಮನೆಗಳಲ್ಲಿ ಕಂಚಿನ ಸಾಮಗ್ರಿಗಳು ಇರುತ್ತಿದ್ದವು. ಬಡವರ ಮನೆಯಲ್ಲಿ ಮಣ್ಣಿನ ಪಾತ್ರೆಗಳನ್ನು ಬಳಸುತ್ತಿದ್ದರು. ಹೀಗೆ ಕಂಚುಗಾರರು ಪಾಂಚಾಳ ಸಮುದಾಯಕ್ಕೆ ಸೇರಿದವರಾಗಿ ತಮ್ಮ ಕುಲಕಸುಬನ್ನಾಗಿ ಮಾಡಿಕೊಂಡಿದ್ದರು. ಕಂಚುಗಾರರಲ್ಲಿ ಇತ್ತೀಚಿನ ದಿನಗಳಲ್ಲಿ ಅವರ ಕೆಲಸ ಕಾರ್ಯಗಳು ಕಡಿಮೆಯಾಗಿರುವುದು ಕಂಡುಬರುತ್ತದೆ. ಏಕೆಂದರೆ ಅವರ ಸ್ಥಾನದಲ್ಲಿ ಸ್ಟೀಲ್, ಕಬ್ಬಿಣ, ಪ್ಲಾಸ್ಟಿಕ್, ಫೈಬರ್ ಮುಂತಾದ ವಸ್ತುಗಳ ಸಾಮಾನುಗಳು ಸ್ಥಾನ ಪಡೆದಿರುವುದರಿಂದ ಕಂಚುಗಾರರ ವೃತ್ತಿಗಳು ನಶಿಸಿಹೋಗುವ ಸ್ಥಿತಿಗೆ ಬಂದಿವೆ. ಆದ್ದರಿಂದ ಅಳಿದುಳಿದ ಪಳೆಯುಳಿಕೆಗಳ ಕಂಚುಗಾರರ ಕುಲಕಸುಬುಗಳನ್ನು ರಕ್ಷಿಸುವ ಕೆಲಸ ಆಗಬೇಕಾಗಿದೆ. ಖಾಸಗೀಕರಣ, ಜಾಗತೀಕರಣ, ಕೈಗಾರಿಕೀಕರಣ, ನೆಲೆಗಳಲ್ಲಿ ಬಾಹ್ಯ ಆಡಂಬರಕ್ಕೆ ಮಾನವ ಕ್ಷಣಿಕ ಸುಖಕ್ಕೆ ಹಂಬಲಿಸುತ್ತಾನೆ. "ಶಿವಶರಣರ ಕಾಲದಲ್ಲಿ ಕಂಚಿನ ತಟ್ಟೆಗಳನ್ನು ಚೆನ್ನಾಗಿ ಬೆಳಗಿ ಕನ್ನಡಿಯಂತೆ ಉಪಯೋಗಿಸುತ್ತಿದ್ದರೆಂದು ಬಸವಣ್ಣನವರ ವಚನಗಳಲ್ಲಿ ಉಲ್ಲೇಖವಿದೆ"

೬.೨.೫. ಕಮ್ಮಾರಿಕೆಯ, ಕೌಶಲ್ಯ :

ಪಾಂಚಾಳ ಸಮುದಾಯದಲ್ಲಿ ಕಮ್ಮಾರರು ಪ್ರಮುಖರು. ರನ್ನ ತನ್ನ ಗದಾ ಯುದ್ಧದಲ್ಲಿ ಕಮ್ಮರಯೋಜನ್ ಎನ್ನುವ ಪದವನ್ನು ಚಿನ್ನ, ಮರ, ಕಲ್ಲು, ಕಬ್ಬಿಣ ಕೆಲಸ ಮಾಡುವ ಪಾಂಚಾಳರೆಂಬ ವಿಶ್ವಕರ್ಮರು ಓಜರೆನಿಸಿಕೊಳ್ಳುತ್ತಾರೆ ಎಂದು ವಿವರಿಸುತ್ತಾನೆ. ಪ್ರಾಚೀನಕಾಲದಿಂದಲೂ ಇವರು ರೈತರ ಒಕ್ಕಲುತನಕ್ಕೆ ಬೇಕಾಗುವ ಸಲಕರಣೆಗಳನ್ನು ಕಬ್ಬಿಣದ ಲೋಹಗಳಿಂದ ಕುಲುಮೆಯಲ್ಲಿ ಮಾಡಿಕೊಡುತ್ತಾರೆ. ಇಂದಿಗೂ ಪ್ರತಿ ಹಳ್ಳಿಯಲ್ಲಿ ಒಬ್ಬ ಅಥವಾ ಇಬ್ಬರು ಕಮ್ಮಾರರಿರುವುದನ್ನು ಕಾಣುತ್ತೇವೆ.

ಕಮ್ಮಾರರು ಆಚರಿಸುವ ಹಬ್ಬಗಳು ದೀಪಾವಳಿ, ಸಂಕ್ರಾಂತಿ, ತುಳಸಿಪೂಜೆ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ಬಳಸುವ ವಸ್ತುಗಳಾದ ಅಡಿಗಲ್ಲು, ಘನ ಇಕ್ಕಳ, ಚಾಣಾ, ಒರಗಲ್ಲು, ತುಸಿ ಮತ್ತು ಚಕ್ರ ಮುಂತಾದವುಗಳನ್ನು ತೊಳೆದು ಚೊಕ್ಕಗೊಳಿಸಿ ಪೂಜೆ ಸಲ್ಲಿಸುತ್ತಾರೆ. ಇವುಗಳಿಂದ ತಯಾರಿಸುವ ಕಚ್ಚಾ ಸಾಮಗ್ರಿಗಳು, ಒಳ್ಳೆಯ ಸಾಧನ ಉಪಕರಣಗಳಾಗಿ ಕೃಷಿಕರಿಗೆ ಉಪಯೋಗವಾಗುತ್ತವೆ.

ಬಸವಣ್ಣನವರ ವಚನಗಳಲ್ಲಿ ಕಮ್ಮಾರ ಪ್ರಸ್ತಾಪ ಬರುವುದು. ಕಾಸಿ ಕಮ್ಮಾರನಾದ, ಕಬ್ಬಿಣವ ಮಾಡುವವ ಕಮ್ಮಾರ, ಮರ್ತ್ಯಲೋಕವೆಂಬುದು ಕರ್ತನ ಕಮ್ಮಟವಯ್ಯ, ಕುಮ್ಮಾರನಂತೆ ಕಾಶಿ,

ಬಡಗಿರ, ಮುಂತಾದ ಉಲ್ಲೇಖಗಳು ಕಮ್ಮಾರರ ಕೆಲಸದ ಮಹತ್ವ ತಿಳಿಸುತ್ತವೆ. ಕಮ್ಮಾರ ದಿನನಿತ್ಯದ ಕಾರ್ಯವು ತನ್ನ ಕುಲುಮೆಯಲ್ಲಿ ಬೇಕಾಗುವ ವಸ್ತುಗಳು ಈ ರೀತಿಯಾಗಿವೆ.

೧. **ಅಡಿಗಲ್ಲು** : ಲೋಹದ ವಸ್ತುಗಳನ್ನು ಇಟ್ಟು ಬಡಿಯಲು ಆಸರೆಯ ಕಬ್ಬಿಣದ ಗಟ್ಟಿ ಡಾ. ವೀರೇಶ ಬಡಿಗೇರ ಅವರು ಅಡಿಗಲ್ಲು ಎಂಬ ಕೃತಿಯಲ್ಲಿ ಅಡಿಪೂಜೆ ಎಂಬ ಲೇಖನವಿದೆ. ಇದರಲ್ಲಿ ಅಡಿಗಲ್ಲು ಪೂಜೆ, ಕಂಬಾರರ ಕುಲುಮೆ ಮತ್ತು ಮನೆಯಲ್ಲಿನ ಕ್ರಿಯೆಗಳ ಬಗ್ಗೆ ಚರ್ಚಿಸಿದ್ದಾರೆ. ವಿಶ್ವಕರ್ಮನ ಮಕ್ಕಳಾದ ಮನು ಮೊದಲನೆಯವನು. ಈತನೆ ಸೃಷ್ಟಿಕರ್ತ. ಕುಲುಮೆ ಹುಟ್ಟಿದ ಮೇಲೆಯೇ ಕೂಲ ಹುಟ್ಟಿತು ಎನ್ನುವುದನ್ನು ತಿಳಿಸಿದ್ದಾರೆ.

೨. **ಕುಲುಮೆ** : ಕಮ್ಮಾರನು ಕಬ್ಬಿಣದ ಕೆಲಸ ಮಾಡಲು ಬೆಂಕಿ ಮಾಡಿಕೊಳ್ಳುವ ಒಲೆ. ತಿದಿಗೆ ಜೋಡಿಸುವ ಕೊಳವೆಯ ಮುಂಭಾಗ ಸ್ವಲ್ಪ ತೆಗ್ಗು ಇರುವದು. ಮಣ್ಣಿನಿಂದ ಮೆತ್ತಿರುತ್ತಾರೆ. ಇಲ್ಲವೇ ಇಟ್ಟಿಗೆಯಿಂದ ಕಿರಿದಾದ ಗೋಡೆ ಕಟ್ಟಿರುತ್ತಾರೆ. ಕುಲುಮೆಯಲ್ಲಿ ಇದ್ದಿಲು ವಸ್ತುಗಳಿಗೆ ಶಾಖ ಕೊಡುವುದು, ಕಿಡಿ ಮೇಲೆಳದಂತೆ ನಿಯಂತ್ರಿಸುವ ಜಾಣ್ಮೆಯು ನಾಜೂಕಾದದ್ದು. ಕೈಯನ್ನು ನೀರಿನ ದೋಣಿ (ಪಾತ್ರೆ)ಯಲ್ಲಿ ಅದ್ದಿ, ಆಗಾಗ ಕುಲುಮೆಗೆ ನೀರಿನ ಹನಿ ಚುಮುಕಿಸುವುದುಂಟು.

೩. **ತಿದಿ** : ತಿದಿ ಎಂದರೆ ಕುಲುಮೆಗೆ ಗಾಳಿ ಒದಗಿಸುವ ಯಂತ್ರ. ಕಮ್ಮಾರರು ಬಳಸುವ ಉಪಕರಣಗಳಲ್ಲಿ ತಿದಿ (ಹವಾ) ಮುಖ್ಯವಾದದ್ದು. ಇದನ್ನು ತಾವೇ ತಯಾರು ಮಾಡಿಕೊಳ್ಳುತ್ತಾರೆ. ಕರು, ಎಮ್ಮೆ ಕರು, ಕುರಿ ಮೇಕೆ, ಚರ್ಮದಿಂದ ಶುದ್ಧೀಕರಿಸಿ ನೀರಿಗೆ (ಮಡಚುವ) ಹವಾಹಿಡಿಯಲು ಸಿದ್ಧಪಡಿಸಿಕೊಳ್ಳುತ್ತಾರೆ. ಈ ಪ್ರಾಣಿಗಳ ಚರ್ಮ ತೆಳುವಾಗಿದ್ದು ಹದಮಾಡಿ ತಯಾರಿ ಮಾಡಲು ಅನುಕೂಲವಾಗುತ್ತದೆ. ಇಲ್ಲ ಅಂದರೆ ಎಮ್ಮೆ, ಎತ್ತು, ಇತರೆ ಪ್ರಾಣಿಗಳ ಚರ್ಮ ದಪ್ಪವಾಗಿರುತ್ತದೆ. ಬಲಿತ ಪ್ರಾಣಿಗಳ ಚರ್ಮ ಒರಟು ಒರಟಾಗಿರುತ್ತದೆ. ನಿರಿಗೆ ಮಾಡಲು ಕಷ್ಟವಾಗುತ್ತದೆ ಎಂದು ಅಚನೂರು ಗ್ರಾಮದ ಕಂಬಾರ ಭೀಮಪ್ಪನ ಅಭಿಪ್ರಾಯವಾಗಿದೆ.

೪. **ಇಕ್ಕಳ** : ಕಮ್ಮಾರರಿಗೆ ಕಾಯ್ದ ವಸ್ತುಗಳನ್ನು ಹಿಡಿಯಲು ಬಳಸುವ ವಸ್ತು.

೫. **ಸುತ್ತಿಗೆ** : ವಸ್ತುಗಳನ್ನು ಕಾಯಿಸಿ ಹದಗೊಳಿಸಿ ಶುದ್ಧ ವಸ್ತು ತಯಾರಿಕೆಗೆ ಸುತ್ತಿಗೆ ಬೇಕಾಗುತ್ತದೆ.

ಕಮ್ಮಾರ ಎಂಬ ಪದವು ಕರ್ಮಹರ, ಕಂಬಾರ, ಕಮ್ಮಾರ, ಕಂಬಾರ, ಕುಲುಮೆ, ಕಂಬಾರ ದಿಣ್ಣೆ, ಕಮ್ಮಾರಸಾಲಿ ಎಂಬೆಲ್ಲ ಪರ್ಯಾಯ ಪದಗಳಿಂದ ಕಮ್ಮಾರನನ್ನು ಗುರುತಿಸುತ್ತಾರೆ. ಕಾರ್ಬೋನ್ ಎಂಬ ಮೂಲ ಪದದಿಂದ ಕಬ್ಬಿಣ. ಕಮಣ ಎಂದರೆ ಕುಲುಮೆ ಕರ್ಮ+ಕಾರ= ಕಮ್ಮಾರ ಆಗಿರಬೇಕು. ಬಳಕೆಯಲ್ಲಿ ಅಥವಾ ಪಾಂಚಾಳರಲ್ಲಿ ಕಂಬಾರ, ಕಮ್ಮಾರ ಎರಡು ಪದಗಳು ಒಂದೇ ಅರ್ಥವನ್ನು ನೀಡುತ್ತವೆ.

ಕಮ್ಮಾರರು ಕಮ್ಮಾರಿಕೆಯ ವೃತ್ತಿ ಸಲಕರಣೆಗಳನ್ನು ಕೃಷಿ ಕೆಲಸ ಕಾರ್ಯಕ್ಕೆ ಬೇಕಾಗುವ ಕುಡ, ಈಳಿಗೆ, ಮಳೆ, ಕಳೆ ಕೀಳಲು ಕುರುಚಿಗಿ, ಕೊಡಲಿ, ಕುಡುಗೋಲು, ಮೇವು ಕತ್ತರಿಸುವ ಈಳಿಗೆ ಅಥವಾ ಕೊರಪಾ, ಸಲಿಕೆ, ಗುದ್ದಲಿ, ಮುಂತಾದ ಲೋಹದ ವಸ್ತುಗಳನ್ನು ತಯಾರಿಸುವರು. ಹಾಗೂ ಬಂಡಿ, (ಚಕ್ಕಡಿ)ಯ ಕೀಲು, ಬಳಿ, ಗಾಲಿಗಳಿಗೆ ಬಿಗಿ ಆಗಲಿಕ್ಕೆ ಕಬ್ಬಿಣ ಸರಳು, (ರಾಡು) ಅವು ಅಂಗಡಿಯಲ್ಲಿ ಸಿಗುವುದಿಲ್ಲ. ರೈತರ ಎಲ್ಲ ವಸ್ತುಗಳ ತಯಾರಿಕೆಯ ಕುಶಲತೆಯ ಜ್ಞಾನ ಬಲ್ಲವ ಕಮ್ಮಾರ ಅವನು ಮಾನವ ವಿಕಾಸದ ಬದುಕಿಗೆ ಆಧಾರವಾಗಿದ್ದಾನೆ. ಇಂದಿನ ತಂತ್ರಜ್ಞಾನ ಯುಗಕ್ಕೆ ಕಮ್ಮಾರರ ಕರಕುಶಲತೆಯು ಕಾರಣವಾಗಿರುವವು.

೬.೨.೫.೧. ಶ್ರೀ ಚಿದಾನಂದ ಬಸಪ್ಪ ಬಡಿಗೇರ :

ಬಾದಾಮಿ ತಾಲೂಕಿನ ಕಿತ್ತಲಿ ಗ್ರಾಮದಲ್ಲಿ ೧೦/೦೬/೧೯೫೨ ರಲ್ಲಿ ಬಸಪ್ಪ ಹಾಗೂ ಮಲ್ಲಮ್ಮ ಎಂಬ ದಂಪತಿಗಳ ಉದರದಲ್ಲಿ ಜನಿಸಿದ. ಇವರು ೭ ನೇ ತರಗತಿಯವರೆಗೆ ವ್ಯಾಸಂಗ ಮಾಡಿದರು. ಕಡುಬಡತನದ ಕಾರಣದಿಂದ ಓದನ್ನು ನಿಲ್ಲಿಸಿದ. ಚಿದಾನಂದರು, ಕಂಬಾರಿಕೆ ಇವರ ಮನೆತನದ ಮೂಲ ಉದ್ಯೋಗವಾಗಿದ್ದರಿಂದ, ಅದನ್ನು ಮುಂದುವರೆಸಿಕೊಂಡು ಬಂದರು. ಬಿಡುವಿನ ಸಮಯದಲ್ಲಿ ಶ್ರೀ ಗ್ಯಾನಪ್ಪ ತಮ್ಮಣ್ಣ ಕಾಶಿ ಇವರ ಮಾರ್ಗದರ್ಶನದಲ್ಲಿ ಭಜನಾ ಪದಗಳನ್ನು ಅಭ್ಯಾಸ ಮಾಡಿದರು.

೧೯೬೪ ರಂದು ಶ್ರೀ ಬಸವೇಶ್ವರ ಮಂಡಳಿಯನ್ನು ಕಟ್ಟಿಕೊಂಡು ಹಿರಿಯರ ಸಹಾಯದಿಂದ ಸಾಕಷ್ಟು ಕಾರ್ಯಕ್ರಮಗಳನ್ನು ನೀಡುತ್ತಾ ಬಂದ. ಇವರು ೧೯೭೨ ರಂದು ಆಕಾಶವಾಣಿ ಕೇಂದ್ರ ಧಾರವಾಡದಲ್ಲಿ ಸಹ ಕಲಾವಿದರಾದ ಚನ್ನಪ್ಪ ಯಾದವಾಡ, ಬಸಪ್ಪ ಭೂತಾಳಿ, ಯಂಕಣ್ಣ ಪೇಠೆ, ಗುರುಶಾಂತ ಹೆರಕಲ್ಲ, ದ್ಯಾಮಣ್ಣ ಜಮ್ಮನಕಟ್ಟಿ, ಮುತ್ತಪ್ಪ ಬೊಮ್ಮನಗೌಡರ ಹಾಗೂ ಇನ್ನೂ ಅನೇಕ ಕಲಾವಿದರನ್ನೊಳಗೊಂಡ ತಂಡದಿಂದ ಕಾರ್ಯಕ್ರಮಗಳನ್ನು ನಾಡಿನ ವಿವಿಧೆಡೆಗಳಲ್ಲಿ ನೀಡಿದ್ದಾರೆ.

೧೯೭೬ ರಲ್ಲಿ ಸೊನ್ನ ಗ್ರಾಮದಲ್ಲಿ ಲಾವಣಿ ಪದಗಳ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಉತ್ತರ ಕರ್ನಾಟಕ ಜಾನಪದ ಕಲಾವಿದರ ವೇದಿಕೆ ಧಾರವಾಡ ೧೯೯೨, ೨೦೦೨ರಲ್ಲಿ ಭೂಮಿ ಬಳಗ ಜಿಲ್ಲಾ ಘಟಕ ವಿಜಯಪುರ ಇವರ ಆಶ್ರಯದಲ್ಲಿ ಜಾನಪದ ಕಾರ್ಯಕ್ರಮ, ೨೦೦೩ ರಲ್ಲಿ ಬೀಳಗಿಯಲ್ಲಿ ಜರುಗಿದ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ಲಾವಣಿ ಪದಗಳ ಕಾರ್ಯಕ್ರಮ, ಸನಾದಿ ಅಪ್ಪಣ್ಣ ಕಲಾಕಾರರ ಸಂಘ ಬೀಳಗಿ ಇವರ ಆಶ್ರಯದಲ್ಲಿ ಜರುಗಿದ ಲಾವಣಿ ಪದ ಕಾರ್ಯಕ್ರಮ, ಹೀಗೆ ಹತ್ತಾರು ಕಾರ್ಯಕ್ರಮಗಳನ್ನು ನೀಡಿ ಮೆಚ್ಚುಗೆ ಪಡೆದಿದ್ದಾರೆ. ಇನ್ನೂ ನಾಡು ಸುತ್ತಿ ಕಲಾ ಸೇವೆ ಮಾಡಬೇಕೆಂಬ ಇಚ್ಛೆಯಿಂದ ಆತ್ಮ ಸಂತೋಷದಿಂದ ಕಲೆ ಬೆಳಗಿಸುತ್ತಿದ್ದಾರೆ.

೬.೩. ಪಾರಿಜಾತದಲ್ಲಿ ಪಾಂಚಾಳರ ಜ್ಞಾನ ಕೌಶಲ್ಯಗಳು :

೬.೩.೧. ಪೆಟಿಗೆ (ಹಾರ್ಮೋನಿಯಂ) ತಯಾರಿಕೆ :

ಜನಪದ ಹಿನ್ನೆಲೆಯಲ್ಲಿ ಪಾಂಚಾಳರ ಕುಲಕಸುಬುಗಳಲ್ಲಿ ನಾನಾ ರೀತಿಯ ಒಕ್ಕಲುತನಕ್ಕೆ ಬೇಕಾಗುವ ಸಲಕರಣೆಗಳನ್ನು ಸಾಮಾನ್ಯವಾಗಿ ತಯಾರಿಸುವುದರೊಂದಿಗೆ ಎಲ್ಲರಿಗಿಂತ ವಿಶಿಷ್ಟ ಬಗೆಯ ಕುರಗಿ, ಕುಂಟೆ, ದಿಂಡು, ಮುಂತಾದ ವಸ್ತುಗಳನ್ನು ಸಿದ್ಧಪಡಿಸುವಲ್ಲಿ ಅವರ ಏಕಾಗ್ರತೆಯಿಂದ ಕೆತ್ತನೆಯು ಕುಸೂರಿನ ಕೆಲಸ ಕುಶಲತೆಯಿಂದ ಕೂಡಿರುತ್ತದೆ. ಅದರಂತೆ ಪಾರಿಜಾತ ನಾಟಕಕ್ಕೆ ಬೇಕಾಗಿರುವ ಪ್ರಮುಖ ವಾದ್ಯ ಹಾರ್ಮೋನಿಯಂ. ಇದು ಶ್ರೀಕೃಷ್ಣ ಪಾರಿಜಾತದ ರಾಗಸಂಯೋಜನೆಗೆ ಮಹತ್ವ ಕೊಟ್ಟಿದೆ. ಪಾಂಚಾಳರಲ್ಲಿ ಬಡಿಗ, ಕಟ್ಟಿಗೆಯಿಂದ ತಯಾರಿಸುವ ವಸ್ತುಗಳ ಸಲಕರಣೆಗಳು ಬಾಜಿ, ಕೊಡತಿ, ಉಳಿ, ಸುತ್ತಿಗೆ, ದೊಡ್ಡ ಸುತ್ತಗಿ, ಅಡಗಟ್ಟಿಗಿ ಮುಂತಾದವುಗಳು ಊರ ಮುಂದೆ ಇಲ್ಲವೇ ಮದ್ಯದ ಗ್ರಾಮದೇವತೆ ಗಿಡದ ನೆರಳಿನಲ್ಲಿ ಬಡಗಟ್ಟವಿರುತ್ತದೆ. ಅವರ ಜ್ಞಾನ ಕೌಶಲಗಳು ವಿಶಿಷ್ಟವಾದದ್ದು.

ಪೆಟಿಗೆ ತಯಾರಿಕೆ ಸೂಕ್ಷ್ಮವಾದದ್ದು. ನಮ್ಮ ಕರ್ನಾಟಕದಲ್ಲಿ ಕೆಲವೇ ಸ್ಥಳಗಳಲ್ಲಿ ಮಾತ್ರ ಸಿಗುತ್ತಾರೆ. ಉದಾರಣೆಗೆ; ಗದಗ, ಗುಳೇದಗುಡ್ಡ, ಮುದ್ದೇಬಿಹಾಳ, ಬಾಗಲಕೋಟೆ, ಹೊಳೆಆಲೂರು, ತೆಗ್ಗಿ, ಸಾಗರ ಮುಂತಾದ ಕಡೆಗಳಲ್ಲಿ ಹಾರ್ಮೋನಿಯಂ ತಯಾರಕರಿರುವರು.

ಉದಾಹರಣೆಗೆ; ಬೀಳಗಿ ತಾಲೂಕಿನ ತೆಗ್ಗಿ ಗ್ರಾಮದ ಚಿದಾನಂದ ಬಡಿಗೇರ ಅವರು ಪಾರಿಜಾತ ಭಜನಾ ಕಲಾವಿದರು. ಹಾಗೂ ಸ್ವತಃ ತಮ್ಮ ಮನೆಯಲ್ಲಿ ಹಾರ್ಮೋನಿಯಂ ತಯಾರಿಸುತ್ತಾರೆ. ಅದು ಅವರ ವಿಶೇಷತೆ. ದೂರದ ನಗರಗಳಾದ ಬಾಂಬೆ, ಕಲ್ಕತ್ತಾ, ಮದ್ರಾಸ್, ಮಂಗಳೂರು, ಕಡೆಗಳಿಂದ ಕಚ್ಚಾಸಾಮಗ್ರಿಗಳನ್ನು ತರಿಸುವರು. ಮಂಗಳೂರು, ಶಿವಮೊಗ್ಗದ ಕಡೆಯಿಂದ ಪೆಟಿಗೆ ತಯಾರಿಕರಿಗೆ ಕಟ್ಟಿಗೆ ತರಿಸಿ ಕೊರೆದು ಪಳಿ ಹಾಗೂ ಸಣ್ಣ ಸಣ್ಣ ಬೆರಳ ಚೂರುಗಳಾಗಿ ಮಾಡಿ ನೆರಳಾಗ ಒಣಗಿಸಿ ಹದಮಾಡಿ ಇಡುವರು. ನಂತರ ಮದ್ರಾಸ್‌ದಿಂದ ಚರ್ಮತರಿಸಿ ಹದಮಾಡಿ ಕತ್ತರಿಸಿ ಅಂಟು ಜಿಡ್ಡಿನಿಂದ ಕಟ್ಟಿಗೆಯ ಪಳಿಗೆ ಬೆರಳ ಚೂರಗಳಿಗೆ ಹಚ್ಚುವರು. ನಂತರ ಬಾಂಬೆ ಹಾಗೂ ಬೇರೆ ಬೇರೆ ಕಡೆಯಿಂದ ಸ್ವರ ನಾದಕ್ಕೆ ಬೇಕಾಗುವ ತಾಮ್ರ, ಕಂಚು, ಹಿತ್ತಾಳೆಯ, ತೆಳುವಾದ ತಗಡು ತರಿಸಿ ಕಟ್ಟಿಗೆ ಪಳಿಗಳನ್ನು ಹೊಂದಿಸುವರು. ಚರ್ಮದ ಕಟ್ಟಿಗೆ ಬೆರಳ ಚೂರುಗಳಿಗೆ ಸಣ್ಣದಾಗಿ ಮಳೆ ಬಡಿದು ಜೋಡಿಸುವ ಕಲೆ ಕುಶಲತೆಯಿಂದ ಕೂಡಿರುತ್ತದೆ. ಈ ರೀತಿ ಸಿದ್ಧಗೊಂಡಿರುವದಕ್ಕೆ ಹಾರ್ಮೋನಿಯಂ ಎಂದು ಕರೆಯುವರು. ಅದರಲ್ಲಿ ಸಣ್ಣದು, ದೊಡ್ಡದು ಕಲಾಸಕ್ತರಿಗೆ ತಕ್ಕಂತೆ ತಯಾರಿಸಿ ಕೊಡುವರು. ಹಾರ್ಮೋನಿಯಂ ಸ್ವರದಲ್ಲಿ ಸರಿಗಮಪದನಿಸ ಸ್ವರಗಳನ್ನು ಮಂದ್ರ, ಮಧ್ಯೆ, ಆರೋಹಗಳಲ್ಲಿ ಮೂರುಪಟ್ಟಿ ಜೋಡಿಸುವ ಕಲೆಯು ಅದ್ಭುತವಾದದ್ದು. ಇಂತಹದು ಎಲ್ಲಾರಿಗೂ ಬರುವುದಿಲ್ಲ. ಅದು ಪಾಂಚಾಳರಲ್ಲಿದೆ, ಎಂಬುದು ಸಾಬೀತು ಪಡಿಸುತ್ತದೆ. ಚಿದಾನಂದ ಬಡಿಗೇರ್ ಅವರು

ಸ್ವತಃ ತಯಾರಕರು, ಹಾರ್ಮೋನಿಯಂ ಬಾರಿಸುವ ಕಲಿಸುವ ಗುರುಗಳಾಗಿದ್ದಾರೆ. ತಮ್ಮ ಇಬ್ಬರು ಮಕ್ಕಳಿಗೆ ಈ ಕಲೆಯನ್ನು ಮುಂದುವರೆಸಿದ್ದಾರೆ. ಆಧುನಿಕತೆಗೆ ತಕ್ಕಂತೆ ಕುಶಲಕಲೆಗಳಲ್ಲಿ ನಾದಸ್ವರಗಳನ್ನು ಜೋಡಿಸಿ ಪೆಟಿಗೆ ತಯಾರಿಸುತ್ತಾರೆ.

ಪೆಟಿಗೆ ತಯಾರಿಕೆಯ ಕೆಲಸ ಹೇಗೆಂದರೆ ಊಟ ಮಾಡುವವರು ಬಹಳ. ಅದರ ರುಚಿ ಸವಿಯದೆ ಹೇಳುತ್ತಾರೆ. ಆದರೆ ಅಡುಗೆ ಮಾಡುವವರ ಕಲೆ ಮಾತ್ರ ಬಾಣಸಿಗ ಅಥವಾ ತಾಯಿಗೆ ಗೊತ್ತಿರುವ ಹಾಗೆ ಹಾರ್ಮೋನಿಯಂ ನುಡಿಸುವ ಶಿಕ್ಷಕ ವರ್ಗಗಳಿವೆ. ಆದರೆ ತಯಾರಿಕೆಯ ಕೌಶಲ್ಯ ಜ್ಞಾನವಿರುವವರು ವಿರಳವಾಗಿರುವುದಕ್ಕೆ ಆಧುನಿಕ ತಂತ್ರಜ್ಞಾನ ಯುಗದಲ್ಲಿ ಅವರ ಜೊತೆ ಮೂಲ ಜನಪದ ಕಲೆಗಳ ಕೌಶಲ್ಯತೆಗಳಲ್ಲಿ ವಿಶೇಷತೆ ಕಾಣುತ್ತೇವೆ.

೬.೩.೨. ತಾಳ ತಯಾರಿಕೆ :

ಜನಪದ ಸಂಗೀತ ಕಲೆಗಳಲ್ಲಿ ತಾಳ ನಾದವು ಮಹತ್ವ ಪಡೆಯುತ್ತದೆ. ಶ್ರೀಕೃಷ್ಣಪಾರಿಜಾತದಲ್ಲಿ ಬಳಸುವ ಪ್ರಮುಖ ವಾದ್ಯಗಳಲ್ಲಿ ತಾಳಕ್ಕೆ ವಿಶೇಷವಿದೆ. ಪಾರಿಜಾತ ನಡೆಯುವಾಗ ರಾಗ ಎಳೆಯುತ್ತಾ ಎಳೆಯುತ್ತಾ ಎರಡೆರಡು, ತಾಳಗಳಂತೆ ಇಬ್ಬರು ಪೆಟ್ಟಿಗೆಯ ಅಕ್ಕಪಕ್ಕದಲ್ಲಿ ನಿಂತು ಹಿಮ್ಮೇಳ ಕಲಾವಿದರಾಗಿ ಒಮ್ಮೊಮ್ಮೆ ಪ್ರಮುಖ ಪಾತ್ರಧಾರಿಗಳಾಗಿ ಕೃಷ್ಣ ಭಾಗವತ, ನಾರದ ಮುಂತಾದ ಪಾತ್ರಗಳನ್ನು ನಿರ್ವಹಿಸುವರು.

ತಾಳಗಳು ಹಂದಿಗುಂದ ನಾಗೇಂದ್ರ ಕಂಬಾರವರು ತಯಾರಿಸುವ ಕಲೆಯು ವಿಶೇಷವಾದದ್ದು. ಕಂಚಿನ, ಕಬ್ಬಿಣ ಮಿಶ್ರಿತವಾದ ಲೋಹವನ್ನು ಕುಲಮೆಯಲ್ಲಿ ಕಾಶಿ ಹದಮಾಡಿ ಒಂದು ಲಯಕ್ಕೆ ಬರುವರೆಗೆ ತಾಳಗಳನ್ನು ಬಾರಿಸಿ, ಬಾರಿಸಿ ನೀರುಣಿಸಿ ಶುದ್ಧ ಶಬ್ದದ ಲಯ ಬರುವಂತೆ ಆಯಾ ಸಂದರ್ಭದ ತಾಳಗಳನ್ನು ತಯಾರಿಸುತ್ತಾರೆ. ಪಾರಿಜಾತ ತಾಳಗಳೆ ಬೇರೆ, ಭಜನಾತಾಳಗಳೆ ಬೇರೆ, ಶಿವಬಸವತಾಳ, ದಾಸರತಾಳ, ಸಂತರ (ದಿಂಡಿನ) ತಾಳಗಳು ಹೀಗೆ ಅನೇಕ ವಿವಿಧ ತಾಳಗಳನ್ನು ತಯಾರಿಸುವ ಕುಶಲತೆಯ ಕಲೆಗಾರಿಕೆ ವಿಶೇಷವಾದದ್ದು. ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ತನ್ನ ಅಸ್ತಿತ್ವ ಉಳಿಸಿಕೊಂಡು ಬಂದಿವೆ. ಅದರಲ್ಲಿ ಪಾಂಚಾಳರ ಆಸಕ್ತಿ ವಿಶೇಷವಾದದ್ದು.

೬.೩.೩ ತಬಲಾ ತಯಾರಿಕೆ :

ಪಾರಿಜಾತಕ್ಕೆ ಬೇಕಾಗಿರುವ ವಾದ್ಯಪರಿಕರಗಳಲ್ಲಿ ತಬಲಾ ಒಂದು. ಇದು ಪ್ರಾಚೀನತೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿತ್ತು. ನಂತರ ಜ್ಞಾನ ವಿಕಾಸವಾದಂತೆ ತಬಲಾ ವಾದ್ಯದ ವಿದಗಳು ಬೇರೆ ಬೇರೆಯಾಗಿ ಆಯಾ ಸಂಗೀತ ಲಯಕ್ಕೆ ತಕ್ಕಂತೆ ಬಳಸುವುದುಂಟು. ಪಾಂಚಾಳರು ಎಲ್ಲಾ ವಾದ್ಯಗಳಲ್ಲಿ ಶಿಕ್ಷಣ ಜ್ಞಾನಯುಳ್ಳವರು. ಆರಂಭದಲ್ಲಿ ಪಾರಿಜಾತ ನಾಟಕವು ಹಳ್ಳಿಯ ಗ್ರಾಮದೇವರ ಗುಡಿ, ಮಠ, ಬಯಲು ಜಾಗದಲ್ಲಿ ನಾಟಕವಾಡುತ್ತಿದ್ದರು. ನಾಟಕ ಆರಂಭವಾಗುವುದಕ್ಕಿಂತ ಮೊದಲು, ತಾಳ, ತಬಲಾ, ಪೆಟಿಗೆಯ ಆಲಾಪ ನಡೆಯುತ್ತದೆ. ನಂತರ ಪಾತ್ರದಾರಿಗಳು ಕಥೆಗೆ

ತಕ್ಕಂತೆ ರಾಗ ಸಂಯೋಜನೆಯಲ್ಲಿ ಸಂಗೀತ ಸಾಗುತ್ತಿತ್ತು. ನಂತರ ಪಾತ್ರಗಳ ಸಂಭಾಷಣೆ ಆರಂಭವಾಗುತ್ತದೆ.

ಗುಳೇದಗುಡ್ಡದ ಮಾನಪ್ಪ ಬಡಿಗೇರ ಅವರ ಸಂದರ್ಶನ ಮಾಡಿದಾಗ ಅವರು ಹೇಳುವ ಮಾತುಗಳಲ್ಲಿ 'ದೂರದ ಊರುಗಳಿಂದ ತಬಲಕ್ಕೆ ಬೇಕಾಗುವ ಚರ್ಮ, ಕಟ್ಟಿಗೆ, ಮುಂತಾದ ಸಾಮಗ್ರಿ ತರಿಸಿಕೊಂಡು ತಬಲಾ ತಯಾರಿಸುವುದು ಬಹಳ ಕಷ್ಟ ಮತ್ತು ತ್ರಾಸ್ ಇದೆ. ಸರ್ ತಬಲಾ ಬಿಗಿಯುವುದರಲ್ಲಿ ಚರ್ಮ ಹೊದಿಸುವುದರಲ್ಲಿ ಏನಾದರೂ ಏರುಪೇರಾದರೆ ತಬಲಾ ವಾದ್ಯದ ನಾದಲಯ ಚೆನ್ನಾಗಿ ಬರುವುದಿಲ್ಲರಿ.' ತಬಲಾ ಮಾರಾಟವಾಗುವುದಿಲ್ಲ ಅದಕ್ಕಾಗಿ ಹೊಟ್ಟೆಪಾಡಿಗಾಗಿ ಈ ಕೆಲಸ ಮಾಡುತ್ತೇವರಿ ಎಂದು ಮಾನಪ್ಪ ಬಡಿಗೇರ ಅವರು ಬದುಕಿನ ಬವಣೆಯನ್ನು ತಬಲಾ ವಾದ್ಯಕ್ಕೆ ಹೋಲಿಸಿ ಹೇಳುವ ಕಲೆಗಾರಿಕೆ ವಿಶೇಷವಾದದ್ದು. ಅದಕ್ಕಾಗಿ ಪಾಂಚಾಳರ ಜೀವನ ವೃತ್ತಿಯಲ್ಲಿ ಕಲೆಗಾರಿಕೆಯು ವಿಶೇಷವಾದದ್ದು. ಹಸಿವಿನ ಜಾಣ್ಮೆಯು ಏನಾದರೊಂದು ಕಲೆಯಲ್ಲಿ ತೊಡಗಿಸುವುದಕ್ಕೆ ಹಚ್ಚುತ್ತದೆ.

೬.೩.೨.೧. ಶ್ರೀಶೈಲ ಹಣಮಂತ ಬಳೂತಿ :

ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ತಳೇವಾಡ ಗ್ರಾಮದ ಹಣಮಂತ ಮತ್ತು ಈರಮ್ಮ ಎಂಬ ವಿಶ್ವಕರ್ಮ ದಂಪತಿಗಳ ಉದರಲ್ಲಿ ದಿನಾಂಕ:೦೧-೦೯-೦೯೫೨ ರಲ್ಲಿ ಜನಿಸಿದರು. ಚಿಕ್ಕ ವಯಸ್ಸಿನಲ್ಲಿಯೇ ಬಯಲಾಟದ ಸಂಗೀತದ ಬಗ್ಗೆ ಆಸಕ್ತಿ ವಹಿಸಿ ಶ್ರೀ ಸುರೇಶ ಬಾಳಿಗೇರಿ ಇವರನ್ನು ವಿದ್ಯಾ ಗುರುಗಳನ್ನಾಗಿ ಮಾಡಿಕೊಂಡು ಬಯಲಾಟದ ಹಾಡುಗಳಿಗೆ ತಬಲಾ ನುಡಿಸುವುದನ್ನು ಕಲಿತುಕೊಂಡರು. ಈಗ ಈ ನಾಡಿನ ಪ್ರಸಿದ್ಧ ಆಟಗಳೆನಿಸಿದ ಶ್ರೀಕೃಷ್ಣ ಪಾರಿಜಾತ, ರೇಣುಕಾ ಎಲ್ಲಮ್ಮ, ಹೇಮರಡ್ಡಿ ಮಲ್ಲಮ್ಮ, ಕಡ್ಲಿಮಟ್ಟಿ ಕಾಶಿಬಾಯಿ ಬಯಲಾಟಗಳಗೆ ತಬಲಾ ಬಾರಿಸುತ್ತಾರೆ. ತಬಲಾ ಶ್ರೀ ಶೈಲ ಎಂದು ಹೆಸರು ಗಳಿಸಿದ್ದಾರೆ. ಇವರ ಪ್ರದರ್ಶನಗಳು ವಿವಿಧ ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ಪ್ರಸಾರಗೊಂಡಿವೆ. ಇವರಿಗೆ ಕರ್ನಾಟಕ ಬಯಲಾಟ ಅಕಾಡಮಿಯು ೨೦೧೮ ನೆಯ ವಾರ್ಷಿಕ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. (ಶ್ರೀ.ಶೈಲ ಹ.ಬಳೂತಿ ಸಾ. ತಳೇವಾಡಿ, ತಾಲೂಕ ಬಸವನಬಾಗೇವಾಡಿ. ಜಿಲ್ಲೆ ವಿಜಯಪುರ)

ಗಾದೆ-ಒಗಟುಗಳ ಹಿನ್ನೆಲೆಯಲಿ ಪಾಂಚಾಳ ಸಮುದಾಯ :

ಗಾದೆ ಮತ್ತು ಒಗಟುಗಳು ಭಾಷಾ ಬಳಕೆಯ ವಿಶಿಷ್ಟ ರಚನೆಗಳು, ಜನ ಸಂಸ್ಕೃತಿಯನ್ನು ಅಡಕಗೊಳಿಸಿರುವ ಬದುಕಿನ ವಿಧಾನಗಳನ್ನು ಸಾಮಾಜಿಕ ಸಂರಚನೆಯನ್ನು, ಸಮುದಾಯದ ನಡೆನುಡಿಯನ್ನು ಬಿಂಬಿಸುತ್ತವೆ. ಗಾದೆ ಒಗಟುಗಳಿಗೆ ಸಾಂಸ್ಕೃತಿಕ ಮಹತ್ವವಿರುವಂತೆಯೇ ಒಂದು ಸಾಮಾಜಿಕ ಸಂರಚನೆಯಲ್ಲಿ ಬದುಕುತ್ತಿರುವ ಪರಸ್ಪರ ಅವಲಂಬಿತ ಸಮುದಾಯಗಳು ಪರಸ್ಪರರ ಬಗೆಗಿನ ತಿಳುವಳಿಕೆಗಳನ್ನು ಮನೋಭಾವನೆಗಳನ್ನು ಗಾದೆ ಒಗಟುಗಳ ಮುಖಾಂತರ ಅಭಿವ್ಯಕ್ತಿರುತ್ತಾರೆ.

೧. ಚಳಿಜ್ವರ ಇಲ್ಲದ ಬೆಂಕಿ ಕಾಯಿಸುವನಾರು? (ಥಂಡಿ ಇಲ್ದೆ ಕಾಸ್ತಾನ)

೨. ಒಬ್ಬನು ನಿಲ್ಲುತ್ತಾನೆ ಇನ್ನೊಬ್ಬನು ಬಡಿಯುತ್ತಾನೆ,

೩. ಅಕ್ಕಸಾಲಿಗಿಂತ ಕಳ್ಳನಿಲ್ಲ ಮೆಕ್ಕೆ ಗದ್ದೆಗಿಂತ ಬೆಳೆಯಿಲ್ಲ

೪. ಕಂಡರ ಮನೆ ಮುಂದೆ ಒಂದು ಮಾತು ,ಆಚಾರಿ ಮನೆ ಮುಂದೆ ಮೂರು ಮಾತು

೫. ಕೆಟ್ಟ ಬಡಗಿ ತನ್ನ ಆಯುಧಗಳನ್ನು ದೂಷಿಸುತ್ತಾನೆ,

೬. ಕಬ್ಬಿಣ ಯಾರಿಗೆ ಬಗ್ಗೋದು ಅಂದ್ರೆ ಕಮ್ಮಾರಗ

೭. ಹೆಣ್ಣು ಕೆಟ್ರೆ ತೌರುಮನೆಗೆ ಹೊನ್ನು ಕೆಟ್ರೆ ಅಕ್ಕಸಾಲೆರ ಮನೆಗೆ

೮. ಕಮ್ಮಾರನಿಗೆ ತುಂಡು ಕಬ್ಬಿಣ ಬೇಕು ಬಡಗಿಗೆ ಉದ್ದ ಮರಬೇಕು

೯. ಆಚಾರಿಗೆ ಊಟದ ಚಿಂತೆ ಆದ್ರೆ ಕುದುರಿಗೆ ಗೂಟದ ಚಿಂತೆ

೧೦. ಇರಿವೆ ಬುದ್ಧಿ ಕಮ್ಮಾರಗ ಗೊರವನ ಬುದ್ಧಿ ಮಡಿವಾಳಗ

೧೧ ಕೂಸು ಹುಟ್ಟಿದರೆ ಕಮ್ಮಾರ ಬೇಕು ಸತ್ತರೆ ಕಮ್ಮಾರ ಬೇಕು

೬.೩.೪. ಪಾರಿಜಾತದಲ್ಲಿ ಹಿಮ್ಮೇಳ ಮುಮ್ಮೇಳ ಪಾತ್ರಧಾರಿಗಳ ಕೌಶಲ್ಯ :

ಬಯಲಾಟಗಳಲ್ಲಿ ಶ್ರೀಕೃಷ್ಣಪಾರಿಜಾತವು ಸ್ವತಂತ್ರ ಆಟವಾಗಿ ಹೊರಹೊಮ್ಮಿದ ಬಳಿಕ ಪಾರಿಜಾತದ ಪಾತ್ರಗಳು ಎಲ್ಲವೂ ಶ್ರೇಷ್ಠವಾದದ್ದು. ವೈದಿಕ ಪರಂಪರೆಯ ವಿಷ್ಣು, ಕೃಷ್ಣ ನಾರದ, ರುಕ್ಮಿಣಿ, ಸತ್ಯಭಾಮೆ, ಭಾಗವತರು, ದ್ಯುತಿ, ಕೊರವಂಜಿ, ಮುಂತಾದ ಪಾತ್ರಗಳಿಗೆ ಜೀವ ತುಂಬುವ ಪಾಂಚಾಳ ಸಮುದಾಯ ಕಲಾವಿದರು ನಾಟಕಕ್ಕಾಗಿಯೆ ತನು-ಮನ-ಧನಗಳನ್ನು ಕಳೆದುಕೊಂಡವರು ಇದ್ದಾರೆ. ಪಾರಿಜಾತ ನಾಟಕದಲ್ಲಿ ಪಾತ್ರಕ್ಕೆ ಎಷ್ಟು ಮುಖ್ಯವೋ ಅಷ್ಟು ಹಿಮ್ಮೇಳ ಕಲಾವಿದರಿಗೂ ಪ್ರಾಮುಖ್ಯತೆಯಿದೆ. ಕಲಾವಿದರು ಹೆಚ್ಚು ಕಮ್ಮಿ ಸಂಗೀತದ ತಾಳ, ಪೆಟಿಗೆ, ತಬಲಾ ಮುಂತಾದವುಗಳ ನುಡಿಸುವ, ಬಾರಿಸುವ, ಜ್ಞಾನ ಕುಶಲತೆ ಪಡೆದವರು. ಶ್ರೀಕೃಷ್ಣನ ಪಾತ್ರ ಬಂದಾಗ ಹಿಂದೆ ನಾರದ, ಕೊರವಂಜಿ, ದ್ಯುತೆ, ಭಾಗವತರು, ಸಂಗೀತದ ರಾಗ, ಆಲಾಪದಲ್ಲಿ ತೊಡಗಿರುತ್ತಾರೆ. ಇದನ್ನೇ ಹಿಮ್ಮೇಳ ಕಲಾವಿದರು ಎನ್ನುವರು.

ಮುಮ್ಮೇಳ ಕಲಾವಿದರು ಪಾತ್ರದ ಜೊತೆಜೊತೆಗೆ ಕೂಡಿ ಸಂಭಾಷಣೆಯ ಮಧ್ಯದಲ್ಲಿ ರಾಗ ಸಂಯೋಜನೆಗೊಳಿಸುವರು. ಮತ್ತೆ ಮುಖ್ಯಪಾತ್ರ ನಿಂತು ಪ್ರಾರಂಭಿಸುವ ಕಲೆಯು ನೋಡುವ ಸಭಿಕರ ಮನವನ್ನು ಸೂರೆಗೊಳಿಸುತ್ತದೆ. ಮೊದಲು ಪೂರ್ವದಲ್ಲಿ ಸೂರು ಹಿಡಿಯುವರು ಹಿಂದೆ ಬಾಗುತ್ತಿದ್ದರು. ತದನಂತರ ಹಿಮ್ಮೇಳದವರು ನೇರವಾಗಿ ನಿಂತು ಸೂರು ಹಿಡಿಯಲು ಪ್ರಾರಂಭಿಸುವರು.

೬.೩.೪.೧. ಶ್ರೀ ಸಂತ್ರಾಮ ಸಿ. ಬಡಿಗೇರ :

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಖೇಮಲಾಪುರ ಗ್ರಾಮದ ತಂದೆ ಸಿದ್ರಾಮ, ತಾಯಿ, ಭೀಮವ್ವಾ, ಎಂಬ ವಿಶ್ವಕರ್ಮ ದಂಪತಿಗಳ ಉದರದಲ್ಲಿ ದಿನಾಂಕ: ೨೨-೦೨-೧೯೩೮

ರಲ್ಲಿ ಸಂತ್ರಾಮರ ಜನನವಾಯಿತು. ಇವರ ತಂದೆಯವರು, ಕರಡಿಮಜಲು, ಕಣಿವಾದನ ಕಲಾವಿದರು. ಇವರ ಹಿರಿಯ ಅಣ್ಣ ಜಗನ್ನಾಥ ಬಡಿಗೇರ ಇವರಿಗೆ ಶ್ರೀಕೃಷ್ಣ ಪಾರಿಜಾತದ ಲಯ, ಗತ್ತು, ರಾಗ, ತಾಳಗಳ ಕುರಿತು ವಿದ್ಯೆ ಕಲಿಸಿಕೊಟ್ಟರು, ಪಾರಿಜಾತದ ಎಲ್ಲ ಮಜಲುಗಳನ್ನು ಅರಿತುಕೊಂಡು ಹಿಡಕಲ್‌ದ ಅಪ್ಪಣ್ಣಾ ಮಾಸ್ತರ ಕಂಪನಿ ಸೌದಿ ಮಲ್ಲಯ್ಯನವರ ಕಂಪನಿಗಳಲ್ಲಿ ಕಲಾ ಸೇವೆಯನ್ನು ಮಾಡಿದರು. ಕೆಕೂರ ಸುಲ್ತಾನಸಾಹೇಬ ಹಾಗೂ ಹಿಪ್ಪರಗಿ ಕಂಪನಿಯಲ್ಲಿ ಕಲಾ ಸೇವೆಯನ್ನು ಮಾಡಿ ಎಲ್ಲರ ಗಮನವನ್ನು ಸೆಳೆದವರು. ಇವರ ೪೫ ವರ್ಷಗಳ ಕಲಾ ಸೇವೆಯನ್ನು ಗುರುತಿಸಿ ಕರ್ನಾಟಕ ಬಯಲಾಟ ಅಕಾಡೆಮಿಯು ೨೦೧೭ ನೆಯ ಸಾಲಿನ ಗೌರವ ಪ್ರಶಸ್ತಿ ನೀಡಿ ಗೌರವಿಸಿದೆ.

೬.೩.೫. ಪಾರಿಜಾತ ಕಂಪನಿ ಸಂಘಟಕರಾಗಿ :

ಶ್ರೀಕೃಷ್ಣ ಪಾರಿಜಾತದ ಕಥಾವಸ್ತು ಒಂದು ಹೂವಿನ ಸುತ್ತ ಹೆಣೆದ ಕಥೆ. ಆದರೆ ನೈಜ ಸ್ಥಿತಿಯ ಸಾಮಾಜಿಕ ಹಿನ್ನೆಲೆ, ಭೌಗೋಳಿಕತೆ ಆದರಿಸಿ ಹಾಡುಗಬ್ಬದಿಂದ ಆಟವಾಗಿ ಹೊರಬಂದ ವಿಶೇಷತೆ ಪಾರಿಜಾತದ್ದು. ವಿದ್ವಾಂಸರ, ನಿರ್ದೇಶಕ, ಕಲಾವಿದರ, ಸತತ ಪ್ರಯತ್ನದ ಫಲವಾಗಿ ಉತ್ತರ ಕರ್ನಾಟಕದ ಕೆಲವೇ ಕೆಲವು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಚಾಲ್ತಿಯಲ್ಲಿದೆ.

ಉತ್ತರ ಕರ್ನಾಟಕದ ಬೆಳಗಾವಿ, ವಿಜಯಪುರ, ಬಾಗಲಕೋಟೆಗಳಲ್ಲಿ ಶ್ರೀಕೃಷ್ಣಪಾರಿಜಾತ ಕಂಪನಿಗಳು ಜನಪ್ರಿಯರಂಗ ಪ್ರಕಾರ. ಸ್ಥಳೀಯ ಭಾಷೆ, ಸಂಗೀತ, ನೂತನ ಆಧ್ಯಾತ್ಮಿಕ, ವಿಷಯ ಒಳಗೊಂಡಿರುವ ಕಥೆಯೂ ಮೂಲತಃ ಅಪರಾಳ ತಮ್ಮಣ್ಣ ಮತ್ತು ಶಿರಗುಪ್ಪಿ ಸದಾಶಿವಪ್ಪ ಇಬ್ಬರು ಕವಿಗಳಿಂದ ಪಾರಿಜಾತವು ರಂಗಭೂಮಿಗೆ ಬಂತು. ನಂತರ ಗೋಕಾಕ ತಾಲೂಕಿನ ಕುಲಗೋಡ ತಮ್ಮಣ್ಣನಿಂದ ಪರಿವರ್ತನೆಯಾಗಿ ಯಾದವಾಡ, ಹುಕ್ಕೇರಿ, ಮಹಾಲಿಂಗಪುರ, ಜಮಖಂಡಿ, ಕೌಜಲಗಿ, ಬೆನಕಟ್ಟಿ ಮುಂತಾದ ಕಡೆಗಳಲ್ಲಿ ನೂರಾರು ಕಂಪನಿಗಳು ಹುಟ್ಟಿಕೊಂಡು ಸಾವಿರಾರು ಕಲಾವಿದರು ಬೆಳೆದು ಬಂದರು.

ಪಾರಿಜಾತ ಕಂಪನಿಯ ವಿಶೇಷತೆಯೂ ಕಾಲದಿಂದ ಕಾಲಕ್ಕೆ ಕಲಾವಿದರಿಂದ ಬೆಳವಣಿಗೆ ಪಡೆದು ಕಲಾಸಕ್ತರಿಗಾಗಿ ಪಾರಿಜಾತ ಕಂಪನಿಗಳು ಹುಟ್ಟಿಕೊಂಡವು. ಮೊಟ್ಟಮೊದಲು ಮೇಳ ಕಟ್ಟಿ ಆಡಿದವ ಕುಲಗೋಡ ತಮ್ಮಣ್ಣ, ಅದು ಹೇಗಿತ್ತು ಅಂತ ಕೇಳಿದರೆ ಹೇಳುವ ಸಭಿಕರೆ ಸಿಗುವುದಿಲ್ಲ. ಕೌಜಲಗಿ ನಿಂಗವ್ವ, ಸವದಿ ಮಲ್ಲಯ್ಯ, ಬಡಕುಂದ್ರಿ ಬಸಪ್ಪ, ಕೃಷ್ಣ ದೇಶಪಾಂಡೆ, ಜಮಖಂಡಿ ಅಪ್ಪಾಲಾಲ ನದಾಫ್, ಮಲ್ಲವ್ವ ಮ್ಯಾಗೇರಿ, ಎಲ್ಲವ್ವ ರೊಡ್ಡಪ್ಪನವರ, ಗೋವಿಂದ ಪತ್ತಾರ್ ಕಂಪನಿ, ನಾರಾಯಣ ಬಡಿಗೇರ ಕಂಪನಿ, ಕಾಳಪ್ಪ ಪತ್ತಾರ ಕಂಪನಿ, ಹೀಗೆ ನೂರಾರು ಕಂಪನಿಗಳು ಹುಟ್ಟಿ ಬದುಕಿನ ಏಳು ಬೀಳುಗಳಲ್ಲಿ ಸ್ಥಿತ್ಯಂತರವಾಗುತ್ತಾ ಸಾಗಿದವು. ಬೀಳಗಿ ತಾಲೂಕಿನ ಸೊನ್ನ ಗ್ರಾಮದ ನಾರಾಯಣ ದುಂಡಪ್ಪ ಪತ್ತಾರ್ ಅವರು ಶ್ರೀ ಕಾಳಿಕಾದೇವಿ

ಪಾರಿಜಾತ ನಾಟಕ ಕಂಪನಿಯು ಎರಡು ತಲೆಮಾರಿನವರಿಗೆ ಹವ್ಯಾಸಕ್ಕಾಗಿ ನಾಟಕ ಆಡುತ್ತಾ ಸಾಗಿದವರು. ನಾರಾಯಣ ಪತ್ತಾರ್ ೨೦ ವರ್ಷಗಳ ಕಾಲ ಪೆಟಿಗೆ ಮಾಸ್ತರ್‌ನಾಗಿ ಪಾರಿಜಾತ ಕಂಪನಿಯ ನಿರ್ದೇಶಕನಾಗಿ, ಪಟ್ಟಪಾಡು ಕಷ್ಟಗಳು ಅಷ್ಟೆ ಕಲಾಸಕ್ತರಿಗೆ ಒಳ್ಳೆಯ ಕಲಾವಿದರನ್ನು ತರಿಸಿ ಕಂಪನಿ ಮುನ್ನೆಡೆಸಿ ಮೆಚ್ಚುಗೆಗೆ ಪಾತ್ರರಾದವರು.

"ಕಂಪನಿಗಳ ಮಾಲೀಕರು ಎಂದೂ ಶ್ರೀಮಂತರಾಗಿರಲಿಲ್ಲ. ತಮ್ಮ ಸ್ವಂತ ಆಸ್ತಿ ಮಾರಿಕೊಂಡು ಪಾರಿಜಾತ ಕಂಪನಿ ನಡೆಸಿ ಒಂದು ಹೊತ್ತು ಊಟಕ್ಕೂ ಗತಿಯಿಲ್ಲದೆ ಸತ್ತುಹೋಗಿದ್ದಾರೆ". ಎಂದು ನಾರಾಯಣ ಪತ್ತಾರ್ ಅವರನ್ನು ಸಂದರ್ಶನ ಮಾಡಿದಾಗ ಹೇಳಿದಂತ ಮಾತು. ಪಾರಿಜಾತ ನಾಟಕದ ಪಾತ್ರಧಾರಿಗಳು ತರಬೇತಿ ನೀಡಿ ಅವರಿಗೆ ಸಂಬಳ ನೀಡಿ ಕಂಪನಿಗಳ ಸಂಘಟನೆಯ ಕೆಲಸ ಅದ್ಭುತವಾದದ್ದು. ಇಂತಹ ಪಾರಿಜಾತ ಕಂಪನಿಗಳ ಕುರಿತು ಶಿವಾನಂದ ಶೆಲ್ಲಿಕೇರಿ ಅವರು ಸಂಪಾದಿಸಿದ "ಶ್ರೀಕೃಷ್ಣಪಾರಿಜಾತ ಪ್ರಾತಿನಿಧಿಕ ಕಂಪನಿಗಳ ಬಿಡಿಲೇಖನಗಳು ಸಂಗ್ರಹ" ಪುಸ್ತಕ ಉಪಯುಕ್ತ ಮಾಹಿತಿ ಒದಗಿಸುತ್ತದೆ.[೧೦]

೬.೪. ಸಾಹಿತ್ಯ ಕಲೆಗಳಲ್ಲಿಯ ಪಾಂಚಾಳರ ಕೌಶಲ್ಯಗಳು :

೬.೪.೧. ಪಾಂಚಾಳರ ಸಾಹಿತ್ಯ ಕ್ಷೇತ್ರದ ಜ್ಞಾನಗಳು :

ಮಾನವ ಸಮಾಜದ ಎಲ್ಲ ವರ್ಗಗಳ ಜೊತೆಗೆ ಪಾಂಚಾಳ ಸಮುದಾಯವು ಜೀವನಾವಶ್ಯಕ ಬದುಕನ್ನು ಸಾಗಿಸುವವರು. ಆದರೆ ಬದುಕಿನ ಆಯಾಮಗಳಲ್ಲಿ ಅವರ ಕುಶಲತೆ ಇತರೆ ವರ್ಗಗಳಿಗೆ ಭಿನ್ನವಾಗಿರುತ್ತದೆ. ಪ್ರತಿಯೊಂದು ಗ್ರಾಮದ ಪ್ರಮುಖರಲ್ಲಿ ಪಾಂಚಾಳ ವರ್ಗದ ಮುಖಂಡನಿರುತ್ತಾನೆ. ಗ್ರಾಮ ಸುಧಾರಣೆಗೆ ಅವನ ಪಾತ್ರ ಮುಖ್ಯವಾದದ್ದು. ಪ್ರಕೃತಿಯ ಎಲ್ಲ ವಸ್ತುಗಳನ್ನು ಬಳಸಿಕೊಂಡು ಪಾಂಚಾಳರ ಜ್ಞಾನ ಅಗಾಧವಾದದ್ದು. ಆದ್ದರಿಂದ ಪ್ರಾಚೀನ ಕಾಲದಿಂದ ಅವರು ಕುಶಲ ಕಲೆಗಳಲ್ಲಿ ಕುಶಲತೆಯನ್ನು ಪಡೆದವರು. ಗ್ರಾಮದ ಜನಸಾಮಾನ್ಯರ ಹತ್ತಿರದಲ್ಲಿದ್ದು, ಅವರ ಯೋಗಕ್ಷೇಮದ ಬಗ್ಗೆ ಅವರು ಮಂತ್ರ, ವಾಯುದಾರ ಕಟ್ಟುವುದು, ತೈತಾ, ಜ್ಯೋತಿಷ್ಯ, ಮಾಂಗಲ್ಯ ಕಾರ್ಯಗಳ ಬಗ್ಗೆ ತಿಳಿದವರು.

ಸಾಹಿತ್ಯ ಎಂದರೆ ಶಿಕ್ಷಣಕ್ಕೆ ಪಾಂಚಾಳರೆ ಕಾರಣರು. ಅವರಿಂದಲೇ ಗ್ರಾಮ, ನಾಡು, ಸುಧಾರಣೆಗಳಾಗಿವೆ. ವಿಶ್ವಕರ್ಮನೆ ಗುರುಕುಲದಲ್ಲಿ ಶಿಕ್ಷಣ ಪಡೆದು ಮಹಾಜ್ಞಾನಿಯಾದ ಪುರಾಣಗಳಲ್ಲಿ ಕಂಡುಬರುತ್ತದೆ. ಶರಣರ ಕಾಲದಲ್ಲಿ ಕಮ್ಮಾರ, ಬಡಿಗ, ಪತ್ತಾರ, ಶಿಲ್ಪಿ, ಹಾಗೂ ಕಂಚುಗಾರರ ಕೌಶಲ್ಯತೆಗಳು ಅವರ ಜ್ಞಾನಕ್ಕೆ ಹಿಡಿದ ಕನ್ನಡಿ. ಬಾಗಲಕೋಟೆಯ ಸಾಹಿತಿ ಜಿವನ್ನಾ ಮೊಸಳಿ ಬರಹಗಳು ಹಾಗೂ ಪ್ರಾಚೀನ ಸಾಹಿತ್ಯ ಕೃತಿಗಳಾದ ಪಂಪ ಭಾರತ, ಗದಾಯುದ್ಧ, ಶಬ್ದಮಣಿ ದರ್ಪಣ, ಸಿದ್ಧರಾಮ ಚರಿತ್ರೆ, ಕುಮಾರರಾಮನ ಸಾಂಗತ್ಯ ಮುಂತಾದ ಸಾಹಿತ್ಯ ಕೃತಿಗಳಲ್ಲಿ ಪಾಂಚಾಳರ ಕುರಿತು ಮಾಹಿತಿ ದೊರೆಯುತ್ತದೆ. ಅಲ್ಲದೆ ವಚನಕಾರರು, ತ್ರಿಪದಿಕಾರರು,

ತತ್ವಪದಕಾರರು ಪಾಂಚಾಳರ ವೃತ್ತಿಗಳ ಕುರಿತು ಹಾಗೂ ಅವರು ತಯಾರಿಸುವ ಉಪಕರಣಗಳು ಕುರಿತು ಇತರ ಸಮುದಾಯದವರ ಜೊತೆಗೆ ಬೆರೆತುಕೊಂಡಿರುವ ಉಲ್ಲೇಖಗಳಿವೆ.

ಕೆ.ಜಿ.ಕುಂದಣಗಾರರ ಬರಹಗಳು ಆಧುನಿಕ ನಾಗರಿಕತೆಗೆ ಮುನ್ನುಡಿಯಾಗಿವೆ. ಅದು ಪಾಂಚಾಳ ಸಮುದಾಯದಲ್ಲಿ ಹುಟ್ಟಿ ಬಡಿಗತನ ಮಾಡುತ್ತಾ ಶಿಕ್ಷಣ ಪಡೆದು ಕರ್ನಾಟಕ ಏಕೀಕರಣದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿ, ಶಿಕ್ಷಣ ಕ್ರಾಂತಿ ಮಾಡಿದವರು. ಸಾಹಿತ್ಯದಲ್ಲಿ ಹಲವು ಪ್ರಕಾರದ ಬರವಣಿಗೆಗಳಲ್ಲಿ ಸಾಧನೆ ಮಾಡಿದವರು. ಡಾ.ವಿರುಪಾಕ್ಷ ಬಡಿಗೇರ, ಬೈಲಹೊಂಗಲ, ಧಾರವಾಡ, ಬೆಳಗಾವಿಯಲ್ಲಿ ೩೪ ವರ್ಷ ಸೇವೆಮಾಡಿ ಗದ್ಯ ಸಾಹಿತ್ಯ ಮತ್ತು ಸಂಶೋಧನಾ ಕಾರ್ಯಮಾಡಿದವರು. ಡಾ.ವ್ಹಿ.ವ್ಹಿ ಬಡಿಗೇರ ಬೈಲಹೊಂಗಲದಲ್ಲಿ ಹುಟ್ಟಿ ಬೆಳೆದು ಧಾರವಾಡ ವಿ.ವಿ.ಯಲ್ಲಿ ರಿಜಿಸ್ಟರ್, ಬೋಧಕರಾಗಿ, ಸಾಹಿತಿಗಳಾಗಿ ಸೇವೆ ಸಲ್ಲಿಸಿದವರು.

೬.೪.೧.೧. ಸಾಹಿತ್ಯ :

"ಆಡು ಮುಟ್ಟದ ಸೊಪ್ಪಿಲ್ಲ, ವಿಶ್ವಕರ್ಮರು ಕೈಹಾಕದ ಕ್ಷೇತ್ರಗಳಿಲ್ಲ" ಎಂಬ ಮಾತು ಸೂರ್ಯನಷ್ಟೇ ಸತ್ಯ. ಇದಕ್ಕೆ ಸಾಹಿತ್ಯವೂ ಹೊರತಲ್ಲ. ಸಾಹಿತ್ಯ ನಿಂತ ನೀರಲ್ಲ ಅದು ಅವ್ಯಾಹತವಾಗಿ ಹರಿಯುತ್ತಿರುವ ಜೀವಂತ ವಾಹಿನಿ. ಆದ್ದರಿಂದ ಅದು ಕಾಲ ಕಾಲಕ್ಕೆ ತನ್ನ ದಿಕ್ಕು ದೆಶೆಗಳನ್ನು ಬದಲಾಯಿಸುತ್ತಿರುತ್ತದೆ. ಒಬ್ಬ ವ್ಯಕ್ತಿ ಒಂದು ಪಂಥದವರಿಗೆ ರಚಿತವಾದ ಸಾಹಿತ್ಯ. ಆಯಾ ಕಾಲ ಜೀವನ ಪರಿಸರಕ್ಕೆ ತಕ್ಕಂತೆ ನವ ನವೋನ್ಮೇಶಶಾಲಿಯಾಗಿ ಹೊಸ ಹೊಸ ಬದುಕಿಗೆ ಪ್ರತಿಭೆಗಳು ಹುಟ್ಟುತ್ತವೆ. ರೂಪವನ್ನು ಧರಿಸಿ ನಿಲ್ಲುತ್ತವೆ. ಆಯಾ ಕಾಲದ ಸಾಹಿತ್ಯ ಬೆಳವಣಿಗೆಯು ಒಂದು ಭಾಗವಾಗಿರುವುದರ ಜೊತೆಗೆ ಆಯಾ ಕಾಲದ ಸಾಂಸ್ಕೃತಿಕ ಚರಿತ್ರೆಯ ರಚನೆಗೆ ಸಹಾಯವಾಗುತ್ತದೆ. ಸುಮಾರು ೨೦೦೦ ಸುದೀರ್ಘ ಇತಿಹಾಸವುಳ್ಳ ನಮ್ಮ ಕಸ್ತೂರಿ ಕನ್ನಡ ಸಾಹಿತ್ಯ ಇದಕ್ಕೆ ಹೊರತಲ್ಲ. ಪ್ರಾಚೀನ ಕಾಲದಿಂದಲೂ ಸರ್ವ ಧರ್ಮ ಸಮನ್ವಯ ನಾಡು. ಈ ನಾಡು ನುಡಿ ಸಂಸ್ಕೃತಿಗೆ ಎಲ್ಲಾ ಧರ್ಮಗಳು, ಸಮುದಾಯಗಳು ತಮ್ಮದೆಯಾದ ಕೊಡುಗೆ ನೀಡಿವೆ. ಇದಕ್ಕೆ ವಿಶ್ವಕರ್ಮರು ಹೊರತಲ್ಲ.

೬.೪.೧.೨. ಹಾವಿನ ಹಾಳ ಕಲ್ಲಯ್ಯ :

ಅರಿವೆ ಗುರು ಆಚಾರವೆ ಶಿಷ್ಯ ಜ್ಞಾನವೇ ಲಿಂಗ
ಪರಿಣಾಮವೇ ತಪ ಸಮತೆಯೆಂಬುದು ಯೊಗದಾಗು ನೋಡಾ.
ಈಸುವನರಿಯಡೇ ವೇಷವ ಧರಿಸಿ ಲೋಚು ಬೋಳಾದೊಡೆ
ಮಹಾಲಿಂಗ ಕಲೇಶ್ವರ ದೇವರು ನಗುವರು.

ಈ ವಚನದ ಕರ್ತೃ ಹಾವಿನ ಹಾಳ ಕಲ್ಲಯ್ಯ, ವಿಶ್ವಕರ್ಮ(ಅಕ್ಕಸಾಲಿಗ) ಮನೆತನದವರು. ತಂದೆ,ಶಿವನಯ್ಯ ತಾಯಿ, ಸೋಮವ್ವೆವೆಂಬ ವಿಶ್ವಕರ್ಮ ದಂಪತಿಗಳ ಮಗ ಕಲ್ಲಯ್ಯ. ಹಾವಿನ

ಹಾಳದ ಕಲ್ಲಿನಾಥ ಇವರ ಆರಾಧ್ಯ ದೈವ. ಈ ಶರಣರು ಶೈವ ಪರಂಪರೆಯ ಕಾಯಕ, ಆಧ್ಯಾತ್ಮ ಯೋಗಿಯಾಗಿದ್ದನು.

೬.೪.೧.೩. ಶ್ರೀ ನೀಲಕಂಠ ಪತ್ತಾರ :

ಸಣ್ಣಾಟದ ಮೂಲ ಡಪ್ಪಿನಾಟ, ಭವ್ಯರಂಗಭೂಮಿಯ ಮೇಲೆ ಸಣ್ಣದಾಗಿ ಕಂಡದ್ದು ಸಣ್ಣಾಟವಾಯಿತು. ಈ ಡಪ್ಪಿನಾಟಗಳನ್ನು ಸ್ವತಃ ಕವಿಯೇ ನಾಟಕಗಳ ರೂಪದಲ್ಲಿ ಹಾಡು, ಮಾತುಗಳನ್ನು ಹೆಣೆದು ಬರೆಯುವ ಪರಂಪರೆ ಪ್ರಾರಂಭವಾದದು ಕಾದ್ರೋಳ್ಳಿಯ ನೀಲಕಂಠಪ್ಪನಿಂದ. ಕ್ರಿ.ಶ. ೧೯೨೦ರಲ್ಲಿ ಇವರು ರಚಿಸಿದ "ತಿರುನೀಲಕಂಠ" ಎಂಬ ಡಪ್ಪಿನಾಟದ ಬೆಳವಣಿಗೆಯು ಹೊಸ ಮನ್ವಂತರಕ್ಕೆ ಕಾರಣವಾಯಿತು.[೧೧]

೬.೪.೧.೪. ಶ್ರೀ ಪತ್ತಾರ ಮಾಸ್ತಾರ :

ಸಂಗ್ಯಾ ಬಾಳ್ಯಾ ಎಂಬ ಸಣ್ಣಾಟವನ್ನು ರಚಿಸಿದವರು. ಬೈಲಹೊಂಗಲದ ಸಮೀಪದ ಬೈಲವಾಡ (ಗಂಗಿಯ ತವರೂರು) ಎಂಬ ಊರು ಪತ್ತಾರ ಮಾಸ್ತರವರದು. ಉತ್ತರ ಕರ್ನಾಟಕದ ಜನ-ಮನ ಸೂರೆಗೊಂಡ, "ಸಂಗ್ಯಾ ಬಾಳ್ಯಾ" ಎಂಬ ಸಣ್ಣಾಟದ ರಚನೆಕಾರರ ಬಗ್ಗೆ ಹೆಚ್ಚಿನ ಮಾಹಿತಿ ತಿಳಿಯದು. ಕವಿ ಸಮುದಾಯದಿಂದ ಪತ್ತಾರನಾಗಿದ್ದು ಅವರ ನಿಜವಾದ ಹೆಸರು ತಿಳಿದು ಬಂದಿಲ್ಲ. ಅವನ ವಂಶದವರು ಮೂಲತಃ ಗದುಗಿನವರು ಅಲ್ಲಿಂದ ಬೈಲವಾಡಕ್ಕೆ ಬಂದಿರಬಹುದು.[೧೨]

೬.೪.೧.೫. ಡಾ. ಕೆ ಜಿ ಕುಂದಣಗಾರ : :

ಉತ್ತರ ಕರ್ನಾಟಕದ ಪ್ರಥಮ ಕನ್ನಡ ಪ್ರಾಧ್ಯಾಪಕ ಕೆ.ಜಿ.ಕುಂದಣಗಾರರು. ಕನ್ನಡ ಭಾಷೆ ಸಂಸ್ಕೃತಿ, ಇತಿಹಾಸಗಳ ಮೊದಲ ಸಾಲಿನ ಸಮರ್ಥ ಸಂಶೋಧಕ. ಪ್ರಾಚ್ಯವಸ್ತು ತಜ್ಞ, ಕನ್ನಡದ ಅಭಿವೃದ್ಧಿಗೆ ತನ್ನ ಇಡೀ ಬದುಕನ್ನು ಗಂದದ ಕೊರಡಾಗಿ ಸವೆಸಿದ. ವಿಶ್ವಕರ್ಮರ ಹೆಮ್ಮೆಯ ಪುತ್ರರಾದ ಡಾ.ಕೆ.ಜಿ. ಕುಂದಣಗಾರರು ಯಾರಿಂದಲೂ ಏನನ್ನು ಬಯಸದ ಸದ್ದು ಗದ್ದಲವಿಲ್ಲದೆ "ಎಲೆಯ ಮರೆಯ ಹೂವಾಗಿ ಹೋದವರು". ಕುಂದಣಗಾರ ಬದುಕಿದ್ದಾಗ ಕನ್ನಡಿಗರಿಗೆ ಕಾಣಲಿಲ್ಲ. ಸುವರ್ಣ ಕರ್ನಾಟಕದ ಸಂಭ್ರಮಾಚರಣೆಯ ಸಂದರ್ಭದಲ್ಲಿ ನಿರ್ಲಕ್ಷಿತ ಕನ್ನಡಿಗ, ಕುಂದಣಗಾರರನ್ನು ಬಿಟ್ಟರೆ ಮತ್ತೊಬ್ಬನಿಲ್ಲ, ಎಂದೇ ಹೇಳಬಹುದು. ಉತ್ತರ ಕರ್ನಾಟಕದಲ್ಲಿ ಕನ್ನಡಕ್ಕೆ ಸ್ಥಾನಮಾನ ಇಲ್ಲದಂತಹ ಕಾಲದಲ್ಲಿ ಕನ್ನಡದ ಉಳಿವಿಗಾಗಿ ಹೋರಾಡಿದ, ಡಾ.ಪಿ.ಜಿ ಹಳಕಟ್ಟಿ, ಶ್ರೀ.ಬಸನಾಳ, ಶ್ರೀ ಡೆಪ್ಯೂಟಿ ಚನ್ನಮಲ್ಲಪ್ಪಾ, ಪ್ರೊ ಕುಂದಣಗಾರ ಮೊದಲಾದವರು ಶ್ರಮದ ಸಾಧನೆಯಿಂದಾಗಿ ಕನ್ನಡ ಕಾಲೂರಿತೆಂದು ಹೇಳಬಹುದು. ಹೊಸ ಹೊಸ ಕ್ಷೇತ್ರಗಳನ್ನು ಭದ್ರ ತಳಪಾಯ ಹಾಕಿ ಕನ್ನಡ ನಾಡಿನ ಗುಡಿಯನ್ನು ನೋಡುವಾಗ ಅಡಿಗಲ್ಲನ್ನು ಯಾರು ಗಮನಿಸುತ್ತಾರೆ? ಕನ್ನಡ ಗುಡಿಯ ಅಡಿಗಲ್ಲಾದ ಕುಂದಣಗಾರರು-ಬೆಳಗಾವಿ ಜಿಲ್ಲೆಯ ಗೋಕಾಕ

ತಾಲೂಕಿನ ಚಿಕ್ಕಹಳ್ಳಿಯಾದ ಕೌಜಲಗಿಯಲ್ಲಿ ಅವಿಭಕ್ತ ವಿಶ್ವಕರ್ಮ (ಪತ್ತಾರ) ಮನೆತನದಲ್ಲಿ ತಂದೆ ಗಿರಿಮಲ್ಲಪ್ಪಾ, ತಾಯಿ ಶಾಕಂಬರಿ, ದಂಪತಿಗಳ ಮಗನಾಗಿ ಜನಿಸಿದರು. ಬಾಲ್ಯದಲ್ಲಿ ತಂದೆ-ತಾಯಿ, ಅಣ್ಣಂದಿರು, ತಂಗಿಯನ್ನು ಕಳೆದುಕೊಂಡು ಕಕ್ಕನಾದ ನಿಂಗಪ್ಪನ ಆಶ್ರಯದಲ್ಲಿ ಬೆಳೆದರು. ಸ್ವಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ೧೯೦೯ರಲ್ಲಿ ಮ್ಯಾಟ್ರಿಕ್ ಪಾಸಾದರು. ೧೯೧೪ರಲ್ಲಿ ಕಮಲಾಬಾಯಿಯೊಂದಿಗೆ ಮದುವೆಯಾಯಿತು. ೧೯೧೯ರಲ್ಲಿ ಫಿಜಿಕ್ಸ್, ಕೆಮಿಸ್ಟ್ರಿ, ಇಂಗ್ಲೀಷ ವಿಷಯಗಳೊಂದಿಗೆ ಬಿ.ಎ.ಪದವೀಧರರಾಗಿ ೧೯೧೭ರಲ್ಲಿ ಧಾರವಾಡದ ಕರ್ನಾಟಕ ಕಾಲೇಜು ಆರಂಭಿಸಿದ್ದರು. ೧೯೨೫ರಲ್ಲಿ ಆ ಕಾಲೇಜಿನಲ್ಲಿ ಕುಂದಣಗಾರರು ಉತ್ತರ ಕರ್ನಾಟದ ಪ್ರಥಮ ಕನ್ನಡ ಪ್ರಾಧ್ಯಾಪಕರಾದರು. ಕೊಲ್ಲಾಪೂರ, ವಿಜಾಪೂರ, ಬೆಳಗಾವಿ ಜಿಲ್ಲೆಗಳಲ್ಲಿ ಕಾಲ್ನಡಿಗೆಯಲ್ಲಿ ತಿರುಗಾಡಿ ಶಾಸನ, ಮೂರ್ತಿ, ತಾಳೆಯೋಲೆ, ನಾಣ್ಯ, ಹಸ್ತಪ್ರತಿ ಮುಂತಾದಗಳನ್ನು ಸಂಗ್ರಹಿಸಿದರು. ೨೧ ವರ್ಷಗಳವರೆಗೆ ಕೊಲ್ಲಾಪೂರದಲ್ಲಿದ್ದು ಪ್ರಾಚ್ಯವಸ್ತುಗಳನ್ನು ಸಂಗ್ರಹಿಸಿದರು.

ಸಾಹಿತ್ಯಿಕ ಸೇವೆ : ಶಾಸನ ಸಾಹಿತ್ಯ ಕೃತಿಗಳು ಸುಮಾರು ೪೩ ಶಾಸನಗಳು ಐತಿಹಾಸಿಕ, ಸಾಂಸ್ಕೃತಿಕ, ಹಾಗು ಸಂಶೋಧನಾ ಕೃತಿಗಳು. ಗ್ರಂಥ ಸಂಪಾದನೆ, ಕುಮುದೆಂದು ರಾಮಾಯಣ, ಹತ್ತಿಮಲ್ಲಾಚಾರ್ಯರ ಪೂರ್ವ ಪುರಾಣ, ಲೀಲಾವತಿ ಪ್ರಬಂಧ, ಪಂಪನ ಆದಿಪುರಾಣ, ಮುಂತಾದವುಗಳು. ಸರಸ್ವತಿ(ಕಾದಂಬರಿ) ಅಕ್ಕಮಹಾದೇವಿ (ನಾಟಕ) ಕಣ್ಣು, ಅಚಾದೇವ ಮಹಾತ್ಮೆ (ಲಲಿತ ಪ್ರಬಂಧ)ಮುಂತಾದವುಗಳು.

ಗದುಗಿನಲ್ಲಿ ನಡೆದ ೪೩,ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಇವರಿಗೆ ದೊರೆತ ಗೌರವವಾಗಿದೆ. ಉತ್ತರ ಕರ್ನಾಟಕದ ತುಂಬ ಅವರ ಹೆಸರು ಹೇಳಿ ದೀಪ ಹಚ್ಚುತ್ತಿರುವ ಅಪಾರ ವಿದ್ಯಾರ್ಥಿ ಬಳಗವಿದೆ. ಕರ್ನಾಟಕದ ಪ್ರಸಿದ್ಧ ಸಾಹಿತಿ ವ್ಯಕ್ತಿಯ ಹೆಸರು ಹೇಳಿದರು. ಅವರು ಪ್ರೋ. ಕುಂದಣಗಾರರ ವಿದ್ಯಾರ್ಥಿ ಇರಲೇಬೇಕು. "ಇವರ ಸಂಬಳದ ಮೂರರ ಒಂದು ಪಾಲು ಬಡ ವಿದ್ಯಾರ್ಥಿಗಳಿಗೆ, ಇನ್ನೊಂದು ಪಾಲು ಪುಸ್ತಕಕ್ಕೆ, ಉಳಿದ ಪಾಲು ಚಟ್ನಿ ರೊಟ್ಟಿಯ ಸಂಸಾರಕ್ಕೆ ಉಪಯೋಗವಾಗುತ್ತಿತ್ತು." ಇವರ ಅಚ್ಚುಕಟ್ಟುತನ. ನಿಯಮಿತನ ಹಾಗೂ ವಿನಯ ಸಂಪನ್ನತೆಗಳು "ಕೈಯಲ್ಲಿ ಸೂರ್ಯನನ್ನು ಹಿಡಿದು ಹುಡುಕಿದರು ಇನ್ನೆಲ್ಲೊ ಕಾಣದೊರೆಯವೂ" ಎಂಬ ಡಾ. ಎಮ್.ಜಿ. ಬಿರಾದರ (ಕುಂದಾಣಗಾರರ ಪಿಎಚ್.ಡಿ. ವಿದ್ಯಾರ್ಥಿ ೧೯೨೪ರಲ್ಲಿ) ಪ್ರಸ್ತಾಪಿಸಿದ ಮಾತು ನಿಜಕ್ಕೂ ಅವಿಸ್ಮರಣೀಯ. ಕಡು ಬಡತನದ ಅನುಭವದಲ್ಲಿಯೂ ವಿನಯಶೀಲರಾಗಿ ಸ್ವ ಸಾಮ್ಯಾರ್ಥ್ಯ, ಸತತ ಪರಿಶ್ರಮ, ಸಹನೆಯಿಂದ ಮಹಾಸಾಧನೆ ಗೈದ, ವಿಶ್ವಕರ್ಮ ಕುಲದೀಪ ಪ್ರೋ. ಕುಂದಣಗಾರರು ೧೯೬೫ರ ಆಗಸ್ಟ್ ೨೨ ರಂದು ವಿಶ್ವಕರ್ಮನ ಪಾದ ಸೇರಿದರು.

೬.೪.೧.೬. ದಿ.ಶ್ರೀ ರಮೇಶ ಪತ್ತಾರ :

ಶ್ರೀಯುತರು ಬಾಗಲಕೋಟೆ ಜಿಲ್ಲೆಯ ಹಿರೇಬೂದಿಹಾಳ ಗ್ರಾಮದಲ್ಲಿ ದುಂಡಪ್ಪಾ ಹಾಗೂ ದಾನಮ್ಮ ದಂಪತಿಗಳ ಮಗನಾಗಿ ೧೦-೧೦-೧೯೫೧ ರಲ್ಲಿ ಜನಿಸಿದರು. ಜಮಖಂಡಿ ತಾಲೂಕಿನ ಒಂದು ಪುಟ್ಟ ಗ್ರಾಮವಾದ ಆಲಗೂರದಲ್ಲಿರುವ ದುಂಡಪ್ಪಾರವರು ಗ್ರಾಮ ಪಂಚಾಯಿತಿಯ ಕೆಲಸದಲ್ಲಿ ಸಮಾಜ ಸೇವೆ ಮಾಡುತ್ತಾ. ಕುಲಕಸಬಾದ ಬಂಗಾರದ ಕೆಲಸ ಮಾಡುತ್ತಿದ್ದರು. ತಾಯಿ ದಾನಮ್ಮ ಕಸೂತಿ ಕೆಲಸ ಮಾಡುತ್ತಿದ್ದರು. ಜನಪದ ಹಾಡುಗಳನ್ನು ಹಾಡುವುದು ಇವರ ಹವ್ಯಾಸವಾಗಿತ್ತು. ನನ್ನ ಮಗ ಸರದಾರ ಮಾಮಲೆದಾರ ನನ್ನ ಮಗ ಸರಕಾರ ಎಂದೆನ್ನುವ ಹಲವು ಜನಪದ ಗೀತೆಗಳನ್ನು ಹಾಡುತ್ತ, ಮಗ ರಮೇಶರ ಬಗ್ಗೆ ಭವಿಷ್ಯದ ಕನಸ್ಸನ್ನು ಕಾಣುತ್ತಿದ್ದರು. ಆಗಲೇ ರಮೇಶ ನಾರಾಯಣ ಮತ್ತು ಕೃಷ್ಣನ ಪಾತ್ರಗಳನ್ನು ಮಾಡುತ್ತಾ ಜನರ ಮನಗೆದ್ದನು.

ಶಿಕ್ಷಣ : ೫ ನೆಯ ತರಗತಿಯಿಂದ ೧೦ನೆ ತರಗತಿಯವರೆಗೆ ಚಿಕ್ಕಪಡಸಲಗಿಯಲ್ಲಿ ಪಡೆದು, ಪಿ.ಬಿ ಹೈಸ್ಕೂಲ್ ಜಮಖಂಡಿಯಲ್ಲಿ ಪಿ.ಯು.ಸಿ. ಪ.ಪೂ ಕಾಲೇಜು ಜಮಖಂಡಿಯಲ್ಲಿ, ಎಂ.ಎ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದರು. ೧೯೭೨ ರಲ್ಲಿ ಸೌ. ಶಾಮಲಾ ಅವರ ಜೊತೆ ವಿವಾಹ. ಮಹೇಂದ್ರ, ತ್ರೀವೇಣಿ ರಾಜಲಕ್ಷೀ ಇಬ್ಬರು ಮಕ್ಕಳು.

ವೃತ್ತಿ : ಕ್ರಿ.ಶ.೧೯೭೭ ರಲ್ಲಿ ಬೆಳಗಾವಿ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಪ್ರೊಬೇಷನರಿ ತಹಶಿಲ್ದಾರರಾಗಿ ಸೇವೆ. ೨೦೦೦ ಇಸ್ವಿಯಲ್ಲಿ ಬಡ್ತಿಯಾಗಿ ಜಿಲ್ಲಾಧಿಕಾರಿಯಾದರು. ೨೧.೦೧.೨೦೦೬ ರಲ್ಲಿ ಶ್ರೀಯುತರು ವಿಶ್ವಕರ್ಮ ಸ್ವಾಯುಜ್ಯ ಹೊಂದಿದ್ದರು.

ಹೆಚ್ಚು ಕವಿತೆಗಳು, ಗುಲಾಬಿಮಾರಿ ಭಿಕ್ಷೆ, ಸ್ವಾತಂತ್ರದೀಪ, ಮರಳಿ ಕವಿ ಮುಂತಾದವು.

ಬಿತ್ತದೆ ಬೆಳೆದವರು, ಮರೀಚಿಕೆ ಸ್ಮಶಾನ ಶವಸಂಸ್ಕಾರಲಯ ಮತ್ತು ಪುನರನಿರ್ಮಾಣ ಬಲಿಪಶು ಮುಂತಾದ ಕಥೆಗಳು. ವಿಫಲ ಭಾವಿ ಪ್ರತಿಫಲ-ನಾಟಕಗಳನ್ನು ರಚಿಸಿದರು.

೬.೪.೧.೭. ಡಾ. ಚಂದ್ರಶೇಖರ ಕಂಬಾರ :

ಕಾಯಕವೇ ಕಮ್ಮಾರ ಕಾಶಯವೇ ಹೊಲೆ ಮಾದಿಗ ಎನ್ನುವ ಹಾಗೆ ಜಾತಿ ಮದ ಮತ್ತು ಕುಲ ಮದ ಮೀರಿದ ಸತ್ಯಶುದ್ಧ ಕಾಯಕ ಮೂಲವಾದ ಛಲ ನಿಷ್ಟೆಗಳ ಕ್ರಿಯಾಮೂಲ ಸ್ಥಿತಿಯನ್ನು ಕಂಬಾರರಲ್ಲಿ ಕಾಣುತ್ತೇವೆ. ಕನ್ನಡ ವಿಶ್ವವಿದ್ಯಾಲಯ(ಹಂಪಿ) ಅದೊಂದು ವಿಶ್ವಕರ್ಮನ ಪ್ರತಿಸೃಷ್ಟಿ, ಅದರ ರೂವಾರಿ ಮನುವಿನತಾರಿ ಕಂಬಾರರು (ಡಾ. ವೀರೇಶ ಬಡಿಗೇರ ೧೩) ಡಾ. ವಿರೇಶ ಬಡಿಗೇರರವರ ಮರೆಯಾದ ಏರಿಯಾದ ಬೆಳೆದ ಕರಿಕಿಯಾಂಗ ಸದಾನಳನಳಿಸುವ ಮೈ ಮನ ಹುರಿಗೊಂಡ ಪರಿಪೂರ್ಣ ಬದುಕು ಕಂಬಾರರದು ಎಂಬ ಮಾತು ಒಪ್ಪತಕ್ಕದ್ದು.

ಯಾರೇನು ಆಡಿದರು ಗಾದಿ ನಾಣ್ಣುಡಿಯಾಗಿ

ವಾಡಿಕೆಯಾದವು ನಾಡೊಳಗೆ

ಕರಿಯಜ್ಜ ಹಾಕಿದ ಗೆರಿಗೋಳ ಯಾರ್‍ಯಾರು

ದಾಟಿಲ್ಲ ಹದಿನಾಕು ಹಳ್ಳಿಯೊಳಗೆ (ಹೇಳತೇನ ಕೇಳು) ಎಂಬ ಕವಿತೆಯ ಸಾಲುಗಳು ಮನಿ ಮನಿಗೆ ನಡುವಡದಡೆ ಗೆರಿಯಿಲ್ಲದ ಸಮತೂಕದ ಸಹಬಾಳ್ವೆಯ ಸಮೃದ್ಧದ ನೆಲೆಯಾದ ಕಂಬಾರರ ಹುಟ್ಟುರಾದ ಘೋಡಗೇರಿ ಗ್ರಾಮವನ್ನು (ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕು) ನೆನಪಿಸುತ್ತಿದೆ.

ಕಂಬಾರರ ಜನನ : ೦೨-೦೧-೧೯೩೭ ರಂದು ಶ್ರೀ ಬಸವಣ್ಣೆಪ್ಪ ಕಂಬಾರ ಮತ್ತು ಚನ್ನವ್ವ ಎಂಬ ವಿಶ್ವಕರ್ಮ ದಂಪತಿಗಳ ಮಗನಾಗಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಘೋಡಗೇರಿಯಲ್ಲಿ ಜನಿಸಿದರು.

ವಿದ್ಯಾಭ್ಯಾಸ: ಪ್ರಾಥಮಿಕ ವಿದ್ಯಾಭ್ಯಾಸ-ಸ್ವಗ್ರಾಮ ಘೋಡಗೇರಿಯಲ್ಲಿ. ಪ್ರೌಢ ಶಿಕ್ಷಣ- ಮುನಸಿಪಲ್ ಶಾಲೆ. ಗೋಕಾಕ ಪದವಿ. ಬಿ.ಎ, ಲಿಂಗರಾಜ ಕಾಲೇಜು ಬೆಳಗಾವಿ. ಎಂ.ಎ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೭೫ ರಲ್ಲಿ ಕರ್ನಾಟಕದ ಜನಪದ ರಂಗಭೂಮಿ ಹುಟ್ಟು ಮತ್ತು ಬೆಳವಣಿಗೆ ಎಂಬ ವಿಷಯದ ಕುರಿತು ಸಂಶೋಧನಾ ಮಹಾ ಪ್ರಬಂಧವನ್ನು ಮಂಡಿಸಿ ಪಿಎಚ್.ಡಿ ಪಡೆದರು.

ಡಾ. ಕಂಬಾರರನ್ನು ಅರಸಿಬಂದ ವೃತಿ/ಪದವಿಗಳು :

* ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ ಹಾಗೂ ನಾಟಕ ಅಕಾಡೆಮಿ ಸದಸ್ಯರು(೧೯೮೨-೮೩)
* ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರು (೧೯೮೩-೮೪)
* ಮೈಸೂರು ಕರ್ನಾಟಕ ನಾಟಕ ರಂಗಾಯಣದ ಸದಸ್ಯರು (೧೯೮೭-೯೧)
* ಕೇಂದ್ರ ಸಾಹಿತ್ಯ ಅಕಾಡೆಮಿ-ನವ ದೆಹಲಿ (ಕಾರ್ಯ ನಿರ್ವಾಹಕ)-೧೯೯೨ ಮತ್ತು ೧೯೮೮
* ಸಂಗೀತಾ ನಾಟಕ ಅಕಾಡೆಮಿ ನವದೆಹಲಿ (ಕಾರ್ಯ ನಿವಾಹಕ ಸದಸ್ಯರು)-೧೯೯೨ಮತ್ತು ೧೯೯೮
* ಸಂಸ್ಥಾಪಕ ಕುಲಪತಿ-ಕನ್ನಡ ವಿಶ್ವವಿದಾಲಯ ಹಂಪಿ-೧೯೯೧-೧೯೯೮

ಸಾಹಿತ್ಯಿಕ ಸೇವೆ :

ಮುಗಳು (೧೯೫೮) ಹೇಳೆತೇನ (೧೯೬೪) ತಕರಾರಿನವರು(೧೯೭೧) ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಸಾವಿರದ ನೆರಳು (೧೯೭೯) (೧೯೮೨ರ ಕೇರಳದ ಆಸಾನ್ ಪ್ರಶಸ್ತಿ) ಆಯ್ದ ಕವನಗಳು (೧೯೮೦) ಬೆಳ್ಳಿಮೀನು(೧೯೯೪) ಎಲ್ಲಿದೆ ಶಿವಪೂರ (೨೦೦೯) ಇವು ಇವರ ಸಂಕಲನಗಳು

ಕಾವ್ಯ :

೧೯೯೬ ರಲ್ಲಿ ಚಕೋರಿ ಮಹಾಕಾವ್ಯ ಪ್ರಕಟಗೊಂಡಿತು (ಪ್ರೋ.ಓ.ಎಲ್.ನಾಗಭೂಷಣ ಮತ್ತು ಡಾ. ಪ್ರಣವ ಮುಂಜಾರಿ ಉಮಾಪತಿರವರು ಇಂಗ್ಲೀಷಿಗೆ ಅನುವಾದಿಸಿದ್ದಾರೆ.)

ನಾಟಕ :

ಬೆಂಬತ್ತಿದ ಕಣ್ಣು (೧೯೬೧) ಋಷ್ಯಶೃಂಗ-(೧೯೭೦) ಜೋಕುಮಾರ ಸ್ವಾಮಿ (೧೯೭೨) ಜೈಸಿದ ನಾಯಕ (ರಾಜ್ಯ ಸಾಹಿತ್ಯ ಅಕಾಡೆಮಿ ಮತ್ತು ವರ್ಧಮಾನ ಪ್ರಶಸ್ತಿ ಕಾಡುಕುದುರೆ (೧೯೭೬) ನಾಯಿಕಥೆ (೧೯೭೫)

ಕಾದಂಬರಿಗಳು :

ಅಣ್ಣ ತಂಗಿ(೧೯೫೬)ಕರಿಮಾಯಿ (೧೯೭೫)

ಸಂಶೋಧನೆಗಳು/ಲೇಖನಗಳು

೧೯೬೫-ಉತ್ತರ ಕನಾಟಕದ ಜಾನಪದ ರಂಗಭೂಮಿ ೧೯೬೬-ಸಂಗ್ಯಾ ಬಾಳ್ಯಾ ೧೯೭೩-ಮಾತಾಡೋ ಲಿಂಗವೆ ೧೯೮೦-ನಮ್ಮಜಾನಪದ ೧೯೮೬ಬೇಡರ ಹುಡುಗ ಮತ್ತು ಗಿಳಿ

ಪ್ರಶಸ್ತಿ-ಪುರಸ್ಕಾರಗಳು :

* ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು(೫)
* ೧೯೭೫- ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ (ಜೋಕುಮಾರ ಸ್ವಾಮಿ)
* ೧೯೭೫-ವರ್ಧಮಾನ ಪ್ರಶಸ್ತಿ (ಜೈ ಸಿದ್ಧ ನಾಯಕ)
* ೧೯೮೨-ಆಶಾನ್ ಪ್ರಶಸ್ತಿ-ಕೇರಳ ಸರ್ಕಾರ (ಸಾವಿರದ ನೆರಳು)
* ೧೯೮೭-ನಂದಿಕಾರ ಸನ್ಮಾನ (ಕಲ್ಕತ್ತಾ) ಕನಾಟಕದ ನಾಟಕ ಅಕಾಡೆಮಿ ಪ್ರಶಸ್ತಿ
* ೧೯೮೮-ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ
* ೧೯೩೧-ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ಸಿರಿಸಂಪಿಗೆ)
* ಭಾರತ ಸರಕಾರ ಪದ್ಮಶ್ರೀ ಕಬೀರ್ ಸಮ್ಮಾನ್
* ೨೦೦೪ ಪಂಪ ಪ್ರಶಸ್ತಿ, ನಾಡೋಜ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ಉತ್ತರ ಕರ್ನಾಟಕದ ಗ್ರಾಮೀಣ ಸೊಗಡನ್ನು ಬರವಣಿಗೆಯ ಮೂಲಕ ಸಾಹಿತ್ಯದ ಸೊಬಗಾಗಿ ಪರಿವರ್ತಿಸಿರುವ ಬಹುಮುಖ ಪ್ರತಿಭೆಯ ಡಾ. ಕಂಬಾರ ಅವರಿಗೆ ಈ ಭಾರಿಯ ೨೦೧೧ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ ಜೀವನದ ಒಳನೋಟಗಳನ್ನು, ಏರಿಳಿತಗಳನ್ನು ಒಳಗಣ್ಣಿನಿಂದ ನೋಡಿ ಅವುಗಳಿಗೊಂದು ಚಾರಿತ್ರಿಕ ಚೌಕಟ್ಟನ್ನು ಒದಗಿಸಿದ್ದು, ಅವರು ದೀರ್ಘ ಕಾಲ ತಮ್ಮನ್ನು ತಾವೇ ತೊಡಗಿಸಿಕೊಂಡ ಸಾಹಿತ್ಯ ತಪಸ್ಸಿನ ಫಲವಾಗಿದೆ.

೬.೪.೧.೮. ಡಾ. ಕೆ.ಪಿ. ಈರಣ್ಣ :

ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಸಾಲವಾಡಗಿಯಲ್ಲಿ ಜನನ. ಡಾ ಕೆ.ಪಿ. ಈರಣ್ಣರವರು ಮೈಸೂರು ವಿಶ್ವವಿದ್ಯಾಲಯದಿಂದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರದಲ್ಲಿ ಎಮ್ ಎ. ಪದವಿಯನ್ನು ಪಡೆದರು. ಕನಾಟಕ ವಿಶ್ವವಿದ್ಯಾಲದಿಂದ ಪಿ.ಎಚ್.ಡಿ ಪದವಿ ಪಡೆದರು. ಕರ್ನಾಟಕ ವಿ.ವಿ ದಲ್ಲಿ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಾಹಿತ್ಯಿಕ ಸೇವೆ : ಶಾಸನೋಕ್ತ ವಿಶ್ವಕರ್ಮ ವೀರರು, ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ, ಮೌನೇಶ್ವರ ಹಾಗೂ ಸರ್ವಜ್ಞ, ಮಹಾತ್ಮ ಮೌನೇಶ್ವರ ವಚನಗಳು, ದಕ್ಷಿಣ ಕಾಶಿ ಶ್ರೀಕ್ಷೇತ್ರ ತಿಂಥಿಣಿ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

೬.೪.೧.೯. ಡಾ. ವಿರುಪಾಕ್ಷ ಬಡಿಗೇರ :

ಶ್ರೀಯುತರು ಬೈಲಹೊಂಗಲ ತಾಲೂಕಿನ ಚೆನ್ನಮ್ಮನ ಕಿತ್ತೂರಿನಲ್ಲಿ ಶ್ರೀ ಬಾಳಪ್ಪ ಮತ್ತು ಗಂಗಾದೇವಿಯರ ಹನ್ನೊಂದನೆಯ ಮಗನಾಗಿ ೨೫– ೧೧–೧೯೪೦ ರಲ್ಲಿ ಜನಿಸಿದರು. ಶಿರಸಂಗಿ ಸಂಸ್ಥಾನ ಒಂದು ಅಧ್ಯಯನ ವಿಶೇಷವಾಗಿ ಲಿಂಗರಾಜರಿಗೆ ಸಂಬಂಧಿಸಿದಂತೆ ಎಂಬ ವಿಷಯದ ಮೇಲೆ ಪಿಎಚ್.ಡಿ ಪ್ರಬಂಧ ಮಂಡಿಸಿದ್ದಾರೆ. ವಿದ್ಯಾವಾಚಸ್ಪತಿ, ಮೌನೇಶ್ವರ ವಚನ ಸಮೀಕ್ಷೆ, ಚಂದ್ರಭಾಗ್ಯ, ನಾಗಲಿಂಗ ಪ್ರಭೆ, ಶಿರಸಂಗಿ ಕಾಳಿಕಾಂಬೆ ಮಹಾತ್ಮರ ಬದುಕು, ಅವತಾರ, ಗದ್ಯ ಸಾಹಿತ್ಯ ಮತ್ತು ಸಂಶೋಧನಾ ಗ್ರಂಥಗಳು.

೬.೪.೧.೧೦. ಡಾ. ವ್ಹಿ.ವ್ಹಿ. ಬಡಿಗೇರ :

ಶ್ರೀಯುತರು ಬೈಲಹೊಂಗಲದ ವಿಶ್ವಕರ್ಮ ವಂಶದ ವೀರಪ್ಪ ಸರಸ್ವತಿ ದೇವಿಯವರ ಮಗನಾಗಿ ಜನಿಸಿದರು. ಜಗದ್ವಿಖ್ಯಾತ ರಸಾಯನಶಾಸ್ತ್ರ ಡಾ. ನರಗುಂದರವರ ಮಾರ್ಗದರ್ಶನದಲ್ಲಿ ಮೆಡಿಕಲ್ ಕೆಮಿಸ್ಟ್ರಿ ವಿಷಯದ ಕುರಿತು ಪ್ರಬಂಧ ಮಂಡಿಸಿ ೧೯೬೦ ರಲ್ಲಿ ಡಾಕ್ಟರೇಟ ಪದವಿ ಗಳಿಸಿ ಖ್ಯಾತ ರಸಾಯನಶಾಸ್ತ್ರ ತಜ್ಞರಲ್ಲೊಬ್ಬರಾದರು. ಶ್ರೀಯುತರು 'ವಿಶ್ವಕರ್ಮ ಸೂಕ್ತ ಮಂತ್ರಗಳ' ಅರ್ಥವನ್ನು ಭಕ್ತಿಗೀತೆಗಳನ್ನಾಗಿ ರಚಿಸಿರುವ ತತ್ವಕಾರರೂ, ವಿಶ್ವಕರ್ಮ ತತ್ವ ಗೀತ, ಶ್ರೀಮೌನೇಶ್ವರ ಗುಣಗಾನ ಸಂಧ್ಯೋಪಾಸನೆ ಅದಿಯಲ್ಲಿ (ಇದ್ದ ಪ್ರಣವ ತತ್ವ) ಅಡಿಗಲ್ಲು ಎಂಬ ಕೃತಿಗಳನ್ನು ರಚಿಸಿದ್ದಾರೆ.

೬.೪.೧.೧. ಪ್ರೊ, ವಿರೇಶ ಬಡಿಗೇರ :

ಶ್ರೀ ಜಿವನ್ನಾ ಮೊಸಳಿ ಅವರು ಬಾಗಲಕೋಟೆಯ ಪ್ರಸಿದ್ಧ ಪತ್ರಕರ್ತರಾಗಿ, ಸಾಹಿತಿಗಳಾಗಿ ೧೯ನೇ ಶತಮಾನದ ಉತ್ತಾರರ್ಧದಲ್ಲಿ ಬಾಳಿಬದುಕಿದ ಪಾಂಚಾಳ ಸಮುದಾಯದ ಪ್ರಮುಖ ಬರಹಗಾರರು. ಹಾಗೂ ವಿದ್ವತ್ ಪೂರ್ಣ ಸಮಾಜದ ಚಿಂತಕರು ಆಗಿದ್ದರು.

ಡಾ. ವಿರೇಶ ಬಡಿಗೇರ ಅವರು ೦೪-೦೪-೧೯೬೬ರಂದು ಜನಿಸಿದರು

ಶಿಕ್ಷಣ-ಎಂ.ಎ.ಪಿಎಚ್.ಡಿ., ಡಿಪ್ಲೋಮಾ ಇನ್ ಎಪಿಗ್ರಾಫಿ, ಬಿ,ಇಡಿ

ಸೇವೆ-ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯದಲ್ಲಿ ಹಸ್ತಪ್ರತಿ ವಿಭಾಗದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಾಹಿತ್ಯಿಕ ಕೃತಿಗಳು- ಪಾಂಚಾಳ ಸಾಹಿತ್ಯ ಮತ್ತು ಸಂಸ್ಕೃತಿ ೨೦೧೯

ತತ್ವ ಕೊರವಂಜಿ-೨೦೧೮ ಉತ್ತರ ಕರ್ನಾಟಕದ ಜನಪದ ಗೀತ ಮೇಳಗಳು ಒಂದು ಸಾಂಸ್ಕೃತಿಕ ಅಧ್ಯಯನ(೧೯೯೯) ಭಕ್ತಿ ಭಜನೆ ಮತ್ತು ಕೆಳವರ್ಗ(೨೦೦೧) ಡಾ.ಚಂದ್ರಶೇಖರ ಕಂಬಾರ (೨೦೦೨) ಕನ್ನಡ ಹಸ್ತ ಪ್ರತಿಗಳು (೨೦೦೫) ಮಾತು ಮಥನದ ರನ್ನ ಡಾ.ವೀರೇಶ ಬಡಿಗೇರ, ೨೦೧೯. ಮಯ ಪ್ರಕಟಣೆಗಳು

ಪ್ರಶಸ್ತಿ : ರಾಜ್ಯೋತ್ಸವ ಪ್ರಶಸ್ತಿ ೨೦೦೬, ಶ್ರೇಷ್ಠ ಯುವ ಸಾಹಿತಿ ಈ ರೀತಿ ಇನ್ನೂಅನೇಕ ಪ್ರಶಸ್ತಿಗಳು ಶ್ರೀಯುತರನ್ನು ಹುಡುಕುತ್ತ ಬಂದಿವೆ.

ಡಾ.ಶೀಲಕಾಂತ ಪತ್ತಾರ್ ಶಿಲ್ಪಿ ಕಲಾ ಸಾಹಿತ್ಯ ಸೇವೆ ಮಾಡಿದವರು. ಡಾ.ಚಂದ್ರಶೇಖರ್ ಕಂಬಾರ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ವೃತ್ತಿ ಜೀವನದಲ್ಲಿ ಅನೇಕ ಹುದ್ದೆಗಳನ್ನು ಅಲಂಕರಿಸುತ್ತಾರೆ. ಶಿಕ್ಷಣ ಕ್ಷೇತ್ರದಲ್ಲಿ ಅಗಾಧ ಸಾಧನೆ ಮಾಡಿದವರು. ಶಿಕ್ಷಣ ವೃತ್ತಿಯಿಂದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯವರೆಗೆ ಮಾಡಿದ ಸಾಧನೆಗೆ ಸಣ್ಣ ಗೌರವದಿಂದ ಜ್ಞಾನಪೀಠ ಪುರಸ್ಕಾರ ಅವರಿಗೆ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದವರು. ಡಾ. ವೀರೇಶ್ ಬಡಿಗೇರ, ಡಾ.ಪಿ.ಬಿ. ಬಡಿಗೇರ ಮುಂತಾದವರು ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿ ಮುಂಬರುವ ಪೀಳಿಗೆಗೆ ಆದರ್ಶ ಮಾರ್ಗದರ್ಶಕರು.

೬.೪.೧. ಪ್ರತಿಕಾ ಕ್ಷೇತ್ರ ಹಾಗೂ ಓದು-ಬರಹಯುಳ್ಳವರು :

ದೇಶ ನಾಡಿನ ತುಂಬಾ ಪ್ರಸ್ತುತ ಸಮಾಜದ ವಾಸ್ತವತೆಯನ್ನು ಜನಸಾಮಾನ್ಯರ ಹತ್ತಿರಕ್ಕೆ ತರುವ ಕಾರ್ಯ ಪತ್ರಿಕಾವರದಿಗಳು. ಆಧುನಿಕ ಜ್ಞಾನದ ಶಾಖೆಗಳು ಕವಲೊಡೆದು ಮೇಲು ಕೀಳುಗಳಿಲ್ಲ ಎಂದು ಹೇಳುತ್ತಾರೆ. "ಅವ ಕಾಯಕವ ಮಾಡಿದರು ಒಂದೇ ಕಾಯಕವಯ್ಯ" ಎಂದು ಬಸವಣ್ಣನವರ ವಚನಗಳ ಸಾಲುಗಳು ಬದುಕಿನ ದಾರಿಗೆ ಸನ್ಮಾರ್ಗ ಒಂದೇ ಮಾರ್ಗ ಎಂದು ತಿಳಿಸುವರು. ಶ್ರೀ.ಶಂಬಾ ಜೋಶಿ, ಕೆ.ಜಿ.ಕುಂದಣಗಾರ, ಡಾ.ಚಂದ್ರಶೇಖರ ಕಂಬಾರ, ರಾಜುಕಂಬಾರ, ಶ್ರೀ.ಚಂದ್ರಶೇಖರ, ಸಾ॥ ಹನುಮನಾಳ, ಮುರನಾಳ, ಜಗನ್ನಾಥ ಸ್ವಾಮಿ, ಗಂಗಾಧರಯ್ಯ, ಬಾಗಲಕೋಟೆಯ ಮಾಯ್ಯಾಚಾರಿ, ಮುಂತಾದವರುಗಳು ಸಾಹಿತ್ಯ ಭಾಗವಾಗಿರುವ ಪತ್ರಿಕಾ ಕ್ಷೇತ್ರದ ಪ್ರವೀಣರು. ವಿದ್ವತ್ಪೂರ್ಣವಾಗಿ ಸಮಾಜ ಅಭಿವೃದ್ಧಿಗೆ ಅವರ ಕೊಡುಗೆ ಅಪಾರವಾದದ್ದು. ಮಲಗಿದ್ದ ವಿಶ್ವಕರ್ಮ ಸಮಾಜ ಬಾಂಧವರನ್ನು ಎಚ್ಚರ ಗೊಳಿಸಿದವರು.

ವಿಶ್ವಕರ್ಮರು ಒಗ್ಗೂಡಲು ತಮ್ಮ ತನದ ಅರಿವು ಅವರಲ್ಲಿ ಅಭಿಮಾನ ಮೂಡಿಸುವುದರ ಮೂಲಕ ಸಮಾಜಕ್ಕೆ ಕಾರಣ ಪತ್ರಿಕೆಗಳೆಂದರೆ ಅತಿಶಯೋಕ್ತಿಯೆನಿಸದು.

ಉದಾಹರಣೆ ಪಾಂಚಾಳರ ಪತ್ರಿಕೆಗಳು

೧. 'ವಿಶ್ವಕರ್ಮೋದಯ'-ಶಿಲ್ಪಿ ಆರ್, ಸುರೇಶ್ ಚಿತ್ರದುರ್ಗ

೨. 'ವಿಶ್ವಕರ್ಮ ಸಂದೇಶ'-ಶ್ರೀ.ಜಗನ್ನಾಥ ಬಡಿಗೇರ ಶಿರಸಂಗಿ

೩. 'ವಿದಾತೃ'- ಶ್ರೀ.ಎನ್.ಸಿ. ಛಾಯಾಪತಿ ಬೆಂಗಳೂರು.

೪. 'ಶ್ರೀಕಾಳಿಕಾವಾಣಿ'-ಶ್ರೀ.ಡಿ.ಆರ್.ಬಡಿಗೇರ ಬೆಂಗಳೂರು.

೫. 'ವಿಶ್ವ ಶಿಲ್ಪಿ'-ಶ್ರೀ.ಕಾ.ವಾ.ಆಚಾರ್ಯ ಕೋಟೆಕಾರ ದಕ್ಷಣ ಕನ್ನಡ

೬. 'ವಿಶ್ವಕರ್ಮ ಕಲಾ'-ಶ್ರೀ.ಕೆ.ಸೂರ್ಯಅಚಾರ್ಯ ಬೆಂಗಳೂರು.

೭. 'ಜಗತ್ ಕಲ್ಯಾಣ'-ಶ್ರೀ.ಬಿ.ಜಿ.ಶಶಿ ಚಂದ್ರ ಬೆಂಗಳೂರು

೮. 'ವಾಗ್ಬೋದಿನಿ'-ಶ್ರೀ.ಗಣೇಶ ಹೊರಪೇಟೆ ಇಲಾಳ

ಇವುಗಳು ಅಷ್ಟೇ ಅಲ್ಲದೆ ಇನ್ನೂ ಅನೇಕ ಬೇರೆ ಬೇರೆ ಪತ್ರಿಕೆಗಳಲ್ಲಿ ಪಾಂಚಾಳರು ಸೇವೆಸಲ್ಲಿಸುತ್ತಿರುವರು.

೬.೪.೨. ಶ್ರೀ ಜಗನ್ನಾಥರಾವ್ ಟಂಕಸಾಲಿ :

ಬಾಗಲಕೋಟೆ ಜಿಲ್ಲೆಯ ಮುಧೋಳದ ಶ್ರೀ ಜಗನ್ನಾಥ ಟಂಕಸಾಲಿ ಅವರು ಹುಟ್ಟಿದ್ದು ೧೭ ಜುಲೈ ೧೯೭೦ನೇ ಇಸ್ವಿಯಲ್ಲಿ. ಇವರು ನಗರದ ಕಿಂಗ್ ಜಾರ್ಜ ಪ್ರೌಢಶಾಲೆಯಲ್ಲಿ ೧೦ನೇ ತರಗತಿ ಮುಗಿಸಿದ ನಂತರ ಕನ್ನಡ, ಮರಾಠಿ, ಹಿಂದಿ ತ್ರಿಭಾಷಾ ಪತ್ರಿಕಾ ಕ್ಷೇತ್ರದಲ್ಲಿ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸಿದ್ದಾರೆ. ತದನಂತರ ಆರ್. ಆರ್. ದಿವಾಕರ್ ಅವರ ಸಂಪಾದಕತ್ವದಲ್ಲಿ ಬೆಳಗಾವಿಯಿಂದ ಪ್ರಕಟವಾಗುತ್ತಿದ್ದ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಮುಧೋಳದ ವರದಿಗಾರರಾಗಿ ಸೇವೆ ಪ್ರಾರಂಭಿಸಿದ. ಇವರು ತಮ್ಮ ಜೀವನದ ಕೊನೆಯ ಉಸಿರಿನವರೆಗೂ ಸದರಿ ಪತ್ರಿಕೆಯ ವರದಿಗಾರರಾಗಿದ್ದರು. ಎತ್ತರ ೬ ಫೂಟ್, ಪೈಜಾಮ್ ಮತ್ತು ನೆಹರು ಶರ್ಟ್ ಧರಿಸಿ, ದಪ್ಪವಾದ ಕನ್ನಡಕವನ್ನು ಧರಿಸಿಕೊಂಡು ಆಕರ್ಷವಾದ ದೇಹಕಳೆಯನ್ನು ಹೊಂದಿದಂತಹ ಜಗನ್ನಾಥರಾಯರು ಎಂಥವರನ್ನಾದರೂ ಆಕರ್ಷಿಸುತ್ತಿದ್ದರು. ಇವರು ಸುದ್ಧಿ ಮೂಲವನ್ನು ಬಿಟ್ಟು ಕೊಡದಂತೆ ಜಾಗೃತ ವಹಿಸುತ್ತಿದ್ದರು.

೧೯೧೮ ರಲ್ಲಿ ಸರ್ವೆಂಟ್ಸ್ ಆಫ್ ಸೊಸೈಟಿ ಪ್ರಕಟಿಸುತ್ತಿದ್ದ ಮರಾಠಿ ಪತ್ರಿಕೆ, ಧ್ಯಾನ ಪ್ರಕಾಶ ಮತ್ತು ಲೋಕೋಕ್ತಿ' ಎಂಬ ಮರಾಠಿ ಪತ್ರಿಕೆಗಳಿಗೆ ಕೂಡಾ ಸುದ್ದಿಗಳನ್ನು ಕಳುಹಿಸುತ್ತಿದ್ದರು. ಆರು ವರ್ಷಗಳ ಕಾಲ ಕನ್ನಡ, ಮರಾಠಿ ದ್ವಿಭಾಷಾ ವಾರಪತ್ರಿಕೆಯೊಂದರ ಉಪ ಸಂಪಾದಕರಾಗಿದ್ದರು. ಕಳ್ಳ ಸಾಗಾಣಿಕೆದಾರರ, ಮಟ್ಕಾ ಮುಂತಾದ ಅಕ್ರಮ ಕಾರ್ಯ ಪ್ರವೃತ್ತದ ಒಳ ಸಂಚುಗಳನ್ನು

ನಿರ್ಭೀತಿಯಿಂದ ಬಯಲಿಗೆಳೆಯುತ್ತಿದ್ದರು. ಅವರು ವರದಿಗಳ ಕಾರಣ ದುಷ್ಕರ್ಮಿಗಳ ಆಕ್ರೋಶ ಮತ್ತು ಆಕ್ರಮಣಕ್ಕೊಳಗಾಗಿದ್ದು, ಟಂಕಸಾಲಿಯವರು ಭೂಗತರಾಗುತ್ತಿದ್ದಾಗಲೇ ಹಿಂದಿಯ ಅಗಾದ ಜ್ಞಾನವನ್ನು ಸಂಪಾದಿಸಿಕೊಂಡು ರಾಷ್ಟ್ರೀಯ ಏಕತೆಯ ದ್ಯೋತಕವಾಗಿ ಮುಧೋಳದಲ್ಲಿ ಹಿಂದಿ ಪ್ರಚಾರ ಸಂಘವನ್ನು ಸ್ಥಾಪಿಸಿ, ಉಚಿತವಾಗಿ ಹಿಂದಿ ಪ್ರಚಾರ, ಪ್ರಸಾರ ಮಾಡತೊಡಗಿದರು. ಇವರು ಪತ್ರಕರ್ತರಷ್ಟೇ ಅಲ್ಲ ಹಿಂದಿ ಭಾಷಾ ಪ್ರಚಾರಕರೂ, ಆದರ್ಶ ಶಿಕ್ಷಕರೂ, ಸಮಾಜ ಸೇವಕರಾಗಿ, ಸಾಹಿತಿಯಾಗಿ ಹೀಗೆ ಹತ್ತಾರು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಕವಿತೆಗಳ ಸಂಗ್ರಹವನ್ನು ಬರೆದಿದ್ದಾರೆ. ಅಲ್ಲದೇ ವ್ಯಕ್ತಿಗಳ ಜೀವನ ಚರಿತ್ರೆಯುಳ್ಳ "ಮಾಣಿ ಕಮೋತಿ" ಎಂಬ ಗ್ರಂಥವನ್ನು ಬರೆದಿದ್ದಾರೆ. ಜಗನ್ನಾಥರು ತಮ್ಮ ೬೦ ನೇ ವಯಸ್ಸಿನಲ್ಲಿ ರಾಜ್ಯ ಸರಕಾರ ೧೯೮೪ ರ ಫೆಬ್ರುವರಿ ೨೭ರಂದು ರಾಜ್ಯ ಪತ್ರಿಕಾ ಅಕಾಡೆಮಿಯಿಂದ ಸನ್ಮಾನಿಸಿಕೊಂಡರು. ಇವರ ಅಗಾದ ಸಮಾಜ ಸೇವೆಯನ್ನು ಮತ್ತು ಹಿಂದಿ ಸೇವೆಯನ್ನು ಪರಿಗಣಿಸಿ ಬೆಂಗಳೂರಿನ 'ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿಯು' ೧೯೭೦ ರಲ್ಲಿ ಇವರಿಗೆ 'ಶ್ರೇಷ್ಠ ಹಿಂದಿ ಪ್ರಚಾರಕ' ಪ್ರಶಸ್ತಿ ನೀಡಿ ಗೌರವಿಸಿತು.[೭]

೧೯೪೨ ರಿಂದ ೧೯೭೭ವರೆಗೆ ಅಖಂಡ ೩೦ ವರ್ಷಗಳ ಕಾಲ ಜಗನ್ನಾಥ ಟಂಕಸಾಲಿಯವರು ಮುಧೋಳ ಸಾರ್ವಜನಿಕರ ವಾಚನಾಲಯದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ದಿ: ೨೭-೧೧-೧೯೭೭ ರಂದು ಇವರು ಮಾಡಿದ ಕಾರ್ಯ ಎಲ್ಲರ ಕಣ್ಣ ಮುಂದೆ ಕಟ್ಟಿದಂತಾಗಿದೆ. ಜಗನ್ನಾಥ ಟಂಕಸಾಲಿ ಪ್ರತಿಷ್ಠಾನ ಸ್ಥಾಪಿಸಿ, ಪ್ರತಿ ವರ್ಷ ಪ್ರತಿಷ್ಠಾನದ ಆಶ್ರಮದಲ್ಲಿ ಅವರ ಹೆಸರಿನಲ್ಲಿ ಶ್ರೇಷ್ಠ ಪತ್ರಕರ್ತ ಹಾಗೂ ಶ್ರೇಷ್ಠ ಹಿಂದಿ ಸೇವಕರನ್ನು ಸನ್ಮಾನ ಮಾಡಲಾಗುತ್ತಿತ್ತು. ಪ್ರತಿಷ್ಠಾನದ ಅಧ್ಯಕ್ಷರಾಗಿ ಡಾ॥ ರವಿ ಕಲಘಟಗಿ ಹಾಗೂ ಕಾರ್ಯದರ್ಶಿಯಾಗಿ ಹಿರಿಯ ಗಾಂಧಿವಾದಿ ಶ್ರೀ ತಮ್ಮಣ್ಣಪ್ಪ ಬುದ್ನಿ, ಕಾರ್ಯವನ್ನು ಮಾಡುತ್ತಾರೆ. ಶಂಕರ ಉತ್ತೂರ, ಜಿ. ಆರ್. ಕಾಳಗಿ, ರಾಮಬಾಜಿ, ಸೌ. ಸಂಧ್ಯಾ ಹಂಚಿನಾಳ, ಪ್ರತಿಷ್ಠಾನದಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜಗನ್ನಾಥ ಟಂಕಸಾಲಿಯವರ ಸ್ಮರಿಸಿ ಪ್ರತಿವರ್ಷ ಸಾಧಕರಿಗೆ ಸನ್ಮಾನಗಳು ನಡೆಯುತ್ತವೆ.

೬.೪.೩. ಪುರಾಣ ಪ್ರವಚನಕಾರರು :

ಭಾರತೀಯ ಪರಂಪರೆಯಲ್ಲಿ ಸನಾತನ ಸಂಸ್ಕೃತಿಗೆ ಹೆಚ್ಚಿನ ಆದ್ಯತೆ ಇದೆ. ವೈದಿಕ ಆಗಮಗಳನ್ನು ಅಧ್ಯಯನ ಮಾಡಿರುವ ಪಾಂಚಾಳರು ಭಾರತೀಯ ಸಮಾಜೋದ್ಧಾರಕ್ಕಾಗಿ ನಾಗರಿಕತೆಯ ಭಕ್ತಿ ಆಧ್ಯಾತ್ಮದ ಹಿನ್ನೆಲೆಯಲ್ಲಿ ದೈವತ್ವದ ಪರಿಕಲ್ಪನೆಯನ್ನು ಮೂಡಿಸುವ ಪ್ರವಚನಕಾರರು. ಇವರು ಭಾರತೀಯ ಸಮಾಜದಲ್ಲಿ ಪ್ರಸ್ತುತ ವಿಷಯಗಳನ್ನು ತುಲನೆ ಮಾಡಿ ಆಧ್ಯಾತ್ಮಿಕ ವಿಷಯಗಳನ್ನು ಕುರಿತು ಪ್ರವಚನದ ಮೂಲಕ ಸರ್ವ ಜನರನ್ನು ಸನ್ಮಾರ್ಗದೆಡೆಗೆ ಕೊಂಡೊಯ್ಯುವ ಅವರ ಜ್ಞಾನದ ಕುಶಲತೆಯು ವಿಶೇಷವಾದದ್ದು. ಬಾಗಲಕೋಟೆಯ ಮುರನಾಳ

ಮಾಣಪ್ಪಯ್ಯ, ಜಗನ್ನಾಥ ಸ್ವಾಮಿಗಳು ಇಲಾಳದ ಶ್ರೀ ಗಣೇಶ ಹೊರಪೇಟೆ ಐದುನೂರಕ್ಕೂ ಹೆಚ್ಚು ಪ್ರವಚನ ನೀಡಿದ್ದಾರೆ. ಇವರಂತೆಯೇ ಗಲಗಲಿಯ ಗುರುರಾಜ ಕಂಬಾರ ಶಿಕ್ಷಕರು ಪ್ರವಚನಕಾರರು.

೬.೪.೪. ಜ್ಯೋತಿಷ್ಯ ಹಾಗೂ ಆಯುರ್ವೇದಿಕ ತಜ್ಞರು :

ಸಮಾಜ ನಾಗರಿಕತೆಯ ನಂಬಿಕೆಗಳಲ್ಲಿ ಜ್ಯೋತಿಷ್ಯಗಳ ಪಾತ್ರ ಮುಖ್ಯವಾದದ್ದು. ಬದುಕಿನ ಜಂಜಾಟಗಳ ಏರಿಳಿತಗಳಲ್ಲಿ ನಂಬಿಕೆ, ಮೂಢನಂಬಿಕೆಗಳಲ್ಲಿ ಸಾಗುವ ಜನರ ಬದುಕನ್ನು ಹಸನುಗೊಳಿಸಲು ಮಂಗಲ ಕಾರ್ಯಕ್ಕೆ, ಮದುವೆ-ಮುಂಜಿ, ಹಬ್ಬ-ಹರಿದಿನಗಳಿಗೆ, ಮಗು ಹುಟ್ಟಿದ ದಿನ, ನಾಮಕರಣದಿಂದ ಮರಣದವರೆಗೆ ವ್ಯಕ್ತಿಯ ಜಾತಕ ಕುಂಡಲಿ ಹೇಳುವ ಕಲೆಯ ಕುಶಲತೆಯು ಪಂಚಾಳರಲ್ಲಿದೆ. ಪ್ರತಿ ಗ್ರಾಮಗಳಲ್ಲಿ ಜ್ಯೋತಿಷ್ಯಶಾಸ್ತ್ರ ಬದುಕಿನ ಆಗುಹೋಗುಗಳಿಗೆ ಸರಿಯಾದ ಸನ್ಮಾರ್ಗ ತೋರಿಸುವುದು ಇಂದು ಇರುತ್ತದೆ. ಮುಂದಿನ ತಲೆಮಾರಿನವರೆಗೂ ಸಾಗುತ್ತದೆ. ಇಂದಿನ ಸ್ವತಂತ್ರ ಬದುಕಿನ ಆಚಾರ-ವಿಚಾರಗಳ ಮೂಢನಂಬಿಕೆಗಳನ್ನು ನಂಬದೆ ಇದ್ದರೂ ಆಡಂಬರದ ಬಾಹ್ಯ ಜಗತ್ತಿಗೆ ಮರುಳಾದ ಜನರು ತನ್ನತನ ಅಂತ ಬಂದಾಗ ಅದು ದೈವತ್ವದ ಕಡೆ ಸಾಗಬೇಕಾಗುತ್ತದೆ. ಆದ್ದರಿಂದ ಪಂಚಾಳ ಜ್ಯೋತಿಷ್ಯಗಳ ಪಾತ್ರ ಮಾನವನ ಬದುಕಿನಲ್ಲಿ ಮುಖ್ಯವೆನಿಸುತ್ತದೆ.

ಪ್ರಾಚೀನ ಕಾಲದ ನಾಗರಿಕತೆಯ ಸುಧಾರಣೆಯಲ್ಲಿ ಮೊದಲು ಸ್ವಾಸ್ಥ್ಯ ಕಾಪಾಡುವುದು ಮುಖ್ಯವಾಗಿತ್ತು. ನಿಸರ್ಗದ ತಪ್ಪಲಿನಲ್ಲಿ ಬದುಕುವ ಮಾನವ ಸುತ್ತಮುತ್ತಲಿನ ವಸ್ತುಗಳನ್ನು ಬಳಸುತ್ತಾ, ಗಿಡ, ಮರ, ಮಣ್ಣು, ಕಲ್ಲು, ವಾಯು, ಅಗ್ನಿ, ಪಂಚಭೂತಗಳು, ಇವುಗಳು ಕುತೂಹಲ ಕೆರಳಿಸುವ ಒಳಿತು-ಕೆಡುಕುಗಳ ಮಧ್ಯೆ ಯಾವುದನ್ನು ಬಳಸಿದರೆ ಜೀವನಕ್ಕೆ ಉಪಯುಕ್ತವಾಗುತ್ತದೆ ಎಂಬುದನ್ನು ಗೊಚರಿಸುತ್ತವೆ.

೬.೪.೫. ಜಾನಪದ ಕ್ಷೇತ್ರದಲ್ಲಿ ಪಾಂಚಾಳರ ಕೌಶಲ್ಯಗಳು :

ಜಾನಪದ ಕ್ಷೇತ್ರದಲ್ಲಿ ಪಾಂಚಾಳರ ಜನಪದ ಕಲೆಗಳು ಇವೆ. ಕರ್ನಾಟಕದಲ್ಲಿ ವೈವಿಧ್ಯಮಯವಾದ ಜನಪದ ಪ್ರದರ್ಶನಾತ್ಮಕ ಕಲೆಗಳಿವೆ. ಇವುಗಳಿಗೆ ಕರ್ನಾಟಕದ ಜನಪದ ಪಾಂಚಾಳ ಸಂಸ್ಕೃತಿಯಲ್ಲಿ ಸಾಕಷ್ಟು ಅಂಶಗಳು ದೊರಕುತ್ತವೆ. ಮಾನವಜೀವನದ ಸುಖ ನೆಮ್ಮದಿಗೆ ಶರೀರ ಮತ್ತು ಮನಸ್ಸಿನ ಆರೋಗ್ಯ ಮುಖ್ಯ. ಸ್ವಸ್ಥ ಶರೀರದಲ್ಲಿ ಸ್ವಾಸ್ಥ್ಯ ಮನಸ್ಸು ಇರಬೇಕಾಗುತ್ತದೆ. ಜೀವಿಸಲು ಗಾಳಿ, ನೀರು, ಆಹಾರ, ನಿದ್ರೆ ಎಷ್ಟು ಮುಖ್ಯವೋ ಅಷ್ಟೇ ಜನಪದ ನಾಗರಿಕತೆಯು ಮುಖ್ಯವಾಗಿರುತ್ತದೆ.

ನಾಗರಿಕತೆಯ ವಿಕಾಸ ಸಾಗಿದಂತೆ ಅನೇಕ ಬದಲಾವಣೆಗಳಾಗಿವೆ. ಮಾನವನ ಸಂಸ್ಕಾರದ ನೆಲೆಯ ವಿಕಾಸದಲ್ಲಿ ಪಾಂಚಾಳ ಸಮುದಾಯ ಕೈಗೊಂಡ ಕಾರ್ಯ ಚಟುವಟಿಕೆಗಳ ವೈಖರಿಗಳೆಲ್ಲವು ಜನಪದ ಕಲೆ ಸಾಹಿತ್ಯಗಳಾಗಿ ಬೆಳೆದುಬಂದಿವೆ. ಕಮ್ಮಾರ, ಅಕ್ಕಸಾಲಿಗ, ಕಂಚುಗಾರ, ಶಿಲ್ಪಿ,

ಬಡಿಗ, ಇವರೆಲ್ಲರ ಕರಕೌಶಲ್ಯಗಳ ಜ್ಞಾನದ ಅರಿವಿನಿಂದ ತಯಾರಾದ ವಸ್ತುಗಳು ಇವತ್ತು ವಿಸ್ಮಯ ಹುಟ್ಟಿಸುತ್ತವೆ. ಮುಂದೊಂದು ದಿನ ಮ್ಯೂಸಿಯಂನಲ್ಲಿ ಕಾಣುವ ಸ್ಥಿತಿ ಬಂದೊದಗುತ್ತದೆ. ಜನರಿಂದ ದೂರಾದ ವಸ್ತು ಅದರ ತಯಾರಿಕೆಯ ಜ್ಞಾನವು ದೂರಾಗುತ್ತದೆ.

"ಬಾಯಿಮಾತಿನಲ್ಲಿ ಹೇಳಿದರೆ ಕಲಿಕೆ ಪೂರ್ಣವಾಗುವುದಿಲ್ಲ. ಅದು ಕ್ರಿಯಾ ರೂಪಕ್ಕೆ ಇಳಿದಾಗ ಮಾತ್ರ ಅನುಭವದ ಕದ ತಟ್ಟುತ್ತದೆ. ಉದಾಹರಣೆಗೆ ಹೋಳಿಗೆ, ಪಲ್ಯ, ಅನ್ನ, ಸಾರು, ತುಪ್ಪ, ಉಪ್ಪಿನಕಾಯಿ, ಹೇಗಿತ್ತು ಎಂಬುದು ಊಟ ಮಾಡಿದ ವ್ಯಕ್ತಿಯನ್ನು ಕೇಳಿದರೆ ಅದರ ರುಚಿ ಚೆನ್ನಾಗಿದೆ ಎನ್ನಬಲ್ಲ. ಆದರೆ ಕಾರು, ಉಪ್ಪು, ಹುಳಿ, ನೀರು, ದವಸಧಾನ್ಯಗಳ ಮುಂತಾದವುಗಳ ರುಚಿ ಒಂದೊಂದು ವರ್ಣನೆ ಹೇಳಲು ಕಷ್ಟವಾಗುತ್ತದೆ. ಅದಕ್ಕಾಗಿ ಪಾಂಚಾಳರು ನಿರ್ವಹಿಸಿದ ಕಥೆ, ನಾಟಕ, ಕವಿತೆ, ಕುಶಲಕಲೆಗಳಲ್ಲಿ ಜನಪದ ಹಾಸುಹೊಕ್ಕಾಗಿದೆ.

೬.೪.೫.೧. ಶ್ರೀ ಮಲ್ಲೇಶಪ್ಪ ಗವಾಯಿ ಪತ್ತಾರ :

ಶ್ರದ್ಧೆಯಿಂದ ಸಂಗೀತ ಸೇವಾ ಮಾಡಿ ಸದ್ದು ಗದ್ದಲವಿಲ್ಲದೆ ಮರೆಯಾಗಿ ಹೋದ ಎಲೆಮರೆಯ ಕಾಯಿಯಂತಿದ್ದ ಬಾಗಲಕೋಟೆ ಜಿಲ್ಲೆಯ ಹಿರಿಯ ತಲೆಮಾರಿನ ಹಿಂದುಸ್ತಾನಿ ಗಾಯಕ ಗುಳೇದಗುಡ್ಡದ ಲಿಂ. ಶ್ರೀ ಮಲ್ಲೇಶಪ್ಪ ಪತ್ತಾರ ಗವಾಯಿಗಳು. ಬಡತನದಲ್ಲಿ ಹುಟ್ಟಿ, ಬಡತನದಲ್ಲೇ ಬೆಳೆದು ಸಂಗೀತವನ್ನು ತಮ್ಮ ಜೀವಾಳವೆಂದು ಬಗೆದು ಬಾಳಿ ಹೋದವರು. ಬಡತನವನ್ನು ಬೆನ್ನಿಗೆ ಕಟ್ಟಿಕೊಂಡು ಬಗಲಲ್ಲಿ ತಂಬೂರಿ ಹೊತ್ತುಕೊಂಡು ಬದುಕಿನುದ್ದಕ್ಕೂ ಸಂಗೀತವನ್ನು ಉಸಿರಾಡಿದವರು. ಅಂಥತ್ವವನ್ನು ಮೆಚ್ಚಿ ಸಂಗೀತ ಕಲೆಯನ್ನು ಬೆಳೆಸಿ ಉಳಿಸಿ ಶ್ರಮಿಸಿದವರು. ಸಂಗೀತ ಶಾಲೆ ಪ್ರಾರಂಭಿಸಿ ಅನೇಕರಿಗೆ ಸಂಗೀತ ಶಿಕ್ಷಣ ನೀಡಿ ಜಿಲ್ಲೆಯಲ್ಲಿ ಸಂಗೀತದ ವಾತಾವರಣ ನಿರಂತರ ಜೀವಂತವಾಗಿರಲಿ ಎಂದು ದುಡಿದವರು.

ಮಲ್ಲೇಶಪ್ಪನವರು ಜನಸಿದ್ದು ೧೯೩೪ರಲ್ಲಿ. ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಕಡಿವಾಲ ಕಲ್ಲಾಪೂರ ಗ್ರಾಮದಲ್ಲಿ. ತಂದೆ ಭೀಮರಾಯಪ್ಪ, ಅಕ್ಕಸಾಲಿಗರು. ಅವರಿಗೆ ಸಂಗೀತವೆಂದರೆ ಪಂಚಪ್ರಾಣ. ಏಳನೇ ವಯಸ್ಸಿಗೆ ಪಿಟೀಲು ವಾದಕರಾಗಿದ್ದ ಭೀಮರಾಯಪ್ಪ ಮಗ ಸಂಗೀತದಲ್ಲಿ ಹೆಸರು ಮಾಡಿದವರು. ಗದ್ದನಕೇರಿ ಮಠಾದೀಶ ಪೂಜ್ಯ ಶ್ರೀ ಗಂಗಾಧರಸ್ವಾಮಿ ಮಹಾಸ್ವಾಮಿ ಮಹಾಪುರುಷರ ಮುಂದಿಟ್ಟರು. ಬಳಿಕ ಮಲ್ಲೇಶಪ್ಪನ ಸಂಗೀತ ಪ್ರತಿಭೆಯನ್ನು ಕಂಡು ಅವನನ್ನು ಗದುಗಿನ ವೀರೇಶ್ವರ ಪುಣ್ಯಾಶ್ರಮಕ್ಕೆ ಸಂಗೀತ ಕಲಿಕೆಗೆ ಮಲ್ಲೇಶಪ್ಪನನ್ನು ಗದುಗಿಗೆ ಕರೆದುಕೊಂಡು ಹೋಗಿ ಸಂಗೀತ ಕಲಿಕೆಗೆ ಅವಕಾಶ ಮಾಡಿಕೊಟ್ಟರು.

ಅಂಥ ಮಲ್ಲೇಶಪ್ಪ ವೀರೇಶ್ವರ ಪುಣ್ಯಾಶ್ರಮದಲ್ಲಿ ೧೨ ವರ್ಷಗಳ ಕಾಲ ಪಂ. ಡಾ॥ ಪುಟ್ಟರಾಜ ಕವಿ ಗವಾಯಿಗಳಲ್ಲಿ ಹಾಡುಗಾರಿಕೆ, ಹಾರ್ಮೋನಿಯಂ ಹಾಗೂ ತಬಲಾ ಶಿಕ್ಷಣ ಪಡೆದು, ಸಂಗೀತದಲ್ಲಿ ಪ್ರಬುದ್ಧತೆ ಪಡೆದುಕೊಂಡರು. ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯದ

ಸಂಗೀತ ವಿಶಾರದ ಪರೀಕ್ಷೆಯನ್ನು ಪಾಸು ಮಾಡಿದರು. ಗುರುವಿನ ಆಶೀರ್ವಾದ, ನಿರಂತರ ಸಾಧನೆಯ ಪರಿಣಾಮವಾಗಿ ಮಲ್ಲೇಶಪ್ಪನವರು ಗವಾಯಿ ಮಲ್ಲೇಶಪ್ಪ ಎಂದೆನಿಸಿದರು.

ಗದುಗಿನಲ್ಲಿ ಸಂಗೀತ ಶಿಕ್ಷಣ ಪಡೆದು ಬಂದ ನಂತರ, ಮಲ್ಲೇಶಪ್ಪನವರಿಗೆ ಇಳಕಲ್ಲಿನ ಚಿತ್ತರಗಿ ಸಂಸ್ಥಾನ ಮಠದ ಶ್ರೀ ಮ.ನಿ.ಪ. ಮಹಾಂತ ಸ್ವಾಮಿಗಳ ಕರೆ ಬಂದಿತು. ಹುನಗುಂದ ತಾಲೂಕಿನ ಹಿರೇಬಾದವಾಡಗಿಯಲ್ಲಿ ಜರುಗಲಿರುವ ಪುರಾಣದಲ್ಲಿ ಸಂಗೀತ ಸೇವೆ ನೀಡುವ ಕರೆ ಅದಾಗಿತ್ತು. ಪೂಜ್ಯರಿಂದ ಬಂದ ಈ ಆಹ್ವಾನವನ್ನು ಮನ್ನಿಸಿ, ಮಲ್ಲೇಶಪ್ಪನವರು ಹಿರೇಬಾದವಡಗಿ ಗ್ರಾಮದಲ್ಲಿ ಎಂಟು ವರ್ಷಗಳ ಕಾಲ ಪುರಾಣದ ಸಂಗೀತ ಸೇವೆ ಮಾಡಿದರು. ಮಲ್ಲೇಶಪ್ಪನವರ ಸಂಗೀತ ಜನಮನ ಸೂರೆಗೊಂಡಿತ್ತು. ಸುತ್ತ ಹತ್ತು ಕಡೆ ಅವರ ಹೆಸರು ಪ್ರಸಾರವಾಯಿತು. ಪುರಾಣದಲ್ಲಿ ನೀಡಿದ ಸಂಗೀತ ಸೇವೆ ಅವರ ಕಲಾ ಬದುಕಿಗೆ ಪ್ರೋತ್ಸಾಹ ನೀಡಿತು. ನಂತರದ ದಿನಗಳಲ್ಲಿ ಮಲ್ಲೇಶಪ್ಪನವರು ನಾಟಕಗಳಿಗೆ ಸಂಗೀತ ನಿರ್ದೇಶನ ನೀಡಿದರು. ಅದಾದ ನಂತರ ಅವರಿಗೆ ಗುಳೇದಗುಡ್ಡದ ಶ್ರೀ ಗುರುಸಿದ್ದೇಶ್ವರ ಬೃಹನ್ಮಠದ ಜಗದ್ಗುರು ಬಸವರಾಜ ಪುಟ್ಟಾಚಾರ್ಯ ಸ್ವಾಮಿಗಳಿಂದ ಕರೆ ಬಂದಿತು. ತಮ್ಮ ಶ್ರೀಸಿದ್ದೇಶ್ವರ ಸಂಗೀತ ಪಾಠಶಾಲೆಯಲ್ಲಿ ಸಂಗೀತ ಅಧ್ಯಾಪಕರಾಗಿ ಕೆಲಸ ಮಾಡಲು ಸ್ವಾಮಿಗಳು ಅಹ್ವಾನಿಸಿದರು. ಪೂಜ್ಯರ ಅಪ್ಪಣೆಯಂತೆ ಮಲ್ಲೇಶಪ್ಪನವರು ಗುಳೇದಗುಡ್ಡಕ್ಕೆ ಬಂದು ಶ್ರೀ ಗುರುಸಿದ್ದೇಶ್ವರ ಸಂಗೀತ ಪಾಠಶಾಲೆಯಲ್ಲಿ ಸಂಗೀತ ಅಧ್ಯಾಪಕರಾಗಿ ಸೇರಿದರು. ಅನೇಕ ವರ್ಷಗಳ ಕಾಲ ಸಂಗೀತ ಅಧ್ಯಾಪಕರಾಗಿ ಕೆಲಸ ಮಾಡಿದರು. ಆ ದಿನಗಳಿಂದ ಗುಳೇದಗುಡ್ಡ ಮಲ್ಲೇಶಪ್ಪನವರ ಕಾರ್ಯ ಕ್ಷೇತ್ರವಾಯಿತು. ೧೯೮೩-೮೪ ರಲ್ಲಿ ತಾವೇ ಸ್ವತಂತ್ರವಾಗಿ ಗುಳೇದಗುಡ್ಡದಲ್ಲಿ ಗಾನಯೋಗಿ ಪಂ. ಪಂಚಾಕ್ಷರ ಗವಾಯಿ ಸಂಗೀತ ವಿದ್ಯಾಲಯ ಸ್ಥಾಪಿಸಿದರು ಹಾಗೂ ಸುತ್ತ ಮುತ್ತಲ ಪ್ರದೇಶದಲ್ಲಿ ಸಂಗೀತದ ವಾತಾವರಣ ನಿರ್ಮಿಸಿದರು.

ವಿದ್ಯಾಲಯದ ಮೂಲಕ ಆಸಕ್ತರಿಗೆ ಹಾಡುಗಾರಿಕೆ, ಹಾರ್ಮೋನಿಯಂ ಹಾಗೂ ತಬಲಾ ವಾದನದಲ್ಲಿ ಶಿಕ್ಷಣ ನೀಡಿದರು. ಅನೇಕ ಜನ ಶಿಷ್ಯರನ್ನು ತಯಾರಿಸಿದರು. ಅಂತಹ ಶಿಷ್ಯರಲ್ಲಿ ಸಂಗಪ್ಪ ಹಳಮನಿ, ಯಮನೂರಪ್ಪ ಹೂಗಾರ, ಗಣೇಶಪ್ಪ ಹಳ್ಳಿ, ಕಲ್ಲಪ್ಪ ಕಲ್ಯಾಣಿ, ಸಣ್ಣ ಬಸಪ್ಪ ದಂಡಿ, ಶ್ರೀದೇವಿ ಹರಿದಾಸ ಮಕ್ಕಳು, ಸವಿತಾ ಶೆಟ್ಟಿ, ವಾಣಿಶ್ರೀ. ಡಾಣಕ ಶಿರೂರ ಗ್ರಾಮದ ಏರಪಲ್ ಶಂಕರ ಲಮಾಣಿ, ಕುಪ್ಪಸ್ತ, ಶ್ರೀಮತಿ ಸುಮಿತ್ರಾ ಪತ್ತಾರ (ಸೊಸೆ) ಅಖಂಡೇಶ್ವರ ಪತ್ತಾರ (ಮಗ) ಮುಂತಾದವರು ಉಲ್ಲೇಖನೀಯರಾಗಿದ್ದಾರೆ. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಸಂಗೀತ ಜ್ಯೂನಿಯರ್, ಸೀನಿಯರ್ ಪರೀಕ್ಷೆಗಳನ್ನು ಅನೇಕ ವರ್ಷಗಳಿಂದ ಶಾಲೆಯ ಮೂಲಕ ನಡೆಸುತ್ತಾ ಬಂದಿದ್ದಾರೆ.

ಮಲ್ಲೇಶಪ್ಪನವರ ಮಗ ಸಂಗೀತಗಾರ. ಶ್ರೀ ಅಖಂಡೇಶ್ವರ ಪತ್ತಾರ ಅವರು ಒಂದು ಅವಧಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡಮಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ತಮ್ಮ ಸಂಗೀತ

ಶಾಲೆ ಹಾಗೂ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸಂಯುಕ್ತಾಶ್ರಮದಲ್ಲಿ ಅಕಾಡೆಮಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಾಡಿನ ಅನೇಕ ಸಂಘ ಸಂಸ್ಥೆ, ಮಠ-ಮಾನ್ಯಗಳಲ್ಲಿ ಮಲ್ಲೇಶಪ್ಪನವರು ಸಂಗೀತ ಕಾರ್ಯಕ್ರಮ ನೀಡಿ ಅನೇಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅವರು ಕೆಲವು ವರ್ಷ ಗುಳೇದಗುಡ್ಡದ ಶ್ರೀ ಗುರುಸಿದ್ದೇಶ್ವರ ವಿದ್ಯಾವರ್ಧಕ ಸಂಘ ಬಂಡಾರಿ ಮತ್ತು ಮರಾಠಿ ಕಲಾ ಮಹಾವಿದ್ಯಾಲಯದಲ್ಲಿ ಅತಿಥಿ ಸಂಗೀತ ಉಪನ್ಯಾಸಕಾಗಿ ಕಾರ್ಯ ನಿರ್ವಹಿಸಿದ್ದುಂಟು.

೩೫ ವರ್ಷ ವಯಸ್ಸಿನಲ್ಲಿ ಅಂದರೆ ೨೦೦೪ರ ನವೆಂಬರ್‌ಲ್ಲಿ ಅವರು ನಿಧನರಾದರು. ಮಲ್ಲೇಶಪ್ಪನವರಿಗೆ ಸಂಗೀತ ವಿದ್ವಾನ, ಗಾನಕಂಠೀರವ, ಗಾನಗಂಧರ್ವ, ಸಂಗೀತ ಸುಧಾರಕ ಹಾಗೂ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ೧೯೯೯-೨೦೦೦ನೇ ಸಾಲಿನ ಕರ್ನಾಟಕ ಕಲಾಶ್ರೀ ಪ್ರಶಸ್ತಿ ಮುಂತಾದ ಪುರಸ್ಕಾರ ದೊರೆತಿದ್ದವು.

೬.೪.೫.೨. ಶ್ರೀ ಮಲ್ಲಣ್ಣ ಬಡಿಗೇರ :

ಬಾಗಲಕೋಟೆ ಜಿಲ್ಲೆ ಪ್ರಾಚೀನ ಕಾಲದಿಂದಲೂ ಸಾಹಿತ್ಯ, ಸಂಸ್ಕೃತ, ಕಲೆ, ಸಂಗೀತಕ್ಕೆ ತವರು ಮನೆ ಇದ್ದಂತೆ. ಸಾಧನೆ ಶಿಖರವಿದ್ದಂತೆ. ಪರಂಪರೆಯ ಅವಲೋಕನದಲ್ಲಿ ವಿವರಿಸಿದಾಗ ಅನುಭವ ಗಮ್ಯವಾಗುತ್ತದೆ. ಕಲಾದಗಿಯ ಕಲಾ ಐತಿಹಾಸಿಕ ಕುರುಹುಗಳಿಂದ ಹಿಡಿದು ಈ ಹೊತ್ತಿಗೆ ಸಾದಕರೊಂದಿಗಿನ ಬಹು ದೊಡ್ಡ ಪರಂಪರೆ. ಜಿಲ್ಲೆಗೆ ಕವಿ ಚಕ್ರವರ್ತಿ ರನ್ನ, ಹಲಸಂಗಿ ಗೆಳೆಯರ ಗುಂಪು, ಹಾನಗಲ್ಲ ಕುಮಾರ ಶಿವಯೋಗಿಗಳಂತ ಮಹಾಶಿವಯೋಗಿ, ಸಾದಕ ಸಂತರು ಶಿವಶರಣ ಬಸವಣ್ಣ, ಅಕ್ಕಮಹಾದೇವಿ, ಚೆನ್ನಬಸವಣ್ಣ, ವಿಜಯಮಹಾಂತೇಶ್ವರ ತರಹ ಶಿವಯೋಗಿಗಳು, ರೇವಣಸಿದ್ದ ಶಿವಯೋಗಿಗಳು, ಚರಂತಿಮಠ ಶ್ರೀಗಳು, ಹುಚ್ಚೇಶ್ವರ ಮಠದ ಶ್ರೀಗಳ ಪರಂಪರೆ ೫೦ ಕ್ಕೂ ಹೆಚ್ಚು ಧಾರ್ಮಿಕ ಗುರುಪರಂಪರೆ ಬದಾಮಿ, ಹಳ್ಳೂರ, ಸಿರಿಯೂರ, ಬೀಳಗಿ ಸಂಸ್ಥಾನಗಳ ಬಹುದೊಡ್ಡ ಹಳೆಯ ಸ್ಮಾರಕ ಭಿತ್ತಿ ಸಂಭ್ರಮ ಕಥೆಗಳ ವಾಸ್ತುಶಿಲ್ಪ ಸಾಂಸ್ಕೃತಿಕ ಪರಿಸರ ಹೊಂದಿರುವ ಇಲಕಲ್ಲ, ಅಮೀನಗಡ, ಮುಧೋಳ, ಕೆರೂರ, ಗುಳೇದಗುಡ್ಡ ಈ ಜಿಲ್ಲೆಯ ಪ್ರತಿಷ್ಠೆಯು ರಾಷ್ಟ್ರಮಟ್ಟದಲ್ಲಿ ಕೊಂಡೊಯ್ಯುದಿರುವುದು ವಿಶೇಷ. ಇಂತಹ ಭವ್ಯ ಪರಂಪರೆಯ ತಾಣದಲ್ಲಿ ಬದುಕಿರುವ ಪ್ರತಿಯೊಬ್ಬ ಸಾಧಕನಿಗೂ ಸಾಧನೆಯ ಮೆಟ್ಟಿಲುಗಳಾಗಿ ವರದಾನವಾಗಿದೆ. ಈ ಪರಿಸರ ಇಂತಹ ಪರಿಸರದಲ್ಲಿದ್ದುಕೊಂಡು ಸ್ಮರಣೆಗೈದ ಸಾಧಕರಲ್ಲೊಬ್ಬ ಮಲ್ಲಣ್ಣ ಬಡಿಗೇರ.

ಹುಟ್ಟಿದ್ದು ಬಾಗಲಕೋಟೆ ಜಿಲ್ಲೆಯ ಇದೇ ತಾಲೂಕಿನ ವೀರಾಪೂರ ಗ್ರಾಮದಲ್ಲಿ. ದಿನಾಂಕ: ೨೦-೦೬-೧೯೬೭ ರಂದು ನಾದೋಪಾಸಕ ಸಾತ್ವಿಕ ದಂಪತಿಗಳಾದ ಹನುಮಂತಪ್ಪ ಹಾಗೂ ಪಾರ್ವತಿಬಾಯಿ ಬಡಿಗೇರ ಇವರ ಮಗನಾಗಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ವೀರಾಪೂರ ಹಾಗೂ ಬಾಗಲಕೋಟೆಯಲ್ಲಿ ಪೂರೈಸಿದರು. ಪದವಿಪೂರ್ವ ಶಿಕ್ಷಣ ಅಭ್ಯಾಸ ಮಾಡುತ್ತಿರುವಾಗಲೇ ಮನೆಯ ವಾತಾವರಣ ಸಂಗೀತ ಕ್ಷೇತ್ರಕ್ಕೆ ಪ್ರವೇಶ ಮಾಡಲು ಪ್ರೇರಣೆಯಾಯಿತು.

ಇವರ ಧರ್ಮಪತ್ನಿ ಮಹಾದೇವಿ ಮಲ್ಲಣ್ಣ ಬಡಿಗೇರ. ಬೆನ್ನ ಹಿಂದಿನ ಬೆಳಕಂತೆ ಬದುಕಿನುದ್ದಕ್ಕೂ ಸಹಕಾರ ಕೊಟ್ಟವರು. ಪತ್ನಿ ಮತ್ತು ಮಕ್ಕಳು ಇವರ ಮೇಲೆ ಎಲ್ಲಿಲ್ಲದ ಪ್ರೀತಿ ಎನ್ನುವ ಮಾತನ್ನು ಸ್ವತಃ ಮಹಾದೇವಿಯವರನ್ನು ಸಂದರ್ಶಿಸಿದಾಗ ತಮ್ಮ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ಪವನಕುಮಾರ ೧೧ ವರ್ಷ, ಪಂಚಕುಮಾರ, ೯ ವರ್ಷದ ಇಬ್ಬರು ಮಕ್ಕಳು. ಒಬ್ಬ ಅಣ್ಣ ರಮೇಶಕುಮಾರ, ತಮ್ಮಂದಿರಾದ ವಸಂತ ಚಿದಾನಂದ, ಶಿವಾನಂದ, ಅಶೋಕ ಎಲ್ಲರೂ ಸಂಗೀತ ಶಿಕ್ಷಕರು. ಸಂಗೀತ ಸಾಧಕರೆನಿಸಿದ ಶಿಕ್ಷಕ, ಗುರು ಮತ್ತು ಜನ್ಮದಾತನಾದ ಶ್ರೀ ಹಣಮಂತಪ್ಪ ಬಡಿಗೇರ ಅವರು ನೀಡಿದ ಪರಿಸರದಿಂದಾಗಿ ಇಡೀ ಕುಟುಂಬ ಸಂಗೀತಮಯವಾಗಿರುವುದೆಂಬುದೇ ವಿಶೇಷ.

ತಂದೆಯವರು ಸಂಗೀತ ಗುರು ದಿಗ್ಗಜ ಶ್ರೀ ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿಗಳ ಶಿಷ್ಯರಾಗಿದ್ದು, ಅವರ ಆಶೀರ್ವಾದ ಪಡೆದುಕೊಂಡು ಶ್ರೀ ಗುರು ಗಾನಯೋಗಿ ಪಂಡಿತ ಪಂಚಾಕ್ಷರ ಕೃಪಾ ಪೋಷಿತ ಶ್ರೀ ಶಾರದಾ ಸಂಗೀತ ವಿದ್ಯಾಲಯವನ್ನು ಬಾಗಲಕೋಟೆಯಲ್ಲಿ ಸ್ಥಾಪಿಸುವ ಮೂಲಕ ಸಾವಿರಾರು ವಿದ್ಯಾರ್ಥಿಗಳಿಗೆ ಸಂಗೀತ ವಿದ್ಯೆಯನ್ನು ದಯಪಾಲಿಸುವುದರ ಮೂಲಕ ಬಾಳಿಗೂ ಮತ್ತು ಬದುಕಿಗೂ ದಾರಿದೀಪವಾಗಿದ್ದಾರೆ. ಅಂತಹ ಶಿಷ್ಯರಲ್ಲಿ ಒಬ್ಬರು ಮಲ್ಲಣ್ಣ ಬಡಿಗೇರ.

ತಂದೆಯವರ ಅಣತಿಯಂತೆ ಕಡಿಮೆ ಅವಧಿಯಲ್ಲಿ ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಸಂಗೀತ ವಿದ್ಯಾಭ್ಯಾಸವನ್ನು ಮುಗಿಸಿ ಮತ್ತೆ ವೀರಾಪೂರಕ್ಕೆ ಬಂದು ಜನ್ಮದಾತ ಗುರುಗಳಾದ ಹನುಮಂತಪ್ಪ ಬಡಿಗೇರ ಅವರಲ್ಲಿ ಸಂಗೀತ ಕಲಿತು, ಬಸವೇಶ್ವರ ಕಲಾಮಹಾವಿದ್ಯಾಲಯದ ಸಂಗೀತ ವಿಭಾಗದಲ್ಲಿ ಪ್ರವೇಶ ಪಡೆದು ಪ್ರೊ. ಬಳ್ಳೂರ, ಪ್ರೊ. ವ್ಹಿ.ಜೆ. ಮಹಾಪುರುಷ, ಪ್ರೊ. ಸಿದ್ದರಾಮಯ್ಯ ಮಠಪತಿ ಅವರ ಅಚ್ಚುಮೆಚ್ಚಿನ ಶಿಷ್ಯರಾಗಿ ಸಂಗೀತ ಸೇವೆಯನ್ನು ಮಾಡುತ್ತ ವಿದ್ಯಾಭ್ಯಾಸವನ್ನು ಮುಂದುವರೆಸಿಕೊಂಡು ಬಂದವರು.

ಕರ್ನಾಟಕ ಸರ್ಕಾರದ ವಿದ್ವತ್ ಗ್ರೇಡ್ ಗಾಯನ ಹಾಗೂ ತಬಲಾ ಶಿಕ್ಷಣವನ್ನು ಮುಗಿಸಿ ಅಲಹಾಬಾದ್ ಸಂಗೀತ ಪರೀಕ್ಷೆ ಪದವಿಯನ್ನು ಪಡೆದು ಅಪರೂಪದ ವ್ಯಕ್ತಿಯೆಂಬ ಕೀರ್ತಿಗೆ ಭಾಜನಾಗಿದ್ದಾರೆ.

ಬಸವೇಶ್ವರ ಕಾಲೇಜಿನಲ್ಲಿ ಸಂಗೀತ ಶಿಕ್ಷಕನಾಗಿ ಸೇವೆಯನ್ನು ಆರಂಭಿಸಿದ ಶ್ರೀಯುತರು ಸಿ.ಬಿ.ಎಸ್.ಸಿ. ಸ್ಕೂಲ್ ಹಾಗೂ ಟ್ರೇನಿಂಗ್ ಕಾಲೇಜಿನಲ್ಲಿ ತಮ್ಮ ಶಿಕ್ಷಕ ವೃತ್ತಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ವಿದ್ಯಾರ್ಥಿಗಳ ಅಚ್ಚು ಮೆಚ್ಚಿನ ಗುರುಗಳಾಗಿ ಕೀರ್ತಿಯನ್ನು ಪಡೆದವರು.

ಇವರ ಸಾಧನೆ ವಿದ್ವತ್ ಪರಿಶ್ರಮಕ್ಕೆ ತಕ್ಕಂತೆ ಶ್ರೀ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಸಂಗೀತ ಶಿಕ್ಷಕನಾಗಿ ಸರ್ಕಾರಿ ಸೇವೆಯನ್ನು ಮಾಡುವ ಭಾಗ್ಯ ಒದಗಿ ಬಂದಿತು.

ಶಿಕ್ಷಕ ವೃತ್ತಿಯ ಜೊತೆಗೆ ಬರಹದ ಗೀಳನ್ನು ಹಚ್ಚಿಕೊಂಡ ಮಲ್ಲಣ್ಣ ಬಡಿಗೇರ ಅವರು ಕಡಿಮೆ ಅವಧಿಯಲ್ಲಿಯೇ ಕರ್ನಾಟಕ ಸರಕಾರ ನಡೆಸುವ ಸಂಗೀತ ಪರೀಕ್ಷೆಗೆ ಸಂಬಂಧಿಸಿದಂತೆ ಪರಿಷ್ಕೃತ ಪದ್ಯ ಆಧಾರಿತ ೧. ಜ್ಯೂನಿಯರ್ ಗ್ರೇಡ್ ಗಾಯನ, ೨. ಮನದಂಗಳ, ಕೃತಿಗಳನ್ನು ಬರೆದು ಅವುಗಳು ಸಂಗೀತ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟ ಅಪರೂಪದ ಬರಹಗಳು.

* **ಡಿ.ವಿಜಿ.ಯವರು ಒಂದು ಕಡೆ ಹೇಳಿದಂತೆ :**

"ಸಂಗೀತ ಕಲೆಯೊಂದು ಸಾಹಿತ್ಯ ಶಿಲೆಯೊಂದು
ಅಂಗಾಂಗ ಭಾವರೂಪಣದ ಕಲೆಯೊಂದು
ಸಂಗಳಿಸಲಿ ಈ ಕಲೆಗಳನುನಯವು ಚರ್ಯಯಲಿ
ಮಂಗಳೋನ್ನತಿ ಕಲೆಯೋ" **ಮಂಕುತಿಮ್ಮ-**

ಈ ಕ್ಷೇತ್ರಕ್ಕೆ ಪ್ರವೇಶ ಮಾಡುವವರಿಗೆ ದಾರಿದೀಪದಂತಾಗಿದೆ. ಈ ಕೃತಿ ಜೊತೆಗೆ ಕರಾಟೆ ಪಟುಗಳಾಗಿ, ಹಾಸ್ಯಗಾರರಾಗಿ ಯುವ ಕವಿಗಳಾಗಿ ಸಾಧನೆಯನ್ನು ಮಾಡಿದವರು. ಇವರ ಸಾಧನೆಗಳನ್ನು ಮೆಚ್ಚಿ ಜಿಲ್ಲಾ ಮಟ್ಟದ ಪ್ರಶಸ್ತಿಗಳು, ರಾಜ್ಯ ಮಟ್ಟದ ಪ್ರಶಸ್ತಿಗಳು ಅರಸಿ ಬಂದಿವೆ. ಕನ್ನಡ ಸಂಸ್ಕೃತಿ ಇಲಾಖೆ, ಸಾಹಿತ್ಯ ಪರಿಷತ್, ಕರ್ನಾಟಕ ಸರಕಾರದ ಅಧೀನ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ.

ಹಾರ್ಮೋನಿಯಂ, ತಬಲಾ, ಸಿತಾರಾ ಮುಂತಾದ ವಾದ್ಯಗಳ ನಿಪುಣತೆಯನ್ನು ಹೊಂದಿದ ಇವರು ಜಿಲ್ಲೆಯಲ್ಲಿ ಬಹುತೇಕ ಕಾರ್ಯಕ್ರಮಗಳಿಗೆ ಹಾರ್ಮೋನಿಯಂ ನುಡಿಸಿದವರು. ರನ್ನ ವೈಭವ, ರಾಜ್ಯಮಟ್ಟದ ವೈದ್ಯಾಧಿಕಾರಿಗಳ ಸಮ್ಮೇಳನ, ಉತ್ಸವ, ಹಂಪಿ ಉತ್ಸವ ಪಟ್ಟದಕಲ್ಲು ಉತ್ಸವ, ಬದಾಮಿ ಉತ್ಸವ, ಬಾಗಲಕೋಟ ಜಿಲ್ಲೆ ೩ನೇ ಸಾಹಿತ್ಯ ಸಮ್ಮೇಳನ ಡಾ. ಪುಟ್ಟರಾಜ ಗವಾಯಿಗಳ ಹಾಗೂ ಪಂಡಿತ ಭೀಮಸೇನ ಜೋಶಿಯವರ ಸ್ವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ವಿಶೇಷ. 'ಹರಿದಾಸ ಹಬ್ಬ' ನಾಡಿನ ವಿವಿಧ ಮಠಮಾನ್ಯಗಳಲ್ಲಿ ಅನೇಕ ಮಹಾವಿದ್ಯಾಲಯ ವಾರ್ಷಿಕ ಸಂಗೀತ ಲೋಕದಲ್ಲಿ ಸಮಾಜವನ್ನು ಪಾಲ್ಗೊಳ್ಳುವಂತೆ ಮಾಡಿರುವುದು ಇವರ ಸಾಧನೆಗೊಂದು ಕನ್ನಡಿ.

ಆಕಾಶವಾಣಿ ಮತ್ತು ದೂರದರ್ಶನ ಕಲಾವಿದರಾಗಿ ಮಲ್ಲಣ್ಣ ಬಡಿಗೇರ ಚಿರಪರಿಚಿತರು. ಸ್ವತಃ ಕಲಾವಿದರಾಗಿದ್ದು ಇವರು ನೂರಾರು ಕಲಾವಿದರನ್ನು ಸಿದ್ಧಗೊಳಿಸಿ ನಾಡಿಗೆ ಕೊಟ್ಟವರು. ಸದ್ಗುರು ಸಮರ್ಥ ಮಾಧವಾನಂದ ಪ್ರಭುಜಿ ಇಂಚಿಗೇರಿ ಮಠದ ಸಂಪ್ರದಾಯದ ಕ್ಯಾಸೆಟ್, ಶ್ರೀ ಪರಮ ರಾಮಾರೂಢ ಮಠದ ಕ್ಯಾಸೆಟ್, ಗ್ರಾಮದೇವತೆ ವೀರಾಪೂರ ಕ್ಯಾಸೆಟ್, ವಚನ, ಭಾವಗೀತೆ, ಭಕ್ತಿಗೀತೆಗಳ ಕ್ಯಾಸೆಟ್‌ಗಳನ್ನು ಮಾಡಿದ ಕೀರ್ತಿ ಇವರದು. ಒಂದು ಕಡೆ ಸಂಗೀತ ಸಾಹಿತ್ಯದ ಜವಾಬ್ದಾರಿಯನ್ನು ಹೊತ್ತುಕೊಂಡು ಜಿಲ್ಲೆಯನ್ನು ಪ್ರತಿನಿಧಿಸಿದರೆ, ಇನ್ನೊಂದೆಡೆ

ಕುಟುಂಬದ ಜವಾಬ್ದಾರಿ ಎರಡನ್ನೂ ಸಮರ್ಥವಾಗಿ ನೆರವೇರಿಸಿಕೊಂಡು ಬಂದ ಮಲ್ಲಣ್ಣನವರು ಮನೆಯನ್ನು ಗೆದ್ದು, ಮಾರನ್ನು ಗೆದ್ದ ಅಪರೂಪದ ಸ್ಮರಣೀಯ ಸಾಧಕ. ಅಪಾರ ಗುರುಬಳಗ, ಸ್ನೇಹಬಳಗ, ಶಿಷ್ಯ ಬಳಗವನ್ನು ಹೊಂದಿರುವ ಇವರು ಅಕಾಲಿಕ ಮರಣವನ್ನು ಹೊಂದಿರುವರು. ನಮ್ಮ ಮಧ್ಯೆ ಇರುವ ಆತಂಕ. ದಿನಾಂಕ: ೦೫-೧೧-೨೦೧೩ ರಂದು ಸಾಹಿತ್ಯ ಲೋಕದಿಂದ ಬಾರದ ಲೋಕಕ್ಕೆ ಹೋಗಿ ಸಾಧನೆಯ ಮೂಲಕ ನಮ್ಮ ಮಧ್ಯ ಸ್ಮರಣೀಯರಾಗುತ್ತಾರೆ. ಕನ್ನಡ ಸಂಸ್ಕೃತಿ ಇಲಾಖೆ ಹಾಗೂ ಗುರುಗಂಗಾಧರ ಸಂಗೀತ ಮಹವಿದ್ಯಾಲಯ ವಿದ್ಯಾಗಿರಿ ಬಾಗಲಕೋಟ ಇವರ ಸಹಯೋಗದಲ್ಲಿ ಮಲ್ಲಣ್ಣ ಬಡಿಗೇರ ಅವರಿಗೆ "ಸ್ವರ ಶ್ರದ್ಧಾಂಜಲಿ" ಕಾರ್ಯಕ್ರಮವನ್ನು ನೆರವೇರಿಸಿದ್ದರು.

ಅಡಿ ಟಿಪ್ಪಣಿ

೧. ಕನಕದಾಸರು, ಮೋಹನ ತರಂಗಿಣಿ, ಪು-೧೮೫

೨. ಶಿವಾನಂದ ಶೇಲ್ಲಿಕೇರಿ, ಶ್ರೀಕೃಷ್ಣಪಾರಿಜಾತ ಪ್ರಾತಿನಿಧಿಕ ಕಂಪನಿಗಳು, ಪು-೨

೩. ಡಾ. ವಿರೇಶ ಬಡಿಗೇರ, ಬಾಚಿಕಾಯಕದ ಬಸವಯ್ಯ ವೃತ್ತಿ ಮತ್ತು ತತ್ವ ಮೀಮಾಂಸೆ, ೨೦೦೭, ಪು-೬೮

೪. ಡಾ. ಶೇಖರಾಚಾರ್ಯ ಬಿ., ಪಾಂಚಾಳರ ಬದುಕು-ವೃತ್ತಿ, ೨೦೧೬, ಮಂಟಪಮಾಲೆ, ಪು-೧೧

೫. ದ್ಯಾಮಣ್ಣ ಕಾಳಪ್ಪ ಬಡಿಗೇರ, ಸಂದರ್ಶನ, ಅನಗವಾಡಿ, ದಿನಾಂಕ ೨೮-೦೬-೨೦೧೯

೬. ವಿಜಯಕುಮಾರ ಕಟಗಿಹಳ್ಳಿಮಠ, ದೀಪ ಧಹಣತೆಗಳು, ೨೦೧೫, ಪು-೨೦೧೨

೭. ವಿಜಯಕುಮಾರ ಕಟಗಿಹಳ್ಳಿಮಠ, ದೀಪ ಧಹಣತೆಗಳು, ೨೦೧೫, ಪು-೭೯೩

೮. ಡಾ. ಪಾಂಡುರಂಗಬಾಬು, ಪಾಂಚಾಳ ವೃತ್ತಿ ಪದಕೋಶ ವೃತ್ತಿಪದ ಮಂಜರಿ, ಪು-೬೫

೯. ಡಾ. ಸಿದ್ದಲಿಂಗಮ್ಮ ಬಿ.ಜಿ., ಮಧ್ಯಕಾಲೀನ ಕರ್ನಾಟಕದಲ್ಲಿ ಕುಶಲಕರ್ಮಿಗಳು, ಪು-೮೭

೧೦. ಶಿವಾನಂದ ಶೆಲ್ಲಿಕೇರಿ, ಶ್ರೀಕೃಷ್ಣಪಾರಿಜಾತ ಪ್ರಾತಿನಿಧಿಕ ಕಂಪನಿಗಳು, ಪು-೭೩

೧೧. ಡಾ.ಬಸವರಾಜ ಮಲಶೆಟ್ಟಿ, ಉತ್ತರ ಕರ್ನಾಟಕದ ಬಯಲಾಟಗಳು, ೧೯೮೩, ಪು-೧೫೬

೧೨. ಡಾ.ಬಸವರಾಜ ಮಲಶೆಟ್ಟಿ, ಉತ್ತರ ಕರ್ನಾಟಕದ ಬಯಲಾಟಗಳು, ೧೯೮೩, ಪು-೧೪೦

ಅಧ್ಯಾಯ : ಏಳು

ಕೃಷ್ಣಪಾರಿಜಾತ ಹಾಗೂ ಪಾಂಚಾಳ ಕಲಾವಿದರ ಸಮಕಾಲೀನ ಸಂದರ್ಭಗಳು

೭.೧. ಪ್ರವೇಶ :

೭.೨. ಶ್ರೀಕೃಷ್ಣ ಪಾರಿಜಾತ ಅಂದು-ಇಂದು

೭.೨.೧. ಕೃಷ್ಣ ಪಾರಿಜಾತ ಕಥೆಯ ಸ್ಥಿತ್ಯಂತರ

೭.೨.೨. ಪಾರಿಜಾತ ರಂಗಭೂಮಿ ವೇದಿಕೆಗಳು

೭.೨.೩. ವೇಷಭೂಷಣಗಳ ಬದಲಾವಣೆ

೭.೨.೪. ಪ್ರೇಕ್ಷಕರ ಕಲಾಸಕ್ತಿ ಬದಲಾವಣೆ

೭.೩. ಪಾರಿಜಾತದಲ್ಲಿ ಪಾಂಚಾಳ ಕಲಾವಿದರ ಸ್ಥಿತ್ಯಂತರಗಳು :

೭.೩.೧. ಪಾರಿಜಾತ ಕಲಾವಿದರ ಮನೋಭೂಮಿಕೆ ಅಳಿವು-ಉಳಿವು

೭.೩.೨. ಪಾರಿಜಾತ ಕಲಾವಿದರ ವಾದ್ಯ ಪರಿಕರಗಳ ಬದಲಾವಣೆ

೭.೩.೩. ಸಂಗೀತದಲ್ಲಿ ಹಿಮ್ಮೇಳ, ಮುಮ್ಮೇಳ ಕಲಾವಿದರು

೭.೩.೪. ಪಾಂಚಾಳರ ಕುಲಕಸುಬುಗಳ ಸ್ಥಿತ್ಯಂತರ

೭.೩.೫. ಪಾರಿಜಾತ ಜ್ಞಾನ ಕೌಶಲ್ಯದ ಬದಲಾವಣೆ

೭.೪. ಸಮಕಾಲೀನ ಸಂದರ್ಭದಲ್ಲಿ ಪಾಂಚಾಳ ಕಲಾವಿದರ ಅಭಿಪ್ರಾಯಗಳು

೭.೪.೧. ಸಂಗೀತ ಉಪಕರಣಗಳ ಬಳಸುವ ಸ್ಥಿತಿ

೭.೪.೨. ಪಾರಿಜಾತ ಕಲಾವಿದರ ಅಭಿಪ್ರಾಯಗಳು

೭.೪.೩. ಪಾರಿಜಾತ ನೋಡುವ ಮತ್ತು ಆಸ್ವಾದಿಸುವವರ ಅಭಿಪ್ರಾಯ

೭.೪.೪. ರಂಗಭೂಮಿಗೆ ಪಾಂಚಾಳರ ಒಡನಾಟಗಳು

ಅಧ್ಯಾಯ : ೭

ಕೃಷ್ಣಪಾರಿಜಾತ ಹಾಗೂ ಪಾಂಚಾಳ ಕಲಾವಿದರ ಸಮಕಾಲೀನ ಸಂದರ್ಭಗಳು

೭.೧. ಪ್ರವೇಶ :

ಬದಲಾವಣ ಎಂಬುದು ಜಗದ ನಿಯಮ. ಮಾನವ ತನ್ನ ಅವಶ್ಯಕತೆ ಹಾಗೂ ಬೇಡಿಕೆಗಳಿಗೆ ಅನುಗುಣವಾಗಿ ಪರಿವರ್ತನೆ ಬಯಸುವದು ಸಹಜವಾಗಿದೆ. ಅದರಂತೆ ಈ ಪಾರಿಜಾತವು ಕೂಡಾ. ಜನಪದ ಸಾಹಿತ್ಯ ಸಹಜವಾದದ್ದು. ಹಳ್ಳದ ದಂಡೆಯಲ್ಲಿರುವ ಕರಿಕೆಯ ಕುಡಿಯಂತೆ ಅದರ ಆಗು ಹೋಗುಗಳು. ಕರಿಕೆ ಬಿದ್ದಲ್ಲಿಯೇ ಬೇರುಬಿಡುತ್ತದೆ. ಮಳೆ ಬಂದಾಗ ಚಿಗಿತು ಕುಡಿಯೊಡೆದು ಹಬ್ಬುತ್ತದೆ. ಚಳಿಗೆ ಕುಗ್ಗುತ್ತದೆ. ಬೇಸಿಗೆಯ ಬಿಸಿಲಿಗೆ ಕಂದಿಕುಂದಿ ಕಣ್ಣಿಗೆ ಕಾಣದಂತಾಗುತ್ತದೆ. ಆದರೂ ಅದರ ತಳಬೇರು ನೆಲದ ಮರೆಯಲ್ಲಿ ಜೀವಂತವಾಗಿದ್ದು ಮಳೆಗಾಲವನ್ನೇ ನಿರೀಕ್ಷಿಸುತ್ತ ಬದುಕುತ್ತದೆ. ಅದರಂತೆ ಜನಪದ ಸಾಹಿತ್ಯದ ಬಾಳು ಬದುಕು ಜನತೆಯ ಅಭಿರುಚಿಯ ಮೇಲೆ ಅವಲಂಬಿಸಿ ನಿಂತಿರುತ್ತದೆ.

ಕನ್ನಡ ಬಯಲಾಟದ ಉಗಮ ಬೆಳವಣಿಗೆ ಸ್ಥಿತಿಗತಿಗಳನ್ನು ಗುರುತಿಸಲು ಖಚಿತ ಆಧಾರಗಳಿಲ್ಲ. ಒಂದೆರಡು ಇದ್ದರೂ ಕಲೆಗೆ ಸಮರ್ಪಕವಾಗುವುದಿಲ್ಲ. ಬಯಲಾಟ ಒಂದು ಕಲೆಯಲ್ಲ. ಅನೇಕ ಕಲೆಗಳ ಬಲೆ. ಅದರಲ್ಲಿ ವಿವಿಧ ಕಲೆಗಳು ಹಾಸುಹೊಕ್ಕಾಗಿ ಹೆಣೆದುಕೊಂಡಿವೆ. ಈ ಸಮ್ಮಿಶ್ರ ಕಲೆ ಹದಗೊಂಡು ಮುದನೀಡಲು ಬಹುಕಾಲ ಹಿಡಿದಿರಬೇಕು. ಸಹಸ್ರಾರು ಕಲಾವಿದರು ತಮ್ಮ ಕಲೆಗಳನ್ನು ಕೃಷ್ಣ ಪಾರಿಜಾತದ ಆಟದಲ್ಲಿ ಪಳಗಿ ದೀಪಶಾಂತವಾಗಿರುವರು.

ಕನ್ನಡ ಶ್ರೀಕೃಷ್ಣಪಾರಿಜಾತ ಸೆಲೆಯೊಡೆದದ್ದು ರಾಯಚೂರ ಜಿಲ್ಲೆಯ ಅಪರಾಳ ತಮ್ಮಣ್ಣನಿಂದ ದಲ್ಲಾದರೂ ಗೀತ ರೂಪಕ ಆಟವಾಗಿ ಬೆಳೆಯುತ್ತ ಜನಪದರ ಕಲಾಭಿವ್ಯಕ್ತಿಗೆ ವಾಹಕವಾಗುತ್ತ ಲಕ್ಷೋಪಲಕ್ಷ ಪ್ರೇಕ್ಷಕರ ಮನಸೆಳೆದು ವಿಜಯಪುರ, ಬಾಗಲಕೋಟೆ, ಬೆಳಗಾವಿ, ಜಿಲ್ಲೆಗಳ ಕೃಷ್ಣಾತೀರದ ಎಡ–ಬಲದಲ್ಲಿ ಪಾರಿಜಾತದ ಸೊಬಗು ವರ್ಧಸಿದೆ. ಮೊದಲು ವಿಷ್ಣು ಮಹಿಮೆ

ಅಥವಾ ಶ್ರೀಕೃಷ್ಣ ಚರಿತ್ರೆ ಪುರಾಣವಲಯದಲ್ಲಿ ಪಡೆದುಕೊಂಡ ಹರುಹೂ ದೊಡ್ಡದು. ಸುತ್ತ ಮುತ್ತಲಿನ ಘಟನಾವಳಿಗಳು ನಾಟಕೀಯ ಗುಣಗಳಿಂದ ವಿದ್ವಾಂಸರ ಹಾಗೂ ಸಾಮಾನ್ಯರನ್ನು ಆಕರ್ಷಿಸುತಿತ್ತು. ನಂತರ ಪರಿವರ್ತನೆಯ ಸ್ಥಿತ್ಯಂತರಗಳ ಕಾಣುತ್ತಾ ಸಾಗುತ್ತಿದೆ.

ಪಾಂಚಾಳರ ಜನಪದ ಜ್ಞಾನವೆಂದರೆ ಹಾಡು, ಕುಣಿತ, ಆಚರಣೆ, ದುಡಿಮೆ, ಪ್ರಕೃತಿ ಮುಂತಾದ ಆಯಾ ಕಾಲಘಟ್ಟದ ಜನಜೀವನದ ಬದುಕಿನ ಹಾಗೂ ಬದುಕುತ್ತಿರುವ ವರ್ತಮಾನದ ಕ್ರಿಯಾ ಶೀಲತೆಯನ್ನು ತೆರೆದು ತೋರುತ್ತದೆ. ಜ್ಞಾನ ಮತ್ತು ಅಧಿಕಾರ ರೂಪದ ಸಾಹಿತ್ಯ ಸೃಷ್ಟಿಯ ವಾದ್ಯ ಸಲಕರಣೆಗಳಲ್ಲಿ, ಸಂಗೀತದಲ್ಲಿ, ದೇವರ ಜಾತ್ರೆ, ವೇಷಭೂಷಣಗಳಲ್ಲಿ ಪರಿವರ್ತನೆ ಕಂಡುಬರುವದು. ಸೃಷ್ಟಿಯ ನೆಲೆಗಳು ನಿಜವಾದ ಕಲಾಭಿವ್ಯಕ್ತಿಗೆ ಮಾರಕವಾಗುತ್ತವೆ. ಕೃಷ್ಣಪಾರಿಜಾತದ ಆಟಗಳು ಪಾಂಚಾಳ ಕಲೆಗಳಲ್ಲಿ ಜನಪದರ ಸಂಸ್ಕೃತಿಯ ಪುನರಾವರ್ತನೆಯ ರೂಪದಲ್ಲಿ ಹೇಳುವ ಕೇಳುವ ಹಾಡುವ ಕಥೆಗಳ ಕಟ್ಟುವ ಕ್ರಿಯೆಗಳು. ಪಂಡಿತ ಪ್ರೇಕ್ಷಕ ಕಲಾವಿದ ಮೇಳಗಳು ಸಂಗೀತ ವಾದ್ಯ ಸಲಕರಣೆಗಳು ಮೂಲ ರೂಪದಿಂದ ಸ್ಥಿತ್ಯಂತರಗೊಳ್ಳುತ್ತಾ ಸಾಗಿರುವುದು. ಜನಪದ ಲೋಕಕ್ಕೆ ದಿಗ್ಭ್ರಮೆಯಾಗಿದೆ. ಪ್ರತಿಯೊಂದು ಜನಪದ ಕಲೆಯು ಆಯಾ ಕಾಲದ ಜನಜೀವನಕ್ಕೆ ತಕ್ಕಂತೆ ಹೊಂದುತ್ತಾ ಸಾಗುತ್ತದೆ. ಕಥೆ, ಸಂಭಾಷಣೆ, ಉಡುಗೆ-ತೊಡುಗೆ, ರಂಗಸಜ್ಜಿಕೆಗಳು, ಊಟ ಉಪಚಾರಗಳು, ಮುಂತಾದವುಗಳು ಮೂಲ ರೂಪದಿಂದ ರೂಪಾಂತರಗೊಳ್ಳುತ್ತವೆ. ಅದರಲ್ಲಿ ಕೃಷ್ಣಪಾರಿಜಾತ ಹೊರತಾಗಿಲ್ಲ. ಅನೇಕ ಸ್ಥಿತ್ಯಂತರಗಳನ್ನು ಕಂಡಿದೆ.

ಕೃಷ್ಣಪಾರಿಜಾತ ಕಂಪನಿ ಮೇಳ ರೂಪದಲ್ಲಿ ಆಸಕ್ತಿ ಇತ್ತು. ಕಲಾಸಕ್ತರಿದ್ದರು. ಏಕೆಂದರೆ ಮೇಳ ಎಂದರೆ ಸಮಾನ ಮನಸ್ಸುಗಳ ಸಾಧಿತ ಪ್ರವೃತ್ತಿ. ಒಬ್ಬೊಬ್ಬರ ಆಲೋಚನೆ ಬೇರೆ ಇದ್ದರೂ ಎಲ್ಲರ ಉದ್ದೇಶ ಒಂದೇ ಆಗಿತ್ತು. ಆಸಕ್ತಿ ಆಲೋಚನೆಯೂ ಪಾರಿಜಾತದಂತ ಕಲಾಪ್ರಕಾರವಾಗಿದ್ದರೂ, ಅಪರಾಳ ತಮ್ಮಣ್ಣನ ಪಾರಿಜಾತ ಪಠ್ಯವಾಗಿದ್ದರು, ಅಕ್ಷರವನ್ನು ದಾಟಿ ರಂಗರೂಪ ಪಡೆದದ್ದು ಕುಲಗೋಡ ತಮ್ಮಣ್ಣ. ಕೌಜಲಗಿ ನಿಂಗವ್ವ, ಸವದಿ ಮಲ್ಲಯ್ಯ, ಜಮಖಂಡಿ ಆಪ್ಪಾಲಾಲ ನದಾಫ, ಸೊನ್ನ ಗ್ರಾಮದ ಗೋವಿಂದ ಪತ್ತಾರ, ನಾರಾಯಣ ಪತ್ತಾರ, ಕೃಷ್ಣಾಜಿ ದೇಶಪಾಂಡೆ, ಟಕ್ಕಳಕಿ ವಿಠ್ಠಲ, ಭೀಮಶಿ ಕಂಬಾರ, ನಾರಾಯಣ, ಬಡಿಗೇರ ಮುಂತಾದ ಕಲಾವಿದರ ಶ್ರಮ ಮುಖ್ಯ ವಿಚಾರ. ಎರಡು ನೂರ ಐವತ್ತು ವರ್ಷಗಳ ಹಿನ್ನೆಲೆಯುಳ್ಳ ಪಾರಿಜಾತ ಕತೆಯು ಆಯಾ ಕಲಾವಿದರ ಬಳಕೆಯಲ್ಲಿ ಬದಲಾಗುತ್ತಾ ಸಾಗಿ ಜೀವಂತವಾಗಿರಿಸಿದೆ.

ಪಾರಿಜಾತ ಕಲಾವಿದರು ತಾಲಿಮು ಮಾಡಿದರೂ ಸದಾ ದಿನ ನಿತ್ಯದ ಕಾಯಕದ ಬಂಡಿ ಹೊಡೆಯುವಾಗ, ದನ ಕಾಯುವಾಗ, ಸ್ನಾನ ಮಾಡುವಾಗ, ಸದಾ ಕಲೆಯ ಗುಂಗಿನಲ್ಲಿರಬೇಕಾಗುತ್ತದೆ. ಏಕೆಂದರೆ ಪಾರಿಜಾತದಂತ ಜನಪದ ಕಲೆಯು ಈಜು ಕಲಿತು ನೀರಿಗಿಳಿಯುವುದಲ್ಲ. ಹೆಚ್ಚಿನ ಸಂದರ್ಭಗಳು ನೀರಿನೊಳಗೆ ಇಳಿದು ಈಜು ಕಲಿಯುವಂತಿರುತ್ತದೆ.

ಪಾರಿಜಾತದ ಮೂಲ ಸಂಗೀತ ನಾದ ಪರಂಪರೆಯಿಂದ ರೂಪುಗೊಳ್ಳುವ ಕಲಾವಿದ ಪಾತ್ರಕ್ಕೆ ಜೀವತುಂಬಿಕೊಳ್ಳುತ್ತಾನೆ. ಪಾರಿಜಾತದಂತಹ ಕಲಾಕಾರರು ನಾದದೊಡಲಿಂಗದ ಹಾಡು ಅಭಿನಯ ಮೂಲಕ ರಂಗ ಕಳೆಕಟ್ಟುತ್ತದೆ ವಿನಃ, ಶಬ್ದ ಅರ್ಥಗಳಿಂದಲ್ಲ. ಶಬ್ದ ಹುಸಿಯಾದರೆ ನಾದದ ಲಯ ತುಂಬಿಕೊಳ್ಳುತ್ತದೆ.

ಒಟ್ಟಾರೆಯಾಗಿ ಕೃಷ್ಣಪಾರಿಜಾತ ವಿವಿಧ ಸಮುದಾಯಗಳೊಂದಿಗೆ ಹೊಂದಿಕೆಯಾಗಿ ಜನಸಾಮಾನ್ಯರ ಆಟವಾಗಿ ಮುಂದುವರೆದು ಪಾಂಚಾಳ ಸಮುದಾಯದವರು ಕಲಾವಿದರಾಗಿ, ಸಂಘಟಕರಾಗಿ, ಮಾಲೀಕರಾಗಿ ಕಂಪನಿ ಏಳುಬೀಳುಗಳಲ್ಲಿ ಸಾಗಿದವರು. ವಾದ್ಯ ಪರಿಕರಗಳ ಪೆಟಿಗೆ, ತಾಳ, ತಬಲ, ತಯಾರಕರಾಗಿ, ಕಲಾವಿದರಾಗಿ ಸಂಗೀತ ಮಾಸ್ತರರಾಗಿ ಸಲ್ಲಿಸಿದ ಸೇವೆ ಅನುಪಮವಾದದ್ದು. ಇತ್ತೀಚಿನ ಪ್ರಸ್ತುತ ದಿನಗಳಲ್ಲಿ ನಾಟಕಗಳನ್ನು ನೋಡುವ ಪ್ರೇಕ್ಷಕ ವರ್ಗ ವಿರಳವಾಗಿದೆ. ಅದಕ್ಕೆ ನೂರೆಂಟು ಕುಂದುಕೊರತೆಗಳಿವೆ. ಕೃಷ್ಣಪಾರಿಜಾತ ಕಂಪನಿಗಳು ಕಡಿಮೆಯಾಗಿವೆ ಕಲಾವಿದರು ಸಿಗುವುದಿಲ್ಲ. ಹೊಸ ಹೊಸ ಮನೋರಂಜನೆಯ ಬಾಹ್ಯಾಡಂಬರ ಕಲೆಗೆ ಆಧುನಿಕ ಜಗತ್ತು ಮಾರು ಹೋಗುತ್ತದೆ. ಇದಕ್ಕೆ ಅವರ ಅಭಿವೃದ್ಧಿಗೆ ತಕ್ಕಂತೆ ಡಿಸೈನ್ ಕಲೆಗಳು ಸಂಗೀತ ಬೆರೆತುಕೊಂಡಿದೆ. ಆದ್ದರಿಂದ ಕೃಷ್ಣಪಾರಿಜಾತವು ಕೂಡ ಎಲ್ಲಾ ರೀತಿಯಿಂದ ಬದಲಾವಣೆ ಕಂಡುಕೊಂಡಿರುವುದು ಗೋಚರಿಸುತ್ತದೆ.

ಆಧುನಿಕತೆ ಭರಾಟೆಯಲ್ಲಿ ಜನಪದ ಸಂಸ್ಕೃತಿ ಅಳಿವಿನಂಚಿಗೆ ತಲುಪಿದೆ. ಜನರಿಂದ ಜನರಿಗಾಗಿ ಇರುವ ಈ ಸಂಸ್ಕೃತಿಯನ್ನು ಉಳಿಸಿ ಬೆಳೆಸದಿದ್ದರೆ ದೊಡ್ಡ ಸಂಪತ್ತು ಕಳೆದುಕೊಳ್ಳಬೇಕಾಗುತ್ತದೆ. ನಗರ ಮಾತ್ರವಲ್ಲದೆ ಗ್ರಾಮೀಣ ಭಾಗಕ್ಕೂ ಆಧುನಿಕತೆ ಸ್ಪರ್ಶವಾಗಿರುವುದು ಜನಪದ ಸಂಸ್ಕೃತಿ ಮೇಲೆ ಕರಿನೆರಳು ಬಿದ್ದಿದೆ. ಜಾಗತೀಕರಣ, ಉದಾರೀಕರಣ, ಹಾಗೂ ಬಂಡವಾಳಶಾಹಿಯಿಂದ ಪಾಂಚಾಳರ ಸಮುದಾಯದ ಸಂಸ್ಕೃತಿಯಲ್ಲಿ ನೈಜ ದೇಸಿ ಸಂಸ್ಕೃತಿ ಮಾಯವಾಗುತ್ತಿದೆ. ಪಾಶ್ಚಾತ್ಯ ಬದುಕಿಗೆ ಪ್ರತಿಯೊಬ್ಬರು ಮಾರುಹೋಗಿ ತನ್ನತನ ಕಳೆದುಕೊಳ್ಳುತ್ತಿದ್ದಾರೆ. ಈ ದಿಸೆಯಲ್ಲಿ ಸಾಂಸ್ಕೃತಿಕ ಅಧ್ಯಯನವು ಮಹತ್ವ ಪಡೆಯುತ್ತದೆ.

೭.೨. ಶ್ರೀಕೃಷ್ಣ ಪಾರಿಜಾತ ಅಂದು-ಇಂದು :

೭.೨.೧. ಕೃಷ್ಣ ಪಾರಿಜಾತ ಕಥೆಯ ಸ್ಥಿತ್ಯಂತರ :

ಕೃಷ್ಣಪಾರಿಜಾತವು ಒಂದು ಕಾಲಕ್ಕೆ ತನ್ನ ನೆಲೆ ಬೆಲೆಯನ್ನು ಕಂಪನಿಗಳ ಮೂಲಕ ಕಂಡುಕೊಂಡಿತು. ಪಾರಿಜಾತ ರಂಗಭೂಮಿಯನ್ನು ಬೆಳೆಸಿದ ಕಂಪನಿ ಹಾಗೂ ಕಲಾವಿದರ ಅವಿರತ ಶ್ರಮದ ಫಲವಾಗಿದೆ. ಪ್ರೌಢಾವಸ್ಥೆಯನ್ನು ತಲುಪಿದ ಕಂಪನಿಯು ಆಂತರಿಕ ಕಲಹಗಳಿಂದ ಲಾಭದಾಯಕ ಆಸೆ-ಆಕಾಂಕ್ಷೆಗೆ ಒಳಗಾಗಿ ಕಲಾವಿದರು ನಾಟಕ ಕಂಪನಿಯಿಂದ ಕಂಪನಿಗೆ ಬದಲಾಗುತ್ತಾರೆ. ಕೃಷ್ಣ ಕೊರವಂಜಿ, ದ್ಯುತಿ, ನಾರದ, ಸತ್ಯಭಾಮೆ, ಮುಂತಾದ ಪಾತ್ರದಾರಿಗಳು

ಪ್ರಮುಖ ಕಲಾವಿದರಲ್ಲಿ ವಿಶೇಷ ಕಳೆ ಇರುತಿತ್ತು. ಹೀಗೆ ಬೆಳೆದು ಬಂದ ಪಾರಿಜಾತ ಮೇಳದ ಬದುಕಿನಲ್ಲಿ ಕಲಾವಿದರು ಸುಟ್ಟುಕೊಂಡು ತಂಡ ಬೆಳೆಸಿದ್ದಾರೆ. ಅನೇಕ ಪಾರಿಜಾತ ಕಂಪನಿಗಳು, ಕಲಾವಿದರು ಹುಟ್ಟುವುದು ಸಾಯುವುದು ರೂಪಾಂತರವಾಗುವುದು. ಹೊಸ ಹುಟ್ಟಾಗುವುದು ನಿರ್ಮಾಣವಾಗುವುದು. ಇವೆಲ್ಲವೂ ನಿಸರ್ಗದಲ್ಲಿನ ಸಹಜವಾದ ಮಾನಗಳು. ಜೀವವೈವಿಧ್ಯಕ್ಕೆ ಇದು ಕಾರಣ ಇರಬಹುದು. ಜೀವಗಳು ಜೊತೆ-ಜೊತೆಯಾಗಿ ಬದಲಾಗುತ್ತಾ ಸಾಗುತ್ತಿದೆ.

ತಂಡದಲ್ಲಿ ಕಲಾವಿದ, ಕಾಲ, ಪರಿಸರ, ಸಂದರ್ಭ, ಹಿಮ್ಮೇಳ, ಪರಿಕರ, ಪ್ರೇಕ್ಷಕ, ಉಡಿಗೆ, ತೊಡಿಗೆ, ಯಾವೊಂದರಲ್ಲೂ ವ್ಯತ್ಯಾಸವಾದರೆ ಅದು ಇಡಿ ಪ್ರದರ್ಶಿತ ರೂಪದ ಮೇಲೆಯೇ ಪರಿಣಾಮ ಬೀರುತ್ತದೆ. ಹೀಗಾಗಿಯೇ ಗೀತ ಪ್ರಧಾನವಾದ ಮೂಲ ಪಾರಿಜಾತವು ಕೆಲವು ವರ್ಷಗಳ ನಂತರ ಸರಳವಾದ ಪ್ರದರ್ಶನದಲ್ಲಿ ಸಾಗುತ್ತಾ ಹಲವಾರು ಮಾರ್ಪಾಡುಗಳಾಗಿವೆ. ಪಾರಿಜಾತ ತಂಡಗಳಲ್ಲಿ ಒಂದು ಕಂಪನಿಯಿಂದ ಇನ್ನೊಂದು ಕಂಪನಿಗೆ ಭಿನ್ನತೆಗಳಿವೆ. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶದ ಭಾಷಿಕ ಶೈಲಿಯ ಬದಲಾವಣೆಗಳಿವೆ. ಧಾರವಾಡದ ಬಸಯ್ಯ ಹಿರೇಮಠ ಪಾರಿಜಾತದವರು ಎಂಬುವರ ಕಥೆನೆ ಬೇರೆ ಇದೆ. ನಂತರ ಸೊನ್ನದ ನಾರಾಯಣ ಪತ್ತಾರರ ಮೂಲ ಪಾರಿಜಾತದ ತಿರುಳೇ ಬೇರೆ ಇದೆ. ಇಲ್ಲಿ ಕಲಾವಿದ ಶೈಲಿಯು ಬದಲಾಗುತ್ತದೆ. ಹೀಗೆ ಏಳುಬೀಳುಗಳನ್ನು, ಪಾರಿಜಾತ ಒಂದು ಪ್ರದರ್ಶಿತ ರೂಪವನ್ನು ಉಳಿಸಿಕೊಂಡು ಬಂದಿದೆ.

೭.೨.೨. ಪಾರಿಜಾತ ರಂಗಭೂಮಿ ವೇದಿಕೆಗಳು :

ಕೃಷ್ಣಪಾರಿಜಾತ ಕಲಾವಿದರು ಮೊದಲು ನಾಟಕವಾಡಲು ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವುದು ಬಹಳ ಕಠಿಣದ ಕೆಲಸ. ಈಗಿನಂತೆ ವಾಹನದ ಸೌಕರ್ಯಗಳಿಲ್ಲ. ಬಂಡಿ (ಚಕ್ಕಡಿ) ಇಲ್ಲವೇ ಕಾಲುನಡಿಗೆಯಲ್ಲಿ ನಾಟಕದ ವಸ್ತುಗಳ ಸಲಕರಣೆಗಳನ್ನು ಹೊತ್ತುಕೊಂಡು ಹೋಗಿ ನಾಟಕ ಆಡಿರುವುದು ವಿಸ್ಮಯ ಹುಟ್ಟಿಸುತ್ತದೆ. ಮಳೆಗಾಲದಾಗ ಅಮವಾಸಿ ಕತ್ತಲ, ಗುಡುಗು-ಮಿಂಚುಗಳ ಬೆಳಕಿನಲ್ಲಿ ನಾಟಕ ಆಡಿಸುವವರ ಊರು ಮುಟ್ಟುತ್ತಿದ್ದವು. ಇಲ್ಲಂದರ ದಾರಿ ತಪ್ಪಿ ಬೇರೆ ಊರಿಗೆ ಹೋಗಿದ್ದು ಉಂಟುರಿ, ಎಂದು ಎಪ್ಪತ್ತು-ಎಂಬತ್ತು ವರ್ಷದ ಹಳೆಯ ರಂಗಮಂದಿರದ ವಿಚಾರಗಳನ್ನು ಶ್ರೀನಾರಾಯಣ ಬಡಿಗೇರ ಸಾ॥ ಉದಪುಡಿ ಅವರ ಸಂದರ್ಶನದ ಸಂದರ್ಭದಲ್ಲಿ ಪಾರಿಜಾತದ ಆಟಗಳ ಸ್ಥಿತ್ಯಂತರ ಕುರಿತು ಪ್ರಸ್ಥಾಪಿಸುತ್ತಾರೆ. ಮೊದಲು ಪಾರಿಜಾತ ನಾಟಕಗಳು ಹಳ್ಳಿಗಳಲ್ಲಿ ನಡೆಯುವಾಗ ಬೆಳಕಿನ ವ್ಯವಸ್ಥೆಯಿರಲಿಲ್ಲ. ಬೆಳಕಿನ ದೀಪಕ್ಕಾಗಿ ಇಲಾಲ ಅಥವಾ ಎರಡು ಕಡೆ ಗ್ಯಾಸಿನ ದೀಪ ಕಂದಿಲುಗಳನ್ನು ಬಳಸುತ್ತಿದ್ದರು.

ಇವತ್ತು ಜಗಮಗಿಸುವ ವಿದ್ಯುದ್ದೀಪಗಳಿವೆ, ಡಿಸ್ಕೋಲೈಟ್, ಏನಿದ್ದರೂ, ಸರಿಯಾದ ಕಲೆಯಿಲ್ಲ. ಹಳ್ಳಿಯ ಗ್ರಾಮದ ಮುಂದಿನ ದೇವಾಲಯ, ಗುಡಿ, ಮಠದ ಬಯಲು ಜಾಗದಲ್ಲಿ ನಾಲ್ಕು ದಿಕ್ಕಿಗೆ ಬ್ಯಾರಲ್ ಇಟ್ಟು ಅದಕ್ಕೆ ಪಳಿ ಜೋಡಿಸಿ ನಾಟಕ ಆಡಿಸುತ್ತಿದ್ದರು. ಬರಬರುತ್ತಾ ಟ್ರ್ಯಾಕ್ಟರ್‌ನ

ಎರಡು ಟ್ರೈಲರ್‌ಗಳನ್ನು ನಿಲ್ಲಿಸಿ ಪಾರಿಜಾತ ರಂಗ ವೇದಿಯನ್ನು ಸಿದ್ಧಪಡಿಸುವರು. ಅದರ ಅಟ್ಟದ ಮೇಲೆ ಪಾರಿಜಾತ ತಂಡದ ಸಂಗೀತದ ಪಾತ್ರಧಾರನು ತಮ್ಮ ತಮ್ಮ ಪಾತ್ರಗಳನ್ನು ಮಾಡುತ್ತಿದ್ದರು. ಅವರ ಕಲೆ ಅದ್ಭುತ ರಾಗ, ಲಯ, ಸಂಗೀತಕ್ಕೆ ಎಲ್ಲರೂ, ಮನಸೋಲುವರು. ಆದರೆ ಈಗಿನ ರಂಗಭೂಮಿ ಎಲ್ಲಾ ಚೆನ್ನಾಗಿದ್ದರೂ ಅವರಲ್ಲಿ ಕಲೆ ಇರುವುದಿಲ್ಲ. "ಕುಣಿಯಲಿಕ್ಕೆ ಬರಲಿಲ್ಲಂದರೆ ನೆಲಾ ಡೊಂಕು ಎಂಬ ಗಾದೆ ಸತ್ಯವೆನಿಸುತ್ತದೆ." ಕಲಾವಿದನು ರಂಗಭೂಮಿಯ ಹಾವಭಾವ, ಶೈಲಿಗಳು, ವಿಭಿನ್ನವಾಗಿ, ಪಾರಿಜಾತದಲ್ಲಿ, ಬದಲಾವಣೆಗಳು ಆಗುವವು.

ಜಾತ್ರೆ ಉತ್ಸವ ಹಬ್ಬಹರಿದಿನಗಳಲ್ಲಿ ಪಾರಿಜಾತ ನಾಟಕ ಕಂಪನಿ ಕಲಾವಿದರನ್ನು ಕರೆಯಿಸಿ ನಾಟಕ ಆಡಿಸಿ ಕಳಿಸುತ್ತಿದ್ದರು. ಗೌರವ ಪ್ರೀತಿಗೆ ಅಷ್ಟಷ್ಟು ಹಣ ಕೊಡುವವರು, ನಂತರ ಕಲಾವಿದರಿಗೆ ಒಳ್ಳೆಯ ಪಾತ್ರಕ್ಕೆ ಜೀವ ತುಂಬಿದ ಕಲಾವಿದನಿಗೆ ಆಯೆರಿ ಮಾಡುತ್ತಿದ್ದರು. ಆದರೂ ಕಲಾವಿದರೂ ಕಲೆಗಾಗಿ ತಮ್ಮ ಬದುಕನ್ನು ಮುಡಿಪಾಗಿಟ್ಟವರು. ಯಾವುದೇ ಆಸೆಗಾಗಿ ಪಾರಿಜಾತ ನಾಟಕ ಅಡಲಿಲ್ಲ. ಪಾಂಚಾಳರು ಬೆಳಗ್ಗಿನಿಂದ ಮಧ್ಯಾಹ್ನದವರೆಗೆ ತಮ್ಮ ಕುಲಕಸಬುಗಳಲ್ಲಿ ತೊಡಗಿ ಇನ್ನುಳಿದ ಸಮಯವನ್ನು ಇತರೆ ಕಲೆಗಾಗಿ ಬಳಸುತ್ತಿದ್ದಾರೆ. ಇಂತಹ ಪಾರಿಜಾತವನ್ನು ಜನ ಸಾಮಾನ್ಯರು ಪೋಷಿಸಬೇಕಾಗಿದೆ.

ಪಾರಿಜಾತವು ವೈದಿಕ ಪರಂಪರೆಯಾದರೂ ಸರ್ವಧರ್ಮಗಳ ಸಮನ್ವಯದ ಕಲಾವಿದರು ವಿವಿಧತೆಯಲ್ಲಿ ಏಕತೆ ಮೆರೆದ ಜಾನಪದ ಪಾರಿಜಾತ ನಾಟಕವು ಕಾಲದಿಂದ ಕಾಲಕ್ಕೆ ಬದಲಾವಣೆ ಆಗುತ್ತ ಬರುತ್ತದೆ. ಏಕೆಂದರೆ ಇವತ್ತಿಗೂ ಕಂಪನಿಯಿಂದ ಕಂಪನಿಗೆ ಬದಲಾವಣೆ ಆಗಿದೆ. ಒಂದು ಕಾಲಕ್ಕೆ ಬಡಕುಂದ್ರಿ ಬಸಪ್ಪ ಮಾಡಿದ್ದ ನಾಟಕಕ್ಕೂ ಮೊದಲಿನ ಕುಲಗೋಡ ತಮ್ಮಣ್ಣನ ನಾಟಕಕ್ಕೂ ವ್ಯತ್ಯಾಸಗಳಿವೆ. ಜಮಖಂಡಿ, ಅಪ್ಪಲಾಲ ನದಾಫ್ ಕಂಪನಿಯ ಕಲಾವಿದರ ಪಾರಿಜಾತ ಶೈಲಿ ಸಂಭಾಷಣೆಗೂ ಮತ್ತು ಲೋಕಪೂರ ಕೃಷ್ಣ ದೇಶಪಾಂಡೆಯವರ ಪಾರಿಜಾತ ಕಲಾವಿದರ ಪಾತ್ರಗಳ ಶೈಲಿ ಸಂಭಾಷಣೆಗಳಲ್ಲಿ ಎಷ್ಟೊಂದು ವ್ಯತ್ಯಾಸಗಳಿವೆ. ಉದಾಹರಣೆಗೆ; ಕೃಷ್ಣ ಪಾತ್ರಗಳಲ್ಲಿ ಒಬ್ಬೊಬ್ಬ ಕಲಾವಿದನ ಶೈಲಿಯಲ್ಲಿ ಬದಲಾವಣೆ. ಕೃಷ್ಣ ಬಂದರೆ ಪಾತ್ರಗಳಲ್ಲಿರುವ ವ್ಯಕ್ತಿಗಳ ಸಂಭಾಷಣೆ ಬೇರೇನೆ ಇರುತ್ತದೆ. ಏಕೆಂದರೆ ನಮ್ಮ ಕಲಾವಿದರು ಎಷ್ಟು ಶಕ್ತಿವಂತರಾಗಿ ಇದ್ದಾರೆ ಎಂಬುದು ಗೊತ್ತಾಗುತ್ತದೆ.[೧]

ಡಾ. ಶ್ರೀರಾಮ ಇಟ್ಟಣ್ಣವರೊಂದಿಗೆ ಪಾರಿಜಾತ ಕುರಿತು ನಡೆಸಿದ ಸಂದರ್ಶನದ ವಿಚಾರಗಳು ಹೀಗಿವೆ. ಪಾರಿಜಾತ ಕಂಪನಿಯು ಹುಟ್ಟಿ ಅದರಲ್ಲಿ ಎಷ್ಟು ಪಾರಿಜಾತಗಳಿವೆಯೋ ಅಷ್ಟು ನಮೂನೆ ಪಾರಿಜಾತ ಸಂಭಾಷಣೆಗಳಿವೆ. ಇಲ್ಲಿ ತೆಗೆದು ಅಲ್ಲಿ ಹಾಕುತ್ತಾರೆ. ಅಲ್ಲಿ ತೆಗೆದು ಇಲ್ಲಿ ಹಾಕುತ್ತಾರೆ. ಇಲ್ಲಿಯವರೆಗೆ ಶುದ್ಧವಾದ ಪಾರಿಜಾತ ಪುಸ್ತಕವಿಲ್ಲಾ ಎಂಬುದನ್ನು ಪ್ರಥಮವಾಗಿ ಗಮನಿಸಬೇಕಾಗಿದೆ.

ಪಾರಿಜಾತ ನಾಟಕ ಆಡುವ ಕಲಾವಿದರು ಕೆಲವು ಕಂಪನಿಗಳಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸಿ ಅನುಭವ ಪಡೆದು ತಮ್ಮದೇ ಆದ ಸ್ವಂತ ಪಾರಿಜಾತ ಕಂಪನಿಯ ಸಂಘಟನೆಯನ್ನು ಮಾಡುತ್ತಾರೆ. ಕೆಲವು ಸಮಾನ ಮನಸ್ಸಿನ ಕಲಾವಿದರು ಕೂಡಿ ಮೇಳ ಕಟ್ಟಿಕೊಂಡು ಆಟ ಆಡುತ್ತಾರೆ. ಉದಾ: ಕೌಜಲಗಿ ನಿಂಗವ್ವ, ಕೃಷ್ಣ ದೇಶಪಾಂಡೆ, ಭೀಮೇಶ ಕಂಬಾರ, ನಾರಾಯಣ ಪತ್ತಾರ, ಮುಂತಾದವರು ಪಾತ್ರಧಾರಿಗಳಾಗಿ ಸ್ವತಃ ಕಂಪನಿ ಕಟ್ಟಿ ಸುಮಾರು ವರ್ಷಗಳವರೆಗೆ ಮುನ್ನಡೆಸಿದವರು. ಕಂಪನಿ ಏಳುಬೀಳುಗಳಲ್ಲಿ ಮಾಲಿಕನೆ ಹೊಣೆಗಾರನಾಗಿರುತ್ತಾನೆ. ಲೋಕಪೂರ ಪಾರಿಜಾತದ ಕೃಷ್ಣ ದೇಶಪಾಂಡೆಯವರು ೬ ರಿಂದ ೭ ಕಂಪನಿಗಳಲ್ಲಿ ಪಾತ್ರ ನಿರ್ವಹಿಸಿ ಅತ್ಯುತ್ತಮ ಕಲಾವಿದನಾಗಿ ಅನೇಕ ಕಂಪನಿಗಳ ಮಾಹಿತಿಯ ಮಹತ್ವ ಪಡೆದು ನಂತರ ತಮ್ಮದೇ ನಾಟಕ ಕಂಪನಿ ಕಟ್ಟ ಬಯಸುತ್ತಾರೆ. ಇದರಲ್ಲಿ ಪಾತ್ರಕ್ಕೆ ಜೀವ ತುಂಬುವ ಪಾತ್ರಧಾರಿಗಳು ಬರುತ್ತಾರೆ, ಹೋಗುತ್ತಾರೆ. ಒಬ್ಬ ಕಲಾವಿದ ಅಷ್ಟೆ. ಆದರೆ ಕಂಪನಿ ಕಟ್ಟಿದ ಮಾಲೀಕ ಪಾರಿಜಾತ ಹೇಗೆ ಬೆಳೆಯಬೇಕು ಎಂಬ ಹಂಬಲವನ್ನು ಇಟ್ಟುಕೊಳ್ಳುತ್ತಾರೆ.

ಸೊನ್ನ ಗ್ರಾಮ ನಾರಾಯಣ ದುಂಡಪ್ಪ ಪತ್ತಾರ, ಶ್ರೀ ಕಾಳಿಕಾದೇವಿ ಪಾರಿಜಾತ ನಾಟಕ ಕಂಪನಿಯಲ್ಲಿಯೂ ಅನೇಕ ಬದಲಾವಣೆಗಳಾಗಿವೆ. ಆರಂಭದಲ್ಲಿ ಪಾತ್ರಧಾರಿಗಳು ಕಥೆಗೆ ಒತ್ತು ನೀಡುವರು. ನಂತರ ಮನೋರಂಜನೆಗೆ ಆದ್ಯತೆ ಕೊಡುತ್ತಾ ಸಂಗೀತದ ವಾದ್ಯಗಳಿಗೆ ವಿಶೇಷ ಆದ್ಯತೆ ಕೊಡುತ್ತಾರೆ. ನಾರಾಯಣ ಪತ್ತಾರ ಸ್ವತಃ ಹಾರ್ಮೋನಿಯಂ ಮಾಸ್ತರರಾಗಿ, ರಂಗನಿರ್ದೇಶಕರು, ಕಲಾವಿದನಾಗಿ, ಕೃಷ್ಣ ಕೊರವಂಜಿ, ಪಾತ್ರಕ್ಕೆ ಜೀವ ತುಂಬಿದ್ದು ವಿಶೇಷ. ಅದರಲ್ಲಿ ಸಂಗೀತದ ಕಡೆಗೆ ಒತ್ತು ನೀಡಿ ಕಲಾಸಕ್ತರ ಜನರನ್ನು ತನ್ನಡೆಗೆ ಎಳೆದ ಶ್ರೇಯಸ್ಸು ತಮ್ಮ ಪಾರಿಜಾತ ಕಂಪನಿಗೆ ಸಲ್ಲುತ್ತದೆ. ಇವತ್ತಿಗೂ ಪಾರಿಜಾತ ಕಂಪನಿ ಅಸ್ತಿತ್ವದಲ್ಲಿರುವದು.

ಇತ್ತೀಚಿಗೆ ಕೃಷ್ಣಪ್ಪ ಪತ್ತಾರ ಬೆನಕಟ್ಟಿ ಗ್ರಾಮದಲ್ಲಿ ಕಂಪನಿ ಕಟ್ಟಿದ. ಕೆಲವು ದಿನಗಳವರೆಗೆ ಬೇರೆ ಬೇರೆ ಊರುಗಳಲ್ಲಿ ಪ್ರದರ್ಶನ ನಡೆಸಿ ಅನೇಕ ಕಾರಣಗಳಿಂದ ತೊಂದರೆಗಳಿಗೆ ಒಳಗಾಗಿ ನಿಂತು ಹೋಯಿತು. ಈಗ ಊರಿನಲ್ಲಿ ಯಾವ ಅಂತ ಕಂಪನಿಗಳಿಲ್ಲದೆ ಹಬ್ಬ ಹುಣ್ಣಿಮೆಗಳಲ್ಲಿ ಜಾತ್ರೆ, ಉತ್ಸವ, ನಡೆದಾಗ ಪರಸ್ಥಳದಿಂದ ಪಾರಿಜಾತ ನಾಟಕಗಳನ್ನು ತರಿಸಿ ಆಡಿಸುವಂತ ಪರಿಸ್ಥಿತಿಯು ಬಂದೊದಗಿದುದು ದುರ್ದೈವದ ಸಂಗತಿಯೇ ಸರಿ.

ಕೆಲವು ಕೃಷ್ಣಪಾರಿಜಾತ ಕಂಪನಿಗಳು :

೧. ಕುಲಗೋಡ ತಮ್ಮಣ್ಣ ಮತ್ತು ಶಿರಗುಪ್ಪಿ ಸದಾಶಿವಯ್ಯರ ಮೇಳ

೨. ಯಾದವಾಡ ಮಲಕಪ್ಪ ಮತ್ತು ಹುಕ್ಕೇರಿ ಸಿದ್ಧರಾಮಪ್ಪರ ಕಂಪನಿ

೩. ಕೌಜಲಗಿ ನಿಂಗವ್ವ ಕಂಪನಿ

೪. ಕುಂಚನೂರು ಪಾರಿಜಾತ ಕಂಪನಿ

೫. ಯಂಡಿಗೇರಿ ಪಾರಿಜಾತ ಕಂಪನಿ

೬. ಮರಡಿ ಬೂದಿಹಾಳ ಪಾರಿಜಾತ ಕಂಪನಿ

೭. ದಾದನಟ್ಟಿ ಪಾರಿಜಾತ ತಾಲೂಕು ಮುಧೋಳ

೮. ಸೊನ್ನ ಶ್ರೀಕಾಳಿಕಾದೇವಿ ಪಾರಿಜಾತ ಕಂಪನಿ

೯. ತುಳಸಿಗೇರಿ ಪಾರಿಜಾತ ಕಂಪನಿ

೧೦. ಲೋಕಾಪೂರ ಕೃಷ್ಣ ದೇಶಪಾಂಡೆ ಕಂಪನಿ

೧೧. ಮಲ್ಲಾಪುರ ಪಾರಿಜಾತ ಕಂಪನಿ

೧೨. ಸಾರವಾಡ ಪಾರಿಜಾತ ಕಂಪನಿ ತಾಲೂಕು ಜಿಲ್ಲೆ ವಿಜಯಪುರ

೧೩. ಛಬ್ಬಿ ಪಾರಿಜಾತ ಕಂಪನಿ

೧೪. ಬೆನಕಟ್ಟಿ ಪಾರಿಜಾತ ಕಂಪನಿ

೧೫. ಬ್ಯಾಲಾಳ ಪಾರಿಜಾತ ಕಂಪನಿ ತಾಲೂಕು ಬಾಗೇವಾಡಿ

೧೬. ಬೈಲಹೊಂಗಲ ಪಾರಿಜಾತ ಕಂಪನಿ

೧೭. ಮಹಾಲಿಂಗಪುರ ಪಾರಿಜಾತ ಕಂಪನಿ ತಾಲೂಕು ಮುಧೋಳ

೧೮. ಅನವಾಲ ಪಾರಿಜಾತ ಕಂಪನಿ ತಾಲೂಕು ಬದಾಮಿ

೧೯. ಕಿರಸೂರ ಪಾರಿಜಾತ ಕಂಪನಿ

೨೦. ಕಡ್ಲಿಮಟ್ಟಿ ಪಾರಿಜಾತ ಕಂಪನಿ[೨]

ಇದೇ ರೀತಿ ಅನೇಕ ಪಾರಿಜಾತ ಕಂಪನಿಗಳು ಪ್ರಚಲಿತದಲ್ಲಿದ್ದು ಸ್ವಲ್ಪಮಟ್ಟಿಗೆ ಕಂಪನಿ ಮತ್ತು ಕಲಾವಿದರು ಯಶಸ್ಸನ್ನು ಕಂಡಿದ್ದಾರೆ. ಮುಂದುವರೆದು ಕೆಲವು ದಿನಗಳು ಕಳೆದಂತೆ ಪಾರಿಜಾತ ಕಂಪನಿ ಮತ್ತು ಕಲಾವಿದರು ಅನೇಕ ಸ್ಥಿತ್ಯಂತರಗಳಿಂದ ಬದಲಾಗುತ್ತಾ ಬೆಳೆದು ಯಾವುದೋ ಕಾರಣಗಳಿಂದ ಕಂಪನಿ ಲಾಸಾಗಿ, ಕಲಾವಿದರು ಬಿಟ್ಟು ಬೇರೆ ಬೇರೆ ಕಂಪನಿ ಸೇರಿ ಆ ಕಂಪನಿಗಳಲ್ಲಿ ಬದಲಾಗುತ್ತಾ ಸಾಗಿದೆ. ಬಾಹ್ಯ ಸೌಂದರ್ಯಕ್ಕೆ ಮರುಳಾಗಿ ಸಿನಿಮಾ, ಟಿವಿ, ಅರೆಬೆತ್ತಲೆ ನಾಟಕಗಳಿಗೆ ಜನಗಳು ಬದಲಾಗಿ, ಮೂಲ ನಾಟಕಗಳು ಮತ್ತು ಕಥೆಗಳು ನಿಂತು ದಂತ ಕಥೆಗಳಾಗಿ ಜನಪದ ಸೊಗಡು ಅಳಿದುಳಿದದ್ದನ್ನು ಅವಲೋಕನ ಮಾಡುವಂತಾಗಿದೆ.

೭.೨.೩. ವೇಷಭೂಷಣಗಳ ಬದಲಾವಣೆ :

ಆಧುನಿಕತೆಯ ಭರಾಟೆಯಲ್ಲಿ ಮೂಲಕಥೆ, ಅಭಿನಯ, ಭಾಷಾಶೈಲಿ, ರಂಗಸಜ್ಜಿಕೆಗಳು, ಕಲಾಸಕ್ತರಿಗೆ ತಕ್ಕಂತೆ ಬದಲಾಗುತ್ತ ಸಾಗಿದಂತೆ ವೇಷಭೂಷಣಗಳು ಪಾರಿಜಾತದ ಎಲ್ಲಾ ಪಾತ್ರಗಳಲ್ಲಿಯೂ ಮೂಲ ಇದ್ದ ತೊಡುಗೆ ಉಡುಗೆಗಳು ಬದಲಾಗುತ್ತಿವೆ. ಉದಾಹರಣೆಗೆ;

ಅಪರಾಳ ತಮ್ಮಣ್ಣನ ಗೀತ ರೂಪಕದ ನಾಟಕವು ಸಂಗೀತ ರಾಗಕ್ಕೆ ಒತ್ತು ನೀಡುತ್ತಿತ್ತು ಅದಕ್ಕಾಗಿ ಸಾಮಾನ್ಯರಂತೆ ಇವರು ಸಾದಾ ಬಟ್ಟೆಗಳನ್ನು ಧರಿಸಿಕೊಂಡು ಪಾತ್ರಗಳನ್ನು ನಿಭಾಯಿಸುತ್ತಿದ್ದರು. ನಂತರ ಕುಲಗೋಡ ತಮ್ಮಣ್ಣ ಮತ್ತು ಶಿರಗುಪ್ಪಿ ಸದಾಶಿವಯ್ಯ ಅವರ ಪಾರಿಜಾತ ಕಂಪನಿ ಗೀತ ರೂಪಕದ ನಾಟಕ ಸಂಭಾಷಣೆಗೆ ಒತ್ತು ಕೊಟ್ಟಾಗ ಒಂದೊಂದು ಪಾತ್ರಗಳು ವಿಶೇಷವಾಗಿ ಕಾಣುತ್ತಿದ್ದವು.

ಕೃಷ್ಣ : ಪಾತ್ರಕ್ಕೆ ವ್ಯಕ್ತಿ ಧೋತ್ರ, ಕೆಂಪು ಶರ್ಟ್, ರೂಮಾಲು ಮೊದಲು ಕಿರೀಟ, ಮೇಲೊಂದು ನವಿಲುಗರಿ, ಕೊರಳಲ್ಲಿ ರುದ್ರಾಕ್ಷಿ ಇತ್ಯಾದಿಗಳು. ನಂತರ ಮುಖಕ್ಕೆ ಕೃಷ್ಣ ವರ್ಣದ ಬಣ್ಣ ಹಚ್ಚಿಕೊಳ್ಳುತ್ತಿದ್ದರು.

ರುಕ್ಮಿಣಿ : ಪಟ್ಟದ ರಾಣಿಯಾಗಿ ಮೈತುಂಬ ಇಳಕಲ್ ಸೀರೆ, ಕುಪ್ಪಸ, ಕೊರಳಲ್ಲಿ ಆಭರಣಗಳು, ಕೈತುಂಬಾ ಬಳೆಗಳು, ಕಾಲುಂಗುರ, ಡಾಬು, ವಂಕಿ ಮುಂತಾದವುಗಳು ಜನಸಾಮಾನ್ಯ ಮಹಿಳೆಯರಲ್ಲಿ ಭಿನ್ನವಾಗಿರುವುದು.

ಸತ್ಯಭಾಮೆ : ಎರಡನೇ ಪಟ್ಟದರಾಣಿ. ಇವಳ ಸ್ವಭಾವ ಸಹಜ ಸವತಿ ಮತ್ಸರದಿಂದ ರುಕ್ಮಿಣಿಗಿಂತ ವಿಶೇಷ ವಸ್ತು ಆಭರಣಗಳನ್ನು ಧರಿಸುತ್ತಿದ್ದಳು.

ದ್ಯುತೆ : ಈ ಪಾತ್ರ ವಿಶೇಷವಾದದ್ದು. ಮೇಲ್ವರ್ಗ ಮತ್ತು ಕೆಳವರ್ಗದ ಶ್ರೀಮಂತರು, ಬಡವರು, ದೊಡ್ಡವರು, ಚಿಕ್ಕವರು, ಜನಸಾಮಾನ್ಯರ ಮಧ್ಯದಲ್ಲಿದ್ದು ಜನರ ಹಾವಭಾವಕ್ಕೆ ಹತ್ತಿರವಾದವನು. ಇವನು ಸಾಮಾನ್ಯರಂತೆ ಸಾಮಾನ್ಯ ವಸ್ತ್ರಗಳನ್ನು ಧರಿಸುವ ಆಯಾ ಭೌಗೋಳಿಕ ಪರಿಸರದ ವಸ್ತ್ರವಿನ್ಯಾಸಕ್ಕೆ ತಕ್ಕಂತೆ ಬಟ್ಟೆ ತೊಡುವನು. ದ್ಯುತೆ (ನೆಹರು ಶರ್ಟ್ ಟೊಪಿಗೆ) ಮುಂತಾದವು. ದ್ಯುತೆ ಜನಸಾಮಾನ್ಯರ ಕೊಂಡಿಯಾ (ಕೃತೀಕ)ಗಿ ಕೃಷ್ಣ, ರುಕ್ಮಿಣಿ, ಸತ್ಯಭಾಮೆ, ಕೊರವಂಜಿಯನ್ನು ಮಾತನಾಡಿಸುವಳು. ಮತ್ತು ಜನರ ಹತ್ತಿರದ ಭಾವನೆಗೆ ಅರಿವು ಮೂಡಿಸುವನು.

ಕೊರವಂಜಿ: ಕೊರವಂಜಿ ವೇಷಭೂಷಣಗಳು ಎಷ್ಟೇ ಪರಿಸ್ಕಾರಗೊಂಡರೂ ವೈಭವವೆನಿಸಿದರೂ ಅವಳು ಗುಡ್ಡಗಾಡು ಜನಸಾಮಾನ್ಯ ಪ್ರತೀಕವಾಗಿ ನಿಲ್ಲುವಳು. ವೇಷ, ಭಾಷೆ, ಶೈವ, ವೀರಶೈವ, ವೈದಿಕ ನೆಲೆಗಳಲ್ಲಿ ಭಿನ್ನ, ಭಿನ್ನವಾಗಿ ಕಂಡರೂ ಚಹರಿ ಮಾತ್ರ ಹಾಗೇ ಉಳಿದಿದೆ. ಪಾರಿಜಾತದಲ್ಲಿ ಕೊರವಂಜಿಯ ವೇಷಧಾರಣೆ ಪ್ರಸಂಗವೇ ಮುಡಿ ಬಿಚ್ಚಿ ಎಣ್ಣೆಹಚ್ಚಿ ಬಾಚುವುದರೊಂದಿಗೆ ಆರಂಭವಾಗುತ್ತದೆ.

ಜಡೆಬಿಚ್ಚಿ ಸಂಪಿಗೆಣ್ಣೆಯ ಹಚ್ಚಿ ನಲವಿನಲಿ
ಜಡೆಯುತಿರ್ಪವು ಝುಂಗೆವೆರಸಿ ಕೇಶಗಳು
ಒಡಮುರಿದಿಕ್ಕಿ ಓರಣದಿಂ ಗಲ್ಲಗಳಲ್ಲಿ
ಸುಳಿಕುಂತಾಳಿಗಳ ರಚಿಸಿದಳು ಕೊರವಂಜಿ

ಕುರುಳಗೂದಲು ತಿದ್ದಿ ಕಸ್ತೂರಿ ತಿಲಕವ
ಧರಿಸಿದಾಳು ಮೆರವ ಘಣಿಯಲ್ಲಿ ಆರ್ತಿಯಲ್ಲಿ
ಹತ್ತು ಬೆರಳಿಗೆ ವಜ್ರಾ ಕೆತ್ತಿ ಸಿದುಂಗುರಾ
ಗುತ್ತಾ ಪಟ್ಟಿಗೆ ಹಚ್ಚೆಮಣಿ ಎಣ್ಣೆನೂಲು
ಮತ್ತೆ ಮಾಯಾರಾಣಿ ಸುರಹೊನ್ನೆ ಪಾದಾಸರ
ಶಕ್ತಿ ಬಿರುದುಗಳಾ ಧರಿಸಿದೊಳೊ ಕೂರವಿ

ಇದರಂತೆ ಮುಂದುವರೆದು ಕೊರವಂಜಿಯವರು ಶಂಖ, ಮಣಿ, ತಾವರೆ ಮಣಿ, ಕರ್ಪೂರ ಮಣಿ ಮುಂತಾದವುಗಳನ್ನು ಧರಿಸಿ ಗುಲಗಂಜಿ, ಹಣಚೆ ಬೊಟ್ಟು, ಕೂಸು, ನವಿಲುಗರಿ, ಕೊರವಂಜಿಯ ಗುರುತು ಎಂದು ತಿಳಿಸುತ್ತಾರೆ.[೩]

ಕೊರವಂಜಿಯವರು ಸ್ತ್ರೀ ದೇವತೆಯ ಆರಾಧಕರು. ಇವತ್ತಿಗೂ ಜಿಡ್ಡುಗಟ್ಟಿದ ಜಡೆ ಅವರಲ್ಲಿ ಪವಿತ್ರ. ಇವರು ಎಲ್ಲಮ್ಮನ ಭಕ್ತರು. ಕೊರವಂಜಿ ಸಮುದಾಯಮುಖಿ ಕಾಳಜಿ, ಆತ್ಮ ಅಭಿಮಾನದ ಪ್ರತೀಕ. ಕೆಳ ಕುಲಗಳ ಶಕ್ತಿ. ಜೀವನದ ಎಲ್ಲ ಗುರುತುಗಳನ್ನು ನಿರಾಕರಿಸುವ ಧೈರ್ಯ, ಸಮುದಾಯ, ಲಿಂಗಾಧಾರಿತ, ತಾರತಮ್ಯದ ಗುರುತು ಆಗಿದ್ದಾಳೆ.

ಕೊರವಂಜಿ ತಲೆಯ ಮೇಲೆ ಬುಟ್ಟಿ, ಬಗಲ ಜೋಳಿಗೆ, ಕಂಕುಳ ಕೂಸು, ಕೈಯಲ್ಲಿನ ಕಣಿಕೋಲು, ಅಲೆಮಾರಿ ಚಿತ್ರಣ. ವೈಯಾರದಿ ಮನೆಮನೆ ತಿರುಗುತ್ತ ನಾರಿಮಣಿಯರಿಗೆ ಶಕುನವ ಹೇಳುತ್ತಾ ಸಾಗುವಳು ಕೊರವಂಜಿ. ಆದರೆ ಇತ್ತೀಚಿನ ಪಾರಿಜಾತ ನಾಟಕಗಳಲ್ಲಿ ಈ ರೀತಿಯ ಎಲ್ಲಾ ವೇಷಭೂಷಣಗಳನ್ನು ತೊಟ್ಟು ಬರುವುದಿಲ್ಲ. ತಲೆಯ ಮೇಲೆ ಬುಟ್ಟಿ, ಕೋಲು, ಬಗಲಾಗ ಗೊಂಬೆ ತಗೊಂದು ಪ್ರೇಕ್ಷಕರಿಗೆ ತನ್ನ ಪಾತ್ರ ಕೊರವಂಜಿ ಎನ್ನುವುದು ಗೊತ್ತಾಗುವಂತೆ ನಟನೆ ಮಾಡಿ ನೇರ ಸಂಭಾಷಣೆಗೆ ಇಳಿಯುವಳು. ಆಗ ಭಕ್ತಿಯ, ಶಕ್ತಿಯ ಕೊರವಂಜಿ ಈಗ ನಟನಿಗೆ ಮೀಸಲಾದ ಕೊರವಂಜಿ. ಪಾರಿಜಾತ ನಾಟಕದ ಪಾತ್ರಕ್ಕೆ ಇತ್ತೀಚಿಗೆ ಜನರ ಆಕರ್ಷಣೆ ಕಡಿಮೆಯಾಗಿದೆ. ಆಧುನಿಕ ರಂಗ ಪರಂಪರೆಯಲ್ಲಿ ವೃತ್ತಿರಂಗ, ಹವ್ಯಾಸಿ, ದಾರವಾಹಿ, ಸಿನಿಮಾ, ಮುಂತಾದವುಗಳ ಮುಂದೆ ಬೆಳಗಿನ ತನಕ ಕುಳಿತುಕೊಂಡು ನೋಡುವವರ ಸಂಖ್ಯೆ ಕಡಿಮೆಯಾಗಿದೆ. ಎರಡು ಮೂರು ತಾಸಿನಲ್ಲಿ ನಾಟಕ ಮುಗಿಸುವ ಆರಂಭದಿಂದ ಮುಗಿಯುವವರೆಗೆ ನಗಿಸುವ ಮನಸ್ಸಿಗೆ ಮುದನೀಡುವ ನಾಟಕ ಕಂಪನಿಗಳು ಬಂದಿವೆ.

ಅದಕ್ಕಾಗಿ ಪಾರಿಜಾತ ನಾಟಕದ ಪಾಂಚಾಳ ಕಲಾವಿದರು, ಸಂಗೀತ ವಾದ್ಯಗಾರರು, ಕಾಲಕ್ಕೆ ತಕ್ಕಂತೆ ಬದಲಾಗಬೇಕಾಗುತ್ತದೆ. ಇಲ್ಲಿ ಪಾರಿಜಾತ ಎನ್ನುವ ಕಲ್ಪನೆಯೇ ಚಲನಶೀಲ ಮತ್ತು ಸೃಜನಶೀಲವಾದದ್ದು. ಅಲೆಮಾರಿ ರೂಪದಿಂದ ಹಿಡಿದು ಶೈವ, ವೈಷ್ಣವ, ಧರ್ಮಗಳ ಸ್ವರೂಪದವರೆಗೂ ಅದು ಪರಿವರ್ತನಾಶೀಲ ಹೊಂದಿರುವಂಥದ್ದು. ಸಂದರ್ಭಕ್ಕೆ ತಕ್ಕಂತೆ ನಾರದ, ಕೃಷ್ಣ, ಬ್ರಹ್ಮ,

ಶಿವ ಇವರೆಲ್ಲ ರೂಪಧಾರಣಮಾಡಿ ಮನುಷ್ಯರ ಮಧ್ಯದಲ್ಲಿ ಉಂಟಾದ ಪ್ರೀತಿ ಶೃಂಗಾರ ವ್ಯಸನ ಮುಂತಾದವುಗಳ ಪರಿಹಾರ ನೀಡಿದವರು ಎಂದು ಡಾ. ವೀರೇಶ ಬಡಿಗೇರ ಹೇಳುತ್ತಾರೆ.[೪] ಭವಿಷ್ಯದ ವಿಧಾನಗಳ ಕುರಿತು ಮಾನವ ಬದುಕಿನ ಸಂಕೀರ್ಣತೆಯಿಂದ ವಿಕಾಸದೆಡೆಗೆ ಸಾಗುತ್ತದೆ.

೭.೨.೪. ಪ್ರೇಕ್ಷಕರ ಕಲಾಸಕ್ತಿ ಬದಲಾವಣೆ :

ಪಾರಿಜಾತ ನಾಟಕಗಳನ್ನು ಮೊದಲು ಬೆಳತನಕ ನೋಡುತ್ತಿದ್ದರು. ಭಕ್ತಿ, ಕಲೆ, ಎರಡೂ ಇರುತ್ತಿದ್ದವು. ಇತ್ತೀಚಿಗೆ ಟೇಪ್‌ರೆಕಾರ್ಡ್‌ನಲ್ಲಿ ರೀಲಿನಿಂದ ಕೂಡಿದಂತಹ ಕ್ಯಾಸೆಟ್ಟ್‌ಗಳನ್ನು ಬಳಸುತ್ತಿದ್ದರು. ಇತ್ತೀಚಿಗೆ ಸೀಡಿ, ಕ್ಯಾಸೆಟ್, ಮೆಮೊರಿಕಾರ್ಡ್, ಪೆನ್‌ಡ್ರೈ, ಬ್ಲೂಟೂತ್‌ಗಳಿಂದ ಯೂಟ್ಯೂಬ್‌ನಲ್ಲಿ, ಡೌನ್‌ಲೋಡ್‌ಮಾಡಿ ಪಾರಿಜಾತವನ್ನು ಯಾರೋ ಯಾವಾಗೋ ಮಾಡಿದ್ದನ್ನು ಮೊಬೈಲಿಗೆ ಕನೆಕ್ಟ ಮಾಡಿ ನೋಡುವ ಕಲೆ ಶುರುವಾಗಿದೆ. ಆದ್ದರಿಂದ ನಿಜವಾದ ಪಾರಿಜಾತ ಕಲಾಸಕ್ತ ಪ್ರೇಕ್ಷಕರು ಸಿಗುವುದು ವಿರಳ. ಹಳ್ಳಿಗಳಲ್ಲಿ ಹವ್ಯಾಸಕ್ಕಾಗಿ ಜಗಮಗಿಸುವ ವಿದ್ಯುತ್‌ದ್ವೀಪಗಳು, ಉತ್ತಮವಾದ ರಂಗಸಜ್ಜಿಕೆಯ ಪರಿಕರಗಳು, ಕಟ್ಟುಮಸ್ತಾದ ಯೌವ್ವನ ತುಂಬಿದ ಸುಂದರ ಡ್ಯಾನ್ಸ್, ವೈಯ್ಯಾರ ಮಾಡುವ, ನಾಜೂಕಿನ ಹುಡುಗಿಯರು ಇದ್ದರೆ ಮಾತ್ರ ನಾಟಕ ನೋಡಲು ಬರುವರು. ಅವರು ಬರುವದು ಸ್ಟೇಜ್ ಹುಡುಗಿಯರನ್ನು ನೋಡಲು ಮಾತ್ರ. ಏಕೆಂದರೆ ಇಲ್ಲಿ ಕಲೆ ಕಲಾವಿದನಲ್ಲಿರುವುದಿಲ್ಲ. ಶೈಲಿ ಸಂಭಾಷಣೆ ಇತ್ಯಾದಿಗಳು ಕಲೆಯ ಬೆಲೆ ಕಳೆದುಕೊಂಡಿರುತ್ತವೆ.

ಪಾರಿಜಾತ ನೋಡುವ ಮೊದಲು ಹಿರಿಯರಲ್ಲಿ ಭಕ್ತಿ, ಯೌವನರಲ್ಲಿ ಪ್ರೀತಿ, ಯುವಕರಲ್ಲಿ ಮನೋರಂಜನೆ ಸಿಗುತ್ತಿತ್ತು. ಕೌಟುಂಬಿಕವಾಗಿ ನೋಡುವ ಕಲೆಯಾಗಿತ್ತು. ಈಗ ಗಂಡಸರೇ ಬೇರೆ, ಹೆಂಗಸರೇ ಬೇರೆ, ಮಕ್ಕಳೇ ಬೇರೆ. ಏಕೆಂದರೆ ಇದು ಆಧುನಿಕ ನಾಟಕ ಆಧುನಿಕ ಪ್ರೇಕ್ಷಕರಾಗಿರುವರು. ಮೊದಲು ಪಾರಿಜಾತ ನಾಟಕ ಆರಂಭದಲ್ಲಿ ರಂಗಭೂಮಿಗೆ ಪೂಜೆ ಮಾಡಿ ಕಾಯಿ ಒಡೆದು ಎಲ್ಲರಿಗೂ ಕಲಾವಿದರಿಗೂ ಪಳರಾ ಹಂಚಿ ಗ್ರಾಮದ ಹಿರಿಯರನ್ನು ಕರೆದು ನಾಟಕ ವಿಚಾರಗಳನ್ನು ತಿಳಿಸಿ ನಂತರ ಚಿಕ್ಕ ಸಮಾರಂಭ ಮಾಡಿ ಎಲ್ಲ ಗ್ರಾಮದ ಪ್ರಮುಖರಿಗೆ ಹೂವಿನ ಹಾರಹಾಕಿ, ಕಲಾವಿದರಿಗೂ ಹಾಕಿ ಸ್ವಾಗತ ಮಾಡಿ ನಾಟಕ ಸರಿಯಾಗಿ ಒಂಬತ್ತು ಹತ್ತು ಗಂಟೆಗೆ ಆರಂಭವಾಗುತ್ತಿದ್ದವು. ಈಗ ರಾತ್ರಿ ಸಮಾರಂಭದಲ್ಲಿ ಗ್ರಾಮದ ಮುಖಂಡ ಎಂ.ಎಲ್.ಎ. ಎಂಪಿ ಇನ್ನಿತರ ಸದಸ್ಯರು ಬರಬೇಕೆಂದರೆ ೧೧:೦೦ ಗಂಟೆ ಆಗುತ್ತದೆ. ಅವರು ಮಾತನಾಡಿ ಸ್ಟೇಜ್ ಇಳಿಯಬೇಕಾದರೆ ೧ ಗಂಟೆ ನಾಟಕ ಆರಂಭವಾಗುತ್ತದೆ.

ಪಾರಿಜಾತ ಕಲಾವಿದರ ಪರಿವರ್ತನೆ ಆದದ್ದರಿಂದ ನಿಷ್ಠೆ ಭಕ್ತಿ ಇಲ್ಲ. ಕಥೆಯ ಪಾತ್ರಕ್ಕೆ ತಕ್ಕಂತೆ ತಾಲಿಮು ಇಲ್ಲಾ. ಭಾಷೆಯ ಶೈಲಿಯು ಚೆನ್ನಾಗಿರುವುದಿಲ್ಲ. ಪಾತ್ರಕ್ಕೆ ತಕ್ಕಂತೆ ವೇಷಭೂಷಣಗಳ ಬದಲಾವಣೆ, ಪಾತ್ರಕ್ಕೆ ಜೀವ ತುಂಬುವ ಹಾವಭಾವವಿರುವುದಿಲ್ಲ. ಒಂದು ವೇಳೆ ಎಲ್ಲ ಇದ್ದರೂ ಸರಿಯಾದ ರಂಗಸಜ್ಜಿಕೆಗಳು, ಪ್ರಕೃತಿಯ ಅಡೆತಡೆಗಳಿಂದ ನಿಜವಾದ ಕಲಾವಿದ ಕಲೆಯು ಬರಬರುತ್ತಾ ನಶಿಸಿ ಹೋಗುತ್ತದೆ. ಆದ್ದರಿಂದ ಪ್ರೇಕ್ಷಕ ಕಲಾಸಕ್ತರು ಹೊಸ ಹೊಸ ಆಯಾಮಗಳಿಗೆ

ಅಂದುಕೊಂಡಿರಬಹುದು. ಕೃಷ್ಣಪಾರಿಜಾತದಂತಹ ಭಕ್ತಿಯ ಅಧ್ಯಾತ್ಮಿಕ ಕಥೆಗಳು ಇವತ್ತಿನ ಯುಗಕ್ಕೆ ಜನರ ಮನಸ್ಸಿನಿಂದ ದೂರಾಗುತ್ತವೆ.

ಕೃಷ್ಣಪಾರಿಜಾತ ಕಣ್ಮರೆಯಾಗಲು ಕಾರಣ ಬಾಹ್ಯ ಸೌಂದರ್ಯ ಆಧುನಿಕ ಡಿಜಿಟಲೀಕರಣ, ಡಿಸ್ಕೋ ಡ್ಯಾನ್ಸ್‌ಗಳಿಗೆ ಮಾರು ಹೋಗಿರುವ ಇಂದಿನ ರಂಗಭೂಮಿ ಕಲಾಸಕ್ತರು, ಕೆಲವು ವರ್ಷಗಳ ಹಿಂದೆ ಈ ಪ್ರೇಕ್ಷಕ ವರ್ಗವೂ ಜನಪದ ಸಂಪ್ರದಾಯಬದ್ಧ ಜಾತ್ರೆ, ಉತ್ಸವಗಳಲ್ಲಿ ಪಾರಿಜಾತ ಪಾಂಚಾಳ ಕಲಾವಿದರನ್ನು ಪ್ರೀತಿಯಿಂದ ಕರೆಯಿಸಿ ನಾಟಕ ಆಡಿಸಿ ಗೌರವ, ಹಣ ಕೊಟ್ಟು ಕಳುಹಿಸುತ್ತಿದ್ದರು. ಆದರೆ ಇಂದು ಆ ಸಂಪ್ರದಾಯ ಗ್ರಾಮ ಪ್ರೇಕ್ಷಕರಲ್ಲಿ ಉಳಿದಿಲ್ಲ. ಕಲೆಗಳಲ್ಲಿಯ ಆಸಕ್ತಿ ಪರಿವರ್ತನೆ ಆಗುತ್ತ ಬಂದಿವೆ.

೭.೩. ಪಾರಿಜಾತದಲ್ಲಿ ಪಾಂಚಾಳ ಕಲಾವಿದರ ಸ್ಥಿತ್ಯಂತರಗಳು :

೭.೩.೧. ಪಾರಿಜಾತ ಕಲಾವಿದರ ಮನೋಭೂಮಿಕೆ ಅಳಿವು-ಉಳಿವು :

ಪಾರಿಜಾತ ಎಂಬ ಹೆಸರಿನಿಂದ ಉತ್ತರ ಕರ್ನಾಟಕದ ಕಲೆಯಲ್ಲಿ ಪಂಚಾಳ ಕಲಾವಿದರ ಗರಡಿಯಲ್ಲಿ ಸದಸ್ಯರಾಗಿ ದಿನಾಲು ನೂತನದಂತೆ ನೋಡುಗರ ಕೇಳುಗರ ಮನ ಗೆದ್ದು ದಿನದಿನಕ್ಕೂ ನವ್ಯತೆಯ ಶಕ್ತಿಯೊಂದಿಗೆ ಬೆಳೆಯುತ್ತ ಸಾಗಿದ್ದು, ಕೆಲವರ ಅಭಿಪ್ರಾಯದಂತೆ, ಪಾರಿಜಾತದಲ್ಲಿ ಪಾಂಚಾಳ ಕಲಾವಿದರು ಪಾತ್ರ ಮಾಡುವುದೆಂದರೆ ದೇವಲೋಕಕ್ಕೆ ಹೋಗಿ ಪಾರಿಜಾತ ಪುಷ್ಪ ತಂದಂತೆ ಸಲೀಸಾಗಿ ಕಾರ್ಯನಿರ್ವಹಿಸುವರು. ನಿಜವಾಗಿಯೂ ಗ್ರಾಮೀಣ ಪರಿಸರದಲ್ಲಿ ಉಳಿದು ಬೆಳೆದು ಸಾಗಿದೆ. ಅದರಲ್ಲಿ ಅನೇಕ ಬದಲಾವಣೆಗಳು ಆಗುತ್ತಾ ಪ್ರತಿಯೊಬ್ಬ ಕಲಾವಿದನ ಕೈಚಳಕ ಜ್ಞಾನ ಕೌಶಲ್ಯಗಳಲ್ಲಿ ವಿಭಿನ್ನತೆ ಕಂಡು ಬರುತ್ತದೆ.

ಪಾಂಚಾಳ ಕಲಾವಿದರು ಪಾರಿಜಾತ ಮೇಳದ ಬದುಕಿನಲ್ಲಿ ಕತಮ್ಮನ್ನು ಸುಟ್ಟುಕೊಂಡು ಕಲೆಯಲ್ಲಿ ಶ್ರೀಮಂತರಿದ್ದಾರೆ. ಆದರೆ ನಿತ್ಯ ಜೀವನದಲ್ಲಿ ಬಹಳ ಬಡವರಿದ್ದಾರೆ. ಹಣಮಂತ ಬಡಿಗೇರ ಪಾರಿಜಾತ ಕಲಾವಿದ ನಿತ್ಯಜೀವನದ ತುತ್ತು ಕೂಳಿಗಾಗಿ ಅಲೆದಾಡುವ ಪ್ರಸಂಗ ಬಂದಿದೆ. ಸರಕಾರದ ಮಾಶಾಸನ ಇತ್ತೀಚಿಗೆ ದೊರಕಿದೆ. ಆದರೂ ಕಲೆಗಾಗಿ ಜೀವನವನ್ನು ತ್ಯಾಗ ಮಾಡಿದವರು. ಇವರಂತೆ ಉಳಿದ ಕಲಾವಿದರಿಗೂ ಅದು ಇನ್ನೂ ಕನ್ನಡಿಯೊಳಗಿನ ಗಂಟಾಗಿದೆ. ಪ್ರಸ್ತುತ ದಿನಗಳಲ್ಲಿ ಪಾಂಚಾಳ ಕಲಾವಿದರು ಪಾರಿಜಾತ ನಾಟಕ ಆಡಲು ಸಿದ್ಧರಿದ್ದಾರೆ. ತಂಡವು ಜೀವಂತವಿದೆ. ಆದರೆ ಕರೆದು ನಾಟಕ ಆಡಿಸುವವರಿಲ್ಲದ್ದಕ್ಕೆ ಇವರೆಲ್ಲ ಚೆಲ್ಲಾಪಿಲ್ಲಿಯಾಗಿದ್ದಾರೆ. ಬೇರೆ ಬೇರೆ ಕಡೆ ಹರಿದು ಹಂಚಿಹೋಗಿದ್ದಾರೆ. ಉಪಜೀವನಕ್ಕಾಗಿ ಬೇರೊಂದು ಕೆಲಸಕಾರ್ಯಗಳಿಗೆ ಮೊರೆಹೋಗಿದ್ದಾರೆ. ಇದ್ದ ಕೆಲವೇ ಕೆಲವು ಪಾರಿಜಾತದ ಸಲಕರಣೆಗಳು ಜಂಗು ಹಿಡಿದು ಹಾಳಾಗುತ್ತಿವೆ.

ಪಾರಿಜಾತದ ವಿವಿಧ ಬಗೆಯ ಅಭಿರುಚಿಯ ಕಲಾವಿದರೆಲ್ಲರೂ ಕೂಡಿ ಸುಮಾರು ೨೦ ವರ್ಷಗಳ ಕಾಲ ಪಾರಿಜಾತವನ್ನು ವಿವಿಧ ಸ್ಥಳಗಳಲ್ಲಿ ಪ್ರದರ್ಶಿಸಿ ತಮ್ಮ ಕಲಾ ಪ್ರೌಢಿಮೆಯನ್ನು

ಮೆರೆಸಿದರು. ಮುಂದೆ ಕಲಾವಿದರ ಅಂತಃಕಲಹದಿಂದಾಗಿ ಛಿದ್ರ ಛಿದ್ರವಾದವು. ಸ್ಥಳೀಯ ಎನ್ನಬಹುದಾದ ಸರಳತೆಯಿಂದ ಕೂಡಿದ ನಮ್ಮ ಗ್ರಾಮೀಣ ಜನಜೀವನದ ಮೇಲೆ ಪರಿಣಾಮ ಬೀರುತ್ತವೆ. ಪಾರಂಪರಿಕವಾದ ಪಾಂಚಾಳ ಕಲಾವಿದರ ಪಾರಿಜಾತದ ಸಂಶೋಧನೆಗಳು ಇಂದು ಬರಬರುತ್ತಾ ಬದಲಾಗುತ್ತ ಮುಂದೊಂದು ದಿನ ಇಲ್ಲವಾಗುವವು. ಇದಕ್ಕೆ ಆಧುನಿಕ ಅವಘಡಗಳ ಮಧ್ಯೆ ಸಂಸ್ಕೃತಿಯ ಉಳಿವಿಗಾಗಿ ಪ್ರತಿದಿನ ತನ್ನ ಅಸ್ತಿತ್ವಕ್ಕಾಗಿ ಹೋರಾಟ ಮಾಡಬೇಕಾದ ಪರಿಸ್ಥಿತಿಯಿದೆ.

ಪ್ರದರ್ಶನ ಸಿದ್ಧಾಂತದ ಹಿನ್ನೆಲೆಯಲ್ಲಿ ಪ್ರತಿ ಪುನರ್ ಸೃಷ್ಟಿ ಹಂತದಲ್ಲಿ ಹೊಸ ಕಲಾವಿದರ ಹೊಸ ಅಭಿರುಚಿಗಳ ಹೊಸ ಮಾನದಂಡಗಳು ಸೇರ್ಪಡೆಯಾಗಿವೆ. ಪ್ರದರ್ಶನಕ್ಕೆ ಹಲವಾರು ಭಿನ್ನ ಅಂಶಗಳು ನಮಗೆ ದಕ್ಕುತ್ತವೆ. ಒಟ್ಟು ತಂಡದಲ್ಲಿ ಕಲಾವಿದ, ಕಾಲ, ಪರಿಸರ, ಸಂದರ್ಭ, ಹಿಮ್ಮೇಳ, ಪರಿಕರ, ಪ್ರೇಕ್ಷಕ, ಉಡುಗೆ, ತೊಡಿಗೆ, ಯಾವೊಂದರಲ್ಲೂ ವ್ಯತ್ಯಾಸವಾದರೆ ಪ್ರದರ್ಶನದ ಮೇಲೆ ಪರಿಣಾಮ ಬೀರುತ್ತದೆ. ಗೀತ ಪ್ರಧಾನವಾದ ಪಾರಿಜಾತ ಕಲಾವಿದ ಕುಲಗೋಡ ತಮ್ಮಣ್ಣನಿಂದ ಸರಳ ಪ್ರದರ್ಶನ ಇದ್ದು. ಹಲವಾರು ಮಾರ್ಪಾಡುಗಳು ಆಗಿರುವುದು ಸಾಧ್ಯವಾಗಿವೆ ಎಂದು ಡಾ. ವೀರೇಶ ಬಡಿಗೇರ ಅವರು ಸೊನ್ನದ ಪಾರಿಜಾತ ಕಂಪನಿಯ ಕಲಾವಿದರ ಸ್ಥಿತ್ಯಂತರ ಕುರಿತು ಪ್ರಸ್ತಾಪಿಸುವ ಸಂದರ್ಭದಲ್ಲಿ ತಿಳಿಸುತ್ತಾರೆ.

ಮಲ್ಲಾಪುರ ಪಾರಿಜಾತ ಕಂಪನಿಯು ಮೂರು ದಶಕಗಳ ಕಾಲ ಪಾರಿಜಾತದೊಂದಿಗೆ ಗುರುತಿಸಿಕೊಂಡಿದ್ದ ಮಲ್ಲಾಪುರ ಗ್ರಾಮವು ಆಲಮಟ್ಟಿ ಅಣೆಕಟ್ಟೆಯ ಹಿನ್ನೀರಿನಲ್ಲಿ ಮುಳುಗಿ ಹೋಗಿದೆ. ಬದುಕು ಹುಡುಕಿಕೊಳ್ಳುವ ತಡಕಾಟದಲ್ಲಿರುವ ಇಲ್ಲಿನ ಕಲಾವಿದರಿಗೆ ಪಾರಿಜಾತ ಕಂಪನಿಯೆಂದರೆ ಬರಿ ನೆನಪುಗಳಾಗುತ್ತವೆ ಎಂದು ಮಲ್ಲಯ್ಯ ಮಠಪತಿಯವರ ಅಭಿಪ್ರಾಯ. ಏಕೆಂದರೆ ಮೂಲ ಅಸ್ತಿತ್ವಕ್ಕೆ ಬಂದರು ಅಲ್ಲಿ ಪಾರಿಜಾತದ ಕಂಪು ಮಾತ್ರ ಬೀರುವುದಿಲ್ಲ ಇದು ಪರಿವರ್ತನೆಯ ಯುಗವಾಗಿದೆ.

ಪಾರಿಜಾತದಲ್ಲಿ ತೊಡಗಿರುವ ಪಾಂಚಾಳ ಕಲಾವಿದರ ಮನೋವಿಕಾಸದಲ್ಲಿ ಹಿಂದಿನ ಅಧ್ಯಯನ ಮಾದರಿಗಳು ಸಮಗ್ರತೆಗಿಂತ ಸೂಕ್ಷ್ಮತೆಗೆ ಹಾಗೂ ಇಡಿಯಾದ ಅಧ್ಯಯನಕ್ಕಿಂತ ಬಿಡಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕಾಗುತ್ತದೆ. ಆದ್ದರಿಂದ ವ್ಯಕ್ತಿ ಅಧ್ಯಯನದಂತ ಅಭ್ಯಾಸ ಕ್ರಮಗಳು ಪ್ರಚಲಿತಗೊಳ್ಳುತ್ತಿವೆ. ಏಕವ್ಯಕ್ತಿಯ ಅಧ್ಯಯನದ ಮೂಲಕ ಆತನ ಕಲಾ, ಪರಿಸರ, ಸಾಂಸ್ಕೃತಿಕ ಹಿನ್ನೆಲೆ, ಸಮುದಾಯ ಮುಂತಾದ ಅಂಶಗಳನ್ನು ಕಂಡುಕೊಳ್ಳಬಹುದು. ಪಾಂಚಾಳರ ಕರಕೌಶಲ್ಯಗಳು ವ್ಯಕ್ತಿ ಕೇಂದ್ರದಿಂದ ವೃಷ್ಟಿ ಕೇಂದ್ರದಡೆಗೆ ಸಾಗುವ ಮೂಲಕ ಒಂದು ಸಮುದಾಯದ, ಸಮಾಜದ ಅಧ್ಯಯನವನ್ನು ಕಲೆಗಳ ಹಿನ್ನೆಲೆಯಾಗಿ ಮಾಡಬಹುದಾಗಿದೆ. ಪ್ರಸ್ತುತ ಕೃಷ್ಣಪಾರಿಜಾತದಲ್ಲಿ ಪಾಂಚಾಳ ಕಲಾವಿದರ ಪ್ರಾತಿನಿಧ್ಯವನ್ನು ಕುರಿತು ವಿಶ್ಲೇಷಣಾತ್ಮಕವಾಗಿ ವಿಶ್ಲೇಷಿಸಬಹುದಾಗಿದೆ.

ಪಾರಿಜಾತವು ಹಲವಾರು ರೀತಿಯ ಏಳುಬೀಳುಗಳ ಮಧ್ಯೆಯೂ ಒಂದು ಪ್ರದರ್ಶಿತ ರೂಪವನ್ನು ಉಳಿಸಿಕೊಂಡು ಬಂದಿದೆ. ಸೊನ್ನದ ಪಾರಿಜಾತ ತಂಡ ಹಲವು ಸ್ಥಿತ್ಯಂತರದಲ್ಲಿ ಮೊದಮೊದಲು ಕೃಷ್ಣಪಾರಿಜಾತದಲ್ಲಿ ಸ್ತ್ರೀ ಪಾತ್ರವನ್ನು ಪುರುಷರೇ ನಿರ್ವಹಿಸುತ್ತಿದ್ದರು. ಬರುಬರುತ್ತಾ ಸ್ತ್ರೀಪಾತ್ರಗಳನ್ನು ಸ್ತ್ರೀಯರಿಗೆ ಕೊಟ್ಟಾಗ ನಾಟಕದ ವೇದಿಕೆಗಳು ರಂಗಭೂಮಿಯ ರಂಗೇರಿತು ಜನಾಕರ್ಷಣೆ ಹೆಚ್ಚಾಯಿತು. ನಂತರ ಪಾರಿಜಾತ ಕಥೆಗಳು ಅದೇ ಕಲಾವಿದ, ಅದೇ ಕಥೆ ಮನೋರಂಜನೆ ಇಲ್ಲವೆಂಬ ಕಾರಣಗಳಿಂದ ಹೊಸ ಹೊಸ ಆಲೋಚನೆಗಳು ಮೂಡಿಬಂದವು. ಸಿನಿಮಾ, ಧಾರಾವಾಹಿ, ರಂಗೇರುವ ವೃತ್ತಿ ನಾಟಕಗಳು ಬಂದವು. ಆದ್ದರಿಂದ ನಾಟಕದ ಕಲೆ, ಕಲಾವಿದ, ಕಥೆ, ಸಂಗೀತ ಎಲ್ಲವೂ ಬದಲಾವಣೆಗಳಾಗಿವೆ. ಆದ್ದರಿಂದ ಹೊಸ ಕಲಾವಿದರ ತಯಾರಿ ಕೆಲಸಗಳು ಆಗಬೇಕಾಗಿದೆ. ಅದಕ್ಕಾಗಿ ಕಲಿಕಾ ಕೇಂದ್ರಗಳನ್ನು ಆರಂಭಿಸಬೇಕು. ಸರಕಾರದ ಯೋಜನೆಗಳಲ್ಲಿ ಕೃಷ್ಣಪಾರಿಜಾತ ಕಲೆಗೆ ಅಷ್ಟೊಂದು ಮಹತ್ವ ನೀಡಿಲ್ಲ. 'ಕಾವ್ಯೇಷ ನಾಟಕಂ ರಮ್ಯಂ' ಎಂಬ ಕಾಳಿದಾಸನ ಕೃತಿ ಶಕುಂತಲಾ ನಾಟಕದಲ್ಲಿ ಸಾಹಿತ್ಯದ ಪ್ರಕಾರಗಳಲ್ಲಿ ನಾಟಕ ಮನಸೆಳೆಯುವ ರಮಣೀಯ ದೃಶ್ಯ ಮಾಧ್ಯಮ. ಇತ್ತೀಚಿನ ದಿನಗಳಲ್ಲಿ ರಂಗಭೂಮಿಯತ್ತ ಯುವ ಪೀಳಿಗೆಯ ಒಲವು ಹೆಚ್ಚಾಗಿದೆ. ಒಂದು ಕಾಲದಲ್ಲಿ ರಂಗಭೂಮಿ ಕಲಾವಿದರೆಂದರೆ ಅವರನ್ನು ಕೀಳು ಭಾವನೆಯಲ್ಲಿ ನೋಡಲಾಗುತ್ತಿತ್ತು. ಆದರೆ ಈಗ ಕಾಲ ಬದಲಾಗಿದೆ. ಮನೆಯಿಂದ ಆಚೆ ಹೋಗಿ ರಂಗಭೂಮಿ ಚಟುವಟಿಕೆಯಲ್ಲಿ ಸ್ವಲ್ಪ ತೊಡಗಿಸಿಕೋ ಎಂದು ಪಾಲಕರು ಹೇಳುತ್ತಾರೆ. ಇಂದಿನ ಪ್ರಯೋಗಗಳಲ್ಲಿ ಹೊಸತನ, ಸ್ತ್ರೀ ಸಂವೇದನೆ, ತಂತ್ರಜ್ಞಾನ, ಪಾಶ್ಚಾತ್ಯ ಸಂಸ್ಕೃತಿ ಎಲ್ಲವೂ ಬೆರೆತಿದೆ. ಇದರ ಜೊತೆಗೆ ವ್ಯಾಪಾರಿ ಅಂಶಗಳು ಯುವ ಪೀಳಿಗೆಯನ್ನು ಆಕರ್ಷಿಸುತ್ತಿವೆ.

ಸದಾ ಒತ್ತಡದ ಜೀವನ ನಡೆಸುವ ಐಟಿ–ಬಿಟಿ ಉದ್ಯೋಗಿಗಳು ಸಹ ತಮ್ಮ ಒತ್ತಡ ನಿವಾರಿಸಿಕೊಳ್ಳಲು ರಂಗಭೂಮಿ ಚಟುವಟಿಕೆಗಳಲ್ಲಿ ಇಂದು ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿದ್ದಾರೆ. ಇವರ ಪ್ರವೇಶದಿಂದಾಗಿ ರಂಗಭೂಮಿ ಸ್ವಲ್ಪ ಮಟ್ಟಿನ ಆರ್ಥಿಕ ಚೇತನವನ್ನು ಕಾಣುತ್ತಿದೆ. ಸಿನಿಮಾ ಧಾರಾವಾಹಿಗಳ ನಟನೆಗಿಂತ ಹೆಚ್ಚಿನ ತಾಲಿಮು ಶ್ರದ್ಧೆಯನ್ನು ಬಯಸುವ ರಂಗಭೂಮಿ ಯಾವತ್ತೂ ಹಣಗಳಿಕೆಯ ಮಾಧ್ಯಮವಾಗಿರಲಿಲ್ಲ. ಅದು ಅರೆ ಹೊಟ್ಟೆಯ ಕ್ಷೇತ್ರವಾಗಿತ್ತು. ಈಗಿನ ಹಾಗೆ ಸರ್ಕಾರದ ಅನುದಾನವೂ ಸಿಗುತ್ತಿರಲಿಲ್ಲ. ಅಲ್ಲದೆ ಜನಪ್ರಿಯತೆಯು ಕಡಿಮೆ. ಆದರೆ ಈಗ ರಂಗಭೂಮಿ ವ್ಯವಹಾರಿಕ ಕ್ಷೇತ್ರವಾಗಿದೆ.

ಹವ್ಯಾಸಿ ರಂಗಭೂಮಿಗೆ ಯುವಕರು ಹೆಚ್ಚಾಗಿ ಹೋಗುತ್ತಾರೆ. ಆದರೆ ಭಕ್ತಿಪ್ರಧಾನ ಪಾರಿಜಾತ ನಾಟಕಕ್ಕೆ ಬರುವುದಿಲ್ಲ. ಆದರೂ ದಾರಾವಾಹಿ, ಸಿನಿಮಾಗಳನ್ನೇ ಮನಸ್ಸಿನಲ್ಲಿಟ್ಟುಕೊಂಡು ರಂಗಭೂಮಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ರಂಗಭೂಮಿಗೆ ಬರುತ್ತಿರುವುದರಿಂದ ಹೊಸ ಆಯಾಮಗಳು ಹುಟ್ಟಿಕೊಳ್ಳುತ್ತಿರುವುದನ್ನು ನಾವು ಒಪ್ಪಿಕೊಳ್ಳಲೇಬೇಕು.

ಪಾರಿಜಾತ ಕಲೆಯಿಂದ ಸಮಾಜದಲ್ಲಿ ಆದ ಬದಲಾವಣೆಗಳು ಹೀಗಿವೆ.

೧. ಪಾರಿಜಾತ ಬಯಲಾಟದಿಂದ ಸಾಮಾಜಿಕ ಪ್ರಜ್ಞೆ

೨. ಪಾರಿಜಾತ ಬಯಲಾಟದಿಂದ ಆಧ್ಯಾತ್ಮಿಕ ಸಾಂಸ್ಕೃತಿಕ ಪ್ರಜ್ಞೆ

೩. ಅನ್ನದಾತರಿಗೆ ಬೆನ್ನೆಲುಬಾಗಿ ನಿಂತ ವಿಶ್ವಕರ್ಮ ಸಮಾಜ

೪. ವಿಶ್ವಕರ್ಮ ಎಂಬುದು ಕೇವಲ ಒಂದು ಸಮುದಾಯವಲ್ಲ. ಅದು ಅನಾದಿಕಾಲದಿಂದಲೂ ಅನೇಕ ವಿಸ್ಮಯಗಳ ಸೃಷ್ಟಿಕರ್ತ ಸಮುದಾಯ

೫. ವಿಶ್ವಕರ್ಮ ಸಮಾಜಕ್ಕೆ ಒಳಮೀಸಲಾತಿ

೬. ವಿಶ್ವಕರ್ಮ ವಿವಿಗೆ ಚಿಂತನೆ. ಕಲೆಗಳ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸುವ ಕುರಿತು ಪರಿಶೀಲಿಸಲಾಗುವುದು

೭. ವಿಶ್ವಕರ್ಮರು ಸೃಜನಶೀಲರು. ಅಪಾರ ನೈಪುಣ್ಯತೆಯನ್ನು ಬೇರೆಯವರಲ್ಲಿ ಕಾಣಲಾಗದು. ಅಮರಶಿಲ್ಪಿ ಜಕಣಾಚಾರಿಗಳ ಕೆತ್ತನೆಗಳೇ ಇದಕ್ಕೆ ಸಾಕ್ಷಿ. ದೇವರು ಪ್ರಕೃತಿಯನ್ನು ಸೃಷ್ಟಿಸಿದವರು. ಕಲಾಕೃತಿಗಳಲ್ಲಿ ತುಂಬಿದವರು.

೭.೩.೧.೧. ಟಿವಿ ಅಂತರ್ಜಾಲದ ಪರಿಣಾಮ :

ಟಿವಿ, ರೇಡಿಯೋ, ಅಂತರ್ಜಾಲ, ಸಿನಿಮಾ, ಕ್ರಿಕೆಟ್, ಹೆಚ್ಚು ಹೆಚ್ಚಾದಂತೆ ರಂಗಭೂಮಿ ತನ್ನ ಖದರು ಕಳೆದುಕೊಳ್ಳುತ್ತಿದೆ ಎನ್ನುವ ಭಾವನೆ ಬೆಳೆದಿತ್ತು. ಆದರೆ ಅದು ನಿಜವಲ್ಲ. ಏಕೆಂದರೆ ಇತ್ತೀಚೆಗೆ ಬೆಂಗಳೂರಿನಲ್ಲಿ ಅಹೋರಾತ್ರಿ ನಡೆದ 'ಮಲೆಗಳಲ್ಲಿ ಮದುಮಗಳು' ನಾಟಕಕ್ಕೆ ಜನ ಚುಮು-ಚುಮು ಚಳಿಯಲ್ಲಿ ೨೫೦ ಟಿಕೆಟ್ ಪಡೆದು ಕಿಕ್ಕಿರಿದು ಸೇರಿದ್ದರು. ಅಲ್ಲದೆ ರಂಗಭೂಮಿಯತ್ತ ಯುವಪೀಳಿಗೆ ಹೆಚ್ಚು ಆಕರ್ಷಿತವಾಗುವುದರಿಂದ ಟಿವಿ, ರೇಡಿಯೋ, ಅಂತರ್ಜಾಲ, ಮಾಧ್ಯಮಗಳೆ ಈಗ ರಂಗಭೂಮಿಯ ಪ್ರಚಾರ ರಾಯಭಾರಿಗಳಾಗಿವೆ. ಖಾಸಗಿ ವಾಹಿನಿಗಳಲ್ಲಿ ಆರಂಭವಾದ ಡ್ರಾಮಾ ಜೂನಿಯರ್, ಕಾಮಿಡಿ ಕಿಲಾಡಿ, ಮಜಾಭಾರತದಂತಹ ಬಹಳಷ್ಟು ರಿಯಾಲಿಟಿ ಶೋಗಳಲ್ಲಿ ರಂಗಭೂಮಿ ಪ್ರತಿಭೆಗಳು ಮಿಂಚಿವೆ. ಇದರಿಂದಾಗಿ ನಮ್ಮ ಮನೆಯಲ್ಲಿ ಆಗಬೇಕೆಂದುಕೊಂಡವರ ಸಂಖ್ಯೆ ಹೆಚ್ಚಾಗಿದೆ. ಆದ್ದರಿಂದ ರಂಗಭೂಮಿಗೆ ಸಾಮಾಜಿಕ ಬೆಂಬಲವೂ ದೊರಕಿದೆ.

ರಂಗನಿರ್ದೇಶಕನು ಕೇಳುವವರೇ ಗತಿಯಿಲ್ಲ ಎನ್ನುವ ಹಂತ ತಲುಪಿದಾಗ, ಅವರಿಗೆಲ್ಲ ಮರುಜೀವ ನೀಡಿದ್ದು ಈ ಕಾರ್ಯಕ್ರಮಗಳು. ಆಸ್ತಿ, ಅಂತಸ್ತು, ಸಮುದಾಯ, ಮೇಲು-ಕೀಳು, ದ್ವೇಷ, ತಾರತಮ್ಯದ ಭಾವನೆಯನ್ನು, ದೂರತಳ್ಳಿ ನಾವೆಲ್ಲರೂ ಒಂದೇ ಎಂಬ ಭಾವೈಕ್ಯತೆಯ ಭಾವನೆಯನ್ನು ರಂಗಭೂಮಿ ಬೆಳೆಸುತ್ತಿದೆ. ಇವನ ಜೊತೆ ಸೇರಬೇಡ ಅವನ ಜೊತೆ ಮಾತನಾಡಬೇಡ ಎಂಬ ಭಾವನೆಗಳನ್ನು ದೂರ ಮಾಡಿ ಸಮಾಜದಲ್ಲಿ ಹಾಗೂ ಜೀವನದಲ್ಲಿ ಮೌಲ್ಯಗಳನ್ನು ಕಲಿಸುತ್ತಿರುವ ರಂಗಭೂಮಿ ಒಂದು ಬಯಲು ವಿಶ್ವವಿದ್ಯಾಲಯವಾಗಿದೆ.

೭.೩.೧.೨. ಪಾರಿಜಾತದ ಅಳಿವು-ಉಳಿವು :

ರಂಗಕಲೆಗಳ ರಾಜನೆಂದು ಕರೆಸಿಕೊಳ್ಳುವ ಶ್ರೀಕೃಷ್ಣಪಾರಿಜಾತಕ್ಕೆ ಈಗ ೧೫೦ ವರ್ಷಗಳು. ಪಾರಿಜಾತದ ಯಶಸ್ಸು ಇರುವುದು, ಅದರ ದೇಶಿ ಮೂಲದ ಆಧ್ಯಾತ್ಮಿಕ ನಡೆಯಲ್ಲಿ. ಕೃಷ್ಣ, ರುಕ್ಮಿಣಿ, ಸತ್ಯಭಾಮೆ, ಇವರ ಗೃಹ ಕಲಹದ, ಕಥಾಹಂದರ ಹೊಂದಿರುವ, ಈ ಆಟ ತನ್ನ ಪಾರಮಾರ್ಥಿಕ ಅದ್ವೈತ ಪರಿಕಲ್ಪನೆಯಿಂದಾಗಿ ಆಟ ಮುಗಿಯುವುದರೊಳಗಾಗಿ ಶ್ರೀಕೃಷ್ಣನಿಗೆ ದೈವ ರೂಪ ಪ್ರಾಪ್ತವಾಗುತ್ತದೆ. ಅದುವರೆಗೂ ನಡೆದ ಎಲ್ಲಾ ಸಾಮಾಜಿಕ ಮಾತುಗಳು ಅನುಭಾವದ ಅರ್ಥಕ್ಕೆ ರೂಪಾಂತರಗೊಳ್ಳುತ್ತವೆ.

ಮನುಷ್ಯ ಮೂಲದಿಂದ ದೈವ ಸಾಕ್ಷಾತ್ಕಾರಕ್ಕೆ ರೂಪಾಂತರಗೊಳ್ಳುವ ವಿಸ್ಮಯವೇ ಇಲ್ಲಿ ಹಂಬಲವಾಗಿ, ಭಕ್ತಿಯಾಗಿ, ಸಂಗೀತವಾಗಿ, ರಸಿಕರನ್ನು ತಲೆದೂಗಿಸಿತೊಡಗಿದೆ. ಇಂತಹ ಆಟವನ್ನು ಇಷ್ಟು ದೀರ್ಘಾವಧಿಯವರೆಗೆ ಇಡಿ ರಂಗದಮೇಲೆ ಆಡುತ್ತ ಬಂದವರು ಈ ನಮ್ಮ ಜನಪದ ಕಲಾವಿದರು. ಪಾರಿಜಾತದ ಮೇಳ ಕಟ್ಟಿ ಹಾಡಿ ಕುಣಿದು ಬದುಕು ನಡೆಸಿದ್ದಾರೆ.

ಮೊದಲ ಬಾರಿಗೆ ಅಂತಹ ಪ್ರಮುಖ ಮೇಳಗಳ ಇತಿಹಾಸವನ್ನು ಇಲ್ಲಿ ವಿವಿಧ ಲೇಖಕರು ದಾಖಲಿಸುವುದರೊಂದಿಗೆ ಪಾರಿಜಾತ ಪರಂಪರೆಯನ್ನು ಅಧ್ಯಯನದಲ್ಲಿ ತೆರೆದು ಇಡಲಾಗಿದೆ. ಇಲ್ಲಿಯ ಹಲವಾರು ಕಲಾವಿದರು, ಪಾರಿಜಾತ ಕಂಪನಿಗಳ ಇತಿಹಾಸವನ್ನು ೧೫೦ ರಿಂದ ೨೦೦ ವರ್ಷಗಳವರೆಗೆ ನಡೆದ ಸಂಶೋಧನೆ, ಪಾರಿಜಾತ ಇತಿಹಾಸ, ಪಾಂಚಾಳರ ಸಂಸ್ಕೃತಿ, ಸಂಸ್ಕಾರ, ಕಲಾಕೌಶಲ್ಯಗಳು, ಸಂಗೀತ ವಾದ್ಯ ಪರಿಕರಗಳು, ಅವುಗಳ ತಯಾರಿಕೆ ಹಾಗೂ ಬಾರಿಸುವ, ನುಡಿಸುವ, ಹಿಮ್ಮೇಳ, ಮುಮ್ಮೇಳ ಮುಂತಾದವುಗಳನ್ನು ವಿಜಯಪುರ, ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳನ್ನು ಅನುಲಕ್ಷಿಸಿ ಅಧ್ಯಯನ ಮಾಡಲಾಗಿದೆ.

೭.೩.೨. ಪಾರಿಜಾತ ಕಲಾವಿದರ ವಾದ್ಯ ಪರಿಕರಗಳ ಬದಲಾವಣೆ :

ಕೃಷ್ಣಪಾರಿಜಾತದಲ್ಲಿ ಮೊದಲು ಗೀತ ರೂಪಕದ ನಾಟಕದಲ್ಲಿ ಮದ್ದಳೆಯನ್ನು ಉಪಯೋಗಿಸುತ್ತಿದ್ದರು. ಏಕೆಂದರೆ ಆಗಿನ ಕಾಲದಲ್ಲಿ ಮೈಕ್ ಅಥವಾ ಧ್ವನಿವರ್ಧಕ ವಸ್ತುಗಳು ಇರಲಿಲ್ಲ. ಆದಕಾರಣ ಸೂಕ್ಷ್ಮವಾದಂತಹ ವಾದ್ಯಗಳನ್ನು ಬಳಸಿದರೆ, ಹಿಂದೆ ಕುಳಿತವರಿಗೆ ಕೇಳುವುದಿಲ್ಲ. ಆದಕಾರಣ ಮದ್ದಳೆ ಹೆಚ್ಚು ಶಬ್ದ ಮಾಡುವ ಸಂಗೀತ ವಾದ್ಯವಾಗಿರುವದು. ಅಷ್ಟೇ ಅಲ್ಲ ರಾಜ ಮಹಾರಾಜರ ಆ ದಿನದಲ್ಲಿ ಗುಡಿ, ದೇವಾಲಯದ ಮೂರ್ತಿ ಪೂಜೆಯ ಸಂದರ್ಭದಲ್ಲಿ ಈ ವಾದ್ಯವನ್ನು ಬಳಸುತ್ತಿದ್ದರು. ತದನಂತರ ಈ ವಾದ್ಯವನ್ನೇ ಸಂಗೀತ ಕಲೆಗಳಲ್ಲಿ ಬಳಸುತ್ತಾ, ಹಬ್ಬ ಹರಿದಿನಗಳಲ್ಲಿ, ಜಾತ್ರೆ, ಉತ್ಸವಗಳಲ್ಲಿ, ಬಳಸುತ್ತಾರೆ. ಅದನ್ನೇ ಕೃಷ್ಣಪಾರಿಜಾತಕ್ಕೆ ಬಳಿಸಿದ್ದುಂಟು. ಕೆಲವು ವರ್ಷಗಳ ಬಳಿಕ ಪಾರಿಜಾತ ನಾಟಕಕ್ಕೆ ಸಣ್ಣಾಟದಂತೆ ದಮಡಿ, ದಪ್ಪಡಿ, ವಾದ್ಯ ಬಳಸುತ್ತಾರೆ ಎಂದು ಕೆಲವು ವಿದ್ವಾಂಸರ ಬಿನ್ನಾಭಿಪ್ರಾಯವಿದೆ ಎಂದು ಡಾ. ಚಂದ್ರಶೇಖರ

ಕಂಬಾರ ಅವರು ಉತ್ತರ ಕರ್ನಾಟಕ ಬಯಲಾಟಗಳ ಸಂಶೋಧನಾ ಪ್ರಬಂಧದಲ್ಲಿ ಮಾತನ್ನು ಪ್ರಸ್ತಾಪಿಸುತ್ತಾರೆ.

ಕೃಷ್ಣ ಪಾರಿಜಾತದಲ್ಲಿ ಮದ್ದಳೆ, ದಮಡಿ, ನಂತರ ಇತ್ತೀಚಿಗೆ ತಬಲಾ, ಬಳಸುವರು. ಇದು ರಾಗ, ಲಯ, ಸಂಯೋಜನೆಗೆ ಹತ್ತಿರವಾಗಿದೆ. ತಬಲಾ, ಚರ್ಮದಿಂದ ಹೊದಿಕೆಯಾದ ಮಧ್ಯದಲ್ಲಿ ಕರಿಪಟ್ಟಿ ಸುತ್ತುವರು. ಎರಡು ಕಡೆ ನಾದಗಳು ಪಾರಿಜಾತಕ್ಕೆ ಹೇಳಿಮಾಡಿಸಿದಂತಿವೆ. ಜನಪದ ಕಲಾವಿದರು ತಮ್ಮ ಕಲೆಗಳ ಪ್ರದರ್ಶನವನ್ನು ಬೇಸರವಿಲ್ಲದೆ ಮಾಡುವರು. ಉದಾಹರಣೆಗೆ ಸೊನ್ನಾ ಗ್ರಾಮದ ಗೋವಿಂದಪ್ಪ ಪತ್ತಾರ ಎಂಬುವರು ಎಂಟು ಹತ್ತು ತಾಸು ಯಾವದೇ ಬೆಸರಕೆ ಇಲ್ಲದೆ ತಬಲಾವನ್ನು ಬಾರಿಸಿದ್ದು ದಾಖಲೆಯಿದೆ. ಪಾರಿಜಾತ ಬಯಲಾಟದಲ್ಲಿ ಬಾರಿಸುವ ಮೂಲಕ ಕಲಾಸೇವೆಗೆ ಸಬಿಕರನ್ನು ಮುಗ್ದಗೊಳಿಸಿರುವರು. ಸತತವಾಗಿ ೩೫ ವರ್ಷಗಳಿಂದ ದಣಿವರಿಯದ ಕಲಾಸೇವೆ ಮಾಡಿರುವನು.

ಹಾರ್ಮೋನಿಯಂ : ಈ ವಾದ್ಯವು ಮೊದಲು ಕೈಪೆಟಿಗೆ, ಕಾಲ ಪೆಟಿಗೆ, ಹೀಗೆ ಪರಿವರ್ತನೆಯಾಗುತ್ತಾ ಇತ್ತೀಚಿನ ದಿನಗಳಲ್ಲಿ ಇದರ ಸ್ಥಾನದಲ್ಲಿ ಕ್ಯಾಶಿಯೋ ಬಂದಿದೆ. ಅದರೆ ಮೂಲ ಹಾರ್ಮೋನಿಯಮ್‌ನ ನಾದವೇ ಬೇರೆ. ಕೇಳುಗರ ರಾಗ, ಲಯಕ್ಕೆ ಹೊಂದಿಕೊಳ್ಳುತ್ತಿದ್ದವು. ಇತ್ತೀಚಿನ ಹಾರ್ಮೊನಿಯಂ ನಾದದ ಸೂರು ಸರಿಯಿರುವುದಿಲ್ಲ. ಏಕೆಂದರೆ ಸ್ವತಃ ತಯಾರ ಆಗುದಿಲ್ಲ. ಎಲ್ಲೋ ತಯಾರಾಗುತ್ತವೆ. ಅದಕ್ಕೆ ಸರಿಯಾದ ಸೂರ ಜೋಡಿಸುವದಿಲ್ಲ, ಕೈ ಪೆಟಿಗೆ, ಕಾಲ ಪೆಟಿಗೆ, ಕ್ಯಾಶಿಯೋ ಮುಂತಾದವುಗಳ ಹಾವಳಿಯಿಂದ ನಿಜವಾದ ಸಂಗೀತದ ಪಾರಿಜಾತದ ಆಟದ ಲಯ ಕೆಟ್ಟು ಹೋಗಿದೆ.

ತಾಳ : ಪಾರಿಜಾತ ಬಯಲಾಟಕ್ಕೆ ಪ್ರಮುಖ ವಾದ್ಯ ತಾಳ. ಇದಕ್ಕೆ ಕಂಚಿನ ತಾಳಗಳು ಎಂದು ಕರೆಯುವರು. ಹಿಮ್ಮೇಳ ವಾದ್ಯ ಕಲಾವಿದರಾಗಿ ಇಬ್ಬರು ನಾಲ್ಕು ತಾಳಗಳನ್ನು ಹಿಡಿದು (ಒಬ್ಬೊಬರು) ಎರಡೆರಡು ತಾಳಗಳನ್ನು ಹಿಡಿದು ನಾದಗಳನ್ನು ಹೊರಡಿಸುವರು. ತಾಳಗಳ ಲಯ ಮೊದಲು ಜನಪದ ಕಲಾವಿದನ ಮನೋಭೂಮಿಕೆಯಲ್ಲಿ ಅಲೆದಾಡಿ ನಂತರ ಬಹಿರಂಗವಾಗಿ ಭಾರಿಸುವ ಕಲೆ. ತಾಲೀಮು ಕಲಿತು ಬಾರಿಸುತ್ತಿದ್ದರು. ತಾಳ ತಯಾರಿಕೆಯು ಕುಲಮೆಯಲ್ಲಿ ಸರಿಯಾಗಿ ಸತು, ಕಬ್ಬಿಣ, ಕಂಚು, ಸೀಸ, ಕುದಿಸಿ ಹದಮಾಡುತ್ತಾ, ಮಾಡುತ್ತಾ ಹಲವು ಬಾರಿ ಬಾರಿಸಿ ಡೋಣಿಯಲ್ಲಿರುವ ನೀರು ಕುಡಿಸಿ(ಉಣಿಸಿ) ಶುದ್ದವಾದ ತಾಳಗಳನ್ನು ತಯಾರು ಮಾಡುವ ಹಂದಿಗುಂದದ ನಾಗೇಂದ್ರ ಕಂಬಾರ ಅವರ ಕುಶಲ ಕಲೆಯ ವಿಶಿಷ್ಟವಾದುದು.

ಪಾರಿಜಾತ ನಾಟಕ ಅಷ್ಟೇ ಅಲ್ಲ ಇನ್ನೂ ಹಲವಾರು ಭಜನೆಗಳಿಗೆ ತಾಳಗಳನ್ನು ತಯಾರಿ ಮಾಡಿಕೊಡುವರು. ಪ್ರಸ್ತುತ ದಿನಮಾನಗಳಲ್ಲಿ ಪಾರಿಜಾತ ನಾಟಕಗಳಲ್ಲಿ ಸರಿಯಾದ ನಾದ ಹೊರಡುವ ಹಾರ್ಮೋನಿಯಂದ ಸ್ವರವಿರುವದಿಲ್ಲ. ತಬಲಾದ, ವಾದ್ಯದ ಶಬ್ದ ಇಲ್ಲ. ತಾಳಗಳ ಲಯಗತ್ತು ಇಲ್ಲ. ಒಟ್ಟಾರೆ ಪಾರಿಜಾತ ಕಲಾವಿದರಲ್ಲಿ ಕಲೆ ವಿಭಿನ್ನವಾಗಿ ಕವಲೊಡೆದು

ನಾಟಕಗಳು ಅಸ್ತಂಗತವಾಗುತ್ತಿವೆ. ಆಧುನಿಕ ಸಂಗೀತಗಳ ವಾದ್ಯ ಪರಿಕರಗಳು ಪಾಶ್ಚಾತ್ಯರ ವಾದ್ಯ ಸಲಕರಣೆಗಳು, ಇದಲ್ಲದೆ ಮ್ಯೂಜಿಕ್‌ನಲ್ಲಿ ಹಾಡುಗಳನ್ನು ಹಾಡುವದು. ಇದರಿಂದ ಮುಂದಿನ ದಿನಮಾನಗಳಲ್ಲಿ ಬಹಳಷ್ಟು ಬದಲಾವಣೆಗಳು ಆಗುತ್ತವೆ. ಪಾರಿಜಾತ ವಾದ್ಯಪರಿಕರಗಳು ಬಹಳಷ್ಟು ಪರಿವರ್ತನೆಯಾಗಿವೆ.

೭.೩.೩. ಸಂಗೀತದಲ್ಲಿ ಹಿಮ್ಮೇಳ, ಮುಮ್ಮೇಳ ಕಲಾವಿದರು :

ಕೃಷ್ಣ ಪಾರಿಜಾತದಂತ ಬಯಲಾಟಗಳಲ್ಲಿ ಪಾರಿಜಾತ ಹಿಮ್ಮೇಳ, ಮುಮ್ಮೇಳ ಕಲಾವಿದರ ಬದುಕಿನ ವೈಶಿಷ್ಟ್ಯಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಸಾಂಸ್ಕೃತಿಕ ಲೋಕಕ್ಕೆ ಪಾತ್ರದಾರಿಗಳ ಹಿನ್ನಲೆಯಲ್ಲಿ ಹಿಮ್ಮೇಳ ಕಲಾವಿದರು ಪಾರಿಜಾತದ ಜನಪದ ರಂಗ ರೂಪವನ್ನು ರಚಿಸಿ ನಿರ್ವಹಿಸಿದ ಹಾಗೂ ಬೆಳೆಸಿದ ಪ್ರತಿಯೊಬ್ಬ ಕಲಾವಿದರೂ ಒಂದೊಂದು ರೀತಿ ಬದುಕು-ಬವಣೆ ಪಾರಿಜಾತದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದಾಗಿದೆ.

ಹಿಮ್ಮೇಳ ಎನ್ನುವುದು ಅದು ಪಾರಿಜಾತದಂತ ನಾಟಕಗಳಲ್ಲಿ ನಿಷ್ಕ್ರಿಯ ರೂಪದ್ದಲ್ಲ. ಪಾತ್ರಗಳ ಅಂಶಿಕ ರೂಪವು ಅಲ್ಲ. ಇನ್ನೆಲ್ಲ ಕಲಾವಿದರನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಏಕೆಂದರೆ ಮುಖ್ಯ ಕಲಾವಿದರಿಗೆ ಆದ್ಯತೆ ನೀಡುವ ನೆಪದಲ್ಲಿ ಹಿಮ್ಮೇಳದ ಕಲಾವಿದರನ್ನು ಮೂಲೆಯಲ್ಲಿ ಅನುಪಯುಕ್ತರಂತೆ ಕಾಣುವುದು ಸರಿಯಲ್ಲ. ಅವರನ್ನು ಮುಖ್ಯ ಹಾಡುಗಾರರ ಅನುಬಂಧದಂತೆ ನೋಡುತ್ತಾರೆ. ವಾಸ್ತವ ಹಾಗಿಲ್ಲ ಹಿಮ್ಮೇಳದವರು ಇಡೀ ಕಲೆ ಹಾಗೂ ಪ್ರದರ್ಶನವನ್ನು ಹೆಚ್ಚು ಹೆಚ್ಚು ಸೃಜನಶೀಲವಾಗಿಸುವಂತವರು. ಮತ್ತೆ ಮತ್ತೆ ಅದನ್ನು ಹೆಚ್ಚು ಹೊಸದಾಗಿಸುವಂಥವರು. ಪಾರಿಜಾತ ನಾಟಕದಲ್ಲಿ ಒಬ್ಬೊಬ್ಬ ಕಲಾವಿದರು ಏನಿಲ್ಲವೆಂದರೂ ಕನಿಷ್ಠ ಐದು ಹತ್ತರವರೆಗೆ ಮೇಳಗಳಲ್ಲಿ ಬೇರೆ ಬೇರೆ ರೂಪದಲ್ಲಿ ಕೃಷ್ಣ, ದ್ಯುತಿ, ಕೊರವಂಜಿ, ರುಕ್ಮಿಣಿ, ಸತ್ಯಭಾಮೆ, ನಾರದ, ಮುಂತಾದ ಸುಮಾರು ಐವತ್ತು ವರ್ಷಕ್ಕೂ ಹೆಚ್ಚು ಸೇವೆ ಸಲ್ಲಿಸಿದವರು. ಏಕೆಂದರೆ ಒಂದು ಮೇಳದಲ್ಲಿ, ಹಾರ್ಮೋನಿಯಂ ಮಾಸ್ತರನಾಗಿ, ಇನ್ನೊಂದರಲ್ಲಿ ಪಾತ್ರಧಾರಿಯಾಗಿ, ಮಾಲೀಕನಾಗಿ, ಭಾಗವತನಾಗಿ, ಇತ್ಯಾದಿ ರೂಪಗಳನ್ನು ಆಯಾ ಸಾಂಧರ್ಬಿಕ ಒತ್ತಡದಲ್ಲಿ ಪಡೆದುಕೊಳ್ಳುತ್ತಾನೆ.

ಹಿಮ್ಮೇಳ ಇರಲಿ ಮುಮ್ಮೇಳ ಕಲಾವಿದರಿರಲಿ ಅವರೆಲ್ಲರೂ ಹೊಟ್ಟೆಪಾಡಿಗಾಗಿ ಎರಡು ಇದ್ದರೂ ಅದನ್ನು ಮೀರಿದ ಪ್ರಬುದ್ಧ ಕಲೆಯ ಕರಗತಗೊಂಡ ಕಲಾವಿದನೊಬ್ಬ ಆಸ್ಫೋಟಗೊಳ್ಳುವ ಬಗ್ಗೆಯು ಕಲೆಯನ್ನು ಮೈಗೂಡಿಸಿಕೊಂಡಿರುವನು. ಕಲಾವಿದನಲ್ಲಿ ಬಹುಮುಖ ಪ್ರತಿಭೆಯು ಅನಾವರಣಗೊಳ್ಳುತ್ತದೆ. ಅದರಲ್ಲಿ ಭಾಗವತ ಪೆಟಿಗಿ ಮಾಸ್ತರ. ತಬಲಾ ಹಾಗೂ ತಾಳದವರು, ಕೋಚೆತ್ತುವವರ ರೂಪದಲ್ಲಿ ಹಿಮ್ಮೇಳ, ಮುಮ್ಮೇಳವೆಂದು ಕಲಾವಿದರನ್ನು ದಾಖಲಾಗಿರುವವರೆಲ್ಲರೂ ಬಹುಮುಖ ಪ್ರತಿಭೆಯ ಹಾಗೂ ನುರಿತ ಕಲಾವಿದರಿದ್ದಾರೆ. ಆದ್ದರಿಂದ ಹಿಮ್ಮೇಳ ಎನ್ನುವುದು ಕೇವಲ ಮುಖ್ಯ ಪಾತ್ರಧಾರಿಗಳಿಗೆ ಸಾಥ್ ನೀಡುವುದಿಲ್ಲ. ಬದಲಾಗಿ ಪಾರಿಜಾತ ಬಯಲಾಟ

ಆಡುವ ಪಾಂಚಾಳ ಕಲಾವಿದರ ಒಟ್ಟು ಪ್ರದರ್ಶನ ಹೆಚ್ಚು-ಹೆಚ್ಚು ಸೃಜನಶೀಲವಾಗಿ ಸೊಗಸಾಗಿದೆ. ಇದಕ್ಕೆ ಕಾರಣ ಕಲಾವಿದನೊಬ್ಬ ಹಿಮ್ಮೇಳ ಪರಂಪರೆಯಿಂದ ಪಡೆದುಕೊಂಡ ನಾದ ಕಲ್ಪನೆ ಅನುಭವಿಗಳಿಂದ ಕೂಡಿದ ಅನುಭವ ಜಗತ್ತು. ಬಹುಮುಖ ಪ್ರತಿಭೆಗಳ ಕಲಾ ಬದುಕನ್ನು ಅನಾವರಣಗೊಳಿಸುವುದರಲ್ಲಿ ನನ್ನ ಸಂಶೋಧನಾ ಅಧ್ಯಯನವು ಪಾರಿಜಾತದ ಪಾಂಚಾಳ ಕಲಾವಿದರ ಜೊತೆಗೆ ಹೊಸ ಹೊಸ ವಿಚಾರಗಳಿಗೆ ಎಡೆಮಾಡಿಕೊಟ್ಟಿದೆ. ಕೃಷ್ಣಪಾರಿಜಾತ ಪಾಂಚಾಳ ಕಲಾವಿದರು, ಹಿಮ್ಮೇಳ, ಮುಮ್ಮೇಳದಂತ ಅನೇಕ ವಿಚಾರಧಾರೆಗಳನ್ನು ಅವರ ಪರಿಚಯದೊಂದಿಗೆ ಗುರುತಿಸಬಹುದು.

೧. ಬಾಗಲಕೋಟೆ ಜಿಲ್ಲೆಯ ಸೊನ್ನ ಗ್ರಾಮದ ಪಾರಿಜಾತ ಕಲಾವಿದ ನಾರಾಯಣ ದುಂಡಪ್ಪ ಪತ್ತಾರ. ಇವರು ಮೊದಲು ಗೊಲ್ಲತಿ ಪಾತ್ರಗಳನ್ನು ಮಾಡುತ್ತಾ. ತಾಳಗಳನ್ನು ಬಾರಿಸುತ್ತಾ ಕೊರವಂಜಿ ಪಾತ್ರವನ್ನು ಮಾಡಿದ್ದಾರೆ. ನಂತರ ಹಾರ್ಮೋನಿಯಂ ಮಾಸ್ತರರಾಗಿ, ಮಾಲೀಕರಾಗಿ, ನಿರ್ದೇಶಕನಾಗಿ ಸೇವೆ ಸಲ್ಲಿಸುತ್ತಿರುವರು. (ಶ್ರೀ ಶಿವಾನಂದ ಶೆಲ್ಲಿಕೇರಿ, ೨೦೧೭, ೨೦೮)

೨. ಹನುಮಂತ ಬಡಿಗೇರ ಮುಧೋಳದವರು ಇವರು ಆರಂಭದಲ್ಲಿ ಸಣ್ಣ-ಪುಟ್ಟ ಪಾತ್ರಗಳನ್ನು ಮಾಡ್ತಾ ತಬಲಾ, ಹಾರ್ಮೋನಿಯಂ, ಪ್ರಮುಖ ಪಾತ್ರಗಳನ್ನು ನಿಭಾಯಿಸುವ ಕಲೆ ಅದ್ಭುತವಾದದ್ದು ಅವರ ಕಲಾ ಅನುಭವದ ದಾರಿ ಕಷ್ಟಕರವಾದದ್ದು ಎಂದು ಹೇಳಿದರು.

೩. ಕಾಡಪ್ಪ ಕಾ. ಕಂಬಾರ ಬಂಟನೂರು ಗ್ರಾಮದ ಇವರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಎಲ್ಲಾ ನಾಟಕಗಳು ಇರುತ್ತವೆ ಅಲ್ಲಿ ಹೋಗಿ ಸ್ವತಃ ಅದನ್ನು ಕಲಿಯಬೇಕು ಎಂದು ಹಠ ಹಿಡಿದು ಮನೆ ಬಿಟ್ಟು ಮೊದಲು ಕಲಿತದ್ದು ಹಿಂದುಸ್ತಾನಿ ಸಂಗೀತವಲ್ಲ ಅದರ ಜೊತೆ ಇರುವ ತಾಳದ ನಾದ ಕಲಿತು ಹಿಂದುಸ್ತಾನಿ ರಾಗಗಳು ತಬಲಾ ಹಾರ್ಮೋನಿಯಂ ಹೀಗೆ ಕಲೆಯಲ್ಲಿ ನೆಲದಿಂದ ಮೇಲಕ್ಕೆ ಏರಿದವರು ಹಾಗೂ ಪಾರಿಜಾತದ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದವರು.

೭.೩.೪. ಪಾಂಚಾಳರ ಕುಲಕಸುಬುಗಳ ಸ್ಥಿತ್ಯಂತರ :

ಜನಪದ ಲೋಕಕ್ಕೆ ಮಹತ್ವ ಕೊಡುಗೆ ಕೊಟ್ಟ ಪಾಂಚಾಳ ಸಮುದಾಯ ಇವತ್ತು ಜನಪದ ಜಗತ್ತು ನಿಂತಿರುವುದೇ ಸಮುದಾಯದಿಂದ. ಗ್ರಾಮೀಣ ಮೂಲ ಉದ್ಯೋಗ ಕೃಷಿ. ಕೃಷಿ ಕೆಲಸ ಮಾಡುವುದಕ್ಕೆ ಸಲಕರಣೆಗಳು ಬೇಕಾಗುತ್ತವೆ. ಪ್ರಾಚೀನಕಾಲದಿಂದ ಕೃಷಿಗೆ ಸಂಬಂಧಿಸಿದ ಉಪಕರಣಗಳನ್ನು ತಯಾರಿಸುವ ವಿವಿಧ ಉದ್ಯೋಗಗಳು ಸೃಷ್ಟಿಗೊಂಡವು. ಅವುಗಳಲ್ಲಿ ಪಾಂಚಾಳರ ಕುಲಕಸುಬುಗಳಾದ ಬಡಿಗ, ಕಮ್ಮಾರ, ಪತ್ತಾರ, ಕಂಚುಗಾರ, ಶಿಲ್ಪ, ಮುಂತಾದವುಗಳು. ಅವರಲ್ಲಿ ಜ್ಞಾನದ ಹರವು ಪಡೆದಂತೆ ವಿವಿಧ ಉಪಕರಣಗಳು ಅವರ ಗರಡಿಯಲ್ಲಿ ತಯಾರಾದವು. ಮಾನವ ತನ್ನ ಬೇಕು ಬೇಡಿಕೆಯಲ್ಲಿ ತಯಾರಿಸುವ ವಸ್ತುಗಳಲ್ಲಿ ನಾನಾ ತರಹ ಕೌಶಲ್ಯವನ್ನು

ಒಳಗೊಂಡು, ವಿವಿಧ ರೀತಿಯ ಕುಶಲತೆಯ ವಸ್ತುಗಳು ಬರಹತ್ತಿದವು. ಇದರಿಂದ ಪಾಂಚಾಳರ ಜ್ಞಾನದ ಕೌಶಲ್ಯಗಳಿಂದ ಇಂದಿನ ತಂತ್ರಜ್ಞಾನದ ವೈಜ್ಞಾನಿಕ ಯುಗವು ಹುಟ್ಟಿಕೊಂಡಿದೆ.

ಪಾಂಚಾಳರಾದ ಬಡಿಗ, ಕಮ್ಮಾರ, ಪತ್ತಾರ, ಕಂಚುಗಾರ, ಶಿಲ್ಪ, ಇವರು ಕೃಷ್ಣಪಾರಿಜಾತದಂತ ಬಯಲಾಟ ನಾಟಕದ ಕಲೆ ಅಲ್ಲದೆ ಇತರೆ ಕಲೆಗಳಲ್ಲಿ ಅವರ ಜ್ಞಾನ ವಿಸ್ತಾರತೆಯನ್ನು ಪಡೆದಿರುವರು. ಅವರು ಬದುಕಿನ ಕುಲಕಸುಬಿನ ಜೊತೆಗೆ ಸಂಗೀತದಂತಹ ಕಲೆಗಳನ್ನು ಬಿಡುವಿನ ವೇಳೆ ಮನಸ್ಸು ಇಟ್ಟು ಕಲಿಯುತ್ತಿದ್ದರು. ಅದರಲ್ಲಿ ಪಾಂಚಾಳ ಸಮುದಾಯದ ಶ್ರಮವು ಎಲ್ಲಾ ಕಲೆಗಳಲ್ಲಿ ಹಾಸುಹೊಕ್ಕಾಗಿದೆ. ರೈತರು ದೇಶದ ಬೆನ್ನೆಲುಬುವೆಂದು ಹೇಳಿದರೆ, ರೈತನಿಗೆ ಪಾಂಚಾಳ ಕುಲಕಸಬುದಾರರು ಬೆನ್ನೆಲುಬಾಗಿದ್ದಾರೆ. ಆದ್ದರಿಂದ ಪಾಂಚಾಳರಲ್ಲಿ ಬಡಿಗನ ಬಡಗಿತನ ವೃತ್ತಿ ಪ್ರಮುಖವಾಗಿ ನಿಲ್ಲುತ್ತದೆ.

ಬಡಿಗನಾದ ಆಚನೂರಿನ ಮಾನಪ್ಪ ಸೋಮಪ್ಪ ಬಡಿಗೇರ (ಸಂದರ್ಶನ ದಿನಾಂಕ ೨೦-೫-೨೦೧೯ ರಲ್ಲಿ ೫೫ ವಯಸ್ಸು) ಇವರು ತಂದೆಯ ಬಳುವಳಿಯಾಗಿ ಬಾಲ್ಯದಲ್ಲಿಯೇ ಸುಮಾರು ೧೨ ವರ್ಷದವನಿದ್ದಾಗಲೆ ಬಡಿಗತನ ಕಲಿಯಲಿಕ್ಕೆ ಆಸಕ್ತಿಯಿಂದ ಶಾಲೆ ಬಿಟ್ಟು ಬಂದನು. ಹಿರಿಯ ಮಗನಾದ್ದರಿಂದ ಸಹಜವಾಗಿ ಮನೆಯ ಜವಾಬ್ದಾರಿ ಕೆಲಸಗಳು ಬರಹತ್ತಿದವು. ಅದು ಅಲ್ಲದೆ ಗ್ರಾಮದೇವತೆಯಾದ ದ್ಯಾಮವ್ವ ಗುಡಿಯ ದೇವತೆಯನ್ನು ಪೂಜಿಸುವ ನಿತ್ಯದ ಕೆಲಸ. ಆದ್ದರಿಂದ ಬೆಳೆಯುತ್ತಾ, ತಂದೆಯ ಕಸುಬಾದ ಬಡಿಗತನದಲ್ಲಿ ಆಸಕ್ತಿ ಹೊಂದಿ, ಒಂದು ಒಳ್ಳೆಯ ಕೂರಿಗೆ ದಿಂಡನ್ನು, ಜಾಲಿ ಕಟ್ಟಿಗೆಯಲ್ಲಿ ತಯಾರಿಸಿ ಅದರಲ್ಲಿ ಕುಶಲತೆಯ ಸುಳಿವು ತೆಗೆದು ೧೬ ಇಂಚಿನ ಬಿತ್ತುವ ಕುರಿಗೆ, ಮಾಡಿದ್ದು ವಿಶೇಷ. ಆಚನೂರ ಗ್ರಾಮ ಅಷ್ಟೇ ಅಲ್ಲ ಸುತ್ತಲೂ ಹತ್ತು ಊರುಗಳಿಂದ ಊರಿಗೆ ದಿಂಡು ನೋಡಲಿಕ್ಕೆ ಬರುವರು. ಅದನ್ನು ಆಚನೂರ ಗ್ರಾಮದ ಶ್ರೀಬಸನಗೌಡ, ರಂಗನಗೌಡ, ಬೆನಕನಹಳ್ಳಿಗೌಡರಿಗೆ ಆಯಾ ರೂಪದಲ್ಲಿ ಮಾಡಿಕೊಟ್ಟಿದ್ದು. ಇದರಿಂದ ಬಡಿಗ್ಯಾನ ಡಿಮ್ಯಾಂಡ್ ಜಾಸ್ತಿಯಾಗಿ ಬಾಲ್ಯದಲ್ಲಿಯೇ ಇಂತಹ ಸಾಧನೆ ಮಾಡಿರುವ ಮಾನಪ್ಪ ಬಡಿಗೇರ ಇವರ ಕೈಗುಣದಿಂದ ಮಾಡಿದ ಕೂರಿಗೆಯಿಂದ ಬಿತ್ತಿದ ಹೊಲದಲ್ಲಿ ಆ ವರ್ಷ ೪೦೦ ಚೀಲ ಜೋಳ ಬೆಳೆದದ್ದು ವಿಶೇಷ. ಇದರಂತೆ ಮಡಿಕೆ, ರಂಟೆ, ಕುಂಟೆ, ನಗಾ, ಇಸು, ಎಡಿದಿಂಡು ಮುಂತಾದವುಗಳನ್ನು ತಯಾರಿಸುವರು. ಇದು ಅಲ್ಲದೆ ಗೃಹಯೋಪಯೋಗಿ ವಸ್ತುಗಳನ್ನು ತಯಾರಿಸುತ್ತಿದ್ದನು.

ಪ್ರಸ್ತುತದಲ್ಲಿ ಬಡಿಗೇರ ಕಾಯಕದ ವಸ್ತುಗಳು ಬಾಚಿ, ಉಳಿ, ಕೊಡತಿ, ಕರಗಸ, ಅಡಗಟ್ಟಿ, ಮುಂತಾದವುಗಳಿಂದ ತಯಾರಾಗುವ ವಸ್ತುಗಳು ಇವತ್ತು ಬದಲಾವಣೆಯಾಗಿವೆ. ಬಡಿಗಾನ ವಸ್ತುಗಳ ಸ್ಥಾನದಲ್ಲಿ ಆಧುನಿಕ ಯಂತ್ರಗಳು ತಂತ್ರಜ್ಞಾನಗಳ ಮಿಷನ್‌ಗಳು ಬಂದಿವೆ. ಆದರೆ ಅವನ ಕುಶಲತೆಯ ಜ್ಞಾನ ಮಾತ್ರ ವಿಸ್ತಾರವಾಗುತ್ತಾ ಆಧುನಿಕತೆಗೆ ತಕ್ಕಂತೆ ಪರಿವರ್ತನೆ ಆಗಿದ್ದಾವೆ.

ಕಮ್ಮಾರರು : ರೈತಕುಲಕಸುಬುಗಳಿಗೆ ಪಾಂಚಾಳ ಪಂಗಡದವರ ಕಮ್ಮಾರರು ಬಳಸುವ ತಿದಿ, ಸೂತ್ತಗಿ, ಕುಲುಮೆ, ಕಬ್ಬಿಣದ ಗಟ್ಟಿಗಳು, ಇದ್ದಲು, ಚಡಿ ಮುಂತಾದವುಗಳಿಂದ ಕುಲುಮೆಯಲ್ಲಿ ತಯಾರಿಸುವ ವಸ್ತುಗಳು ಕುಡಾ, ಕೊಡಲಿ, ಕುಡಗೋಲ, ಕುರಪಿ, ನೇಗಿಲು, ಬಂಡಿಯ ಕೀಲು, ಬಳಿ, ಮುಂತಾದ ಗೃಹೋಪಯೋಗಿ ವಸ್ತುಗಳಿಗೆ ಕಂಬಾರ ಅಥವಾ ಕಮ್ಮಾರರು ಆಸರೆಯಾಗಿದ್ದರು. (ಸಂದರ್ಶನ ೫-೬-೨೦೧೮ ರಂದು ಉದಾಹರಣೆ : ಬೇವೂರಿನ ರಾಮಚಂದ್ರ ಕಂಬಾರ) ಅವರು ತಮ್ಮ ಬಾಲ್ಯದಲ್ಲೆ ತಂದೆಯ ಜೊತೆ ಭಾಗಿಯಾಗಿ ಕಮ್ಮಾರಿಕೆಯ ಕೆಲಸದಲ್ಲಿ ತೊಡಗಿ ವಿಶೇಷ ಕಾಳಜಿವಹಿಸಿ ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು ಎಂಬಂತೆ ಬಾಲ್ಯದಲ್ಲಿಯೇ ಅತ್ಯುತ್ತಮ ಜಾಣ್ಮೆಯ ಕುಶಲತೆ ವಸ್ತುಗಳನ್ನು ತಯಾರು ಮಾಡಿದವನು.

ಬಾಗಲಕೋಟೆ ತಾಲೂಕಿನ ಗ್ರಾಮದ ಬೇವೂರ ದೊಡ್ಡ-ದೊಡ್ಡ ರೈತರು ನೂರಾರು ಕೂರಿಗೆ ಜಮೀನು ಹೊಂದಿದ ನಿದರ್ಶನ. ಬಾಗಲಕೋಟೆ ತಾಲೂಕ ಕಂದಾಯ ಅಧಿಕಾರಿಗಳು ಬೇವೂರ ಮತ್ತು ಶಿರೂರ ಗ್ರಾಮಗಳ ಭೂಮಿ ಮನೆಗಳ ಜನರ ಸರ್ವೇ ಮಾಡಿದಾಗ ಬೇಲೂರಿನಲ್ಲಿ ಒಂದು ಕೂರಿಗೆ (ನಾಲ್ಕು ಎಕರೆ) ಹೊಲ ಶಿರೂರ ಗ್ರಾಮಕ್ಕಿಂತ ಹೆಚ್ಚಾಯಿತು. ಶಿರೂರ ಗ್ರಾಮದ ಮನೆಗಳಲ್ಲಿ ಒಂದು ಮನೆ (ನಾಲ್ಕುಜನ) ವಿರುವ ಹೆಚ್ಚಾಯಿತು. ಅಂತ ತಾಲೂಕ ಅಧಿಕಾರಿ ೧೯/೧೭೮ ರಲ್ಲಿ ಹೇಳಿದ ಉಲ್ಲೇಖವಿದೆ. ಜಿ.ಜಿ.ಜನರಲ್ (ಬೇವೂರಕರ್) ಪ್ರಥಮ ದಂಡನಾಯಕ ಊರು-ನಾಲ್ಕು ನೂರು ಎಕ್ಕರೆ ಜಮೀನು ಇದ್ದವು. ಇವತ್ತು ಎಲ್ಲಾ ಮಾರಿ ಮಹಾರಾಷ್ಟ್ರದ ಪುಣೆಯಲ್ಲಿ ನೆಲೆಸಿದ್ದಾರೆ.

ಇಲ್ಲಿ ರಾಮಚಂದ್ರ ಕಂಬಾರನು ಕುಂಟಿಯ ಕೂಡಾ, ಕುರಗಿಯ ತಾಳು, ಬಂಡಿಯ ಕೀಲು, ನಡಪಟ್ಟಿ, (ರಾಡ್) ಕೊಡಲಿ, ಕುರಪಿ, ಮುಂತಾದವುಗಳನ್ನು ತನ್ನ ಕುಶಲತೆಯಿಂದ ತಯಾರಿಸುತ್ತಿದ್ದನು. ಅತ್ಯುತ್ತಮ ವಸ್ತುಗಳು ಬಹಳ ದಿನಗಳವರೆಗೆ ಬಾಳಿಕೆ, ತಾಳಿಕೆಗೆ ಬರುತ್ತಿದ್ದವು ಎಂದು ಗ್ರಾಮದ ಜನರು ರಾಮಚಂದ್ರ ಕಂಬಾರನ ಜಾಣ್ಮೆಯನ್ನು ಕೊಂಡಾಡುತ್ತಿದ್ದರು. ಕಮ್ಮಾರರು ಕಮ್ಮಾರಿಕೆ ಬಿಟ್ಟು ಗ್ಯಾರೇಜ್ ವೆಲ್ಡಿಂಗ್ ಕಡೆ ಪರಿವರ್ತನೆಯಾಗಿದ್ದಾರೆ.

ಪತ್ತಾರ (ಅಕ್ಕಸಾಲಿಗ) : ಪಾಂಚಾಳ ಸಮುದಾಯದ ಪತ್ತಾರ ಇತರೆ ಸಮಾಜದಲ್ಲಿಯು ಹೊಂದಾಣಿಕೆ ಇರುವನು. ವಿಶೇಷವಾಗಿ ಹೆಣ್ಣು ಮಕ್ಕಳ ಆಭರಣಗಳು ಮತ್ತು ಪುರುಷರಿಗೆ ಬೆಳ್ಳಿ, ಬಂಗಾರ ವಸ್ತುಗಳನ್ನು ತಯಾರುಮಾಡಿ ತನ್ನ ಕುಶಲತೆಯಲ್ಲಿ ಪ್ರೌಢಿಮೆ ಮೆರೆಯುವನು.

ಅಕ್ಕಸಾಲಿಗನು ತನ್ನ ದಿನ ನಿತ್ಯದ ಕಾಯಕಕ್ಕೆ ಬೇಕಾಗಿರುವ ಅರ, ಚಿಕ್ಕದಾದ ಕುಲಮೆ, ಅಗ್ಗಷ್ಟಿಗೆ, ಇಕ್ಕಳ, ಊದು ಮುಂತಾದವುಗಳನ್ನು ಬಳಸುತ್ತಿದ್ದರು. ಬೆಳ್ಳಿ, ಬಂಗಾರದಿಂದ ಮೂಗಬಟ್ಟು, ಚೈನ, ತಾಳಿ, ಉಂಗರ, ವಂಕಿ, ಡಾಬು, ಜುಮಕಿ, ಕಿವಿ ಓಲೆ, ಮುಂತಾದವುಗಳು. ಪುರುಷರಿಗೆ ಕೈಕಡಗ, ಚೈನಾ, ಉಂಗುರಾ, ಕಾಲಗಡ್ಗ, ಕಿವಿಯಲ್ಲಿ ಜಾಲ್, ಕಿರೀಟ, ಉಡದಾರ, ಮುಂತಾದವುಗಳನ್ನು ತಯಾರಿಸುತ್ತಿದ್ದರು. ಸೂಕ್ಷ್ಮ ಕಲೆಗಾರಿಕೆಯು ಜ್ಞಾನ ಕೌಶಲ್ಯದಿಂದ ಕೂಡಿರುತ್ತದೆ.

ಪ್ರಸ್ತುತ ಅಕ್ಕಸಾಲಿಗನು ಆಧುನಿಕ ಡಿಜಿಟಲ್ ತಂತ್ರಜ್ಞಾನವನ್ನು ಬಳಸಿ ಬಂಗಾರಕ್ಕೆ ಮಿಶ್ರಣ ಮಾಡಿ ಕಣ್ಣು ಕುಕ್ಕುವಂತೆ ಆಭರಣಗಳನ್ನು ತಯಾರಿಸುತ್ತಾನೆ. ಮತ್ತು ಬದಲಾವಣೆ ಆಗಿದ್ದಾನೆ.

ಕಂಚುಗಾರ : ಪಾಂಚಾಳ ಸಮುದಾಯದಲ್ಲಿ ಕಂಚುಗಾರ ಮನೆಯ ಗೃಹ ಉಪಯೋಗಿ ವಸ್ತುಗಳನ್ನು ಬಳಸಲು ತಯಾರಿಸುವನು. ಸೀಸ, ಸತು, ತಾಮ್ರ, ಕಂಚು, ಕಬ್ಬಿಣ, ಮುಂತಾದವುಗಳ ಸಂಯೋಗದಿಂದ ತಾಟು, ಚರಿಗೆ, ಹಂಡೆ, ಟಾಕಿ, ಕೊಡ, ತಪಾಲಿ, ಮುಂತಾದವುಗಳ ಜೊತೆಗೆ ಎಲ್ಲ ಸಮುದಾಯಕ್ಕೆ ದೈವತ್ವ ಸ್ವರೂಪ ನೀಡುವವನು. ಕಂಚುಗಾರ ಪಂಚ ಲೋಹಗಳಿಂದ ದೇವರ ಮೂರ್ತಿ ತಯಾರಿಸಿಕೊಡುವನು. ದುರ್ಗಾಮಾತೆ, ದ್ಯಾಮವ್ವ, ಆಂಜನೇಯ, ರಾಮ-ಲಕ್ಷ್ಮಣ, ಸೀತೆ, ಶಿವಪಾರ್ವತಿ, ಬಸವಣ್ಣ ಮುಂತಾದ ಮೂರ್ತಿ ಮಾಡುವ ಕೌಶಲ್ಯಗಳು ಅದ್ಭುತವಾದದ್ದು.

ಮದುವೆಯಾದ ಹೆಣ್ಣು ಮಗಳು ಗಂಡನ ಮನೆಗೆ ಬರುವಾಗ ಕಂಚಿನ, ತಾಮ್ರದ ಕೊಡ, ತಾಟು, ಚರಿಗೆ, ಹಂಡೆ, ಕಾಟಾ, ಮುಂತಾದವುಗಳನ್ನು ತೆಗೆದು ಕೊಂಡು ಬರುವಳು. ಇವತ್ತು ಅವುಗಳ ಸ್ಥಾನದಲ್ಲಿ ಸ್ಟೀಲ್, ಕಬ್ಬಿಣ, ಪ್ಲಾಸ್ಟಿಕ್, ಫೈಬರ್ ವಸ್ತುಗಳು ಬಂದಿವೆ. ಅವುಗಳ ತಗೊಂಡು ವೈಯಾರದಿಂದ ಬರುತ್ತಾಳೆ. ಬದುಕು ಮೂರಾಬಟ್ಟೆ ಮಾಡುವುದಕ್ಕೆ. ಏಕೆಂದರೆ ಆಧುನಿಕ ವಸ್ತು ಕ್ಷಣಿಕ ಸುಖವನ್ನು ಮಾತ್ರ ನೀಡುತ್ತವೆ. ರೋಗ-ರುಜಿನಗಳು ಹರಡುತ್ತವೆ. ಆರೋಗ್ಯ ನಿಯಂತ್ರಣದಲ್ಲಿ ಇರುವುದಿಲ್ಲ.

ಪಾಂಚಾಳ ಕುಲಕಸುಬುಗಳಲ್ಲಿ ಆಯುರ್ವೇದಿಕ ಔಷಧ ಗುಣಗಳು ಇರುತ್ತಿದ್ದವು. ಗಿಡಗಳಲ್ಲಿ ಬನ್ನಿ, ಆರಿ, ಬೇವು, ಅರಳಿ, ಶ್ರೀಗಂಧ ಮುಂತಾದವುಗಳಂತೆ ಕಂಚುಗಾರ ತಯಾರಿಸಿದ ವಸ್ತುಗಳಲ್ಲಿ ಆರೋಗ್ಯವನ್ನು ಕಾಪಾಡುವ ಗುಣವಿರುತ್ತಿತ್ತು. ಪ್ರಸ್ತುತ ದಿನ ಮಾನಗಳಲ್ಲಿ ಕಂಚುಗಾರರು ಬರುವದು ಕಡಿಮೆಯಾಗಿದೆ. ಇವರ ಸ್ಥಾನದಲ್ಲಿ ಆಧುನಿಕ ಯಂತ್ರ ಮಿಶನರಿಗಳು ಬಂದು ಕಂಚುಗಾರರ ಕೆಲಸಗಳು ನಿಂತಿವೆ. ಬೇರೆ ಉದ್ಯೋಗದ ಕಡೆ ಮುಖಮಾಡಿರುವರು.

ಶಿಲ್ಪ : ಭಾರತೀಯ ಸನಾತನ ಸಂಸ್ಕೃತಿಯಿಂದ ಆಧುನಿಕ ಕಾಲದವರೆಗೆ ಅವನ ಕೊಡುಗೆ ಅಪಾರವಾದದ್ದು. ಮಾನವ ಬಾಳಿಬದುಕಿರುವ ಎಲ್ಲಾ ಸಾಮಗ್ರಿಗಳನ್ನು ಆಯಾ ಕಾಲಘಟ್ಟದ ನೆಲೆಯಲ್ಲಿ ನಾಗರೀಕತೆಯ ವಿಕಾಸತೆಯನ್ನು ಶಿಲಾ ಕಲೆಗಳ ಮೂಲಕ ಅಧ್ಯಯನ ಮಾಡಲು ಅನುಕೂಲವಾಗುತ್ತದೆ. ಶಿಲ್ಪಿ ಕಲ್ಲಿನಲ್ಲಿ ರಾಜಮಹಾರಾಜರ ಆಜ್ಞೆಗಳು, ಮನರಂಜನಾ ಸನದು, ಪ್ರೀತಿಯ ಉಡುಗೊರೆ ರಾಜನ ವ್ಯಕ್ತಿತ್ವವನ್ನು ರಚಿಸುವರು. ಬೇಲೂರ, ಐಹೊಳೆ, ಪಟ್ಟದಕಲ್ಲು, ಬದಾಮಿ, ಮುಂತಾದವುಗಳು.

೭.೩.೫. ಪಾರಿಜಾತ ಜ್ಞಾನ ಕೌಶಲ್ಯದ ಬದಲಾವಣೆ :

ಕೃಷ್ಣ ಪಾರಿಜಾತ ಹಾಗೂ ಪಾಂಚಾಳ ಕಲಾವಿದರ ಸಮಕಾಲೀನ ಸಂದರ್ಭದಲ್ಲಿ ಅವರ ಜ್ಞಾನ ಮತ್ತು ಕೌಶಲ್ಯಗಳು ಪರಿವರ್ತನೆಗಳಾಗಿವೆ. ಕುಲಕಸುಬುಗಳು ಪರಂಪರಾಗತವಾಗಿ ಬಂದಿರುವ

ಬಡಿಗ, ಕಮ್ಮಾರ, ಪತ್ತಾರ, ಕಂಚುಗಾರ, ಶಿಲ್ಪ ಇವರು ತಮ್ಮ ತಮ್ಮ ಮೂಲ ಉದ್ಯೋಗದ ಚಟುವಟಿಕೆಗಳು ನಿಂತಿರುವುದರಿಂದ ಹೊಸ ಹೊಸ ಅಯಾಮದ ಕಡೆ ಗಮನಹರಿಸುತ್ತಿರುವ ಓದು, ಬರಹ, ಶಿಕ್ಷಣ ಪಡೆದು, ಸರಕಾರಿ, ಅರೆಸರಕಾರಿ, ವ್ಯಾಪಾರ, ಮುಂತಾದ ಕಡೆ ವಾಲುವುದಕ್ಕೆ ಅನೇಕ ಕಾರಣಗಳಿರಬಹುದು. ಬಡಿಗತನಕ್ಕೆ ಕಟ್ಟಿಗೆ ಸಿಗುವದಿಲ್ಲ. ಆಧುನಿಕ ತಂತ್ರ ಮಿಶನ್ ತರಲಿಕ್ಕೆ ಹಣವಿಲ್ಲ. ಅದರ ಬಗ್ಗೆ ಮಾಹಿತಿ ಇರುವದಿಲ್ಲ. ಗ್ರಾಹಕ ಹೊಸ ಕಬ್ಬಿಣದ ಯಂತ್ರಗಳನ್ನು ಬಳಸುತ್ತಾನೆ. ಮತ್ತು ಕಟ್ಟಿಗೆ ಜಾಗದಲ್ಲಿ ಕಬ್ಬಿಣ, ಸಿಮೆಂಟ್, ಪ್ಲಾಸ್ಟಿಕ್ ವಸ್ತುಗಳ ಬಳಕೆ ಹೆಚ್ಚಾಗುತ್ತದೆ. ಅದಕ್ಕೆ ಇಂತಹ ಕಾರಣಗಳಿಂದ ಪಾಂಚಾಳರ ಜ್ಞಾನ ಮತ್ತು ಕೌಶಲ್ಯ ಬೇರೆ ಕಡೆ ಸಾಗುತ್ತದೆ. ಇದೆ ಪರಿವರ್ತನೆ.

ಪ್ರಸ್ತುತ ದಿನಗಳಲ್ಲಿ ಪಾಂಚಾಳ ಸಮುದಾಯವು ಎಲ್ಲಾ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವದು ವಿಶೇಷ. ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಸಂಗೀತ ಕಲೆಗಳಲ್ಲಿ ತೊಡಗಿಸಿಕೊಂಡಿರುವದು.

ಆಧುನಿಕ ಬದಲಾವಣೆಯ ಸಂಕೇತ ಇಂದು ಉದಾರೀಕರಣ, ಜಾಗತೀಕರಣ, ಕೈಗಾರಿಕೀಕರಣದ ನೆಲೆಯಲ್ಲಿ ಸಣ್ಣ ಪುಟ್ಟ ಗುಡಿಕೈಗಾರಿಕೆಗಳು ನಶಿಸಿ ಹೋಗುವ ಸಂದರ್ಭಗಳು ಬಂದಿವೆ. ಪಾಂಚಾಳ ಕುಲದ ಕಸುಬುಗಳ ಜೊತೆಗೆ ಇತರ ಉದ್ಯೋಗದ ಕಲೆಗಳು ಜ್ಞಾನ ಪಡೆಯುವದು ಅವಶ್ಯವಾಗಿದೆ. ಉದರ ಪೋಷಣೆಗಾಗಿ ಕೌಟುಂಬಿಕ ನಿರ್ವಹಣೆಗಾಗಿ ಯಾವುದಾದರೊಂದು ಉದ್ಯೋಗ ಮಾಡಬೇಕಾಗಿದೆ ಎಂಬ ಚಿಂತನೆ ಆಧುನಿಕತೆಯಲ್ಲಿ ಬಂದೊದಗಿದೆ. ಇದರಿಂದ ಕೆಲವು ಕರಕುಶಲತೆಯ ಜ್ಞಾನಗಳು ಅರಿವಿಗೆ ಬಾರದೆ ಕಳೆದು ಹೋಗುತ್ತವೆ. ಆದ್ದರಿಂದ ಪಾಂಚಾಳರ ಜ್ಞಾನ ಹಳೆಯ ತಲೆಮಾರಿನ ವಿಶೇಷತೆ ಶ್ರೇಷ್ಠವಾಗಿತ್ತು, ಪ್ರಸ್ತುತ ಅವರು ಆ ಜ್ಞಾನ ವಂಚಿತರಾಗಿದ್ದಾರೆ. ಇದಕ್ಕೆ ಹೊಸತನ ಬಯಸುವ ಜನರ ಪರಿಸರವೇ ಕಾರಣ ಎಂದು ನನ್ನ ಅಭಿಪ್ರಾಯ

೭.೪. ಸಮಕಾಲೀನ ಸಂದರ್ಭದಲ್ಲಿ ಪಾಂಚಾಳ ಕಲಾವಿದರ ಅಭಿಪ್ರಾಯಗಳು :

೭.೪.೧. ಸಂಗೀತ ಉಪಕರಣಗಳ ಬಳಸುವ ಸ್ಥಿತಿ :

ಜನಪದರ ಯಾವುದೇ ಕಲೆಯನ್ನುವುದು ಕಲಾವಿದನ ಜೀವನವನ್ನು ಪಾವನ ಮಾಡುವಂತಹುದು. ಹಾಡು ಕುಣಿತ ಬಡಿತಗಳಿಗೆ ಜನಪದರೇ ಕಂಡುಕೊಂಡಂತಹ ವಾದ್ಯಗಳು. 'ವಾದ್ಯ' ಎಂಬುದು ಪ್ರಕೃತಿಯ ಚಲನ ಕ್ರಿಯೆಯನ್ನು ಅನುಕರಿಸುತ್ತಾ ಕುತೂಹಲದ ಮನಸ್ಸು ಮಾನವ ನಿರ್ಮಿತ ರೂಪಿಸಿಕೊಂಡ ಲಯಗತಿ ಸಾಧನವಾದ ಪದ, ನುಡಿ, ಎಂಬರ್ಥದಲ್ಲಿ ಬಳಕೆಯಾಗುತ್ತದೆ. ಕಾಲ ಸರಿದಂತೆ ಅಧ್ಯಯನ ಸೌಲಭ್ಯಕ್ಕಾಗಿ ವಾದ್ಯಗಳನ್ನು ಮೂರು ರೀತಿಯಾಗಿ ಪ್ರಾಚೀನರು ಬಳಸಿದ್ದುಂಟು.

೧. **ತತ** : ವಾದ್ಯಗಳು ತಂತಿಯ ಸಹಾಯದಿಂದ ನುಡಿಯುವಂಥವು

೨. **ಅನಧ್ಯ** : ತಾಡನ ಕ್ರಿಯೆಯಿಂದ ನಾದೋತ್ಪತ್ತಿ ಮಾಡುವಂಥವು

೩. **ಸುಷರ** : ಊದುವ ಗಾಳಿ ವಾದ್ಯಗಳು

ತಿತಾ, ಅವನದ್ಧ, ಅನದ್ಧ, ಹೀಗೆ ಭಾರತದಲ್ಲಿ ತಟ್ಟುವಾದ್ಯಗಳಿಗೆ ಸಮಾನ ಪದಗಳಿವೆ. ಡ್ರಂ ಎಂಬುದನ್ನು ಸಾಮಾನ್ಯವಾಗಿ ಎಲ್ಲ ಲಯವಾದ್ಯಗಳಿಗೆ ಬಳಸುತ್ತ ಬಂದಿರುವುದು. 'ಅವನದ್ಧ ವಾದ್ಯ' ಎಂದೇ ಕರೆಯಲಾಗುತ್ತದೆ. ಪಾರಂಪರಿಕ ಕಲೆಗಳು ಸಂಗೀತ ಉಪಕರಣಗಳು ಬಳಸುವ ಪ್ರಾಚೀನ ಕಲೆಗಾರಿಕೆಯ ನಾದಸ್ವರಗಳೆ ಬೇರೆ. ಪ್ರಸ್ತುತ ಎಲೆಕ್ಟ್ರಿಕ್ ಸಂಗೀತ ಉಪಕರಣಗಳು ಹಾರ್ಮೋನಿಯಂ ಜಾಗದಲ್ಲಿ ಕ್ಯಾಶಿಯೋ, (ಎಲೆಕ್ಟ್ರಿಕ್) ಬಳಸುವದು. ಉದಾಹರಣೆಗೆ; ಭಜನೆ, ಗೀತ ಮೇಳಗಳಲ್ಲಿ ಮದುವೆ ಸಂದರ್ಭ ಹಾಡು ಈ ಕ್ಯಾಶಿಯೋ ಕರೋಕೆ ಎಂಬ ವಾದ್ಯ ಸಲಕರಣೆಗಳು ಇಲ್ಲದೆ ಬಳಸುವ ಎಲೆಕ್ಟ್ರಿಕ್ ವಾದ್ಯ. ಮ್ಯೂಜಿಕಲ್ ನಾದ ಸ್ವರ ಮಧ್ಯದಲ್ಲಿ ಹಾಡುವುದು ಕರೆಯುವುದು ಇತ್ಯಾದಿ. ಆಧುನಿಕ ಸಂಗೀತ ಉಪಕರಣಗಳ ಸಂಗೀತವು ಹಿಂದುಸ್ತಾನಿ ಕರ್ನಾಟಕ ಸಂಗೀತ ಮುಂತಾದ 'ಸರಿಗಮಪದನಿಸ' ರಾಗಕ್ಕೆ ವಾದ್ಯ. ಆಯಾ ಲಯಕ್ಕೆ ತಕ್ಕಂತೆ ಬೇರೆ ಬೇರೆ ವಾದ್ಯಗಳು. ಹಲಗೆ, ತಬಲಾ, ಚೌಗಾಡ, ಡಮರು, ಕನಿವಾದನ, ಡ್ರಮ, ಬೇರಿ, (ಹಲಗಿಮಜಲು) ಮುಂತಾದವುಗಳು. ತಂತಿವಾದ್ಯಗಳು, ತಂಬೂರಿ, ವೀಣಾ ಸಿತಾರ, ಚೌಡಕಿ, ಇತ್ತೀಚಿಗೆ ಎಲೆಕ್ಟ್ರಿಕ್ ಪಿಟೀಲು ವಾದನಗಳು.

ಸುಷಿರ(ಉಸಿರು)ವಾದ್ಯ : ಕೊಳಲು ಶಹನಾಯಿ ಪೀಪಿ, ಸುತಿ–ಶೃತಿ, ಮುಂತಾದವುಗಳು. ವಾದ್ಯಗಳಲ್ಲಿ ಸಂಗೀತ ಕಲೆಯಲ್ಲಿ ಕುಣಿತಾ ತಟ್ಟುವ ತನು ಮನ ಒಂದಾಗಿಸುವ ಈ ತಟ್ಟುವ ವಾದ್ಯಗಳು ಡಕ್ಕೆ, ಡೋಲು, ದುಡಿ, ಮೃದಂಗ, ನಗಾರಿ, ದುದಂಬಿ, ಮದ್ದಲೆ, ತಬಲಾ, ಕಂಸಾಳೆ, ಕರಡೆ, ತಾಳ, ಮುಂತಾದವುಗಳು. ಈ ಸಂಗೀತ ಉಪಕರಣಗಳು ಬಳಸುವ ರೀತಿ ಬದಲಾಗಿದೆ. ಬಳಸುವವರೆ ಇಲ್ಲಾ. ಕೆಲವು ವಾದ್ಯಗಳ ಹೆಸರೇ ಗೊತ್ತಿಲ್ಲ. ಇನ್ನ ಆ ವಾದ್ಯಗಳಿಂದ ನಾದ ಯಾವ ರೀತಿ ಬರುತ್ತದೆ ಗೊತ್ತಾಗುವುದಿಲ್ಲ. ಆಧುನಿಕ ಜನರಿಗೆ ಪ್ರಸ್ತುತ ತಂತ್ರಜ್ಞಾನದಿಂದ ತಯಾರಾದ ವಾದ್ಯಗಳು ಅದರ ಸ್ವರ ನಾದವು ಬೇರೆ ಅರ್ಥಗಳನ್ನು ಕೊಡುತ್ತದೆ.

ಕೃಷ್ಣ ಪಾರಿಜಾತದಲ್ಲಿ ಪಾಂಚಾಳ ಕಲಾವಿದರು ಬಳಸುವ ವಾದ್ಯ ಪರಿಕರಗಳು ಆಗಿನ ಕಾಲದಲ್ಲಿ ಸಂಗೀತ ಸಂಭಾಷಣೆಗೆ. ಹೊಂದಿಕೆಯಾಗಿದ್ದರೆ, ಪ್ರಸ್ತುತ ವಾದ್ಯಗಳು ಸಂಗೀತ ಸಂಭಾಷಣೆ ಎಲ್ಲವೂ ಬದಲಾವಣೆಯಾಗಿವೆ. ಇದು ಅಲ್ಲದೆ ಪಾಂಚಾಳರು ಇತರೆ ಸಂಗೀತ, ವಿಜ್ಞಾನ, ವೈದ್ಯ, ಕುಶಲ ಕಲೆಗಳಲ್ಲಿ ಆಗಾಧವಾದ ಜ್ಞಾನ ಬಿತ್ತಿ ನಂತರ ಆಧುನಿಕ ತಂತ್ರಜ್ಞಾನ ಬದಲಾದಂತೆ ಪಾಂಚಾಳರ ಜ್ಞಾನ ಕೌಶಲ್ಯಗಳು ಬದಲಾದಂತೆ ಸಂಗೀತ ಉಪಕರಣಗಳನ್ನು ಬಳಸುವ ರೀತಿಯು ಬದಲಾಯಿತು.

೭.೪.೨. ಪಾರಿಜಾತ ಕಲಾವಿದರ ಅಭಿಪ್ರಾಯಗಳು :

ಬಾಗಲಕೋಟೆ, ಬೆಳಗಾವಿ, ಬಿಜಾಪುರ ಜಿಲ್ಲೆಗಳನ್ನು ಅನುಲಕ್ಷಿಸಿ ಪಾರಿಜಾತ ಕಲಾವಿದರು ತಾವು ಕಂಡುಕೊಂಡ ಅನುಭವ, ಅನುಭವಿಸಿದ ನೋವು ನಲಿವುಗಳು ಬದುಕಿನ ಮಹಾನ್ ಸಾಧನೆಗಳಾಗಿವೆ. ಉದಾಹರಣೆಗೆ; ಕೌಲಜಗಿ ಗ್ರಾಮದ ನಾಗೇಂದ್ರ ಮಾನಪ್ಪ ಕಂಬಾರ ಅವರು ತುಂಬ ವಯೋಮಾನದವರು. ೬೮ ವರ್ಷ ವಯಸ್ಸು. ಅವರ ಮಾತುಗಳಲ್ಲಿ ಹೇಳುವುದಾದರೆ ಪಾರಿಜಾತ ಕಲಾ ಸೇವೆಯಿಂದ ನಿಮಗಾದ ಅನುಭವ ಹೇಳಿರಿ ಎಂದು ಕೇಳಿದಾಗ ಅವರು, ಬಡತನ ಪರಿಸ್ಥಿತಿಯಿತ್ತು ಬಡಿಗತನ ಕಮ್ಮಾರಿಕೆ ಮಾಡ್ತಿದ್ವಿ, ನಂತರ ಪಾರಿಜಾತ ಬಯಲಾಟದಲ್ಲಿ ಕೃಷ್ಣ ಕೊರವಂಜಿ ನಂತರ ಮೇಳ ಕಟ್ಟಿ ಆಡಲಿಕ್ಕೆ ಹತ್ತಿದ್ದೆವುರಿ, ಆರ್ಥಿಕ ಪರಿಸ್ಥಿತಿ ಸುಧಾರಣೆ ಆಯ್ತು. ನಂತರ ಸಂಘ ಸಂಸ್ಥೆಗಳಿಂದ ಸನ್ಮಾನಗಳು ಬಂದವು. ಬೆಂಗಳೂರಿಗೆ ಕರೆಸಿ ೨೦೦೩ರಲ್ಲಿ "ಜ್ಞಾನ-ವಿಜ್ಞಾನ" ಗೌರವ ಪುರಸ್ಕಾರ ಕೊಟ್ಟು ಸನ್ಮಾನಿಸಿದರು. (ಸಂದರ್ಶನ ಸಮಯ ದಿನಾಂಕ ೧೫-೬-೨೦೧೮ ರಂದು ಕೌಜಲಗಿಯಲ್ಲಿ ಹೇಳಿದ ಮಾತುಗಳು) ಮುಂದುವರೆದು, ಸಿನಿಮಾ ಹಾಗೂ ಪಾರಿಜಾತದಲ್ಲಿ ಬಹಳ ವ್ಯತ್ಯಾಸವಿದೆ. ಹಾವ-ಭಾವ ಹಾಡುಗಾರಿಕೆ ಕಂಠ, ಸಿರಿ ಮನಕ್ಕೆ ಆನಂದ ನೀಡುತ್ತದೆ. ಸಿನಿಮಾ ಎಷ್ಟೂ ಪ್ರಭಾವ ಬೀರುವುದಿಲ್ಲ ಎಂದು ಹೇಳುವರು. ಎಲ್ಲಾ ಕಲೆಗಳಲ್ಲಿ ಪಾರಿಜಾತ ಶ್ರೇಷ್ಠ ಆಧ್ಯಾತ್ಮಿಕತೆ ಇದೆ. ಒಂದನೇ ಪಟ್ಟಿಯೊಳಗೆ ಮಾಡಬೇಕು. ಶಿರಗುರೆಪ್ಪ ತನ್ನ ಕಂಠದಿಂದಲೇ ಬೆಳೆದು ಬಂದರು ಎಂದು ಹೇಳುತ್ತಾರೆ.

೨. ನಾರಾಯಣ ದುಂಡಪ್ಪ ಪತ್ತಾರ, ಶ್ರೀ ಕಾಳಿಕಾದೇವಿ ಪಾರಿಜಾತ ನಾಟಕ ಕಂಪನಿ ಕಲಾವಿದರ ಬದುಕೆ ಶರಣಾಗತಿ ಎನ್ನುವುದನ್ನು ಅವರಲ್ಲಿ ಕಾಣುತ್ತೇವೆ. ಇದು ಪಾರಿಜಾತ ಕಲೆಗಿದೆ. ಕೃಷ್ಣ-ರುಕ್ಮಿಣಿ ಪಾತ್ರಗಳು ಆಟ ಆಡಿ ಬಂದಿರುತ್ತಾರೆ. ತಾಲಿಮಾ ಕೋಣೆಯೊಳಗೆ ಕುಳಿತು (ನಾರಾಯಣ ಕೃಷ್ಣ ಪಾತ್ರ, ಸಾವಿತ್ರಿ, ಗೊಲ್ಲತಿ, ರುಕ್ಮಿಣಿ ಪಾತ್ರ) ಇಬ್ಬರು ಪರದೆ ಹಿಂದೆ ಕುಳಿತು ಸೆರೆ ಕುಡಿಯುತ್ತಾ ಕುಳಿತ ನಾರಾಯಣ ಪತ್ತಾರ ಮುಂದೆ ಕುಳಿತು (ಗೊಲ್ಲತಿ ಪಾತ್ರ) ಸಾವಿತ್ರಿ ಸ್ವಲ್ಪ-ಸ್ವಲ್ಪ ಗ್ಲಾಸಿಗೆ ಹಾಕುತ್ತಾ ಅದನ್ನ ಇದನ್ನು ಮಾತಾಡ್ತಾ ಕಲಾವಿದರು ಮಾತುಗಳಾದರೂ ಏನು? ತಮ್ಮ ತಮ್ಮ ಬದುಕಿನ ಜಂಜಾಟಗಳು ಕಂಪನಿ ಲಾಸದಲ್ಲಿದೆ. ಸಾಲ ಮಾಡಿದೆ ಸಾಲಗಾರನಿಗೆ, ಕಲಾವಿದನಿಗೆ, ಸಂಗೀತಗಾರರಿಗೆ, ವಾದ್ಯ ಕಲಾವಿದರಿಗೆ, ಎಷ್ಟು ರೊಕ್ಕ ಕೊಡಬೇಕು ಎಂಬ ವಿಚಾರಗಳಿರುತ್ತವೆ. ಮತ್ತೆ ಒಂದು ಗುಟಗ ಕುಡಿದು ಶೇಂಗಾ ಬಾಯಿಗೆ ಹಾಕುತ್ತಾ ಒಬ್ಬರನ್ನೊಬ್ಬರು ನೋಡುತ್ತಾ ಸಾವಿತ್ರಿ ಹೇಳುತ್ತಾಳೆ

ಸಾವಿತ್ರಿ : ಇತ್ತಿತ್ತಲಾಗಿ ನೀವು ಬಹಳ ಕುಡಿಲಿಕ್ಕೆ ಸುರು ಮಾಡಿದಿರಿ

ನಾರಾಯಣ : ಹೌದು ಸಾವಿ ನಾನ್ ಸಾವಿ ಅಂದನಾ ಇಲ್ಲ ಸಾವಿತ್ರಿ ಅಂತಿನಿ ಸಾವಿತ್ರಿ ಅನಬೇಕು

ಸಾವಿತ್ರಿ : ಯ್ಯಾಕ ಅಂದ್ರ ಅನ್ನೊಲೇಕ ಬಿಡ್ರಿ ಅದಕ್ಕೆನಾತು

ನಾರಾಯಣ : ಇಲ್ಲಾ ಯಾರಿಗೆ ಏನು ಅನ್ನಬೇಕು ಅವರಿಗೆ ಅದನ್ನ ಅನ್ನಬೇಕು

ಈ ರೀತಿ ನಿಸೆ ಹೆಚ್ಚಾಗುತ್ತದೆ ಮಾತು ಮುಂದುವರೆತೈತಿ. ಹಂಗ ನಿಸೆ ಏರತೈತಿ. ಮತ್ತ ಸಾವಿತ್ರಿ ಸೆರೆ ಹಾಕುತ್ತಾಳೆ. ಅಂವ ಶೇಂಗಾ ತಿಂತನಾ ಮತ್ತು ಒಂದು ಗುಟಗು ಕುಡಿತಾನ ಹಾಗೆ ಮತ್ತೆ ಸಾಲದ ವಿಚಾರ ಬರತ್ತಾ, "ನಿಜ ಜೀವನದ ಪಾರಿಜಾತ ಕಲಾವಿದನ ಬದುಕಿನ ಸನ್ನಿವೇಶ ಗೋಚರವಾಗುತ್ತದೆ"

ನಾರಾಯಣ: ನೋಡು ಸಾವಿತ್ರಿ ನಾನು-ನೀನು ಮುಖಕ್ಕೆ ಬಣ್ಣ ಹಚ್ಚಿಕೊಂಡು ಅಡ್ಡೆ ಏರಿದ ಮೇಲೆ ನಾನು ಕೃಷ್ಣನಾಗತ್ತೀನಿ ನೀನು ರುಕ್ಮಿಣಿ (ಗೊಲ್ಲತಿ) ಆಗಿರಿತಿಯಾ, ನೋಡು ಜನ ಎಲ್ಲಾ ಅವರವರ ಮನೆಯ ಕಷ್ಟ-ಸುಖವೆಲ್ಲ ಕೃಷ್ಣಾ ಪರಮಾತ್ಮ ಎಂದು ಏನೇನೋ ಭಾವನಾ ಇಟ್ಟುಕೊಂಡು ನಮಗೆ ಶರಣು ಹೋಗುತ್ತಾರೆ. ಕುಂತ ಜನವೆಲ್ಲಾ ಅಂಗೈಯಲ್ಲಿ ಬೇಡಿಕೊಳ್ಳುವಂಗ ಅವರ ಮುಖದ ಮುಂದೆ ಕಾಣುತ್ತೇನಿ. ಆದರೆ ಸಾವಿತ್ರಿ ಒಂದು ಮಾತು ಹೇಳತ್ತೀನಿ "ಬಣ್ಣ ವರಸ್ಕೊಂಡು ಅಡ್ಡೆ ಇಳಿತಿದ್ದಾಂಗ ನಾನು ಸಾಲಗಾರನಾಗಿರುತ್ತೇನೆ. ನೀನೂ ಸೂಳೆಯಾಗಿರುತಿ ನೀನು ಸೂಳೆಯಾಗಿರುತ್ತಿ" ಎಂದು ನಾರಾಯಣ ಪತ್ತಾರ ಎಂಬ ಕಲಾವಿದನ ನಿಜದ ಕಲೆಯ ಅಂತರಂಗದ ಭಾವನೆಗಳು ಕಷ್ಟಮಯವಾಗಿರುತ್ತವೆ. ಈ ಒಂದು ನಿದರ್ಶನ ಹೇಳುತ್ತಾ ಹೇಳುತ್ತಾ ಕಲಾವಿದರ ಬದುಕನ್ನು ಕೆದಕುತ್ತ ಹೋದಂತೆ ಅವರ ಮಾತುಗಳಲ್ಲಿ ನೋವು-ನಲಿವುಗಳು ಕಾಣಸಿಗುತ್ತವೆ. ಕಲಾವಿದರ ವೃತ್ತಿ ಪರತೆಯ ಬಗ್ಗೆ ಆಸಕ್ತಿ ಇಟ್ಟುಕೊಳ್ಳಬೇಕು. ಕಲೆಗಳಲ್ಲಿ ಆಸಕ್ತಿವುಳ್ಳವರು ಜನರ ಮಧ್ಯವಿರುವ ಕೃಷ್ಣ, ಸತ್ಯಭಾಮೆ, ನಾರದ, ದ್ಯುತಿ, ಪಾತ್ರಗಳು ಜನಸಾಮಾನ್ಯರ ಮಧ್ಯ ಬದುಕುವ ಕಲೆ ವಿಶಿಷ್ಟವಾದದ್ದು. ಈ ರೀತಿ ಒಬ್ಬೊಬ್ಬ ಕಲಾವಿದರ ಬದುಕನ್ನು ಜಾಗೃತಗೊಳಿಸುವ ಕಲೆ ನಟನೆಯಲ್ಲಿಯೇ ಅಡಗಿರುತ್ತದೆ.

ಸುಮಾರು ಕ್ರಿ.ಶ. ೧೯೭೫ ರಿಂದ ಕರ್ನಾಟಕ ಸರಕಾರ ಕಲಾವಿದರಿಗೆ ಮಾಶಾಸನ ಆರಂಭಮಾಡುತ್ತಾರೆ. ಮಾಸಾಶನ ಪಡೆದ ಕಲಾವಿದರು ಕಲೆಯನ್ನು ಮುಂದುವರಿಸಲಿಲ್ಲ. ಏಕೆಂದರೆ ಹಸಿವಿಗೆ ಅನ್ನ ಸಿಕ್ಕಾಗ ಕಲೆಯು ಕಳೆದುಕೊಂಡಿತು. ವೃತ್ತಿಪರತೆ ಕಡಿಮೆಯಾಯಿತು. ಮನೋರಂಜನೆಗೆ ನಾವು ಒತ್ತು ನೀಡಿದರೂ ನಾವು ಗ್ರಾಹಕರಾದೆವು. ಅವನು ಗಿರಾಕಿಗೆ ಏನು ಬೇಕು ಅದನ ಕೊಡುತ್ತಾ ಸಾಗಿದ ಪಾರಿಜಾತದ ಆಧ್ಯಾತ್ಮಿಕ ಧಾರ್ಮಿಕ ಕಲೆಗಳು ಮಧ್ಯೆ ಪ್ರೇಕ್ಷಕ ಸತ್ತು ಹೋದ. ಪಾರಿಜಾತದ ಕಥೆಯೂ, ಆಚರಣೆಗಳು, ಬದಲಾವಣೆ ಆಗಿ ದೈವದ ಜೊತೆ ಆಯಾ ಭೌಗೋಳಿಕ ಪರಿಸರಕ್ಕೆ ತಕ್ಕಂತೆ ಪಾರಿಜಾತ ಸಾಗುತ್ತದೆ. ವ್ಯಕ್ತಿತ್ವ ಜಾಗೃತವಾಗುತ್ತದೆ. ಹೊಸ ಕಥೆ ನಮ್ಮ-ನಿಮ್ಮ ಸುತ್ತಮುತ್ತಲೂ ಇರುವ ಪರಿಸರವನ್ನು ದೇವರು ಮತ್ತು ಆಚರಣೆಗಳ ಮೂಲಕ ದೈವತ್ವದ ಸಂಬಂಧಗಳನ್ನು ಸದಾವಿರುವ ಹಾಗೆ ಕಲೆಯಲ್ಲಿದೆ. ಆಸಕ್ತಿವಹಿಸಿ ಕಲಿಯಬೇಕು ಇತರೆ ಸಮುದಾಯದೊಂದಿಗೆ ಹೊಂದಿಕೊಂಡು ಹೋಗುವ ಪಾಂಚಾಳರ ಪಾರಿಜಾತದ ಕಲೆ ಸಂಗೀತ ವಾದ್ಯಗಳು ಮೇಳಗಳ ಅಚ್ಚುಕಟ್ಟಾಗಿ ಅಧ್ಯಯನ ಕೈಗೊಳ್ಳಲಾಗಿದೆ.

೭.೪.೩. ಪಾರಿಜಾತ ನೋಡುವ ಮತ್ತು ಆಸ್ವಾದಿಸುವವರ ಅಭಿಪ್ರಾಯ :

ದಿನಾಂಕ ೨೮/೩/೨೦೧೯ ಕಡ್ಲಿಮಟ್ಟಿ ಮಾರುತಿ ದೇವರ ಜಾತ್ರೆಯ ನಿಮಿತ್ಯ ಪಾರಿಜಾತ ನಾಟಕ ಆಡುವರು. ಅಲ್ಲಿ ಬಣ್ಣಹಚ್ಚಿದ ಕೃಷ್ಣ ಪಾತ್ರದಾರಿಗಳು ಸ್ಟೇಜ್ ಇಳಿದು ಕೆಳಗೆ ಬಂದರೆ ನಿಜ ಜೀವನದ ಬದುಕಿನ ಬಣ್ಣ ಅರ್ಥವಾಗುತ್ತದೆ. ಪ್ರೇಕ್ಷಕರಿಗೆ ತುತ್ತು ಕೂಳಿಗಾಗಿ ಇಷ್ಟೆಲ್ಲಾ ಬಣ್ಣದಲೋಕದ ಕಷ್ಟ ಸಹಿಸಿಕೊಳ್ಳಬೇಕು ಅಲ್ವಾ, ಬಣ್ಣಹಚ್ಚಿ ಕಿರೀಟ ಹಾಕಿ ಕೃಷ್ಣ, ಕೊರವಂಜಿ, ದ್ಯುತಿ, ಗೌಳಗಿತ್ತಿಯನ್ನು ನೋಡಿದ್ದೇವೆ. ಆದರೆ ಕಲಾವಿದರನ್ನು ಕಲಾವಿದರು ಬಣ್ಣ ಒರೆಸಿಕೊಂಡು ಹೋಗಿದ್ದಂತಹ ಬದುಕನ್ನು ಕಲಾಸಕ್ತರು ಎಷ್ಟು ಮಂದಿ ಕಂಡಿದ್ದಾರೆ. ಅವರ ನಿಜ ಜೀವನದ ಬದುಕು ಪ್ರೇಕ್ಷಕ. ಒಂದು ಕಾಲದಲ್ಲಿ ಒಂದು ಸಲ ಕೃಷ್ಣಪಾರಿಜಾತ ನೋಡುತ್ತಾರೆ. ಮತ್ತೆ ಮತ್ತೆ ನೋಡುವುದರಿಂದ ಪಾರಿಜಾತ ಕಲಿಬೇಕು ಅಂತ ಎಷ್ಟೋ ಯುವಕರು ಮನೆ-ಮಠ ಬಿಟ್ಟು, ದಾರಿ ಬಿಟ್ಟದ್ದು ಉಂಟು. ಪಾರಿಜಾತ ಕಲೆಯನ್ನು ಕಲಿತು, ದೊಡ್ಡ, ದೊಡ್ಡ ಕಂಪನಿಗಳ ಮಾಲೀಕರಾಗಿದ್ದೂ ಉಂಟು. ಉದಾಹರಣೆಗೆ; ಕೃಷ್ಣ ದೇಶಪಾಂಡೆ ಲೋಕಾಪೂರ, ನಾರಾಯಣ ಪತ್ತಾರ ಸೊನ್ನ, ಹನುಮಂತ ಬಡಿಗೇರ ಉದಪುಡಿ, ಮುಂತಾದ ನಾಟಕ ನೋಡುವ ಪ್ರೇಕ್ಷಕರು ಕಲಾವಿದರಾಗಿದ್ದು ಕಂಡುಬರುತ್ತದೆ. ಪಾರಿಜಾತ ಕಂಪನಿಗಳು ಎಲ್ಲೆಲ್ಲಾ ಇದ್ದವು, ಅಲ್ಲೆಲ್ಲ ಅಲೆದಾಡಿ ನಂತರ ಹಿನ್ನೆಲೆ ಮುನ್ನಲೆ ಕೆಲಸಗಳ ಮಾಡುತ್ತಾ, ಒಬ್ಬ ಗುರುವಿನ ಮೂಲಕ ಪಾರಿಜಾತ ನಾಟಕದ ಕಲೆಗಳನ್ನು ಕಲಿತಿರುವುದು ಕಂಡುಬರುತ್ತದೆ. ಕಲೆ ಯಾರ ಸ್ವತ್ತಲ್ಲ. ಅದು ತಾತ್ಕಾಲಿಕವು ಅಲ್ಲ. ಕಲೆಯು ಆಸ್ವಾದಕರ ಕೂಸಾಗುತ್ತದೆ. ಎತ್ತಿಕೊಂಡವರನ್ನು ಅಪ್ಪಿಕೊಳ್ಳುತ್ತದೆ. ನಿತ್ಯ ಪೂಜಿಸುವ ಅವರನ್ನು ಉನ್ನತ್ತಕೇರಿಸುತ್ತದೆ. ಕಲೆಯೇ ಒಂದು ಜೀವನ ಮಾರ್ಗ ಮಾರ್ಗಕ್ಕೆ ಬಂದವರೆಲ್ಲ ಅನುಭವಿಗಳಾಗಿ ತತ್ವ ಚಿಂತನೆಗೆ ಒಳಪಡಿಸಿಕೊಂಡಿದ್ದಾರೆ.

೭.೪.೪. ರಂಗಭೂಮಿಗೆ ಪಾಂಚಾಳರ ಒಡನಾಟಗಳು :

ಕೃಷ್ಣ ಪಾರಿಜಾತ ಪಾಂಚಾಳ ಕಲಾವಿದರು ವೃತ್ತಿಯಿಂದ ತಮ್ಮ ತಮ್ಮ ಕುಲಕಸುಬುಗಳನ್ನು ಮಾಡುತ್ತಾ ಬಿಡುವಿನ ವೇಳೆ ಇತರೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೊದಲೇ ಆಯಗಾರರಾದ, ಕಮ್ಮಾರ, ಬಡಿಗೇರ, ಪತ್ತಾರ, ಶಿಲ್ಪಿ, ಕಂಚುಗಾರರಿಗೆ, ವರ್ಷಕ್ಕೊಮ್ಮೆ ಆಯಾ ಕೊಡುವರು, (ಜೋಳ ಕಾಳುಗಳು ಬರುವುದು) ನಡು ನಡುವೆ ಏನಾದರೂ ಖರ್ಚು ಬಂದರೆ ಕುಟುಂಬ ನಿರ್ವಹಣೆಗೆ ಹಣ ಬೇಕಾಗುತ್ತದೆ. ಅದಕ್ಕಾಗಿ ಬಿಡುವಿನ ವೇಳೆ ಬೇರೆ ಕೆಲಸದಲ್ಲಿ ತೊಡಗಿಕೊಳ್ಳುತ್ತಾರೆ.

ಬಡಿಗ : ಬೆಳಗ್ಗಿನಿಂದ ಮಧ್ಯಾಹ್ನದವರೆಗೆ ಕಾಯಕ ಮುಗಿಯಿತು. ಸಂಜೆ ಯಾವುದಾದರೊಂದು ಭಜನೆ ವಾದ್ಯಗಳು ಇತರೆ ಕಲಿಕೆಯನ್ನು ಕಲಿಯುತ್ತ ಕಲೆಯ ಅನುಭವವನ್ನು ಮುಂದೆ ಬಂದ ಶಿಷ್ಯಂದರರಿಗೂ ಧಾರೆ ಎರೆಯುತ್ತಾರೆ. ಹೀಗೆ ಗುರುಶಿಷ್ಯರ ಪರಂಪರೆ ಹಾಕಿದವರೇ ವಿಶ್ವಕರ್ಮರು. ಉದಾಹರಣೆಗೆ; ಗೋಕಾಕ ತಾಲೂಕಿನ ಯರಗುಂದ್ರಿ ಗ್ರಾಮದ ಹನುಮಂತ ಬಡಿಗೇರ ವೃತ್ತಿಯಿಂದ ಬಡಗಿತನ ಕಲಿತು ಬಿಡುವಿನ ವೇಳೆ ಭಜನೆ, ಸಂಗೀತ, ಕೃಷ್ಣ ಪಾರಿಜಾತ ಕಲಿತು ಪಾಂಚಾಳರಲ್ಲಿ ದೈತ್ಯ ಕಲಾ ಪ್ರತಿಭೆಯಾಗಿದ್ದಾರೆ.

ಅಕ್ಕಸಾಲಿಗ : ಪತ್ತಾರ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಬೆಳ್ಳಿ, ಬಂಗಾರದ, ಆಭರಣ ಮಾಡುವುದು ಹಾಗೂ ಗ್ರಾಹಕರಿಗೆ ಮಾರಾಟ ಮಾಡುವ ಕಲೆಯು ವ್ಯವಹಾರಿಕವಾದದ್ದು. ಆದರೆ ಪ್ರವೃತ್ತಿಯಿಂದ ಜನಪದ ಕಲಾವಿದ. ಕೃಷ್ಣ ಪಾರಿಜಾತ ಸ್ತ್ರೀ ಪಾತ್ರವನ್ನು ಅಚ್ಚುಕಟ್ಟಾಗಿ ಮಾಡಿ. ನಾಡಿನ ತುಂಬಾ ಪಾರಿಜಾತ ಕಲೆಯನ್ನು ಹರಡಿದ ಬೀಳಗಿ ತಾಲೂಕಿನ ಸೊನ್ನ ಗ್ರಾಮದ ನಾರಾಯಣ ಪತ್ತಾರರು ಒಬ್ಬರು. ಇವತ್ತಿಗೂ ಆಧುನಿಕ ಸಿನಿಮಾ ತಂತ್ರಜ್ಞಾನ ಹಾಗೂ ಪ್ರಸಾರ ಮಧ್ಯಮವರ್ಗ ಒತ್ತಡದಲ್ಲಿದ್ದರು. ಜನಪದ ಕಲಾ ಆಸ್ವಾದಕರು ನೈಜತೆಯನ್ನು ಮರೆತವರೆ ಹೆಚ್ಚು. ಅದಕ್ಕೆ ಮುಂದಿನ ಪೀಳಿಗೆಗೆ ವರ್ಗಾವಣೆ ಮಾಡುವ ಪ್ರಯತ್ನವನ್ನು ಮಾಡಬೇಕು. ಈ ರೀತಿಯ ಅನೇಕ ಪಾರಿಜಾತದ ಪಾಂಚಾಳ ಕಲಾವಿದರ ಒಡನಾಟಗಳು. ಒಂದು ಕಡೆ ಕಥೆಯ, ಕಲೆ, ಇನ್ನೊಂದೆಡೆ ಪ್ರೇಕ್ಷಕವರ್ಗ, ಸಾಂಸ್ಕೃತಿಕ ವಾಹಕರಾಗಿ ಪಾರಿಜಾತ ಕಲೆ ಮತ್ತು ತಮ್ಮ ಕುಲಕಸುಬುಗಳ ಕೌಶಲ್ಯಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವ ದೊಡ್ಡ ಜವಾಬ್ದಾರಿ ಕಲಾವಿದನಿಗೆ ಇದೆ. ಪಾಂಚಾಳರು ಮತ್ತು ರಂಗಭೂಮಿಗೆ ಇರುವ ಸಂಬಂಧ. ಸಂಗೀತದಂತಹ ಒಡನಾಟದಿಂದ ಹಿನ್ನೆಲೆ-ಮುನ್ನೆಲೆಯ ವಸ್ತು ವಿನ್ಯಾಸಗಳು ವಾದ್ಯಗಳ ಹದವರಿತು ತಯಾರಿಕೆಯ ಬಗ್ಗೆ ವಿಶ್ಲೇಷಿಸಲಾಗಿದೆ.

ಅಡಿ ಟಿಪ್ಪಣಿ

೧. ಶಿವಾನಂದ ಶೆಲ್ಲಿಕೇರಿ, ಶ್ರೀಕೃಷ್ಣಪಾರಿಜಾತ ಪ್ರಾತಿನಿಧಿಕ ಕಂಪನಿಗಳು, ೨೦೦೦ ಪು-೭೯

೨. ಶ್ರೀರಾಮ ಇಟ್ಟಣ್ಣವರ ಸಂದರ್ಶನ ಸ್ಥಳ ಬಿಳಗಿ, ದಿನಾಂಕ:೨೦.೧೦.೨೦೧೮ (ಪಾರಿಜಾತ ಕಂಪನಿ, ಕಲಾವಿದ ಅಳಿವು ಉಳಿವಿನ ಪ್ರಶ್ನೆ)

೩. ಡಾ. ಎಂ.ಎಸ್.ಸುಂಕಾಪುರ ಸಂಪಾದಿಸಿದ ಕೃತಿ ಕೃಷ್ಣ ಪಾರಿಜಾತ ಕೊರವಂಜಿ ಸನ್ನಿವೇಶ ೧೯೭೨, ಪುಟ.ಸಂಖ್ಯೆ ೬೦

೪. ಡಾ. ವೀರೇಶ ಬಡಿಗೇರ, ತತ್ವ ಕೊರವಂಜಿ, ೨೦೧೮, ಪು-೩೬

೫. ಶಿವಾನಂದ ಶೆಲ್ಲಿಕೇರಿ, ಶ್ರೀಕೃಷ್ಣಪಾರಿಜಾತ ಹಿಮ್ಮೇಳ ಕಲಾವಿದರು, ೨೦೧೭ ಪು-೨೦೮

ಅಧ್ಯಾಯ : ಎಂಟು

ಸಮಾರೋಪ

* ಫಲಿತಗಳು
* ಸಾಧ್ಯತೆಗಳು
* ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು
೨. ಸಾಂಸ್ಕೃತಿಕ ಪದಕೋಶ
೩. ವಕ್ತೃಗಳ ವಿವರ
೪. ಛಾಯಾಚಿತ್ರಗಳು

ಅಧ್ಯಾಯ : ೮

ಸಮಾರೋಪ

ಉತ್ತರ ಕರ್ನಾಟಕದ ಜನಪದ ಸಾಹಿತ್ಯ ಹಾಗೂ ಪ್ರದರ್ಶನ ಕಲೆಗಳನ್ನು ಸ್ಥೂಲವಾಗಿ ಅಧ್ಯಯನ ಕೈಗೊಂಡಿರುವುದು. ಪ್ರಸ್ತುತ 'ಶ್ರೀಕೃಷ್ಣಪಾರಿಜಾತ ಪಂಚಾಳ ಪ್ರಾತಿನಿಧ್ಯ : ತಾತ್ವಿಕ ವಿವೇಚನೆ' ಎಂಬ ಮಹಾಪ್ರಬಂಧದಲ್ಲಿ ಶ್ರೀಕೃಷ್ಣಪಾರಿಜಾತ ಹಾಗೂ ಪಾಂಚಾಳ ಕಲಾವಿದರು ಅವರ ಹಿಮ್ಮೇಳ, ಮುಮ್ಮೇಳ, ಸಂಗೀತವಾದ್ಯಗಳು, ರಂಗಸಜ್ಜಿಕೆ ಅಂತಹ ಹಲವಾರು ಉದ್ದೇಶಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಕಲಾಸಕ್ತರ ಅಭಿರುಚಿಗಳು ಮತ್ತು ಪಾಂಚಾಳರ ಜನಪದ ಪ್ರದರ್ಶನ ಕಲೆಗಳನ್ನು ಕುರಿತು ಅದರ ಶೀರ್ಷಿಕೆಯಲ್ಲಿ ಅಧ್ಯಯನ ಪರಿಚಯಿಸಿದ್ದೇನೆ.

ಬಯಲಾಟದಲ್ಲಿ ಗ್ರಾಮೀಣ ಜನಪದ ಬದುಕು ಹಾಸುಹೊಕ್ಕಾಗಿರುವ ಬೆಳಗಾವಿ ಬಾಗಲಕೋಟೆ ವಿಜಯಪುರ ಈ ಮೂರು ಜಿಲ್ಲೆಗಳಲ್ಲಿ ಪಾರಿಜಾತ ಕಲೆಯು ಹರಡಿಕೊಂಡಿದೆ. ಪಾರಿಜಾತದ ಹೆಸರು ಕೇಳದ ಜನಸಾಮಾನ್ಯರಿಲ್ಲ. ಪಾರಿಜಾತ ಆಟ ಆಡಿಸದ ಹಳ್ಳಿಗಳಿಲ್ಲ. ಹಳ್ಳಿಯ ಜನರಿಗೆ ಬಿಡುವಿನ ವೇಳೆ ಕಾಲಕಳೆಯಲು ಇದು ಒಂದು ಸಾಮಗ್ರಿ. ಜಾತ್ರೆ-ಉತ್ಸವಗಳಲ್ಲಿ ಪಾರಿಜಾತ ಆಟ ಆಡಿಸುವುದು ಪರಂಪರೆಯಾಗಿದೆ. ಪಾರಿಜಾತ ನಾಟಕಗಳು ಇಲ್ಲದಿದ್ದರೆ ಜಾತ್ರೆ ಜಾತ್ರೆಯೆನಿಸುತ್ತಿರಲಿಲ್ಲ, ಓಕುಳಿ-ಓಕುಳಿಯಾಗುತ್ತಿರಲಿಲ್ಲ. ಅಂತಹ ಅವಿನಾಭಾವ ಸಂಬಂಧ ಈ ಜನಪದ ಕಲೆಗಿದೆ. ಎಲ್ಲಾ ವಯೋಮಾನದವರು ಪಾರಿಜಾತದ ಪ್ರೇಕ್ಷಕರು. ನೂರಾರು ಬಾರಿ ನೋಡಿದರೂ ಮತ್ತೆ ನೋಡಬೇಕೆನ್ನುವ ಕುತೂಹಲ ಹುಟ್ಟಿಸುವ ಕಲೆ. ಒಟ್ಟಾರೆಯಾಗಿ ಪಾರಿಜಾತ ಸೂಜಿಗಲ್ಲಿನಂತೆ. ಆದ್ದರಿಂದ ಶ್ರೀಕೃಷ್ಣಪಾರಿಜಾತ ಸಂಶೋಧನೆ ಎತ್ತಿಕೊಳ್ಳಲಾಗಿದೆ.

ಜನಪದ ಸಾಹಿತ್ಯವು ಹಳ್ಳದ ದಂಡೆಯಲ್ಲಿರುವ ಗರಿಕೆಯ ಕುಡಿಯಂಗ ಅದರ ಆಗು-ಹೋಗು. ಕರಿಕೆ ಬಿದ್ದಲ್ಲಿಯೇ ಬೇರು ಬಿಡುತ್ತದೆ. ತಳಬೇರು ನೆಲದ ಮರೆಯಲ್ಲಿ ಜೀವಂತವಾಗಿದ್ದು, ಮಳೆಗಾಲವನ್ನೇ ನಿರೀಕ್ಷಿಸುತ್ತ ಬದುಕುತ್ತದೆ. ಪ್ರತಿಯೊಂದು ಕಲೆಯ ಹಿನ್ನೆಲೆಯಲ್ಲಿ ನಾವು ಶೋಧಿಸಲು ಪ್ರಯತ್ನಿಸಿರುವ ವಿಚಾರಗಳು ನಮ್ಮದೇ ಆದ ದೇಸಿ ಚಿಂತನೆಯ ಕಡೆಗೆ ನಮ್ಮನ್ನು

ಕರೆದೊಯ್ಯ ಬಲ್ಲವು. ಶ್ರೀಕೃಷ್ಣಪಾರಿಜಾತದ ಕಲೆಗಳ ಪ್ರದರ್ಶನ ಸಂದರ್ಭದ ಆರಾಧನೆಗಳ ಹಿಂದಿನ ಆಶಯಗಳು ಮೂಲ ಸಂಸ್ಕೃತಿಯೊಂದರ ಕಡೆಗೆ ತೋರಿಸುತ್ತವೆ. ಪಾಂಚಾಳ ವಿಶ್ವಕರ್ಮ ಕಲಾ ಬದುಕಿನ ಒಡನಾಟದಲ್ಲಿ ಹಾಸುಹೊಕ್ಕಾಗಿದೆ.

ಇತಿಹಾಸದ ಹಲವು ಕಾಲಘಟ್ಟಗಳಲ್ಲಿ ನಡೆದಿರುವ ಸಾಂಸ್ಕೃತಿಕ ಸಂಘರ್ಷಗಳು ಗಮನಸೆಳೆಯುತ್ತವೆ. ಆದ್ದರಿಂದ ಶ್ರೀಕೃಷ್ಣಪಾರಿಜಾತದ ಮೂಲಕ ಪಾಂಚಾಳ ಸಾಂಸ್ಕೃತಿಕ ಕಲೆ ಹಾಗೂ ಕಲಾತ್ಮಕ ಬದುಕಿನ ಸಂಶೋಧನೆ ಮಾಡಲಾಗಿದೆ. ಜನಪದಕಲೆಗಳು ಕಂಡುಕೊಂಡ ಸ್ಥಾನಗಳು ವಿಸ್ಮಯ ಉಂಟುಮಾಡುತ್ತವೆ. ಮನುಷ್ಯನ ಸಾಂಸ್ಕೃತಿಕ ಚರಿತ್ರೆಗೂ ಜನಪದ ಕಲೆಗಳ ಉಗಮಕ್ಕೂ ಅವಿನಾಭಾವ ಸಂಬಂಧವಿದೆ. ಈ ದೃಷ್ಟಿಯಿಂದ ಪಾಂಚಾಳರ ಜನಪದ ಕಲೆಗಳ ಅಧ್ಯಯನ ಕೈಗೊಂಡಿರುವ ಆಚರಣೆಗಳು, ಆರಾಧನೆ ಕ್ರಿಯೆಗಳೇ ಕಲೆಗಳಾಗಿ ವಿಕಸನ ಹೊಂದಿ ಪೂರ್ಣ ಸ್ವರೂಪದ ಕಲೆಗಳು ಆದದ್ದು ವಿಶೇಷವಾಗಿದೆ. ಕಲೆಗಳು ಧರ್ಮ ಪಂಥದ ಉದ್ದೇಶ ಮೀರಿ ಸಾರ್ವಜನಿಕ ಕಲೆಗಳಾದದ್ದು. ಪಾಂಚಾಳರು ಅದನ್ನು ವೃತ್ತಿಯನ್ನಾಗಿ ನಂತರ ಪರಂಪರೆಯಾಗಿ ಬೆಳೆದಿದೆ. ಹೊಸ ಕೌಶಲ್ಯಗಳು ಹುಟ್ಟಿಕೊಂಡಿವೆ. ಪಾಂಚಾಳ ಸಮುದಾಯದಲ್ಲಿ ಆರಾಧನೆಯ ಧರ್ಮ ಸ್ಮರಣೆ, ವೃತ್ತಿಗಾಯಕರು, ಕುಲಕಸುಬುಗಳ ಕೌಶಲ್ಯ, ಕೃಷಿಗೆ ಸಂಬಂಧಿಸಿದ್ದು ಹಾಗೂ ಹಾಡು, ನೃತ್ಯ, ಶ್ರೀಕೃಷ್ಣಪಾರಿಜಾತದಂತಹ ರಂಗಭೂಮಿ ಕಲೆಗಳು ಧಾರ್ಮಿಕ ಮತ್ತು ಲೌಕಿಕ ಎಂದು ವಿಂಗಡಿಸುತ್ತಾರೆ. ಒಬ್ಬ ಕಲಾವಿದ ತನ್ನ ಇಷ್ಟ ದೈವ ಕಥೆಯನ್ನು ಆಧಾರವಾಗಿಟ್ಟುಕೊಂಡು ಕಲಾಪ್ರದರ್ಶನ ನೀಡಿದಾಗ ಅವು ಆಚರಣೆಗಳು, ಕುಣಿತ ನರ್ತನ, ಹಾಡು ಹಾಗೂ ಅಂಗಾಂಗ ಅಭಿನಯಗಳ ಮೂಲಕ ಕಟ್ಟಿಕೊಡಲಾಗಿದೆ.

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ವಿಧಾನ, ಹಾಗೂ ತಾತ್ವಿಕತೆ ಕುರಿತು ಸಂಶೋಧನೆಯ ಆಯಾಮಗಳನ್ನು ಕಟ್ಟಿಕೊಡಲಾಗಿದೆ. ಶ್ರೀಕೃಷ್ಣಪಾರಿಜಾತ ಬೆಳೆದುಬಂದ ವಿವರಗಳು ಹಿಂದೆ ಕೈಗೊಂಡ ಅಧ್ಯಯನಗಳು ಪ್ರಸ್ತುತ ಅವುಗಳಲ್ಲಿರುವ ವಿಚಾರಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಶ್ರೀಕೃಷ್ಣಪಾರಿಜಾತದಂತಹ ಭಕ್ತಿಯ ಹರಿಕಥೆಯು ಜೀವಂತವಾಗಿ ಉಳಿಯಲು ತಮ್ಮ ತಮ್ಮ ಜನಪದೀಯ ಸಂಪ್ರದಾಯಗಳನ್ನು ಆಚರಿಸುತ್ತಾ ಬಂದಿರುವ ಸಾಮಾಜಿಕ ಕ್ರಿಯೆ ವಿಧಗಳಲ್ಲಿಯೂ ಭಗವಂತನ ನೆನೆಯುತ್ತಾರೆ. ಆದ್ದರಿಂದ ಬಾಗಲಕೋಟೆ, ಬೆಳಗಾವಿ, ಬಿಜಾಪುರ, ಈ ಮೂರು ಜಿಲ್ಲೆಗಳ ಪರಿಚಯ, ಕ್ಷೇತ್ರಗಳ ಚರಿತ್ರೆ, ವಿಶೇಷತೆ ಐತಿಹಾಸಿಕವಾಗಿ ಬಾದಾಮಿ ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ಮಹಮ್ಮದೀಯರು ಹಾಗೂ ವಿಜಯನಗರದ ಅರಸರು, ಮೈಸೂರು ಪ್ರಾಂತ್ಯ, ಮುಂಬೈ ಪ್ರಾಂತ್ಯ, ಕಿತ್ತೂರುರಾಣಿ ಚೆನ್ನಮ್ಮ, ಬ್ರಿಟಿಷರ ಆಡಳಿತ ವಿಶೇಷತೆ ಕಟ್ಟಿಕೊಡಲಾಗಿದೆ.

ರಾಜಕೀಯ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಕಲೆಗಳ ಬಗ್ಗೆ ಜಿಲ್ಲೆಗಳ ವಿಶೇಸತೆ ತಿಳಿಸಲಾಗಿದೆ. 'ಶ್ರೀಕೃಷ್ಣಪಾರಿಜಾತದ ಪಾಂಚಾಳರ ಪ್ರಾತಿನಿಧ್ಯ : ತಾತ್ವಿಕ ವಿವೇಚನೆ' ಎಂಬ

ಮಹಾಪ್ರಬಂಧದಲ್ಲಿ ಪಾಂಚಾಳ ಕಲಾವಿದರು ಪಾರಿಜಾತದಲ್ಲಿ ಭಾಗಿಯಾಗಿರುವ ಬಗ್ಗೆ ಇಲ್ಲಿಯವರೆಗೂ ಯಾರೂ ಸಂಶೋಧನೆಯನ್ನು ಕೈಗೊಂಡಿರುವುದಿಲ್ಲ. ಕೇವಲ ಒಂದು ಎರಡು ಪುಸ್ತಕಗಳು, ಬಿಡಿ ಲೇಖನಗಳು ಪ್ರಕಟವಾಗಿದ್ದನ್ನು ಬಿಟ್ಟರೆ ಪಾಂಚಾಳ ಸಮುದಾಯದ ಸಾಂಸ್ಕೃತಿಕ ಸಂಶೋಧನಾ ಪ್ರಬಂಧ ಪ್ರಕಟವಾಗಿದೆ ಆದರೆ ಅವರ ಕರಕೌಶಲ್ಯಗಳ ಬಗ್ಗೆ, ಪುರಾಣಗಳ, ಸಾಹಿತಿ, ಕವಿ, ವಿದ್ವತ್ತಿನ ಜ್ಞಾನ ಕುಶಲತೆಗಳು, ಒಬ್ಬೊಬ್ಬ ವ್ಯಕ್ತಿಯ ಆಧಾರಿಸಿ ಸಮರ್ಪಕವಾಗಿ ಸಂಶೋಧನೆ ಮಾಡಲಾಗಿದೆ. ಶ್ರೀಕೃಷ್ಣಪಾರಿಜಾತವು ವೈಷ್ಣವ ಪರಂಪರೆಯವರು ಶೈವ ಆರಾಧಕರು. ಅನೇಕ ಜನಪದ ಪ್ರದರ್ಶನ ರೂಪಗಳಲ್ಲಿ ಭಾಗವಹಿಸಿರುವ ಪುರವಂತಿಕೆ, ವೀರಗಾಸೆ, ವೀರಭದ್ರನ ಅವತಾರಗಳು, ಆಚರಿಸುವ ಕುಣಿತ, ಹಾವಭಾವಗಳ, ವೇಷಭೂಷಣಗಳ, ಕಲೆಗಳನ್ನು, ಕಲಾವಿದನ ಮೂಲಕ ಕಟ್ಟಿಕೊಡಲಾಗಿದೆ. ಇದಲ್ಲದೆ ಕರಡಿಮಜಲು, ಹಲಗೆ, ತಾಸೆ ಭಜನೆ, ತಬಲ, ಮುಂತಾದ ವಾದ್ಯಗಳ ಕಲಿಕೆಯನ್ನು ಬಿಡುವಿನ ವೇಳೆ ಕಲಿತು ಹವ್ಯಾಸವಾಗಿ ಸಾರ್ವಜನಿಕರ ಮುಂದೆ ಆ ಕಲೆ ಪ್ರದರ್ಶನಗೊಳ್ಳುತ್ತ ಸಾಗಿದೆ. ಹಾಗೆ ಕಲಾವಿದನ ಕಲೆಯ ಬೇಡಿಕೆ ಹೆಚ್ಚಾಗುತ್ತದೆ. ಜನಪದ ಕಲೆಗಳ ಅಳಿವು ಉಳಿವಿಗೆ ಕಲಾವಿದ ಪ್ರೇಕ್ಷಕವರ್ಗಗಳು ಕಾರಣವೆಂಬುದು ಸಂಶೋಧನಾ ಪ್ರಬಂಧದಲ್ಲಿ ತಿಳಿಸಲಾಗಿದೆ.

ಪಾಂಚಾಳರ ಜ್ಞಾನ ಕೌಶಲ್ಯ ಭಾಗದಲ್ಲಿ ಹಾರ್ಮೋನಿಯಂ ಮಾಸ್ತರರಾಗಿ ಪಾರಿಜಾತ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿರುವರು. ಸ್ವತಃ ತಾವೇ ಹಾರ್ಮೋನಿಯಂ ತಯಾರಿಕರು. ಅದರ ಜ್ಞಾನದ ನಾದದ ನೆಲೆಯನ್ನು ಶೋಧಿಸುವ ಮತ್ತು ಜೋಡಿಸುವ ಕಲೆಯು ಅದ್ಭುತವಾದದ್ದು. ಬೀಳಗಿ ತಾಲೂಕಿನ ತೆಗ್ಗಿ ಗ್ರಾಮದ ಚಿದಾನಂದ ಪತ್ತಾರ್ ಅವರು ಪೆಟಿಗಿ ತಯಾರಕರು. ಭಜನಾದಲ್ಲಿ ಪೆಟಿಗಿ ಬಾರಿಸುವ ಕಲಿಸುವ ಗುರುಗಳಾದ ಅವರು ಇದರಂತೆ ತಾಳ, (ಕಂಚಿನ) ಬಾರಿಸುವ, ಮತ್ತು ಹದವರಿತು ತಯಾರಿಸುವ ಕಲೆ ಸೊಗಸಾದದ್ದು. ಕಮ್ಮಾರ ಭಜನೆಗಳಲ್ಲಿ ರಾಗಕ್ಕೆ ತಕ್ಕಂತೆ ನಾದಸ್ವರ ಹೊರಡುವಂತೆ ತಯಾರಿಸುವ ಕಲೆಯ ಕೌಶಲ್ಯ ವಿಶೇಷವಾದದ್ದು. ತಬಲಾ ಶ್ರೀಕೃಷ್ಣಪಾರಿಜಾತ, ಬಯಲಾಟಕ್ಕೆ, ಜಾತ್ರೆ, ಉತ್ಸವಗಳಿಗೆ ಬಳಸುವುದುಂಟು. ಕಲಾವಿದ ದಾದನಟ್ಟಿ ಗ್ರಾಮದ ವಿಠಲ ಬಡಿಗೇರ (ಕಂಬಾರರು) ಇವರು ತಬಲ ತಯಾರಕರು ಮತ್ತು ಹಲವಾರು ಕಲಾ ಪ್ರದರ್ಶನಗಳಲ್ಲಿ ಬಾರಿಸುವ ಕಲಾವಿದನಾಗಿದ್ದ. ಸಂದರ್ಶನದ ಮೂಲಕ ಅವನ ಕಲೆ ಶೋಧಿಸಲಾಗಿದೆ. ಪಾರಿಜಾತ ಕಲಾವಿದರಾಗಿ ಕಂಪನಿ ಸಂಘಟಕರಾಗಿ ಮುನ್ನಡೆಸಿದ. ಸೊನ್ನ ಗ್ರಾಮದ ಶ್ರೀ ನಾರಾಯಣ ಪತ್ತಾರ ಅವರ ೭೫ ವರ್ಷಗಳ ಕಾಲ ಬದುಕಿನ ಅನುಭವಗಳನ್ನು ಸಂಶೋಧನೆಯ ಮೂಲಕ ಕಟ್ಟಿಕೊಡಲಾಗಿದೆ.

'ಪಾಂಚಾಳರು : ಜ್ಞಾನ ಮತ್ತು ಕೌಶಲ್ಯ' ಭಾಗದಲ್ಲಿ ಶ್ರೀಕೃಷ್ಣಪಾರಿಜಾತದ ಬಯಲಾಟವನ್ನು ಹೊರತುಪಡಿಸಿ ತಮ್ಮ ಕುಲಕಸುಬುಗಳಾದ ಬಡಗಿತನದಲ್ಲಿ ಬರುವ ರೈತರ ಸಾಮಗ್ರಿ ಕೃಷಿಗೆ ಬೇಕಾಗಿರುವ ವಸ್ತುಗಳು ದಿಂಡು, ಇಸೂ, ಮಡಿಕೆ, ನೇಗಿಲು, ನಗಾ, ಹರಗೋಲ ತಯಾರಿಸುವರು.

ಮನೆಗೆ ಬೇಕಾಗುವ ಬಾಗಿಲು, ಪಳಿ, ತೊಲಿ, ಕಪಾಟು, ಕಿಡಕಿ ಮುಂತಾದವುಗಳು ಸೂಕ್ಷ್ಮ ಕೆತ್ತನೆ ಕೈಚಳಕದ ಕುಶಲತೆಯನ್ನು ಆಚನೂರು ಗ್ರಾಮದ ಮಾನಪ್ಪ ಬಡಿಗೇರರಿಂದ ಸಂದರ್ಶನದ ಮೂಲಕ ಪಡೆದುಕೊಂಡು ಅವರ ಕೌಶಲ್ಯಗಳನ್ನು ಸಂಶೋಧನೆಯಲ್ಲಿ ತಿಳಿಸಲಾಗಿದೆ. ಕಲ್ಲಿನಲ್ಲಿ ಮೂರ್ತಿ ತಯಾರಕರಿಗೆ ಶಿಲ್ಪಿ ಎಂದು ಕರೆಯಲಾಗಿದೆ. ಸೂಕ್ಷ್ಮ ಕಲ್ಲು ಕೆತ್ತನೆ ಕೆಲಸಕ್ಕಾಗಿ ಬಾಗಲಕೋಟೆಯ ಗುಂಡಣ್ಣ ಮಾಯಾಚಾರಿ ಅವರು 'ರಾಜ್ಯ, ರಾಷ್ಟ್ರ ಗೌರವ ಪ್ರಶಸ್ತಿ' ಪಡೆದವರು. ಅವರು ಕೊಟ್ಟ ಮಾಹಿತಿಯನ್ನು ವಿಶ್ಲೇಷಿಸಿ ಅವರ ಕಲೆಗೆ ಬೆಲೆ ಕಟ್ಟಿಕೊಡಲಾಗಿದೆ. ಅದರಂತೆ ಪತ್ರಿಕೆ ಅಥವಾ ಅಕ್ಕಸಾಲಿಗನ ಬೆಳ್ಳಿ ಬಂಗಾರದ ವಸ್ತುಗಳ ತಯಾರಿಕೆ ಕೆಲಸ ಬಹಳ ಸೂಕ್ಷ್ಮವಾದದ್ದು. ಅವರ ಜ್ಞಾನ ಮತ್ತು ಕೌಶಲ್ಯತೆಗಳಲ್ಲಿ ವಿಶಿಷ್ಟ ಆಭರಣಗಳಾದ ಉಂಗುರ, ಜುಮುಕಿ, ಓಲೆ, ಬೋರ್‌ಮಾಳ, ನೆಕ್ಲೆಸ್ ಮುಂತಾದವುಗಳನ್ನು ತಯಾರಿಸುವಲ್ಲಿ ವಿಜಯಪುರದ ಸದಾಶಿವ ಪತ್ತಾರ ರಾಜ್ಯ ಪ್ರಶಸ್ತಿ ಪಡೆದವರು. ಕಮತಗಿಯ ಗುರುರಾಯರ ಮಠಕ್ಕೆ ೧೫೦ ಕೆಜಿ ಬೆಳ್ಳಿ ತೇರು ತಯಾರಿಸಿ ಕೊಟ್ಟವರು ಪತ್ತಾರರು. ಪ್ರತಿ ಹಳ್ಳಿಗಳಲ್ಲಿರುವದು ವಿಶೇಷ.

ಕಮ್ಮಾರಿಕೆ, ಬಡಿತನ ವೃತ್ತಿಗಳು ಅತಿ ಹೆಚ್ಚಾಗಿ ಜನಸಾಮಾನ್ಯರನ್ನೊಳಗೊಂಡ ವೃತ್ತಿ. ಆದರೆ ಕಂಚುಗಾರಿಕೆ, ಅಕ್ಕಸಾಲಿಗ ಹಾಗೂ ಶಿಲ್ಪ ಈ ವೃತ್ತಿಗಳು ಸಾಮಾನ್ಯ ಜನರಿಂದ ದೂರವಿರುವ ವೃತ್ತಿಗಳಾಗಿವೆ. ಜನರಿಗಾಗಿಯೇ ಮಾಡಿದರೂ ನಿರ್ಮಾಣದ ಹಂತದಲ್ಲಿ ಜನರಿಂದ ದೂರ ಉಳಿಯುತ್ತವೆ. ಆದರೆ ಬಡಿಗತನ, ಕಮ್ಮಾರಿಕೆ ವೃತ್ತಿಯು ಜನರೊಡನೆ ಬೆರೆತುಕೊಂಡು ಕೆಲಸವನ್ನು ನಿರ್ವಹಿಸಬೇಕಾಗುತ್ತದೆ.

ತಾಮ್ರ, ಕಂಚು, ಪಂಚಲೋಹಗಳಿಂದ ದೇವರ ಮೂರ್ತಿಗಳನ್ನು ತಯಾರಿಸುವವರಿಗೆ ಕಂಚುಗಾರ ಎನ್ನುವರು. ಗೃಹಬಳಕೆಗೆ ಬೇಕಾಗಿರುವ ಚರಿಗೆ, ತಾಟ, ಟಾಕಿ, ಕೊಡ ಮುಂತಾದ ವಸ್ತುಗಳನ್ನು ತಯಾರಿಸುವ ವಿಧಾನ. ಜೇಡಿಮಣ್ಣಿನ (ಉಸುಕು) ಕಾಶಿದ ಸತು, ಸೀಸ, ತಾಮ್ರ, ಹಾಕಿದಾಗ ಮೂರ್ತಿ ತಯಾರಾಗುತ್ತದೆ. ಇಂತಹ ಕಲೆಗಳು ಪಾಂಚಾಳರಲ್ಲಿ ವಿಶೇಷ. ಏಕೆಂದರೆ ತಮ್ಮ ತಮ್ಮ ಕುಲಕಸುಬುಗಳಲ್ಲಿ ಜಾಣ್ಮೆ ತೋರಿಸುವರು. ಬಿಡುವಿನ ವೇಳೆ ಇತರ ಕೌಶಲ್ಯಗಳಲ್ಲಿ ತೊಡಗಿದ್ದು ಸಂಗೀತ ಕಲೆಗಳನ್ನು ಕಲಿತು ಮೈಗೂಡಿಸಿಕೊಂಡಿರುವ ಅವರ ಕಲೆ ವಿಶೇಷವಾದದ್ದು. ಒಟ್ಟಾರೆಯಾಗಿ ಪಾಂಚಾಳ ಕಲಾವಿದರು ಶ್ರೀಕೃಷ್ಣಪಾರಿಜಾತ ಬಯಲಾಟಗಳಲ್ಲದೆ. ಇತರೆ ಕಲೆಗಳಲ್ಲಿಯೂ ಜ್ಞಾನದ ಅರಿವಿನಿಂದ ಜನಪದ ಪ್ರದರ್ಶನ ಕಲೆಗಳಲ್ಲಿ ಪಾಂಚಾಳರು ಭಾಗಿಯಾಗಿರುವುದನ್ನು ಸಂಶೋಧನೆಯ ಮೂಲಕ ಪ್ರಬಂಧದಲ್ಲಿ ಕಟ್ಟಿಕೊಡಲಾಗಿದೆ.

ಈ ಮಹಾಪ್ರಬಂಧದ ಅಧ್ಯಯನದ ದೃಷ್ಟಿಯಿಂದ ಶ್ರೀಕೃಷ್ಣಪಾರಿಜಾತದ ಸಾಹಿತ್ಯ ಹಾಗೂ ಪಂಚಾಳ ಕಲಾವಿದರ ಸಾಹಿತ್ಯ ಮತ್ತು ಅವರ ಕಲೆಗಳನ್ನು ವಿಭಾಗ ಮಾಡಿಕೊಂಡು ಸಂಶೋಧನೆಗೆ ಒಳಪಡಿಸಲಾಗಿದೆ. ಅಂತಹ ಜನಪದ ಸಾಹಿತ್ಯದಲ್ಲಿ ಪಾಂಚಾಳ ಜ್ಞಾನ ಕೌಶಲ್ಯದ ಭಾಗವು ಶ್ರಮದಾಯಕದಿಂದ ಬಂದಿರುವುದು. ಸದಾ ಲವಲವಿಕೆಯಿಂದಿರುವ ಸಮುದಾಯದ ಜನರು

ಶ್ರಮಜೀವಿಗಳು. ಅದಕ್ಕಾಗಿ ಜನಪದರ ಎಲ್ಲ ರಂಗಗಳಲ್ಲಿ ಭಾಗಿಯಾಗಿರುವುದು ವಿಶೇಷ. ಪಾಂಚಾಳರು ಜಾತಿಭೇದ ಮಾಡದೇ ಸರ್ವಧರ್ಮ ಸಮನ್ವಯಕಾರಾದವರು. ವಿಶ್ವಕರ್ಮ ಸಮುದಾಯವದವರು ಕೆಲವರ ತುಳಿತಕ್ಕೊಳಗಾಗಿ ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ, ಹಿಂದುಳಿದಿದ್ದಾರೆ. ಪ್ರಸ್ತುತ ಅವರ ಜನಪದ ಸಾಂಸ್ಕೃತಿಕ ಕಲೆಗಳನ್ನು ಅಧ್ಯಯನ ಮಾಡುವುದರ ಜೊತೆಗೆ ಅವರ ಸ್ಥಿತಿಗತಿಗಳ ಅಧ್ಯಯನ ಪಾಂಚಾಳ ಕಲಾವಿದರ ಸಮಕಾಲೀನ ಸಂದರ್ಭದ ಸಂಶೋಧನಾ ಲೇಖನದಲ್ಲಿ ತಿಳಿಸಲಾಗಿದೆ.

ನನ್ನ ಸಂಶೋಧನಾ ಮಹಾಪ್ರಬಂಧದಲ್ಲಿ ನಮಗೆ ದೊರೆತ ಸಾಕಷ್ಟು ವಿಷಯ ವಿವರಣೆ ನೀಡಲಾಗಿದೆ. ಇದು ಮುಂದಿನ ವಿವರಣಾತ್ಮಕ ಅಧ್ಯಯನಕ್ಕೆ ಸಹಕಾರಿಯಾಗಿದೆ. ಪಾರಿಜಾತದಲ್ಲಿ ಹಾಗೂ ಇತರ ಜನಪದ ಕಲೆಗಳಲ್ಲಿ ಸಾಕಷ್ಟು ಕಲಾವಿದರು ನಾಡಿನ ತುಂಬಾ ಇರುವರು. ಎಲೆಮರೆಯ ಕಾಯಿಯಂತೆ ತಮ್ಮ ಸೃಜನಶೀಲ ಪ್ರತಿಭೆಯನ್ನು ಹೊಸತನ್ನು ಸೃಷ್ಟಿಸಿ ಮಣ್ಣಲ್ಲಿ ಮರೆಯಾಗಿದ್ದಾರೆ. ಈಗಲೂ ಕೆಲವರ ಪ್ರತಿಭೆಗಳ ಹೊರತರಬೇಕಾಗಿದೆ. ಅವರ ಸಾಧನೆಗಳ ಬಗ್ಗೆ ಸಮಗ್ರವಾಗಿ ವಿವರವಾದ ಅಧ್ಯಯನ ನಡೆಯಬೇಕಾಗಿದೆ. ಅದರ ಅಗತ್ಯವು ಇದೆ.

ಮನೆ ಬೆಳಕಾಗುವ ದೀಪದ ಬುಡದಲ್ಲಿ ಕತ್ತಲೆ ಇರುವಂತೆ ಪಾಂಚಾಳ ಸಮುದಾಯವು ಹಿಂದುಳಿದಿದೆ. ತಮ್ಮ ಬದುಕಿನಲ್ಲಿಯೇ ಜನಪದ ಹುಟ್ಟಿ ಬೆಳೆದಿರುವದು. ಸಮಾಜಕ್ಕಾಗಿ ನಾಡು ದೇಶದ ಬದುಕನ್ನು ಶ್ರೀಮಂತಗೊಳಿಸಿದವರು. ಈ ಪಾಂಚಾಳ ಸಮುದಾಯವು ಶ್ರೀಕೃಷ್ಣಪಾರಿಜಾತದಂತ ಅನೇಕ ಕಲೆಗಳಲ್ಲಿ ಶ್ರಮಿಸುತ್ತಿರುವರು. ಆದರೆ ಇಂದು ಬಡತನದಲ್ಲಿ ನರಳುತ್ತಿರುವ ಈ ವಿಶ್ವಕರ್ಮ ಸಮುದಾಯದ ಅಂತರಾಳದ ನೋವನ್ನು ಇಲ್ಲಿ ಸಮಕಾಲೀನ ಸಂದರ್ಭದ ಸಂಶೋಧನ ಲೇಖನದಲ್ಲಿ ಕಟ್ಟಿಕೊಡಲಾಗಿದೆ. ಪ್ರಸ್ತುತ ಪಾಂಚಾಳರ ಸ್ಥಿತಿಗತಿಗಳು ಹದಗೆಟ್ಟರು ಅವರ ಪ್ರತಿಭೆಗೆ ಮುಪ್ಪಾದರೆ ಎಂಬುದನ್ನು ಅವರ ಸಾಧನೆಗಳ ಮೂಲಕ ನೋಡಿದಾಗ ಮನವರಿಕೆಯಾದರೂ, ಎಲ್ಲರೂ ಒಂದಾಗಿ ತಮ್ಮ ದುಃಸ್ಥಿತಿಗೆ ಕಾರಣಗಳನ್ನು ತಿಳಿದುಕೊಂಡು ತಮ್ಮ ಹೊಲಗಳನ್ನು ಮರೆತು. ಈಗಿನ ಸ್ಪರ್ಧಾತ್ಮಕ ಯುಗದಲ್ಲಿ ಅವಶ್ಯಕವಿರುವ ಆಧುನಿಕ ಶಿಕ್ಷಣವನ್ನು ಪಡೆದು ತಮ್ಮ ಪ್ರತಿಭೆಗಳನ್ನು ಮೈಗೂಡಿಸಿಕೊಳ್ಳುವ ಪ್ರಯತ್ನ ಮಾಡಬೇಕಾಗಿದೆ.

ಪಾಂಚಾಳ ಸಮುದಾಯದ ಬಹುಮುಖ್ಯ ಗುಣವೇ ಹೆಚ್ಚು ಸೃಜನಶೀಲತೆಯನ್ನು ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು, ಚಲನಶೀಲತೆಯನ್ನು ಹೊಂದಿರುವುದು. ವಿಶಾಲ ಲೋಕದೃಷ್ಟಿ ಈ ಸಮುದಾಯಕ್ಕಿದೆ. ಈ ಲೋಕದೃಷ್ಟಿ ಪ್ರಭುತ್ವ ಮತ್ತು ಜನರ ಆಲೋಚನೆ ದೃಷ್ಟಿಯನ್ನು ಪ್ರಭಾವಿಸಿದೆ. ದೇವಾಲಯ, ಅರಮನೆ, ಶಾಸ್ತ್ರಗಾರ, ನಾಣ್ಯ ಮುದ್ರಣದಂತಹ ವಾಸ್ತು ತಾಂತ್ರಿಕತೆಯಿಂದ ಹಿಡಿದು ಗ್ರಾಮ ದೇವತೆಗಳ ನಿರ್ಮಾಣ ಪೂಜೆ, ಮಂತ್ರ-ತಂತ್ರ, ಶಕುನ, ಜ್ಯೋತಿಷ್ಯ ಮುಂತಾದ ತಾಂತ್ರಿಕ ಹಾಗೂ ಲೋಕದ ನಂಟುಗಳನ್ನು ಹೊಂದಿದ್ದು ವಿಶೇಷ.

"ಶ್ರೀಕೃಷ್ಣಪಾರಿಜಾತದಲ್ಲಿ ಪಾಂಚಾಳರ ಪ್ರಾತಿನಿಧ್ಯ : ತಾತ್ವಿಕ ವಿವೇಚನೆ" ಎಂಬ ಸಂಶೋಧನಾ ಮಹಾಪ್ರಬಂಧದಲ್ಲಿ ಪಾಂಚಾಳರು ಜನ್ಮತಃ ಪ್ರತಿಭಾವಂತ ಸರ್ವಧರ್ಮ ಪಾಲಕರು. ಸರ್ವರಿಗೂ ಒಳಿತನ್ನು ಮಾಡುವವರು. ಯಾವುದೇ ಫಲಾಪೇಕ್ಷೆ ಬಯಸದೆ ಸೃಜಿಸಿದ ಪಂಚಶೀಲಗಳೆ ಆಧಾರ. ಅವರ ಕೊಡುಗೆ ಜನಪದಕ್ಕೆ ಅಮೂಲ್ಯವಾದದ್ದು. ಆದ್ದರಿಂದ ಇತ್ತೀಚಿನ ದಿನಗಳಲ್ಲಿ ಪಾಂಚಾಳ ಸಮುದಾಯದ ಬಗ್ಗೆ ಅಧ್ಯಯನಗಳು ನಡೆದಿವೆ. ಆ ಮೂಲಕ ಅದುರಿನಲ್ಲಿರುವ ಚಿನ್ನವನ್ನು ಹೊರತೆಗೆಯುವ ಕಾರ್ಯ ನಡೆದಿದೆ. ಉನ್ನತವಾದ ಮೌಲ್ಯವನ್ನು ಹೊಂದಿದ ಸಮಾಜದಲ್ಲಿ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ವಿಶ್ವಕರ್ಮರಿಗೆ ಕಾರಣಾಂತರಗಳಿಂದ ಆದರ, ಪ್ರೀತಿ ಮುಸುಕು ಕವಿದಿದೆ. ಅದನ್ನ ತೆಗೆದು ಅದರ ನಿಜವಾದ ಅಸ್ತಿತ್ವವನ್ನು ಈ ನನ್ನ ಸಂಶೋಧನಾ ಮಹಾಪ್ರಬಂಧದಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದೇನೆ.

ಫಲಿತಗಳು :

ಉತ್ತರ ಕರ್ನಾಟಕ ಭಾಗದಲ್ಲಿ ತುಂಬ ಜನಪ್ರಿಯವಾದ 'ಶ್ರೀಕೃಷ್ಣಪಾರಿಜಾತದಲ್ಲಿ ಪಾಂಚಾಳರ ಪ್ರಾತಿನಿಧ್ಯ : ತಾತ್ವಿಕ ವಿವೇಚನೆ' ಎಂಬ ಸಂಶೋಧನಾ ಮಹಾಪ್ರಬಂಧದಲ್ಲಿ ವ್ಯಕ್ತವಾದ ಫಲಿತಾಂಶಗಳನ್ನು ವರ್ಣಿಸಿ ಹೇಳುವುದು ಸಮರೂಪದ ಗುರಿ.

೧. ಬಯಾಲಾಟಗಳಲ್ಲಿ ಎಲ್ಲಾ ಸಮುದಾಯಕ್ಕಿಂತ ಪಾಂಚಾಳರು ಹೆಚ್ಚು ಸಂಗೀತ ಕಲೆಗಳಲ್ಲಿ ಭಾಗವಹಿಸಿರುವುದು ವಿಶೇಷ.

೨. ಉತ್ತರ ಕರ್ನಾಟಕದ ವಿಶಿಷ್ಟ ಜನಪದ ಕಲೆಯಾದ ಪಾರಿಜಾತದ ಒಂದು ಸ್ಪಷ್ಟ ಚಿತ್ರ ಕಣ್ಣಮುಂದೆ ಬರುವುದು. ಕನ್ನಡ ಪಾರಿಜಾತಕ್ಕೆ ಮೂಲ ಪ್ರೇರಣೆ ತೆಲುಗಿನ ಯಕ್ಷಗಾನ ಮತ್ತು ಕುಚುಪುಡಿಗಳು

೩. ಡಾ.ಶ್ರೀರಾಮ ಇಟ್ಟಣ್ಣನವರ ಶ್ರೀಕೃಷ್ಣಪಾರಿಜಾತ ಸಂಶೋಧನಾ ಪ್ರಬಂಧದಲ್ಲಿ ಶ್ರೀಕೃಷ್ಣನನ್ನು ರಂಗದ ಮೇಲೆ ತಂದ ಪರಿಯನ್ನು ತಿಳಿಸುತ್ತಾರೆ. ಆದರೆ ನನ್ನ ಪ್ರಬಂಧದಲ್ಲಿ ಪಾರಿಜಾತದ ಎಲ್ಲಾ ಪಾತ್ರಗಳಲ್ಲಿ ಪಾಂಚಾಳ ಕಲಾವಿದರು ಪಾತ್ರಕ್ಕೆ ಜೀವ ತುಂಬಿದ್ದನ್ನು ಸಂಶೋಧಿಸಲಾಗಿದೆ.

೪. ಅಪರಾಳ ತಮ್ಮಣ್ಣನ ಪಾರಿಜಾತ ಒಂದು ಕೀರ್ತನ ಕಾವ್ಯ ಅಥವಾ ಗೀತರೂಪಕದ್ದು ಎಂಬುದನ್ನು ನಿರ್ಣಯಿಸಲಾಗಿದೆ.

೫. ಕುಲಗೋಡ ತಮ್ಮಣ್ಣ ಕಲಾವಿದನಾಗಿದ್ದ. ಸ್ವತಃ ಅವನೆ ಬರೆದನು ಎನ್ನಲಾದ ಒಂದು ಕೃತಿ ದೊರೆತಿದ್ದು ಎಂಬುದು ಡಾ. ಶ್ರೀರಾಮ ಇಟ್ಟಣ್ಣವರ ಅಭಿಪ್ರಾಯಕ್ಕೆ ಸರಿಹೊಂದಿ ಮುಂದಿನ ಪಾರಿಜಾತ ಬೆಳವಣಿಗೆಗೆ ಪಾಂಚಾಳರು ಪ್ರಮುಖ ಪಾತ್ರ ವಹಿಸಿದ್ದರ ಮೇಲೆ ಬೆಳಕು ಚೆಲ್ಲುತ್ತದೆ.

೬. ವಿಶ್ವಕರ್ಮ ಸಮುದಾಯ ಸಾಂಸ್ಕೃತಿಕ ಅಧ್ಯಯನ ಕಲಾವಿದರ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ರೂಪಿಸುವಲ್ಲಿ ಪಾಂಚಾಳರ ಪಾತ್ರ ಅತಿಮುಖ್ಯ.

ಆದರೆ ಕನ್ನಡ ಅಕಾಡೆಮಿಕ್ ಚಿಂತನೆಗಳು ಬಯಲಾಟ, ಕೃಷ್ಣಪಾರಿಜಾತದಲ್ಲಿ ಪಾಂಚಾಳರ ತಾತ್ವಿಕ ಚಿಂತನೆಗಳನ್ನು ಇಲ್ಲಿಯವರೆಗೆ ಗಂಭಿರ ಸ್ವರೂಪವಾಗಿ ಪರಿಗಣಿಸಿಲ್ಲ. ಈ ಪ್ರಬಂಧದಲ್ಲಿ ತೋರಿಸಲಾಗಿದೆ.

೭. ಡಾ. ಎಂ.ಎಸ್. ಸುಂಕಾಪುರ ಅವರು ಕುಲಗೋಡು ತಮ್ಮಣ್ಣನ ಕೃತಿ ಎಂದು ಹೇಳಿದರೆ ಶ್ರೀರಾಮನ ಇಟ್ಟಣ್ಣವರು 'ಕುಲಗೋಡ ಸಂಪ್ರದಾಯದ ಪಾರಿಜಾತ' ಎಂದು ತಿಳಿಯುತ್ತಾರೆ. ಆದರೆ ಇದು ಎರಡನ್ನು ಹೊರತುಪಡಿಸಿ ಪಾಂಚಾಳರ ಪಾರಿಜಾತ ಎಂದೇ ಹೇಳುವುದು ಸೂಕ್ತವಾದೀತು.

೮. ಒಂದು ಜನಪದ ಬಯಲಾಟ ಸಾಮೂಹಿಕ ಸೃಷ್ಟಿಯಾಗಿ, ರೂಪತಾಳಿ ಜನ ಸಮುದಾಯದಿಂದಲೇ ಬೆಳವಣಿಗೆ ಪಡೆಯುತ್ತ ಬಂದಿರುವುದನ್ನು ಈ ಪ್ರಬಂಧದ ಉದ್ದಕ್ಕೂ ನಿರೂಪಿಸಲಾಗಿದೆ. ಪಾಂಚಾಳರಿಗೂ ಮತ್ತು ಜನಪದ ಜಗತ್ತಿಗೂ ನಿಕಟ ಸಂಬಂಧವಿದೆ. ಜನಪದ ಗೀತ, ವಾದ್ಯ, ಪ್ರದರ್ಶನ, ಕುಣಿತ ಪ್ರಧಾನ ಕಲೆಗಳಲ್ಲಿ ಪಾಂಚಾಳ ಪ್ರಾತಿನಿಧ್ಯ ಪ್ರಮುಖವಾಗಿದೆ.

೯. ಶ್ರೀಕೃಷ್ಣಪಾರಿಜಾತ ಅಪ್ಪಟ ಜಾನಪದವಾಗಿದ್ದು, ಅದನ್ನು ಜನಪದಕಲೆಗಳು ಒಂದಿಗೆ ಇಲ್ಲಿಯವರೆಗೆ ಗುರುತಿಸಿದವರು ಡಾ.ವೀರೇಶ ಬಡಿಗೇರ, ಡಾ.ಅಶೋಕ ನರೋಡೆ ಶಿವಾನಂದ ಶೆಲ್ಲಿಕೇರಿ ಪ್ರಮುಖರು.

೧೦. ಪಾಂಚಾಳರ ಶ್ರೀಕೃಷ್ಣಪಾರಿಜಾತ ಕಲಾವಿದರ ಒಬ್ಬೊಬ್ಬ ವ್ಯಕ್ತಿಯ ಪ್ರಭಾವ ಜನಪದ ಸಾಹಿತ್ಯ ಅಧ್ಯಯನಕ್ಕೆ ವಿಶೇಷ ಒತ್ತು ನೀಡಿದೆ.

೧೧. ಪಾಂಚಾಳ ಸಮುದಾಯದ ಕುಲಕಸುಬುಗಳಲ್ಲಿ ಕರಕುಶಲತೆ ಮತ್ತು ಕೌಶಲ್ಯಗಳು ವಿಶೇಷವಾದದ್ದು. ಬಡಿಗತನ ವೃತ್ತಿಯಲ್ಲಿ ಸೂಕ್ಷ್ಮವಾದ ಕೆತ್ತನೆ, ಕುಂಟಿ, ಕೂರಿಗೆ, ಗೃಹಬಳಕೆಯ ಬಾಗಿಲು, ಕಿಡಕಿ ಮೊದಲಾದ ಕೆಲಸಗಳಲ್ಲಿ ಸೂಕ್ಷ್ಮತೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧೨. ತಿಂಥಣಿ ಮೌನೇಶ್ವರರು, ಬಡಿಗ-ಕಮ್ಮಾರರು ಸೃಷ್ಟಿಗಧಿಕರ್ತಕರು. ಬಡಿದು ಬತ್ತೀಸ ಆಯುಧವ ಮಾಡಿಕೊಡುವರು. ಬಸವಣ್ಣ ಎನ್ನುವಲ್ಲಿ ಉಪಕರಣ ಸಂಸ್ಕೃತಿಯ ಖಚಿತ ಬೆಳವಣಿಗೆಗೆ ಪಾಂಚಾಳರು ಕಾರಣ ಈ ಮೂಲಕ ಉಪಕರಣ ಮತ್ತು ಉದ್ಯೋಗ ಸೃಷ್ಟಿಯ ಮೂಲ ಪುರುಷರು ಪಾಂಚಾಳರು ಎಂಬುದನ್ನು ತಿಳಿಯಬಹುದು.

೧೩. ವೈದಿಕ ಪರಂಪರೆಯಲ್ಲಿ ಹಿರಿಯರ ಹಾಗೂ ದ್ರಾವಿಡ ದೇವರ ಪರಿಕಲ್ಪನೆಯು ಹೌದು. ಪೂಜಾ ವಿಧಾನಗಳಲ್ಲಿ ಬ್ರಹ್ಮಚಾರಿಗಿಂತ ಭಿನ್ನವಾಗಿ ಜೀವಪರ ಆಧ್ಯಾತ್ಮಿಕ, ಭಕ್ತಿ, ಗೌರವ, ಕಾಯಕದ, ಮೇಲೆ ನಂಬಿಕೆ ಇಟ್ಟವರು.

೧೪. ಪಾಂಚಾಳ ಸಮುದಾಯವು ಉಪಕರಣ ಸಂಸ್ಕೃತಿಯಾಗಿ ಕಚ್ಚಾ ಸಾಮಗ್ರಿಗಳ ಜೊತೆಗೆ ಸಂಬಂಧಪಡೆದ ಕಚ್ಚಾ ಸಾಮಗ್ರಿಗಳನ್ನು ಅಗತ್ಯ ವಸ್ತುಗಳಾಗಿ ಪರಿವರ್ತಿಸುವ ಸೃಜನಶೀಲ ಹಾಗೂ ಪರಿಣಿತ ಸಮುದಾಯವನ್ನಾಗಿ ಚಿತ್ರಿಸಲಾಗಿದೆ. ಬೇಸಾಯವು ನೆಲ-ನೀರುಗಳ ಜೊತೆ ಹೇಗೆ

ಸಂಬಂಧ ಹೊಂದಿದೆಯೋ ಪಾಂಚಾಳ ವೃತ್ತಿಗರು ಹೀಗೆ ಉಪಕರಣ ಸಂಸ್ಕೃತಿಯೊಂದಿಗೆ ಪರಸ್ಪರ ಪೂರಕ ಸಂಬಂಧ ಹೊಂದಿದ್ದಾರೆ. ಜ್ಞಾನ–ಕೌಶಲ್ಯದ ಭಾಗ ಪ್ರಮುಖವಾದುದು.

೧೫. ಪಾಂಚಾಳರು ಜನಪದ ಕಲೆಗಳಲ್ಲಿ ಕೃಷ್ಣ ಪಾರಿಜಾತದಲ್ಲಿ ಹಿಮ್ಮೇಳ–ಮುಮ್ಮೇಳ ಪಾತ್ರಧಾರಿಗಳಾಗಿ, ಸಂಘಟಕರಾಗಿ ನಿರ್ವಹಿಸಿದ ಪಾತ್ರ ಪ್ರಮುಖವಾದುದ್ದೆಂದು ಈ ಪ್ರಬಂಧದಲ್ಲಿ ತಿಳಿಸಲಾಗಿದೆ.

ಮುಂದಿರುವ ಸಾಧ್ಯತೆಗಳು

೧. ಅಧ್ಯಾಯ ಎರಡರಲ್ಲಿ ಭೌಗೋಳಿಕ ಪರಿಸರದ ಮಾಹಿತಿ ಹಾಗೂ ಮೂರು ಜಿಲ್ಲೆಗಳಾದ (ಬಾಗಲಕೋಟ, ವಿಜಯಪು, ಬೆಳಗಾವಿ) ಕ್ಷೇತ್ರದ ಜನಜೀವನ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು ತಿಳಿಸಲಾಗಿದೆ. ಈ ಕ್ಷೇತ್ರಗಳು ಉತ್ತರ ಕರ್ನಾಟಕದ ಬಯಲು ಸೀಮೆಯಲ್ಲಿರುವದರಿಂದ ಮಳೆಗಾಲದಲ್ಲಿ ಮಾತ್ರ ಸುಗ್ಗಿಯಲ್ಲಿ ತೊಡಗುವರು. ಇನ್ನುಳಿದ ಸಮಯ ಬಯಲಾಟದಂತಹ ಮನರಂಜನೆ ಜನಪದ ಕಲೆಗಳಲ್ಲಿ ಭಾಗವಹಿಸುವರು ಅವರ ಕಲೆಗಳು ಮುಳುಗುತ್ತಿರುವ ಬಗ್ಗೆ ಅಧ್ಯಯನ ನಡೆಯಬೇಕಾಗಿದೆ.

೨. ಅಧ್ಯಾಯ ಮೂರರಲ್ಲಿ ಕೃಷ್ಣಾ ನದೀ ತೀರದ ಎಡ ಬಲದಂಡೆಗುಂಡ ಶ್ರೀಕೃಷ್ಣ ಪಾರಿಜಾತ ಹಬ್ಬಿರುವುದು ಈ ಪರಿಸರದಲ್ಲಿ ಪಾಂಚಾಳ ಕಲಾವಿದರನ್ನು ಗುರುತಿಸಿದ್ದು ಇನ್ನುಳಿದ ಸಮುದಾಯದ ಕಲಾವಿದರನ್ನು ಗುರುತಿಸುವ ಕಾರ್ಯ ನಡೆಯಬೇಕಾಗಿದೆ.

೩. ಪಾಂಚಾಳ (ಬಡಿಗ, ಶಿಲ್ಪಿಗಾರ, ಕಂಬಾರ, ಪತ್ತಾರ, ಕಂಚುಕುಟಿಗಾರ)ಕಲಾವಿದರು ಕುಲಕಸಬುಗಳ ಜೊತೆಗೆ ಅವರ ಕೌಶಲ್ಯತೆಗಳನ್ನು ಗುರುತಿಸಿದ್ದು ಇನ್ನೂ ಎಲೆಯಮರೆಯಂತೆ ಇರುವ ಸಾಕಷ್ಟು ಪಾಂಚಾಳ ಕಲಾವಿದರನ್ನು ಗುರುತಿಸುವ ಕಾರ್ಯ ನಡೆಯಬೇಕಾಗಿದೆ.

೪. ಶ್ರೀಕೃಷ್ಣ ಪಾರಿಜಾತದ ಕಲೆ ಮತ್ತು ಅದರ ಪರಿಕರಗಳ ಬಗ್ಗೆ ಆಸಕ್ತಿ ತೋರಿಸಲಾಗಿದೆ. ಹಿಮ್ಮೇಳ, ಮುಮ್ಮೇಳ ಕಲಾವಿದರು ಇಂತಹ ಬಯಲಾಟಕ್ಕೆ ಜೀವ ತುಂಬಿರುವುದು ವಿಶೇಷ, ಅಂತಹ ಕಲಾವಿದರನ್ನು ಗುರುತಿಸುವ ಕೆಲಸ ಆಗಬೇಕಾಗಿದೆ.

೫. ಉತ್ತರ ಕರ್ನಾಟಕದ ಎಲ್ಲ ಸಮುದಾಯದ ಶ್ರೀ ಕೃಷ್ಣ ಪಾರಿಜಾತದ ಕಲಾವಿದರಿಗೆ ಗೌರವ ಮಾಶಾಸನಗಳು ಸಿಗುವಂತಾಗಬೇಕು ಅಥವಾ ಸಂಘಸಂಸ್ಥೆಗಳು ಗುರುತಿಸಬೇಕು.

೬. ಶ್ರೀ ಕೃಷ್ಣ ಪಾರಿಜಾತಕ್ಕೆ ತೆಲುಗಿನ ಯಕ್ಷಗಾನ ಮತ್ತು ಕುಚುಪುಡಿಗಳು ಮೂಲ ಪ್ರೇರಣೆಗಳಾದರೂ ಕನ್ನಡದಲ್ಲಿ ಕುಲಗೋಡ ತಮ್ಮಣ್ಣನಿಂದ ಸ್ವತಂತ್ರ ಅಸ್ತಿತ್ವ ಪಡೆದುಕೊಂಡಿದೆ. ಇದರ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆಯಬೇಕಾಗಿದೆ.

೭. ಶ್ರೀ ಕೃಷ್ಣ ಪಾರಿಜಾತದಲ್ಲಿ ಭಾಗಿಯಾದ ಎಲ್ಲ ಸಮುದಾಯಗಳನ್ನು ಕುರಿತು ಸಮಗ್ರ ಸಂಶೋಧನೆಗಳು ನಡೆಯಬೇಕಿದೆ. ಉತ್ತರ ಕರ್ನಾಟಕದ ಕಲೆಗಳ ಬಗ್ಗೆ ನಿರ್ಲಕ್ಷಿಸಲಾಗಿದೆ. ಆದ್ದರಿಂದ ಹೆಚ್ಚಿನ ಸಂಶೋಧನೆಗಳು ಆಗಬೇಕು.

೮. ವಿಶೇಷವಾಗಿ ಪಾಂಚಾಳರ ಜ್ಞಾನ ಮತ್ತು ಕೌಶಲ್ಯವು ಪಾರಿಜಾತದಂತಹ ನಾಟಗಳಲ್ಲಿ ತೊಡಗಿಸಿಕೊಂಡಿರುವುದು ವಿಶೇಷ.

೯. ಪಾಂಚಾಳರು ಸಮಗ್ರ ಜಾನಪದ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಬಗ್ಗೆ ಸಂಶೋಧನೆಗಳು ಆಗಬೇಕಾಗಿದೆ.

೧೦. ಪಾಂಚಾಳರು ಜಾನಪದದಲ್ಲಿ ಬರುವ ಹಾಡು, ಕುಣಿತ, ವಾಧ್ಯ, ನಾದೋಪಷಕರಾಗಿ ಹಾಗೂ ಪರಿಕರಗಳ ತಯಾರಿಕೆಯಂತಹ ಕೌಶಲ್ಯಗಳನ್ನು ಗುರುತಿಸಿರುವೆ. ಇನ್ನೂ ಹೆಚ್ಚಿಗೆ ಇದರ ಬಗ್ಗೆ ಅಧ್ಯಯನಗಳು ನಡೆಯಬೇಕಾಗಿವೆ.

ಪರಾಮರ್ಶನ ಗ್ರಂಥಗಳು

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು

೧. ಅರ್ಕಸಾಲಿ ವೃಷಭೇಂದ್ರಚಾರ್. ೨೦೧೦ ಮಳೆರಾಜಪರಂಪರೆ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೨. ಅಂಗಡಿ ಎಸ್.ಎಸ್.–೨೦೧೦ 'ಶಂಭಾಜೋಶಿ ಭಾಷಿಕ ವಿವೇಚನೆ' ಸತ್ಯಶ್ರೀ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್ ಕಸ್ತೂರಿಬಾ ನಗರ ಬೆಂಗಳೂರು.

೩. ಅಂಗಡಿ ಎಸ್.ಎಸ್–೧೯೯೯ 'ಬಡಿಗ ವೃತ್ತಿ ಪದ ಮಂಜೂರು' ವಿದ್ಯಾನಿಧಿ ಪ್ರಕಾಶನ, ಗದಗ.

೪. ಅಂಗಡಿ ಎಸ್.ಎಸ್.–೨೦೧೭ 'ಕನ್ನಡ ಜನಪದ ಸಾಹಿತ್ಯ' ಪ್ರಿಯದರ್ಶಿನಿ ಪ್ರಕಾಶನ ಹಂಪಿ ನಗರ, ಬೆಂಗಳೂರು.

೫. ಅಂಗಡಿ ಎಸ್.ಎಸ್. –೨೦೧೪ 'ಬಲವಂತ–ಬಸವಂತ' ಗೀತ ರೂಪಕದ ಅಧ್ಯಯನ

೬. ಅ.ನ.ಕೃ, ೧೯೫೯, 'ಭಾರತೀಯ ಕಲಾದರ್ಶನ' ಸಂಗೀತ ನಾಟಕ ಅಕಾಡೆಮಿ ಬೆಂಗಳೂರು ಹಂಪಿ.

೭. ಅ.ನ.ಕೃ., ೧೯೬೨, 'ಭಾರತೀಯ ಸಂಸ್ಕೃತಿಯ ದರ್ಶನ', ಸಾಹಿತ್ಯ ಸಂಸ್ಕೃತಿ ಇಲಾಖೆ ಮೈಸೂರು.

೮. ಅರಿಕೇರಿ ಪಾ.ವಿ., ೨೦೧೫, 'ಜನಿವಾರ ವಿಶ್ವಕರ್ಮ ಸಮಾಜ', ವಿಕಾಸ ಸಂಸ್ಥೆ ತಿಂಥಿಣಿ, ಬೆಂಗಳೂರು.

೯. ಅಶೋಕ ನರೋಡೆ, ೨೦೧೦ 'ಜನಪದ ಜಗತ್ತು' ನಿವೇದಿತ ಪ್ರಕಾಶನ ಬೆಂಗಳೂರು.

೧೦. ಅಶೋಕ ನರೋಡೆ, ೨೦೧೫, 'ಕೌಜಲಗಿ ನಿಂಗಮ್ಮ' ಸಚಿನ್ ಪಬ್ಲಿಕೇಷನ್ ಬೆಂಗಳೂರು.

೧೧. ಅಶ್ವಥ್ ವಿ.ಎಸ್, ೧೯೯೬, 'ಶ್ರೀಕೃಷ್ಣ ಸಂಪಾದನಾ ಪರಿಷ್ಕೃತ ಆವೃತ್ತಿ ಸಾಮಾಜಿಕ ನಾಟಕ' ಕವಿತಾ ಪ್ರಕಾಶನ ಸಪ್ತಗಿರಿ ನಿಲಯ ಧಾರವಾಡ.

೧೨. ಅಕ್ಷರ ಕೆ.ವಿ., ೧೯೭೬, 'ಕರ್ನಾಟಕ ರಂಗಭೂಮಿ', ಕರ್ನಾಟಕ ಸಾಹಿತ್ಯ ಪರಿಷತ್ತು ಬೆಂಗಳೂರು.

೧೩. ಆಚಾರ್ಯ ಎನ್.ಎಂ., ೨೦೧೨, 'ಮಹಾವಿಶ್ವಕರ್ಮ ಪುರಾಣ', ಗುರುಕುಲ ಪ್ರಕಾಶನ, ಬೆಂಗಳೂರು.

೧೪. ಆದ್ಯರಂಗಾಚಾರ್ಯ, ೧೯೭೭, 'ಭಾರತೀಯ ರಂಗಭೂಮಿ', ನ್ಯಾಶನಲ್ ಬುಕ್ ಟ್ರಸ್ಟ್ ಇಂಡಿಯ.

೧೫. ಆಚಾರ್ಯ ಕೆ.ವಿ., ೧೯೭೬, 'ಕರ್ನಾಟಕ ರಂಗಭೂಮಿ', ಕರ್ನಾಟಕ ಸಾಹಿತ್ಯ ಪರಿಷತ್ ಬೆಂಗಳೂರು.

೧೬. ಇಮ್ರಾಪುರ ಎಸ್.ಜಿ.-೨೦೦೮ 'ಅಕ್ಕಸಾಲಿ' ಜಾನಪದ ಸಾಹಿತ್ಯ ದರ್ಶನ ಭಾಗ-೭ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
೧೭. ಈರಣ್ಣ ಕೆ.ಪಿ. ಕಡ್ಲಿಕೊಪ್ಪ, ೨೦೦೬, 'ವಿಶ್ವಕರ್ಮ ವಚನಕಾರರು', ಶ್ರೀಭುವನೇಶ್ವರಿ ಸಾಹಿತ್ಯ ಪ್ರಕಾಶನ ಶಿರಹಟ್ಟಿ
೧೮. ಈರಣ್ಣ,ಕೆ.ಪಿ, ೧೯೮೫ 'ತಿಂತಿಣಿ ಮೌನೇಶ್ವರ ವಚನಗಳ ಸಂಗ್ರಹ', ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
೧೯. ಕರಿಗೌಡ ಬೀಚನಹಳ್ಳಿ,೨೦೦೦, 'ಕರಕುಶಲ ಕಲೆಗಳು ವಿಶ್ವಕೋಶ' ಸಂಪುಟ-೨, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೦. ಕಾರಂತ ಎಸ್.ಎಸ್.-೧೯೫೯ 'ಪುರಂದರದಾಸ ಪದಗಳು' ಲಲಿತ ಪ್ರಕಾಶನ ಹುಬ್ಬಳ್ಳಿ.
೨೦. ಕೊಟ್ರಶೆಟ್ಟಿ, ೧೯೯೪, 'ಜಾನಪದ ಸಾಹಿತ್ಯ ದರ್ಶನ', ಸಂಪಾದಕರು ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
೨೧. ಕೃಷ್ಣಶೆಟ್ಟಿ (ಸಂ), ೨೦೧೦, 'ಶ್ರೀಕೃಷ್ಣಪಾರಿಜಾತ', ಪ್ರಸಾರಾಂಗ ಕನ್ನಡವಿಶ್ವವಿದ್ಯಾಲಯ ಹಂಪಿ.
೨೨. ಕೃಷ್ಣಶರ್ಮ ಬೇಟಿಗೇರಿ, ೧೯೭೬, 'ಕನ್ನಡ ಜಾನಪದ', ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
೨೩. ಗಣೇಶ್ ಅಮೀನಗಡ, ೨೦೧೬, 'ಬಣ್ಣದ ಬದುಕಿನ ಚಿನ್ನದ ದಿನಗಳು', ಕಲಾವೈಭವ ಪ್ರಕಾಶನ, ಬೆಳಗಾವಿ.
೨೪. ಗದ್ದಿಗಿಮಠ ಬಿ.ಎಸ್., ೧೯೬೯, 'ಕನ್ನಡ ಜನಪದ ಗೀತೆಗಳು', ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
೨೫. ಗವಿಸಿದ್ದಪ್ಪ ಎಚ್. ಪಾಟೀಲ್, ೨೦೦೬, 'ರಂಗಸಿರಿ', ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ
೨೬. ಗಂಗಾಧರ ದೈವಜ್ಞ, ೨೦೦೬, 'ಸಣ್ಣಾಟಗಳು', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,ಹಂಪಿ
೨೭. ಗಿರಿಸಾಗರ ಪಿ.ವೈ., ೨೦೦೦, ಬಾಗಲಕೋಟೆ ತಾಲೂಕು ದರ್ಶನ, ಸ್ವಾಗತ ಸಮಿತಿ ಅಖಿಲ ಭಾರತ ೬೮ನೇ ಕನ್ನಡ ಸಾಹಿತ್ಯ ಸಮ್ಮೇಳನ, ಬಾಗಲಕೋಟೆ
೨೮. ಗೊರೂರು ರಾಮಸ್ವಾಮಿ ಅಯ್ಯಾಂಗಾರ್, ೨೦೦೯, 'ಹಳ್ಳಿಯ ಹಾಡುಗಳು', ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
೨೯. ಜ್ಞಾನಾನಂದ ಈ., ೧೯೯೫, 'ಕನ್ನಡ ಮಹಾಭಾರತಗಳಲ್ಲಿ ಶಿಲ್ಪ ಮತ್ತು ಶಿಲ್ಪಿ', ಸಂಸ್ಕೃತಿ ಸಾಹಿತ್ಯ ಪ್ರತಿಷ್ಠಾನ ರಾಜರಾಜೇಶ್ವರಿ ನಗರ, ಬೆಂಗಳೂರು.
೩೦. ಚಂದ್ರಶೇಖರ ಕಂಬಾರ, ೧೯೬೫ 'ಉತ್ತರ ಕರ್ನಾಟಕದ ಜನಪದ ರಂಗಭೂಮಿ' ಮನ್ವಂತರ ಪ್ರಕಾಶನ ಧಾರವಾಡ

೩೧. ಚಂದ್ರಶೇಖರ ಕಂಬಾರ,೨೦೧೦ 'ಆಧುನಿಕ ನಾಟಕಕಾರ ಮತ್ತು ಪರಂಪರೆ' ಜನಪದ ರಂಗಭೂಮಿ ಸುವರ್ಣ ಮಹೋತ್ಸವ (ಸಂ) ಬೆಳಗಾವಿ.

೩೨. ಚಂದ್ರಶೇಖರ ಕಂಬಾರ, ೧೯೮೦, 'ನಮ್ಮ ಜಾನಪದ' ಅಭಿಜಾತ ಗ್ರಂಥಮಾಲೆ, ಬೆಂಗಳೂರು.

೩೩. ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತುಕೋಟಿ (ಸಂ), ೧೯೬೬ 'ಸಂಗ್ಯಾ-ಬಾಳ್ಯಾ ನಾಟಕ', ಮನೋಹರ ಗ್ರಂಥಮಾಲೆ, ಮೈಸೂರು.

೩೪. ಚಪ್ಪರಬಂದ ಆರ್.ಆಯ್., ೨೦೦೬, 'ಬಿಜಾಪುರ ಜಿಲ್ಲೆಯ ಜಾತ್ರೆಗಳು' ಯಾಸ್ಮಿನ್ ಪ್ರಕಾಶನ ಬಿಜಾಪುರ.

೩೫. ಚನ್ನಬಸಪ್ಪ ಗೋ.ರು., ೧೯೭೭, 'ಕರ್ನಾಟಕ ಜಾನಪದ ಕಲೆಗಳು', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೬. ಚಿದಾನಂದಮೂರ್ತಿ ಎ., ೧೯೭೬, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ', ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೩೭. ಜವರೇಗೌಡ ದೇ., ೧೯೭೫ 'ಕಬ್ಬಿನ ಹಾಲು' ಕುವೆಂಪು ವಿದ್ಯಾವರ್ದಕ ಟ್ರಸ್ಟ್ ಮೈಸೂರು.

೩೮. ಜಿವಣ್ಣ ಮಸಳಿ, ೨೦೦೪ 'ಶ್ರೀಮೌನೇಶ್ವರ ತ್ರಿಪದಿಗಳು' ಶ್ರೀ ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿ ವಿದ್ಯಾನಗರ ಹುಬ್ಬಳ್ಳಿ.

೩೯. ದೀಕ್ಷಿತ್,ವ್ಹಿ.ಜಿ.,೨೦೧೧,'ಶ್ರೀಮೌನೇಶ್ವರ ವಚನಪ್ರಭೆ' ಮೂಲಸ್ತಂಭ ಸಾಹಿತ್ಯ ಪ್ರಕಾಶನ ಧಾರವಾಡ.

೪೦. ದಿಂಡೂರ ಕೆ.ಎಮ್., ೨೦೧೪ 'ವಿಜಯಪುರ ಜಿಲ್ಲೆ ಜನಪದ ಕಲಾವಿದರ ಕೊಡುಗೆ' ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೪೧. ದೀಲಿಪ್ ಕುಮಾರ್ ಚಟರ್ಜಿ, ೧೯೭೭ 'ಚೈತನ್ಯ' ನ್ಯಾಶನಲ್ ಬುಕ್ ಟ್ರಸ್ಟ್ ಇಂಡಿಯಾ

೪೨. ದುರ್ಗದಾಸ ಕೆ.ಆರ್., ೧೯೯೬ 'ಬಳ್ಳಾರಿ ಜಿಲ್ಲೆಯ ಬಯಲಾಟಗಳು' ಸುಮತಾ ಪ್ರಕಾಶನ ಬೆಳಗಾವಿ.

೪೩. ಧೂಪದ.ಎಮ್.ಟಿ. ,೨೦೧೦ 'ಕನ್ನಡ ಜನಪದ ರಂಗಭೂಮಿ' ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ.

೪೪. ಧೂಪದ.ಎಮ್.ಟಿ., ೧೯೭೧ 'ಕರ್ನಾಟಕ ಜನಪದ ರಂಗಭೂಮಿ' ಹಂಸ ಧ್ವನಿ ಪ್ರಕಾಶನ ಬೆಂಗಳೂರು.

೪೫. ದೇವೇಂದ್ರಕುಮಾರ ಹಕಾರಿ, ೨೦೦೦ 'ಗ್ರಾಮೀಣ ವೃತ್ತಿಗಳು' ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೪೬. ದೇವರಕೊಂಡಾರೆಡ್ಡಿ (ಸಂ), ೨೦೦೬ 'ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ,೯ ಬಾಗಲಕೋಟೆ ಜಿಲ್ಲೆ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೭. ತಿಪ್ಪೇರುದ್ರಸ್ವಾಮಿ,ಎಚ್, ೧೯೬೮ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ಡಿ.ವಿ.ಕೆ. ಮೂರ್ತಿ ಮೈಸೂರು

೪೮. ತಿಮ್ಮಪ್ಪಯ್ಯ ಮುಳಿಯ,೧೯೫೪ 'ಕನ್ನಡ ನಾಡೂ, ದೇಸಿ ಸಾಹಿತ್ಯವೂ' ಸಂಶೋಧನ ಸಂಸ್ಥೆ, ಧಾರವಾಡ

೪೯. ತಿಮ್ಮಾಪುರ ಎಚ್.ಆರ್.-೨೦೦೫ 'ಬಯಲಾಟ ಕಥೆಗಳು ಸಂಸ್ಕೃತಿಕ ಅಧ್ಯಯನ' ಸೂರ್ಯ ಪ್ರಕಾಶನ, ಮಲಾಡಹಳ್ಳಿ,

೫೦. ಪಂಚಮುಖಿ ಆರ್.ಎಸ್. -೧೯೫೨ 'ಕರ್ನಾಟಕದ ಹರಿದಾಸ ಸಾಹಿತ್ಯ' ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು.

೫೧. ಪಡಶೆಟ್ಟಿ ಎಂ.ಎಂ. ೧೯೯೨ 'ತಿಂಥಿಣಿ ಮೋನಪ್ಪಯ್ಯ ಒಂದು ಅಧ್ಯಯನ' ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಗದಗ.

೫೨. ಪಂಡರೀನಾಥ ಆಚಾರ್ಯ ಗಲಗಲಿ,೧೯೬೫ 'ಶ್ರೀ ವಿಷ್ಣುಪುರಾಣ' ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೩. ಪರಮಶಿವಯ್ಯ. ಜೀ.ಶಂ,೧೯೭೮ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು'

೫೪. ಪ್ರಹ್ಲಾದ ಮುದಗಲ್,೧೯೭೮ 'ಮರಾಠಿ ಶ್ರೀಕೃಷ್ಣ ಪಾರಿಜಾತ ಮತ್ತು ನಮ್ಮ ನಾಟ್ಯ ಪರಂಪರೆ'. ಬೆಳಗಾವಿ.

೫೫. ಪಾಂಡುರಂಗಬಾಬು,ಡಿ, ೨೦೦೦ 'ಪಾಂಚಾಳ ವೃತ್ತಿ ಪದಕೋಶ', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೬. ಪಾಟೀಲ್.ಎ.ಟಿ., ೧೯೫೦ 'ಪ್ರಸನ್ನ ವೆಂಕಟದಾಸರು' ಮಿಂಚಿನಬಳ್ಳಿ ಕಾರ್ಯಾಲಯ ಧಾರವಾಡ.

೫೭. ಪಾಟೀಲ ಎಚ್.ಎಸ್. -೨೦೧೨ 'ರಂಗ ಅಭಿನೇತ್ರಿ ರೆಹಮಾನವ್ವ ಕಲ್ಮನಿ' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.

೫೮. ಪುಟ್ಟಸ್ವಾಮಿ.ಬಿ., ೧೯೭೨ "ಮೈಸೂರು ರಾಜ್ಯದ ಜನಪದ ರಂಗಭೂಮಿ' ಸಂಗೀತ ನಾಟಕ ಅಕಾಡೆಮಿ ಬೆಂಗಳುರ

೫೯. ನರಸಿಂಹಾಚಾರ್.ಡಿ.ಎಲ್., ೧೯೭೦ 'ವಡ್ಡಾರಾಧನೆ' (ಆರನೇ ಮುದ್ರಣ) ಶಾರಾದಾ ಮಂದಿರ ಮೈಸೂರು.

೬೦. ನಂದಿಮಠ ಎಸ್.ಸಿ.-೧೯೭೦ 'ಕನ್ನಡ ನಾಡಿನ ಧರ್ಮಗಳು' ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೬೧. ನರಸಿಂಹಾಚಾರ್,ಡಿ.ಎಲ್,೧೯೭೩ 'ಶಬ್ದಮಣಿ ದರ್ಪಣಂ' ಶಾರಾದಾ ಮಂದಿರ ಮೈಸೂರು
೬೨. ನರಸಿಂಹಾಚಾರ್ಯ,ಆರ್.೧೯೭೪ 'ಕರ್ನಾಟಕ ಕವಿ ಚರಿತೆ' ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು.
೬೩. ನಾವಲಗಿ.ಸಿ.ಕೆ., ೨೦೦೦ 'ವಚನಸಾಹಿತ್ಯದಲ್ಲಿ ಜಾನಪದ ಅಂಶಗಳು ಒಂದು ಅಧ್ಯಯನ' ಜ್ಞಾನೋದಯ ಪ್ರಕಾಶನ, ಬೆಂಗಳೂರು.
೬೪. ನಾಯಕ ಹಾ.ಮಾ., ೧೯೭೦ 'ಕನ್ನಡ ವಿಶ್ವಕೋಶ ಸಂಪುಟ-೨', ಮೈಸೂರು ವಿಶ್ವವಿದ್ಯಾಲಯ, ಮೈಸೂರು.
೬೫. ನಾಯಕ ಹಾ.ಮಾ., ೧೯೭೪ 'ಕನ್ನಡ ಜಾನಪದ ಗ್ರಂಥ ಸೂಚಿ' ಮೈ.ವಿ.ವಿ. ಮೈಸೂರು.
೬೬. ಬಸವರಾಜ ಮಲಶೆಟ್ಟಿ,೨೦೦೬ 'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ' (ಸಂ), ಸುವರ್ಣ ಕರ್ನಾಟಕ ಸಂಸ್ಕೃತಿ ಇಲಾಖೆ
೬೭. ಬಸವರಾಜ ಮಲಶೆಟ್ಟಿ, ೨೦೦೮ 'ಉತ್ತರಕರ್ನಾಟಕದ ಬಯಲಾಟಗಳು' ಪ್ರಸಾರಂಗ ವಿಶ್ವವಿದ್ಯಾಲಯ ಧಾರವಾಡ ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್ ಕೃಷ್ಣಾಪುರ ದೊಡ್ಡಿ.
೬೮. ಬಸವರಾಜ ಕಲ್ಗುಡಿ,೨೦೧೨, 'ಕಂಬಾರರ ಸಾಹಿತ್ಯದ ನೆಲೆ-ಬೆಲೆ' ಅಂಕಿತ ಪುಸ್ತಕ ಬೆಂಗಳೂರು
೬೯. ಬಸವರಾಜ ಸಬರದ,೨೦೦೯ 'ಜನಪದ ದೈವಗಳು' ಪ್ರಸಾರಾಂಗ, ಕನ್ನಡವಿಶ್ವವಿದ್ಯಾಲಯ ಹಂಪಿ.
೭೦. ಬಸವಲಿಂಗಯ್ಯ ಹಿರೇಮಠ,೧೯೯೭ 'ಪಾರಿಜಾತ ಪರಾಮರ್ಶೆ ವಿಚಾರ ಸಂಕೀರಣ' ಭೂಷಣ ಪ್ರಕಾಶನ ಜಾನಪದ ಸಂಶೋಧನಾ ಕೇಂದ್ರ ಕಿತ್ತೂರು.
೭೧. ಬಸವರಾಜ ಕಲ್ಗುಡಿ, ೧೯೯೫, 'ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕೆ ಪ್ರಜ್ಞೆ' ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು.
೭೨. ಬಾಳಕೃಷ್ಣರಾವ್ ಕಣ್ಣೂರು, ೧೯೭೩ 'ಯಕ್ಷಗಾನ' ಪ್ರಕಾಶಕರು ಮಂಗಳೂರು.
೭೩. ಬಾಳೇಶ. ಲಕ್ಷಶೆಟ್ಟಿ-೧೯೭೮ 'ಕೌಜಲಗಿ ನಿಂಗಮ್ಮ ಅವರ ಶ್ರೀ ಕೃಷ್ಣಪಾರಿಜಾತ', ಬೆಳಗಾವಿ.
೭೪. ಭುಜೇಂದ್ರ ಮಹೇಶವಾಡಿ,೧೯೮೦ 'ಕರ್ನಾಟಕದಲ್ಲಿ ಶ್ರೀ ಕೃಷ್ಣಪಾರಿಜಾತ ಪರಂಪರೆ ಒಂದು ವಿವೇಚನೆ'.ಧಾರವಾಡ.
೭೫. ಬೋರಲಿಂಗಯ್ಯ ಹಿ.ಚಿ.-೧೯೯೬ 'ಕರ್ನಾಟಕ ಜನಪದ ಕಲೆಗಳ ಕೋಶ' ಕನ್ನಡ ವಿಶ್ವವಿದ್ಯಾಲಯ ಹಂಪಿ.
೭೬. ಮಂಜುನಾಥ.ಎಸ್.ಪಾಟೀಲ-೨೦೧೮ 'ವಿಜಾಪುರ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ ಪ್ರಕಾಶನ' ಪುಣ್ಯ ಎಜುಕೇಶನ್ ಫೌಂಡೇಶನ್ ಬೆಳಗಾವಿ.
೭೭. ಮರುಳಸಿದ್ದಪ್ಪ,ಕೆ, ೧೯೮೩ 'ಆಧುನಿಕ ಕನ್ನಡ ನಾಟಕ' ಅಂಕಿತ ಪ್ರಕಾಶನ ಗಾಂಧಿ ಬಜಾರ್, ಬಸವನಗುಡಿ, ಬೆಂಗಳೂರು.

೭೮. ಮಂಜುನಾಥ ಬೇವಿನಕಟ್ಟಿ, ೧೯೯೬ 'ಜನಪದ ನಂಬಿಕೆಗಳು' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೯. ಮಂಜುನಾಥ ಬೇವಿನಕಟ್ಟಿ, ೨೦೦೭, 'ಕನ್ನಡ ಜನಪದ ನಂಬಿಕೆಗಳು' ಜ್ಯೋತಿ ಪ್ರಕಾಶನ, ಮೈಸೂರು.

೮೦. ಮೋಹನ.ಜಿ.ಎಸ್,೨೦೧೨ 'ರಂಗಕಿಣ್ಣರಿ', ರಂಗಭೂಮಿ ಕುರಿತು ಬರಹಗಳಲ್ಲಿ ಅಭಿನವ ಪ್ರಕಾಶನ, ಬೆಂಗಗಳೂರು

೮೧. ಮೋಹನರಾವ್ ಎ.ಎಫ್. (ಸಂ),೧೯೯೮, 'ವಿಶ್ವಕರ್ಮ ಸಮಾಜ ದರ್ಶನ' (ದ್ವಿತೀಯ ಭಾಗ) ವಿಶ್ವಬಂಧು ಪ್ರಕಾಶನ, ಶಿವಮೊಗ್ಗ.

೮೨. ಮೌನೇಶ.ಬ.ಗಾಡದ (ಸಂ),೧೯೯೩ 'ಶ್ರೀ ಕ್ಷೇತ್ರ ಸಿದ್ದನ ಕೋಳ್ಳದ ಸಿದ್ದಶ್ರೀ' ಚಿನ್ಮಯ ಚೇತನ ಪ್ರಕಾಶನ, ಸೂಳಿಭಾವಿ.

೮೩. ಮೌನೇಶ.ಬ.ಗಾಡದ (ಸಂ)–೨೦೦೧ 'ಶ್ರೀ ಗಂಗಾಧರ ಸ್ವಾಮಿ ಮಹಾಪುರುಷರ ಜೀವನ ಲೀಲಾಮೃತ' ಚಿನ್ಮಯ ಚೇತನ ಶ್ರೀ ಗಂಗಾಧರ ಪ್ರಕಾಶನ, ಸೂಳಿಭಾವಿ.

೮೪. ಸುಂಕಾಪುರ,ಎಮ್,ಎಸ್,೧೯೭೮ 'ಕೃಷ್ಣಸಂದಾನ' ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೮೫. ಮಾಲತಿ.ಎಸ್–೨೦೧೦ 'ಹೊಸದಿಕ್ಕು ರಂಗಭೂಮಿ ಮತ್ತು ಲೇಖನಗಳು' ನವ ಕರ್ನಾಟಕ ಪ್ರಕಾಶ, ಬೆಂಗಳೂರು.

೮೬. ರಾಜೇಂದ್ರ.ಡಿ.ಕೆ–೨೦೧೧ 'ದಕ್ಷಿಣ ಕರ್ನಾಟಕ ಜನಪದ ರಂಗಭೂಮಿ' ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೮೭. ರಂಗನಾಥ.ಎಚ್.ಕೆ.– ೧೯೭೮ 'ಕರ್ನಾಟಕ ರಂಗಭೂಮಿ' ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೮೮. ರಾಮಚಂದ್ರ, ಅಬಾಜಿ, ೧೯೨೦ 'ಶ್ರೀಕೃಷ್ಣಪಾರಿಜಾತ' ಶ್ರೀರಾಮತತ್ವ ಪ್ರಕಾಶನ ಬೆಳಗಾವಿ.

೮೯. ರಾಜಶೇಖರ ಕದಂಬ –೨೦೦೮ '೧೦೮ ರಂಗಮುಖಗಳು' ಭಾರತಿ ಪ್ರಕಾಶನ ಸರಸ್ವತಿಪುರಂ ಮೈಸೂರು.

೯೦. ರಾಜಪ್ಪ ದಳವಾಯಿ–೧೯೯೬ 'ಕನ್ನಡ ಸಾಹಿತ್ಯಕೋಶ' ಮುದ್ರಣ ವಿದ್ಯಾಪತಿ ಬೆಂಗಳೂರು.

೯೧. ರುದ್ರಪ್ಪ ಕರಿಶೆಟ್ಟಿ–೨೦೧೭ 'ಬಯಲಾಟ ಸಂಕ್ಷಿಪ್ತ ಚರಿತ್ರೆ ಮತ್ತು ಪದಗಳು' ಪ್ರಕಾಶನ ಕೊಂಬಳಿ (ಹೂವಿನ ಹಡಗಲಿ).

೯೨. ರಾಮಕೃಷ್ಣ ಮರಾಠೆ–೨೦೧೧ 'ನಾಟಕದ ನೆಲೆಗಳು' ಬೆಳದಿಂಗಳ ಪ್ರಕಾಶನ ಬೆಳಗಾವಿ.

೯೩. ಆರ್.ಜಿ.ಕುಲಕರ್ಣಿ–೧೯೭೨ 'ಶ್ರೀ ಕೃಷ್ಣ ಪಾರಿಜಾತ' ಮೈಸೂರು ವಿಶ್ವ ವಿದ್ಯಾಲಯ ಮೈಸೂರು.

೯೪. ರಹಮತ್ ತರೀಕೆರೆ–೨೦೦೪ 'ಸಾಂಸ್ಕೃತಿಕ ಅಧ್ಯಯನ' ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೯೫. ರಹಮತ್ ತರೀಕೆರಿ-೨೦೦೯ 'ಕರ್ನಾಟಕದ ನಾಥಪಂಥ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೯೬. ರಾಜಶೇಖರ ಪಿ.ಕೆ.-೨೦೦೩ 'ಜಾನಪದ ಸಂಭ್ರಮ' ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ ಬೆಂಗಳೂರು.

೯೭. ರಹಮತ್ ತರೀಕೆರೆ (ಸಂ)-೨೦೦೦ 'ಧರ್ಮ ವಿಶ್ವಕೋಶ' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೮. ರಾಯಾ ಧಾರವಾಡಕರ-೧೯೭೫ 'ಹೊಸಗನ್ನಡ ಸಾಹಿತ್ಯದ ಉದಯ ಕಾಲ' ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೯೯. ರಾಜೇಂದ್ರ.ಡಿ.ಕೆ.- ೧೯೭೩ 'ಜಾನಪದ ಸಂಚಯ'- ತ.ವೆಂ.ಸ್ವಾರಕ ಗ್ರಂಥಮಾಲೆ ಮೈಸೂರು.

೧೦೦. ರಾಜಗೋಪಾಲಾಚಾರ್ಯ-೧೯೭೭ 'ಯಕ್ಷಗಾನ ಸಂಗೀತ' ಗೋವಿಂದಪ್ಪ ಸಂಶೋಧನಾ ಕೇಂದ್ರ, ಉಡುಪಿ.

೧೦೧. ಲಕ್ಕಪ್ಪಗೌಡ.ಎಚ್.ಜೆ, ಪುರುಷೋತ್ತಮ ಬಿಳಿಮಲೆ (ಸಂ)-೧೯೯೭, 'ಜಾನಪದ ಕೈಪಿಡಿ' (ಜಾನಪದ ಮಾಲೆ) ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ, ಬೆಂಗಳೂರು.

೧೦೨. ಲಟ್ಟೆಎಮ್.ಎಸ್., ೧೯೮೩ 'ಶಿವಶಕ್ತಿ' ಎಸ್.ವ್ಹಿ.ಭಾಗಿ ಸನ್ಮಾನ ಸಮಿತಿ, ಬೆಳಗಾವಿ.

೧೦೩. ವಾಲಿಕಾರ.ಡಿ.ಎಮ್., ೨೦೧೪ 'ಜಮಖಂಡಿ ಅಪ್ಪಾಲಾಲ್ ನದಾಫ್ ಶ್ರೀಕೃಷ್ಣ ಪಾರಿಜಾತ' ನಿಸರ್ಗ ಪ್ರಕಾಶನ, ಲಕ್ಕಸಕೊಪ್ಪ.

೧೦೪. ವೀರೇಶ ಬಡಿಗೇರ-೨೦೧೮ 'ತತ್ವ ಕೊರವಂಜಿ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೫. ವಿಜಯಕುಮಾರ ಕಟಗಿಹಳ್ಳಿಮಠ -೨೦೧೮ 'ದೀಪದ ಹಣತೆಗಳು' ಬಾಗಲಕೋಟ ಜಿಲ್ಲಾ ಸಾಹಿತ್ಯ ಪರಿಷತ, ಬಾಗಲಕೋಟೆ.

೧೦೬. ವೀರೇಶ ಬಡಿಗೇರ-೧೯೯೯ 'ಉತ್ತರ ಕರ್ನಾಟಕದ ಗೀತ ಮೇಳಗಳು' ಒಂದು ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೭. ವೀರೇಶ ಬಡಿಗೇರ -೧೯೯೬ 'ರಾಶಿಬುತ್ತಿ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೦೮. ವೀರೇಶ ಬಡಿಗೇರ-೧೯೯೭ 'ಅಡಿಗಲ್ಲು' ಮಯ ಪ್ರಕಾಶನ, ಕಮಲಾಪುರ.

೧೦೯. ವಿರೂಪಾಕ್ಷ ಬಡಿಗೇರ-೨೦೧೪ 'ಆರಾಧನಾ ಕೃಷಿ ಕಾಮದೇನು' ಪ್ರಕಾಶನ ಧಾರವಾಡ

೧೧೦. ವಾಸುದೇವ ಬಡಿಗೇರ-೨೦೦೨, 'ಶಿರಸಂಗಿ ಕಾಳಮ್ಮ, ಸಾಂಸ್ಕೃತಿಕ ಅದ್ಯಯನ' (ಚಾರಿತ್ರಿಕ ಪರಂಪರೆ) ಶ್ವೇತಾ ಭಾಗೀರಥಿ ಪ್ರಕಾಶನ, ಹೊಸಪೇಟೆ.

೧೧೧. ವಿಜಯನಾಥ ಶಣೈ-೨೦೧೦ 'ನೆನಪಿನ ಶಿಲ್ಪಗಳು' ಸಾಧನ ಪ್ರಕಾಶನ, ಬೆಂಗಳೂರು.

೧೧೨. ವಾಮನರಾವ್ ಮಾಸ್ತಾರ (ಎನ್.ಕೆ.ಕುಲಕರ್ಣಿ)-೨೦೦೨ 'ನಟ ನಾಟಕಕಾರ' ಪ್ರಕಾಶನ ಹೂಮನೆ ಧಾರವಾಡ.

೧೧೩. ವೀರೇಶ ಬಡಿಗೇರ-೨೦೧೦ 'ಶಾಸನಗಳಲ್ಲಿ ಆಯಾಗಾರಿಕೆ ಸಂಸ್ಕೃತಿ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೧೪. ವೀರೇಶ ಬಡಿಗೇರ-೨೦೧೭ 'ನಾಡೋಜ ಎಲ್ಲವ್ವ ರೋಡ್ಡಪ್ಪನವರ' ಕರ್ನಾಟಕ ಜಾನಪದ ಪರಿಷತ್ ಜಿಲ್ಲಾ ಘಟಕ, ಬಾಗಲಕೋಟೆ.

೧೧೫. ವೀರೇಶ ಬಡಿಗೇರ-೨೦೧೯ 'ಪಾಂಚಾಳ ಸಾಹಿತ್ಯ ಮತ್ತು ಸಂಸ್ಕೃತಿ', ಮಾಯಾ ಪ್ರಕಾಶನ ಕಮಲಾಪುರ.

೧೧೬. ವೀರೇಶ ಬಡಿಗೇರ-೨೦೧೬ 'ತಿಂಥಿಣಿ ಮೌನೇಶ್ವರರ ವಚನಗಳು' ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೧೭. ವಿರೂಪಾಕ್ಷ ಬಡಿಗೇರ-೧೯೯೬ 'ಹೊಳೆ ಆಲೂರ ಶ್ರೀ ಎಚ್ಚರಸ್ವಾಮಿ ಚರಿತ್ರೆ' ರೋಣ ತಾಲೂಕು ವಿಶ್ವಕರ್ಮ ಸಮಾಜ, ಹೊಳೆ ಆಲೂರ.

೧೧೮. ವೀರೇಶ ಬಡಿಗೇರ-೨೦೦೭ 'ಬಾಚಿ ಕಾಯಕದ ಬಸಯ್ಯ, ವೃತ್ತಿ ಹಾಗೂ ತತ್ವ ಮಿಮಾಂಸೆ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೧೯. ಸಿದ್ದಣ್ಣ.ಎಚ್.ಎನ್.-ದಕ್ಷಿಣಾಪಥೇಶ್ವರ-ಚಾಲುಕ್ಯ ಉತ್ಸವ ಸಮಿತಿ ಬಾಗಲಕೋಟೆ.

೧೨೦. ಸುಬ್ಬರಾಮಪ್ಪ-೧೯೭೨ 'ತೆಲಗು ಸಾಹಿತ್ಯಕ್ಕೆ ಕನ್ನಡದ ಕೊಡುಗೆ' ಸುಧಾ ದೀಪಾವಳಿ ಸಂಚಿಕೆ ಧಾರವಾಡ.

೧೨೧. ಸಿಂಪಿ ಲಿಂಗಣ್ಣ-೧೯೬೦ 'ಜನಾಂಗದ ಜೀವಾಳ' ಮಿಂಚನಬಳ್ಳಿ ಧಾರವಾಡ

೧೨೨. ಸಿದ್ದಗಂಗಮ್ಮ ಬಿ.ಜಿ-೨೦೧೭, 'ಮಧ್ಯಕಾಲೀನ ಕರ್ನಾಟಕ ಕುಶಲ ಕರ್ಮಿಗಳು' ಸನೂಷ ಪಬ್ಲಿಕೇಶನ್ ಹುಬ್ಬಳ್ಳಿ.

೧೨೩. ಸಿದ್ದರಾಮಯ್ಯ ಮಠಪತಿ ಗೋರಟಾ-೨೦೦೯ 'ವಿಶ್ವನಿನಾದ' ಅಭಿನಂದನಾ ಸಮಿತಿ ಬಾಗಲಕೋಟ.

೧೨೪. ಸುಂಕಾಪುರ,ಎಮ್,ಎಸ್,೧೯೮೪ 'ಕನ್ನಡ ಬಯಲಾಟ ಶ್ರೀ ಕೃಷ್ಣಪಾರಿಜಾತ' ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೨೫. ಸುಂಕಾಪುರ,ಎಮ್,ಎಸ್,೧೯೮೪ 'ತಿರುನಿಲಕಂಠ' ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೧೨೬. ಸುಂಕಾಪುರ,ಎಮ್,ಎಸ್, ೧೯೭೨ 'ಶ್ರೀ ಕೃಷ್ಣಪಾರಿಜಾತ' (ಕುಲಗೋಡು ತಮ್ಮಣ್ಣ ಕೃತ್) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೨೭. ಸುಂಕಾಪುರ,ಎಮ್,ಎಸ್,೧೯೭೮ 'ಕೃಷ್ಣಸಂದಾನ' ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೨೮. ಶ್ರೀರಾಮ ಇಟ್ಟಣ್ಣವರ-೧೯೯೧ 'ಶ್ರೀ ಕೃಷ್ಣಪಾರಿಜಾತ ಒಂದು ಅಧ್ಯಯನ' ಕರ್ನಾಟಕ ವಿಶ್ವವಿದ್ಯಾಲಯ- ಧಾರವಾಡ.

೧೨೯. ಶ್ರೀಶೈಲ ಹುದ್ದಾರ್-೨೦೧೪ 'ಕರ್ನಾಟಕ ಜನಪದ ರಂಗಭೂಮಿ', ರೋಹಿಣಿ ಎಂಟರ್‌ಪ್ರೈಸಸ್ ಧಾರವಾಡ.

೧೩೦. ಶಿವಾನಂದ ಶೇಲ್ಲಿಕೆರಿ ಸಂಗಮೇಶ ನಿಲಗುಂದ ಸಂಪಾದಕರು -೨೦೧೯ 'ಶ್ರೀಕೃಷ್ಣ ಪಾರಿಜಾತ ಹಿಮ್ಮೇಳ ಕಲಾವಿದರು', ಕರ್ನಾಟಕ ಜಾನಪದ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ

೧೩೧. ಶಿವಶಂಕರ್ ಚಕ್ಕೆರೆ-೨೦೦೮ 'ಜಾನಪದ ತಿಳುವಳಿಕೆ' ಸಾಗರ ಪ್ರಕಾಶನ ಬೆಂಗಳೂರು.

೧೩೨. ಶಿವಾನಂದ ಶೇಲ್ಲಿಕೆರೆ-೨೦೧೬ 'ನೂರೊಂದು ಜನಪದ ಕಲಾವಿದರು' ಸಂಪಾದಕರು ಕರ್ನಾಟಕ ಜನಪದ ಪರಿಷತ್ತು ತಾಲೂಕು ಘಟಕ ಬಾದಾಮಿ.

೧೩೩. ಶಂಬಾಜೋಶಿ-೨೦೧೭ 'ವಿಶ್ವಕರ್ಮದರ್ಶನ' ಶ್ರೀ ವಿಶ್ವಮಾಯಾ ಸಾಹಿತ್ಯ ಪ್ರಚಾರ ಸಮಿತಿ, ಚೇತನ ಕಾಲೋನಿ, ಹುಬ್ಬಳ್ಳಿ.

೧೩೪. ಶಿವಾನಂದ ಶೆಲ್ಲಿಕೆರಿ-೨೦೦೦ ಸಂಪಾದಕರು 'ಶ್ರೀ ಕೃಷ್ಣ ಪಾರಿಜಾತ ಪ್ರಾತಿನಿಧಿಕ ಕಂಪನಿಗಳು' ಪ್ರಕಾಶನ ಯಂಡಿಗೇರಿ, ಬಾಗಲಕೋಟೆ.

೧೩೫. ಶಿವಾನಂದ.ಎಂ.ಜಾಮದಾರ-೨೦೦೦ 'ಕಟ್ಟೋನ ಬನ್ನಿ ಮತ್ತೊಮ್ಮೆ ಮುಳುಗುವ ಗುಡಿಗಳನ್ನು' ಪುಸ್ತಕ ಮಾಲೆ-೧ ಆಯುಕ್ತರು ಮತ್ತು ಪದನಿಮಿತ್ತ ಸರಕಾರದ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಕಂದಾಯ ಇಲಾಖೆ, ಕೃಷ್ಣಾ ಮೇಲುದಂಡೆ ಯೋಜನೆ, ನವನಗರ ಬಾಗಲಕೋಟ.

೧೩೬. ಶ್ರೀನಿವಾಸಮೂರ್ತಿ ಎಂ.ಆರ್. (ಸಂ)-೧೯೯೯, ಚನ್ನಬಸವಪುರಾಣ ಸಂಗ್ರಹ' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೩೭. ಶ್ರೀರಾಮ ಇಟ್ಟಣ್ಣವರ-೨೦೧೨ 'ಲೋಕಾಪುರ ಕೃಷ್ಣಾಜೀ ದೇಶಪಾಂಡೆ' ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೧೩೮. ಶೇಖರಾಚಾರಿ.ಕೆ-೨೦೧೧ 'ಪಾಂಚಾಳರ ಬದುಕು ಮತ್ತು ಸಂಸ್ಕೃತಿ' ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಹಂಪಿ.

೧೩೯. ಶೇಖರಾಚಾರಿ.ಕೆ-೨೦೧೩ 'ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ' ಶ್ರೀ ಅನ್ನಪೂರ್ಣ ಪ್ರಕಾಶನ, ಬೆಂಗಳೂರು.

೧೪೦. ಶಶಿಕಾಂತಯಡಹಳ್ಳಿ-೨೦೧೬ 'ರಂಗಪ್ರತಿಭಾ ನಾಟಕಗಳು ಮತ್ತು ರಂಗಭೂಮಿ' ವಿಶ್ಲೇಷಣೆ ಯಡಹಳ್ಳಿ ಪ್ರಗತಿ ನಿವಾಸ, ದೋಮ್ಮಲೂರು, ಬೆಂಗಳೂರು.

೧೪೧. ಶ್ರೀರಾಮ ಇಟ್ಟಣ್ಣವರ-೨೦೧೭ 'ದೇಸಿ ಪ್ರಜ್ಞೆ' ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು.

೧೪೨. ಶ್ರೀರಾಮ ಇಟ್ಟಣ್ಣವರ–೨೦೧೯ 'ಬಯಲಾಟ' ಲೇಖನಗಳು ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೪೩. ಶೀಲಾಕಾಂತ ಪತ್ತಾರ–೧೯೯೪ 'ದಿವಿಜನ್ ಆಫ್ ಮೌನೇಶ್ವರ' ಶಿಲ್ಪಪ್ರಕಾಶನ ವಿದ್ಯಾನಗರ ಬಾದಾಮಿ.

೧೪೪. ಶ್ರೀರಾಮ ಇಟ್ಟಣ್ಣವರ–೧೯೯೦ ಬೂದಿಹಾಳ 'ಶ್ರೀ ಫಕೀರೆಶ್ವರ ಮಠ ಶ್ರೀ ಪಕೀರೇಶ್ವರ ವಿರಕ್ತಮಠ', ಬೂದಿಹಾಳ, ತಾ॥ ಬಿಳಿಗಿ.

೧೪೫. ಶಿವರಾಮ ಕಾರಾಂತ–೧೯೭೪ 'ಯಕ್ಷಗಾನ, ಬಯಲಾಟ' ಮೈಸೂರು ವಿಶ್ವವಿದ್ಯಾಲಯ ಮೈಸೂರು.

೧೪೬. ಶ್ರೀರಂಗ –೧೯೬೬ 'ಪ್ರೇಕ್ಷಕ ವರ್ಗ' ಮೈಸೂರು ವಿ.ವಿ.ಮೈಸೂರು.

೧೪೭. ಶ್ರೀರಂಗ–೧೯೬೮ 'ಕನ್ನಡ ರಂಗಭೂಮಿಯ ಪೂರ್ವೋಭಿವೃದ್ಧಿ' ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೧೪೮. ಶ್ರೀನಿವಾಸ ಆಚಾರ್ಯ–೧೯೭೫ 'ವೆಂಕಟೇಶ ಪಾರಿಜಾತ' ಹೊಂಬಾಳ್ಳಿ ಗದಗ ಪ್ರಕಾಶನ.

೧೪೯. ಶಾಮರಾಯ.ತ.ಸು.–೧೯೬೨ 'ಕನ್ನಡ ನಾಟಕ' ಗೀತಾಬುಕ್‌ಹೌಸ್, ಮೈಸೂರು.

೧೫೦. ಹಲಸಂಗಿಯ ಗೆಳೆಯರು–೨೦೧೨ 'ಗರತಿಯ ಹಾಡುಗಳು' ಸಮಾಜ ಪುಸ್ತಕಾಲಯ, ಶಿವಾಜಿನಗರ, ಧಾರವಾಡ.

೧೫೧. ಹರಿಸಾವಂತ,ಬಿಕಾಜಿ,೧೮೮೧ 'ಕೃಷ್ಣಪಾರಿಜಾತ' ಪ್ರಕಾಶನ ಬೆಳಗಾವಿ.

೧೫೨. ಹಿರೇಮಠ.ಆರ್.ಸಿ.–೧೯೮೮ (ಸಂ) 'ಬಸವಣ್ಣನವರ ವಚನಗಳು' ಶ್ರೀನಿ.ಪ್ರಸ.ಮಹಾಂತಪ್ಪಗಳು, ಶ್ರೀ ಮುರುಘಾಮಠ, ಧಾರವಾಡ.

೧೫೩. ಹಿರೇಮಠ ಆರ್.ಸಿ. –೧೯೭೪ 'ಜಾನಪದ ಸಾಹಿತ್ಯದರ್ಶನ', ಕೆ.ವಿ.ಡಿ.ಧಾರವಾಡ

೧೫೪. ಹಿರೇಮಠ. ಆರ್.ಸಿ.–೧೯೭೩ 'ಮೋಹನ ತರಂಗಿಣಿ', ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

೧೫೫. ಹಂಪ ನಾಗರಾಜಯ್ಯ–೧೯೮೧ (ಸಂ) 'ಜನಪದದಲ್ಲಿ ಮಳೆರಾಯನ ಮುನಿಸು' ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

ಸಾಂಸ್ಕೃತಿಕ ಪದಕೋಶ

೨. ಸಾಂಸ್ಕೃತಿಕ ಪದಕೋಶ

೧. ಅಡಿಗಲ್ಲು-ಸುತ್ತಿಗೆ ಸಹಾಯದಿಂದ ತಯಾರಿಸುವ ವಸ್ತುಗಳನ್ನಿಟ್ಟು ಬಡಿಯುವ ಕಲ್ಲು. ಕಮ್ಮಾರರು ಲೋಹದ ವಸ್ತುಗಳನ್ನು ಇಟ್ಟು ಬಡಿಯಲು ಆಸರೆಯಾಗಿ ಉಪಯೋಗಿಸುವ ಕಬ್ಬಿಣದ ಗಟ್ಟಿ. ಕಂಚುಗಾರರು ಕೆಲಸ ಮಾಡುವಾಗ ಬಡಿಯಲು ಚುಚ್ಚಲು ಉಪಯೋಗ ವಾಗುವಂತೆ ನೆಲದಲ್ಲಿ ಇರುವ ದಪ್ಪ ಕಬ್ಬಿಣದ ವಸ್ತು.

೨. ಅಡಿಗೊಟ್ಟಿ/ಅಡಿಬಟ್ಟಿ-ಬಡಿಗೇರ ಉಪಕರಣಗಳನ್ನು ಮಾಡುವಾಗ ಈ ಅಡಿಬಡ್ಡಿ ಕೆಳಗಡೆಗೆ ಆಧಾರವಾಗಿಡುವ ಕಟ್ಟಿಗೆಯ ತುಂಡು

೩. ಅಡಿಕಟ್ಟಿ-ಬಡಿಗರ ಅಳತೆಯ ಉಪಕರಣ

೪. ಅಗ್ಗಷ್ಟಿಕೆ-ಅಕ್ಕಸಾಲಿಗ ಬಂಗಾರ ಕಾಯಿಸುವ ಒಲೆ. ಶಿಲ್ಪಿಗಾರರು ಉಳಿ ಮತ್ತಿತ್ತರ ಉಪಕರಣಗಳು ಕಾಯಿಸಿ ಹದ ಮಾಡಿಕೊಳ್ಳಲು ಬೇಕಾದ ಸ್ಥಳದಿಂದ ಸ್ಥಳಕ್ಕೆ ಸಾಗಿಸಬಹುದಾದ ಒಲೆ.

೫. ಅಕ್ಷಾಂಶ-ಅಕ್ಷರೇಖೆಯ ಒಂದು ಭಾಗ ಭೂಗೋಳದ ಮೇಲ್ಮೈಯ ಮೇಲೆ ಅಡ್ಡಲಾಗಿ ಎಳೆದಾಗ ಭಾವಿಸಿರುವ ವೃತ್ತಾಕಾರದ ರೇಖೆ.

೬. ಅರ-ತುಕ್ಕಿನಿಂದ ಮಾಡಿರುವ ಆಭರಣಗಳನ್ನು ಉಜ್ಜಲು ಬಳಸುವ ಸಾಧನ. ಕಮ್ಮಾರ ಕಬ್ಬಿಣದ ವಸ್ತುಗಳನ್ನು ಹರಿತ ಮಾಡಿಕೊಳ್ಳುವ ಉಪಕರಣ. ಅಕ್ಕಸಾಲಿಗ ಆಭರಣಗಳನ್ನು ಉಜ್ಜಿ ನಯಗೊಳಿಸುವ ಉಪಕರಣ. ಶಿಲ್ಪಿಗಾರ ಶಿಲ್ಪದ ಒರಟಾದ ಭಾಗಗಳನ್ನು ಉಜ್ಜಿ ನಯಗೊಳಿಸಲು ಬೇಕಾದ ವಸ್ತು. ಕಂಚುಗಾರ ವಿವಿಧ ಭಾಗಗಳನ್ನು ಉಜ್ಜಿ ನಯಗೊಳಿಸಲು ಸಣ್ಣ ಸಣ್ಣ ಮುಳ್ಳುಗಳನ್ನು ಹೊಂದಿರುವ ಉಕ್ಕಿನ ಉಪಕರಣ.

೭. ಅಟ್ಟ-ವೇದಿಕೆ (ಕೃಷ್ಣಪಾರಿಜಾತ ಮಂಟಪ)

೮. ಅವರೋಹಣ-ಇಳಿಯುವಿಕೆ (ಇಳಕೆ ಕ್ರಮ)

೯. ಅಂಕಲಿ-ಮನೆಯ ಒಂದು ಭಾಗ ಅಥವಾ ನಾಟಕದ ಒಂದು ಭಾಗ

೧೦. ಅನಧ್ಯ-ತಾಡನ ಕ್ರಿಯೆಯಿಂದ ನಾದೋತ್ಪತ್ತಿ ಮಾಡುವಂಥವು.

೧೧. ಆಯಾ ಕೊಡುವುದು-ಮಾಡಿದ ಕೆಲಸಕ್ಕೆ ಯೋಗ್ಯ ಸಂಭಾವನೆ (ದವಸದಾನ್ಯಗಳು)

೧೨. ಆರೋಹಣ-ಅಡರುವಿಕೆ, ಹತ್ತುವಿಕೆ, ಏರುವಿಕೆ

೧೩. ಆಗ್ರ-ಬಡಿಗೇರ ಮರದಲ್ಲಿ ರಂಧ್ರಮಾಡಲು ಬೇಕಾದ ಉಪಕರಣ

೧೪. ಆದಿತಾಳ-ಭಜನೆ (ಸಂಗೀತ)ಗಳಲ್ಲಿ ಮೊದಲು ಪ್ರಾರಂಭ ತಾಳಕ್ಕೆ ಆದಿ ಎನ್ನುವರು

೧೫. ಇಕ್ಕಳ–ಕಮ್ಮಾರ ಕಾದ ಕಬ್ಬಿಣ ಹಿಡಿದುಕೊಳ್ಳಲು ಬೇಕಾದ ಉಪಕರಣ. ಅಕ್ಕಸಾಲಿಗ ಕಾಯ್ದ ಆಭರಣ ಎತ್ತಿಕೊಳ್ಳಲು ಹಿಡಿದುಕೊಳ್ಳಲು ಬೇಕಾದ ಉಪಕರಣ.

೧೬. ಇಂಚಪಟ್ಟಿ–ವಸ್ತು, ವಿಗ್ರಹದ ಅಳತೆಗಾಗಿ ಬಳಸುವ ಉಪಕರಣ.

೧೭. ಇಂಚಪಟ್ಟಿ–ಬಡಿಗೇರ ಮರದ ಮೇಲೆ ಅಳತೆಯ ಗೆರೆ ಗುರುತು ಮಾಡಿಕೊಳ್ಳುವ ಉಪಕರಣ

೧೮. ಉಳಿ–ಮರ ಕೆಲಸದ ಕೆತ್ತನೆಯ ಸಾಮಾಗ್ರಿ. ಬಡಿಗೇರ ಮರದಲ್ಲಿ ವಿನ್ಯಾಸ ಮಾಡಲು ಬೇಕಾದ ಆಕಾರಕ್ಕೆ ಕತ್ತರಿಸಲು ರಂಧ್ರ ಮಾಡಲು ಬೇಕಾದ ಉಪಕರಣ. ಶಿಲ್ಪಿಗಾರ ಕಲ್ಲಿನ ಕೆಲಸದಲ್ಲಿ ಕೆತ್ತಲು ರೂಪಕೊಡಲು ಬಳಸುವ ವಸ್ತು.

೧೯. ಉಗುರುಳಿ–ಬಡಿಗೇರರ ಹೆಬ್ಬೆರಳಿನ ಆಕಾರದ ಉಳಿ.

೨೦. ಉಪ್ಪಿನ ಕಾಗದ–ಶಿಲ್ಪಗಾರ ಉಸುಕಿನ ಕಾಗದ ಶಿಲಾಮೂರ್ತಿಯ ಒರಟು ಭಾಗಗಳನ್ನು ಉಜ್ಜಿ ನಯಗೊಳಿಸಲು ಬೇಕಾದ ವಸ್ತು

೨೧. ಎಡೆದಿಂಡು–ಹೊಲದಲ್ಲಿ ಕಸ ತೆಗೆಯುವ ಒಂದು ಪುಟಿನ ಸಣ್ಣ ಕುಂಟಿ

೨೨. ಒಳಟ್ಟ–ಮನೆಯ ಒಳಗೆ ಪಡಸಾಲೆ ಎದುರಿಗೆ ವಿರುವ ಸಣ್ಣದಾದ ಅಟ್ಟ (ಪಾರಿಜಾತ ಮಂಟಪದ ಒಳಗಡೆ ಇರುವ ಕೋಣೆ)

೨೩. ಒರೆಗಲ್ಲು–ಪರೀಕ್ಷಿಸುವ ಕಲ್ಲು (ಪತ್ತಾರ ಅಂಗಡಿಯ ಸತ್ಯಶೋಧಿಸುವದು)

೨೪. ಓಕುಳಿ–ಹನುಮಂತ ಜಾತ್ರೆ/ ಉತ್ಸವ ಕಾಲದಲ್ಲಿ ಪರಸ್ಪರ ಬಣ್ಣದ ನೀರು ಎರುಚುವದು.

೨೫. ಕಟ್ಟಿಗೆ ಪಳಿಗಳು–ಮರದಿಂದ ಕೊರೆದ ತಿಳುವಾದ ಅಗಲ– ಉದ್ದವಿರುವುದಕ್ಕೆ

೨೬. ಕಡ್ಡಿ–ಶಿಲ್ಪಿಗಾರ ಕಲ್ಲಿನ ಅಳತೆಗಾಗಿ ಬಳಸುವ ಕಡ್ಡಿ

೨೭. ಕಣ–ದಾನ್ಯದ ಸಂಗ್ರಹಿಸುವ ಹಾಗೂ ಶುದ್ಧಿಕರಿಸುವ ವೃತ್ತಾಕಾರದ ಭೂಮಿ (ಪಾರಿಜಾತದಲ್ಲಿ ಹೆಣ್ಣು ಮಕ್ಕಳು ತೊಡುವ ರವಿಕೆಯ ವಸ್ತ್ರಕ್ಕೆ ಕಣ

೨೮. ಕತ್ತೂಸಿ–ಬಡಿಗೇರ ಮರದಲ್ಲಿ ಮೊಳೆ ಹೊಡೆಯಲು ರಂಧ್ರ ಮಾಡಿಕೊಳ್ಳಲು ಉಳಿ ರೀತಿ ಇರುವ ಉಪಕರಣ

೨೯. ಕರಡಿಮಜಲು–ಕಟ್ಟಿಗೆಯಿಂದ ಭಾರಿಸುವ ಒಂದು ಬಗೆ ಮೃದಂಗ ಚರ್ಮವಾದ್ಯ ತಾಳ, ತಬಲಾ, ಸುತ್ತಿಗೆ ಇರುತ್ತವೆ.

೩೦. ಕರಸಾಣಿ–ಬಡಿಗೇರರು ಉಪಕರಣ ಹರಿತ ಮಾಡಿಕೊಳ್ಳುಲು ಬೇಕಾದ ಕಲ್ಲು

೩೧. ಕರೋಕೆ–ಪ್ರಸ್ತುತ ಸಂಗೀತಕ್ಕೆ ಸಂಬಂಧಪಟ್ಟ ಪದ. ಹಾಡು ಇರುವದಿಲ್ಲ. ಬರೆ ಮ್ಯೂಜಿಕ್ ಮಾತ್ರ (ಇದಕ್ಕೆ ರಾಗ ಸಂಯೋಜನೆ) ಇರುತ್ತದೆ.

೩೨. ಕುಚೂಪುಡಿ–ತೆಲಗು ಒಂದು ಬಗೆಯ ಆಟ.

೩೩. ಕಲ್ಲು–ಶಿಲ್ಪಿಗಾರ ಮುರ್ತಿಗಳನ್ನು ಉಜ್ಜಿ ನಯಗೊಳಿಸಲು ಹಿಂದೆ ಬಳಸುತ್ತಿದ್ದ ಸಾಧನ

೩೪. ಕಳ್ಳೊಳ್ಳಿ–ಮೋಹರಂ (ಆಲವಿ) ಹಬ್ಬದಲ್ಲಿ ವೇಷ ಹಾಕಿ ತಲೆಗೆ ಕಿರೀಟ ಗೆಜ್ಜೆ ಕಟ್ಟಿ ಕುಣಿಯುವವ

೩೫. ಕತ್ರಿ–ಕಂಚುಗಾರರು ಲೋಹದ ತಗಡು ಕತ್ತರಿಸಿಕೊಳ್ಳಲು ಬಳಸುವ ವಸ್ತು

೩೬. ಕವಡೆ ಕಾಯಿ–ಪಗಡಿ ಆಟದಲ್ಲಿ ಬಳಸುವ ಮೋಸದ ಕಾಯಿಗಳು. ಜೋಗಮ್ಮ ಧರಿಸುವ ವಸ್ತುಗಳು (ಸಮುದ್ರದ ಚಿಪ್ಪು)

೩೭. ಕಂಸಾಳೆ– ಕರಾವಳಿ ಭಾಗದಲ್ಲಿ ಕಂಚಿನ ತಾಳಕ್ಕೆ ಸಂಗೀತ ಪರಂಪರೆಗೆ ಬಳಸುತ್ತಾರೆ.

೩೮. ಕಂಚಿನ್ಕಟ್ಟಿ–ಅಕ್ಕಸಾಲಿಗ ತಳಿಯಲ್ಲಿ ತಗ್ಗು ಮಾಡಲು ಬೇಕಾದ ಉಪಕರಣ

೩೯. ಕಂಚುಗಾರ–ಪಂಚಲೋಹಗಳಲ್ಲಿ ಕೆಲಸವನ್ನು ನಿರ್ವಹಿಸುವವನಿಗೆ ಕಂಚುಗಾರ

೪೦. ಕಣಿವಾದನ–ಚರ್ಮವಾದ್ಯ ವಿಶೇಷ ಕಾಷ್ಟ ಕಟ್ಟಿಗೆ

೪೧. ಕಣ್ಣಾಲಕೆ–ಕಂಚುಗಾರರು ಲೋಹಕ್ಕೆ ಹೊಳಪು ಬರುವಂತೆ ಉಜ್ಜಲು ಬಳಸುವ ವಸ್ತು

೪೨. ಕಥಕ್ಕಳಿ–ಕೇರಳ ರಾಜ್ಯದ ಒಂದು ಬಗೆಯ ಆಟ

೪೩. ಕವಾಲಿ–ಇಸ್ಲಾಂ ಧರ್ಮ ಗುರುಗಳ ಬಗ್ಗೆ ಸಾರುವ ಹಾಡು ಮತ್ತು ವಾದ.

೪೪. ಕಾನಾಸ್–ಕಮ್ಮಾರ ಕುಡುಗೋಲುಗಳನ್ನು ತಿಕ್ಕಿ ಚೂಪು ಮಾಡಲು ಬೇಕಾದ ಉಪಕರಣ

೪೫. ಕಾಟ–ಅಕ್ಕಸಾಲಿಗ ಬೆಳ್ಳಿ ಬಂಗಾರ ತುಕ ಮಾಡುವುದು

೪೬. ಕಾಶಿಯೋ–ವಿಶ್ವನಾಥ (ಶಿವ) ನಿರುವ ಸ್ಥಳ

೪೭. ಕೀಲು ಕುದುರೆ–ಮರದ ಕಟ್ಟಿಗೆ ಕಾಲಿಗೆ ಕಟ್ಟಿ ನಡೆಯುವ ಸಾಧನ

೪೮. ಕಿರೀಟ–ಶ್ರೇಷ್ಟ ಉನ್ನತವಾದ

೪೯. ಕುಲುಮೆ–ಪಂಚಲೋಹಗಳಲ್ಲಿ ಕೆಲಸವನ್ನು ನಿರ್ವಹಿಸುವವನಿಗೆ, ಕಂಚುಗಾರ ಎಂದು ಕರೆಯುವರು.

೫೦. ಕುಡ–ನೇಗಿಲಕುಳ, ಅರಗಿನ ಕಡ್ಡಿ (ಕೃಷಿಗೆ ಬೇಕಾಗಿರುವ ಕಬ್ಬಿಣದ ಆಯುಧ)

೫೧. ಕುರುಚಿಗಿ–ಹೊಲದಲ್ಲಿ ಕಳೆ ತೆಗೆಯುವ ಕುರುಪಿ.

೫೨. ಕುಪ್ಪಡಿಗೆ–ಅಕ್ಕಸಾಲಿಗರು ಚಿನ್ನಕರಗಿಸಲಕು ಇದ್ದಿಲು ಉರಿಸುವ ಸಾಮಾಗ್ರಿ, ಇದಕ್ಕೆ ಕುಪ್ಪಟ್ಟಿಗೆ, ಅಗ್ಗಿಷ್ಟಕೆ ಎಂದು ಸಹ ಕರೆಯುವರು.

೫೩. ಕುಮಟಿ–ಬಂಗಾರವನ್ನು ಕಾಯಿಸಲು ಬಳಸುವ ಸಾಧನ

೪೪. ಕುಂಚು–ಶಿಲ್ಪಿಗಾರ ಮೂರ್ತಿಗೆ ಬಣ್ಣ ಬಳಿಯಲು ಬಳಸುವ ಕುಂಚ

೪೫. ಕುರುಪಿ–ಕಳೆತೆಗೆಯುವ ಕಬ್ಬಿಣದಿಂದ ತಯಾರಿಸಿ ಹಿಂದಿನ ಹಿಡಿಕೆ ಕಟ್ಟಿಯಿಂದ ಕುರುವುದು.

೪೬. ಕುರಗಿ ತಾಳು–ಬೀಜ ಬಿತ್ತುವ ದಿಂಡಿಗೆ ಮೂರು ತೂತುಗಳಿಗೆ ಉದ್ದಾದ ಕಟ್ಟಿಗೆ

೪೭. ಕುಲುಮೆ–ಕಮ್ಮಾರರು ಕಬ್ಬಿನ ಕೆಲಸ ಮಾಡಲು ಬೆಂಕಿ ಮಾಡಿಕೊಳ್ಳುವ ಒಲೆ

೪೮. ಕುಸರಿ ಕೆಲಸ–ಮರ ಕೆಲಸದಲ್ಲಿ ನೈಪುಣ್ಯತೆ ಅಥವಾ ಬೆಳ್ಳಿ ಬಂಗಾರದ ಕೆಲಸ

೪೯. ಕೊಡ್ತಿ–ಬಡಿಗೇರರು ಮರದ ಸುತ್ತಿಗೆ, ಕಟ್ಟಿಗೆಯ ಉಪಕರಣ. ಬಡಗಿ ಕೆಲಸ ಮಾಡುವಾಗ ಉಳಿಯ ಮೇಲೆ ಏಟು ಹಾಕುವ ಉಪಕರಣ

೫೦. ಕೊಕ್ಕಡ–ಅಕ್ಕಸಾಲಿಗ ದೀಪ ಬೆಸುಗೆ ಹಾಕುವಾಗ ಕಾಯಿಸುಲು ಬೇಕಾಗುತ್ತದೆ(ಚಿಮ್ಣಿ)

೫೧. ಕೊಳವೆ–ಅಕ್ಕಸಾಲಿಗ ಬಂಗಾರ ಕಾಯಿಸುವ ಅಗ್ಗಿಷ್ಟಿಕೆಗೆ ಗಳಿ ಊದಲು ಬೇಕಾದ ಉಪಕರಣ

೫೨. ಕೈವಾರ–ಶಿಲ್ಪಿಗಾರ ವರ್ತುಲಾಕಾರದ ಅಳತೆಗೆ ಬೇಕಾದ ಉಪಕರಣ. ಕಮ್ಮಾರರು ಬಂಡಿ ವಸ್ತುಗಳ ಅಳತೆಗಾಗಿ ಕಮ್ಮಾರರು ಬಳಸುವ ಉಪಕರಣ

೫೩. ಕೊಡ್ತಿ–ಶಿಲ್ಪಿಗಾರ ಹುಣಿಸೆಮರದ ಕೆತ್ತನೆ ಭಾಗದಿಂದ ತಯಾರಿಸಿದ ಮರದ ಸುತ್ತಿಗೆ. ಹಾಗೂ ಬಡಿಗೇರ ಕೃಷಿ ಉಪಕರಣಗಳನ್ನು ತಯಾರಿಸಲು ಈ ಕೊಡ್ತಿಯನ್ನು ಬಳಸುತ್ತಾರೆ.

೫೪. ಕೊರವಂಜಿ–ಸಂಚಾರಿ ನಟಿ, ನೃತ್ಯಗಾತಿ ಮತ್ತು ಕಣಿ ಹೇಳುವಳು ಹಾಗೂ ಬುಡಕಟ್ಟು ಜನಾಂಗದ ಪ್ರತೀಕ

೫೫. ಕೊಡಾತಿ–ಬಡಿಯುವ ಮರದ ಸಾಧನ, ಕೊಡಲಿಗೆ, ಸುತ್ತಿಗೆ ಎನ್ನುವವರು

೫೬. ಖಂಜರಿ–ನರ್ತನಕ್ಕೆ ಉಪಯೋಗಿಸುವ ಒಂದು ಚರ್ಮವಾದ್ಯ.

೫೭. ಗರತಿ ಹಾಡು–ಕುಲೀಸಿ, ಜನಪದ ಸಾಹಿತ್ಯದಲ್ಲಿ ಬಳಸುವ ಮಾನವಂತ ಸ್ತ್ರೀ ಬಗ್ಗೆ ಕಟ್ಟಿದ ಪದಗಳು

೫೮. ಗರಗಸ–ಮರ ಮೊದಲಾದ ಕೊಯ್ಯುವ ಆಯುಧ. ಬಡಿಗೇರರು ಮರ ಕೊಯ್ಯಲು ಬೇಕಾದ ಹಲ್ಲುಗಳಿರುವ ಉಪಕರಣ. ಅಕ್ಕಸಾಲಿಗ ಲೊಹ ಕೊಯ್ಯುವ ಉಪಕರಣ

೫೯. ಗಾಳಿಚಕ್ರ–ಅಗ್ಗಿಷ್ಟಿಕೆಗೆ ಗಾಳಿ ಒದಗಿಸುವ ಯಂತ್ರ

೬೦. ಗುಂಜಿ–ಅಕ್ಕಸಾಲಿಗ ಗುಲಗಂಚಿಯ ಬಿಜ ಬಂಗಾರ ಅಳೆಯಲು ತೂಕ ಮಾಡಲು ಬಳಸುವ ವಸ್ತು.

೬೧. ಗನ್ನು–ಶಿಲ್ಪಿಗಾರರು ದೊಡ್ಡ ಕಲ್ಲನ್ನು ಸೀಳಲು ಬಳಸುವ ದೊಡ್ಡ ಸುತ್ತಿಗೆ

೭೨. ಗೀಗಿ ಪದ–ದ್ವಿರುಕ್ತಿ ಪದಗಳು ಲಾಲಿತ್ಯವೆ

೭೩. ಗೀತ ನಾಟಕ–ಹಾಡಿನ ಕಥೆಯನ್ನು ಒಳಗೊಂಡ ನಾಟಕಕ್ಕೆ

೭೪. ಗುಂಡಗಡಿಗಿ–ಗೋಳಾಕಾರದ ಬೆಳ್ಳಿಯ ವಸ್ತು. ಅದರಲ್ಲಿ ಲಿಂಗ ಇಟ್ಟಿರುವರು. (ಆಸ್ತಿಕರು)

೭೫. ಗೆರೆಪಟ್ಟಿ–ಶಿಲ್ಪಿಗಾರ ಕಲ್ಲಿನ ಮೇಲೆ ಗೆರೆ ಹಾಕಿಕೊಳ್ಳಲು ಬಳಸುವ ಪಟ್ಟಿ

೭೬. ಗೋಂದಲಿಗರು–ತುಳಜಾಪುರ ಅಂಬಾಭವಾನಿ ಭಕ್ತರು. ಗೊಂದಲ ಹಾಕುವರು.

೭೭. ಗೌಳಗಿತ್ತಿ–ಹಾಲು–ಮೊಸರು ಮಾರುವ ಹೆಣ್ಣು. (ಪಾರಿಜಾತದ ಒಂದು ಹೆಣ್ಣು ಪಾತ್ರ)

೭೮. ಘಟ್ಟದ ಪರದೆ–ರಂಗಭೂಮಿಯಲ್ಲಿ ದೃಶ್ಯಗಳನ್ನು ಬದಲಿಸಲು ಬಳಸುವ ಬಟ್ಟೆ.

೭೯. ಚಕ್ಕಡಿ–ಎತ್ತಿನ ಬಂಡಿ ಎತ್ತು.

೮೦. ಚಲ್ತಿ–ಸಣ್ಣಾಟದಲ್ಲಿ ಪಾತ್ರದಾರಿ ಹಾಡಿನೊಂದಿಗೆ ಮೂರು ಬಾರಿ ಸುತ್ತುತ್ತಾ ಕುಣಿಯುವುದು.

೮೧. ಚಾಣ–ಕಮ್ಮಾರರು ಕಬ್ಬಿನ ಕೆಲಸ ಮಾಡಲು ಬೆಂಕಿ ಮಾಡಿಕೊಳ್ಳುವ ಒಲೆ. ಶಿಲ್ಪಿಗಾರರು ಕಲ್ಲನ್ನು ನಯವಾಗಿ ಕೆತ್ತಲು ಬಳಸುವ ಉಪಕರಣ

೮೨. ಚಾಲು–(ಇದು ಮರಾಠಿ ಪದ) ನಡೆಯುವ, ಬಳಕೆಯಲ್ಲಿರುವ. (ಆರಂಭಿಸುವುದು)

೮೩. ಚೀರ್ಣ–ಶಿಲ್ಪಿಗಾರ ಕಲ್ಲಿನಲ್ಲಿ ವಿನ್ಯಾಸ ಅಲಂಕಾರಿಕ ಕೆತ್ತನೆಗೆ ಬೇಕಾದ ವಸ್ತು

೮೪. ಚೌಗಾಡ–ಇದು ಹಲಗೆ ಮೇಳದಲ್ಲಿ ಹೆಚ್ಚಾಗಿ ಬಳಸುತ್ತಾರೆ. ಇದು ಡಗ್ಗಾ ಆಕಾರದಂತಿರುತ್ತದೆ. ಕೆಲವಡೆ ಇದಕ್ಕೆ ದಿಮ್ಮಿಯೆಂದು ಕರೆಯುತ್ತಾರೆ.

೮೫. ಚೌಡಕಿ–ಒಂದು ಬಗೆಯ ಚರ್ಮವಾದ್ಯ, (ಕಟ್ಟಿಗೆ ಕುತ್ತಿಗೆಗೆ ತಂತಿ ಬಿಗಿದು ನುಡಿಸುವ ವಾದ್ಯ)

೮೬. ಚೌಕಟ್ಟು–ನಾಲ್ಕು ಕಡೆಯಿಂದ ಕಟ್ಟಲ್ಪಟ್ಟದ್ದು, ಹೊರಕಟ್ಟು.

೮೭. ಜಂಗು–ಕಬ್ಬಿಣದ ಯಾವುದೇ ಸಲಕರಣೆಗಳು ತುಕ್ಕು ಹಿಡಿಯುವುದಾಗಿದೆ. ಉಪಯೋಗಿಸದೆ ಇರುವ ವಸ್ತುಗಳಿಗೆ–ಚಲನಕ್ರಿಯೆ ಇಲ್ಲದ್ದು.

೮೮. ಝುಲ್ಲರಿ–ಜಾಲರಿ, ಒಂದು ಬಗೆಯ ವಾದ್ಯ, ಡೋಲು

೮೯. ಝುಂಪತಾಳ–ಹತ್ತು ಮಾತ್ರೆಗಳ ಒಂದು ತಾಳ

೯೦. ಡಂಗೂರ–ತಮಟೆ, ಡೋಲು ಮುಂತಾದವನ್ನು ಬಡೆದುಕೊಂಡು ವಿಷಯವನ್ನು ಬಹಿರಂಗ ಪಡಿಸುವುದು.

೯೧. ಡಪ್ಪು–ಭಜನೆ ಸಣ್ಣಾಟಗಳಲ್ಲಿ ಬಳುವ ವಾದ್ಯ (ಕಟ್ಟಿಗೆ ವಾದದ ಚರ್ಮ ಬಿಗಿದಿರುವುದು)

೯೨. ಡಾಬು–ಸ್ತ್ರೀಯರ ನಡುಪಟ್ಟಿ (ಬೆಳ್ಳಿ, ಬಂಗಾರದ ವಸ್ತು ನಡಪಟ್ಟಿ)

೯೩. ಡಿಜಟಲೀಕರಣ–ತಂತ್ರಾಂಶ

೯೪. ಡೋಲಿ–ಪಲ್ಲಕ್ಕಿ, ಮನೆ (ಮೋಹರಂ ಹಬ್ಬದಲ್ಲಿ ಬಿಬಿ-ಪಾತಿಮಾ ಕುಳಿತುಕೊಳ್ಳುವ ಸ್ಥಳ)

೯೫. ತಮಟೆ–ಒಂದು ಬಗೆಯ ಚರ್ಮವಾದ್ಯ (ಕಂಚಿನ ಕೊಡಕೆ ಚರ್ಮ)

೯೬. ತಪಾಲಿ–ಕಂಚಿನ ಪಾತ್ರೆ ನೀರು ತುಂಬುವುದು

೯೭. ತಂಡಸ–ಕಮ್ಮಾರರು ಕುಲುಮೆಗೆ ಬೆಂಕಿ ತಳ್ಳುವ ಇಕ್ಕಳದಂತಹ ಉಪಕರಣ

೯೮. ತತ್ವವಾದ್ಯ–ತಂತಿಯ ಸಹಾಯದಿಂದ ನುಡಿಸುವಂತವು.

೯೯. ತಂತಿ–ಅಕ್ಕಸಾಲಿಗ ಆಭರಣಗಳ ಸುತ್ತಳತೆ ಅಳೆಯಲು ಬೇಕಾಗುವ ಲೊಹದ ತಂತಿ

೧೦೦. ತಾಳೆಗರಿ–ಶಿಲ್ಪಿಗಾರ ಪೂರ್ವದಲ್ಲಿ ತಾಳೆಗರಿಯನ್ನು ೧೨೦ ಭಾಗ ಮಾಡಿ ಅಳತೆಗಾಗಿ ಉಪಯೋಗಿಸುತ್ತಿದ್ದರು.

೧೦೧. ತಾಲೀಮ–ಅಭ್ಯಾಸ ರೂಢಿ, ವ್ಯಾಯಾಮ, ಗರಡಿ ಮನೆ

೧೦೨. ತಾಯಿತಾ–ಕೇಡಿನ ಬಾಧೆ ತಟ್ಟದಿರಲು ಧರಿಸುವ ರಕ್ಷೆ ಯಂತ್ರ

೧೦೩. ತಾಳಿ–ಮಂಗಲಸೂತ್ರ, ಹೆಣ್ಣು ಮಗಳಿಗೆ ಮದುವೆ ಸಂದರ್ಭದ ವಸ್ತು

೧೦೪. ತಿದಿ–ಕಮ್ಮಾರರು ಕುಲುಮೆಗೆ ಗಾಳಿ ಒದಗಿಸುವ ಚರ್ಮದ ಯಂತ್ರ. ಅಗಿಷ್ಟಕೆ ಉರಿಸಲು ಹವಾನಿಯಂತ್ರಿತ ವಸ್ತು.

೧೦೫. ತೂಕದ ಗುಂಡು–ಕಲ್ಲಿನ ಮಟ್ಟ ನೊಡಲು ಬಳಸುವ ಉಪಕರಣ

೧೦೬. ತೆಂಕು ಮತ್ತು ಬಡಗತಿಟ್ಟು–ಕರಾವಳಿಯ ಯಕ್ಷಗಾನ ಆಟದ ಎರಡು ಪ್ರಭೇದಗಳು

೧೦೭. ತೊಗಲುಗೊಂಬೆ–ಚರ್ಮದಿಂದ ತಯಾರಿಸಿದ್ದು, ಗೊಂಬೆ ನೆಲದ ಮೇಲೆ ಕುಣಿಯುವುದು.

೧೦೮. ದಪ್ಪಿಣಾಟ–ಸಣ್ಣವಾದ ಬಯಲಾಟಕ್ಕೆ ದಪ್ಪಿನಾಟ ಸಂಗ್ಯಾಬಾಳ್ಯಾ, ಸಣ್ಣಾಟದಲ್ಲಿ ದಪ್ಪ ವಾದ್ಯ ಬಳಸುವುದರಿಂದ

೧೦೯. ದಾಸರಾಟ–ಕೃಷ್ಣ ಪಾರಿಜಾತಕ್ಕೆ ಮೊದಲು ದಾಸರಾಟ ಎನ್ನುವರು.

೧೧೦. ದಾಟಿ–ತೀವ್ರ ಲೇಖನ, ಸರಳ ವಾಚನಶಾಸ್ತ್ರ (ರಾಗ ಸಂಯೋಜನೆ)

೧೧೧. ದಾರ–ಶಿಲ್ಪಿಗಾರ ಅಳತೆಗಾಗಿ ಬಳಸುವ ವಸ್ತು

೧೧೨. ದೀವಟಗಿ–ಪ್ರಾಚಿನ ಕಾಲದ ಪಾರಿಜಾತದಂತ ನಾಟಕಗಳಿಗೆ ಎರಡು ಕಡೆ ಪಂಜಿನ ದೀಪಕ್ಕೆ ದೀವಟಿಗೆ ಎನ್ನುವರು.

೧೧೩. ದುಂದುಬೀ–ಕಹಳೆ, ಚರ್ಮವಾದ್ಯ, ಜಾಗಟೆ ಮುಂತಾದ ದೊಡ್ಡ ಪ್ರಮಾಣದ ಚರ್ಮವಾದ್ಯ ಒಂದು ಸಂವತ್ಸರದ ಹೆಸರು.

೧೧೪. ದುಂಡರ–ಶಿಲ್ಪಿಗಾರ ಮೂರ್ತಿಯ ಸಂದು ಗೊಂದುಗಳಲ್ಲಿ ಉಜ್ಜಿ ನಯಗೊಳಿಸಲು ಬೇಕಾದ ಅರ.

೧೧೫. ದೂತಿ–(ದೋತಿ) ಪಾರಿಜಾತ ನಾಟಕದ ಒಂದು ಹಾಸ್ಯಪಾತ್ರ, ಸೇವಕಿ, ಸುದ್ದಿಯನ್ನು ಮುಟ್ಟಿಸುವಳು.

೧೧೬. ದೊಡ್ಡಾಟ–ಗಾತ್ರದಲ್ಲಿ ಹಿರಿದಾದ ಕಥೆಯನ್ನು ಒಳಗೊಂಡ ನಾಟಕ. ಎರಡರಿಂದ ಮೂರು ನಾಲ್ಕು ರಾತ್ರಿ ನಡೆಯುವ ನಾಟಕ

೧೧೭. ದೋಣಿ–ಅಕ್ಕಸಾಲಿಗ ಲೋಹ ಕರಗಿಸಿ ಸುರಿಯಲು ಹಿಂದೆ ಬಳಸುತ್ತಿದ್ದ ಬಳಪದ ಕಲ್ಲಿನ ಪಾತ್ರೆ

೧೧೮. ದ್ವಾರ ಬಾಗಿಲು–ಮುಖ್ಯ (ಮನೆಯ) ಬಾಗಿಲು, ಅಗಸಿ ದ್ವಾರ ಬಾಗಿಲು ಎನ್ನುವರು

೧೧೯. ಡ್ರಿಲ್–ಶಿಲ್ಪಿಗಾರ ತೂತು ಕೊರೆಯುವ ಯಂತ್ರ

೧೨೦. ನಗಾರಿ–ದೊಡ್ಡ ಚರ್ಮವಾದ್ಯ ಡೊಳ್ಳುವಾದ್ಯ.

೧೨೧. ನಾಲ್ಕರ ಪಟ್ಟಾಗ–ನಾಲ್ಕು (ಹಾರ್ಮೋನಿಯಂದಲ್ಲಿ ಬರುವ ಕೊನೆಯ ಸೂರು) ಪೆಟ್ಟು (ಚರ್ಮವಾದ್ಯ)

೧೨೨. ನಾದಿನಿ–ಗಂಡನ ಸಹೋದರಿ, ಅಥವಾ ಮೈದುನನ ಹೆಂಡತಿ

೧೨೩. ನಾಯಿ–ಕಮ್ಮಾರ ಬಂಡಿಯ ಹಳಿ ಹಿಡಿದು ಕೂರಿಸಲು ಬೇಕಾದ ಉಪಕರಣ

೧೨೪. ನಾಗಸ್ವರ ಅಥವಾ ನಾಗಸರ– ಪುಂಗಿಯ ದನಿ, ಭಜಂತ್ರಿಯ ಶಯನಾಯಿ ಸುಳಿದನಿ

೧೨೫. ನಿಸೆ–ಮದ, ಮಸ್ತಿ ಸೂರಪಾನಿಯ ಪಿತ್ತ.

೧೨೬. ನೊಗ–ಎತ್ತಿನ ಹೆಗಲ ಮೇಲೆ ಹೇರುವ ಕಟ್ಟಿಗೆಯ ದಿಂಡು (ಚಕ್ಕಡಿಯ ಭಾರ) ಅಥವಾ ಸಂಸಾರ ಭಾರ.

೧೨೭. ಪಗಡೆ–ಜೂಜಿನ ಕಾಯಿ (ಕೌರವ–ಪಾಂಡವರು ಆಡಿದ ಆಟ ಪಗಡೆ)

೧೨೮. ಪಂಚಭೂತಗಳು–ಐದು ತತ್ವಗಳು (ನೀರು, ಬೆಂಕಿ, ವಾಯು, ನೆಲ, ಆಕಾಶ)

೧೨೯. ಪಟ್ಟೆ–ಶಿಲ್ಪಿಗಾರ ಗರಗಸದ ಆಕಾರದಲ್ಲಿರುವ ಕಲ್ಲಿನ ಮೇಲೆ ಗೆರೆ ಹಾಕಲು ಬಳಕೆಯಾಗುವ ವಸ್ತು

೧೩೦. ಪಲ್ಲಕ್ಕಿ–ದೇವರು, ಅಥವಾ ಗುರುಗಳ ಸಂಚಾರದ ವ್ಯವಸ್ಥೆಗೆ ಮನುಷ್ಯರನ್ನು ವಾಹನಕ್ಕೆ ಬಳಸುವುದು.

೧೩೧. ಪಡುವಲ–ಪಶ್ಚಿಮ ದಿಕ್ಕು–ಕನ್ನಡ ಪದಸೂರ್ಯ ಮುಳುಗುವ ಪ್ರದೇಶ.

೧೩೨. ಪಾಂಚಾಳ-ಐದು ಕುಲಕುಸುಬುದಾರರು, ಶಿಲ್ಪಿ, ಬಡಿಗ, ಕುಮಾರ, ಪತ್ತಾರ, ಕಂಚುಗಾರ

೧೩೩. ಪೀಟಿಲು-ತಂತಿವಾದ್ಯಗಳ ಬಂದು ಸಾಧನ

೧೩೪. ಉಪಕರಣ- ಪಾಂಚಾಳರ ವಿವಿಧ ವಸ್ತುಗಳು

೧೩೫. ಪ್ಲೇನರ್-ಶಿಲ್ಪಿಗಾರ ಮೂರ್ತಿಯನ್ನು ನುಣುಪುಗೊಳಿಸಲು ಬೇಕಾದ ಯಂತ್ರ

೧೩೬. ಪೆಟ್ರೋಮಾಕ್ಸ್ ದೀಪಗಳು-ಜಗಬೆಳಗುವ/ ರಂಗ ಮಂದಿರ ಬೆಳಗುವ ವಿದ್ಯುತ್ ದೀಪಗಳು.

೧೩೭. ಬಯಲಾಟ-ಉತ್ತರ ಕರ್ನಾಟಕದ ನಾಟಕ (ಬಯಲಲ್ಲಿ ಆಡುವ ಆಟ)

೧೩೮. ಬಳಿ-ಕೈಗೆ ಧರಿಸುವ ವಸ್ತು. ಮುತ್ತೈದೆ ಹೆಣ್ಣು ಮಕ್ಕಳು ಕೈಗೆ ಬಳೆಗಳನ್ನು ಧರಿಸುವರು.

೧೩೯. ಬಾಚಿ-ಬಡಿಗ ಮರದ ಕೆತ್ತನೆಗೆ ಬಳಸುವ ಸಾಧನ

೧೪೦. ಭಾಮಾಕಲಾಪ-ಕೃಷ್ಣ ಪಾರಿಜಾತದಲ್ಲಿ ಬರುವ ಸತ್ಯಭಾಮಾ ಪ್ರಸಂಗ.

೧೪೧. ಭಾಗವತ-ಬಯಲಾಟ ನಿರ್ದೇಶಕ (ಹರಿದಾಸ) ಕಲಿಸುವವನು.

೧೪೨. ಬೆಚ್ನೆ-ಕಮ್ಮಾರ ಬಂಡಿ ಇರ್ಸು ಮಾಡಲು ಬಳಸುವ ಉಪಕರಣ.

೧೪೩. ಬ್ರಶ್-ಕಂಚುಗಾರ ವಿಗ್ರಹ, ವಸ್ತು ತೊಳೆಯಲು ಹೊಳಪಿನ ಬಣ್ಣ ಹಚ್ಚಲು ಬೇಕಾದ ಕುಂಚ.

೧೪೪. ಬೇರಿ-ರಾಜನ ಆಜ್ಞೆಗಳನ್ನು ಸಾರುವ ಚರ್ಮವಾದ್ಯ

೧೪೫. ಬೋರಮಾಳ-ಹೆಣ್ಣು ಮಗಳು ಧರಿಸುವ ಒಂದು ತರದ ಆಭರಣ.

೧೪೬. ಮದ್ದಳೆ-ವಾದ್ಯ ದೇವರ ಗುಡಿಯಲ್ಲಿ ಪೂಜೆ ಸಂದರ್ಭ ಬಾರಿಸುವ ವಾದ್ಯ

೧೪೭. ಮಚ್ಚಾಲಗಿ-ಕಮ್ಮಾರ ಅಳತೆಗಾಗಿ ಬಳಸುವ ಉಪಕರಣ

೧೪೮. ಮಾಶಾಸನ-ವಿವಿಧ ಕಲೆಗಳಲ್ಲಿ ಸಲ್ಲಿಸಿದ ಕಲಾವಿದನಿಗೆ ರಾಜ್ಯ ಕೇಂದ್ರ ಸರಕಾರ ಕೊಡ ಮಾಡುವ ಗೌರವಧನಕ್ಕೆ

೧೪೯. ಮೂಡಲಪಾಯ-ಮೂಡಲ ಸೂರ್ಯ ಉದಯಿಸಿದ ಪ್ರದೇಶ. ಪಾಯ-ತಳ ಕೃಷ್ಣ ಪಾರಿಜಾತ

೧೫೦. ಮೇಣದ ಕಡ್ಡಿ-ಕಂಚುಗಾರ ಗಂಧದ ಮರದಿಂದ ತಯಾರಿಸಿದ ಮೇನದ ಕೆಲಸದಲ್ಲಿ ಬಳಸುವ ವಸ್ತು.

೧೫೧. ಮಿಂಚಿಕಲ್-ಅಕ್ಕಸಾಲಿಗ ಲೋಹಕ್ಕೆ ಹೊಳಪು ಬರಿಸಲು ಬೇಕಾದ ವಸ್ತು

೧೫೨. ಮುಮ್ಮೇಳ-ಮುಖ್ಯ ಪಾತ್ರಧಾರಿಗಳು ಸಂಭಾವನೆ, ಪಾರಿಜಾತ ನಾಟಕದ ಸಂಗವೇದಿಕೆಯಲ್ಲಿ ಹಿಂದೆ ರಾಗ, ತಾಳ ಪೇಟಿಗೆ ಪಾರಿಸುವವರಿಗೆ ಹಿಮ್ಮೇಳ

೧೫೩. ಮೇಳ-ಸಹಪಾಟಿಗಳೂ ಕೂಡಿ ಕಟ್ಟಿದ ಪರಿಜಾತ ಕಂಪನಿಗಳಿಗೆ ಮೇಳ ಎನ್ನುವರು

೧೫೪. ಮೃದಂಗ-ಚರ್ಮ ವಾದ್ಯದ ಮದ್ದಳೆಗೆ ಮೃದಂಗ ಎನ್ನುವರು

೧೫೫. ಯಕ್ಷಗಾನ-ದಕ್ಷಿಣ ಕರ್ನಾಟಕದ ಕರಾವಳಿಯ ಪ್ರದರ್ಶನ ಕಲೆ

೧೫೬. ರಂಗಭೂಮಿ-ನಾಟಕ ಆಡುವ ಮಂಟಪ

೧೫೭. ರಂಗಕರ್ಮಿ-ನಾಟಕ ಆಡುವ ಕಲಾವಿದನಿಗೆ ಅಥವಾ ರಂಗಭೂಮಿಯನ್ನು ವೃತ್ತಿಯನ್ನಾಗಿ ಮಾಡಿಕೊಂಡಿರುವವನಿಗೆ

೧೫೮. ರಂಗ ನಿರ್ದೇಶಕ-ಕಥಾ ಸಂಚಾಲಕ ಅಥವಾ ನಾಟಕಕ್ಕೆ ಸಂದೇಶ ನೀಡುವ

೧೫೯. ರವಕಡ್ಡಿ-ಅಕ್ಕಸಾಲಿಗ ಗುಂಡಿಗಳನ್ನು ಪೋಣಿಸುವ ಸಣ್ಣ ತಂತಿಯ ಕಡ್ಡಿ

೧೬೦. ರಾವ್ಗೋಲು-ಕಂಚುಗಾರರು ಕುಲುಮೆ ಬೆಂಕಿ ಸರಿ ಮಾಡುವ ಉಪಕರಣ

೧೬೧. ರಿಯಾಲಿಟಿಶೋ-ತಾತ್ಕಾಲಿಕ ಪ್ರದರ್ಶನ ಕಲೆ(ಆಂಗ್ಲಪದ)

೧೬೨. ಲಲ್ಯೆ-ಹಾಸ್ಯ ಪಾತ್ರದವಳು

೧೬೩. ಲಾಲೂ-ನಪುಂಸಕನಾದ ವ್ಯಕ್ತಿಯು ವೇಶ್ಯೆಯರು ಮನೆಯ ಸೇವಕ

೧೬೪. ಲಾವಣಿ-ಒಂದು ಹಾಡಿನ ರೂಪದ ಗೀತ ರೂಪಕ

೧೬೫. ವತ್ತಡಮಣಿ-ಕಂಚುಗಾರರು ತೊಡೆಗೆ, ವಿಗ್ರಹಕ್ಕೆ ಅಧಾರವಾಗಿಟ್ಟುಕೊಂಡು ಕೆಲಸ ಮಾಡುವ ಮಣಿ

೧೬೬. ಒಳ ಕಂಪಾಸ್-ಕಂಚುಗರರು ಕೈವರದಲ್ಲಿನ ಒಂದು ವಿಧ

೧೬೭. ವೀರಗಾಸೆ-ವೀರಭದ್ರನ ಅವತಾರಗಳನ್ನು ತಾಳಿ ಭೂತ ವರ್ತಮಾನದಲ್ಲಿದ್ದು, ಉಡುಪುಗಳಲ್ಲಿ ಭವಿಷ್ಯ ತಿಳಿಸುವರು.

೧೬೮. ವಿದ್ವಾನ-ಪಂಡಿತ ಜ್ಞಾನವಂತ

೧೬೯. ಸಣ್ಣಾಟ-ಗಾತ್ರದಲ್ಲಿ ಚಿಕ್ಕದಾದ ಕಥೆ ಇರುವ ನಾಟಕ ಇದಕ್ಕೆ ದಪ್ಪಿನ ಆಟ

೧೭೦. ಸಂಬಾಳ-ಗೊಂದಲಿಗರು, ಪುರವಂತರು ಇದನ್ನು ವಿಶೇಷವಾಗಿ ಬಳಸುತ್ತಾರೆ. ಜೋಡು ಜೋಗಾಣಿಯನ್ನು ಬಳಸಿಕೊಂಡು ಅದಕ್ಕೆ ಚರ್ಮ ಹೊದಿಸಿ ರೂಪಿಸಿದ ವಾದ್ಯ

೧೭೧. ಸುತ್ತಿಗೆ-ಕಂಚುಗಾರ ಕಂಚಿನ ಕೆಲಸ ಮಾಡುವಾಗ ಬಡಿಯಲು ಬೇಕಾದ ಉಪಕರಣ

೧೭೨. ಸಾಣಿಕಲ್ಲು-ಉಪಕರಣಗಳನ್ನು ಹರಿತ ಮಾಡಿಕೊಳ್ಳಲು ಬಳಸುವ ಉಪಕರಣ

೧೭೩. ಸಾಣೆ–ಶಿಲ್ಪಿಗಾರ ತಿರುಗುವ ಚಕ್ರ, ಮೊಂಡಾದ ಆಯುಧಗಳನ್ನು ಹರಿತಗೊಳಿಸಲು ಬೇಕಾದ ಉಪಕರಣ

೧೭೪. ಸುತ್ತಿಗೆ–ಶಿಲ್ಪಿಗಾರ ಮೂರ್ತಿ ತಯಾರಿಸುವಾಗ ಚಾನ, ಮೊಳೆ, ಉಳಿಗಳನ್ನು ಕಲ್ಲಿನ ಮೇಲೆ ಬಡಿಯಲು ಬಳಸುವ ಉಪಕರಣ. ಅಕ್ಕಸಾಲಿಗ ಆಭರಣಗಳನ್ನು ತಯಾರಿಕೆಯಲ್ಲಿ ಬಡಿಯಲು ಬಗ್ಗಿಸಲು ಬೇಕಾದ ಉಪಕರಣ

೧೭೫. ಸಂಗ್ರಾಣಿ ಕಲ್ಲು–ಕಾರಹುಣ್ಣಿಮೆ ಮುಂತಾದ ತಮ್ಮ ಜಾತ್ರೆ ಉತ್ಸವಗಳಲ್ಲಿ ಬಳಸುವ ದೈಹಿಕ ಕಸರಿತ್ತಿನ ವಸ್ತುಗಳು ಸಂಗ್ರಾಣಿಕಲ್ಲು ಎನ್ನುವರು.

೧೭೬. ಸಾರಥಿ–ಶ್ರೀಕೃಷ್ಣ ಪಾರಿಜಾತ ದೊಡ್ಡಾಟದಲ್ಲಿ ಬರುವ ಪಾತ್ರ, ರಥ ಓಡಿಸುವ ಚಾಲಕ

೧೭೭. ಸಾಥ್–ವಾದ್ಯ, ಸಂಗೀತ, ಹಾರ್ಮೊನಿಯ ಜೊತೆ ಜೊತೆಯಾಗಿ ಬರುವುದು.

೧೭೮. ಸಿತಾರ–ತಂತಿ ವಾದ್ಯಗಳಲ್ಲಿ ಬರುವುದು.

೧೭೯. ಸಹನಾಯಿ –ಊದುವ ಗುಳಿ ವಾದ್ಯಗಳು (ಉಸಿರು ವಾದ್ಯಗಳು)

೧೮೦. ಸೂತ್ರದಾರ–ನಾಟಕ (ಪಾರಿಜಾತ) ಪ್ರಮುಖ ವ್ಯಕ್ತಿ ಈತನು

೧೮೧. ಸೂರ್ (ಧ್ವನಿ)–ಸಂಭಾಷಣೆ ನಡುನಡುವೆ ರಾಗ, ಸೂರ್ ಹಿಡಿಯುವನು.

೧೮೨. ಸೂತ್ರಗೊಂಬೆ – ಕಟ್ಟಿಗೆಯಿಂದ ತಯಾರಿಸಿದ ಗೊಂಬೆಗಳು ಬದುಕಿನ ನಾನಾರ್ಥಗಳನ್ನು ಕಲ್ಪಿಸಿಕೊಡುತ್ತದೆ.

೧೮೩. ಸೂಫಿ ಸಂತರ–ಇಸ್ಲಾಂ ಧರ್ಮದ ಅನುಯಾಯಿಗಳು, ಧರ್ಮ ಪ್ರಚಾರಕರು

೧೮೪. ಸ್ಕೊಡ್ರೈವರ್–ಬಡಿಗೇರರು ಮೊಳೆಗಳನ್ನು ಹಾಕಿ ತಿರುವಲು ಬೇಕಾದ ಉಪಕರಣ

೧೮೫. ಶ್ರೀಕೃಷ್ಣ ಪಾರಿಜಾತ–ಮಹಾಭಾರತದಲ್ಲಿ ಬರುವ ಪ್ರಮುಖ ಪಾತ್ರ, ಕೃಷ್ಣ ಕಥೆಯನ್ನು ಒಳಗೊಂಡ ನಾಟಕ

೧೮೬. ಹಂಡೆ–ನೀರು ತುಂಬುವ ಕಂಚಿನ ಪಾತ್ರೆಗೆ ಎನ್ನುವರು

೧೮೭. ಹಾರಿ–ಅಕ್ಕಸಾಲಿಗರು ಉಂಗುರ ತಯಾರಿಕೆಯಲ್ಲಿ ಬಡಿಯಲು ಬಗ್ಗಿಸಲು ಬೇಕಾದ ಉಪಕರಣ. ಉಂಗುರ ತಯಾರಿಕೆಯಲ್ಲಿ ಬಳಸುವ ಉಪಕರಣ.

೧೮೮. ಹಾರ್ಮೋನಿಯಂ–ಇದು ಆಂಗ್ಲ ಪದ ಕನ್ನಡದಲ್ಲಿ ಪೆಟ್ಟಿಗೆ. ಇಂದೊಂದು ಸಂಗೀತ ಸ್ವರವಾದ್ಯ

೧೮೯. ಹಿಂಗಾರಿ– ಒಕ್ಕಲುತನದ ಮೊದಲಿನ ಬೆಳೆಗೆ ಹಿಂಗಾರಿ ಎನ್ನುವರು.

೧೯೦. ಹಿಡಿಸ್ಯಾಳ–ಬಡಿಗೇರರು ಸಣ್ಣಸಣ್ಣ ರಂಧ್ರ ಮಾಡಲು ಬೇಕಾದ ಉಪಕರಣ

ವಕ್ತೃಗಳ ವಿವರ

೩. ವಕ್ತೃಗಳ ವಿವರ

ಕ್ರಸಂ.	ಹೆಸರು	ಉದ್ಯೋಗ	ಊರು	ಜಾತಿ	ವಯಸ್ಸು
೧.	ವೀರೇಶ್ ಬಡಿಗೇರ್	ಪ್ರಾಧ್ಯಾಪಕರು	ಬೆಣ್ಣೂರು	ಬಡಿಗೇರ	೫೪
೨.	ಶ್ರೀರಾಮ ಇಟ್ಟಣ್ಣವರ	ವಿದ್ವಾಂಸರು	ಬಿಳಗಿ	ಕುರುಬ	೬೮
೩.	ಅಶೋಕ ನರೋಡೆ	ವಿದ್ವಾಂಸರು	ಮಹಾಲಿಂಗಪುರ	ಲಿಂಗಾಯತ	೫೪
೪.	ರಾಣಿ ಚಿನಗುಂಡಿ	ಉಪನ್ಯಾಸಕಿ	ಮಹಾಲಿಂಗಪುರ	ಲಿಂಗಾಯತ	೫೬
೫.	ಶ್ರೀಶೈಲ ಕಂಕಣವಾಡಿ	ಉಪನಿರ್ದೇಶಕ	ಹಾರೂಗೇರಿ	ಕುರುಬ	೪೦
೬.	ಶ್ರೀಶೈಲ ಕರಿಶಂಕರಿ	ನಿರ್ದೇಶಕರು	ಬಾಗಲಕೋಟೆ	ಲಿಂಗಾಯತ	೫೮
೭.	ಬಸವರಾಜ ಕೋಣ್ಣೂರ	ಶಿಕ್ಷಕರು	ಬೆಳಗಾವಿ	–	೫೨
೮.	ಸಿ.ಕೆ. ನಾವಲಗಿ	ವಿದ್ವಾಂಸರು	ಗೋಕಾಕ	–	೬೪
೯.	ರಾಮಕೃಷ್ಣ ಮರಾಠೆ	ವಿದ್ವಾಂಸರು	ಬೆಳಗಾವಿ	–	೫೫
೧೦.	ಈಶ್ವರಚಂದ್ರ ಬೆಟಗೇರಿ	ಕಲಾವಿದರು	ಘಟಪ್ರಭಾ	ಪಾಂಚಾಳ	೬೨
೧೧.	ವಿ.ಎಸ್ ಮಾಳಿ	ವಿದ್ವಾಂಸರು	ಹಾರೂಗೇರಿ	ಲಿಂಗಾಯತ	೫೬
೧೨.	ಬಸವಲಿಂಗಯ್ಯಹಿರೇಮಠ	ಕಲಾವಿದರು	ಧಾರವಾಡ	ಲಿಂಗಾಯತ	೬೫
೧೩.	ರಾಜೇಶ್ವರಿ ಹಿರೇಮಠ	ಕಲಾವಿದರು	ಧಾರವಾಡ	ಲಿಂಗಾಯತ	೫೪
೧೪.	ಅಪ್ಪಣ್ಣ ಅಳ್ಳಿಚಂಡಿ	ಕಲಾವಿದರು	ಬ.ಬಾಗೇವಾಡಿ	ವಾಲ್ಮೀಕಿ	೭೨
೧೫.	ಯಲ್ಲವ್ವ ರೋಡ್ಡಪ್ಪನವರ	ಕಲಾವಿದರು	ಲೋಕಾಪುರ	ಮಾದರ	೬೮
೧೬.	ಮಲ್ಲವ್ವ ಮ್ಯಾಗೇರಿ	ಕಲಾವಿದರು	ಬೈಲಹೊಂಗಲ	ಮಾದರ	೬೫
೧೭.	ಕಾಶಿಬಾಯಿ ದಾದನಹಟ್ಟಿ	ಕಲಾವಿದರು	ದಾದಹಟ್ಟಿ	ಮಾದರ	೬೮
೧೮.	ರಾಯಪ್ಪ ಸಂ.ಕುಂಬಾರ	ಕಲಾವಿದರು	ಕುಂಚನೂರು	ಕುಂಬಾರ	೭೦
೧೯.	ಸಿದ್ರಾಮಪ್ಪ ಬ.ಕೋಲಾರ	ಕಲಾವಿದರು	ತುಳಸಿಗೇರೆ	ದಾಸರು	೫೨
೨೦.	ಮಲ್ಲಿಕಾರ್ಜುನಮುದಕವಿ	ಕಲಾವಿದರು	ದಾದನಟ್ಟಿ	ಕಂಬಾರ	೭೫
೨೧.	ಎಸ್.ಎಸ್.ಬಡಿಗೇರ	ಶಿಕ್ಷಕರು	ಮುರನಾಳ	ಬಡಿಗೇರ	೪೮
೨೨.	ಎಚ್.ಆರ್.ಬಡಿಗೇರ	ಶಿಕ್ಷಕರು	ಸೀಮಿಕೇರಿ	ಬಡಿಗೇರ	೫೨
೨೩.	ಜಗನ್ನಾಥಮಹಾಪುರುಷ	ಮಠಾಧೀಶರು	ಬಾಗಲಕೋಟೆ,	ಪಾಂಚಾಳ	೫೮

೨೪. ಬಸವರಾಜ ರಂ.ಪತ್ತಾರ	ಕಲಾವಿದರು	ಕೂಡಲಸಂಗಮ	ಪತ್ತಾರ	೫೦
೨೫. ನಾಮದೇವ ವಿ.ಬಡಿಗೇರ	ಶಿಕ್ಷಕರು	ವಿದ್ಯಾಗಿರಿಬಾಗಲಕೋಟೆ	ಬಡಿಗೇರ	೮೨
೨೬. ಭೀಮಸೇನ ಬಡಿಗೇರ	ಕಲಾವಿದ	ಲೋಕಾಪುರ	ಬಡಿಗೇರ	೫೪
೨೭. ಚಿದಾನಂದ ಬಡಿಗೇರ	ಕಲಾವಿದ	ಬಿಳಗಿ	ಬಡಿಗೇರ	೫೮
೨೮. ಭೀಮಪ್ಪ ಕಾ. ಬಡಿಗೇರ	ಕಲಾವಿದ	ಬಾದಾಮಿ	ಬಡಿಗೇರ	೬೫
೨೯. ಮಳಿಯಪ್ಪಯ್ಯಸ್ವಾಮಿಗಳು	ಮಠಾಧೀಶರು	ಗದ್ದನಕೇರಿ	ಪಾಂಚಾಳ	೪೫
೩೦. ಮನೋಹರ ಪತ್ತಾರ	ಕಲಾವಿದ	ಬಾಗಲಕೋಟೆ	ಪತ್ತಾರ	೬೨
೩೧. ರಮೇಶ ಪತ್ತಾರ	ಕಲಾವಿದ	ಚಿತ್ತರಾಗಿ	ಪತ್ತಾರ	೫೦
೩೨. ವೀರೇಶ ಭೀ.ಪತ್ತಾರ	ಕಲಾವಿದ	ಇಲಾಳ	ಪತ್ತಾರ	೫೪
೩೩. ಸಿದ್ದಯ್ಯ ಈ.ಪತ್ತಾರ	ಕಲಾವಿದ	ಬಿಜಾಪುರ	ಪತ್ತಾರ	೬೨
೩೪. ಶೀಲವಂತ ಪತ್ತಾರ	ವಿದ್ವಾಂಸರು	ಬಾದಾಮಿ	ಪತ್ತಾರ	೭೨
೩೫. ಹನುಮಂತ ಕಂಬಾರ	ಕಲಾವಿದ	ಬಸವನಬಾಗೇವಾಡಿ	ಕಂಬಾರ	೬೫
೩೬. ಹನುಮಂತ ಕಂಬಾರ	ಕಲಾವಿದ	ಕ್ಯಾಸನೂರು	ಕಂಬಾರ	೬೬
೩೭. ವಿಜಯಕುಮಾರ್ಬಡಿಗೇರ	ಅಕ್ಕಸಾಲಿಗ	ಅಚನೂರು	ಬಡಿಗೇರ	೩೦
೩೮. ಮಾನಪ್ಪ ಈ.ಬಡಿಗೇರ್	ಬಡಿಗತನ	ಅಚನೂರು	ಬಡಿಗೇರ	೬೪
೩೯. ಗಣೇಶ್ ಹೊರಪೇಟೆ	ಪ್ರವಚನಕಾರರು	ಇಲಾಳ	ಪತ್ತಾರ	೫೨
೪೦. ರಾಮಚಂದ್ರ ಕಂಬಾರ	ಕಂಬಾರಿಕೆ	ಬೇವೂರು	ಕಂಬಾರ	೫೪
೪೧. ಈರಣ್ಣ ಶಂ. ಪತ್ತಾರ	ಬಡಿಗತನ	ಬೇವೂರು	ಪತ್ತಾರ	೪೪
೪೨. ಕಾಳಪ್ಪ ನೀ. ಬಡಿಗೇರ	ಶಿಕ್ಷಕರು	ಬ.ಬಾಗೇವಾಡಿ	ಪತ್ತಾರ	೬೨
೪೩. ಪ್ರವೀಣ್ ಕಾ.ಬಡಿಗೇರ್	ವರದಿಗಾರ	ಬ.ಬಾಗೇವಾಡಿ	ಪತ್ತಾರ	೩೦
೪೪. ಪಿ.ಬಿ. ಬಡಿಗೇರ	ಶಿಕ್ಷಕರು	ಹನುಮಸಾಗರ	ಬಡಿಗೇರ	೬೦
೪೫. ವಿಶ್ವನಾಥಮಹಾಸ್ವಾಮಿಗಳು	ಕಲಾವಿದರು	ಗದ್ದನಕೇರಿ	ಪಾಂಚಾಳ	೬೮
೪೬. ಚಿದಾನಂದಪ್ಪ ಪತ್ತಾರ್	ಕಲಾವಿದರು	ಛಬ್ಬಿ	ಪತ್ತಾರ	೬೦
೪೭. ಗ್ಯಾನಪ್ಪ ಪತ್ತಾರ	ವರದಿಗಾರರು	ಲೋಕಾಪುರ	ಪತ್ತಾರ	೪೫
೪೮. ಕಾಂತಮನಹಳ್ಳಿ ಪತ್ತಾರ್	ರಜಶಿಲ್ಪಿ	ಬಾಗಲಕೋಟೆ	ಪತ್ತಾರ	೬೨
೪೯. ನಾಗಲಿಂಗಪ್ಪ ಗಂಗೂರು	ರಜಿತಶಿಲ್ಪಿ	ಬಾಗಲಕೋಟೆ	ಪತ್ತಾರ	೭೦

೩೦. ಮಂಜುನಾಥ ಆರ್ಯ	ವರದಿಗಾರ	ಉಡುಪಿ	ಪತ್ತಾರ	೬೨
೩೧. ಸಂಗಮೇಶ ಬಡಿಗೇರ	ವರದಿಗಾರ	ಬಾಗಲಕೋಟೆ	ಬಡಿಗೇರ	೩೬
೩೨. ನಾರಾಯಣ ಪತ್ತಾರ್	ಕಲಾವಿದರು	ಸೊನ್ನ	ಪತ್ತಾರ	೭೨
೩೩. ಗಣಪತ್ತೆಪ್ಪ ಕಮ್ಮಾರ	ಕಲಾವಿದರು	ಹೆರಕಲ್ಲು	ಕಮ್ಮಾರ	೮೦
೩೪. ಮಲ್ಲಪ್ಪ ಮಾಯಾಚಾರಿ	ಶಿಲ್ಪಿ	ಬಾಗಲಕೋಟೆ	ಪಾಂಚಾಳ	೫೪
೩೫. ನಿರೂಪಾದಪ್ಪ ಈರಪ್ಪ	ಶಿಲ್ಪಿ	ಬಾಗಲಕೋಟೆ	ಪತ್ತಾರ	೭೨
೩೬. ಅನಂತಪ್ಪ ಬಡಿಗೇರ್	ಕಲಾವಿದರು	ಛಬ್ಬಿ	ಬಡಿಗೇರ	೬೫
೩೭. ನಾರಾಯಣ ಪತ್ತಾರ್	ಕಲಾವಿದರು	ದಾದನಟ್ಟಿ	ಪತ್ತಾರ	೭೦
೩೮. ಮಲ್ಲೋಜಿ ಮಾಯಾಚಾರಿ	ಶಿಲಾಶಿಲ್ಪಿ	ಬಾಗಲಕೋಟೆ	ಪಾಂಚಾಳ	೬೫
೩೯. ರಾಜುಕಂಬಾರ	ಉಪನಾಸಕ	ಕೌಜಲಗಿ	ಕಂಬಾರ	೪೬
೬೦. ವೀರೇಶ್ ಬಡಿಗೇರ್	ಉಪನ್ಯಾಸಕರು	ಅಥಣಿ	ಬಡಿಗೇರ	೩೬
೬೧. ರಾಜಶೇಖರ ಕಂಬಾರ	ವರದಿಗಾರರು	ಘೋಡಗೇರಿ	ಕಂಬಾರ	೪೪
೬೨. ವಿಠಲ ಬಡಿಗೇರ	ಕಲಾವಿದರು	ಛಬ್ಬಿ	ಬಡಿಗೇರ	೪೨
೬೩. ನಾರಾಯಣ ಪತ್ತಾರ	ಕಲಾವಿದರು	ಲೋಕಪುರ	ಪತ್ತಾರ	೨೪
೬೪. ಚಂದ್ರಶೇಖರ ಬಡಿಗೇರ	ಕಲಾವಿದರು	ಬಾಗಲಕೋಟೆ	ಬಡಿಗೇರ	೭೬
೬೫. ಭೀಮಶಿ ಕಂಬಾರ್	ತಾಳತಯಾರಕ	ಹಂದಿಗುಂದ	ಕಂಬಾರ	೬೫
೬೬. ವಸಂತ ಆಚಾರ್ಯ	ಕೀರ್ತನಕಾರರು	ಸವದತ್ತಿ	ಪಾಂಚಾಳ	೬೦
೬೭. ಚಂದ್ರಶೇಖರ ಪತ್ತಾರ	ಅಕ್ಕಸಾಲಿಗ	ಮುದ್ದೇಬಿಹಾಳ	ಪತ್ತಾರ	೬೫
೬೮. ಧ್ರುವ ಪತ್ತಾರ	ಅಕ್ಕಸಾಲಿಗ	ವಿಜಯಪುರ	ಪತ್ತಾರ	೭೬
೬೯. ಮೌನೇಶ ಕಂಬಾರ	ಕಲಾವಿದರು	ಮುಧೋಳ	ಕಂಬಾರ	೪೨
೭೦. ಮೌನೇಶ ಬಡಿಗೇರ	ಕಲಾವಿದರು	ಮುಧೋಳ	ಬಡಿಗೇರ	೪೨
೭೧. ನಾಗರಾಜ ಪತ್ತಾರ	ಕಲಾವಿದರು	ಮೆರಗುದ್ದಿ	ಪತ್ತಾರ	೩೨.
೭೨. ಸೋಮಪ್ಪ ಬಡಿಗೇರ	ಕಲಾವಿದರು	ಮಹಾಲಿಂಗಪುರ	ಬಡಿಗೇರ	೬೫
೭೩. ಭೀಮಶಿ ಕಂಬಾರ	ಕಲಾವಿದರು	ದಾದನಟ್ಟಿ	ಕಂಬಾರ	೬೬
೭೪. ವಿಠಲ ಕಂಬಾರ	ತಬಲಾವಾದಕ	ದಾದನಟ್ಟಿ	ಕಂಬಾರ	೪೫
೭೫. ಹನುಮಂತ ಬಡಿಗೇರ	ಶಿಕ್ಷಕರು	ಉದಪುಡಿ	ಬಡಿಗೇರ	೫೪

೭೬. ಎಂ.ಆರ್. ಬಡಿಗೇರ	ಶಿಕ್ಷಕರು	ಬೆನಕಟ್ಟಿ	ಬಡಿಗೇರ	೬೨
೭೭. ಈರಪ್ಪ ಬಡಿಗೇರ	ಕಲಾವಿದರು	ಉದಪುಡಿ	ಬಡಿಗೇರ	೬೫
೭೮. ಶಾರದಾ ಭೀ.ಕಂಬಾರ	ಕಲಾವಿದೆ	ದಾದನಟ್ಟಿ	ಕಂಬಾರ	೫೪
೭೯. ಚಿ.ರಾಯಪ್ಪ ಕಂಬಾರ	ತಾಳ-ವಾದ್ಯ	ಜಮಖಂಡಿ	ಕಂಬಾರ	೭೨
೮೦. ನಾಗೇಂದ್ರ ಕಂಬಾರ	ಕಲಾವಿದರು	ಕೌಜಲಗಿ	ಕಂಬಾರ	೫೪
೮೧. ಶಾಮರಾವ ಬಡಿಗೇರ	ಕಲಾವಿದರು	ಮುಧೋಳ	ಬಡಿಗೇರ	೬೫
೮೨. ಚಂದ್ರಶೇಖರ ಪ್ರಹ್ಲಾದ	ಶಿಕ್ಷಕರು	ನಿಡೋಣಿ	ಕಂಬಾರ	೫೮
೮೩. ಶ್ರೀಶೈಲ ಬಡಿಗೇರ	ಕಲಾವಿದರು	ಬ.ಬಾಗೇವಾಡಿ	ಬಡಿಗೇರ	೫೪
೮೪. ಶಿವಪ್ಪ ಸೈ .ಕಂಬಾರ	ಕಲಾವಿದರು	ಸಾಲೋಟಗಿ	ಕಂಬಾರ	೫೬
೮೫. ಗಣಪತಿ ಬಡಿಗೇರ	ಕಲಾವಿದರು	ಬಾದಾಮಿ	ಬಡಿಗೇರ	೫೨
೮೬. ಮಾನಪ್ಪ ಕಂಬಾರ	ಹಾಡುಗಾರರು	ಬಾಗೇವಾಡಿ	ಕಂಬಾರ	೫೮
೮೭. ಮೌನೇಶ ಬಡಿಗೇರ	ಭಜನಾಕಲಾವಿದ	ಕಣಮುಚನಾಳ	ಬಡಿಗೇರ	೬೫
೮೮. ವೀರಪ್ಪ ಕಂಬಾರ	ಕಲಾವಿದರು	ಬಾಗೇವಾಡಿ	ಕಂಬಾರ	೬೦
೮೯. ಅಶೋಕ ಬಡಿಗೇರ	ತಬಲಕಲಾವಿದ	ಸಾರವಾಡ	ಬಡಿಗೇರ	೬೫
೯೦. ಶಾಮರಾವ್ ಬಡಿಗೇರ	ಕಲಾವಿದರು	ನಾವಲಗಿ	ಬಡಿಗೇರ	೬೨
೯೧. ನಾಗೇಂದ್ರ ಕಂಬಾರ	ಕಲಾವಿದರು	ಕೌಜಲಗಿ	ಕಂಬಾರ	೭೦
೯೨. ಮನೋಹರ ಬಡಿಗೇರ್	ಪುರವಂತಿಕೆ	ಬಿಜ್ಜರಗಿ	ಬಡಿಗೇರ	೬೫
೯೩. ರಾಮರಾಯ ಬಡಿಗೇರ್	ಕುಶಲಕಲೆ	ಸಾಲೋಟಗಿ	ಬಡಿಗೇರ	೬೮
೯೪. ರವಿ ಬಡಿಗೇರ	ಕಲಾವಿದರು	ಬಾಗೇವಾಡಿ	ಬಡಿಗೇರ	೪೦
೯೫. ಹನುಮಂತ ಬಡಿಗೇರ	ಕಲಾವಿದರು	ಯರಜರವಿ	ಬಡಿಗೇರ	೬೨
೯೬. ಕಾಳಪ್ಪ ಕಂಬಾರ	ಕಲಾವಿದರು	ಬಂಟನೂರು	ಕಂಬಾರ	೭೬
೯೭. ಗೋವಿಂದಪ್ಪ ಪತ್ತಾರ	ಪೆಟಗಿಮಾಸ್ತರ	ಸೊನ್ನ	ಪತ್ತಾರ	೬೫
೯೮. ಭೀಮಪ್ಪ ಕಂಬಾರ	ಕಲಾವಿದರು	ಮಡ್ಡಿಬೂದಿಹಾಳ	ಕಂಬಾರ	೬೮
೯೯. ಸಿದ್ದಪ್ಪ ಕಂಚು	ಚರ್ಮವಾದ್ಯ	ಬನಹಟ್ಟಿ	ಪಾಂಚಾಳ	೬೪
೧೦೦. ಮಾರುತಿ ಕಮ್ಮಾರ	ಪೆಟಿಗೆಮಾಸ್ತರು	ಬೈಲಹೊಂಗಲ	ಕಮ್ಮಾರ	೬೫
೧೦೧. ಮಲ್ಲೇಶಪ್ಪ ಪತ್ತಾರ	ಗವಾಯಿ	ಗುಳೇದಗುಡ್ಡ	ಪತ್ತಾರ	೬೨

೧೦೨.	ಮಲ್ಲಣ್ಣ ಬಡಿಗೇರ	ಹಾಡುಗಾರ	ಬಾಗಲಕೋಟೆ	ಬಡಿಗೇರ	೬೪
೧೦೩.	ಬಾಳಪ್ಪ ಫಕೀರಪ್ಪ	ಕಲಾವಿದರು	ಕಣಮುಚನಾಳ	ಲಿಂಗಾಯತ	೫೪
೧೦೪.	ಶಿವಾನಂದ ಬಡಿಗೇರ	ಕಲಾವಿದರು	ಅಕ್ಕತಂಗೇರಹಾಳ	ಬಡಿಗೇರ	೫೯

ಛಾಯಾಚಿತ್ರಗಳು



ಬಿ.ವಿ.ವಿ ಕಾಲೇಜ ಬಾಗಲಕೋಟೆಯಲ್ಲಿ ಕೃಷ್ಣಪಾರಿಜಾತ ಪ್ರದರ್ಶನ



ಬಿ.ವಿ.ವಿ ಕಾಲೇಜ ಬಾಗಲಕೋಟೆಯಲ್ಲಿ ನಾವಲಗಿ ಕೃಷ್ಣಪಾರಿಜಾತ ಕಂಪನಿ ಕಲಾವಿಧರಿಗೆ ಗೌರವ



ಬಿ.ವಿ.ವಿ ಕಾಲೇಜ ಬಾಗಲಕೋಟೆದ ವಿದ್ವಂಸರಾದ ಶ್ರೀರಾಮ ಇಟ್ಟಣನವರ ಹಾಗು ಸಿದ್ದರಾಮ ಮಠಪತಿ



ವಿದ್ವಂಸರಾದ ಡಾ. ವಿ.ಎಸ್.ಮಾಳಿ ಜೊತೆ ಸಂವಾದ



ವಿದ್ವಂಸರಾದ ಡಾ.ಎಚ್.ಎಮ್.ತಿಮ್ಮಾಪುರ ಜೊತೆ ಚರ್ಚೆ



ವಿದ್ವಂಸರಾದ ಡಾ.ಅಶೋಕ ಎಮ್.ನರೋಡೆ ಜೊತೆ ವಿಶ್ಲೇಷಣೆ


ವಿಧ್ವಂಸರಾದ ಡಾ.ಶಿಲಾಕಾಂತ ಪತ್ತಾರ ಹಾಗೂ ಡಾ. ವಿರೇಶ ಬಡಿಗೇರ ಜೊತೆ ಚರ್ಚೆ



ವಿಧ್ವಂಸರಾದ ಡಾ.ರಾಮಕೃಷ್ಣ ಮರಾಠೆ ಹಾಗೂ ಕಲಾವಿಧ ಎಮ್.ಎಮ್.ಹಿರೇಮಠ ಜೊತೆ ಸಂಶೋದಕರು


ವಿಧ್ವಂಸರಾದ ಡಾ. ಸಂಗಮನಾಥ ಲೋಕಾಪುರ ಜೊತೆ ಸಂಶೋದಕರು




ಲೋಕಾಪುರದಲ್ಲಿ ಕೃಷ್ಣಪಾರಿಜಾತ ಸಂಭ್ರಮ



ಲೋಕಾಪುರದಲ್ಲಿ ಕೃಷ್ಣಪಾರಿಜಾತ ಸಂಭ್ರಮವು ಜಾಲಿಕಟ್ಟಿ ಕಲಾವಿಧರಿಂದ



ಲೋಕಾಪುರದಲ್ಲಿ ಕೃಷ್ಣಪಾರಿಜಾತ ಕಲಾವಿಧರಿಗೆ ಗೌರವ ಸಮಾರಂಭ



ನರಾಯಣ ಬಡಿಗೇರ ಸಾ॥ ಬ್ಯಾಲಾಳ್ (ಬ ಬಾಗೇವಾಡಿ) ಕಲಾವಿದ



ಅಚನೂರು ಮಾರುತೇಶ್ವರ ಜಾತ್ರೆಯ ಸಂಭ್ರಮ



ಕಲಾವಿಧರಾದ ನಾರಾಯಣ ಪತ್ತಾರ ಸಾ॥ ಸೋನ್ನ. ಜೊತೆ ಸಂಶೋಧಕರು



ಬಾಗಲಕೋಟೆಯಲ್ಲಿ ಶ್ರೀ ವಿಶ್ವನಾಥ ಮಹಾಪುರುಷರು ಸಿತಾರ ನುಡಿಸುತ್ತಿರುವುದು



ಶ್ರೀಗಂಗಾಧರ ಸ್ವಾಮಿ ಜನ್ಮ ಶತಮಾನೋತ್ಸವ ಸಿದ್ಧರಾಮ ಮಠಪತಿ ಹಾಗು ಸಹ ಕಲಾವಿಧರು



ವೀರಗಾಸೆ ಹಾಗು ಪುರವಂತರು



ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಶ್ರೀಕೃಷ್ಣಪಾರಿಜಾತ ಪ್ರದರ್ಶನ



ಬೆಂಗಳೂರುನಲ್ಲಿ ದಾದನಟ್ಟಿಯ ಭಿಮಸಿ ಕಂಬಾರ ಕಂಪನಿಯ ಶ್ರೀಕೃಷ್ಣಪಾರಿಜಾತ ಪ್ರದರ್ಶನ



ಬಾಗಲಕೋಟೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬೈಲಹೊಂಗಲ ಕಂಪನಿಯ ಶ್ರೀಕೃಷ್ಣಪಾರಿಜಾತ ಪ್ರದರ್ಶನ



ಸೋಮಪ್ಪ ಬಡಿಗೇರ ಸಾ॥ ಅಚನೂರು ಕೃಷಿ ಉಪಕರಣಗಳನ್ನು ತಯಾರಿಸುತ್ತಿರುವುದು



ಈರಣ್ಣ ಬಡಿಗೇರ ಸಾ॥ ಬೇವೂರು ಬಾಗಿಲು ಕಿಟಕಿಗಳನ್ನು ತಯಾರಿಸುತ್ತಿರುವುದು



ಬಾದರದಿನ್ನಿ(ಬೀಳಗಿ)ಯ ಕರಡಿಮಜಲ ವಾದಕರು


ಬ.ಬಗೇವಾಡಿಯ ಸಾ|| ಮಣ್ಣೂರಿನ ಡೋಳ್ಳುಕುಣಿತದ ಕಲಾವಿಧರು


ಹುನುಗುಂದ ತಾಲೂಕಿನ ಅಮರಾವತಿ ಗ್ರಾಮದ ಕಂಬಾರ ಕುಲುಮೆ


ಹುನುಗುಂದ ತಾಲೂಕಿನ ಅಮರಾವತಿ ಗ್ರಾಮದ ಮಾನಪ್ಪ ಕಂಬಾರ ಕೃಷಿ ಉಪಕರಣ ತಯಾರಿಸುತ್ತಿರುವುದು.



ಹೆರಕಲ್ಲ ಗ್ರಾಮದ ಈರಣ್ಣ ಪತ್ತಾರ ಆಭರಣ ತಯಾರಿಸುತ್ತಿರುವುದು



ತೆಗ್ಗಿ ಗ್ರಾಮದ ಚಿದಾನಂದ ಬಡಿಗೇರ ಹಾರ್ಮೋನಿಯಂ ತಯಾರಿಸುತ್ತಿರುವುದು




ಗುಳೇದಗುಡ್ಡ ಗ್ರಾಮದ ವಿಜಯಕುಮಾರ ಬಡಿಗೇರ ಹಾರ್ಮೋನಿಯಂ ತಯಾರಿಸುತ್ತಿರುವುದು




ಕಲಾದಿಗಿ ಗ್ರಾಮದ ಏಕಲವ್ಯ ಶಿಲ್ಪಕಲಾ ಕೇಂದ್ರದ ಮೌನೇಶ್ ಆಚಾರಿ



ಕಲಾದಿಗಿ ಗ್ರಾಮದ ಏಕಲವ್ಯ ಶಿಲ್ಪಕಲಾ ಕೇಂದ್ರ



ಬಾಗಲಕೋಟೆ ಸಾರ್ವಜನಿಕ ಗ್ರಂಥಾಲಯದಲ್ಲಿ ಸಂಶೋಧಕರು



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಶಾಸನ ಅಧ್ಯಯನ ವಿಭಾಗ